[illegible] ಸಾವಧಾನ [illegible] ಈ ಬಿಡಿಸಿದ [illegible] ವಿಚಾರವನ್ನಾಗಿ ಕೊಂಡವ, ಬಹುಕಾಲದ ರಾಜಕೀಯ [illegible] ದೇಶದಲ್ಲಿ ಸಂಭವಿಸುತ್ತಿದ್ದ ಅತ್ಯಾಚಾರಗಳ [illegible] ಮಹಾತ್ಮರಿಗೆ [illegible] ರಾಷ್ಟ್ರೀಯ ಸಭೆಯ [illegible] ಮಹಾತ್ಮರ [illegible] ರಾಷ್ಟ್ರೀಯ [illegible] ದಿಂದ [illegible] ತನ್ನ [illegible] ದಿಂದ ಮನುಷ್ಯನನ್ನಕೃಷ್ಟ ದ ಭಯಂಕರ ಪಾತಕವು ಲೋಕದಲ್ಲಿ ಮಾಡಿದ [illegible] ಸರ್ಕಾರದ [illegible] ವಿನಾಶವುಪ್ಪ ಎಗೆ ಗಲ್ಲಿಗೇರಿಸುವ ಶಿಕ್ಷೆ ಕೊಟ್ಟದ್ದಕ್ಕಾಗಿ ಶಿಷ್ಯರಿಗು ಪ್ಪನು ಈ ವಿಧ [illegible] ಕೊಂಡಿದ್ದಾನೆ [illegible] ಹಾಕಿಕೊಂಡರು. ಇದು [illegible] ಗೆ ಅತ್ಯಂತ ಮನೋವ್ಯಥೆಯಾಗುತ್ತ ದ ಅತ್ಯಾಚಾರದ ಅಗ್ನಿಯು ಇನ್ನೂ ತಣಿಯಲಿಲ್ಲ, ಎಂದೂ ತಣಿಯದು ಇನ್ನೂ ಅದು ಪ್ರಜ್ವಲಿತವಾಗಲು [illegible] ನಾರಾಯಣ ಗಂಜ ಪಟ್ಟಣದಲ್ಲಿ ಹಸ್ತಪತ್ರಿಕೆಗಳನ್ನು ಹಂಚಿ ದಿನೇಶಗುಪ್ತನೆಂಬವನು [illegible] ಶಿಕ್ಷಿಸಿಕೊಳ್ಳಲು ಪ್ರೇರಣೆಯಾಗುತ್ತದಾಗಿ ವರ್ತಮಾನವಿದೆ. ಇದನ್ನು ನಮೂದಿಸಲ್ಲು ತುಂಬಾ ವ್ಯಸನ [illegible] ಕ್ರಿಸ್ತವಾಸಿ ಗಾಲಿಕ್ಸರವರಾಗಲಿ, ಸರ್ ಅರ್ನೆಸ್ಟ್ ಹೊಟ್ಸನ್‌ರವರಾಗಲಿ ಅತ್ಯಾಚಾರಿಗಳ ಪ್ರತಿಪಾದನೆಯಂತ ದೇಶದ್ರೋಹಿಗಳೆಂದು ನಾವು ಎಣಿಸುವೆವು. ದೇಶಬಾಂಧವರ ಮೇಲೆ, ದೇಶಸೇವಕರ ಮೇಲೆ ಅವರು ಅಪರಿಮಿತವಾದ ಅನ್ಯಾಯವನ್ನು ಆಚರಿಸಿದ್ದಾರೆಂದೂ ಗ್ರಹಿಸುವೆವು ಮಹಾತ್ಮರಾದರೂ ಹಾಗೆಯೇ ಗ್ರಹಿಸಿದ್ದಾರೆ. ಸೋಲಾಪುರದ ಲಷ್ಕರಿ ಕಾಯಿದೆಯ ಅನರ್ಥಗಳಿಗೆಲ್ಲ ಸರ್ ಅರ್ನೆಸ್ಟ್ ಹೊಟ್ಸನ್‌ರವರೇ ಕಾರಣರೆಂದು ನಾವು ತಿಳಿಯುತ್ತೇವೆ; ಹಿಂದೀ ಅಧಿಕಾರಿಗೆ ಹಿಂಸೆ ನೋಡಿ ಆವರು ಗನ್ಹೆಗಾರರಾಗಿ ಮಂದಾದರೆಂದು ನಾವು ಒಪ್ಪುತ್ತೇನೆ; ಆದಾಗ್ಯೂ ಅತ್ಯಾಚಾರದ ಸಮರ್ಥನೆಯಾಗುವದಿಲ್ಲ, ಎಂದೆಂದಿಗೂ ಸಮರ್ಥನೆಯಾಗದು ಇಂಥ ಅನ್ಯಾಯಗಳನ್ನು – ಏಕೆ? ಇದಕ್ಕಿಂತ ಹೆಚ್ಚಿನ ಅತ್ಯಾಚಾರಗಳನ್ನು–೧೯೩೦ನೇ ಇಸ್ವಿಯಲ್ಲಿ ಅಹಿಂಸೆಯ ದೀಕ್ಷೆ ಕೊಳ್ಳುವಾಗ ದೇಶಬಾಂಧವರು ಅನುಭೋಗಿಸಿದ್ದರು. ಅವುಗಳ ಜೊತೆಗೆ ಸರ್ ಅರ್ನೆಸ್ಟ್ ಹೊಟ್ಸನ್‌ರವರ ಅಪರಾಧಗಳನ್ನು ಸರಿ ಹೋಲಿಸಿದರೆ, ಇವೇನು ಅಷ್ಟು ಭಯಂಕರವಾದವಲ್ಲ. ಹಿಂದೀಯರು ವ್ಯಕ್ತಿಗಳಿಗೆ ಇದಿರಾಗಿ ಜಗಳಾಡುವದಿಲ್ಲ, ವ್ಯಕ್ತಿದ್ವೇಷವಿಲ್ಲ. ಅಧಿಕಾರಿಗಳು ವ್ಯಕ್ತಿಶಃ ಒಳ್ಳೇ ಮನುಷ್ಯರಿದ್ದಾಗ್ಯೂ, ಈಗಿನ ರಾಜ್ಯಪದ್ಧತಿಯಲ್ಲಿ ಅವರಿಂದ ಪ್ರಜಾಕಲ್ಯಾಣವಾಗುವದಿಲ್ಲ; ಲೋಕಕಲ್ಯಾಣ ಸಾಧಿಸಲು ಅವರಿಗ ಇಂಬಿಲ್ಲ. ಇದರಿಂದ ರಾಷ್ಟ್ರೀಯ ಸಭೆಯು ಇಡೀ ರಾಜ್ಯಪದ್ಧತಿಯ ಮೇಲೆ ಯುದ್ಧ ಹೂಡಿದೆ. ರಾಜ್ಯಪದ್ಧತಿಯನ್ನು ಆಮೂಲಾಗ್ರ ಕಿತ್ತೊಗೆಯಲು ರಾಷ್ಟ್ರೀಯ ಸಭೆಯು ಹೋರಾಡುತ್ತಿದೆ. ಹೀಗೆಲ್ಲ ದೀರ್ಘವಿಚಾರ ಮಾಡಿ ರಾಷ್ಟ್ರೀಯ ಸಭೆಯು ಸತ್ಯಾಗ್ರಹ ಮಾಡಿತು, ಅಹಿಂಸೆಯ ದೀಕ್ಷೆ ಕೊಂಡಿತು. ಸತ್ಯ-ಅಹಿಂಸೆಗಳು ನಮ್ಮ ದೇಶಸೇವೆಯ ಮೂಲ ಆಧಾರಗಳು. ಇವುಗಳ ಮೇಲೆಯೇ ನಮ್ಮ ಸ್ವರಾಜ್ಯ ಮಂದಿರವನ್ನು ನಾವು ಕಟ್ಟಬೇಕಾಗಿದೆ. ಒಬ್ಬಿಬ್ಬರಿಗೆ, ಏಕೆ?, ಇಡೀ ಹಿಂದುಸ್ತಾನದಲ್ಲಿರುವ ಸಮಸ್ತ ಬ್ರಿಟಿಶರನ್ನು ಒಮ್ಮೆಲೇ ನಾವು ಕೊಂದಾಗ್ಯೂ, ಅದರಿಂದ ನಮಗೆ ಸ್ವರಾಜ್ಯಪ್ರಾಪ್ತಿಯಾಗದು. ಒಂದಾವರ್ತಿ ಪ್ರಾಪ್ತಿಯಾದಾಗ್ಯೂ ಅದನ್ನು ನಮ್ಮಿಂದ ನಡಿಸಲಿಕ್ಕಾಗದು. ಬ್ರಿಟಿಶರ ಕೊಲೆಯು ಸ್ವರಾಜ್ಯಪ್ರಾಪ್ತಿಯ ಸಾಧನವಲ್ಲ, ಸಾಧನವೆಂದು ಎಣಿಸುವದು ಮೂರ್ಖತನದ್ದು. ಅದಕ್ಕಾಗಿ ಪ್ರಾಣಾರ್ಪಣ ಮಾಡುವದು ನಿರರ್ಥಕವಾದ ಸಾಹಸ. ಕೊಲೆಪಾತಕಿಗೆ ಇಹವಿಲ್ಲ, ಪರವಿಲ್ಲ, ಪರಮಾರ್ಥವಿಲ್ಲ ಇಂದ ಸ್ಥಿತಿಯಲ್ಲಿ ನವಸ್ಫೂರ್ತಿಯ ಹೊಂತಕಾರಿಗಳು ಅಡ್ಡ ಮಾರ್ಗ ಹಿಡಿಯುವದನ್ನು ನೋಡಿ ಮಹಾತ್ಮರಿಗೆ ತುಂಬಾ ವ್ಯಥೆ, ನಾವೂ ವ್ಯಸನಪಡುತ್ತೇವೆ. ಇಹ-ಪರ ಕಲ್ಯಾಣಕ್ಕೆ ಕಾರಣವಾದ ಅಮೂಲ್ಯ, ಅಪ್ರಾಪ್ಯವಾದ ದೇಹವನ್ನು ಈ ಪ್ರಕಾರ ವೃಥಾ ಸಂಕಟದಲ್ಲಿ ಸಿಲುಕಿಹಾಕಿ ನಿರರ್ಥಕಗೊಳಿಸುವದು ವಿಹಿತವೇ? ಎಂದು ಮನಸ್ಸು ಎಣಿಸಿಣಿಸಿ ಬೇಸರಗೊಳ್ಳುತ್ತದೆ. ದೀರ್ಘ ವಿಚಾರ ಮಾಡದೆ ರಾಜ್ಯಾಧಿಕಾರಿಗ'ಅತ್ಯಾಚಾರಗಳಿಂದ ಎಳೆ ಪ್ರಾಯದ ದೇಶಬಾಂಧವರು ವಿವೇಕಭ್ರಷ್ಟರಾಗಬಾರದು, ಅದರಿಂದ ಕ್ಷೇಮವಿಲ್ಲ. ಆತ್ಮಕ್ಕೂ ಮುಕ್ತಿಯಿಲ್ಲ, ದೇಶಕ್ಕೂ ಮುಕ್ತಿಯಿಲ್ಲ. ಸಮಾಜಕ್ಕೂ ಹಿತವಿಲ್ಲ, ಕ್ಷೇಮವಿಲ್ಲ. ಇದನ್ನು ವಿಚಾರಿಸಿ ಸಾವಧಾನ ತಳೆಯಬೇಕಾಗಿ ಮಹಾತ್ಮರು ಬೋಧಿಸುತ್ತಾರೆ. ಅಖಿಲ ಭಾರತೀಯ ಕಾಂಗ್ರೆಸ ಕಮಿಟಿಯು ಈ ವಿಷಯವನ್ನೇ ಪುನರಾಲೋಚಿಸಿ ತಕ್ಕ ನಿರ್ಣಯವನ್ನೇ ಕೈಕೊಳ್ಳಬೇಕಾಗಿಯೂ ಮಹಾತ್ಮರು ಸೂಚಿಸುತ್ತಾರೆ. ಇದಕ್ಕೂ ಹೆಚ್ಚಿಗೆ ನಾವೇನು ಹೇಳುವದಿದೆ?

ಅಧಿಕಾರಿಗಳಾದರೂ ವಿವೇಕಭ್ರಷ್ಟರಾಗಬಾರದು; ಸಮಾಧಾನ ಹಿಡಿಯಬೇಕು ಸ್ಥೈರ್ಯದಿಂದ ವಿಚಾರ ಮಾಡಬೇಕು. ಅಧಿಕಾರಿಗಳು ವಿವೇಕ-ವಿಚಾರಗಳನ್ನು ತೊರೆದರೆ, ಮತ್ತೂ ದೊಡ್ಡ ಅನರ್ಥವುಂಟಾಗುತ್ತದೆ. ಸೇಡು ತೀರಿಸುವ ಬುದ್ಧಿಯನ್ನೂ, ದಬ್ಬಾಳಿಕೆಯನ್ನೂ ಒಮ್ಮೆಲೇ ತೊರೆಯಬೇಕು. ದಬ್ಬಿ ನವಜವಾನರನ್ನು ಅಡ್ಡದಾರಿಯಿಂದ ರಾಜಮಾರ್ಗಕ್ಕೆ ಎಳೆತರುವ ಹವ್ಯಾಸವನ್ನು ಎಂದಿಗೂ ಹಿಡಿಯಬಾರದು ಲೋಕದಲ್ಲಿ ಈ ಉಪಾಯವು ಎಂದಿಗೂ ಯಶಸ್ವಿಯಾಗಲಿಲ್ಲ. ಇಂಥ ಪ್ರತೀಕಾರಗಳಿಂದ ಅತ್ಯಾಚಾರಗಳಿಗೆ ಪುಟ ದೊರಕಿ ದೇಶದೊಳಗೆ ಅಶಾಂತಿಯುಂಟಾದ ಉದಾಹರಣೆಗಳು ಇತಿಹಾಸದಲ್ಲಿ ಬೇಕಷ್ಟು ದೊರೆಯುತ್ತವೆ. ದಬ್ಬಾಳಿಕೆಯು ಅತ್ಯಾಚಾರ ರೋಗಕ್ಕೆ ದೊಡ್ಡ ಅಪಥ್ಯ. ರಶಿಯಾ ದೇಶದಲ್ಲಿಯೂ, ಆಯರ್ಲಂಡ ದೇಶದಲ್ಲಿಯೂ, ಹಿಂದುಸ್ತಾನದೊಳಗಿನ ವಂಗಭಂಗ ಚಳವಳಿಯಲ್ಲಿಯೂ, ಸತ್ಯಾಗ್ರಹ ಸಂಗ್ರಾಮದಲ್ಲಿಯೂ ದಬ್ಬಾಳಿಕೆ ನಿರರ್ಥಕವಾದದ್ದೆಂದು ಸಿದ್ಧವಾಗಿದೆ. ಸೇಡು ತೀರಿಸುವ, ಹಗೆ ಹಿಡಿಯುವ ಬುದ್ಧಿಯನ್ನು ಜನರು ತೊರೆಯುವಂತೆ ಅಧಿಕಾರಿಗಳಾದರೂ ತೊರೆಯಬೇಕು. ಮಹಾತ್ಮರು ಇದೇ ಮುಂಜಾಗ್ರತೆಯನ್ನು ಸರಕಾರಕ್ಕೂ, ರಾಜ್ಯಕರ್ತರಿಗೂ ವಿಧಿಸಿದ್ದಾರೆ. ಕೊಲೆಗಡುಕರಿಗೆ ಸಾಮಾನ್ಯ ಕಾಯಿದೆ ಕ್ರಮದಂತೆ ಬೇಕಾದ ಶಿಕ್ಷೆಯನ್ನು ವಿಧಿಸಬಹುದು ಆದರೆ, ಅದಕ್ಕೆ ಮಿಕ್ಕಿ ದಬ್ಬಾಳಿಕೆಯನ್ನು ಕೈಕೊಂಡರೆ, ಅತ್ಯಾಚಾರದ ಹುಚ್ಚು ಕೆರಳಿಸಿ ಹೆಚ್ಚುವದಾಗಿ ಮಹಾತ್ಮರು 'ಯಂಗ ಇಂಡಿಯಾ' ಪತ್ರಿಕೆಯ ವಿದ್ಯಮಾನ ಸರಕಾರಕ್ಕೆ ಎಚ್ಚರಿಕೆ ಕೊಟ್ಟಿದ್ದಾರೆ. ಕೊಲೆಪಾತಕದಿಂದ ಪ್ರಜೆಗಳಲ್ಲಿಂಟಾದ ಮಾನಸಿಕ ಅವಸ್ಥೆ ಪರಾಂಬರಿಸಿ ಕಾರಣವನ್ನು ಸಾವಧಾನದಿಂದ ಶೋಧಿಸಿ ಅದನ್ನು ಪರಿಹರಿಸಲು ಉಪಾಯಯೋಜನೆಗಳನ್ನು ಮಾಡಬೇಕು. ಅಂದರ ಮಾತ್ರ ಕೊಲೆಪಾತಕದ ರೋಗವು ದೇಶದೊಳಗಿಂದ ಹೊರಹೋಗುವದು. ಸಾವಧಾನವೆಂದು ಮಹಾತ್ಮರು ಜನರ ಜೊತೆಗೆ ಅಧಿಕಾರಿಗಳಿಗೂ ಎಚ್ಚರಿಕೆ ಕೊಟ್ಟಿದ್ದಾರೆ ಮಹಾತ್ಮರಂಥ ಹಿಂಸಾವಿರೋಧಕರು, ಅತ್ಯಾಚಾರಿದ್ವೇಷಿಗಳು, ಅಹಿಂಸಾ ಭಕ್ತರು ಇದ್ದಾಗ್ಯೂ ಸ್ವಪತ್ರಿ ಜನಪದಗಳ ಕಾರ್ಯಕರ್ತರಾದರೂ ಅವರ ರಾಜಮಾನ್ಯತೆಯನ್ನೂ, ಲೋಕಮಾನ್ಯತೆಯನ್ನೂ ಅವರು ಪಡೆದಿದ್ದಾರೆ, ನಿರ್ಮಲ ಪ್ರವೃತ್ತಿಯವರವರು; ಉದಾತ್ತ ಚರಿತ್ರರವರು ಜಪಾನ ದೇಶದೊಳಗೆ ಮಹಾತ್ಮರಿಗೆ ಭಗವಾನ್ ಬುದ್ಧ ದೇವನ ಅವತಾರವೆಂದು ಎಣಿಸುತ್ತಾರಂತೆ! ಇಂಥ ಪುಣ್ಯ ಪುರುಷನ ಉಪದೇಶವನ್ನು ಗಾಬರಿಗಟ್ಟಿ ಅತ್ಯುತ್ಸಾಹಿ ತರುಣರೂ, ಅಧಿಕಾರಿಗಳೂ ಲಾಲಿಸಿ ಸಾವಧಾನ ಹಿಡಿದು ವರ್ತಿಸಿ ಸ್ವರಾಜ್ಯ ಕಾರ್ಯದಲ್ಲಿ ಸಹಾಯಕರಾಗಬೇಕಾಗಿ ನಾವು ಬಿನ್ನೈಸಿಕೊಳ್ಳುವೆವು ಅದಕ್ಕಾಗಿ ಸಾವಧಾನ ಸಾವಧಾನ! ಎಂದು ನಾವು ಸಮಾಧಾನ ಹೇಳುತ್ತೇವೆ

—ಮಹಾತ್ಮರಿಗೆ ಲಂಡನದಲ್ಲಿ ಸ್ವಾಗತ ಮಾಡುವದಕ್ಕಾಗಿ ಪ್ರಮುಖರ ಮಂಡಳವೊಂದು ನೇಮಿಸಲ್ಪಟ್ಟಿದೆ ಕುಮಾರಿ ಲೆಸ್ಟರರವರು ಕಿಂಗ್ಸ್ಲೇ ಹೋಲಿನಲ್ಲಿ ಮಹಾತ್ಮರಿಗಾಗಿ ಅವಶ್ಯವುಳ್ಳ ವಿಹಾರಟನ್ನು ಕೈಕೊಂಡಿದ್ದಾರೆ ಮಲಗಲಿಕ್ಕೆ ನಾಲ್ಕೂ ದಿಕ್ಕಿನಲ್ಲಿ ಗಾಳಿ ಹರಿಯುವ ತೆರವಾದ ಸ್ಥಳ [illegible] ಒಂದು ಉಪವನ; ಮಕ್ಕಳೊಡನೆ [illegible] ಆಟದ ಪಟಾಂಗಣ, ಟೆಲಿಫೋನು, [illegible] ಕೆಲಸ ಈ ಸಾಡ [illegible] ಕ್ಕಾಗಿ ಮೋಟರು [illegible] ಸಿದ್ಧವಾಗಿದೆ. ಅಂತೆ ರಾಯರದ ಗಿರಣಿ ಸಮೀಪದ ಬೀದಿಯೊಡನೆ ಮಹಾತ್ಮರ ಸಂಭಾಷಣೆ [illegible] ಯಾಗುತ್ತದೆ.

ಮುಖ್ಯ ವಾರ್ತೆಗಳು.

— ರಂಗೂನಿನ್ನು ಬ್ರಿಟಿಶರಿಗಾಗಿದ ಸ್ಥಿತಿಯು ಕುರಿತು ಮಾತಾಡಿ ಒಬ್ಬ ಸರಕಾರಿಯವರೂ ಪಂಡಿತ ಮದನ ಮೋಹನ ಮಾಲವೀಯರವರೂ ಪ್ರಾಂತಿಕ ಸರಕಾರದ ಕಾರ್ಯದರ್ಶಿಯೊಡನೆ ಮಾತನಾಡಿದರು ಎಂಬ ಪ್ರಸಂಗದಲ್ಲಿ ಪ್ರಾಂತಿಕ ಕಾಂಗ್ರೆಸ ಕಮಿಟಿಯು ಗುಪ್ತ ಸಭೆಗಾಗಿ ಸರಕಾರದ ಒತ್ತಾಯದಿಂದ ಮತ್ತು ಅದರ ಬಗ್ಗೆ ಅನೇಕ ಉದಾಹರಣೆಗಳು ಕೊಟ್ಟು ಮಾಡಲ್ಪಟ್ಟಿವೆ ಹೇಳಿಕೆಯನ್ನು ಸ್ವೀಕರಿಸುವ ಸರ್ವಜನಿಕವಾಗಿ ಪ್ರಯಾಗದ 'ಲೀಡರ' ಪತ್ರಿಕೆಯು ಅಂದೀತು. ಪ್ರಾಂತಿಕ ಸರಕಾರದೊಡನೆ ನಡೆಸಿದ ಸಂಧಿ ಮಾತು ವ್ಯರ್ಥವೇನೆಂದು ಪತ್ರಿಕಾ ಪ್ರತಿನಿಧಿಗಳು ಪಂಡಿತ ಜವಾಹಿರಲಾಲರಿಗೆ ಕೇಳಿದರು. ರಾಷ್ಟ್ರೀಯ ಸಭೆಯ ಒಳ ನಿರೀಕ್ಷಣೆ ಮಾಡುತ್ತಿವೆ; ಸ್ವಲ್ಪ ಸಿದ್ಧ ದಿನವಾದರೆ, ಈಗಿನ ಸಂದಿಗ್ಧ ಸ್ಥಿತಿಯು ಅಂತ್ಯವಾಗುವದು.

— ಗಾಂಧೀಜಿಯವರ ಮೇಲೆ ನಡೆದ ಧಾರವಾಡದಲ್ಲಿ ಅವನ್ನು ಹಿಂದುಸ್ಥಾನ ಸರಕಾರದ ಗುಪ್ತ ಸಭೆಯಲ್ಲಿ ಮರ್ಯಾದೆ ಲಿಂಗಸಿಸಿದಂತೆ ಒಪ್ಪಂದವಿರಲಿಕ್ಕೆ ಸರಕಾರದ ಸತ್ಕರಿಸಲ್ಪಡಲಿಲ್ಲ, ಸಮಗೆ ಒಪ್ಪಂದದ ಸ್ಥಿತಿಯೇ ಕಾಣುವದಿಲ್ಲ. ಮೇಲಾಗಿ ನಮ್ಮೊಳಗೆ ಸ್ವರಾಜ್ಯ ಸಿದ್ಧತೆಗಾರರನ್ನು ನಡೆಸುವ ಕಾರ್ಯ ನಡೆದದೆ, ಹೀಗೆ ಗಾಂಧೀಜಿಯವರ ಗಾಂಧೀಜಿಯವರು, ರಾಷ್ಟ್ರೀಯ ಸಭೆಗೂ, ಮಹಾತ್ಮರಿಗೂ ತಮ್ಮ ಮೇಲೆ ಒಪ್ಪಂದದ ಶರ್ತುಗಳನ್ನು ಮಾಡಬೇಕಾಗಿ ಮಾನ ಅಸ್ತಿತ್ವ ಗಳನ್ನೂ ಬಿಟ್ಟುಕೊಡಬೇಕೆಂದಿದ್ದಾರೆ ನಮ್ಮ ಪ್ರತೀಕಾರವನ್ನು ನಾವು ನಡೆಸುತ್ತೇವೆ; ಹೀಗೆ ಗಾಂಧೀಜಿಯವರ ಗಾಂಧಿ ಅಭಿಪ್ರಾಯ.

— ಸಮಾಜವಾದಿಗಳೆಂದು ಕರೆಯಿಸಿಕೊಳ್ಳುವವರ ಕೆಲವು ಮುಖಂಡರ ಪ್ರಕಾರ ದೊರೆಯುತ್ತದೆ; ಮಹಾತ್ಮರಿಗೆ ಪ್ರತಿಯಾದ ಧೋರಣೆಯಂತೆ! ರಾಜ ಮಹಾತ್ಮರ ಪ್ರತಿಪಾದನೆಗಳು ತಮ್ಮ ಹೆಸರು ಹೇಳಲಿಲ್ಲ. ಕೆಲವರಿಗೆ ಇವರ ಹೆಸರು ಕೇಳಲು, ಇವರು ಮಹಾತ್ಮರೆಂದು ಹೇಳುವರು ಇವನ್ನು ಅವರ ಮೇಲೆ ಹಿಡಿದು ಮಾಡಿಕೊಡಲಿಲ್ಲ. ಮುಂಬಯಿಯಲ್ಲಿ ಕೆಲ ಕೋಲಿಕಾರ ಪ್ರಮುಖರಿಗೆ ಸತ್ಕರಿಸಿದ್ದಾರೆ. ಲಖನೌದಲ್ಲಿ ಕಾಬುಲಂತರ ಜಮೀನದಾರರಲ್ಲಿ ಯುದ್ಧಕಾರ್ಯವಾಯಿತು, ಬೆಳ್ಳಿಯ ಎಂಬ ಜರ್ಮನ್ ಕುಮಾರಿಗೆ ಈ ಚಳುವಳಿಯ ಸಂಬಂಧ ಸೆರೆಮನೆಯಾಗಿದೆ, ಅವಳು ಹಿಂದುಸ್ಥಾನಕ್ಕೆ ಬಂದು ೨-೩ ವಾರಗಳಾದವು. ಅವಳಿಗೆ ಹಸ್ತಾಂತರ ಮಾಡುವ ಆಲೋಚನೆ ನಡೆದದೆ. ಲಖನೌದಲ್ಲಿ ಜಮೀನ ಪಡೆದು ಅವಳಿಗೆ ಮುಂಬಯಿಗೆ ತಂದಿದ್ದಾರೆ.

— ನಾಳೆ-ನಾಡದು ಮುಂಬಯಿಯಲ್ಲಿ ಕಾರ್ಯಕಾರಿ ಮಂಡಳ ಸೇರುತ್ತದೆ. ಗುರುವಾರ ಅಖಿಲ ಭಾರತೀಯ ವರ್ಕಿಂಗ ಕಮಿಟಿಯ ಸಭೆ. ಪ್ರಸ್ತುತ ಪರಿಸ್ಥಿತಿಯ ವಿಚಾರವಾಗುವದೆಂದು ಪತ್ರಿಕೆಯು ಊಹಿಸಿ ನಗರ ವಿಚಾರವಾಗುವದು. ಸಭೆಯವರು ಇನ್ನೂ ಹೀಗೆ ಸಹಿಸುವದೆಂದು ಮಾತ್ರ ಸರ್ಕಾರವು ತೀರ್ಮಾನಿಸಿದೆ ಎಂದು ಚರ್ಚೆಯಾಗುವದು.

— ಕಾಂಗ್ರೆಸ ಕಾರ್ಯಕಾರಿ ಮಂಡಳದ ಸಭಾಸದರಾದ ಸರದಾರ ಪ್ರತಾಪ [illegible]

[illegible] ಪ್ರಜಾಪಕ್ಷದ ನಿವಾಸ ಅಧಿವೇಶನಕ್ಕೆ ತೆರಳಿದ್ದು ಅಲ್ಲಿ ಸ್ವಾಗತದಿಂದ ಹೊರಡಬೇಕಾಗಿ ಬಂದಾಗ ಬಿಡುಗಡೆಯಾಯಿತು; ಅವರೂ ಪ್ರವಾಸ ಅವರಿಗೆ ಬಿಟ್ಟು ಹೋದರಂತೆ ಅದಕ್ಕಿಂತ ಮೇಲೆ ಚಿಕ್ಕ ಸಂಗತಿಯಿದು. ಅವರಿಗೆ ಕೂಡ ಶಿಕ್ಷೆ ನಡೆಯಿತು.

— ಶಿವಮೊಗ್ಗೆಯಲ್ಲಿ ಧ್ವಜ ಸತ್ಯಾಗ್ರಹವಾಗಿ ಜಿಲ್ಲಾ ಕಲೆಕ್ಟರರು ನಿಷೇಧಿಸಿದರು, ಜನರು ಸುಮಾರು ೧೦ ಜನರು ಎರಡು ದಿನಗಳಿಗೆ ಸೆರೆಯಾಗಿದ್ದಾರೆ. ಸ್ವದೇಶ ಪಿಕೆಟಿಂಗ ಮಾಡಿದವರಿಗೆ ೩ ತಿಂಗಳು ಸೆರೆ ಕೊಟ್ಟು ಹೋಗಬೇಕಾಗಿ ಮಾಡಿ ನೂರಾರು ಜನರ ಪೋಲೀಸ ಪಹರೆಯಲ್ಲಿ ಬಂದಿಖಾನೆಗೆ ಕಳಿಸಿದರು.

(ಕಳೆದ ವಾರದಿಂದ ಮುಂದರಿದದ್ದು)

ನ ೩ ಪತ್ತರಗೆ ಪತ್ರ ನಡೆಯು ಹಿಂತ.. ಬೇರೆ ಕಡೆಯಲ್ಲಿರುವ ಸುದ್ದಿ ಇಲ್ಲ. ಪೋಲೀಸರು ಅಂತರಂಗದಿಂದ ಲ್ಯಾಬೊರೇಟರಿ ಮುಂದಿನ ಬ್ಯಾಗನ್ನು ಕೊಡಲು ನಿರಾಕರಿಸುತ್ತಾರಂತೆ. ಲ್ಯಾಬೊರೇಟರಿಗೆ ದೈರ್ಯ ನೀಡಿ. ನಗರಾದಲ್ಲಿ ಮುಸಲ್ಮಾನರ ವಸ್ತಿ ಇದೆ ಅಲ್ಲಿ ಅವರೇ ಪಹರೆ ಇದ್ದರು. ಅವರು ಹೋಗಿ ಪರದೇಶಿಯ ಕೊಟ್ಟರೆಂದು ಕೇಳಿದಲ್ಲಿ ಪ್ರವಾಸ ಮಾಡಬೇಕಾಗಿ ಒಪ್ಪಿಸಿದರು. ಇದನ್ನು ದರ್ಶಿಸಿ ಮುಸಲ್ಮಾನರು ಮುಂದೆ ಸ್ವರಾಜ್ಯಕ್ಕೆ ಹೇಗೆ ಸೇರುವರೆಂದು ಜನರು ಆಶ್ಚರ್ಯಗೊಂಡಿದ್ದರೆ.

ಕಾರ್ಯಕರ್ತರು ಅಂಗಡಿಯ ಮೇಲೆ ಪಿಕೆಟಿಂಗು, ದಂಡಾಧಿಕಾರಿಯಿಂದ ನಡೆದದೆ ಪ್ರಮುಖರು ಇವನ್ನು ನೋಡಿ ಸ್ವಯಂಸೇವಕರಿಗೆ ಹೊಡೆಯುತ್ತಾರೆ. ಅದರೆ, ಇದರಿಂದ ಪೋಲೀಸರಿಗೆ ಏನೂ ಕಷ್ಟ ಸಂಭವಿಸುವದಿಲ್ಲ. ಗೊಂದಲ ಮಾಡಲು ಅವರು ಹಣ ಕೊಡುತ್ತಿದ್ದಾರೆ. ಸುಕ್ರವಾರ ದಿವಸ ಕೆಲ ಚಳುವಳಿಗಾರರಿಗೆ ಪ್ರಜೆಗಳು ಪಡೆದ ಪ್ರಭುರ ಬಿಡಿಸಿ ಬಂದು ಊಟದ ಮನೆಯಲ್ಲಿ ದೌರ್ಜನ್ಯ ನಡೆಯಿತು. ಕೆಲ ಸ್ವಯಂಸೇವಕರು ಸೋತು ಹೋಗಿದ್ದರು. ಅವರಿಗೆ ಬಹು ಗಾಯ ಬಂದವು, ಹೊಡೆಯಲಿಕ್ಕೆ ಹೋದರು. ಅವುಗಳಲ್ಲಿ ತಮ್ಮ ಕಷ್ಟವಾಗಿ ಒದಗಿದ ನಾಶ ನಷ್ಟದ ಕಂಡುಕೊಂಡರು, ಮೇಲೆ ಸ್ವಯಂಸೇವಕರು ತಮಗೆ ಹೊಡೆದರೆಂದು ಬೊಬ್ಬೆಯಿಡುತ್ತ ಮುಸಲ್ಮಾನರಂತೆ ಭೂತ-ಪಿಶಾಚಗಳಂತೆ ಕುಣಿಯುತ್ತ ಗಲಾಟೆ ನಡೆಸಿದರು. ಇಷ್ಟು ಪೋಲೀಸರು ಕಾಂಗ್ರೆಸದವರ ಮೇಲೆ ಪಿರ್ಯಾದಿ ಕೊಡಬೇಕೆಂದು ಒತ್ತಾಯ ಮಾಡಿದರು. ಅಪ್ಪರೊಳಗೆ ಅವರು ಇರುವ ಜಾಗ ಯಾರೂ ಹೇಳಲಿಲ್ಲ! ಬಂದವರು ಚಳುವಳಿಗಾರರಿಗೆ ಬಹಿಷ್ಕರಿಸಿದರು. ಚಳುವಳಿಗಾರರು ಕಾಂಗ್ರೆಸ ಪ್ರಮುಖರ ಕಡೆ ತಪ್ಪು ಒಪ್ಪಿಕೊಂಡು ಕ್ಷಮಾಪಣೆ ಮಾಡುತ್ತಿದ್ದಾರೆ.

ಪೋಲೀಸರು ಸಹಿತ ಬಂದೋಬಸ್ತಿಯ ಕೆಲಸವನ್ನು ಸಂಪೂರ್ಣವಾಗಿ ಮಾಡಿದ್ದಾರೆ. ರಾತ್ರಿ ಅಂಗಡಿಗಳ ಕಾವಲು-ಬೀಗದ ಮಹಾಜನ ಕೆಲಸ ಕಳ್ಳರೊಪ್ಪಿಸಿದ್ದಾರೆ. ಇವರು ಬರೇ ಕಾರ್ಯಕರ್ತರ ಸರಾಯಿ ವ್ಯಾಪಾರದ ಬಂದೋಬಸ್ತಿಗಿದ್ದರೆ. ತಾ ೧೯ನೆಯ ಸೋಮವಾರದಿಂದ ಸರಾಯಿ ಹಿಂಡು ಲಿಲಾವು ದಿವಸಗಳೊಡನೆ ಹಿಂತು ೩-೪ ಮೈಲು ದೂರ ಇರುವಾಗ ಇಲ್ಲಿಯ ೮-೧೦ ಮಂದಿ ಪೋಲೀಸರು ಹೋಗಿ ಅದನ್ನು ಸಂಭ್ರಮದಿಂದ ಅಂಗಡಿಗೆ ತಂದು ಅವರೇ ಹಮಾಲರಾಗಿ ಇಳಿಸಿ ಅಂಗಡಿಯಲ್ಲಿಟ್ಟು ಹೋದರು. ಕಾರ್ಯಕರ್ತನಿಗೆ ಕಾವಲಿಕ್ಕೆ ಕಾವಲ ಪೋಲೀಸನೇ ತಂದು ಕೊಡುತ್ತಾನೆ! ಸರಾಯಿಯ ವೃಥಾ ವ್ಯಯ ಇದು!! ಪೋಲೀಸ ಲೈನಿನಲ್ಲಿ ಸರಾಯಿ [illegible] ಸ್ವಯಂಸೇವಕರು ಹೋಗುತ್ತಾರೆ.

ಇಲ್ಲಿಯ ಶಿವಮೊಗ್ಗೆಯ ಮುಸಲ್ಮಾನರ ದಿ। ಮಹಮ್ಮದ ಯೂಸುಫ ಎಂಬುವರು ಪ್ರತಿಜ್ಞೆಯನ್ನು ಉಲ್ಲಂಘಿಸಿ ಅಂಗಡಿ ತೆರೆದರು. ಅದಕ್ಕಾಗಿ ಅವರ ಅಂಗಡಿಯ ಮುಂದೆ ಪಿಕೆಟಿಂಗ ನಡೆದಿದೆ. ಸ್ವಯಂಸೇವಕರು ಪಿಕೆಟಿಂಗ ಮಾಡುವಾಗ ಪ್ರಯತ್ನ ಮಾಡುತ್ತಿದ್ದಾರೆ. ಹೀಗಾಗಿ ಕೆಲವು ಪೋಲೀಸರು ಬಂದಿದ್ದರು; ಅವರಿಗೆ ಆ ಚಳುವಳಿಗಾರರು ಸಲ್ಲಿಸಿದ ಬಹು ಕಷ್ಟ ಹೇಳಿದರು. ಚಳುವಳಿಗಾರರ ಮೇಲೆ ಹಾಕಿದ ಬಹಿಷ್ಕಾರವನ್ನು ತಪ್ಪಿಸುವದಕ್ಕಾಗಿ ಸರಕಾರವು ನಿರಾಕರಣೆಯ ನಿರ್ಬಂಧವನ್ನು ಹಾಕಿಕೊಂಡು ಹೊಸ ಕೆಲಸದ ನಿಯಮವನ್ನು ಚಳುವಳಿಗಾರರಿಗೆ ಕೊಡಿಸಿದರು.

ರಾಷ್ಟ್ರೀಯ ಶಾಲೆಯ ಮಕ್ಕಳು ಪಿಕೆಟಿಂಗ ಮಾಡುವ ಕೇಂದ್ರದಲ್ಲಿ ಪ್ರತಿ ದಿನಕ್ಕೆ ೧೦-೧೫ ಜನರು ಬರುತ್ತಾರೆ. ಆ ಮಕ್ಕಳ ನಾಟಕವಾಡುವದು ಮನೆಗಳಲ್ಲಿ ಕಾಂಗ್ರೆಸ ಕಮಿಟಿಗಳನ್ನು ಸ್ಥಾಪಿಸಲು ಪ್ರಯತ್ನಿಸುತ್ತಾರೆ. ಪರದೇಶಿ ಜವಳಿ ಮೊದಲಾದ ಬಹಿಷ್ಕಾರದ ಕೆಲಸವು ಭರದಿಂದ ನಡೆದಿದೆ.

ಅಲ್ಲಿಂದ ಸಮೀಪದ ೩-೪ ದಿವಸಗಳ ಹಿಂದೆ ಅಮಾವಾಸ್ಯೆ ರಾತ್ರಿಗೆ ಒಂದು ಗಾಡಿ ಬಾತ್ರ ಕೊಡುವದಕ್ಕೆ ಬಂದಿತು. ಯಾವ ರಾಜಕಾರಣಕ್ಕಾಗಿ ಬಂದಿದ್ದರೆಂದು ತಿಳಿಯದ ಜನರು ಆಶ್ಚರ್ಯಪಟ್ಟಿದ್ದಾರೆ. ರಾತ್ರಿ ೮ ಘಂಟೆಗೆ ಬಂದು ೧೧ ಘಂಟೆಗೆ ಹೋಯಿತು. ಕೆಲವು ಜನರಿಗೆ ಕರೆದು ಕೆಲವರನ್ನು ಅಂಗಡಿ ಮುಚ್ಚಿದ ಕಾರಣ ಕೇಳಿದರಾಗಿ ಇನ್ನೂ, ಈ ವ್ಯಾಪಾರಿಗಳ ತೊಂದರೆಗಳನ್ನು ಬಗೆಹರಿಸಿದರು ಕೇಳಿಕೊಂಡರಾಗಿಯೂ ಒಂದು ವಾರ್ತೆ!

ಕಾಂಬೋಡಿಯಾ ವರದಿ— ಇಲ್ಲಿ ಅನೇಕ ಜನರು ಅಸ್ವಸ್ಥ ಬಿದ್ದಿದ್ದಾರೆ ಈಗ ಮಲೇರಿಯಾ ಹಂಗಾಮು, ಹೊಲಗಳಸ ನಿಂತಿದೆ. ಮುಂದಿನ ವರ್ಷ ಹ್ಯಾಗೆ ಹೋಗುವದೆಂದು ಒಕ್ಕಲಿಗರು ಚಿಂತೆ ಮಾಡುತ್ತಿದ್ದಾರೆ. ಔಷಧೋಪಚಾರದ ವ್ಯವಸ್ಥೆಯನ್ನು ಕೂಡಲೆ ಮಾಡಬೇಕಾಗಿ ಜಿಲ್ಲಾಧಿಕಾರಿಗೆ ಸೂಚನೆ. ದವಾಖಾನೆಯೂ ದೂರ, ಜನರ ಸ್ಥಿತಿ ಸುಧಾರಿಸದು. ಇದು ಜಂಗಲ ಪ್ರದೇಶ, ಮಳೆ ಹೆಚ್ಚು; ಬರಿ ಕ್ವಿನೈನ ನೀರ ಮನೆ ಬಿಲ್ಲಾಧಿಕಾರಿಗಳು ಜನ ದೈವದ ಗೋಳನ್ನು ದಯೆಯಿಂದ ಕಣ್ಣಿಟ್ಟು ವಿಚಾರಿಸಿ ಸಂಕಟ ಪರಿಹರಿಸಬೇಕಾಗಿ ವಿನಂತಿ.

ಈ ಹೋಬಳಿಯ ಗ್ರಾಮದಲ್ಲಿ ಇತ್ತ ೧೫ ೩೦ ವರ್ಷಗಳಿಂದ ಗೋಮಾಳದ ಹಿಂಡುಗಳಲ್ಲ, ನಾಶವಾಯಿತು. ಹೋದ ವರ್ಷದಿಂದ ಪುನಃ ಗೋಮಾಳವಿದ ಜನರಿಗೆ ಬೀಳು ಬೀಳಲಿಲ್ಲ. ಆದಾಗ್ಯೂ ಗೋಮಾಳದ ಹುಲ್ಲು ಹುಟ್ಟಿದ್ದು ಬಿಡದು! ದನಗಳ ಸಂತೆ ಇಳಿ ಇಳಿದು ಅವರಿಕ್ಕೆ ಹಿಂತು; ಲೋಕಸಂತೆಯೂ ಇಳಿಯಿತು, ಧಕ್ಕೆ ದಾರಿಯಿಲ್ಲ. ಜನರು ಇಷ್ಟು ದಪ್ಪಿದ್ದರೆ ತೀರ್ವೆಗೆ ಸೊಲು ತೆಗೆದರು, ದನಕರು ಮಾರಿದರು. ಆದಾಗ್ಯೂ ನಿವಾರಣವಾಗುವದಿಲ್ಲ ಇಂಥ ಪ್ರಸಂಗದಲ್ಲಿ ಗೋಮಾಳದ ಹಿಂತೆಯು ಶಾಶ್ವತವಾಗಿ ಜಿಲ್ಲಾಧಿಕಾರಿಗಳ ಕಡೆ ನಮ್ಮ ವಿನಂತಿ.

ಕಾರವಾರ— ಈ ವಾರದಲ್ಲಿ ಸ್ಕೂಲ ಚೇರಮನ ಸಭೆ ಸೇರುವದಿದೆ. ಸರಕಾರದ ಗ್ರಾಂಟನ್ನು ಲೋಕಲ ಬೋರ್ಡು ತಗ್ಗಿಸಿದೆ. ಆದರಿಂದ ಹೆಡ್‌ಮಾಸ್ತರ ಪಗಾರ ಕೊಡಲು ದಯಾಗಿ ಚೇರಮನರ ಅಭಿಪ್ರಾಯವಾಗಿರುತ್ತದಾಗಿ ತಿಳಿದು ಬಂದೆ ಇದು ಅನ್ಯಾಯವು. ಲೋಕಲ ಬೋರ್ಡ ಗ್ರಾಂಟು ಕಡಿಮೆಯಾದರೆ, ಅದೇ ಪ್ರಮಾಣದಿಂದ ಎಲ್ಲರ ಸಂಬಳವನ್ನು ಕಡಿಮೆ ಮಾಡುವದು ಉತ್ತಮಪಕ್ಷವು. ಎಲ್ಲಾದನ್ನೂ ಮಾಸ್ತರ ಪಗಾರದಿಂದ ಎಲ್ಲ ಒಬ್ಬೆಯು ಹೆಡ್‌ಮಾಸ್ತರರ ಮೇಲೆಯೇ ಬಿದ್ದು, ಅವರಿಗೆ ಮುಂದೆ ಜೀವನ ನಡೆಯುವ ದ ಕಾರ್ಯ ನಷ್ಟವಾಗುತ್ತದೆ. ಲೋಕಲ ಬೋರ್ಡಿನ ಎಲ್ಲರ ಸಂಬಳ ತಗ್ಗಿಸುವದರಿಂದ ಅವರವರ ಸಂಬಳದ ಮೂಲದಿಂದ ಕತ್ತರಿಸಿ ಹೋಗುವದು; ಪಂಕ್ತಿ ಪ್ರಪಂಚವಾಗದು. ಬೋರ್ಡಿನ ಸಭಾಸದರು ವಿಚಾರ ಮಾಡಬೇಕು.

ಸ್ಥಾನಿಕ ವೃತ್ತಾಂತ.

ಕುಮಟಾ— ಈ ವಾರದಲ್ಲಿ ಮಳೆ ಸಾಧಾರಣ ೧—೩ ದಿನ ಚಳಿಯಿಂದ ಸುರಿಯಿತು. ಆದರೆ ಈಗ ಇಲ್ಲ ನದರು ಧಾನ, ಬಿಸಿಲು ತೋರಿ ಈ ವಾರದಲ್ಲಿ ೬—೭ ಇಂಚು ಮಳೆ ಬಿತ್ತು. ಈ ವರೆಗೆ ಒಟ್ಟು ೧೧೩—೯೯ ಇಂಚು ಮಳೆಯಾಯಿತು.

ಗಾಂಧಿ—ಇರ್ವಿನ್ ಒಡಂಬಡಿಕೆಯಂತೆ ಸ್ವಯಂಸೇವಕರ ಮೇಲೆ ನಡೆಸಿದ ಖಟ್ಲೆ ಹಿಂತೆಗೆದುಕೊಳ್ಳಬೇಕಾಗಿ ಕಲೆಕ್ಟರರಿಗೆ ತಾಲೂಕ ಕಾಂಗ್ರೆಸ ಕಮಿಟಿಯು ಅಧ್ಯಕ್ಷರು ಮಾಡಿದ ವಿನಂತಿಗೆ ... ಕಲೆಕ್ಟರರ ...

ಕಲೆಕ್ಟರರು ಇಲ್ಲಿ ಮುಕ್ಕಾಮು ಮಾಡಿದಾಗ ... ಕಲೆಕ್ಟರರು ಇದಕ್ಕೆ ... ಗುತ್ತೇದಾರರ ...

ನೌಕರ ... ಧೀರಿ ... ಲೋಕಸಭಾ ... ಪ್ರಕಟಿಸಲಾಯಿತು.

೧೯೫—ವಿದ್ಯಾರ್ಥಿ ... ಸಂಗ್ರಹ ಮಾಡುತ್ತಿದ್ದಾರೆ.

ಸರಕಾರ ... ಕಾಂಗ್ರೆಸ ... ಸಮಯ ...

ಇಲ್ಲಿ ಹೊಸ ಉಪಾಧ್ಯಾಯರು ... ಕೆಲವರು ... ವಿದ್ಯಾರ್ಥಿಗಳು ... ಕಂಡ ... ಜನರನ್ನು ...

ಶ್ರೀ ಗೋಕರ್ಣ ಕ್ಷೇತ್ರದ ರಾ ನಾರಾಯಣ ... ವಿರುದ್ಧ ... ಜಿಲ್ಲೆಯ ... ಮ್ಯಾಜಿಸ್ಟ್ರೇಟ ಕೋರ್ಟಿನ ... ಎಪ್ರಿಲ್ ತಿಂಗಳಲ್ಲಿ ... ರಾ ನಾರಾಯಣ ... ಒಡಂಬಡಿಕೆಯ ಯುಗ!

ಹೊನ್ನಾವರ— (ತಾ ೩೦—೭—೩೧) ... ಮಳೆ ಸುರಿಯಿತು. ... ಬೆಳೆಗಳ ಮೇಲೆ ನೀರೋ ನೀರು! ... ೧೧೧ ಇಂಚು ಮಳೆ ಬಿತ್ತು ... ೯೬ ಇಂಚು ಮಳೆಬಿತ್ತು.

ಮಾಡಿ ... ಮುಂದಿನ ... ಸ್ಥಾನಿಕ ...

ಇಲ್ಲಿಯ ... ಜಾತಿಯ ... ಸಮಾಜದ ... ಜಾತಿಯಲ್ಲಿ ...

... ಕೈ ... ಮುಂದುವರಿದ ...

ಚಿತ್ರಪುರ ... ಹೊಡೆದು ... ಸ್ಥಾನಿಕ ... ನೀರು, ... ನೀರು ... ಜನರಿಗೆ ...

(೧—೮—೩೧) ನೇ ... ಮಳೆ ...

ನಾಗರಿಕರು ... ಬೀಳಲಿಕ್ಕೆ ...

ಕೆರೆಯಲ್ಲಿ ... ಕೊಡಲಿಕ್ಕೆ ... ಮಾಡಬೇಕು.

... ಮುಂತಾದ ...

ಇಂದ ... ಹಿಂದುಸ್ಥಾನಕ್ಕೆ ... ಸ್ಥಳದ ... ಅಪರೂಪ ...

ಕಳೆದ ತಿಂಗಳ ... ಸಂಪೂರ್ಣವಾಗಿ ... ಬಹಳ ... ಲಾಭ! ... ಕಳ್ಳರಿಗೆ ಸುಸಂಧಿ!!

ಮುರ್ಡೇಶ್ವರ— (ತಾ ೩೧—೭—೩೧) ... ಮಳೆ ಸುರಿಯಿತು. ... ಗ್ರಾಮದೊಳಗೆ ... ಗದ್ದೆ ಬೈಲು ... ನೀರು ತುಂಬಿತ್ತು ... ಶ್ರೀ ದೇವರ ... ಮುರ್ಡೇಶ್ವರ ... ಗರ್ಭಗುಡಿಯ ಮೇಲೆ ... ವರ್ಷಗಳ ಹಿಂದೆ ... ಮುಂದೆ ... ಶ್ರೀ ದೇವರ ಲಿಂಗಕ್ಕೆ ... ಶ್ರೀ ಮೃಡೇಶ್ವರ ... ಶ್ರೀ ದೇವರ ... ವರ್ಷಗಳ ... ಜಗ್ಗೆ ... ರಕ್ಷಣೆ ... ಹಿಂದು ಸಮಾಜದವರೆಲ್ಲರೂ ನೆರವಾಗಬೇಕು.

ಭಟಕಳ— ... ಮಳೆ ಬಿತ್ತು, ... ಸಮಾರು ೧೦೦ ಇಂಚು ಮಳೆಯಾಯಿತು.

... ದಿನ ... ತಾಲೂಕ ... ಜನರು ಸೇರಿದ್ದರು, ... ೧೦೦ ... ಹಿಂದೂ ... ಜನರ ...

[illegible]

ಶಿರ್ಸಿ— ಇತ್ತ ಕೆಲವು ದಿವಸಗಳ ಹಿಂದೆ [illegible] ನಡೆದಿವೆ.

[illegible]

ಸಿದ್ದಾಪುರ— [illegible]

[illegible]

ಅಂಕೋಲಾ— [illegible]

[illegible]

(ಮುಂದೆ ಹನೇ ಪಾನಿನ ಮೇಲೆ ನೋಡಬೇಕು)

ಅಲ್ಲಿ ಇಲ್ಲಿ ಇಷ್ಟಿಷ್ಟು!

ಅಲೀಪುರ ಡಿಸ್ಟ್ರಿಕ್ಟ ಕೋರ್ಟಿನಲ್ಲಿ ಕಳೆದ ಸೋಮವಾರ ಭಯಂಕರ ಅತ್ಯಾಚಾರವಾಯಿತು. ಡಿ| ಜಜ್ಜರಾದ ಮಿ| ಆರ್. ಆರ್. ಗಾರ್ಲಿಕ್, ಆಯ್. ಸಿ. ಎಸ್., ರವರು ಕ್ರಾಂತಿಕಾರಕರದೊಂದು ಖಟ್ಲೆ ವಿಚಾರ ಮಾಡಿ ಫಲಾಹಾರ ಕೊಂಡು, ದಿನಾಲು ಪ್ರಕರಣವನ್ನೊಂದು ವಿಚಾರಿಸುತ್ತಿದ್ದರು. ಅಷ್ಟರಲ್ಲಿ ೨೦–೨೨ ವರ್ಷದ ಒಬ್ಬ ಬಂಗಾಲಿಯು ಥಟ್ಟನೆ ಒಳಸೇರಿ ಜಜ್ಜರಿಗೆ ಗುಂಡುಹಾಕಿದನು. ಮೊದಲನೇ ಗುಂಡು ಗುರಿ ತಪ್ಪಿತು; ಎರಡನೇ ಗುಂಡು ಹಾರಿಸಿದನು. ಅದು ನೆಟ್ಟಗೆ ಎದೆಗೆ ಸೇರಿ ಜಜ್ಜರು ನಿಶ್ಚೇಷ್ಟರಾಗಿ ಬಿದ್ದರು. ಒಳಗಿದ್ದ ಪೋಲೀಸ ಅಧಿಕಾರಿಯು ಕೊಲೆಗಾರನ ಮೇಲೆ ಗುಂಡು ಹಾರಿಸಿದನು. ಕೊಲೆಗಡುಕನೂ ಗುಂಡು ಹಾರಿಸಿದನು. ದ್ವಂದ್ವ ಯುದ್ಧದಲ್ಲಿ ಕೊಲೆಗಡುಕನು ತೀರಿಕೊಂಡನು. ಶೋಧಿಸಿದಾಗ ತನ್ನ ಪಂಜರದಲ್ಲಿದ್ದ ಪಿಸ್ತೂಲಿನ ಕೊನೆಯ ಗುಂಡು ಹಾಕಿ ಅವನು ತೀರಿಕೊಂಡನು. ಆತನು ಖಾದಿಯ ಬಂಗಾಲಿ ಉಡುಪನ್ನು ಧರಿಸಿದ್ದನು. ಆತನ ಕಿಸೆಯೊಳಗೆ ೧೪ ಗುಂಡುಗಳಿದ್ದವು; ಕೆಲವು ಮುದ್ರಿತ; ಒಂದು ಕಾಗದ ತುಂಡಿತ್ತು. ಅದರ ಮೇಲೆ ಬರೆದದ್ದೇನಂದರೆ "ನಿನ್ನ ಸರ್ವನಾಶವಾಗಲಿ ದಿನೇಶ ಗುಪ್ತನಿಗೆ ಅನ್ಯಾಯದಿಂದ ಗಲ್ಲಿಗೇರಿಸಿದ ಬಗ್ಗೆ ಪ್ರಾಯಶ್ಚಿತ್ತವನ್ನು ಭೋಗಿಸು —ನಿನ್ನ ನಿಧನ ಸಮೀಪಿಸುತ್ತಿದೆ." ಈ ಪ್ರಕಾರ ವಿಧಿಯುಕ್ತ ಗೂಢ ರವರು ಕೊಲೆಯ ಕಾರಣವನ್ನು ಬರೆದಿದ್ದರು. ಮಿ| ಗಾರ್ಲಿಕ್‌ರವರು ತಾ| ೩—೧೨ ೧೯೩೦ನೇ ಕಲಕತ್ತೆಗೆ ಡಿ| ಕಲೆಕ್ಟರರಾಗಿ ಬಂದಿದ್ದರು. ೧೯೧೧ನೇ ಇಸ್ವಿಯ ಡಿ| ಜಜ್ಜರಾದರು. ೧೯೩೧ನೇ ಇಸ್ವಿ ಫೆಬ್ರುವರಿ ತಿಂಗಳಲ್ಲಿ ಸ್ಪೆಶಲ್ ಟ್ರಿಬ್ಯುನಲ್ ಜಜ್ಜರಾದರು. ಅನೇಕ ಕ್ರಾಂತಿಕಾರಕ ಖಟ್ಲೆಗಳನ್ನು ಇವರು ವಿಚಾರಿಸಿ ಶಿಕ್ಷೆ ವಿಧಿಸಿದ್ದರು. ದಿನೇಶಗುಪ್ತರಿಗೆ ಗಲ್ಲಿಗೇರಿಸುವ ಶಿಕ್ಷೆಯನ್ನು ಇವರೇ ವಿಧಿಸಿದ್ದರು. ಕೆಲ ದಿನಗಳಿಂದ ಇವರಿಗೆ ಜೀವಕ್ಕೆ ಅಪಾಯದ ಬೆದರಿಕೆ ಹಾಕುವ ಅನೇಕ ಪತ್ರಗಳು ಬರುತ್ತಿದ್ದವು. ಅವರ ರಕ್ಷಣೆಯ ಬಗ್ಗೆ ವಿಶೇಷ ಏರ್ಪಾಟುಗಳಿದ್ದು ಮನೆಯು ಕಂಪೌಂಡ ಸುತ್ತಮುತ್ತ ಸಶಸ್ತ್ರ ಪೋಲೀಸರ ಪಹರೆ! ಕೋರ್ಟಿನಲ್ಲಿ ಸಶಸ್ತ್ರ ಪೋಲೀಸರು, ಮೇಲೆ ಪೋಲೀಸ ಸರ್ಜಂಟರು!! ಇಷ್ಟು ಬಂದೋಬಸ್ತಿದ್ದಾಗ್ಯೂ, ಗುಂಡು ಹೊಡೆಯುವ ಕಾಲಕ್ಕೆ ಅಂಗರಕ್ಷಕ ಪೋಲೀಸ ಸರ್ಜಂಟರು ಆ ಸಮಯ ಹಜರಿಗೆ ಹಾಜರಿರಲಿಲ್ಲ ಅವರ ಸಂತತಿ ಹಿರಿದಿತ್ತು. ಮಿ| ಗಾರ್ಲಿಕ್‌ರವರು ಸನ್ನದಲ್ಲೇ ರಜೆಯ ಮೇಲೆ ಹೋಗುವವರಿದ್ದರು. ಡಿ| ಜಜ್ಜರಿಗೆ ಕೊಂದ ಸುದ್ದಿ ತಿಳಿದೊಡನೆ ಕಲಕತ್ತೆಯ ಹೈಕೋರ್ಟಿನ ಮುಚ್ಚಲ್ಪಟ್ಟಿತು, ಬಂಗಾಲ ಶಾಸನ ಕೌನ್ಸಿಲಿಗೆ ರಜೆ. ಜತೀಂದ್ರ ಮೋಹನ ಸೇನ ಗುಪ್ತರವರು ಅತ್ಯಾಚಾರವನ್ನು ನಿಷೇಧಿಸಿದ್ದಾರೆ. ಸರ್ವ ವಿದೇಶಿಗಳು ಸಹಾನುಭೂತಿಪರ ಸಂದೇಶವನ್ನು ಕಳುಹಿದ್ದಾರೆ. ಸ್ಮಶಾನ ಯಾತ್ರೆಗೆ ಯುರೋಪಿಯನ್ನರೂ ಹಿಂದೀಯರೂ ತಂಡುಗಟ್ಟಿ ಸೇರಿದ್ದರು. ಲಂಡನಿನಲ್ಲಿ ಈ ವಿಷಯ ಬಹು ದೊಡ್ಡ ಗಲಭೆ. ಮಿ| ಗಾರ್ಲಿಕ್‌ರಿಗೆ ಒಬ್ಬ ಹೆಂಡತಿ, ಒಬ್ಬ ಮಗಳು; ಇಷ್ಟು ಜನರಿದ್ದಾರೆ.

* * *

ಡಾ| ವಾಸುದೇವ ಬಳವಂತ ಗೋಗಟೇಯವರಿಗೆ ಪೋಲೀಸರು ಹೈದರಾಬಾದಕ್ಕೆ ಒಯ್ದ ಸುದ್ದಿ ಪ್ರಕಟವಾಗಿತ್ತಷ್ಟೆ. ಅಲ್ಲಿ ಅವರನ್ನು ಅವರ ಮನೆಯ ಝಡತಿಯಲ್ಲಿ ಏನೂ ಸಿಗಲಿಲ್ಲ. ಪುನಃ ಪುಣೆ ಪಟ್ಟಣಕ್ಕೆ ಅವರಿಗೆ ತಂದು ಖಟ್ಲೆ ಮುಗಿಸುವ ತನಕ ಅಂದರೆ ೫ ದಿನಗಳ ಮುದ್ದತ್ತು ಕೊಳ್ಳಲಾಗಿದೆ. ಮುದ್ದತ್ತು ಈ ಶುಕ್ರವಾರ ತೀರಿತು. ಈ ಖಟ್ಲೆಯು ಹೈಕೋರ್ಟ ಗಡಿಯಾರದವರನ್ನು ಮಾಡುವವರೊಬ್ಬರ ಮನೆ ಜಪ್ತಿಯಾಯಿತು. ಸೋಲ್ಲಾಪುರದಲ್ಲಿ ಡಾ| ಗೋಗಟೇಯವರ ಸ್ನೇಹಿತರಾದ ಪೋಲೀಸರು ಕರಸಿ ಅವರ ಕಡೆಯಿಂದ ಕೆಲವು ಮಾಹಿತಿ ಪಡೆದರು. ಡಾ| ಗೋಗಟೇಯವರು ಡಾ| ವಾಸುದೇವ ಗೋಗಟೇಯವರ ಅಣ್ಣನ ಮಗಂದಿರಂತೆ.

* * *

ರಾಷ್ಟ್ರೀಯ ಸಭೆಯವರು ತಯಾರಿಸಿದ ಹಿಂದು-ಮುಸಲ್ಮಾನ ಯೋಜನೆಗೆ ಬಿಹಾರ ಪ್ರಾಂತದೊಳಗಿನ ಭಾಗಲಪುರ, ಮುಝಫರಪುರ, ಗಯಾ, ಪಾಟನಾ, ಛಪರಾ, ದರ್ಭಂಗಾ ಮೊದಲಾದ ಪಟ್ಟಣಗಳೊಳಗಿನ ಸುಮಾರು ೩೩ ಮಂದಿ ಮುಸಲ್ಮಾನ ಪ್ರಮುಖರು ಒಪ್ಪಿಗೆಯನ್ನಿತ್ತಿದ್ದಾರೆ. ಕಾಂಗ್ರೆಸ ಕಾರ್ಯಕಾರಿ ಮಂಡಳದ ಡಾ| ಸಯ್ಯದ ಮಹಮೂದರವರು ಅವರೆಲ್ಲರ ಹೆಸರುಗಳನ್ನು ಪ್ರಕಟಿಸಿದ್ದಾರೆ.

* * *

ಪಂಜಾಬ ಮೇಲ ಅಗಿಬೋಟಿಯು ಮುಂಬಯಿಯಿಂದ ಲಾಹೋರ ಕಡೆ ಹೋಗುತ್ತಿರುವಾಗ ಮಧ್ಯವಾದ ಕಡೆ ಬಿಡುವಾರ ರಾತ್ರಿ ಇಬ್ಬರು ಗಸ್ತಿ ವರ್ಗದ ತಬ್ಬೆ ಒಳನುಗ್ಗಿ ಪಕ್ಕ ಹೀಗು ಕೀಡನ್ ಎಂಬ ಇಬ್ಬ ಸ್ವನ್ಯಾಧಿಕಾರಿಗಳನ್ನು ಕೊಂದು ಓಡಿದರು. ಇನ್ನು, ಅವರ ಪತ್ತೆಹತ್ತಲಿಲ್ಲ. ಘಾತುಕವಾದ ಕತೆ ದಟ್ಟ ಅಡವಿಯಲ್ಲಿ ಇವರು ಸೇರಿಕೊಂಡಿದ್ದಾರೆಂದು ಪೋಲೀಸರಿಗೆ ಸುದ್ದಿಯಾಗಿ ಅಲ್ಲಿಗೆ ಹಿಡಿ ಹೋಗಿರುವರಂತೆ. ಇಂಥವರೇ ಹೊಡೆದರೆಂದು ಬಲ್ಲಿ!

* * *

ಬೆಂಗಳೂರಿನೊಳಗೆ ಧ್ವಜ ಸಂಗ್ರಾಮ ನಡೆದಿದೆ. ಧ್ವಜ ಸತ್ಯಾಗ್ರಹದಾಗಿ ಡಿ| ಮೆಜಿಸ್ಟ್ರೇಟರು ಹೊರಡಿಸಿದ ಹುಕುಮನ್ನು ಉಲ್ಲಂಘಿಸಿ ಸ್ವಯಂಸೇವಕರು ಸೆರೆಮನೆ ಸೇರುತ್ತಿದ್ದಾರೆ. ಕೂಲಿ ಕಾರರ ಸಭೆಯಾಯಿತು, ಪೋಲೀಸರಿಗೂ ಕೂಲಿಕಾರರಿಗೂ ನಡೆದ ಜಗಳದಲ್ಲಿ ಪೋಲೀಸರು ಗುಂಡು ಹಾಕಿ ಕೆಲವರಿಗೆ ಕೊಂದರು. ಸಭಾಬಂದಿಯು ಜಾರಿಯಾಗಿದೆ. ಬೆಂಗಳೂರಿನ ವಾತಾವರಣವು ಕೆಟ್ಟಿಗಿಲ್ಲ.

* * *

ಶ್ರೀ ವಿಠಲಭಾಯಿ ಪಟೇಲರವರ ಪ್ರಕೃತಿ ಇನ್ನೂ ಪೂರ್ಣವಾಗಿ ಸುಧಾರಿಸಲಿಲ್ಲ. ಶಸ್ತ್ರಪ್ರಯೋಗ ಮಾಡಿ ಕರುಳಿನ ತರುವಾರ ಕಳುಹುವದರಲ್ಲಿ ಅವರಿಗೆ ಜ್ವರ ಬಂದು ಬಂದಿದೆ. ಶ್ರೀ ವಿಠಲಭಾಯಿಯವರಿಗೆ ಬೇಗನೆ ಕ್ಷೇಮವಾಗಲೆಂದು ಹಾರೈಕೆ.

* * *

ಮುದ್ರಾಸದೊಳಗಿನ ಕಲೆಕ್ಟರರಾದ ಮಿ| ಪಿ. ಬಿ. ಕೊಕ್ಷರವರಿಗೆ ಮದ್ರಾಸ ಸರಕಾರವು ಸ್ವಲ್ಪ ಶಿವ ಹಿಂದೆ ಬೇಕು; ಬಲೋ ಹಿಂದಿದರೂ ಅಷ್ಟಯಿಲ್ಲ. ಸದ್ಯಕ್ಕೆ ಇವರ ಸನ್ಮಾನವು ಭಾಷಣವಾಯಿತು. ಶಾಂತತೆಯಿಂದ ನಡೆದ ಪಿಕೆಟಿಂಗನ್ನು ನಿಲ್ಲಿಸುವ ಅಂಗಡಿಕಾರರು ಎಷ್ಟರ ತನಕ ಸಹಿಸುವದಿಲ್ಲೆಂದು ನಾನು ಎಣಿಸಿ ಆಶ್ಚರ್ಯಪಡುತ್ತೇನೆ, ಹೀಗೆ ಕಲೆಕ್ಟರರು ನುಡಿಯುತ್ತಾರೆ. ಸರಳ ಭಾಷೆಯಲ್ಲಿ ಇದರ ಅರ್ಥವೇನಂದರೆ,—ಅಂಗಡಿಕಾರರು ಪಿಕೆಟಿಂಗ ಮಾಡುವವರಿಗೆ ಬಲೋ ಪೆಟ್ಟು ಕೊಡಬೇಕು. ಈ ಅನಕ ಅವರು ಸಹಿಸಿದ್ದೇ ಬಹು ದೊಡ್ಡ ಮಾತು!

* * *

ಪಾಟನಾ ಹೈಕೋರ್ಟಿನಲ್ಲಿ ಒಂದು ಮಾದುವೆಯ ಖಟ್ಲೆ ವಿಚಾರ ನಡೆದದೆ. ಕೇಶವಬಾಬಾ ಧನುಲಧಾರಿಯು ಅರ್ಜಿದಾರನು, ಈತನ ಹೆಂಡತಿ ಯದ್ರುದಾಂಳು. ಈರ್ವರ ಮದುವೆಯು ಸಂಗತಿ ಮೊಸೋರದಲ್ಲಿ ನಡೆದ ೧—೧॥ ವರ್ಷದ ಹಿಂದೆ ಧನುಲಧಾರಿಗೆ ಮದುವೆ ಮಾಡಿಕೊಳ್ಳ ಹತ್ತಿದಾಯಿತು. ಒಬ್ಬರು ಹೆಣ್ಣು ಕೇಳಬಂದವರು ಮಂಟಪದಲ್ಲಿ ಕಾಸ್ಟ ಕೊಟ್ಟಿದ್ದ ಮದುಮಗಳ ಜಕ್ಕೆ ನೋಡಿ ಉಗ್ರವಾಡಿದರು. ಗಂಡನು ಹೆಂಡತಿಗೆ ಬಿಟ್ಟನು. ಹೆಂಡತಿಯು ಜೀವನಾಂಶಕ್ಕೆ ಫಿರ್ಯಾದ ಮಾಡಿದಳು. ತಿಂಗಳಿಗೆ ರೂ. ೧೦ ರಂತೆ ಜೀವನಾಂಶ ಕೊಡಿಸಲಾಯಿತು. ಗಂಡನು ೧—೧॥ ವರ್ಷದ ತನಕ ಜೀವನಾಂಶ ಕೊಡಲಿಲ್ಲ, ನಾದಂ ಅರ್ಜಿ ಕೊಟ್ಟನು, ಆದರೆ ಡಿ| ಜಜ್ಜರು ತಿರಸ್ಕರಿಸಿದರು. ಹೈಕೋರ್ಟಿನಲ್ಲಿ ಅಪೀಲು ದಾಖಲಾಯಿತು. ನ್ಯಾಯಮೂರ್ತಿಗಳು ದಂಪತಿಗಳಿಗೆ ರಾಜಿ ಮಾಡಿಸಿಕೊಂಡು ಅಕ್ಕತ್ತಿನ ಆಲಿಂಗನ ಕೇಳಿಕೊಂಡು ಖಟ್ಲೆಯ ಕಾಗದಪತ್ರಗಳನ್ನು ಹರಿಸಲಿಕ್ಕೆ ಹುಕುಮು ಮಾಡಿದರು.

* * *

ಕರಾಚಿಯಲ್ಲಿ ಮೇಕಸೇವಾ ಮಂಡಳದ ಲೋಕಜಾಗೃತೆಯ ಬಲೋ ಸೇವೆ ನಡೆಸುತ್ತಿದೆ. ಹಿಂದುಳಿದ ಅಸ್ಪೃಶ್ಯ ಸಮಾಜದಲ್ಲಿ ಇವರು ಸೇರಿಕೊಂಡು ಕುಡುಕತನ ಮೊದಲಾದ ವ್ಯಸನಗಳಿಂದ ಪರಾವೃತ್ತ ಮಾಡುತ್ತಾರೆ. ಕೆಲ ಜಾತಿಯವರು ಮರಣಪಟ್ಟ ಪಶು-ಪಕ್ಷಿಗಳ ಮಾಂಸ ತಿನ್ನುತ್ತಾರೆ. ಅದನ್ನು ತಿನ್ನಬಾರದಾಗಿ ಹೇಳಿದ ಅವರು ರದ ಬಗ್ಗೆ ಒಬ್ಬ ಸ್ವಯಂಸೇವಕನಿಗೆ ಸರೆಹಿಡಿದರು. ಆತನು ಹುಚ್ಚುವೃ ಮಾಡಿಕೊಂಡನು. ಖಟ್ಲೆಯನ್ನು ಬೇರೆ ಬೇರೆ ಕಡೆ ವರ್ಗಾಯಿಸಿ, ಅಲ್ಲಿ-ಇಲ್ಲಿ ಹಿಡ್ಯಾಡಿಸಿ ಆತನಿಗೆ ಕಟ್ಟ ಕಡೆಗೆ ೧ ತಿಂಗಳ ಶಿಕ್ಷೆ ವಿಧಿಸಲ್ಪಟ್ಟಿದೆ. ಖಟ್ಲೆ ಹಿಡಿದಂದಿನಿಂದ ಖಟ್ಲೆ ಮುಗಿಯುವ ತನಕ ಆತನು ೧೦೦೦ ಮೈಲು ಓಡಾಡಿದ್ದಾಯಿತೆಂದು ಒಬ್ಬರ ಲೆಕ್ಕ. ಕರಾಚಿಯ ಹುಡುಗಿಯಂತೆ ಗ್ರಾಮತ್ಯಾಗ ಮಾಡಿದ ಬಗ್ಗೆ ಇನ್ನೊಬ್ಬ ಸ್ವಯಂಸೇವಕನಿಗೆ ಸರೆಹಿಡಿಯಲ್ಪಟ್ಟಿದೆ. ಆತನು ಜಾಮೀನು ಕೊಡಲೊಲ್ಲ, ಈ ಅಪರಾಧಕ್ಕಿಂತ ಶಿಕ್ಷೆ ಅನುಭವಿಸುವದೇ ಲೇಸೆಂದು ಆತನ ಅಂಬೋಣ.

—ಶ್ರೀ ಕ್ಷೇತ್ರ ಕಾಶಿಯೊಳಗಿನ ಹಿಂದು ವಿಶ್ವವಿದ್ಯಾಲಯಕ್ಕೆ ೧ ಕೋಟಿ ರೂಪಾಯಿ ದ್ರವ್ಯ ಸಹಾಯ ಬೇಕಾಗಿ ಪಂಡಿತ ಮದನಮೋಹನ ಮಾಲವೀಯರವರು ವಿನಂತಿ ಮಾಡಿಕೊಂಡಿದ್ದಾರೆ.

ಶ್ರೀ| ವಿಠ್ಠಲಭಾಯಿ ಪಟೇಲರವರ ಭಾಷಣ.

(೩ನೇ ಪಾನಿನಿಂದ ಮುಂದರಿಸಿದ್ದು.)

ಖತವರಾದರು ರಾಷ್ಟ್ರೀಯ ಸಭೆಯ ಪ್ರಾಬಲ್ಯದಲ್ಲೂ ಮಹಾತ್ಮರ ಮಹಿಮೆಯಿಂದಲೂ ದೇಶದೊಳಗೆ ಜಾಗೃತಿಯುಂಟಾಗಿದೆ. ಪೂರ್ವಸಂಸ್ಕೃತಿಯು ನವಚೇತನಯುಂಟಾಗಿದೆ; ನವಸ್ಫೂರ್ತಿಯಿಂದ ಉದ್ಧಾರ ಹೊಂದುವ ಆಕಾಂಕ್ಷೆಯುಂಟಾಗಿದೆ. ದೇಶವಾಸಿಗಳು ನಡೆಸಿದ ಸಂಗ್ರಾಮವನ್ನು ನೀವು ದೂರದಿಂದ ಕಂಡಿದ್ದೀರಿ. ಹಿಂದುಸ್ಥಾನಕ್ಕೆ ಏನು ಬೇಕೆಂಬುದು ಕರಾಚಿಯ ರಾಷ್ಟ್ರೀಯ ಸಭೆಯಲ್ಲಿ ನಿಶ್ಚಿತವಾಗಿದೆ. ಅಂತರ್ಬಾಹ್ಯ ಕಾರಭಾರದಲ್ಲಿ ಸಂಪೂರ್ಣ ಸ್ವಾತಂತ್ರ್ಯವನ್ನು ಅವರು ಬೇಡಿರುವರು. ೧ ವರ್ಷದ ತನಕ ಸಂಗ್ರಾಮ ನಡೆಯಿತು, ಈಗ ಬಿಡುವಿನ ಕಾಲವಾಗಿದೆ. ಅತ್ತಕಡೆಯವರೂ ಚರ್ಚೆಯಿಂದ ವಿವಾದವನ್ನು ತೀರ್ಮಾನಿಸಿಕೊಳ್ಳಲುದ್ಯುಕ್ತರಾಗಿದ್ದಾರೆ. ಹಿಂದುಸ್ಥಾನದ ವಿಷಯವು ಬ್ರಿಟಿಶ ದೇಶಕ್ಕೆ ಮಾತ್ರ ಸಂಬಂಧಪಟ್ಟದ್ದಲ್ಲ. ಅಖಿಲ ವಿಶ್ವದ ಪ್ರಶ್ನೆಯಾಗಿದೆ. ಹಿಂದುಸ್ಥಾನವು ಕೈಕೊಂಡ ಸಂಗ್ರಾಮದ ಉಪಾಯಗಳು ಇಡೀ ಜಗತ್ತಿಗೆ ಅಚ್ಚರಿ ಹುಟ್ಟಿಸುವಂಥವುಗಳು. ಅವುಗಳ ವಿಜಯವಾಗಬೇಕಾಗಿ ಅಖಿಲ ಭೂಮಂಡಳದವರು ಹಾರೈಸುತ್ತಾರೆ. ಹಿಂದೂಸ್ಥಾನದ ಮೇಲೆ ದಬ್ಬಾಳಿಕೆಯ ವಿದ್ಯುತ್ ಕೋಟಿಯ ಸಂ—ದಾಟವು ಅವಲಂಬಿಸಿದೆ. ವಿರಕ್ತ ಮುದ್ದುವುಗಳು ನೋಡಲಿ, ಕೆಲ ವ್ಯಾಪಾರಿ ಜನರಿಗೆ ಆರ್ಥಿಕವಾದ ಕಷ್ಟಗಳು ಒದಗುವವೆ ಹೊರತು, ಇಡೀ ಭೂಮಂಡಳದ ವ್ಯಾಪಾರವು ಕೆಟ್ಟಾಗುವದು. ಈ ದೃಷ್ಟಿಯಿಂದ ವಿಚಾರಿಸಿದರೆ, ಇದು ವಿಶ್ವ ಪ್ರಶ್ನೆಯೇ. ರಾಷ್ಟ್ರಸಂಘವು ಯಾಕೆ ಇದರ ವಿಚಾರ ಮಾಡುವದಿಲ್ಲ? ಹಿಂದೀ ಶಾಂತತೆಯಿಂದ ಸಂಗ್ರಾಮ ನಡೆಸುತ್ತಿರುವ ಕಾಲ ಹೋಯಿತು. ಭೂಮಂಡಳದಲ್ಲಿ ಶಾಂತತೆ ನೆಲೆಗೊಳ್ಳಬೇಕೆಂದು ಅಪೇಕ್ಷಿಸುವವರೆಲ್ಲರೂ ಈ ಕಾದಾಟವನ್ನು ಪರಿಶೀಲಿಸಬೇಕು. ಹಿಂದುಸ್ಥಾನದೊಳಗೆ ಶಾಂತಿ ಸ್ಥಾಪನೆಯಾಗುವಂತೆ ತಮ್ಮ ಬಲವನ್ನೂ ಪ್ರತಿಷ್ಠೆಯನ್ನೂ ಉಪಯೋಗಿಸಬೇಕು. [illegible] ಸಭೆಯ [illegible]ಗಳನ್ನು ಮನ್ನಿಸ [illegible] ಬ್ರಿಟಿಶರ ಮನವೊಲಿಸದರೆ ಮಾತ್ರ [illegible] ಪರಿಷತ್ತು ಸಾರ್ಥಕವಾಗುವದು!

NAIK BROS.' MOTOR SERVICE.

Honavar to Dharwar! Dharwar to Honavar!!

TO BE OPENED SHORTLY FROM

1st SEPTEMBER 1931.

ನಾಯ್ಕ ಬ್ರದರ್ಸ ಮೋಟರ ಸರ್ವಿಸ್.

ಹೊನ್ನಾವರದಿಂದ ಧಾರವಾಡಕ್ಕೆ! ಧಾರವಾಡದಿಂದ ಹೊನ್ನಾವರಕ್ಕೆ!

ಇದೇ ಸಪ್ಟಂಬರ ತಾ. ೧ನೇಯಿಂದ ಸರ್ವಿಸ್ ಚಾಲು ಆಗುವದು!!

ಹೊಸ ಹೊಸ ಲೋರಿಗಳು!] [ಬಹು ಸುಖಕರ ಪ್ರಯಾಣ!!

ಅನೇಕ ಜನರ ಆಗ್ರಹದ ಮೇರೆಗೆ ಪ್ರಯಾಣಸ್ಥರ ಅನುಕೂಲತೆಗಾಗಿಯೇ

ಈ ಸರ್ವಿಸ್ ಹೊಸದಾಗಿ ಚಾಲು ಮಾಡಿರುತ್ತದೆ!!

ಈ ಸರ್ವಿಸಿನ ಒಂದು ಮೋಟರವು ಪ್ರತಿ ದಿನ ಬೆಳಿಗ್ಗೆ ಹೊನ್ನಾವರದಿಂದ ೭ ಘಂಟೆಗೆ ಹೊರಟು, ಕುಮಟಾ-ಶಿರ್ಸಿ ಮುಂಡಗೋಡ ಮಾರ್ಗವಾಗಿ ಹುಬ್ಬಳ್ಳಿಗೆ ಹೋಗಿ ಧಾರವಾಡಕ್ಕೆ ಸಾಯಂಕಾಲ ೬ ಘಂಟೆಗೆ ಮುಟ್ಟುವದು ಅದರಂತೆಯೇ ಪ್ರತಿ ದಿವಸ ಬೆಳಗಿನ ೭ ಘಂಟೆಗೆ ಧಾರವಾಡದಿಂದ ಹೊರಟು, ಹುಬ್ಬಳ್ಳಿ-ಮುಂಡಗೋಡ-ಸಿರ್ಸಿ ಮಾರ್ಗವಾಗಿ ಕುಮಟೆಗೆ ಬಂದು, ಹೊನ್ನಾವರಕ್ಕೆ ೬ ಘಂಟೆಗೆ ತಲ್ಪುವದು. ಪ್ರಯಾಣಸ್ಥರ ಅನುಕೂಲತೆಯ ಬಗ್ಗೆ ಆಯಾಯ ಸ್ಟೇಶನಗಳಲ್ಲಿ ಯೋಗ್ಯ ವ್ಯವಸ್ಥೆ ಇಟ್ಟಿರುತ್ತದೆ. ಹಾಗು ವ್ಯಾಪಾರಸ್ಥರ ಲಗೇಜ ಯೋಗ್ಯ ಹಾಸಲು ಕೊಂಡು ಆಯಾಯ ವಿಳಾಸದಾರರಿಗೆ ಮುಟ್ಟಿಸಲ್ಪಡುವದು. ಈ ಸರ್ವಿಸು ವ್ಯಾಪಾರಸ್ಥರಿಗೆ ವಿಶೇಷ ಅನುಕೂಲವಾದದ್ದಿರುತ್ತದೆ ಕಾರಣ, ಈ ಸರ್ವಿಸಿಗೆ ತಾವೆಲ್ಲರೂ ಸಹಾನುಭೂತಿಯಿಂದ ಪ್ರೋತ್ಸಾಹಿಸಬೇಕಾಗಿ ವಿನಂತಿ.

ಈ ಸರ್ವಿಸಿನ ಹೊರತಾಗಿ ನಮ್ಮಲ್ಲಿ ಬಸ್ಸುಗಳು ಸ್ಪೇಶಲ್ ಭಾಡಿಗೆಗೆ ಸಿಗುವವು!!

Lorries can be had for special hire!!

ಟಿಕೀಟು ಸಿಗುವ ಸ್ಥಳಗಳು:—

ಹೊನ್ನಾವರದಿಂದ ಲೋರಿ ಹೊರಡುವ	ಧಾರವಾಡದಿಂದ ಲೋರಿ ಹೊರಡುವ
ವೇಳೆ:- ಸ್ಥಳ:- ಏಜಂಟು:-	ವೇಳೆ:- ಸ್ಥಳ:- ಏಜಂಟು:-
7 A.M. ಹೊನ್ನಾವರ- ಎಸ್. ಎಮ್. ಪಂಡಿತ, ಮಗಾರಕೇರಿ.	7 A.M. ಧಾರವಾಡ- C/o ಯುನಿಟಿ ಫಾರ್ಮಸಿ.
8-30 A.M. ಕುಮಟಾ- ನಾಯ್ಕ ಬ್ರದರ್ಸ ಮೋಟರ ಆಫೀಸ	8-30 A.M. ಹುಬ್ಬಳ್ಳಿ- ನಾಯ್ಕ ಬ್ರದರ್ಸ ಮೋಟರ ಆಫೀಸ.
1 P.M. ಸಿರ್ಸಿ- ನಾಯ್ಕ ಬ್ರದರ್ಸ ಮೋಟರ ಆಫೀಸ, ಮೋಟರ ಸ್ಟೆಂಡ.	10-30 A.M. ಮುಂಡಗೋಡ- ನಾಯ್ಕ ಬ್ರದರ್ಸ ಮೋಟರ ಆಫೀಸ.
3 P.M. ಮುಂಡಗೋಡ- ನಾಯ್ಕ ಬ್ರದರ್ಸ ಮೋಟರ ಆಫೀಸ.	2-30 P.M. ಸಿರ್ಸಿ ನಾಯ್ಕ ಬ್ರದರ್ಸ ಮೋಟರ ಆಫೀಸ, ಮೋಟರಸ್ಟೆಂಡ
5 P.M. ಹುಬ್ಬಳ್ಳಿ- ನಾಯ್ಕ ಬ್ರದರ್ಸ ಮೋಟರ ಆಫೀಸ.	5 P.M. ಕುಮಟಾ- ನಾಯ್ಕ ಬ್ರದರ್ಸ ಮೋಟರ ಆಫೀಸ
6 P.M. ಧಾರವಾಡ- C/o ಯುನಿಟಿ ಫಾರ್ಮಸಿ.	6 P.M. ಹೊನ್ನಾವರ- ಎಸ್. ಎಮ್. ಪಂಡಿತ ಮಗಾರಕೇರಿ.

ಸೂಚನೆ.— ಟಿಕೇಟ [illegible] ಯಾ ಅಲ್ಲಿಯ ಏಜಂಟರ ಕಡೆಗೆ ಸಿಗುವದು.

ಪ್ರೊಪ್ರೈಟರ್ಸ,

ನಾಯ್ಕ ಬ್ರದರ್ಸ ಮೋಟರ ಸರ್ವಿಸ್.

[illegible] ರ ಸ್ಟ [illegible] ಪಾತ್ಮಲಿಗ ಕಿಂಗಸ್ಲೀ ದೊಡ್ಡ [illegible] ನಕ್ಕೆ ತರ ಬಯ್ಯಾ [illegible]
[illegible] ರಡಾಪ್ಪದು ಮೋಟರ [illegible]

" ನನ್ನ ೧॥ ದಿನದ ಮಾತೃ-ಪದ!"

(ಅನುವಾದಕ - ಶ್ರೀ ಅನಂತ ಹೊಸ್ಮನಿ, ಬಿ.ಏ.)

[ಕಳೆದ ಸಂಚಿಕೆಯಿಂದ ಮುಂದ ಸಾಗಿದ್ದು.]

ಈ ಹೊತ್ತು ಮಾಂಸ ಮುರಿದುಕೊಳ್ಳು ಮತ್ತು ಹಸರಿ ಪಲಿಕ್ಕಾ ಬೇರೆಸುವರು ಯಾರೂ ಇಲ್ಲದ್ದರಿಂದ, ಒಂದು ಟ ವಿಗ್ಗೆ ಏನೂ ಇಲ್ಲದೆ ನಾನು ಬರಿ ಕುಳಿತೆನು; ಆದರೆ ಹುಡುಗರಿಗೆ ನನ್ನ ಭಿಡೆ ಹಿಡಿಯುವ ಕಾರಣವೇನಿತ್ತು? " ಉಪ್ಪಿಟ್ಟಿಗೆ ಚಮಾಗೆ ಎಣ್ಣೆ ಮಾ ಸಾಸವೆ ಒಗ್ಗಿಸಿದೆ; ರುಚಿ ಹತ್ತುವದೇ ಇಲ್ಲ," ಅಂದ ತಕರಾರುಗಳು ಮುಂದೆ ಬಂದಿದ್ದು ಹತ್ತಿದ ಕೂಡಲೆ ಎದೆಯಿದು ಬಿಸ್ಕಿಟಿನ ಬಂದ ಕೊಟ್ಟು ನಾನು ನನ್ನ ತತ್ಕಾಲೀ ಪ್ರಜೆಗಳನ್ನು ಸುಮ್ಮನಿರಿಸಿದೆನು.

ಪಾಕ ಸಿದ್ಧಿಯ ಜವಾಬದಾರಿಯೂ ಕೂಡ ಈ ಹೊತ್ತು ನನ್ನ ಮೇಲೆಯೇ ಇತ್ತು. ಸ್ನಾನ ಪೀಳಿಯಲ್ಲಿ ಮತ್ತು ಸ್ವಯಂಪಾಕ ಉತ್ತಮವಾದ ಅಡಿಗೆಯೆಂದರೆ, ಅದು ಒಂದು ವೇಳೆ ಕೊಟ್ಟರೂ ಕಾಣ ಬಲ್ಲುದಂದಿದೆವುದು. ಆದ್ದರಿಂದ ನಾನು ಪೇಟೆಯಿಂದ ಫಲಗಳನ್ನು ತರಿಸಿದೆನು, ಮತ್ತು ಅವುಗಳಿಗಾಗಿ ಬಾಳೇ ಹಣ್ಣಿನ [illegible] ನ್ನು [illegible] ಸಿದೆನು. ಅನ್ನ ಮತ್ತು ಒಟಿಯ ವಲ್ಲಿ ಇಷ್ಟು ಜಿನಸುಗಳನ್ನು ಮಾಡುವದಾಯಿತು.

" ಮಾಸ್ತರೇ ಹುಡುಗರು, ಈಗ ಸ್ನಾನ, ಆಗಿ ಹೋಯಿತು ನೋಡಿ, ಬಾಯಿಕರಾರ್," ಹೀಗೆ ಅಸ್ಪಷ್ಟ ಶಬ್ದದಲ್ಲಿ ಹುಡುಗರು ಒಟ್ಟಿಗೆ ಕೂಗಿ ಬೇಡಿದರು. ಒಂದು ಮೇಲೆ ಅನ್ನಕ್ಕೆ 'ಇಡುವ ಕಪಡ' ಪಾತ ಸ್ತ್ರೀಯವಪ್ಪ ರಲ್ಲಿ ಹತ್ತಲು ಕಡೆಗೆ ಬಂದ್ದು ಕೇಳುವಲವೆಷ್ಟಿದ್ದು ನನಗೆ ಕೇಳಬಂತು. ನರನ್ನಾಗೆ ಬಂತಿ ಪತ್ನಿತೇ ಅಥವಾ ಆಕಸ್ಮಿಕ ಯಾರಾದರೂ ತೀರಿಕೊಂಡರೋ, ಇದರ ವಿಷಯವಾಗಿ ನನಗೆ ಏನೂ ಸೂಚನೆಯೇ ಇಲ್ಲ. ಆದರೆ ಸ್ಪರ್ಶೀ ಹೊತ್ತಿನಲ್ಲಿ ಈ ಗೊಂಬೆಯ ಮನೆಯದೇ ಇಂಥ ಬೇಕೆಂಬ ನನಗೆ ಕಂಡುಬಂದದ್ದರಿಂದ, ನಾನು ಒಟ್ಟಿಲ ಮನೆಯ ಕಡೆಗೆ ಓಡಿದೆನು.

" ನಾನು ಮೊದಲೋ, ನೀನು ಮೊದಲು " ಈ ವಾದದಲ್ಲಿ ಒಂದು ಉರುಳ ಬಿದ್ದಿತ್ತು. ಆ ಕಡೆಗೆ ಮಾಲಿನಿಯು ಪ್ರಭಾಕರನ ಮೇಲೆ ತಪ್ಪು ಹಾಕುತ್ತಿದ್ದಳು, ಆದರೆ ಪ್ರಭಾಕರನು ಅದು ಮಾಲಿನಿಯದೇ ತಪ್ಪು ಒತ್ತಿ ಹೇಳುತ್ತಿದ್ದನು. " ನೀನೇ, ನೀನೇ " ಎಂಬ ಎಂಬುದೊಂದೇ ಜೋರಾಕ್ಷರೀ ಮಂತ್ರವನ್ನು ಉಚ್ಚರಿಸುತ್ತ ಒಬ್ಬರ ಮೇಲೊಬ್ಬರು ಹರಿ ಹೋಗುತ್ತಿದ್ದರು. ಮಾಲಿನಿಯು ತನ್ನ ಬರಿಕೈಯಿಂದ ಫಟ್, ಫಟ್ ಎಂಬ ಹೊಡೆಯುತ್ತಿದ್ದರೆ, ಪ್ರಭಾಕರನು ತನ್ನ ಬಡ್ಡಿಯಿಂದ "ಧಪ್, ಧಪ್" ಎಂಬ ಹೊಡೆಯುತ್ತಿದ್ದನು. ಚಪ್ಪ-ಪಂಚರಂಗಿ ಆ ದಾಂಡ-ಪಟ್ಟು ಕೆಲ ಹೊತ್ತು ಒಳ್ಳೇ ಪನೋದದಿಂದ ನಡೆಯಿತು. ಕೊನೆಗೆ ವೀರ ಪ್ರಭಾಕರನ ವಿಜಯವಾಗಿ, ಅವನು ಮಾಲಿನಿಗೆ ನೂಕಿದನು ಮತ್ತು ಅವಳು ಬಾಗಿ, ಅವನು ಮಾಲಿನಿಗೆ ಎಡವಿ ತಪ್ಪಿದರೂ ಉರುಳಿ ಬಿದ್ದದ್ದು ಬಂದಿದ ಪ್ಯಾಸಿಗೆ ಎಡವಿ ತಪ್ಪಿದರೂ ಉರುಳಿ ಬಿದ್ದದ್ದು ಮೇಲೆ ಹೋಗಿಬಿದ್ದರು, ಮತ್ತು ಆ ಪೆಟ್ಟು ಅಸಹ್ಯವಾಗಿ ಇಬ್ಬರೂ ಕಂಠವಾದ್ಯವನ್ನೇ ಹಚ್ಚಿದ್ದರು.

ನಾನು ಹೋದ ಕೂಡಲೆ "ನಾನಲ್ಲೋ ಅಪ್ಪ" ಅನ್ನುತ್ತ ಪ್ರಭಾಕರನು ಮುಂದೆ ಬರಲು, "ಅಪ್ಪಾ, ನಾನೇ ಅಲ್ಲೋ" ಅನ್ನುತ್ತ ಮತ್ತು ಗಟ್ಟಿಯಾಗಿ ಬಿಕ್ಕಿಬಿಕ್ಕಿ ಅಳುತ್ತ ಮಾಲಿನಿಯು ಮುಂದೆ ಬಂದಳು. ಆದರೆ ಆದರ ಈ ತಂಟೆಯ ತೀರ್ಪಿನ ಮಾತು ತರ್ಕಶಾಸ್ತ್ರ ನನಗೆ ಅವಕಾಶವೆಲ್ಲಿ? ಆ ಪದ ಪಡಿ ಸುತ್ತ ಬಿದ್ದಿರುವ ಹಾವನ್ನನ್ನು ಎತ್ತಿಕೊಂಡು ಸುಮ್ಮನಿರಿಸುವದೇ ನನ್ನ ಮೊದಲನೇ ಕರ್ತವ್ಯವಾಗಿತ್ತು.

ಊಟ ಆಯಿತು. [illegible] ಆಯಿತು ಎಂಬುದನ್ನು ಮಾತ್ರ ಕೇಳಬೇಡಿರಿ. ಹು[illegible] ಅನ್ನ ವ ಪಲ್ಲೆಗ ಬಹುತೇಕ ಬಹುಪ್ಯಾರಿದ್ದ[illegible] ಇಂಥ ಅನ್ನವನ್ನು ಆಕೆ ಮಾಡಿದ್ದ[illegible]ಯಿಂದ ಎಷ್ಟೋ ಬ್ರಗಳು ಆಕೆಗೆ 'ಮ[illegible] ತಕ್ಕ ಬಂಗಾರ, ನಡುವೆ ಗಂಧ ಮತ್ತು ವಾಸ[illegible] ಇಂಥ ತ್ರಿಗುಣ [illegible] ಅನ್ನವನ್ನು [illegible]ಯಿ.

ಗೃಹಿಣಿಗೂ ಆಕೃತಿ ಇಲ್ಲ. ಕೇಳಬಂದುದು ಸಾಕಷ್ಟು ಇದ್ದದ್ದರಿಂದಲೇ ನಾನು ಉಪವಾಸದಿಂದ ಪಾರಾದೆನು.

ಮುಂದೆ ಮಾತ್ರ ಗಾಳಿ, ಹೊರೆಗೆ ಹೋದಾಗ ಕೆಲ ಸಣ್ಣ ಸ್ತ್ರೀ-ಭವಕಾಸನವಾಗಿ ಮಾಲಿನಿಯ ಕಡೆಗೆ ಬಂತು. ಮತ್ತು ಅವಳು ಅದನ್ನು ಮಾಡುವವಳೇ ಇದ್ದಳು. ಆದರೆ ಅವಳ ಪಾತ್ರೆಗಳನ್ನು ಎತ್ತಲಿಕ್ಕೆ ಪ್ರಭಾಕರನು ಅವಳ ಮೈಮೇಲೆ ಜಗಳಾಡುವುದನ್ನು ಒಗೆಯಲಿಕ್ಕೆ ಗುರಿಯಾಯಿತು. " ಅಂದ ಮೇಲೆ ಕೇಳುವದೇನು ಅವಳ ಪರ್ವತ? ಮುಂದೆ ಪಾತ್ರೆಗಳನ್ನು ಬೀಳುವ ಅವಳು ಧ್ವ, ಧ್ವ ಎಂದು ಕೂಗುತ್ತಿದ್ದಳು!

ಹುಡುಗರನ್ನು ಹೊರಗೆ ಹೋಗಿ ಅವರನ್ನು ಕೋಪ ಬಂದ ಕೈಗಳಿಂದ ಸಾಕಿಕೊಂಡು ಹೋಗಬೇಕೆಂದು ಅಟ್ಟಹಾಸವನ್ನು ಮಾಡುತ್ತಿದ್ದವನು ನಾನೇ ಎಂಬ ಮಾತು ಬೆಳಗಿನಿಂದಲೇ ನನ್ನ ಧ್ಯಾನದೊಳಗಿಂದ ಹೋಗ ಹತ್ತಿತ್ತು. ಈಗಂತೂ ನನಗೆ ಆ ಮಾತಿನ ಪೂರ್ಣ ವಿಸ್ಮರಣೆಯಾಗಿ ಪ್ರಭಾಕರನ ಬೆನ್ನಿನ ಮೇಲೆ ಒಳ್ಳೇ ಏಟನ್ನು ಹಾಕಿಬಿಟ್ಟೆನು.

ಈಗ ದೇವರನ್ನು ನಾಕಿಕೊಂಡು ಮನುಷ್ಯನಿಗೆ ಹೋಗ ಬೇಕಿತ್ತು. ಆದರೆ, ಅನಾದರೂ ಅದನ್ನು ಜಾಗದ ಮೇಲೆ ಇಡಬೇಕಲ್ಲವೇ? ಪ್ರಭಾಕರನ ಬೊಂಬೆಗಳು ಗ್ಯಾಲರಿಯಲ್ಲಿ ಇಳಿದಿದ್ದವು, ಅವನ್ನು ಬೇಗ್ಗೆ ತಲೆಯಿಂದಲೇ ಒಮ್ಮೆಲೇ ಕಂಡ ನಿಜದ ಮಾತಿದ್ದನು ಮಾಲಿನಿಯು ಪರಕರದ ಆಕ್ಕಿಸು ಚೀಲದಲ್ಲಿ ಮತ್ತು ದಾಪತ್ಯದ ಬಗ್ಗೆಯು ನನ್ನ ಪೋಜನ ಪ್ರಾಣದಲ್ಲಿ! ಎತ್ತಿದ ಹೊರೆ ಇಟ್ಟು ಜಗ ಮೇಲಿಂದ ಬಂದು ಇಂಥ ಸಪ ಧರಿಸುವ ಈ ವಸ್ತುಗಳು ಈ ರೀತಿ ಅಸ್ತವ್ಯಸ್ತ ಜಾಗಕ್ಕೆ ಸೇರಿದ್ದರಿಂದ ಹೀಗೆ ಎಂಬ ವಿಚಾರದಲ್ಲಿ ನಾನು ತಪ್ಪು ಮಗ್ನನಾಗಿ ಹೋಗಿದ್ದನಲ್ಲ. ದಯಮಾಡಿ ಯಾರೂ ಯಾರಿಗೆ ಒಂದು ತಿಳಿಸಲೇ ಇಲ್ಲ

(ಮುಂದೆ ಸಾಗುವದು.)

—ಡಾ। ಗೋಗಟೇಯವರು ಗವರ್ನರರ ಮೇಲೆ ಮಾಡಿದ ಅತ್ಯಾಚಾರವನ್ನು ಮಹಾತ್ಮರು ನಿಷೇಧಿಸಿದ್ದಾರೆ. ಇದರಿಂದ ಸ್ವರಾಜ್ಯ ಪ್ರಾಪ್ತಿಗೆ ಪ್ರತಿಬಂಧವಾಗುವದಾಗಿ ಬರೆದಿದ್ದಾರೆ. ಕೆಲವು ಕಾಲಗಳಿಂದ ಬ್ರಿಟೀಶರು ಹಿಂದುಸ್ಥಾನದೊಳಗಿಂದ ಹೊರಡಹೋಗಬಹುದು; ಆದರೆ, ಅದರಿಂದ ರಾಜ್ಯಕಾರಭಾರ ನಡೆಸುವ ಸಾಮರ್ಥ್ಯವು ನಮಗೆ ಪ್ರಾಪ್ತವಾಗುವದಿಲ್ಲವಾಗಿ ಮಹಾತ್ಮರು 'ನವಜೀವನ' ಪತ್ರಿಕೆಯಲ್ಲಿ ಬರೆದಿದ್ದಾರೆ. ಮಹಾತ್ಮರು ಗವರ್ನರರಾದ ಸರ್ ಅರ್ನೆಸ್ಟಹೊಟ್ಸನ್‌ರವರಿಗೆ ಸಹಾನುಭೂತಿ ಪ್ರದರ್ಶಿಸಿ, ಅವರ ಧೈರ್ಯದ ಬಗ್ಗೆ ಅಭಿನಂದಿಸಿದ್ದಾರೆ.

Siromani Udipi Narayanacharya

CHAUKHAMBA, BENARES CITY.

S U N. & CO.
BENARES CITY.

ಮಹಾಶಿವರಾತ್ರೀ, ರುದ್ರನೇತ್ರ ಸ್ವರೂಪವಾದ ರುದ್ರಾಕ್ಷಿಯನ್ನು ಧರಿಸಿಕೊಂಡು ಸಕಲ ಮನೋರಥಗಳನ್ನು ಹೊಂದಿರೆ ರ್ಸ್ಕ್. 108 ಸರ 1ಕ್ಕೆ 0-6-0 ಯಿಂದ 10 ರೂಪಾಯಿ ವರೆಗೆ ಇದು ಸಣ್ಣ ದಾಗುತ್ತ ಆಗುತ್ತ ಕ್ರಯ ಹೆಚ್ಚುವದು. ಕಂಠಿ ಸರ 32 ಪದಕ್ಕೆ ರೂ.0-8-0ಯಿಂದ ರೂ. 100. ವರೆಗೆ ಗೋಕರ್ಣ 1ಕ್ಕೆ ರೂ. 3-8-0ರಿಂದ 35ರ ವರೆಗೆ ಮತ್ತು ಬೇರೆ ಮಾಲುಗಳ ವಿವರ ತಿಳಿಯಲು ಅಪೇಕ್ಷಿಸುವವರು 0-1-0ರ ಸ್ಟಾಂಪು ಕಳಿಸಿದರೆ, 1ಕಾರನಕ್ಷೆ, 1ವಿಶ್ವೇಶ್ವರನ ಪಟ, ಸಮ್ಮತಿ ಪತ್ರಗಳು ಸಹ ಉಚಿತ ಕಳಿಸಲಾಗುವುದು. ಪತ್ತೆ:—

ಶಿರೋಮಣಿ ನಾರಾಯಣಾಚಾರ್ಯ

ಚೌಕಂಬಾ, ಕಾಶೀ ಕ್ಷೇತ್ರ.

ಬಿನ್‌ಯತ್ತೆಯ ಪಠ್ಯ ಪುಸ್ತಕ.

ಮೈಸೂರು ಮಹಾರಾಜರ ಆಸ್ಥಾನ್ ವಿದ್ವಾನ್ ಕರ್ನಾಟಕ ಭಾಷಾರತ್ನಂ

ಜಿ. ಆರ್. ಕರಿಬಸವ ಶಾಸ್ತ್ರಿಗಳಿಂದ ರಚಿಸಲ್ಪಟ್ಟ

ಸಚಿತ್ರ ಕರ್ನಾಟಕ ಬಾಲಬೋಧೆ.

ಭಾಗ ೧.

ಮುಂಬಯಿ, ಮದರಾಸು ಮತ್ತು ಮೈಸೂರು ಸರಕಾರಗಳ

ವಿದ್ಯಾಖಾತೆಯ ಅಧಿಕಾರಿಗಳಿಂದ ಪಠ್ಯ ಪುಸ್ತಕ-ಟೆಕ್ಸ್ಟ ಬುಕ್ಕಾಗಿ ಮಂಜೂರಾಗಿದೆ.

ಧಾರವಾಡ ಡಿಸ್ಟ್ರಿಕ್ಟ ಸ್ಕೂಲ ಬೋರ್ಡ, ಧಾರವಾಡ ಮತ್ತು ಹುಬ್ಬಳ್ಳಿಯ ಮ್ಯುನಿಸಿಪಲ್ ಸ್ಕೂಲ ಬೋರ್ಡ, ಬೆಳಗಾಂವಿ ಡಿಸ್ಟ್ರಿಕ್ಟ ಸ್ಕೂಲ ಬೋರ್ಡ ಇವುಗಳ ಅಧೀನದಲ್ಲಿರುವ ಎಲ್ಲಾ ಪ್ರಾಥಮಿಕ ಶಾಲೆಗಳ ಉಪಯೋಗದಲ್ಲಿದೆ. ಕಾರವಾರದ ಡಿಸ್ಟ್ರಿಕ್ಟ ಸ್ಕೂಲ ಬೋರ್ಡಿನವರು ತಮ್ಮ ಅಧೀನದಲ್ಲಿರುವ ಎಲ್ಲಾ ಶಾಲೆಗಳಲ್ಲಿ ಈ ಪುಸ್ತಕವನ್ನು ಉಪಯೋಗಿಸಲು ಮಂಜೂರ ಮಾಡಿದ್ದಾರೆ. ಅಲ್ಲದೆ, ಈ ಬಗ್ಗೆ ಎಲ್ಲಾ ಶಾಲಾ ಮಾಸ್ತರರಿಗೂ ಸರ್ಕ್ಯುಲರ ಹೊರಟಿದೆ.

"ಸ್ವರ ಚಿನ್ಹೆಯ" ಮತ್ತು "ನೋಡಿ ಹೇಳುವ" ಇವೆರಡು ಮಿಶ್ರ ಕ್ರಮಗಳ ಆಧಾರದ ಮೇಲೆ ಅಕ್ಷರೋಚ್ಚಾರಣೆಯನ್ನು ಮಾಡಿಸುವದು, ಅ. ಆ. ಇ. ಕ್ರಮ ಹಿಡಿದು ಅಕ್ಷರ ರಚನೆಯನ್ನು ಮಾಡಿಸುವದು ಈ ಪುಸ್ತಕದ ಧ್ಯೇಯವಾಗಿರುತ್ತದೆ. ಇದರಿಂದ ಮಕ್ಕಳಿಗೆ ಅಕ್ಷರಾಭ್ಯಾಸ ಮಾಡಿಸಲು ಅತ್ಯಂತ ಯೋಗ್ಯವಾಗಿದೆ. ಮತ್ತು ಈ ವರೆಗೆ ಪ್ರಚಾರದಲ್ಲಿರುವ ಎಲ್ಲಾ ಬಾಲಬೋಧೆಗಳಿಗಿಂತಲೂ ಈ ಬಾಲಬೋಧೆಯು ಹೆಚ್ಚು ಸುಧಾರಣೆ ಉಳ್ಳದ್ದಾಗಿದೆ. ನಮ್ಮಲ್ಲಿ ಅನೇಕ ವಿಧವಾದ ಪುಸ್ತಕಗಳು ದೊರೆಯುತ್ತವೆ.

೬೪ ಪುಟಗಳುಳ್ಳ ಈ ಪುಸ್ತಕದ ಕ್ರಯ ೦-೨-೦ ಆಣೆಮಾತ್ರ!

ಪುಸ್ತಕ ವ್ಯಾಪಾರಿಗಳಿಗೆ ಯೋಗ್ಯ ಕಮಿಶನ್ ದೊರೆಯುತ್ತೆ.

ಎಲ್ಲಾ ಪುಸ್ತಕ ವ್ಯಾಪಾರಿಗಳಲ್ಲೂ, ಕೆಳಗಿನ ವಿಳಾಸದಾರರಲ್ಲೂ ದೊರೆಯುವದು:—

ಇದೀ ಬೊಂಬಾಯಿ ಕರ್ನಾಟಕ ಸೋಲ ಡಿಸ್ಟ್ರಿಬ್ಯೂಟಿಂಗ ಏಜೆಂಟ್ಸ,

ಎ. ಆರ್. ಶಿವನಾಗಪ್ಪ, ಪ್ರೊಪ್ರಾಯಟರ,

ವಾಗ್ವಿಲಾಸ ಬುಕ್ ಡಿಪೋ ಮತ್ತು ಪೊವರ ಪ್ರಿಂಟಿಂಗ ಪ್ರೆಸ್,

ಗಾಂಧಿ ಚೌಕ, ಹುಬ್ಬಳ್ಳಿ.

SANOGEN FOR MALARIA

ಚಳಿಜ್ವರದಿಂದ

ನೀವು ನರಳುತ್ತೀರಾದರೆ,

ಇಸಾನೊಫೀಲಿನ್ನು

ಕೊಳ್ಳಿರಿ.

ಈಗಿನ ಯುಗದಲ್ಲಿ ... ಸಿದ್ಧವಾದ ಉತ್ತಮ ಔಷಧವು ಇದೊಂದೇ! ಇದರ ಗುಣ ಪ್ರಪಂಚಪ್ರಸಿದ್ಧ, ... ನಕಲಿ ಮಾಲಿನ ಬಗ್ಗೆ ಎಚ್ಚರಿಕೆ! Special formula for India ... ನಮ್ಮ ... ಬಾಟ್ಲಿ ... ಕೊಳ್ಳಿ!

Sole Agents

Messrs Gorio Ltd.,

P. O Box 159, Fort Bombay

'झंडु'

द्राक्षासव - प्रतिकारिष्ट - शारंगधर म अ. १०

गमबाण औषध

भूक	वाढविणारें
भूक	वाढविणारें
शौच्यास साफ करणारें	
झोंप	आणणारें
शक्ति	देणारें
तेजस्वीपणा	आणणारें

रुचिकर पेय

किंमत एक रत्तल १॥ रुपये

झंडु फार्मास्युटिकल वर्क्स लिमिटेड

मुंबई नं. १४

तीर्थहळ्ळी एजंट. पंडित आणि ... , सिरसि एजंट एस्. एल्. धाकप्पा आणि ... हुबळी एजंट तिप्पण्णा क्षत्रि, भुसपेठ

ದಿಲ್‌ಖುಶ್ ಜವಳಿ ಅಂಗಡಿ!

ನಮ್ಮಲ್ಲಿ ಗಂಡಸರು, ಹೆಂಗಸರು, ಹುಡುಗರ, ಹುಡುಗಿಯರಿಗೆ ಸ್ವಂಗಾರದ ವ ಹಾಜರ ತೊಡಿಗೆಯ ಬಗ್ಗೆ ಬೇಕಾಗುವ ಎಲ್ಲ ತರದ ಹೊಸ ಹೊಸ ನಮೂನೆಯ ಎಲ್ಲ ದೇಶದ ಫ್ಯಾನಸಿ ವ ...

... ಶರ್ಟ, ... ಸಿಲ್ಕು, ಜರತಾರಿ ದೇಶಿ ವ ವಿಲಾಯತಿ ಜವಳಿ, ಟ್ರಂಕುಗಳೂ, ಹ್ಯಾಂಡ ಬ್ಯಾಗಗಳೂ ಎಲ್ಲ ತರದ ಹಿಂಗಾನ ... ಗಳೂ, ಛತ್ರಿಗಳೂ ವ ಬಹುತರದ ಮಾಲು ಸಿಗುವದು ಒಂದು ಸಾರಿ ಬಂದು ... ನೋಡಿರಿ.

ನಾರಾಯಣರಾವ ಗೋವಿಂದ ಕಾಮತ,

ದಿಲ್‌ಖುಶ್ ಜವಳಿ ಅಂಗಡಿ, ಶಿರ್ಸಿ.

ಪ್ರಕಟಣೆ.

ಸ್ಟ್ಯಾಂಡರ್ಡ ಕೆರೊಸೀನ ಎಂದ ಮಿನರಲ್ ಆಯಿಲ್ ಕಂಪನಿ, ... ಮುಂಬಯಿ ಮೆಸರ್ಸ ಎ. ಜಿ. ಹಬ್ಬು ಎಂಡ್ ಕೋ., ಕಾರವಾರ.

ನಮ್ಮಲ್ಲಿ ... ಕೆಂಪು ... ಪತ್ರ ... ಊರುಗಳ ... ಯಾರಾದರೂ ... ಪತ್ರದ್ವಾರದಿಂದಾಗಲಿ, ಸಮಕ್ಷಮವಾಗಲಿ ಕೇಳಿಕೊಳ್ಳಬೇಕು ಊರುಗಳು.— ..., ಹೊನ್ನಾವರ, ಕುಮಟಾ, ಅಂಕೋಲಾ, ಕಾರವಾರ, ಯಲ್ಲಾಪುರ, ಹಳಿಯಾಳ

ಯಾರಾದರೂ ಏಜಂಟರಾಗಲಿಚ್ಛಿಸುವವರು ಪತ್ರದ್ವಾರದಿಂದಾಗಲಿ, ಅಥವಾ ಸಮಕ್ಷ ಭೆಟ್ಟಿಯಾಗಿ ಆಗಲಿ ಮಾಹಿತಿ ಕೇಳಿದಲ್ಲಿ ಅವರಿಗೆ ತಿಳಿಸಬಹುದು

ಏಜಂಟರು ತೀವ್ರ ಬೇಕು!

ತಾ ... —

A. G. Habbu & Co.,

Selling Agents, **Karwar.**

ದಿ ಬೊಂಬೆ ಲೈಫ್ ಎಶ್ಯೂರನ್ಸ ಕಂಪನಿ, ಲಿಮಿಟೆಡ್

ಸ್ಥಾಪನೆ: 1908.

ಈ ಕಂಪನಿಯು ಸ್ಥಾಪನೆ ... ಇದರ ... ದರಗಳೂ, ಶರ್ತುಗಳೂ ಬಹಳ ... ಸರಕಾರಿ ಪ್ರೊ. ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳ ... ಸೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ.

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ.

ಸವಿಸ್ತರ ... ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ...

Kumta Agents
D. K. NAYAK Esq
D. S. PAI Esq.
Honavar Agent
R. A. PALBHU Esq

K. Padmanabha Rao & Sons.,

BELGAUM

Chief Agents for

Karnatak Districts & S. M. States

ಸುಲಭ ಕ್ರಯ! ಡಾಕ್ಟರ ಜೆ. ಜೆ. ಯವರ ಸುಗಂಧಿ ನಸ್ಯದ ಪುಡಿ. ಸುಲಭ ಕ್ರಯ!

ಲೋಕಪ್ರಸಿದ್ಧವಾದ ಈ ಸುಗಂಧ ನಸ್ಯ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿ

(Registered Trade Mark)

ಗಳು ಇದನ್ನು ಉಪಯೋಗಿಸಿ, ಸಾವಿರಾರು ... ಆರೋಗ್ಯ ... ಗಳನ್ನು ... ಪ್ರಸಿದ್ಧವಾದ ಈ ನಸ್ಯದ ಪುಡಿಯಿಂದ ... ವ್ಯಾಧಿಗಳ ... ನೆಗಡಿ, ಒಂಟಿತಲೆನೋವು, ತಲೆಯ ... ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು ... ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ... ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತದೆ, ಮೂರು ಚಿಟ್ಟಿನ ಸಾಧಾರಣ ನಸ್ಯದ ಸಂಗಡ ಈ ಸುಗಂಧ ನಸ್ಯದ ಪುಡಿಯಲ್ಲಿ ಒಂದು ಚಿಟಕೆಯನ್ನು ಮಿಶ್ರಯಿಸಿದರೆ ಎಲ್ಲರೂ ... ಇದನ್ನು ಅನೇಕ ಪ್ರಭುಗಳು ತಮ್ಮ ... ಉಪಯೋಗಿಸುತ್ತಾರೆ, ... ಒಂದಕ್ಕೆ ಕ್ರಯ ರೂ ೦-೪-೦. ... ರೂ. ... ವಿ. ಪಿ. ... ದಯಮಾಡಿ ನಿಮ್ಮ ಹೆಸರನ್ನೂ ವಿಳಾಸವನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

... ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ. ಬಾ. ೫೧೦, ಜಾರ್ಜಟೌನ, ಮದರಾಸ

ಅ ಮೃ ತಾ ೦ ಜ ನ

ಎಲ್ಲ ನೋವುಗಳ ಮೇಲೆ ಅತ್ಯುತ್ತಮ ಹಿಂದೀ ಔಷಧವು!

ಎಲ್ಲ ಪ್ರಕಾರದ ನೋವು, ಶೂಲಿಗಳನ್ನು ಗುಣಪಡಿಸುತ್ತದೆ.

ಇಡೀ ಹಿಂದುಸ್ಥಾನದವರೆಲ್ಲ ಇದನ್ನು ಉಪಯೋಗಿಸುತ್ತಾರೆ.

ಬೆಲೆ ಡಬ್ಬಿ ... ಆಣೆ ...

(ಅಂಚೆವೆಚ್ಚ ...)

ಎಲ್ಲ ಕಡೆಯಲ್ಲಿ ಸಿಗುತ್ತ ...

ರಜಿಸ್ಟರ್.

ಅಮೃತಾಂಜನ ಡಿಪೋ ...

ಮುಂಬಯಿ

ಇದನ್ನು ಮಾಂಡಿಗಿರಿ ಕೃಷ್ಣ ... ಸಂಪಾದಕ ಇವರು ... ಪ್ರೆಸ್ಸಿನಲ್ಲಿ ...

Reg No B.1270. Monday, 10th August, 1931.

ವರ್ಷ ೯

ಪತ್ರದ ವರ್ಗಣಿ.

ಕುಮಟೆಯಲ್ಲಿ ಅಗಾವ;
ರೂಪಾಯಿ 2-?-0.
ಮನೆಯಾರ್ಡರಿಂದ
ರೂ. 3-0-0
ವ್ಹಿ. ಪಿ. ಅಂಚೆವೆಚ್ಚ ಸಹಿತ
ರೂಪಾಯಿ 3-2-0.
ಬಿಡಿ ಸಂಚಿಕೆಗೆ 0-1-0
ಹಳೇ ಸಂಚಿಕೆಗೆ 0-2-0

ಕಾನಡಾವೃತ್ತ.

THE KANARA NEWS.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता ॥

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಸಂಚಿಕೆ ೪೦

ಜಾಹೀರಾತುಗಳ ದರ.
ಕನ್ನಡ, ಇಂಗ್ಲಿಷ ಪತ್ರಿಕಾ ಜ್ಯಾಪಿನ (೧೫ ಎಮ್ ಉದ್ದ ೮ ಸಾಲುಗಳವರೆಗೆ ರೂ 1-0-0 ಆನಂತ್ರ ಪ್ರತಿಸಾಲಿಗೆ 0 2 0
ಹೆಚ್ಚಿಗೆ ಸಾಲು ಎಷ್ಟು ದೊಡ್ಡದಿರುವದೋ ಆ ಮಾನದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು
ಬಾಕಿ ಜಾಹಿರಾತುಗಳ ಬಗ್ಗೆ ಪತ್ರವ್ಯವಹಾರ ಮಾಡಿ ನಿರ್ಣಯಿಸಲ್ಪಡುವದು.

(ಕುಮಟಾ— ಕಾನಡಾವೃತ್ತ ಸೋಮವಾರ, ತಾರೀಖು ೧೦ ನೇದೆ ಅಗಸ್ಟ ಸನ್ ೧೯೩೧ನೇ ಇಸವಿ.)

ಜಗತ್ತಿನಲ್ಲಿ ಪವಿತ್ರ ಸ್ತ್ರೀಯರಿಲ್ಲವೇ?

ಸೌಭಾಗ್ಯ ತಿಲಕ

ಎಂಬ ಸಾಮಾಜಿಕ ಕಾದಂಬರಿಯನ್ನು ತರಿಸಿ ಓದಿರಿ. ಅದರಲ್ಲಿಯ ನಾಯಿಕೆಯನ್ನು ಕಾಣಿಸಿರಿ ಅವರ ಮೇಲೆ ಎಂಥೆಂಥ ಅಪರಾಧ ಒರುತ್ತವಾಂಬವನ್ನು ತಮ್ಮ ಪಾತಿವ್ರತ್ಯವನ್ನು ಕಾಯ್ದುಕೊಂಡು ತಮ್ಮಲ್ಲಿ ತಮ್ಮ ಸತ್ವಪ್ರಭಾವದಿಂದ ಹೇಗ ನಿವಾರಿಸುವರೆಂಬುದನ್ನು ನೋಡಿದರಲ್ಲಿ ಓದಲು, ನಿಮ್ಮ ಹೃದಯವು ಕರಗಿ ನೀರಾಗಿದಲು [illegible] ಹೋದ ನಮ್ಮ ಒಂದುಗಾಲ ಕಪ್ಪವನ್ನು ನೋಡಿ ನಿಮ್ಮ ಸತ್ವರವು ಕುದಿಯುತಿರದೆ? [illegible] ಇದಲ್ಲದೆ ನಮ್ಮಲ್ಲಿ ವಿಮರ್ಶಾ [illegible] ದಂಡ, ಜಗನ್ಮೋಹನ, ರಾಮಿರಾಜ, ರಕ್ತದುಯ್ಯ, ಬ್ಯಾರಿಸ್ಟರ, ಚಿಲ್ಲಾಹೋಳಿ, ಕಿರಂಗಿಗಳ ಉತ್ಪಾತ ಇತ್ಯ [illegible] ದಕ್ಕೆ [illegible] ಹಾಗೂ ಐತಿಹಾಸಿಕ, ಸಾಮಾಜಿಕ, ಪೌರಾಣಿಕ, ಪತ್ತೇದಾರಿ ಕಾದಂಬರಿಗಳು, ಪಾರಮಾರ್ಥಿಕ, ಧಾರ್ಮಿಕ ಮೊದಲಾದ ನೂರಾರು ಗ್ರಂಥಗಳು ದೊರೆಯುತ್ತವೆ ಕ್ಯಾಟಲಾಗಿಗಾಗಿ ಬರೆಯಿರಿ

ವಿಳಾಸ— ಭಿ. ಪ. ಕಾಳೆ. ಪ್ರೊಪ್ರೈಟರ,
ಶ್ರೀ ರೇಣುಕಾ ಪ್ರೆಸ್ ಮತ್ತು ಗ್ರಂಥಮಾಲೆ
ಮು. ಆನಂದವನ ಜಿ [illegible]

ಪ್ರಿಸಿಡೆನ್ಸಿ ಪ್ರಾವ್ಹಿಡೆಂಟ ಎಂಡ್ ಜನರಲ್
ಇನ್ಸುರನ್ಸ ಕಂಪನಿ, ಲಿಮಿಟೆಡ್.
ಹೆಡ್ ಆಫೀಸ— ಅಪ್ಪೊಲೊ ಬಿಲ್ಡಿಂಗ,
ಡಲಹೌಸಿ ಇಸ್ಟೇಟ, ಫೋರ್ಟ, ಮುಂಬಯಿ

"ಇಂಡಿಯನ್ ಇನ್ಸುರನ್ಸ ಇಯರ್ ಬುಕ್" ಎಂಬ ಪ್ರತಿಯ ಸಪ್ಟಂಬರ ಸಂಚಿಕೆಯಲ್ಲಿ ಬರೆದದ್ದೇನಂದರೆ.— ಜೀವ ವಿಮೆ ಕಂಪನಿಯ ಸಾಂಪತ್ತಿಕ ಸ್ಥಿತಿಯನ್ನು ಪರೀಕ್ಷಿಸಬೇಕಾದರೆ, ವಿಮೆಯ ಬಗ್ಗೆ ಮಾಹಿತಿಯುಳ್ಳ ತಜ್ಞರು ಮಾಡಿದ ಕಂಪನಿಯ ಸ್ಥಿತಿ-ಗತಿಯ ಪತ್ರಿಕೆಯನ್ನೋದಬೇಕು ಪ್ರಾವ್ಹಿಡೆಂಟ ಸೊಸಾಯಿಟಿಯ ಸ್ಥಿತಿಯಾದರೂ ಹಾಗೆಯೇ. 'ದಿ ಪ್ರಸಿಡನ್ಸಿ ಪ್ರಾವ್ಹಿಡೆಂಟ' ಕಂಪನಿಯು ಇಂಥ ಪರೀಕ್ಷೆಯಲ್ಲಿ ಈಗ ತೇರ್ಗಡೆ ಹೊಂದಿರುವದು ಇಡೀ ಹಿಂದುಸ್ಥಾನದಲ್ಲಿ ಜೀವೋದ್ದರ ಸಮೃದ್ಧ ಸ್ಥಿತಿಯುಳ್ಳ ಪ್ರಾವ್ಹಿಡೆಂಟ ಕಂಪನಿಯೆಂದರೆ ಇದೊಂದೇ ಎಂದು ನಿರ್ಣಯವಾದವು [illegible], ಮಾತು. ವಿಮೆ ಇಳಿಸುವ ಜನರಿಗಾಗಿ [illegible] ಯು ಭದ್ರತೆಯು ದೊರೆಯುವದೆಂದು ಹೇಳಬಹುದು [illegible] ಸ್ತ್ರೀ-ಪುರುಷರೂ [illegible] ವಿಮೆ ಇಳಿಸಬಹುದು.

ಪ್ರೀಮಿಯಮ್ [illegible] ೨, ೧, ೦½, ೦-೮-೦.

ಮೊಹನಶಿರ್ಬಿಂದ ಕಂ [illegible] ಡುವವ [illegible]
[illegible] ಗೆ ಬರೆ [illegible] ಮಯಿ [illegible] ಮತ್ತು [illegible]

The Canara Industrial & Banking Syndicate, Ltd.

Head Office — UDIPI.

Branches — BRAHMAVAR, KUMTA & KARWAR

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ ಸಿಂಡಿಕೇಟ, ಲಿಮಿಟೆಡ್.

The Directors beg to announce that a Branch of the Syndicate has been opened at Karwar on the 21st of July.

By order

Kumta,
22—6—1931.

A. S. KINI
Agent, KUMTA BRANCH
The Canara Industrial & Banking Syndicate Ltd. KUMTA

EAST & WEST INSURANCE CO., LTD. BOMBAY.

ಈಸ್ಟ ಎಂಡ್ ವೆಸ್ಟ ಇನ್ಸೂರನ್ಸ ಕಂಪನಿ ಲಿಮಿಟೆಡ್, ಮುಂಬಯಿ.

(ಸರಕಾರಿ ಬಿನ್ನತಯಿದ್ದು, ೧೯೧೩ರಲ್ಲಿ ಹಿಂದುಸ್ಥಾನದೊಳಗೆ ರಜಿಸ್ಟರಾದದ್ದು)

ಸಂಪೂರ್ಣವಾಗಿ ಹಿಂದೀ ಕಂಪನಿ!

ಹಿಂದೀಯರಿಂದ ಹಿಂದೀಯರ ಹಿತಕ್ಕಾಗಿ ನಡಿಸಲ್ಪಟ್ಟಿದ್ದು.

ವಿಮೆದಾರರಿಗೆ ತೀರ ಕಡಿಮೆ ಪ್ರೀಮಿಯಮ್ಮಿನಿಂದ ಅಧಿಕವಾದ ಲಾಭವಾಗುವಂತೆ ಈ ಕಂಪನಿಯಲ್ಲಿ ವ್ಯವಸ್ಥೆಯಾಗಿರುತ್ತೆ!

ಕಾಯಂ ಊನರಾದ ವಿಮೆದಾರರಿಗೆ ಈ ಕಂಪನಿಯಲ್ಲಿ ವಿಶೇಷ ಸೌಕರ್ಯ!

ಈ ಕಂಪನಿಯ ಪ್ರತಿನಿಧಿಗಳಿಲ್ಲದಿದ್ದಲ್ಲಿ, ವಜನದಾರ ಹಾಗು ದಕ್ಷ ಏಜಂಟರು ಬೇಕಾಗಿರುತ್ತಾರೆ. ಅವರಿಗೆ ಬಹಳ ಸವಲತ್ತು ಕೊಡಲ್ಪಡುವವು.

ವಿಶೇಷ ಮಾಹಿತಿಯ ಬಗ್ಗೆ ಮುಂಬಯಿ ಹೆಡ್ ಆಫೀಸಿಗೆ ಇಲ್ಲವೆ ಈ ಕೆಳಗಿನ ಪತ್ತೆಗೆ ಬರೆಯಿರಿ

ಎಚ್. ಎಸ್. ನಾಯಕ,
ಏಜನ್ಸಿ ಆರ್ಗನೈಜರ,
Co/ "ಕಾನಡಾ ವೃತ್ತ." ಕುಮಟಾ

ವಿವಿಧ ಸಂಗ್ರಹ.

ಇಬ್ಬ ಯಾತ್ರಿಕರು

ಮುಮಾಕ್ಕರು ಸಿವಲ್ಲ ಪಟ್ಟಣಕ್ಕ ಸರ್ವಾಧಿಪತಿ ... ಗಡಸ್ ಪೊರಿಗಳಿಂದ ... ಬರಿ ಇಬ್ಬ ಯಾತ್ರಿಕರು ಬಿಟ್ಟ ... ಮುಮಾಕ್ಕರು ... ತ್ರಿಕದಲ್ಲಿ ಇವರ ವರ್ಣನೆ ಮಾಡಿದೆ ... ಗಳನ್ನು ... ಮಾಡಿದರು ... ಅವರಿಗೆ ಗುಪ್ತವಾಗಿ ... ಸಂತೋಷಪ್ರದವೆಂದು ... ೧೦೦ ರೂಪಾಯಿ ... ಇನ್ನು ೧೦೦ ... ಹೀಗೆ ಇಬ್ಬ ಯಾತ್ರಿಕರ ... ಮುಮಾಕ್ಕರ ... ಹೀಗೆ ಮುಮಾಕ್ಕರು ... ೧೦ ... ನಿಮ್ಮ ಪ್ರೀತಿಯ ...

ಬೇಕೆಂದು ನನ ಅರ ರಾಜಕಾರಣದ ಸೋಂಕಿರಬಾರದು ನಾನು ನರಕದ ... ರಾಜಕಾರಣದಲ್ಲಿ ಪ್ರತ್ಯಕ್ಷ ... ಸೇರಬಾರದೆ " ಹೀಗೆ ಅವರು ನುಡಿದರು ... ನಿಮ್ಮ ಉತ್ಸಾಹದ ... ನನಗೆ ಕಾಣುತ್ತಿದೆ! ಆದಾಗ್ಯೂ ನಿಮ್ಮ ... ನಾನು ... ಇಲ್ಲ ರಾಜಕಾರಣ ಸೋಂಕಿಲ್ಲದ ... ದೃಷ್ಟಿ ... ಕಾರ್ಯಗಳುಂಟು " ಹೀಗೆ ಮುಮಾಕ್ಕರ ಮಾತು ಕೇಳಿ ಅವರು ನುಡಿದದ್ದೇನಂದರೆ — " ಮುಮಾಕ್ಕರೇ ... ! ನನ್ನ ಕಡೆ ... ನಾನು ಹೇಳಿ ... ? ... ಹೇಳಬೇಕು " ಹೀಗೆ ಮುಮಾಕ್ಕರಿಗೆ ... ನುಡಿದದ್ದೇನಂದರೆ — ... ಹೀಗೆ ಮುಮಾಕ್ಕರು ನುಡಿದರು ... ಹೀಗೆ ಮುಮಾಕ್ಕರು ನುಡಿದರು

ಮುಮಾಕ್ಕರೇ ... ಬಳಿಕ ... ಕೆಲಸ ...

ಪಡಬೇಕು, ನಿಮ್ಮಷ್ಟು ಸಹ ಕೆಲಸ ಮಾಡಿದವರು ಅನೇಕರಿದ್ದಾರೆಂದು ಎಣಿಸಿ ಸಂತೃಪ್ತಿಪಡಬೇಕು, ಅಂದರೆ ನಿಮಗೆ ಕಷ್ಟವೆನಿಸದು ... ಹೇಳಬಲ್ಲಿರಾ ? ... ಧೈರ್ಯದಿಂದ ಎಚ್ಚರಾಗುವದು ಆ ಕಾಲಕ್ಕ ... ಯಾರಿಗೂ ಸಂಕಟವಾಗಲಿಕ್ಕಿಲ್ಲ ... ಹೆದರಿಕೆ ದೂಗದು "

ನನಗೆ ಬಹು ಸಂತೋಷ ... ನಾನು ... ಮಾಡಿಕೊಳ್ಳುವೆನು ... ಮಾಡಲಿಲ್ಲ ... ನನ್ನ ... " ಹೀಗವರು ಹೇಳಿದರು ಇದು ಒಬ್ಬ ಯಾತ್ರಿಕರ ಕಥೆ

*

ಇನ್ನೇ ಯಾತ್ರಿಕಳು ಒಬ್ಬ ಭಗಿನಿ ... ಅವಳನ್ನು ... ಮುಮಾಕ್ಕರು ... ಕೇಳಿದ್ದಿಲ್ಲ, ಅವಳು ಹೇಳಿದ್ದಿಲ್ಲ ... ನೀನು ... ಹೀಗೆ ಮುಮಾಕ್ಕರು ಅವಳಿಗೆ ಕೇಳಿದರು ಅವಳು ... ನನ್ನ ... " ಹೀಗವಳು ಹೇಳಿದಳು ... ಮುಮಾಕ್ಕರು ... ಮಾಡಿ, ... ಕೇಳಲು ... ಹಾಗಾದರೆ ನಿನ್ನ ಬಾಳ್ವೆ ... ! ಗಂಡನು ನಿನಗೆ ಬಿಟ್ಟನೋ ? ನೀನು ಗಂಡನಿಗೆ ಬಿಟ್ಟಿಯೋ ? ಎಂಬ ಪ್ರಶ್ನೆಗೆ, ಅವಳು ನುಡಿದದ್ದೇನಂದರೆ — " ನಾನೇ ಗಂಡನಿಗೆ ಬಿಟ್ಟ ... ನನಗೆ ... ಅವನು ...

ಮನೋಹರವಾದ ಕೂದಲನ್ನು ಚನ್ನಾಗಿ ಸಾಕಬೇಕು.

ಆದರೆ ಕೆಲವು ... ಕೂದಲುಗಳ ... ಕೂದಲನ್ನು ... ಶ್ರೇಷ್ಠವಾದ ಕೂದಲೆಣ್ಣೆ ಯಾವದು ?

ಕಾಮಿನಿಯಾ ಆಯಿಲ್. (ರಜಿಸ್ಟರ್ಡ)

... ಚನ್ನಾಗಿ ... ಒಮ್ಮೆ ... ಕೂದಲುಗಳ ... ಸಿಗುತ್ತದೆ ... ಕೂದಲುಗಳಿಗೆ ... ಯುತ್ತವೆ.

ಎಲ್ಲಾ ಚಲೋ ಅಂಗಡಿಕಾರರಲ್ಲಿ

ಈ ತೈಲವು ದೊರೆಯುತ್ತದೆ

ಅಥವಾ

ನಮಗೇ ಬರೆದು ತರಿಸಿಕೊಳ್ಳಿರಿ

ಬಾಟ್ಲಿ ೧ಕ್ಕೆ	ರೂ	೧—೦—೦
ಅಂಚೆವೆಚ್ಚ	,,	೦—೬—೦
೨ ಬಾಟಲಿಗಳಿಗೆ	,,	೨—೧೦—೦
ಅಂಚೆವೆಚ್ಚ	,,	೦—೧೨—೦

ನಿಮ್ಮ ಅಂಗಡಿಕಾರರಿಂದ

ತರಿಸಿಕೊಳ್ಳಿರಿ

—— ೦ ——

೧ ಡಬ್ಬಿಗೆ	ರೂ	೨—೦—೦
ಅಂಚೆ	"	೦—೪—೦
ಡ್ರಾಮಿಗೆ	,,	೦—೧೨—೦
ಅಂಚೆವೆಚ್ಚ	,,	೦—೬—೦

ಒಟ್ಟೋದಿಲ್ ಬಹಾರ

ಸೇಳಲಿಕ್ಕೆ ಮರೆಯಬೇಡಿರಿ



" ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ "

ಒಂದು ಸುಗಂಧದ್ರವ್ಯದಲ್ಲಿ ಇದನ್ನು ಸಂಪಾದಿಸಬಹುದು ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು. ಅದ್ಯಾವುದು ?

ಒಟ್ಟೋದಿಲ್ ಬಹಾರ (ರಜಿಸ್ಟರ್ಡ)

ಪೇಟೆಯಲ್ಲಿ ಅನೇಕ ಸಾಧಾರಣ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ... ಅವುಗಳಲ್ಲಿ ... ಮಧ್ಯದ ಸೇರಿರುತದೆ ಇದರಿಂದ ಹೂವಿನ ... ಒಟ್ಟೋದಿಲ್ ಬಹಾರದಿಂದ ... ಹೂವಿನ ಸುಗಂಧವನ್ನು ...

THE ANGLO INDIAN DRUG ...

[illegible]

ಮೈಸೂರ ಮಹಾರಾಜರ ತೀರ್ಥಯಾತ್ರೆ.

[illegible]

ಸಂಬಳ ಎಷ್ಟಿರಬೇಕು ?

[illegible]

“ನನ್ನ [illegible] ದಿನದ ವಾಕ್ಯ—[illegible]”

[illegible]

[illegible]

ಪ್ರಕೃತ ವಿಷಯ.

ಸಂಯುಕ್ತ ಪ್ರಾಂತದೊಳಗಿನ ಸ್ಥಿತಿ

ಗಾಂಧಿ–ಆರ್ವಿನ್ ಒಡಂಬಡಿಕೆಯಂತೆ ಸರಕಾರವು ನಡೆಯುತ್ತಿಲ್ಲವಾಗಿ ಗುಜರಾಥದಂತೆಯೇ ಸಂಯುಕ್ತಪ್ರಾಂತದಲ್ಲಿಯೂ ಗಲಭೆ ಎದ್ದಿದೆ. ಇದಕ್ಕಾಗಿ ಪಂಡಿತ ಜವಾಹಿರಲಾಲರೂ, ಪಂಡಿತ ಮದನಮೋಹನ ಮಾಲವೀಯರವರೂ ಪ್ರಾಂತಿಕ ಸರಕಾರದ ಕಾರ್ಯದರ್ಶಿಗಳಿಗೆ ಕಂಡರು. ಸರಿಯಾದ ಸಂಭಾಷಣ ವಾಯಿತು. ಆದಾಗ್ಯೂ ತಾಲೂಕದಾರರಿಗೂ ರಾಷ್ಟ್ರೀಯ ಸಭೆಯ ಸ್ವಯಂಸೇವಕರಿಗೂ ಪ್ರತ್ಯಕ್ಷ ಪರಿಸ್ಥಿತಿಯ ಕುರಿತ ಚರ್ಚೆ ನಡೆಯಿತು. ರಾಷ್ಟ್ರೀಯ ಸಭೆಯವರ ಮೇಲೆ ತಾಲೂಕದಾರರು ಆರೋಪಗಳನ್ನು ಹೊರಿಸುತ್ತಾರೆ. ಜೂನ ತಿಂಗಳಲ್ಲಿ ೧೫ನೇ ತಾರೀಖಿಗೆ ಬಿದ್ದಂತೆ ಜಮೀನುದಾರರು ಒಕ್ಕಲಿಗರಿಗೆ ಅನ್ಯಾಯದ ನಡೆಸಿದರೆ ಅವರು ನ್ಯಾಯಾಸ್ತ್ರಯ ಬೇಡಬೇಕು; ಅಲ್ಲದೆ ಜಮೀನದಾರರ ಮೇಲೆ ಅತ್ಯಾಚಾರಗಳನ್ನು ಮಾಡಬಾರದು. ಹೀಗೆ ಸರಕಾರಿ ಪತ್ರಕ ಹೇಳಿಕೆ. ಅತ್ಯಾಚಾರಿಗಳು ರಾಷ್ಟ್ರೀಯ ಸಭೆಯ ಆಸ ಮಾಯಿಗಳಲ್ಲ, ಆದರೆ ಬೇರೆ ಜನ ದಂಡಿಸಬಹುದು. ಆದರೆ ಒಕ್ಕಲಿಗರಿಗೆ ದಂಡಿಸಲಾಗದ, ಒಕ್ಕಲಿಗರಿಗೆ ಸರ್ಕಾರ ಹಿಂಸೆ ಕೊಡಬಾರದು ಎಂದರೆ ಹೀಗೆ ರಾಷ್ಟ್ರೀಯ ಸಭೆಯವರ ಕಾರ್ಯಕ್ರಮ. ಅದರಂತೆ ಈ ಪ್ರಾಂತದ ಕೆಂಗ್ರೆಸ ಕಮಿಟಿಯವರ ಮೇಲೆ ಆರೋಪವಿಟ್ಟದ್ದು ಸ್ಪಷ್ಟವಿರ್ಯಾದಾಗಿದೆ. ಅವರ ಜಿಲ್ಲೆಯಲ್ಲಿ ಜಮೀನದಾರರು ಅತ್ಯಾಚಾರ ಮಾಡಿದರಾಗಿ ಪ್ರಮಾಣ ಕೆಲವರಿಗೆ ಅವರು ತಿಳಿಸಿದ್ದರು. ಈ ಪ್ರಾಂತ ಸಂಯುಕ್ತ ಪ್ರಾಂತದಲ್ಲಿ ಗಲಭೆಗೆ ಕಾರಣವಾದ ಒಕ್ಕಲಿಗರ ಸ್ಥಿತಿಯನ್ನು ಶ್ರೀ| ಶೀವಪ್ರಾಲ ಸಹಾಯಯವರ ವರ್ಣಿಸಿದಾರೆ. ಸಂಯುಕ್ತ ಪ್ರಾಂತದೊಳಗೆ ಒಕ್ಕಲಿಗರ ದೇಟೆ ಬೇರೆ ಪಟ್ಟಣಗಳಿವೆ. ಪಟ್ಟಣಗಳು ಭಿನ್ನವಾದಾಗ್ಯೂ, ಸ್ಥಿತಿ ಮಾತ್ರ ಒಂದೇ. ಎಲ್ಲ ಒಕ್ಕಲಿಗರೂ ದೀನರು. ಔಧ ಪ್ರಾಂತದ ರಾಯಬರೇಲಿ, ಬಾರಾಬಂಕಿ, ಸುಲ್ತಾನಪುರ, ಉನಾವ ಮೊದಲಾದ ಜಿಲ್ಲೆಗಳಲ್ಲಿ ಈ ಕಷ್ಟ ಹೆಚ್ಚು. ಔಧದೊಳಗಿನ ಒಕ್ಕಲಿಗನು ಹಟಬದ್ಧ ಸುಧಾರಣೆ. ಈ[illegible] ಹೀರ ನರುಪರವು ತನಗಿ ಆ ಔಧ [illegible] ಗಳೊಡನೆ ಒಂದು ಕೈಯಲ್ಲಿ ಯಾವಾಗಲೂ ಇರುತ್ತದೆ. ಬಾಕಿ ಮಾಸದಲ್ಲಿ ಎಲ್ಲರೂ 'ಅಪಾಶ' ಬಾಬ ರಾ[illegible] ವನ್ನು ಕಾಯುತ್ತಾರೆ. ೧೬ ವರ್ಷ ಪ್ರಾಯ ದವನಾದ ಬಳಿಕ ಪ್ರತಿಯೊಬ್ಬ ಇಷ್ಟರೊಳಗಾಗಿ ಆಳಿಯಬಾರದು. ಸಾವಿರವೆಂಬುದೇ ಇದರ ಅರ್ಥ! ಔಧ ಒಕ್ಕಲಿಗರ ಅತ್ಯಾಚಾರದಿಂದ ಪರಾವೃತ್ತ ಮಾಡುವ ಬಹು ಕಠಿಣ ಕೆಲಸ ತಾಲೂಕದಾರರು ಸರಕಾರದ ಸೂತ್ರಗಳನ್ನು ಅಧಿಕಾರಿಗಳ ಕೈಯಲ್ಲಿ ಕೊಟ್ಟು ಅವರು ಕುಳಿತುಕೊಳ್ಳುತ್ತಾರೆ. ಔಧ ಪ್ರಾಂತದಲ್ಲಿ ಒಕ್ಕಲತನದ ಕೋರಿಕೆಯು ಮೇಲೆಯೇ ಎಲ್ಲರೂ ನಿರ್ಧಾರ ಮಾಡತಕ್ಕದ್ದು. ಚಿಕಿತ್ಸಾದಿಗಳಲ್ಲಿ ಪ್ರಾಮಾಣಿಕನಲ್ಲ ಕೂಲಿಯವು. ಅದರಿಂದ ಗೇಣಿಯದರ ಏರಿಕೆ. ಏರಿಕೆ ಒಕ್ಕಲು ಜಮೀನು ಗೇಣಿಗೆ ಪಡೆಯ. ಇಷ್ಟಾದರೂ ಜನರಿಗೆ ಎಷ್ಟು ಭೂಮಿಯ ರಸೆ ಅವರು ದೇಶಾಂತರ ಮಾಡಿದರು. ಅನೇಕರಿಗೆ ಊರು ಬಿಡುವದೇ ಸಂಕಟ. ಅದರಿಂದ ಅವರು ಊರ ನಾಶ ಬಿಟ್ಟು ಅಂತು ಬಾಳ್ವೆ ಮಾಡಿಕೊಂಡಿದ್ದಾರೆ. ಒಡೆಯರಾದ ತಾಲೂಕದಾರರು ಅರಸರಂತೆ ವೈಭವದಿಂದ ಇದ್ದಾರೆ. ಪೇಟೆಯಲ್ಲಿ ರೂಪಾಯಿಗೆ ೮ ಸೇರು ರಕ್ತಲು ಸಿಕ್ಕಿದರೆ, ಒಕ್ಕಲಿಗರು ೪ ಆಣೆಗೆ ರಕ್ತಲು ಕೊಡಬೇಕು. ತಾಲೂಕದಾರನ ಸ್ವಂತ ಹೊಲಗಳನ್ನು ಪ್ರತ್ಯೇಕವಾಗಿ ಹಂತಿ, ಒಕ್ಕಲು, ಬೆಳೆ ಮಾಡಿಕೊಡಬೇಕು. ತೋಟಗಳಿಗೆ ಪ್ರತ್ಯೇಕವಾಗಿ ನೀರೆಯಬೇಕು. ಕೂಲಿ ಇಲ್ಲದೆ ಕೂಲಿ ಕೆಲಸ ಮಾಡಬೇಕು. ತಾಲೂಕದಾರ–ಒಡೆಯರು ಬೇಟೆಯಾಡ ಹೊರಟರೆ ಸರಕುಗಳನ್ನು ಉಚಿತವಾಗಿ ಹೊರಬೇಕು; ಕುದುರೆ–ಆನೆ–ಮೋಟರು ಬೇಕಾದರೆ, ಒಕ್ಕಲಿಗರು ಹಿಂದೆಯೇ, ಎರಡೋ ರೂಪಾಯಿ ಪಟ್ಟಿ ಎತ್ತಿಕೊಡಬೇಕು. ತಾಲೂಕದಾರರಿಗೆ ವಿನಯವಾಗಿ ನಡೆಯದಿದ್ದರೆ, ಒಕ್ಕಲಿಗನಿಗೆ ಚಳಿ ಕೊಡಿ ಬಿಡುತ್ತಿದ್ದರು. ಅದಕ್ಕಾಗಿ ಎತ್ತು ಮಾರಿಕೊಂಡರೂ ಆತನಿಗೆ ಮನೆಯಲ್ಲಿ ಸ್ಥಿರವಿಲ್ಲ. ಅಷ್ಟರೊಳಗೆ ಮನಸ್ಸಿನ ದಲ್ಲಿ ಹಾಗೆ ಒಡಬೇಕು. ಒಕ್ಕಲಿಗರು ತಾಲೂಕದಾರರ ಬಲಿಗೆ ಗೇಣಿ ಕೊಡುವಾಗದಿದ್ದರೆ, ಉಚಿತವಾಗಿ ದುಡಿಯುತ್ತಿದ್ದರು, ಕುದುರೆ–ಆನೆ–ಮೋಟರ ಗಳ ಬೆಲೆಗೆ ಕೊಡಬೇಕು. ತೋಡಿದರೆ, ಸ್ವಂತ ಕಷ್ಟದ ಮಾತು ಹೇಳಲು ಆರಂಭಿಸಿದರೆ ತಾಲೂಕದಾರರಿಗೆ ಇದು ಸೇರಲಿಲ್ಲ. ಇದರಿಂದ ಒಕ್ಕಲಿಗರಿಗೂ, ತಾಲೂಕದಾರರಿಗೂ ಕಲಹ ಆರಂಭವಾಗಿದೆ. ಸರಕಾರವು ಒಕ್ಕಲಿಗರ ಕಷ್ಟವನ್ನು ಗಮನಿಸಿ ಸ್ವಲ್ಪ ಕಡಿಮೆ ಮಾಡಿತು. ಅಂತು ಗೇಣಿ ಒಂದು ರೂಪಾಯಿಗೆ ೨ ಆಣೆ ಕಡಿಮೆ ಮಾಡಿದೆ. ಗೇಣಿಯು ಹೆಚ್ಚಾದದ್ದರಿಂದ ಅರ್ಧಕ್ಕೆ, ಮುಕ್ಕಾಲಿಗೆ ಇಳಿದರೆ ಆದೀತು. ಬಾಕಿ ಉಳಿದಿರುವ ಗೇಣಿಯು ರೈತರು ಪಾವತಿ ಮಾಡಿದೆ. ಹುಟ್ಟುವಳಿಯ ದರ ಇಳಿದಿದೆ. ಇಂಥ ಸಂದರ್ಭದಲ್ಲಿ ಒಕ್ಕಲಿಗರಿಗೆ ಗೇಣಿ ತೆರುವ ಶಕ್ತಿ ಇಲ್ಲ. ಸರಕಾರವು ಬೇಕಾದ ಪರಿಹಾರ ಕೊಡಬಹುದಾಗಿ ಪ್ರಾಂತಿಕ ಕೆಂಗ್ರೆಸ ಕಮಿಟಿಯವರು ಸೂಚಿಸಿದರು. ಮತ್ತು ಒಕ್ಕಲಿಗರು ಸ್ವತಃ ಗೇಣಿ ಕೊಡಬಾರದೆಂದು ಇದೇ ರೀತಿ ತಿಳಿಸಿದ್ದರು. ಸರಕಾರ ವು ಈ ವಿಷಯದಲ್ಲಿ ಏನೂ ಮಾಡಲಿಲ್ಲ. ಇದರಿಂದ ತಾಲೂಕದಾರರಿಗೆ ಪ್ರಸಂಗ ಒದಗಿತು. ಅವರು ಸರಕಾರದ ಬೆಂಬಲದಿಂದ ಗ್ರಾಮ ದ ಮೇಲೆ ಹೋಗಿ ಗ್ರಾಮದವರಿಗೆ ಸರಿಯಾಗಿ ಹೊಡೆದು ಬಡಿದು ಗೇಣಿ ವಸೂಲು ಮಾಡುತ್ತಾರೆ. ಅನೇಕರಿಗೆ ಜೊತೆಯವರು ಹೊಡೆದರು, ಮನೆಯ ಬಾಗಿಲು ಮುರಿದರು, ಹೆಂಗಸರ ಮೈಮೇಲಿನ ಆಭರಣಗಳನ್ನು ಕಸಿದುಕೊಂಡರು. ೨ ದಿವಸಗಳ ತನಕ ನಿರಾಹಾರಿಯಾಗಿ ಗ್ರಾಮಕ್ಕೆ ಮುತ್ತಿಗೆ ಹಾಕಿ ಒಕ್ಕಲಿಗರಿಗೆ ನೀರು ತರಗೊಡಲಿಲ್ಲ. ಕೆಲವು ಗೇಣಿ ವಸೂಲ ಕೊಟ್ಟವರಿಗೆ, ನೀರು ಹಿಂದೆ ಕೊಟ್ಟರು. ರಾಯಬರೇಲಿ, ಬಾರಾಬಂಕಿ, ಸುಲ್ತಾನಪುರಗಳಲ್ಲಿ ಒಕ್ಕಲಿಗರಿಗೆ ನಿರ್ದಯದಿಂದ ಹೊಡೆದು ತಾಲೂಕದಾರರು ಬಹಳ ಪೀಡಿಸಿದರು. ಅನೇಕರು ಹಾಸಿಗೆಯ ಮೇಲಿಂದ ಏಳದಿದ್ದ ಡಿಸ್ಟ್ರಿಕ್ಟ ಮೆಜಿಸ್ಟ್ರೇಟರಿಗೆ ಅರ್ಜಿ ಮಾಡಿಕೊಂಡರೆ, ರಾಷ್ಟ್ರೀಯ ಸಭೆಯ ಪ್ರೇರಣೆಯಿಂದ ದೂರು ಬರತಕ್ಕದಾಗಿ ಅಲಕ್ಷವಾಗುತ್ತದೆ. ಬಾರಾಬಂಕಿಯೊಳಗೆ ಪರಿಸ್ಥಿತಿ ಹುಜ್ದೇದಾರರು ಹೋಗಿ ಗ್ರಾಮದವರಿಗೆ ರಾಷ್ಟ್ರೀಯ ಸಭೆ, ಗಾಂಧಿ ಟೊಪ್ಪಿಗೆ, ಖಾದಿ ತೊರೆಯಹೇಳಿದರು. ಔಧ ಗೇಣಿ ವಸೂಲಿಗಳ ಕಲಹಕ್ಕೆ ಒಂದು ಭಯಂಕರ ಕಲಮಿದೆ. ೧೭೧ನೇ ಕಲಮಿನ ಆಧಾರ ರಾಯಬರೇಲಿ ಜಿಲ್ಹೆಗೆ ಹಚ್ಚಿದ್ದಾರೆ. ಅದರಂತೆ ಪೋಲಿಸ ಅಧಿಕಾರಿಗಳು ಒಕ್ಕಲಿಗನ ಮನೆ ಹೊಕ್ಕು ಜಿಂದಗಿ ಜಪ್ತ ಮಾಡಿ ಸೆರೆಹಿಡಿದು ಜೈಲಿಗೆ ಕಳಿಸಬಹುದು. ಈ ಬಗ್ಗೆ ಯಾವದೇ ಕೋರ್ಟಿನಲ್ಲಿ ಇದಾಬು ನಡೆಯುವದಿಲ್ಲ. ರಾಯಬರೇಲಿಯಲ್ಲಿ ಈ ಕಲಮಿನ ಆಶ್ರಯ ಹಿಡಿದು ಕ್ರೂರ–ಕ್ರೂರವ ಅತ್ಯಾಚಾರಗಳು ನಡೆಯುವವಾಗಿ ಶ್ರೀ| ಶೀವಲಾಲ ಸಹಾಯಯವರು ನುಡಿದು, ಒಕ್ಕಲಿಗರಿಗೆ ಸಂಗ್ರಾಮದಲ್ಲಿ ನೆರವಾಗಬೇಕಾಗಿ ಮುಂಬಯಿಯ ನಾಗರಿಕರಿಗೆ ಬಿನ್ನಹ ಮಾಡಿಕೊಂಡರು. ಸಂಯುಕ್ತ ಪ್ರಾಂತದ ಕಾಯಿದೆ ಕೌನ್ಸಿಲು ಚೌಕಶಿ ಮಂಡಳವನ್ನು ನೇಮಿಸಿ ಒಕ್ಕಲಿಗರ ಸ್ಥಿತಿಯನ್ನು ವಿಚಾರಿಸುವದಾಗಿಯೂ, ಈ ಹೊತ್ತಿನಿಂದಲೇ ವಿಚಾರಕ್ಕೆ ಆರಂಭವಾಗುವದಾಗಿಯೂ ಬಂದು ವಾರ್ತೆ. ಮುಂಬಯಿಯಲ್ಲಿ ಕೊಂಗ್ರೆಸ ಕಾರ್ಯಕಾರಿ ಮಂಡಳವು ಸೋಮವಾರ ಸಭೆ ಸೇರಿತು. ಆ ಸಮಯ ಪಂಡಿತ ಜವಾಹಿರಲಾಲರು ಪರಿಸ್ಥಿತಿಯನ್ನು ತಿಳಿಸಿದರು. ಕೊಂಗ್ರೆಸ ಕಾರ್ಯಕಾರಿ ಮಂಡಳಕ್ಕೆ ಸರಕಾರದ ಕ್ರಮ ಸರಿತೋರಿದ ನಿಶ್ಚಯವಾಗಿದೆ. ಪಂಡಿತ ಮಾಲವೀಯರಂಥವರು ಸರಕಾರಕ್ಕೆ ಬಿನ್ನೈಸಿಕೊಂಡಾಗ್ಯೂ ಸ್ಥಿತಿ ಎಳ್ಳಷ್ಟೂ ಸುಧಾರಿಸಲಿಲ್ಲವಾಗಿ ಪಂಡಿತ ಜವಾಹಿರಲಾಲರು ಮಹಾತ್ಮರಿಗೆ ತಿಳಿಸಿದದಾಗಿ ಪ್ರಕಟವಾಗಿದೆ.

ಬಂಗಾಲದೊಳಗಿನ ಸ್ಥಿತಿ

ಬಂಗಾಲ ದೇಶದೊಳಗೂ ಭಯಂಕರ ಸ್ಥಿತಿಯಾಗಿದೆ. ಕಾಳಗ ಗಳಿಯಿಲ್ಲದೆ ಸಾವಿರಾರು ಮಂದಿಗಳು ಅಲೆದಾಡುತ್ತಿದ್ದಾರೆ. ಅದರೊಳಗೂ ಮಳೆಯಿಂದ ಬ್ರಹ್ಮಪುತ್ರ ನದಿಗೆ ನೆರೆ ಬಂದು ಆಚೆ–ಈಚೆ ೧೦ ಮೈಲು ಪ್ರದೇಶದ ಮೇಲೆ ನೀರೇ ನೀರು! ಇಷ್ಟು ದೊಡ್ಡ ನೆರೆ ಹಿಂದೆಂದೂ ಬಂದಿದ್ದಿಲ್ಲವಂತೆ. ೧೮೯೮ನೇ ಇಸ್ವಿಯಲ್ಲಿ ಬಹು ದೊಡ್ಡ ನೆರೆ ಬಂದಿತ್ತು. ಅದಕ್ಕಿಂತಲೂ ಹಿಂದು ಫೂಟು ನೀರು ಏರಿದೆ. ಮನೆಗಳೆಲ್ಲ ಬಳದು ಹೋದವು. ಭತ್ತದ ಬೆಳೆಗಳೆಲ್ಲ ನೀರು ಪಾಲಾದವು. ದನಗಳು ನೊಣಗಳಂತೆ ಸಾಯುತ್ತಿವೆ. ಮುಂದಿನ ಬೆಳೆಯ ಆಶೆಯಿಲ್ಲ. ಇದು ಮೈಮನಸಿಂಗದ ಆಚೆ–ಈಚೆ ಒದಗಿದ ಅವಸ್ಥೆ. ಇತರ ಕಡೆಗಾದರೂ ಸುಖವಿಲ್ಲ. ಫ್ಲಬಾರಿ, ಶಿಸಾಬು, ಗಾಯಬಂದ ಸಿಂದರಗಂಜ, ಕಾಲಿಪುರ, ಗೋವಿಂದಗಂಜ ಮೊದಲಾದ ಜಿಲ್ಲೆಗಳಲ್ಲಿ ಅತ್ತ ಕಡೆ ಹಿಗದೆ ಜನರು ಮರಣದ ಮಾರ್ಗಪ್ರತೀಕ್ಷೆ ಮಾಡುತ್ತಿದ್ದಾರೆ. ಅನೇಕರು ತೀರಿಕೊಂಡರು; ಅನೇಕರು ತೀರಿಕೊಳ್ಳುವ ತಯಾರಿಯಲ್ಲಿದ್ದಾರೆ. ಇದ್ದದನ್ನೆಲ್ಲ ಮಾರಿದರು. ಅವಾಗ್ಯೂ ಹೊಟ್ಟೆ ತುಂಬದ ನೇತ್ರಾ, ಕೋನಾ ಪ್ರದೇಶದಲ್ಲಿಯೂ ಇದೇ ಕಥೆ. ಹೊಟ್ಟೆಗೆ ಕೂಳಿಲ್ಲ; ಉಡಲಿಕ್ಕೆ ಅರಿವೆ–ಅಂಚಡಿಗಳಿಲ್ಲ—ಹನಕು—ಚಿಂದಿಗಳನ್ನು ಉಟ್ಟು ಗಂಡಸರು ಹೆಂಗಸರು ತ್ಯಾಗಾದರೂ ಲಜ್ಜೆ ರಕ್ಷಣೆ ಮಾಡಿಕೊಂಡ ಸಮಾಧಾನ ಮಾಡಿಕೊಳ್ಳುತ್ತಾರೆ. ದಿನ[illegible]ವಿರಾರು ಜನರು ಮನೆ ಮನೆಗೆ [illegible] ತಿರುಗಾಡುತ್ತಾರೆ. ಊರ ತುಂಬ ಪಿ[illegible] ಬಿಕ್ಕೆ ಹಾಕುವವರ್‍ಯಾರಿಲ್ಲ. [illegible] ದಲ್ಲಿ ಜನರು ಜುವ ವಾಹ ನೆಗೆಯುತ್ತಿ[illegible] ಬಟಾಟೆ, ಹಲಸು, ಬೇಳೆ ಮೊ[illegible] ಕಾಯಿಪಲ್ಲೆಗಳನ್ನು [illegible] ಕೊಳ್ಳುತ್ತಾರೆ.

ವ್ಯಕ್ತಿಗಳು ಉಪವಾಸ ಕಾಲದ ವಿಷಯವನ್ನು ನೋಡತಕ್ಕದ್ದಾಗಿದೆ. ಅನೇಕ ಸಂಸ್ಥಾನಿಕರು ಆತ್ಮಹತ್ಯ ಮಾಡಿ ಕೊಳ್ಳುವ ಸ್ಥಿತಿಯಲ್ಲಿ ಈಗ ಬೆಳೆಯುತ್ತಿ ರುವ ಬೆಲೆಯಲ್ಲಿ ಹತ್ತಿಯ ಸೂಜಿಗೆ ದರವಿಲ್ಲ ಹೀಗಾಗಿ ಜನರು ದಿಕ್ಕುಗೆಟ್ಟವರಾಗಿದ್ದಾರೆ. ಕೂಲಿಗಾಗಿ ಅವರು ಏನು ಮಾಡಬೇಕೆಂಬುದು ತಿಳಿಯದು. ಅನ್ನಕ್ಕ, ಬಟ್ಟೆಗೆ, ದರೋಡೆ ಮೊದಲಾದ ಪ್ರಕಾರದ ನಡೆಯುವ ಘಟನೆಗಳು ಬೆಳೆದಿವೆ. ಸರಕಾರವು ಕಷ್ಟ ನಿವಾರಿಸುವದಕ್ಕಾಗಿ ಕೂಡಲೇ ಏನಾದರೂ ಮಾಡಬೇಕಾಗಿ ಹಿಂದೀ ವರ್ತಕ ಸಂಘದ ಅಧ್ಯಕ್ಷರು ಸರ್ವಾಧಿಪತಿಗಳಿಗೆ ಬರೆದುಕೊಂಡಿದ್ದಾರೆ. ಸರಕಾರವು ನಿರಾಶ್ರಿತರಿಗಾಗಿ ಕಾಮಗಾರಿಗಳನ್ನು [illegible] ಪ್ರಾರಂಭಿಸಬೇಕಾಗಿಯೂ [illegible] ಸರಕಾರವು ಸಂಯುಕ್ತ ಪ್ರಾಂತದ ಲೆಫ್ಟನಂಟ ಗವರ್ನರರಿಗೆ ಕಳಿಸಿದ [illegible] ಅಧ್ಯಕ್ಷರು ನಮೂದಿಸಿದ್ದಾರೆ. [illegible] ಉಪವಾಸ ಬಿದ್ದ ವ್ಯಾಪಾರಸ್ಥರೂ ಕತ್ತಿಗೆ ಉರುಲು ಹಾಕಿಕೊಳ್ಳುವ ಸ್ಥಿತಿಯಲ್ಲಿದ್ದರೆ, [illegible] ಅನೇಕರ ಕೈಗಳಲ್ಲಿನ ಎಲ್ಲ ಅಧಿಕಾರಿಗಳೂ ಪ್ರಯತ್ನಮಾಡಿ ನಿರುಪಾಯರಾದರೆ ಮಾತ್ರ ಉಪಾಯವಿಲ್ಲ [illegible] ಸ್ಥಿತಿ [illegible] ಸರಕಾರಿ ಧೋರಣ ನೋಡಿ, ಈಗಿನ ರಾಜ್ಯಧೋರಣ ನೋಡಿಕೊಳ್ಳಿ! ಮತ್ತು ತಕ್ಕ ಶಿಫಾರಸುಗಳನ್ನು ಕೈಕೊಳ್ಳಿ, ಹೀಗೆ ಕಳಕಳಿಯ ವರ್ತಕ ಸಂಘದ ಅಧ್ಯಕ್ಷರು ಸರ್ವಾಧಿಪತಿಗಳಿಗೆ ಬರೆದಿದ್ದಾರೆ.

* * *

ಗದಿನಾಡಿನ ಸ್ಥಿತಿ

ಗದಿನಾಡಿನಲ್ಲಿಯೂ ಖುದಾಯಿ-ಖಿದಮತಗಾರರಿಗೆ ಸರಕಾರವು ಕಾಡುತ್ತಿದ್ದಾಗ ಗದಿನಾಡಿನ ಗಾಂಧಿ ಬಗಳ ಖಾನರು. ಖುದಾಯಿ-ಖಿದಮತಗಾರರು ಬಹಿಷ್ಕಾರವನ್ನು ನಡೆಸುವದಕ್ಕಾಗಿ ಪರಮಾವಧಿಯ ಪ್ರಯತ್ನ ಮಾಡುತ್ತಿದ್ದಾರೆ. ಬಹಿಷ್ಕಾರಕ್ಕೆ ಬಂಗ ಬಿರುದಾದದ್ದು "ಮಹಾತ್ಮ ಗಾಂಧಿ ಕೀ ಜಯ್" ಎಂಬ ಘೋಷವನ್ನು ಸಹ ಸಾರುತ್ತಾ [illegible] ಖಿದಮತಗಾರರು ಬಹು ಲೋಕ ಪ್ರಿಯರಾಗಿದ್ದಾರೆ. ಹಿಂದೂ, ಮುಸಲ್ಮಾನ, ಸಿಖ ಹೀಗೆ ಎಲ್ಲ ಜಾತಿಯವರೂ ಈ ಪಥಕದಲ್ಲಿ ಸ್ವಯಂಸೇವಕರಾಗಿ ಸೇರಿದ್ದಾರೆ. ಖುದಾಯಿ-ಖಿದಮತಗಾರರು ಈಶಸೇವಕರು. ಲೋಕಸೇವೆಯೇ ಈಶಸೇವೆ ಯೆಂಬ ಭಾವನೆಯಿಂದ ಇವರು ನಡೆಕೊಳ್ಳುತ್ತಾರೆ. ಯಾರಿಗೂ ಕೇಡು ಬಗೆಯುವದಿಲ್ಲ, ನೋಯಿಸುವದಿಲ್ಲ, ಕಷ್ಟ ಸಹಿಸುತ್ತಾರೆ. ಈಶಸೇವಕರ ಆಚಾರವೇ ಹೀಗೆ. ಒಂದೆಡೆ ಹಿಂದೂವಿನ ಮನೆಗೆ ಬೆಂಕಿ ಹತ್ತಿತ್ತು, ಕೂಡಲೇ ಖಿದಮತಗಾರರು ಹೋಗಿ ಬೆಂಕಿ ನಂದಿಸಿದರು, ಅವನ ಸೊತ್ತು ನಷ್ಟವಾಗದಂತೆ ಕಾಪಾಡಿದ್ದರು ಮುಂತಾದ ಸಮಯ ಹೀಗೆ ದೇಶದ ಸೇವೆಯನ್ನು ಮಾಡುತ್ತಾರೆ. ಮುಸಲ್ಮಾನರಲ್ಲಿ ಸಹ ಇವರು ಸ್ವತಂತ್ರತೆಯಿಂದ [illegible] ಇವರು ಖಾದಿಯನ್ನು [illegible] ಹಿಂದು [illegible] ಈ ಪಥಕವು ರಾಷ್ಟ್ರೀಯ [illegible] ವಾಗಿರುತ್ತದೆ. ಈಶಸೇವಕರ [illegible] ಮಂಡಲವಾಗಿದೆ. [illegible] ಹಿಂದು-ಮುಸಲ್ಮಾನರು [illegible] ಈ ಪ್ರಕಾರ ಲೋಕಸೇವೆ [illegible] ಖುದಾಯಿ-

ಖಿದಮತಗಾರರಿಗೆ ಸರಕಾರವು ಬಹಳ ತೊಂದರೆ ಕೊಡುತ್ತಿರುವದಕ್ಕಾಗಿ ಖಿದಮತಗಾರರು [illegible] ಶೀಘ್ರ ಪ್ರಸಾರವಾಗುತ್ತಿದೆ. ದಿನಗಳಲ್ಲಿ ಇದೇ ದಿನ [illegible] ಕೊಡುತ್ತಿರುತ್ತಾರೆ. ಕೈಗೆ ಸಿಕ್ಕ ಬಾಗಿಲುಗಳನ್ನು ಇಕ್ಕಿ ಹೊಡೆದು ಒಳಸೇರಿ ಜನರನ್ನು ಹೊಡೆಯುತ್ತಾರೆ, ಇವರು ಶೀಘ್ರ ಕೊಡಲಿಲ್ಲ. ಇವರ ಗುಂಪಿನಲ್ಲಿ ಸರಕಾರವು ಕೊಡುತ್ತಿರುವ ಸಣ್ಣ ಸಣ್ಣ ದಂಡನೆಗಳಿಗೆ ಖಿದಮತಗಾರರಿಗೆ [illegible] ರೆಡ್ ಶರ್ಟ್-ಕೆಂಪು ಅಂಗಿಯವರ ಗ್ರಾಮದೊಳಗಿನ ಇಬ್ಬರು ಖಿದಮತಗಾರರ ಪಥಕದವರನ್ನು ಗುಂಡು ಹಾಕಿ ಜನರು ಕೊಂದರು. [illegible] ಆ ಪ್ರಕಾರ ಜಗದಲ್ಲಿ [illegible] ಅವನು [illegible] ಗುಂಡು ಹೊಡೆದನು [illegible] ಎಂದು ಹೇಳಿ [illegible] ಅದಕ್ಕಾಗಿ ಹುಡುಗನಿಗೆ ಹಿಡಿದು ಸೀಮೆಯೆಣ್ಣೆ ಕಾಲಿನಲ್ಲಿ ಹಚ್ಚಿಕೊಟ್ಟನು. ಸಬೀಲಿ ಗ್ರಾಮದಲ್ಲಿ ಇದೇ ಪ್ರಕಾರ ಪರದಾನಶೀನ ಹೆಂಗಸರ ಸಹ ಬಿಸಿಲಿನಲ್ಲಿ ಕುಳ್ಳಿರಿಸುತ್ತಾರೆ. [illegible] ಎಂಬುವರು ಖಿದಮತಗಾರರ ಅಧ್ಯಕ್ಷರು. ದೊಡ್ಡ ಶ್ರೀಮಂತರು. ೧॥ ಲಕ್ಷ ರೂಪಾಯಿಗಳ ಆಸ್ತಿ ಜಪ್ತಿಯು ಆಗಬೇಕಾಗಿದೆ. ಶೀಘ್ರ ೩ ಸಾವಿರ ರೂಪಾಯಿ, ಅದಾಗ್ಯೂ ಅದೇ ಶೀಘ್ರ ವಸೂಲಿಯ ಬಗ್ಗೆ ಜಪ್ತಿಯಾಗಿ ಮಾಡಿದ, ಜಪ್ತಿಯ ನಾರಂಭ [illegible] ಕೋಹಾಟದಲ್ಲಿ ೧೨ ವರ್ಷದ ಒಬ್ಬ ಹುಡುಗನಿಗೆ ಪೋಲೀಸರು ೩ ವರ್ಷಗಳ ಶಿಕ್ಷೆ ವಿಧಿಸಿದ್ದಾರೆ. ಸ ಮಾರು ೧೨ ಪ್ರಕರಣಗಳನ್ನು ಖಾನ ಅಬ್ದುಲ ಗಫ್ಫಾರಖಾನರವರು ಪತ್ರಿಕಾ ಪ್ರತಿನಿಧಿಗಳ ಬಳಿ ವಿವರಿಸಿದರು. [illegible] ಮಿಯಾನ ಮಹಮ್ಮದ ಶಫಿಯವರು ಮಹಾತ್ಮರಿಗೆ ಧೈರ್ಯವಾಗಿ ಎಲ್ಲ ಸ್ಥಿತಿಯನ್ನು ವಿವರಿಸಿದರು. ಮುಸ್ಲಿಮ ಕಾರ್ಯಕರ್ತರಾದ ಮಿ| [illegible] ಮೊದಲಾದವರ ಕಡೆ ಎಲ್ಲ ಸಂಗತಿಗಳನ್ನು ವಿವರಿಸಬೇಕಾಗಿ ಮಹಾತ್ಮರ ಅಪ್ಪಣೆಯಾದಂತೆ ಅಲ್ಲಿಯ ಎಲ್ಲ ಸಂಗತಿಗಳು ವಿವರಿಸಲ್ಪಟ್ಟವು. ಕೆಲ ಪ್ರಮುಖರಿಗೆ ಸರಿ ಹಿಡಿಯುವ ಪ್ರಯೋಜನ ನಡೆದಾಗ ಮಿಯಾನ ಮಹಮ್ಮದರವರಿಗೆ ಸರಕಾರಿ ಅಧಿಕಾರಿಗಳ ಸಂಭಾಷಣೆಯಲ್ಲಿ ತಿಳಿಯಿತು. ಹೀಗೆ ಮಾಡಿದರೆ ಅನರ್ಥ ಒದಗುವದಾಗಿ ಅವರು ತಿಳಿಸಿದರು [illegible] ಪತ್ರಿಕೆಗಳಲ್ಲಿ ಸಭಾಬಂದಿ ಹುಕುಮು ಹೊರಟಿದೆ. ಒಕಟಂಗ ಮಾಡಬೇಕಾಗಿ ಕಲ್ಪಿಸ್ಪನೆಯಾಗಿದೆ [illegible] ಜಿಲ್ಲಾ ಕೋಂಗ್ರೆಸ ಕಮಿಟಿಯ [illegible] ದರ್ಶಿಗಳಾದ ಶ್ರೀಮತಿ ಮಿತ್ರಾದೇವಿಯವರಿಗೆ ಸರೆ ಹಿಡಿಯಲ್ಪಟ್ಟಿದೆ ಲಾಹೋರದ 'ಡೇಲಿ ಹೆರಲ್ಡ' ಪತ್ರಿಕೆಯಲ್ಲಿ ಪ್ರಕಟವಾದ ಒಂದು ಸಂಗತಿ. ಅಧಿಕಾರಿಗಳ ಮಾನಸಿಕ ಅವಸ್ಥೆಯು ದ್ಯೋತಕವಿದೆ. ಸತ್ಯಾಗ್ರಹ ಸಂಗ್ರಾಮದಲ್ಲಿ ಆಗಾಗ ಸರಕಾರವು ಪಾರಿತೋಷಕವನ್ನಿತ್ತಿತು. ಪ್ಲೇಟಕದಲ್ಲಿ ಇಬ್ಬರಿಗೆ ಬಹುಮಾನ ಕೊಟ್ಟಿದೆ. [illegible] ಇಬ್ಬರ ಭಾಷಣವನ್ನು ಕಲ್ಪನೆಯಿಂದ ತಯಾರಿಸಿ ಒಟ್ಟಿ ಮಾಡಿಕೊಟ್ಟಿದ್ದರು. ಆರೋಪಿಗಳು ಆ ಭಾಷಣ ಮಾಡಿದ್ದಕ್ಕಾಗಿ ಮುದ್ದೆಮ್ಮೆಗಳು ಒಟ್ಟಿಯನ್ನು ಬಿಟ್ಟುಕೊಟ್ಟರು. ಆದಾಗ್ಯೂ ಇವರಿಗೆ ಶಾಸನವಾಗಲಿಲ್ಲ, ಇದನ್ನೆಲ್ಲ ನೋಡಿ ಖಾನ ಅಬ್ದುಲ ಗಫ್ಫೂರಖಾನರವರಿಗೆ ದೇಶದವಾಗಿದೆ ತಮಗೆ ಬಹಿಷ್ಕಾರ [illegible] ತನ್ನ ಪಕ್ಷಗಳ ಬಹಿಷ್ಕಾರ [illegible] ಸ್ವೀಯ ಸಭೆಯುವದೂ, ಮಹಾತ್ಮರೂ ನಿರ್ಣಯಿಸಿದರೆ, ಶಾಂತಿಯ ಸಾರ ಪತ್ರ ಮಾತುಕತೆಯಾಗಿ ಅವರು ಉದ್ಗರಿಸುತ್ತಾರೆ. ಕೋಂಗ್ರೆಸ ಕಾರ್ಯಕಾರಿ ಮಂಡಳ್ಳಿ ಗಡಿನಾಡಿನ ಗಾಂಧಿಗಳು ಬೆಕ್ಕಿಸಿದ್ದಾರೆ. ಎಲ್ಲ ವಿಷಯಗಳ ಮಂಥನವಾಗಿ ನಿರ್ಣಯವಾಗುವದು.

* * *

ಪಂಜಾಬದೊಳಗಿನ ಸ್ಥಿತಿ.

ಪಂಜಾಬದೊಳಗೆ ಸರಕಾರವು ಬಹಿಷ್ಕಾರದ ಪತಕದ್ದು ನಮ್ಮದಿಲ್ಲವಾಗಿ ಕೋಂಗ್ರೆಸ ಪ್ರಮುಖರಾದ ಡಾ. ಧರ್ಮಚಂದ ಮತ್ತು ಸಂಚಾಲಕರು 'ಟ್ರಿಬ್ಯೂನ' ಪತ್ರಿಕೆಯಲ್ಲಿ ದೂರಿದ್ದಾರೆ. ಬಹಿಷ್ಕಾರವು, ಹರಿಕೀಸನದಾಸರವರಿಗೆ ಬಂದ ಒಡೆದ್ದು ತಪ್ಪು. ರಾ| ಹರಿಕಿಸನರವರು ಸತ್ಯಾಗ್ರಹಿಗಳ ಜಾಮೀನ ಸಿಂಗರ, ಆ ಸತ್ಯಾಗ್ರಹಿ ಕಾರಾಗೃಹದಲ್ಲಿ, ಅದರಿಂದ ಹರಿಕಿಸನರವರ ಜಾಮೀನ ಕೊಂಡರು ರದ್ದಾಗಿ ಜಾಮೀನ ರಕಮು ತುಂಬುವ ಪ್ರಸಂಗ ಬಂತು. ಬಹಿಷ್ಕಾರದ ನಂತರ ಸತ್ಯಾಗ್ರಹಿಯು ಬಿಡುಗಡೆಯಾದನು. ಹರಿಕಿಸನದಾಸರ ಜಾಮೀನ ರಕಮು ಮಾಫಿಯಾಗಲಿಲ್ಲ. ಸತ್ಯಾಗ್ರಹದಲ್ಲಿ ಸೇರಿದ ನವಶೀಖ-ಪನ್ನ ಗ್ರಾಮದ ಮೇಲೆ ಸರಕಾರವು ವಿಶೇಷ ಪೋಲೀಸರನ್ನಿಟ್ಟಿತ್ತು. ಬಹಿಷ್ಕಾರದಲ್ಲಿ ಅವು ರದ್ದಾಗಲಿಲ್ಲ. ಇಲ್ಲಿ ಅತ್ಯಾಚಾರಗಳ ಕಾರಣದಿಂದ ರದ್ದು ಮಾಡಲಿಲ್ಲವಾಗಿ ಪಂಜಾಬ ಸರಕಾರದ ಆಜ್ಞೆಯ ಸವಿಯ ಭಾರತ ಸಭೆಯ ಅಧ್ಯಕ್ಷರಾದ ಸರದಾರ ಗುರುದತ್ತ ಸಿಂಗರವರಿಗೆ ಲಾಹೋರದ ಅರ್ಥವಿದ ಮೇಲೆ ಸರಿಹಿಡಿಯಲ್ಪಟ್ಟದೆ. ಸತ್ಯಾಗ್ರಹದಲ್ಲಿ ಎರಡನೆಯ ಸಲ ಇವರು ಸೆರೆಮನೆ ಸೇರಿದ್ದಾರೆ. ಕೋಂಗ್ರೆಸ ಕಾರ್ಯಕಾರಿ ಮಂಡಳದ ಸಭಾಸದರಾದ ಸರದಾರ ಶಾರ್ದೂಲಸಿಂಗ ಕವೀಶ್ವರರವರಿಗೆ ಸೆರೆಹಿಡಿದ ಪ್ರಕಾರವೂ ಗರ್ಹಣೀಯವಿದೆ. ಶ್ರೀ| ಅಮೃತಸರದ [illegible] ಅಧ್ಯಕ್ಷತೆಯಲ್ಲಿ ಪಂಜಾಬ ಸಂಸ್ಥಾನ ಪ್ರಜಾ ಪರಿಷತ್ತು ಜುಲೈ ತಿಂಗಳಲ್ಲಿ ಸೇರಿತ್ತು. ಪರಿಷತ್ತು ನೋಡುವವರಿಗೆ ಟಿಕೀಟುಗಳನ್ನಿಟ್ಟಿದ್ದರು. ಪಟಿಯಾಲಾ ಸಂಸ್ಥಾನದ ಪ್ರೇರಣೆಯಿಂದ ೧೦ ಜನರು ಪರಿಷತ್ತಿನ ಮಂಟಪದಲ್ಲಿ ಬಲಾತ್ಕಾರದಿಂದ ಸೇರಿಕೊಂಡರು ಡೆ| ಕವೀಶ್ವರರು ಮಂಟಪದ ಹೊರ ನಿಂತಿದ್ದರು, ಅವರ ಕಡೆ [illegible] ಶ್ರೀ| ಮಣಿಲಾಲ ಕೋಠಾರಿಯವರು ದೂರಿಕೊಂಡರು ಒಳಿಯುದ್ದದ್ದು ಪೋಲೀಸರೊಡನೆ ಬಂದೋಬಸ್ತ ಮಾಡ ಹೇಳಿದರು. ಇದು ಸಾರ್ವಜನಿಕ ಸಭೆ, ದೇಶಾವಾರು ಸೇರಗಬಹುದೆಂದು ಡೆ| ಕವೀಶ್ವರರು ತಿರ್ಪು ಕೊಟ್ಟರು. ಪ್ರತಿನಿಧಿಗಳಿಗೆ ಮಾತ್ರ ಪ್ರವೇಶವಿದೆ, ಕಂಡವರಿಗೆ ಪ್ರವೇಶವಿಲ್ಲವಾಗಿ ಶ್ರೀ| ಕೋಠಾರಿಯವರು ಸಾರಿದರು. ಅಷ್ಟರೊಳಗೆ ಸರದಾರ ಶಾರ್ದೂಲಸಿಂಗ ಕವೀಶ್ವರರವರು ಬಂದರು. ಅವರೂ ಟಿಕೇಟಿಲ್ಲದವರ ಜೊತೆಗೆ ಸಹ ಹೊರಗೆ ಬಂದರು. ಪೋಲೀಸ ಸುಪರಿಂಟೆಂಡೆಂಟರು ಸಿಟ್ಟಿಗೆದ್ದು ಅವರಿಗೆ ಎಲ್ಲಾ ಪೋಲೀಸ ರಾಜ್ಯ ಕೊಟ್ಟಿದ್ದರು. ಮತ್ತು ಪಟಿಯಾಲಾದ ಜನರಿಗೆ ಪರಿಷತ್ತಿನಲ್ಲಿ ನಾಶಕಾರಂಭಿಸಿದರು. ಸ್ವಯಂಸೇವಕರು ಅಡ್ಡಗಟ್ಟಿದರು. ಸ್ವಾಗತಾಧ್ಯಕ್ಷರ ಭಾಷಣ

[೩ ನೆಯ ಪುಟ (೮) ಕಾಲಮ್ ನೋಡಿರಿ]

ಕಾನಡಾವೃತ್ತ

ಪ್ರಜಾಪತಿ ಸಂ। ನಿಜ ಶ್ರಾವಣ ಕೃ। ೧೧, ಸೋಮವಾರ.

ಸಂಧಿಯಾಗದೇ?

ನಿಶ್ಚಿತವಾಗಿ ಏನೂ ಹೇಳಬರುವದಿಲ್ಲ. ಮಹಾತ್ಮರು ಲಂಡನಿಗೆ ತೆರಳುವ ಸಂಗತಿ ಇನ್ನೂ ನಿಶ್ಚಿತವಾಗಿ ಪ್ರಕಟವಾಗಿಲ್ಲವು. ಶನಿವಾರ ೧೫ನೇ ತಾರೀಖು ಎಂದು ಮಹಾತ್ಮರು ಹೊರಡಬೇಕಾದ ದಿನ. ಹಲವರು ತಿಂಗ-ತಿಂಗಳುಗಳಿಂದ ತಯಾರಿ ನಡಿಸುತ್ತಾರೆ; ಮಹಾತ್ಮರ ತಯಾರಿ ಇನ್ನೂ ಏನೂ ಆಗಿಲ್ಲ. ಗುಜರಾಥದೊಳಗಿನ ಪರಿಸ್ಥಿತಿಯ ಕುರಿತು ಸಮಕ್ಷ ಮಾತನಾಡಲು ಮುಂಬಯಿಯ ಗವ್ಹರ್ನರರು ಮಹಾತ್ಮರನ್ನು ಪುಣೆಗೆ ಕರೆಕೊಂಡರು. ಮಂಗಳವಾರ ೫ ಘಂಟೆಯಿಂದ ರಾತ್ರಿ ೧॥ ಘಂಟೆಯ ತನಕ ಮಾತುಕತೆಯಾಗಿ ಮಹಾತ್ಮರೂ, ಗವ್ಹರ್ನರರೂ ಮಾತನಾಡಿದರು. ಕಾರಭಾರಿ ಮಂಡಳದ ಮುಖ್ಯಾಧಿಕಾರಿಗಳಾದ ಸು ಬೆಲ್-ಕೊಲಿನ್ಸರವರೂ, ಗುಜರಾಥದ ಕಮಿಶನರರಾದ ಮಿ| ಗೆರಿರ್ಹರವರೂ ಹಾಜರಿದ್ದರು. ಏನು ನಡೆಯಿತೆಂದು ಮಹಾತ್ಮರು ಹೇಳಲಿಲ್ಲ; ಸರಕಾರವೂ ಪ್ರಕಟಿಸಲಿಲ್ಲ. "ಇನ್ನಾದರೂ ರೌಂಡ ಟೇಬಲ್ ಪರಿಷತ್ತಿಗೆ ಹೋಗುವದು ನಿಶ್ಚಿತವಾಯಿತೇ?" ಎಂಬುದಾಗಿ ಪತ್ರಿಕಾ ಪ್ರತಿನಿಧಿಗಳು ಕೇಳಲು, "ಇನ್ನೂ ನಿರ್ಣಯವಾಗಲಿಲ್ಲ"ವಾಗಿ ಮಹಾತ್ಮರು ನುಡಿದರು. "ತಮಗೆ ಸಮಾಧಾನವಾಯಿತೇನೆಂ"ಬ ಪ್ರಶ್ನೆಗೆ, "ನಾನೇನೂ ಹೇಳಲಾರೆ; ಸರಕಾರದ ಕಡೆ ಕೇಳಿಕೊಳ್ಳಿ. ಸರಕಾರಕ್ಕೆ ಅನುಕೂಲವಿದ್ದಷ್ಟು, ಯುಕ್ತ ಕಂಡಷ್ಟು ವೃತ್ತಾಂತವು ನಿಮಗೆ ಸಿಗುವದು." ಹೀಗೆ ಮಹಾತ್ಮರು ನುಡಿದರು. "ಆಗಸ್ಟ ೧೫ನೇ ತಾರೀಖಿಗೆ ನೀವು ಹೊರಡುವದಾದರೂ ನಿಜವೇ?" ಎಂಬ ಸವಾಲಿಗೆ "ನಾನರಿಯೆನೆಂ"ದು ಮಹಾತ್ಮರು ಸ್ಪಷ್ಟ ನುಡಿದರು. "ನನ್ನಿಂದ ಇನ್ನೂ ಹೆಚ್ಚಿ[illegible]ವಾದ ಉತ್ತರ ಸಿಗಲಾರದೆಂ"ದು ಮಹಾತ್ಮರು ಖಂಡಿತ ಹೇಳಿಬಿಟ್ಟರು. ಮುಂಬಯಿಯಲ್ಲಿ ಕೊಂಗ್ರೆಸ ಕಾರ್ಯಕಾರಿ ಮಂಡಳದ ಸಭೆ ನೆರೆದೆ. ಸಂಯುಕ್ತ ಪ್ರಾಂತದೊಳಗಿನ ಸ್ಥಿತಿ ನೋಡಿ ಪಂಡಿತ ಜವಾಹಿರಲಾಲರು ಬೇಸರಗೊಂಡಿದ್ದಾರೆ. ಬುಧವಾರ ಜವಾಹಿರಲಾಲರು ಕೊಂಗ್ರೆಸ ಕಾರ್ಯಕಾರಿ ಮಂಡಳಕ್ಕೆ ತಮ್ಮ ಪ್ರಾಂತದಲ್ಲಿ ನಡೆಯುವ ಪರಿಪರಿಯ ಪೀಡನೆಯ ಉದಾಹರಣೆಗಳನ್ನು ಕೊಟ್ಟರು. ಪಂಡಿತ ಮದನಮೋಹನ ಮಾಲವೀಯರವರು ಕಂಡ ಸಂಗತಿಗಳನ್ನೂ, ಸರಕಾರಿ ಅಧಿಕಾರಿಗಳೊಡನೆ ತಾವು ನಡಿಸಿದ ರಾಯಭಾರವನ್ನೂ ನಿವೇದಿಸಿದರು. ಗಡಿನಾಡಿನ ಸ್ಥಿತಿಯ ವಿಚಾರವು ಗುರುವಾರ ನಡೆಯಿತಂತೆ. ಗಡಿನಾಡಿನ ಪ್ರಮುಖರಾದ ಖಾನ ಅಬ್ದುಲ್ಲ ಗಫೂರ ಖಾನರವರು ತಮ್ಮ ಅನುಭವಗಳನ್ನು ತಿಳಿಸುವರು. ಮಹಾತ್ಮರ ಮಗಂದಿರಾದ ಶ್ರೀ| ದೇವಿದಾಸ ಗಾಂಧಿಯವರು ಗಡಿನಾಡನ್ನು ಸಂಚರಿಸಿ ನಿನ್ನೆಯೇ ಮರಳಿದ್ದಾರೆ. ಅವರೂ ಅಲ್ಲಿಯ ಸ್ಥಿತಿಯನ್ನು ನಿವೇದಿಸುವರು. ವಾಚಕ ಮಹಾಶಯರಿಗೆ ದೇಶಸ್ಥಿತಿಯ ಗ್ರಹಿಕೆಯಾಗಬೇಕೆಂದು 'ಪ್ರಕೃತ ವಿಷಯ'ದಲ್ಲಿ ಅಲ್ಲಲ್ಲಿಯ ಸ್ಥಿತಿಗಳನ್ನು ವಿವರಿಸಿದ್ದೇವೆ. ಒಡಂಬಡಿಕೆಯನ್ನು ಸರಕಾರವು ಮೆಟ್ಟುಮೆಟ್ಟಿಗೂ ಮುರಿಯುತ್ತದೆಂದು ನಿಷ್ಪಾಲ ವಿಚಾರಿಗಳಿಗೆ ತೋಳೆಯುವಂತಿದೆ. ಈ ನೋಟ ನೋಡಿ ಮಹಾತ್ಮರಿಗೆ ತುಂಬಾ ವ್ಯಸನವಾಗು ಮನೋವ್ಯಥೆ. ಒಡಂಬಡಿಕೆಯಿಂದ ಕ್ಷೇಮವಾಯಿತೇನೆಂದು ಅವರು ಇನ್ನೂ ಚಿಂತಿಸುತ್ತಿದ್ದಾರೆ. ದೇಶದೊಳಗಿನ ಸ್ಥಿತಿ ಸುಧಾರಿಸದನಕ ಅವರು ಭರತಭೂಮಿಯೊಳಗಿಂದ ಕಾಲ್ತೆಗೆಯರೊಲ್ಲರು; ಸುಧಾರಿಸುವ ಆಶೆಯಾದರೂ ತೋರಲ್ ಬೇಕು. ಅದಕ್ಕಾಗಿಯೇ ಮಹಾತ್ಮರು ಆತ್ಮಶಕ್ತಿಗೆ ಮಾನ್ಯವಾದ ಪಂಚವನ್ನು ನೇಮಿಸಿಕೊಳ್ಳಬೇಕಾಗಿ ಸರ್ವಾಧಿಪತಿಗಳಿಗೆ ಸೂಚಿಸಿದ್ದರು. ಸರ್ವಾಧಿಪತಿಗಳು ಒಪ್ಪಲಿಲ್ಲ. ಇದರಿಂದ ದೇಶಬಾಂಧವರು ಮುನಿದಿದ್ದಾರೆ; ಮಹಾತ್ಮರಿಗೆ ಅಸಮಾಧಾನವಾಗಿದೆ.

ಸಂಧಿ ಮುರಿಯಿತು. ಮಹಾತ್ಮರು ರೌಂಡ ಟೇಬಲ್ ಪರಿಷತ್ತಿಗಾಗಿ ಲಂಡನಿಗೆ ಹೋಗುವದಿಲ್ಲ. ಲಂಡನಿಗೆ ಹೋಗುವದಕ್ಕಾಗಿ ಮಹಾತ್ಮರು ಆತುರರಿದ್ದರು, ಅತ್ಯಾತುರರಾಗಿದ್ದರು ಅದಕ್ಕಾಗಿ ಕೊನೆ ತನಕ ಯತ್ನ ನಡಿಸಿದರು. ಇರ್ವಿನ್ ಲಾರ್ಡರೊಡನೆ ನಡಿಸಿದ ಒಡಂಬಡಿಕೆಯಂತೆ ಸರಕಾರವು ನಡೆಯದ ಕಾರಣ ಸಂಧಿ ಮುರಿಯಿತು. ಹಿಂದುಸ್ಥಾನ ಸರಕಾರವು, ಪ್ರಾಂತಿಕ ಸರಕಾರಗಳು, ಅಲ್ಲಲ್ಲಿಯ ಅಧಿಕಾರಿಗಳು ಶ್ರೀ ಕೃಷ್ಣನೋಪಾದಿಯಲ್ಲಿ ಸಂಧಾನ ಮಾಡಹೋದ ಮಹಾತ್ಮರ ಬಂಬೋಣವನ್ನೆಲ್ಲ ಧಿಕ್ಕರಿಸಿಬಿಟ್ಟರು; ಇದನ್ನು ತಿಳಿಸಲು ತುಂಬಾ ವ್ಯಸನವಾಗುತ್ತದೆ. ಕೌರವ-ಪಾಂಡವರೊಳಗೆ ಸಂಧಾನ ಮಾಡುವದಕ್ಕಾಗಿ ಶ್ರೀ ಕೃಷ್ಣ ಪರಮಾತ್ಮನು ಹಸ್ತಿನಾಪುರಕ್ಕೆ ಹೋದನು, ೫ ಮನೆಗಳನ್ನು ಬೇಡಿದನು. ಸೂಜಿ ಮೊನೆಯಷ್ಟು ಭೂಮಿಯನ್ನು ಕೊಡಲಿಕ್ಕಿಲ್ಲವಾಗಿ ದುರ್ಯೋಧನನು ಶ್ರೀ ಕೃಷ್ಣ ಪರಮಾತ್ಮನಿಗೆ ಹಿಂದಕ್ಕಟ್ಟಿದನು. ಹಾಗೆಯೇ ಹಿಂದುಸ್ಥಾನ ಸರಕಾರವು, ಮುಂಬಯಿ ಸರಕಾರವೂ ಮಹಾತ್ಮರ ಸಂಧಿ ಪ್ರಸ್ತಾಪವನ್ನೆಲ್ಲ ಧಿಕ್ಕರಿಸಿಬಿಟ್ಟಿವೆಂದು ತಿಳಿದು ಅತ್ಯಂತ ಮನೋವ್ಯಥೆಯಾಗುತ್ತದೆ. ಒಡಂಬಡಿಕೆಯಲ್ಲಿ ಸರಕಾರವು ಕಾಂಗ್ರೆಸ ಕಾರ್ಯಕರ್ತರಿಗೆ ಪರಿಪರಿಯಿಂದ ಪಣಿಸಿತು, ಪಂಡಿಸಿತು. ಶಾಂತತಾಭಂಗದ ನೆವ ಮಾಡಿ ರಾಷ್ಟ್ರೀಯ ಸಭೆಯ ಪ್ರಚಾರಕ್ಕೆ ಅಡಿಮಾಡಿತು. ಮುಸ್ಲಿಮ ರಾಷ್ಟ್ರಸೇವಕರ ಮೇಲೆ ಕಣ್ಣುಹಾಕಿ ಜಾಮೀನ ಮಿಟ್ಲಿಗಳನ್ನು ನಡೆದಿವೆ ಒಂದೆಡೆ ತುಬಾಕಿ ಲೈಸೆನ್ಸುಗಳಿಗೆ ಪ್ರತಿಬಂಧ, ಇನ್ನೊಂದೆಡೆ ಎಕೆಟಿಂಗಿಗೆ ಅಡ್ಡಿ ಆತಂಕ, ಪೇಟೆ ಮದ್ರಾಸದಲ್ಲಿ ಕಲೆಕ್ಟರರು ಸ್ವಯಂಸೇವಕರಿಗೆ ಹೊಡೆಯಲು ಗುತ್ತೇದಾರರಿಗೆ ಹುರಿದುಂಬಿಸಿದರು, ಒಂದಿಷ್ಟು ಕೇಂದಿ ಕುಡಿದರೆ, ಅಕ್ಷೇಪ ವಾಗುವದಿಲ್ಲವಾಗಿ ವೈದ್ಯಶಾಸ್ತ್ರ ಹೇಳಿದರು ಈ ಪ್ರಕಾರ ಅಲ್ಲಲ್ಲಿ ದೇಶತುಂಬ ಒಡಂಬಡಿಕೆ ಮುರಿಯಲ್ಪಡುತ್ತಿದ್ದಾಗ್ಯೂ, ಮಹಾತ್ಮರು ಅದನ್ನೆಲ್ಲ ಸಹಿಸಿಕೊಂಡರು. ಒಕ್ಕಲತನವು ಹಿಂದುಸ್ಥಾನದ ಮುಖ್ಯ ಧೋರಣೆ, ಒಕ್ಕಲಿಗರು ರಾಷ್ಟ್ರೀಯ ಸಭೆಯ ಮೂಲಾಧಾರ, ಅವರ ಕಲ್ಯಾಣವೇ ಹಿಂದುಸ್ಥಾನದ ಕಲ್ಯಾಣ ಅವರ ಉದ್ಧಾರವೇ ರಾಷ್ಟ್ರೀಯ ಸಭೆಯ ಅಭ್ಯುದಯ ಸಂಯುಕ್ತ ಪ್ರಾಂತದಲ್ಲಿಯೂ, ಗುಜರಾಥದಲ್ಲಿಯೂ ಸತ್ಯಾಗ್ರಹ ಸಂಗ್ರಾಮದಲ್ಲಿ ಸ್ವರಾಜ್ಯ ಪ್ರಾಪ್ತಿಗಾಗಿ ಅಪರಿಮಿತವಾದ ಸಾಹಸ ಮಾಡಿ ಅಪಾರ ಕ್ಲೇಶಗಳನ್ನೂ, ತ್ಯಾಗವನ್ನೂ ಉಪಭೋಗಿಸಿದ ಕಿಸಾನರಿಗೂ, ಪಟೇದಾರರಿಗೂ ಸರಕಾರವು ಇನ್ನೂ ತನಕ ದಣಿಸುತ್ತಿದೆ ಮಹಾತ್ಮರು ಸರ್ವಾಧಿಪತಿಗಳಿಗೆ ತಂಡು ಬಿನ್ನೈಸಿಕೊಂಡರು; ಕಾರ್ಯದರ್ಶಿಗಳಿಗೆ ಹೇಳಿಕೊಂಡರು; ಗವ್ಹರ್ನರರ ಕಡೆ ಪ್ರಾರ್ಥನೆ ಮಾಡಿಕೊಂಡರು. ಯಃಕಶ್ಚಿತ್ ಕಮಿಶನರ—ಕಲೆಕ್ಟರರ ಕಡೆ ವಿನಂತಿ ಮಾಡಿಕೊಂಡರು ಧನ್ಯ ಮಹಾತ್ಮರೇ, ಧನ್ಯ! ಒಕ್ಕಲಿಗರ ಕಷ್ಟಪರಿಹಾರಕ್ಕಾಗಿ ಕಮಿಶನರ-ಕಲೆಕ್ಟರರ ತನಕ ನಮ್ರಭಾವದಿಂದ ನಡಿಸಿದ ವಕೀಲಿಯನ್ನು ಎಂದಾದರೂ ಮರೆಯುವದು ಸಾಧ್ಯವೇ? ಮಹಾತ್ಮರ ದೊಡ್ಡಸ್ತನವೆಲ್ಲಿ? ಸಾಮ್ರಾಜ್ಯ ಸರಕಾರದ ಪ್ರಧಾನ ಮಂಡಳದೊಡನೆ ಸಂಕರಾಗಿ ಹೋರಾಡುವ ಭಟರಲ್ಲಿ? ಅಲ್ಪಾಧಿಕಾರದಿಂದ ಮೆರೆಯುವ ಪುಟ್ಟ ಜಿಲ್ಹಾಧಿಕಾರಿಗಳಲ್ಲಿ? ಮಹಾತ್ಮರು ಅದ್ಯಾವುದನ್ನು ಲಕ್ಷಿಸಲಿಲ್ಲ. ಕಲೆಕ್ಟರರಿರಲಿ, ಕಮೀಶನರಿರಲಿ, ಒಕ್ಕಲಿಗರ ಹಿತವಾಗುತ್ತಿದ್ದರೆ, ಮಹಾತ್ಮರು ಉಗ್ರಾಣಿಯ ಬಂಗಿರಿಗೊಡ್ಡಲಿಕ್ಕೂ ಬಗ್ಗಾಲಿನ ಮೇಲೆ ಸಿದ್ಧ. ಕಳೆದ 'ಯಂಗ ಇಂಡಿಯಾ' ಪತ್ರಿಕೆಯಲ್ಲಿ ಬರೆದಂತೆ, ದೊಡ್ಡವನು ದೇವರು; ನಾವೆಲ್ಲರೂ ಆತನ ಪಾದಧೂಳಿ. ಹೀಗೆ ಮಹಾತ್ಮರು ಎಣಿಸಿ ಒಕ್ಕಲಿಗರ ಹಿತಕ್ಕಾಗಿ ಪರಿಪರಿಯ ಯತ್ನ ನಡಿಸಿದರು ಸರ್ವಾಧಿಪತಿಗಳೂ, ಬಳ್ಳಿ ಗವ್ಹರ್ನರರೂ ಮಹಾತ್ಮರಿಗೆ ತಿರಸ್ಕರಿಸಿದರು ಭೂಕಂದಾಯ ಕಟ್ಟಳೆಯಂತೆ ತೀವ್ರ ವಸೂಲಿಯ ಕ್ರಮ ನಡೆದವೆ; ಗಾಂಧಿ-ಇರ್ವಿನ್ ಒಡಂಬಡಿಕೆಯು ಕಾಯಿದೆಯಲ್ಲ, ಅದರಂತೆ ಸರಕಾರವು ನಡಕೊಳ್ಳತಕ್ಕದ್ದೇನೆಂದು ನೋಡಿಕೊಳ್ಳುವದು ಸರಕಾರದ್ದೇ ಮರ್ಜಿ, ಹೊರತು, ರಾಷ್ಟ್ರೀಯ ಸಭೆಯ ಕೆಲಸವಲ್ಲ, ಹೀಗೆ ಮುಂಬಯಿ ಗವ್ಹರ್ನರರಿಂದ ಬುಧವಾರ ಉತ್ತರ ಬಂತು. ಆದಾಗ್ಯೂ, ಮಹಾತ್ಮರು ನಿರಾಶರಾಗಲಿಲ್ಲ, ಮಹಾತ್ಮರು ಯಾವಾಗಲೂ ಆಶಾಭರಿತರೇ ಸರ್ವಾಧಿಪತಿಗಳಿಗೆ ತಂತಿ ಕಳುಹಿ ಬಳ್ಳಿ ಗವ್ಹರ್ನರರ ಅಭಿಪ್ರಾಯದಂತೆಯೇ ಹಿಂದುಸ್ಥಾನ ಸರಕಾರದ ಅಭಿಪ್ರಾಯವಿರುವದೇನೆಂದು ಪ್ರಶ್ನಿಸಿದರು. ಸರ್ವಾಧಿಪತಿಗಳು ಕಾರ್ಯಕಾರಿ ಮಂಡಳವನ್ನು ಲಗುಬಗೆಯಿಂದ ಸೇರಿಸಿ ಮಹಾತ್ಮರಿಗೆ ಉತ್ತರ ಕಳುಹಿದರು. ಮುಂಬಯಿ ಗವ್ಹರ್ನರರು ಕೊಟ್ಟ ಉತ್ತರಕ್ಕೆ ಹಿಂದುಸ್ಥಾನ ಸರಕಾರದ ಸಮ್ಮತಿಯಿರುವದಾಗಿ ತಿಳಿಸಿದರು ಸಾಮ್ರಾಜ್ಯ ಸರಕಾರಕ್ಕೂ, ಹಿಂದುಸ್ಥಾನ ಸರಕಾರಕ್ಕೂ, ಮುಂಬಯಿ ಸರಕಾರಕ್ಕೂ ತಂತಿಗಳ ಮೇಲೆ ತಂತಿ ಹೊಡ್ಯಾದಿ ಬಂತು ಸಿಕ್ಕಿದ ಉತ್ತರವಿದೇ! ಈ ಉತ್ತರವು ಗುರುವಾರ ಅಪರಾಹ್ನ ೫॥ ಘಂಟೆಗೆ ಮಹಾತ್ಮರಿಗೆ ತಲ್ಪಿತು ಒಡನೆ 'ಮಣಿ ಭುವನ'ದಲ್ಲಿ ಮಹಾತ್ಮರು ಕಾಂಗ್ರೆಸ ಕಾರ್ಯಕಾರಿ ಕಮೀಟಿಯನ್ನು ಸೇರಿಸಿ ವಿಚಾರ ನಡಿಸಿದರು ಮಹಾತ್ಮರಿಗೂ ಸರಕಾರಕ್ಕೂ ನಡೆದ ಪತ್ರವ್ಯವಹಾರವನ್ನೆಲ್ಲ ಕಾರ್ಯಕಾರಿ ಕಮೀಟಿಯು ಪರಾಂಬರಿಸಿ ಮಹಾತ್ಮರ ಬಂಬೋಣವನ್ನು ಕೇಳಿಕೊಂಡು, ಇತ್ತಿಟ್ಟಿನಲ್ಲಿ ಉಂಟಾದ ಒಕ್ಕಲಿಗರ ಪೀಡನೆಯ ವಿಷಯವನ್ನು ಪಂಚರ ಮುಖಾಂತರ ನಿರ್ಣಯಿಸಲಿಕ್ಕೆ ಸರಕಾರವು ಒಪ್ಪದ್ದರಿಂದ ರಾಷ್ಟ್ರೀಯ ಸಭೆಯ ಪರವಾಗಿ ರೌಂಡ ಟೇಬಲ್ ಪರಿಷತ್ತಿನಲ್ಲಿ ಪ್ರತಿನಿಧಿ ಕಳಿಸಬಾರದಾಗಿ ನಿರ್ಣಯ ಮಾಡಿತು ಒಕ್ಕಲಿಗರ ಪ್ರಶ್ನೆಯು ರಾಷ್ಟ್ರೀಯ ಸಭೆಗೆ ಮೂಲಭೂತ ಪ್ರಶ್ನೆಯಾದ್ದರಿಂದ, ಅದನ್ನು ಕುರಿತು ಸರಕಾರವು ವಿಚಾರ ಮಾಡಲೊಪ್ಪದ್ದರಿಂದ ಕಾಂಗ್ರೆಸ ಕಾರ್ಯಕಾರಿ ಮಂಡಳವು ನಿರುಪಾಯವಾಗಿ ಈ ನಿರ್ಣಯವನ್ನು ಕೈಕೊಂಡಿದೆ. ಕಾಂಗ್ರೆಸ ಕಾರ್ಯಕಾರಿ ಮಂಡಳಕ್ಕೆ ಈ ಪ್ರಕಾರ ನಿರ್ಣಯ ಕೈಕೊಳ್ಳಬೇಕಾದ ಪರಿಸ್ಥಿತಿಯನ್ನು ನಿರ್ಮಿಸಿದ [illegible] ಅಧಿಕಾರಿಗಳಿಗೆ ಹಲಿದಷ್ಟು ತೀರದು ಮಹಾತ್ಮರು ರೌಂಡ ಟೇಬಲ್ ಪರಿಷತ್ತಿನಲ್ಲಿ ಸೇರದಿದ್ದರೆ, ರೌಂಡ ಟೇಬಲ್ ಪರಿಷತ್ತಿನ ಕಾರ್ಯಕ್ರಮ ಎಂದಿನಂತೆ ನಡೆಯುವದಾಗಿ ಲಂಡನಿನಲ್ಲಿ ಹೇಳುತ್ತಾರಂತೆ. ರ್ಯೂಟರ ಸುದ್ದಿಗಾರರು ಅಲ್ಲಿಯ ಅಭಿಪ್ರಾಯವೆಂದು ತಿಳಿಸಿದ್ದಾರೆ: ಆದರೆ, ರೌಂಡ ಟೇಬಲ್ ಪರಿಷತ್ತಿನಲ್ಲಿ ರಾಷ್ಟ್ರೀಯ ಸಭೆ ಸೇರಲಿ, ಬಿಡಲಿ; ಬಂದರೂ ಒಂದೇ, ನಿಂತರೂ ಒಂದೇ; ನಲಿದರೂ ಒಂದೇ, ಮುನಿದರೂ ಒಂದೇ! ಹೀಗೆ ಅಲ್ಲಿಯ ರಾಜಕಾರಣಿಗಳ ಅಭಿಪ್ರಾಯವಿರುವದಾಗಿ ನಾವು ಎಣಿಸುವದಿಲ್ಲ. ರಾಷ್ಟ್ರೀಯ ಸಭೆಯ ಸಹಕಾರವು ಅಷ್ಟು ಉಪೇಕ್ಷಣೀಯವಿದ್ದರೆ, ಅದಕ್ಕಾಗಿ ಒಡಂಬಡಿಕೆ ಯಾಕೆ ಬೇಕಿತ್ತು? ಮಹಾತ್ಮರ ಸಮಯ ಹಾಳೈಸುವ ಅವಶ್ಯಕತೆ ಏನಿತ್ತು? ರಾಷ್ಟ್ರೀಯ ಸಭೆಯು ಸೇರದಿದ್ದರೆ ರೌಂಡ ಟೇಬಲ್ ಪರಿಷತ್ತು ನಿರರ್ಥಕವಾಗುವದೆಂದು ಮದ್ರಾಸದ 'ಹಿಂದು' ಪತ್ರಿಕೆಗೆ ಬಂದ ತಂತಿ ಓದಿ ನಮಗೆ ಸಮಾಧಾನವಾಗಿದೆ. 'ಮೆಂಚೆಸ್ಟರ ಗಾರ್ಡಿಯನ್' ಪತ್ರವು ಗುಟ್ಟನ್ನು ಕೌಶಲ್ಯದಿಂದ ಸ್ಪುಟಮಾಡಿದೆಂದು ತಿಳಿಸಲು ತುಂಬಾ ಸಂತೋಷ "ಹಿಂದುಸ್ಥಾನದಲ್ಲಿ ಬ್ರಿಟಿಶರು ಸುರಕ್ಷಿತವಿರಬೇಕಾದರೆ, ದೇಶದೊಳಗೆ ಸಮಾಧಾನವಿರಬೇಕು, ಸ್ವರಾಜ್ಯ ಕೊಟ್ಟ ಹೊರತು ಸಮಾಧಾನವಾಗದು; ಆದರಿಂದ ಶೀಘ್ರವೇ ತಕ್ಕ ಸ್ವರಾಜ್ಯ ಪದ್ಧತಿಯನ್ನು ಸ್ಥಾಪಿಸಬೇಕು ನಿಯೋಗದ ರಾಜ್ಯಪದ್ಧತಿಯನ್ನು ಸ್ಥಾಪಿಸಲು ತಡಮಾಡಲಾಗದು." ಹೀಗೆ 'ಗಾರ್ಡಿಯನ್' ಪತ್ರಿಕೆಯು ಪ್ರಧಾನ ಮಂಡಳಕ್ಕೆ ಬುದ್ಧಿ ಹೇಳಿದೆ ಇದೊಂದು ಅಸಮಾಧಾನದಲ್ಲಿ ಸಮಾಧಾನ; ದುಃಖದಲ್ಲಿ ಸುಖ; ಕಷ್ಟದಲ್ಲಿ ಇಷ್ಟ. ಮಹಾತ್ಮರಾದರೂ ಇನ್ನೂ ಆಶಾಭರಿತರಾಗಿದ್ದಾರೆ. ಗಾಂಧಿ-ಇರ್ವಿನ್ ಒಡಂಬಡಿಕೆ ಇನ್ನೂ ಮುರಿಯಲಿಲ್ಲವಾಗಿ ಮಹಾತ್ಮರು ಉದ್ಗರಿಸಿ ಇನ್ನೂ ಸರಕಾರವು ನ್ಯಾಯ ಬುದ್ಧಿಯನ್ನು ತಳೆದು ವರ್ತಿಸುವದಾಗಿ ಅಭಿಪ್ರಾಯಪಟ್ಟಿದ್ದಾರೆ ಮಹಾತ್ಮರಿಗೂ, ಸರಕಾರಕ್ಕೂ ನಡೆದ ಪತ್ರವ್ಯವಹಾರವು ಇನ್ನೂ ಪ್ರಕಟವಾಗಿಲ್ಲ, ಪ್ರಕಟಗೊಳಿಸಲು ಮಹಾತ್ಮರು ಸರ್ವಾಧಿಪತಿಗಳ ಅಪ್ಪಣೆ ಬೇಡಿದ್ದಾರೆ ಸದ್ಯದಲ್ಲಿಯೇ ಅದು ಪ್ರಕಟಿಸಲ್ಪಡುವದು ಅದರ ವಾಚನದಿಂದ ಇತ್ತಿಟ್ಟಿನ ವಿವಾದ ವಿಷಯವು ತಿಳಿಯುವಂತಿದೆ ಇನ್ನೂ ಮಹಾತ್ಮರು ಸಂಧಿ ಮುರಿಯಿತೆಂದು ಹೇಳುವದಿಲ್ಲ ಸಂಧಿಯಂತೆ ನಡಕೊಳ್ಳಲು ತಾವು ಪ್ರಯತ್ನ ಮಾಡುವೆವಾಗಿ ಮಹಾತ್ಮರು ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿದ್ದಾರೆ. ಸತ್ಯಾಗ್ರಹವು ಪುನಃ ಪ್ರಾರಂಭಿಸಲ್ಪಡುವದೇ? ಎಂಬದಾಗಿ ಪ್ರತಿನಿಧಿಗಳು ಗಾಬರಿಗೊಂಡು ಕೇಳಿದ್ದಕ್ಕೆ, ಆತ್ಮರಕ್ಷಣೆಗೆ ಅವಶ್ಯವಿದ್ದಲ್ಲಿ ರಾಷ್ಟ್ರೀಯ ಸಭೆಯು ತಕ್ಕ ಉಪಾಯಗಳನ್ನು ಕಲ್ಪಿಸುವದೆಂಬ ಸಂದಿಗ್ಧ ಮಾತನ್ನು ಹೇಳಿದ್ದಾರೆ ಈ ಪ್ರಕಾರ ರೌಂಡ ಟೇಬಲ್ ಪರಿಷತ್ತಿನ ಭವಿಷ್ಯವು ಇದೀಗಲೇ ತಿಳಿದು ಹೋಯಿತು ರಾಷ್ಟ್ರೀಯ ಸಭೆಗೆ ಮನವೊಲಿಸದಿದ್ದರೆ, ಪರಿಷತ್ತಿನ ನಾಟಕವೆಲ್ಲ ಸಂಪೂರ್ಣವಾಗಿ ನಿರರ್ಥಕವೆಂದು ಎಲ್ಲರೂ ಬಲ್ಲಾದ ವಿಷಯ ಹಾಗಾ[illegible]ದಿನ ಕ್ರಮವೇನು? ರಾಷ್ಟ್ರೀಯ ಸಭೆ[illegible]ಟಿಕ್ಯ ಸಂಪಾದಿಸಲು ಘೋರ ಪ್ರತಿಜ್ಞೆ [illegible] ಟೇಬಲ್ ಪರಿಷತ್ತಿನಲ್ಲಿ ಮಹಾತ್ಮರ[illegible]ರದಿಂದ ಕಾರ್ಯಭಾ[illegible] [illegible]ಯ

ಪಂಡಿತ ಮಾಲವೀಯರೂ, ಸೌ॥ ಸರೋಜಿನಿಯವರೂ ಲಂಡನಿಗೆ ಹೋಗರು.

ಲಾಗಿದೆ. ಮುಂದಿನ ಕಾರ್ಯಕ್ರಮವೇನೆಂದು ಮಹಾತ್ಮರು ಹೇಳಲಿಲ್ಲ. ಪತ್ರಿಕಾ ಪ್ರತಿನಿಧಿಗಳು ಕೇಳಿದಾಗ್ಯೂ ಹೇಳಲಿಲ್ಲ. ಯಾವ್ಯಾವ ಕಷ್ಟ ಬರಲಿಕ್ಕಿದೆಯೋ ಏನೋ? ಮಹಾತ್ಮರು ನುಡಿದಂತೆ, ನಾವೆಲ್ಲರೂ ಪರಮಾತ್ಮನ ಕೈಯೊಳಗಿನ ಸೂತ್ರಗೊಂಬೆಗಳು. ಆತನು ಕುಣಿಸಿದಂತೆ ನಾವು ಕುಣಿಯಬೇಕು. ನಮಗೆ ಸ್ವಾತಂತ್ರ್ಯವಿಲ್ಲ. ಈ ಸಂಕೋಚವೇನೆಂದು ನಮಗೆ ತಿಳಿಯದ ಮಾತು. ಸಂಧಿ ಮುರಿಯಿತು, ಸಂಧಿಯಂತೆ ನಡೆಯಲು ಸರಕಾರಕ್ಕೆ ಮನಸ್ಸಿಲ್ಲ. ಇಷ್ಟೇ ಒಂದು ಮಾತು ಉಳಿದಿತು. ಮುಂದೆ ಕೊಂಗ್ರೆಸ ಕಾರ್ಯಕಾರಿ ಮಂಡಳವು ಈ ಸಂಕೇತದಂತೆ ಸ್ವಾತಂತ್ರ್ಯಪ್ರಾಪ್ತಿಗಾಗಿ, ಸ್ವರಾಜ್ಯಸಾಧನೆಗಾಗಿ ಏನೇನು ಉಪಾಯಯೋಜನೆ ಮಾಡುತ್ತದೆಂದು ಕೇಳುತ್ತಿರುವ! ಹಿಂದುಸ್ಥಾನದ ಪ್ರಾಣಕಲೆಯಾದ ಒಕ್ಕಲಿಗರಿಗೆ ಅಧಿಕಾರಿಗಳು ಪೀಡಿಸುವಾಗ, ರಾಷ್ಟ್ರಸಭೆಯು ತಟಸ್ಥ ನಿಂತುಕೊಂಡು ನೋಡಲಾರದಲ್ಲ. ಈ ಮಾತು ನಿಶ್ಚಯವಿದೆ. ನೋಡುವ ಮಹಾತ್ಮರು ಯಾವ್ಯಾವ ಉಪಾಯಗಳನ್ನು ಕಲ್ಪಿಸುತ್ತಾರೆಂದು?

ಮಹಾತ್ಮರು ನಡಿಸಿದ ಕೊನೆಯ ಪ್ರಯತ್ನಗಳು.

ಮಹಾತ್ಮರು ಮುಂಬಯಿ ಗವ್ಹರ್ನರರ ಕಡೆಯಿಂದ ಸಿಮ್ಲಾಕ್ಕೆ ಹೋಗುತ್ತಿದ್ದ ಉತ್ತರವು ಮಂಗಳವಾರ ಮುಂಬಾಯಿಗೆ ಕಾರ್ಯಕಾರಿ ಮಂಡಳದ ಸಭೆ ಸೇರುವ ಉತ್ತರವು ದೊರೆತ್ತಿದ್ದಿಲ್ಲ. ಗಾಂಧಿ-ಇರ್ವಿನ್ ಒಡಂಬಡಿಕೆಯು ಶಾಶ್ವತವಾದದ್ದು, ಕಿರ್ದಿ ಮದ್ದಲಿಗೆ ಸಂಬಂಧಪಟ್ಟದ್ದಲ್ಲ, ರಾಷ್ಟ್ರೀಯ ಸಭೆಗೆ ಆ ಒಡಂಬಡಿಕೆಯನ್ನು ಪಾಲಿಯಲ್ಲ ತರುವ ಅಧಿಕಾರವಿಲ್ಲ, ಮಹಾತ್ಮರು ಹೊರಿಸಿದ ಆರೋಪಗಳೆಲ್ಲ ನಿರಾಧಾರವಿವೆ; ಹೀಗೆ ಬರೆದಿತ್ತು. ಈ ಉತ್ತರ ನೋಡಿ ಮಹಾತ್ಮರಿಗೆ ಅಸಮಾಧಾನವಾಯಿತು. ಕೂಡಲೆ ಅವರು ಸರಕಾರಾಧಿಕಾರಿಗಳಿಗೆ ತಂತಿ ಮಾಡಿದರು. ಗಾಂಧಿ–ಇರ್ವಿನ್ ಒಡಂಬಡಿಕೆಯ ಅರ್ಥವನ್ನು ಗವ್ಹರ್ನರರು ಮಾಡಿದ್ದು ಸರಿಯಲ್ಲ, ಇದೇ ಅರ್ಥವನ್ನು ಹಿಂದುಸ್ಥಾನ ಸರಕಾರವು ಮಾಡುತ್ತದೇನೆಂದು ಮಹಾತ್ಮರು ಸರಕಾರಾಧಿಕಾರಿಗಳಿಗೆ ಮಂಗಳವಾರ ತಂತಿಯಿಂದ ಕೇಳಿದ್ದರು. ಅದಕ್ಕೆ ಗುರುವಾರ ಅಪರಾಹ್ನ ೨॥ ಘಂಟೆಗೆ ಉತ್ತರ ಬಂತು. ಕೂಡಲೆ ಮಹಾತ್ಮರು 'ಮಣಿ ಭವನ'ದಲ್ಲಿ ಕೊಂಗ್ರೆಸ ಕಾರ್ಯಕಾರಿ ಮಂಡಳದ ಸಭೆ ಸೇರಿಸಿದರು. ೨ ತಾಸುಗಳ ತನಕ ಚರ್ಚೆ ನಡೆದು ಸ್ವೀಕರಿಸಿದ ಠರಾವೇನಂದರೆ:— "ಹಿಂದುಸ್ಥಾನ ಸರಕಾರ ಹಾಗು ಬೇರೆ ಬೇರೆ ಪ್ರಾಂತಿಕ ಸರಕಾರಗಳೊಡನೆ ದಿಲ್ಲಿಯೊಳಗಿನ ಒಡಂಬಡಿಕೆಯ ಕುರಿತು ಮಹಾತ್ಮರು ನಡಿಸಿದ ಪತ್ರವ್ಯವಹಾರವನ್ನು ಕಾರ್ಯಕಾರಿ ಮಂಡಳವು ಪರಾಂಬರಿಸಿತು. ಹಾಗು ಪತ್ರವ್ಯವಹಾರಕ್ಕೆ ಕಾರಣವಾದ ಸಂಗತಿಗಳನ್ನು ಮಹಾತ್ಮರ ಕಡೆಯಿಂದ ಕೇಳಿಕೊಂಡಿತು. ದಿಲ್ಲಿ ಒಡಂಬಡಿಕೆಗೆ ವಿರುದ್ಧವಾಗಿ ಪ್ರಾಂತಿಕ ಸರಕಾರಗಳು ನಡಿಸಿದ ಅಪಕೃತ್ಯಗಳನ್ನು ತಿಳಿದು ಕಮಿಟಿಗೆ ವ್ಯಸನವಾಗುತ್ತದೆ. ಅವನ್ನು ತಿದ್ದ ಪಡಿ ಮಾಡಿಕೊಳ್ಳದಿದ್ದರೆ, ನಿಷ್ಪಕ್ಷ ವಿಚಾರ ಮಂಡಳವನ್ನು ನೇಮಿಸಿಕೊಂಡು ಒಡಂಬಡಿಕೆಯ ವಿರೋಧದಿಂದ ನಡೆದ ಅಪಕೃತ್ಯಗಳನ್ನು ವಿಚಾರಿಸಬೇಕಾಗಿಯೂ ಮಹಾತ್ಮರು ತಿಳಿಸಿದ್ದರು. ಇದಕ್ಕೆ ಕಾರ್ಯಕಾರಿ ಮಂಡಳವು ಸಮ್ಮತಿಸಿತ್ತು. ಈ ವಿಜ್ಞಾಪನೆಯನ್ನು ಸರಕಾರವು ಒಕ್ಕಲಿಗರ ವಿಷಯದಲ್ಲಿ ಸಹ ಧಿಕ್ಕರಿಸಿದೆ. ಕಾರ್ಯಕಾರಿ ಮಂಡಳಕ್ಕೆ ಈಗ ಬೇರೆ ಉಪಾಯವಿಲ್ಲ. ಒಡಂಬಡಿಕೆ ಮುಂತೆಯೂ, ರಾಷ್ಟ್ರಹಿತದ ದೃಷ್ಟಿಯಿಂದಲೂ ರೌಂಡ ಟೇಬಲ್ ಪರಿಷತ್ತಿನಲ್ಲಿ ರಾಷ್ಟ್ರೀಯ ಸಭೆಯು ಸೇರಬಾರದು; ಸೇರಬಾರದು.. [illegible] ಠರಾವನ್ನು ಕೇಳಿದೊಡನೆ 'ಮಣಿ ಭವನ'ವು ಇಳಿಸಿತು [illegible] ರದಾಗಿ ನಿಂತುಕೊಂಡಿತ್ತು. [illegible] ಮಹಾತ್ಮರಿಗೆ ಹಾಗೂ ರಾಷ್ಟ್ರೀಯ ಸಭೆಗೆ ವಿಜಯವಾಗಲೆಂದು [illegible]

ಬಳಿಕ ಮಹಾತ್ಮರು ಪತ್ರಿಕಾ ಪ್ರತಿನಿಧಿಗಳಿಗೆ ಕರೆದರು. ಲಂಡನಿಗೆ ಹೋಗುವದಿಲ್ಲವೆಂದು ನನಗೆ ಮೊದಲು ಆಘಾತವಾಗಿದೆ. ಇಷ್ಟು ಮಾತನ್ನು ಮಹಾತ್ಮರು ಹೇಳುವಷ್ಟರಲ್ಲಿ, ರಾಷ್ಟ್ರೀಯ ಸಭೆಯು ಠರಾವಿನಂತೆ, ಪಂಡಿತ ಮದನಮೋಹನ ಮಾಲವೀಯರವರೂ ಹೋಗುವದಿಲ್ಲವಾಗಿ ಟೆಲಿಫೋನ ವಾರ್ತೆ ಬಂತು. ಸೌ॥ ಸರೋಜಿನಿ ನಾಯುಡುರವರು ಹೋಗುತ್ತಾರೇನು? ಎಂದು ಒಬ್ಬ ವಾರ್ತಾಹರರು ಕೇಳಿದರು. ಅವರೂ ಹೋಗುವದಿಲ್ಲವಾಗಿ ಶ್ರೀ॥ ದೇವಿದಾಸ ಗಾಂಧಿಯವರು ನುಡಿದರು. 'ಎಲ್ಲರೂ ಒಂದೇ ದಾರಿಯವರು!' ಹೀಗೆ ಮಹಾತ್ಮರು ಉದ್ಗರಿಸಿ, ಪತ್ರಿಕೆಯವರಿಗೆ ನುಡಿದದ್ದೇನಂದರೆ:— "ಇರ್ವಿನ್ ದೊರೆಗಳಿಗೆ ಇದನ್ನು ತಿಳಿದು ಏನಾಗಲಿಕ್ಕಿಲ್ಲ ನಾನು ಬಲ್ಲೆ. ಆದರೆ ಇಂಗ್ಲಿಷ ಕಲೆಯವರಿಗೂ ಸಿಟ್ಟು ಬರಲಿಕ್ಕಿಲ್ಲ. ಆದರೆ, ಈ ನಿರ್ಣಯವು ಅಪರಿಹಾರ್ಯವಾಯಿತು. ನ್ಯಾಯಕ್ಕೆ ಗುಪದೆಂದು ನಾನು ಕೊನೆ ತನಕ ಪರೀಕ್ಷೆ ಮಾಡಿದೆ. ನನ್ನ ಹೇಳಿಕೆ ದೊರೆತದ್ದಿಲ್ಲ. ಸರಕಾರಕ್ಕೂ, ರಾಷ್ಟ್ರೀಯ ಸಭೆಗೂ ಒಂದು ಕರಾರಾಗಿತ್ತು. ಆ ಕರಾರಿನ ಅರ್ಥ ಕುರಿತು ಅದರ ಉಲ್ಲಂಘನೆಯ ಕುರಿತು ಮತಭೇದವಿದ್ದಲ್ಲಿ ಕೀರ ಕರಾರುಗಳಂತೆ ಅವರ ನಿರ್ಣಯವಾಗಬೇಕು. ಸರಕಾರಕ್ಕೂ, ರಾಷ್ಟ್ರಸಂಸ್ಥೆಗೂ ಇದು ಕರಾರಿದು. ಕರಾರು ಕಾಯಿದೆಯಂತೆ ಬಾಧ್ಯವಿದ್ದಲ್ಲಿ ಅದನ್ನು ನಿಷ್ಪಕ್ಷಪಾತಿ ನ್ಯಾಯಸ್ಥಾನದಿಂದ ವಿಚಾರಿಸುವ ಜವಾಬದಾರಿಯು ಸರಕಾರದ ಮೇಲೆ ನಿರ್ದೇಶಿಸಿದೆ. ಇದು ತೀರ ಸಾಮಾನ್ಯ ವಿಚಾರವಾಗಿತ್ತು. ಸರಕಾರಕ್ಕೆ ಇದನ್ನು ತಿರಸ್ಕರಿಸುವ ಬುದ್ಧಿ ಬಂತು. ಸಹಜವಾದ ಸೂಚನೆಯನ್ನು ಮನ್ನಿಸಲಾಗಲಿಲ್ಲ. ಇಂಥ ಪ್ರಸಕ್ತಿಯಲ್ಲಿ ರೌಂಡ ಟೇಬಲ್ ಪರಿಷತ್ತಿನಲ್ಲಿ ರಾಷ್ಟ್ರೀಯ ಸಭೆ ಸೇರುವದು ತೀರ ಅಪ್ರಸಕ್ತವಾದದ್ದು. ಇನಕ್ಕಿಂತ ಮಿಕ್ಕ ಈಗ ನಾನು ಹೇಳಲಾರೆ. ಕಾರ್ಯಕಾರಿ ಮಂಡಳವು ಅವಶ್ಯ ಪತ್ರಗಳನ್ನು ಪ್ರಕಟಿಸುವದಾಗಿ ನನಗೆ ತೋರುತ್ತದೆ. ಅದರ ಮೇಲಿಂದ ಜನರು ವಿಚಾರ ಮಾಡಬಹುದು. ಮುಂದೇನೆಂದು ನಾನು ಈಗ ಹೇಳಲಾರೆ. ಸರಕಾರಿ ಘೋರ ಈದ ಮೇಲೆ ಮುಂದಿನ ಕಾರ್ಯಕ್ರಮವು ಅವಲಂಬಿಸಿದೆ. ಸತ್ಯಾಗ್ರಹವನ್ನು ಇದೀಗಲೇ ಪ್ರಾರಂಭಿಸುವ ವಿಚಾರವಿಲ್ಲ. ನಾಳೆ ಶುಕ್ರವಾರ ರಾತ್ರಿಯಂದು ನಾನು ಅಹಮದಾಬಾದಿಗೆ ಹೋಗುತ್ತೇನೆ. ಒಡಂಬಡಿಕೆಯು ಜೀವನ್ಮೃತವಾದ್ದಾಗಲಿಲ್ಲ. ರೌ. ಟೇ. ಪರಿಷತ್ತಿನಲ್ಲಿ ರಾಷ್ಟ್ರಸಭೆಯು ಸೇರದ್ದರಿಂದ ಒಡಂಬಡಿಕೆ ಅಂತ್ಯವಾಯಿತೆಂದು ಎಣಿಸಲಾಗದು. ಉಗ್ರ ಉಪಾಯ ಕೈಕೊಳ್ಳಲು ರಾಷ್ಟ್ರೀಯ ಸಭೆಯು ಗಾಬರಿಪಡುವದಿಲ್ಲ. [illegible] ಮಹಾತ್ಮರ ಕಾದುಕೊಂಡು [illegible] ನಡೆಕೊಳ್ಳಲು ರಾಷ್ಟ್ರೀಯ ಸಭೆಯು ಯುಕ್ತ ಸಾಧನವು ತೀರ ಅವಶ್ಯವಾದ ಬಳಿಕ, ರಾಷ್ಟ್ರೀಯ ಸಭೆಯ ಆತ್ಮರಕ್ಷಣೆಯ ಉಪಾಯಗಳನ್ನು ಕೈಕೊಳ್ಳುವದು. ಇದೀಗಲೇ ಅಶಕ್ಯ ಪರಿಸ್ಥಿತಿ ಉಂಟಾಗಿರುವದಾಗಿ ನನಗೆ ತೋರುವದಿಲ್ಲ. ಸರಕಾರಾಧಿಕಾರಿಗಳ ಉತ್ತರದ ಸ್ವರೂಪವನ್ನು ನಾನು ಹೇಳಲಾರೆ. ಸರಕಾರಾಧಿಕಾರಿಗಳಿಗೆ ಪತ್ರಗಳನ್ನು ಪ್ರಕಟಿಸಲು ಅಪ್ಪಣೆ ಕೊಡಬೇಕಾಗಿ ತಿಳಿಸಿದ್ದೇನೆ" ಈ ಪ್ರಕಾರ ಮಹಾತ್ಮರು ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿದರು

ಶುಕ್ರವಾರ ಬೆಳಿಗ್ಗೆ ೮॥ ಘಂಟೆಗೆ ಪುನಃ ಕಾರ್ಯಕಾರಿ ಮಂಡಳವು ಸಭೆ ಸೇರುವದಿತ್ತು. ಮಹಾತ್ಮರು ಗುರುವಾರ ರಾತ್ರಿ ಅಹಮದಾಬಾದಿಗೆ ತೆರಳಿದಂತಾಗಿ ತಂತಿ ವಾರ್ತೆ ಬಂದಿದೆ

ಮುಂಬಯಿಯಲ್ಲಿ ಜವಳಿ ವ್ಯಾಪಾರಿಯ ವರ್ತಕ ಸಂಘದ ಸಭೆಯಾಗಿ, ಸಂಘದ ಹೇಳಿಕೆಯಂತೆ ಮಹಾತ್ಮರಿಗೆ ರೌಂಡ ಟೇಬಲ್ ಪರಿಷತ್ತಿಗೆ ನಿಮಂತ್ರಣ ದೊರೆತದ್ದರಿಂದ, ನಿಮಂತ್ರಿಸಲ್ಪಟ್ಟ ಸರ್ ಪುರುಷೋತ್ತಮದಾಸ ಠಾಕೂರದಾಸರವರು ಪರಿಷತ್ತಿಗೆ ಹೋಗಬಾರದಾಗಿ ಸಂಘದ ಅಪ್ಪಣೆಯಾದಂತೆ ಅವರೂ ಹೋಗುವದಿಲ್ಲ. ಈ ಪ್ರತಿನಿಧಿಗಳ ಗೈರಹಾಜರಿಯಲ್ಲಿ ರೌಂಡಟೇಬಲ್ ಪರಿಷತ್ತು ಕೈಕೊಂಡ ನಿರ್ಣಯವು ವರ್ತಕರಿಗೆ ಬಾಧಿಸಲಿಕ್ಕಿಲ್ಲವಾಗಿಯೂ ಸಂಘದ ಠರಾವು.

[೯ನೇ ಪಾನಿನಿಂದ ಮುಂದರಿಸಿದ್ದು]

ಗೋಧಿಯನ್ನು ಕೊಡದ ಹೊರತು ಪರಮಿಟ ಲೈಸನ್ಸು ಕೊಡುವದಿಲ್ಲ ಮಾಡಿದರು. ಗೋಧಿಯನ್ನು ಕಟ್ಟು ತುಂಬಿ ಪಡೆದರು. ಉಳಿದವರು ಗೋಧಿಯನ್ನು ಈ ವರ್ಷ ಕೊಡದೆ ಇದ್ದರಿಂದ, ಪರಮಿಟ ಲೈಸನ್ಸು ಸಿಗಲಿಲ್ಲ. ಮಂಗ್ಯಾ ಇದು ಜಂಗಲು ಪ್ರದೇಶ ಪರಮಿಟಿಯಿಲ್ಲದಿದ್ದರೆ, ಬೆಳೆ ಕೈಗೆ ಹತ್ತುವದು ಕಷ್ಟ. ಮೇಲಧಿಕಾರಿಗಳು ವಿಚಾರ ಮಾಡಿ ಶೀಘ್ರವೇ ಪರಮಿಟ ಲೈಸನ್ಸುಗಳನ್ನು ಕೊಡಬೇಕು

ಹಳಿಯಾಳ— ಅಲ್ಲಿಯ ಮಳೆ ಚೆಲೋ ಬೀಳುತ್ತಿದೆ. ತಾ. ೧೯ರ ತನಕ ೪॥ ಇಂಚು ಮಳೆ ಬಿತ್ತು. ಕೊಲೆರಾ ಬೇನೆ ತಗ್ಗಿದೆ ಮ್ಯುನಿಸಿಪಾಲಿಟಿ ಇಲೆಕ್ಷನಿನ ಗಡಬಿಡಿ ಶುರುವಾಯಿತು ೯ ಜಾಗೆಗಳಿಗೆ ೨೬ ಅರ್ಜಿಗಳು ದಾಖಲಾಗಿದ ಇಲೆಕ್ಷನ್ ಮೋಟಾಟ ನಡೆದು ಇದೆ. ತಾ. ೨೪ನೇಗೆ ಇಲೆಕ್ಷನು. ರಂಜಲ್ಯಾನ ಮಾರ್ಗಿಗೆ ೩ ಜಾಗೆಗಳಿಗೆ ೪ ಅರ್ಜಿಗಳು ಬಂದಿದ್ದವು. ಒಂದು ಅರ್ಜಿಯ ಮೇಲೆ ಸಹಿಯೇ ಇರಲಿಲ್ಲ; ಅದರಿಂದ ಅದು ರದ್ದಾಯಿತು ಉಳಿದ ಮೂವರ ರೊಟ್ಟಿ ತುಪ್ಪದಲ್ಲಿ ಬಿತ್ತು!

ಕಾರವಾರ— ತಾ. ೧೯ನೇ ಇಲ್ಲಿ ಮ್ಯುನಿಸಿಪಾಲಿಟಿ ಇಲೆಕ್ಷನು ನಡೆಯಿತು. ಚಲೋ ಮೋಟಾಮಿಕ್ತು ಆರಿಸಿ ಬಂದವರ ಹೆಸರುಗಳು.— ರಾ॥ ಶ್ರೀನಿವಾಸ ಭಾಜಿ, ರಾ॥ ಶಿರಸಾಠ ಪಾಲೇಕರ, ನಾರಾಯಣರಾವ, ಸದಾಶಿವ ಸುಬ್ಬ ನಾಯ್ಕ ಗಣೇಶ ಸೂರ್ಯಾಜಿ ಸಿಂಘೆ, ಡಾ॥ ವಿಟ್ಠಲ ಶಿಕ್ಕ್ಯಂವ್ ಶೇಣಪ್ರಾಸಾಂತಿನ್ನ ನಾಯಕ, ಶಂಕರ ಗೋವಿಂದ ಕಾಮತ, ಎಮ್. ಜಿ. ಕೊಸಬೇಕರ, ಪುರುಷೋತ್ತಮ ಪಯ್ಯ ಮಾಡ, ದತ್ತಾತ್ರಯ ಭಾಸ್ಕರ ನಾಡಕರ್ಣಿ, ಫ್ರಾನ್ಸಿಸ ಪಿಂಟೊ, ಡಿಸೋಜಾ, ಎಮ್. ಜಿ. ಚಂದಾವರ, ಎಸ್. ಸಿಲ್ವಾ, ರಾಜಾಸಾಹೇಬ ಎಮ್. ಟಿ. ಬೋರಕರ, ವಿ ಎಲ್. ಬಿಜಾಪುರ.

ಕುಂಭಾರವಾಡಾ— ಇಲ್ಲಿಯ ಮಾರ್ಗದ ಗಣಪಾಲನ ಹೆಂಡತಿಯು ಹೊಟ್ಟೆಯಲ್ಲಿ ಕಳವು ಆತು. ಆವಳಿಗೆ ತೀರಿಕೊಂಡಳು ಕೂಲಿಗಿತ್ತಿ ಮಾ ಡಾಕ್ಟರರು ಸಿಗಿಯಲ್ಲಿದ್ದರೆ ಅವಳು ಬದುಕುತ್ತಿದ್ದಳು. ಇಲ್ಲೊಂದು [illegible]

ಪ್ರಕೃತ ವಿಷಯ.

[ನಿನ್ನೆ ಪ್ರಕಟಿಸಿದ ಮುಂದರಿಸಿದ್ದು

ಉಳಿಯಿತು ಹಿಡಬೇಕು. ಒಡಂಬಡಿಕೆಯಂತೆ ಸರಕಾರವು ನಡೆಯುತ್ತಿಲ್ಲವೆಂಬ ಪ್ರಶ್ನೆಯ ಕುರಿತು ಬಹಳ ಪತ್ರವ್ಯವಹಾರ ನಡೆದಿದೆ. ಅಲ್ಲಲ್ಲಿ ಕಾಂಗ್ರೆಸ ಕಾರ್ಯಕರ್ತರಿಗೆ ಪೆಟ್ಟುಬಿದ್ದಿರುವುದೂ ನಿಜವೆ. ಅದು ಅಷ್ಟು ನನ್ನ ಆಕ್ಷೇಪವಿಲ್ಲ. ಅದಕ್ಕಾಗಿ ಒಡಂಬಡಿಕೆ ಮುರಿಯಿತೆಂದು ಹೇಳಲು ನಾನು ಸಿದ್ಧನಿಲ್ಲ. ಆದರೆ, ಸಂಯುಕ್ತ ಪ್ರಾಂತದೊಳಗಿನ ಕಿಸಾನ ಒಕ್ಕಲಿಗರ ಹಿತವನ್ನು ನಾನು ಸ್ವೀಕರಿಸಿದರೆ ಅವರು ಕ್ಷೇಮದಿಂದಿದ್ದರೆ, ರಾಷ್ಟ್ರೀಯ ಸಭೆ, ಇಲ್ಲದಿದ್ದರೆ ಪ್ರಯೋಜನವೇನು? ಅವರ ಹಿತವಾಗದೇ ಕಲ್ಯಾಣವಾಗದೇ, ಎಂಬುದರಿಂದಲೇ ರಾಷ್ಟ್ರೀಯ ಸಭೆಯು ಸ್ಥಾಪಿಸಲ್ಪಟ್ಟಿದೆ. ನಾನು [illegible]ಗಳಿಗೆ ಕಂಡ ಮುಂಬಯಿ ಗವರ್ನರ [illegible] ಗುಜರಾಥ ಒಕ್ಕಲಿಗರ ಸ್ಥಿತಿ [illegible] ಸಮಾಸುಖದಿಂದ ವಿಚಾರವಾಗುವದಾಗಿ ನನಗೆ ತಿಳಿಸಲ್ಪಟ್ಟಿದೆ. ವಿಚಾರವು ಆಚಾರದಲ್ಲಿ ಪರಿಣಮಿಸದ [illegible] ನೆ ಅದನ್ನು ನೋಡಿದ ನಾನು [illegible] ನೆ ಅವರಿಂದ ಉತ್ತರ ಬರುವ [illegible] ಕಾಂಗ್ರೆಸ ಕಾರ್ಯಕಾರಿ ಮಂಡಳದ [illegible] ವೃತ್ತಾಂತವನ್ನು [illegible] ಅವರು [illegible], ನಾನೂ ಹಾಗೆ ತಿಳಿಯುತ್ತೇನೆ. [illegible] ರಾಷ್ಟ್ರೀಯ ಮುಸಲ್ಮಾನರ ಸಭೆಯ [illegible] ನಾಯಕರ [illegible] ವ್ಯಸನವಾಗಿದೆ. ಹಿಂದು ಮುಸಲ್ಮಾನ ಕ್ರಿಶ್ಚನ [illegible] ಯಹೂದಿ ಮೊದಲಾದವರ [illegible] ಅವರ ಆಗತ್ಯಗಳಿಗೆ ನಾನೇ ಹೊಣೆಗಾರನೆಂದು ಭಾವಿಸುತ್ತೇನೆ [illegible] ಇಂಗ್ಲಿಷರಿಗೂ [illegible] ಅದಕ್ಕೆ ನಾನೇ ಹೊಣೆಗಾರನೆಂದು ನಂಬುತ್ತೇನೆ. ನಾನು ಯಾರಿಗೂ ನೋಯಿಸಲಿಲ್ಲ ಯಾರಿಗೂ ನೋಯಿಸುವುದಿಲ್ಲ. ಹೀಗೆ ನೀವು ನೋಡಬಹುದಾದ್ದರಿಂದ, ನಾನು ಲಂಡನಿಗೆ ಹೋಗಿ ಪ್ರಯೋಜನವೇನು? ನನ್ನಿಂದೇನೂ ಸಾಧ್ಯವಿಲ್ಲ. ನಾನು [illegible] ಬೇರೆ ಸಮಾಧಾನವನ್ನು [illegible] ಹೀಗೆ ಮಹಾತ್ಮರು [illegible] ಸಂಗತಿಗಳ ತಪ್ಪ [illegible] ನಿಂತರು, ಮುಂದೆ ಮಾತು ಹೊರಡಲಿಲ್ಲ, ಅವರಿಗೆ [illegible] ಯಿತು. ಸ್ವಲ್ಪ ಸಾವರಿಸಿಕೊಂಡು ಮಹಾತ್ಮರು ನುಡಿದರೇನೆಂದರೆ —"ಉಕ್ಕಿ ಬರುವ ಶೋಕವನ್ನು ನನ್ನಿಂದ ತಡೆಯಲಾಗಲಿಲ್ಲ. ನಾನು ಬಹಳ ಪ್ರಯತ್ನ ಮಾಡುತ್ತೇನೆ, ಬೇರೆ [illegible] ನಗೆಮೊಗದಿಂದ ಮಾತಾಡಲು ನಾನು ಪ್ರಯತ್ನಿಸುತ್ತೇನೆ. ಆದಾಗ್ಯೂ ನನ್ನಿಂದ ತಡೆಕೊಳ್ಳಲಾಗುವದಿಲ್ಲ. ನಿರಪರಾಧಿಗಳಿಗೆ ಕೊಡುವ ಪೀಡೆಯನ್ನು ನೋಡಿ ನನಗೆ ಅತ್ಯಂತ ಮನೋವ್ಯಥೆಯಾಗಿದೆ. ರೌಂಡ ಟೇಬಲ್ ಪರಿಷತ್ತಿಗೆ ನಾನು ಹೋಗದಿದ್ದರೆ, ಇರ್ವಿನ್ ದೊರೆಗಳ ಎದೆ ಹಾರುವದು, ವಚನಭಂಗವಾಯಿತೆಂದು ಜನರು ಹೀಯಾಳಿಸುವರು. ನಾನು ಪಠಾಣ [illegible] ಈ

ಯಾದಪಿಯನ್ನು ನಾನು ನೋಡಬಲ್ಲೆ, ಸ್ವಕೀಯರಾದ ಹಿಂದುಗಳಂತೆಯೇ ಮುಸಲ್ಮಾನರಿಗೆ ನಾನು ಪ್ರೀತಿಸುತ್ತೇನೆ. ನನ್ನ ಹೃದಯದಲ್ಲಿ ಅಷ್ಟೇ ಪ್ರೇಮವು ತುಳುಕುತ್ತಿದೆ. ನಿಮಗೆ ನಾನು ಹ್ಯಾಗೆ ಮನಗಾಣಿಸಲಿ? ಹೊಟ್ಟೆ ಸೀಳಿ ನೋಡಬಯಸುತ್ತಿದ್ದರೆ, ಹಾಗೆ ಮಾಡಿ ನೋಡಿದರೆ ಹಿಂದು ಮುಸಲ್ಮಾನ ಕ್ರಿಶ್ಚನ ಪಾರ್ಸಿಗಳಿಗೆ ಬೇರೆ ಬೇರೆ ಸ್ಥಳಗಳನ್ನು ನಾನಿಟ್ಟಿಲ್ಲ, ಎಲ್ಲರೂ ನನಗೆ ಸಮಾನರೇ. ಇವನ್ನೆಲ್ಲ ನೋಡಿದರೆ, ನಾನು ಲಂಡನಿಗೆ ಹೋಗಬಾರದೆಂದೆನಿಸುತ್ತದೆ. ನಾನಿಪ್ರೇತ ಇಷ್ಟೇನೆ. ಪರಮಾತ್ಮನು ನನಗೆ ಮುಂದೆ ಮಾಡಿ ಹಿಂದುಸ್ಥಾನದಲ್ಲಿ ಜಾಗೃತಿ ಹುಟ್ಟಿಸಿದನು. ಜನರ ಅವಶ್ಯಕಗಳಿಗೆ ನಾನು ಹೊಣೆಗಾರನಿದ್ದೇನೆ. ಅಂತ [illegible] ನಾನು ಹೋಗುವದಿಲ್ಲ. ಈಗ ಹೋಗುವದು ಅಸಮಾಧಾನಕ್ಕೆ, ಹೋಗುವದಕ್ಕಾಗಿ ನಾನು ಪರಮಾವಧಿಯ ಪ್ರಯತ್ನ ಮಾಡುವೆನು. ರಾಷ್ಟ್ರೀಯ ಸಭೆಗೆ ಸಂಧಿ ಬೇಕು, ಸಂಗ್ರಾಮ ಬೇಡ. ಸಂಯುಕ್ತ ಪ್ರಾಂತ ಹಾಗು ಗುಜರಾಥದೊಳಗಿನ ಒಕ್ಕಲಿಗರು ಸತ್ಯಾಗ್ರಹದಲ್ಲಿ ಬಹಳ ನಷ್ಟ ಹೊಂದಿದ್ದಾರೆ. ಅವರ ಹಿತದ ಯೋಗಕ್ಷೇಮಕ್ಕೆ ವಿಚಾರ ಮಾಡಲು ಗಾಂಧಿ—ಇರ್ವಿನ್ ಒಡಂಬಡಿಕೆಯಂತೆ ಸರಕಾರವು ಬದ್ಧವಿದೆ. ಒಕ್ಕಲಿಗರ ಪ್ರಶ್ನೆಯು ಒಡಂಬಡಿಕೆಗೆ ಬಿನ್ನವಾಗಿ ಶ್ರೀ| ಸತ್ಯಮೂರ್ತಿಗಳು ಹೇಳುವದು ತಪ್ಪು. ಈ ಮಾತನ್ನು ಶ್ರೀ| ಸತ್ಯಮೂರ್ತಿಗಳು ತಿಳಿದುಕೊಳ್ಳಬೇಕು ಬಿಡೆಯಿಂದ.

ಪ್ರಶ್ನೆಯನ್ನೇ ನೆಪಮಾಡಿಕೊಳ್ಳಬೇಕಾಗಿ [illegible] ಮಂಡಳದ [illegible] ವಿಚಾರ ಮಾಡಿ ತಿಳಿಸಿದೆ. ಈ ಪ್ರಕಾರ ಒಬ್ಬರೇ ರಾಯಭಾರಕ್ಕಾಗಿ ಕಳಿಸಿದ [illegible] ಅನುಕೂಲವಿದೆ. ರೌಂಡ ಟೇಬಲ್ ಪರಿಷತ್ತಿನಲ್ಲಿ ಚರ್ಚೆ ಮಾಡಲು ಹೋಗುವದಿಲ್ಲ, ಚರ್ಚೆ ಮಾಡುವದಕ್ಕೆ, ನನ್ನ ಗೆಳೆಯರು, [illegible] ಈಗ [illegible] ಅಂತರಂಗದಲ್ಲಿ ಎಲ್ಲ ಕೆಲಸ ವ್ಯವಸ್ಥೆಯಾಗಿ ಬೇರೆಂಬುದರಿಂದ ಅದನ್ನು ಪುನಃ ಪುನಃ ವಿವೇಚನೆ ನಡೆಯುತ್ತಲೆ ವಾದ-ವಿವಾದ-ವಾಗ್ವಾದಗಳಿಂದ [illegible] ಗಳ ಭವಿಷ್ಯತೆಯನ್ನು ನಿರ್ಣಯಿಸುವದು ಡಾ| ಅನ್ಸಾರಿಯವರಿಗೆ ನಿಮಂತ್ರಣವಿಲ್ಲ. ಅವರಿಗೆ ನಾನು ಕಲ್ಪಿಸಿದಂತೆ ರಾಷ್ಟ್ರೀಯ ಸಭೆಯ ಪ್ರತಿನಿಧಿಯನ್ನಾಗಿ ಮಾಡ ಕರೆದೊಯ್ಯಲಾರೆ. ಅವರ ಸಾಮಾನ್ಯ ಪ್ರತಿನಿಧಿಯಲ್ಲ, ಅವರ ಹೆಸರು ಮುಂಬಯಿಯಾದ ಪುರುಷೋತ್ತಮ, ಪಂಡಿತ ಮಾಲವೀಯರವರೂ, ಸರೋಜಿನಿ ದೇವಿಯವರೂ ರಾಷ್ಟ್ರೀಯ ಸಭೆಯ ಪ್ರತಿನಿಧಿ. ಪಂಡಿತ ಮಾಲವೀಯರವರು ವಯೋವೃದ್ಧರಿದ್ದು [illegible] ವರಿಗೆ ನನ್ನ ಕೈಕೆಳಗೆ ನಡೆಸಿಕೊಂಡು ಹೋಗಲು ನಡೆಸಲು ನಾನು ಅಷ್ಟು ದೊಡ್ಡವನಲ್ಲ. ಅವರೀರ್ವರೂ ಸ್ವತಂತ್ರ ಹಕ್ಕಿನಿಂದ ರೌಂಡ ಟೇಬಲ್ ಪರಿಷತ್ತಿನಲ್ಲಿ ಸೇರಿ ಕೆಲಸ ಮಾಡುವರು." ಈ ಪ್ರಕಾರ ಮಹಾತ್ಮರ ಭಾಷಣವಾದ ಬಳಿಕ, ಶ್ರೀ| ಸತ್ಯಮೂರ್ತಿಗಳು ತಮ್ಮ ಠರಾವುಗಳನ್ನು ಹಿಂತೆಗೆದುಕೊಂಡರು — "ನನಗೆ ಸಮಾಧಾನವಾಗಿಲ್ಲೆಂದೂ ಹೇಳಲಾರೆ, ವಾಯಿತೆಂದೂ ಹೇಳಲಾರೆ. ಅನುಮಾನ ಶೋಕನಾಯಕರಿಗಾಗಿ ನಾವು ಬಹಳ ಪ್ರಾರ್ಥನೆ ಮಾಡಬೇಕು" ಹೀಗೆ ಶ್ರೀ| ಸತ್ಯಮೂರ್ತಿಗಳು ನುಡಿದರು. ಆ ಮೇಲೆ ಲಂಡನಿನೊಳಗಿನ ರಾಷ್ಟ್ರೀಯ ಸಭೆಯ ಶಾಖೆಯ ಮನ್ನಣೆಯನ್ನು ರದ್ದುಪಡಿಸುವ ಕಾರಣವನ್ನು ಪಂಡಿತ [illegible]

ದರು ಸಭೆಯಲ್ಲಿ ಇದರಂತೆ ಠರಾವಾಗಿ ಅಖಿಲ ಭಾರತೀಯ ಕಾಂಗ್ರೆಸ ಕಮಿಟಿಯ ಅಧಿವೇಶನವು ಶನಿವಾರ ಸಾಯಂಕಾಲ ಕೊನೆಗಂಡಿತು.

ಸ್ಥಾನಿಕ ವೃತ್ತಾಂತ.

ಕುಮಟಾ— ಆಶ್ಲೇಷಾ ನಕ್ಷತ್ರದ ಮಳೆ ಹಿಡಿದಿತು, ದಣಿಸಿತು. ತೋಟಗಳು ಮಳೆಯ ಅಬ್ಬರ ನೋಡಿ ಬೆದರಿ ಹೋಗಿದ್ದಾರೆ. ವಿಪರೀತ ಕೊಳೆ ರೋಗ ನೆಲೆ ಕಟ್ಟುತ್ತದೆ. ಇಳಿಯುತ್ತಿದ್ದ ಇಳಿಯುತ್ತಿದ್ದ ಕಟ್ಟುತ್ತಿದ, ಅದೇ ಕ್ರಮ ನಡೆದಿದೆ ಸ್ವಲ್ಪ ಬಿಸಿಲು, ಬಹಳ ಮಳೆ! ಇದರಿಂದ ಗದ್ದೆ ಬೆಳೆ ಸಹ ಕಟ್ಟಿತು. ಗಜನಿ ಬೆಳೆ ಹುಟ್ಟುವದು ಕಷ್ಟ. ರೈತರು ಮರುಗುತ್ತಿದ್ದಾರೆ. ಜ್ವರ, ಕೆಮ್ಮು, [illegible] ಮೊದಲಾದ ವಿವಿಧ ರೋಗಗಳ ಈ ವಾರದಲ್ಲಿ ೧೦—೩೫ ಇಂಚು ಮಳೆ ಈ ತನಕ ಒಟ್ಟು ೧೨೪—೭೦ ಇಂಚು ಮಳೆಯಾಯಿತು.

ಮ್ಯುನಿಸಿಪಾಲಿಟಿಯ ಇಲೆಕ್ಷನಿನ ಗೊಂದಲವು ಅಂತು ಬುಧವಾರಕ್ಕೆ ಮುಗಿಯಿತು ೧ನೇ ವಾರ್ಡಿನಲ್ಲಿ ಈ ಹಿಂದೆ ಹೇಳಿದ ಮೂವರು ಉಮೇದ್ವಾರರು ಎದುರಾಳಿಗಳಿದ್ದರು. [illegible] ವಾರ್ಡಿನಲ್ಲಿ ಬುಧವಾರ ೪-೪|| ಘಂಟೆಯ ತನಕ ಬಹಳ ಜೋರಾಯಿತು. ಮತದಾರರಿಗೆ ಎಳೆಯುವದು, ಆತ್ಮೀಯ ಮತದಾರರ ಕಡೆ ಚೀಟಿ ಬರೆಯುವದು ಮೊದಲಾದ ಪ್ರಕಾರಗಳು ನಡೆದವು [illegible] ಹೋಗಿ ಕೈ ಸಹ ಮುಂದಾಯಿತು. ಈ ಪ್ರಂಪಾಟೆಯ ಮೂಲಕ ಒಬ್ಬ ಉಮೇದ್ವಾರರು ಡಿ| ಮ್ಯಾಜಿಸ್ಟ್ರೇಟರಿಗೆ ತಂತಿ ಸಹ ಕೊಟ್ಟರು. ಕಾವಲಿಗಿದ್ದ ಪೋಲೀಸರು ಅಧ್ಯಕ್ಷರ ಅಪ್ಪಣೆಗೆ ವಿರೋಧವಾದ ಮತದಾರರನ್ನು ಒಳ್ಳೆದು ಮಾಡುವ ಪೋಲೀಸ ಸ್ಟೇಶನಿಗೆ ಹೋಗಬಹುದಲ್ಲ [illegible] ದಾರರು ಬಂದು ಬುದ್ಧಿ ಹೇಳಿದ ಬಳಿಕ, ಇಲೆಕ್ಷನು ಸರಿಯಾಗಿ ನಡೆಯಿತು. [illegible] ಗುರುವಾರ ಮುಂಜಾನೆ ಮೂರು ಘಂಟೆ ಕಾಲ [illegible] ೯-೯|| ಘಂಟೆಗಾಗಿ ಬೇಲಿ ಇಳಿಸಿ ಕೆಳಹೋದ ಮಾಡಿಕೊಂಡು ಮಾಡಿಗೆ ಬರುವ ಮಾಡಿತು. ಇದರಿಂದ ರಾ| ಸ್ವಪ್ನನಾಥ ಪ್ರಭು ರಾ| ರಾಮಕೃಷ್ಣ ಮಂಜುನಾಥ ಕಾಮತ ರಾ| ಮಂಗೇಶ ನಾರಾಯಣ ವಿಜಯನಗರ ಇವರು ಪ್ರತಿಸ್ಪರ್ಧಿಗಳಿಲ್ಲದೆ ಆರಿಸಿ ಬಂದರು. ೩ನೇ ವಾರ್ಡಿನಲ್ಲಿ ಒಬ್ಬ ಸಭಾಸದರ ಜಾಗೆಗೆ ನಾಲ್ವರು ಉಮೇದ್ವಾರರಿಗ ನಿಂತಿದ್ದರು. ಅವರಲ್ಲಿ ಇಬ್ಬರು ಹಿಂತೆಗೆದುಕೊಂಡಾಗ್ಯೂ [illegible] ಪೋಲೀಸ ಅಧಿಕಾರಿಯಾದ ಅಧ್ಯಕ್ಷರಾದ ರಾ| ಅಣ್ಣಪ್ಪ [illegible] ಕ್ರೆಮೋಟೋರಿಯಮ್ ಮಾಡಿದಾಗ್ಯೂ ರಾ| ಅಣ್ಣಪ್ಪನವರ ಇಲೆಕ್ಷನು ನಡೆಯಬೇಕಾಗಿ ಹೋಯಿತು. ಕೊಟ್ಟಂತೆ ಇಲೆಕ್ಷನು ನಡೆಯಿತು. ಇದ್ದಂತೆ ಇಲೆಕ್ಷನು ನಡೆಯಿತು. ರಾ| [illegible] ಡಾ| ಕೃಷ್ಣನ ಶ್ಯಾನಭಾಗ, ರಾ| ಸೀತಾರಾಮ ಗಣಪತ [illegible] ಆರಿಸಿ ಬಂದರು. ೪ನೇ ವಾರ್ಡಿನಲ್ಲಿ ಅಧ್ಯಕ್ಷರಾದ ರಾ| ಅಣ್ಣಪ್ಪನ ಉಮೇದ್ವಾರರು ಪೋಲೀಸ ಅಧಿಕಾರಿ [illegible] ಅಳಿಯಂದಿರು [illegible] ಹೋಗುವ ಪೋಲೀಸ ಅಧಿಕಾರಿ [illegible] ಜನ ಮೇಲೆ ಸುತ್ತುಮುತ್ತ ಅಣ್ಣಪ್ಪನ [illegible] ನಿಂತುಕೊಂಡು ಇಲೆಕ್ಷನು ನಡೆಸುತ್ತಿದ್ದರು [illegible] ಮತದಾರರ ಕಡೆಗೆ ಬಿಲ್ಲೆ-ಧ್ವಜ ಚಿನ್ಹಗಳನ್ನು ಹಚ್ಚಿಕೊಂಡು ಅದರ [illegible] ನಡೆಸುವ [illegible] ನಡೆದಿತ್ತು. ಮೋಟಾರ ನೋಡುವ [illegible] ಲಿಂಗ ಅಧಿಕಾರಿ [illegible] ಗಳನ್ನು ಅವ್ಯಕ್ತ ಕೊಡದಲ್ಲಿ ಹಾಕುತ್ತಿದ್ದರು [illegible] ರಾ| ಅಣ್ಣಪ್ಪನ ಹೇಳಿಕೆ ಮೇರೆಗೆ ಪೋಲೀಸ [illegible] ದ್ದರಿಂದ ಅವರಿಗೆ ಮನೆಯಲ್ಲಿ ಒಂದಿಷ್ಟು ಸಂಗತಿಯನ್ನು [illegible] ಪೋಲೀಸ [illegible] ಕೊಡಲಿ [illegible] ನಗೆ ಮಿಡುಕಾಗಿ ಅಪ್ಪಣೆ ಮಾಡಿದರ [illegible] ನೌಕರರೂ ಅರ್ಜುನ [illegible] ನ್ನು [illegible] ಮಾಡುವದಕ್ಕಾಗಿ [illegible] ನು [illegible] ಪೋಲೀಸ

[illegible]

ಹೊನ್ನಾವರ— [illegible]

[illegible]

ಭಟಕಳ— [illegible]

ಶಿರಸಿ— [illegible]

ಸಿದ್ದಾಪುರ— [illegible]

ಅಂಕೋಲಾ— [illegible]

[ಮುಂದಿನ ಪಾನಿನ ಮೇಲೆ ಮುಂದುವರಿದಿದೆ]

ಈ 'ಜೆಂ ಸಿಸ್ಟಂ ಆಫ್ ಕಟ್ಟಿಂಗ್'ಗಿಂತ

ಸುಲಭವಾದ ಸ್ವಭಾವದ ಪುಸ್ತಕವು ಎಲ್ಲಿಯೂ ದೊರೆಯುವದಿಲ್ಲ.



ಹೆಂಗಸರು ಮತ್ತು ಹುಡುಗರು [illegible] ಯಾರಾದರೂ ಉಡುಪುಗಳನ್ನು ಹೊಲಿಯಲಿಕ್ಕೆ ಶಾಸ್ತ್ರರೀತಿಯಿಂದ ತಪ್ಪಿಲ್ಲದೇ ಕತ್ತರಿಸುವದನ್ನು ಬೋಧಿಸುತ್ತವೆ. ನಕ್ಷೆಗಳ ಸಹಿತ ಪ್ರತ್ಯೇಕ ಬೆಲೆ ರೂಪಾಯಿ ೩ ಟಪಾಲು ಖರ್ಚು ೫ ಆಣೆ

Rao's Tailoring College,
143, Princess street, BOMBAY 2

ಅಲ್ಲಲ್ಲಿ ಇಷ್ಟಿಷ್ಟು

[ಕನ್ನೇ ಮಾಡಿಸಿದ ಪಂಚವರಸಿಸ್ತು]

ವರ್ಷದ ಎಲ್ಲಕ್ಕಿಂತಲೂ [illegible] ಅದಕ್ಕೆ ಬೆಲೆಯಿಲ್ಲ. [illegible] ಪರ್ಷಿಯನ್ನರ [illegible] ಮನುಷ್ಯ [illegible] ಸಂಕಲಾತರು, [illegible] ಇಂಗ್ಲಿಷ [illegible] ಶ್ರೀಮಂತ [illegible] ಮ್ಯಾಕ [illegible] ೩೦೦೦ [illegible] ವರ್ಷ [illegible] ನನ್ನ [illegible] ವರ್ಷ [illegible]; [illegible] ನವರು [illegible] ಪ್ರಿಯ ಸ್ವರೂಪ ಅದೇ!

***

[illegible] ಮಂಗಳವಾರ [illegible] [illegible] [illegible] ನನ್ನ [illegible] ಹೀಗವರ ಹೇಳಿದರು. [illegible] ಭವಿಷ್ಯವು [illegible] ಈ ಭವಿಷ್ಯವನ್ನು [illegible] ಹಿಂದೆಯೇ [illegible] ಇರು ಕೇಳಿದರು!

Siromani Udipi Narayanacharya
CHAUKHAMBA, BENARES CITY.

SUN & CO
BENARES CITY

[illegible] ಸ್ವಪ್ನವಾದ [illegible] [illegible] ಶ್ರೀ 109 ಸರ 1ಕ್ಕೆ 0-6-0 ಯಿಂದ 10 ರೂಪಾಯಿ ವರೆಗೆ [illegible] ಆಗುತ್ತ ಕ್ರಯ [illegible] 32 [illegible] ರೂ.0 [illegible] 100. ವರೆಗೆ [illegible] 1ಕ್ಕೆ ರೂ. 3-8-0 [illegible] 3 [illegible] ವರೆಗೆ ಮತ್ತು [illegible] ಅಪೇಕ್ಷಿಸುವವರು 0-1-0 [illegible] 1 [illegible] 1 [illegible] [illegible].—

ಶಿರೋಮಣಿ ನಾರಾಯಣಾಚಾರ್ಯ
ಚೌಖಂಬಾ, ಕಾಶೀ ಕ್ಷೇತ್ರ.

ಅಕ್ಟೋಬರ [illegible] ಮಹಾತ್ಮರ ವರ್ಧಂತಿ ಆ ದಿನ ಮಹಾತ್ಮರಿಗೆ [illegible] ಕೋಟಿ [illegible] [illegible] ಕಾಂಗ್ರೆಸ ಕಮಿಟಿಗಳು ಸಂಕಲ್ಪ ಮಾಡಿವೆ ಪ್ರತಿ [illegible] ಸಂಕಲ್ಪದಂತೆ [illegible] ಮಹಾತ್ಮರ ಮೇಲೆ ಭಕ್ತಿಯಿರುವ ಜಿಲ್ಲೆಯವರೆಲ್ಲರೂ [illegible] ಕಾಂಗ್ರೆಸ [illegible] ವಿದ್ಯಾರ್ಥಿಗಳು [illegible] ಕಾರ್ಯದರ್ಶಿಗಳ [illegible] ಈ ಜಿಲ್ಲೆಯ ಜಿಲ್ಲಾ ಕಾಂಗ್ರೆಸ ಕಮಿಟಿಗಳು [illegible] ದನ್ನು ಅನುಕರಿಸಬಹುದು.

***

[illegible] ಪ್ರಾಂತದ [illegible], ಗೋಗ್ರಾ, [illegible], ಮೈಮನಸಿಂಗ, ಢಾಕಾ ಮೊದಲಾದ ಜಿಲ್ಲೆಗಳಲ್ಲಿ ಬ್ರಹ್ಮಪುತ್ರಾ ನದಿಯ ನೆರೆಯಿಂದ ಮನೆಮಾರು ಬೆಳೆದು [illegible] ಮರಗಳ ಮೇಲೆ [illegible] ಜನರು [illegible]. ಕೆಲವರು [illegible] ಜೀವ ಬದುಕಿಸಿಕೊಂಡರು. [illegible] ಹೊಟ್ಟೆಗೆ [illegible] ಕಷ್ಟಕಾಲ! ಎಲ್ಲಿ ನೋಡಿದರಲ್ಲಿ ಕಷ್ಟವೇ!

ಆಯುರ್ಧನ್ವಂತರಿ ಔಷಧಾಲಯ, ಕುಮಟಾ.

ನಮ್ಮಲ್ಲಿ ಆಯುರ್ವೇದ ಪದ್ಧತಿಯಿಂದ ಶಾಸ್ತ್ರೋಕ್ತ ತಯಾರಿಸಿದ ಔಷಧಗಳು ಮಾರಾಟಕ್ಕೆ ಸಿದ್ಧವಿರುವವು. ಬೇಕಾದವರು ತರಿಸಿಕೊಂಡು ಅನುಭವ ಪಡೆಯಬೇಕು

ಚ್ಯವನಪ್ರಾಶಾವಲೇಹ— ರತ್ತಲ ೧ಕ್ಕೆ	ರೂ. ೨-೮-೦
ಅಶ್ವಗಂಧಿಮಿಶ್ರ ಕುಷ್ಮಾಂಡ [illegible]— ರತ್ತಲಕ್ಕೆ	ರೂ ೨-೮-೦.
ಮಹಾ ನಾರಾಯಣ ತೈಲ— ೬೦ ತೊಲೆ ಬಾಟ್ಲಿಕ್ಕೆ ...	ರೂ. ೬-೦-೦
ಹಿಮಸಾಗರ ತೈಲ— ೬೦ ತೊಲೆಗೆ	ರೂ ೬-೦-೦
ಬೃಹದ್ ಭೃಂಗರಾಜ ತೈಲ— ೬೦ ತೊಲೆಗೆ	ರೂ ೩-೦-೦.

ಆರ್ಡರಿನ ಜೊತೆಗೆ ಅರ್ಧ ದರ ಕಳಿಸಬೇಕು ರೋಗಿಗಳು ತಮ್ಮ ಪ್ರಕೃತಿಮಾನ ಸವಿಸ್ತರವಾಗಿ ಬರೆದು ತಿಳಿಸಿದಲ್ಲಿ ಯೋಗ್ಯ ಔಷಧಗಳು (ಅನುಪಾನ ಸಹಿತ) ಕಳುಹಿಸಿಕೊಡಲಾಗುವದು.

ನಮ್ಮ ಪತ್ತೆ:- ಸಿ. ಅಚ್ಯುತ ಪಂಡಿತ,
ಆಯುರ್ಧನ್ವಂತರಿ ಔಷಧಾಲಯ, ಕುಮಟಾ

ಬಿನ್ಯಾಯತ್ರಿಯ ಪಠ್ಯ ಪುಸ್ತಕ.

ಮೈಸೂರು ಮಹಾರಾಜರ ಆಸ್ಥಾನ ವಿದ್ವಾನ್ ಕರ್ನಾಟಕ ಭಾಷಾರತ್ನಂ
ಸಿ. ಆರ್. ಕರಿಬಸವ ಶಾಸ್ತ್ರಿಗಳಿಂದ ರಚಿಸಲ್ಪಟ್ಟ

ಸಚಿತ್ರ ಕರ್ನಾಟಕ ಬಾಲಬೋಧೆ.

ಭಾಗ ೧.
ಮುಂಬಯಿ, ಮದರಾಸು ಮತ್ತು ಮೈಸೂರು ಸರಕಾರಗಳ
ವಿದ್ಯಾಖಾತೆಯ ಅಧಿಕಾರಿಗಳಿಂದ ಪಠ್ಯ ಪುಸ್ತಕ-ಪಟ್ಟಿಗೆ ಒಳ್ಳಾಗಿ ಮಂಜೂರಾಗಿದೆ

ಧಾರವಾಡ ಡಿಸ್ಟ್ರಿಕ್ಟ ಸ್ಕೂಲ ಬೋರ್ಡ. ಧಾರವಾಡ ಮತ್ತು ಹುಬ್ಬಳ್ಳಿಯ ಮ್ಯುನಿಸಿಪಲ್ ಸ್ಕೂಲ ಬೋರ್ಡ, ಬೆಳಗಾಂವಿ ಡಿಸ್ಟ್ರಿಕ್ಟ ಸ್ಕೂಲ ಬೋರ್ಡ ಇವುಗಳ ಅಧೀನದಲ್ಲಿರುವ ಎಲ್ಲಾ ಪ್ರಾಥಮಿಕ ಶಾಲೆಗಳ ಉಪಯೋಗದಲ್ಲಿದ್ದು, ಕಾರವಾರದ ಡಿಸ್ಟ್ರಿಕ್ಟ ಸ್ಕೂಲ ಬೋರ್ಡಿನವರು ತಮ್ಮ ಅಧೀನದಲ್ಲಿರುವ ಎಲ್ಲಾ ಶಾಲೆಗಳಲ್ಲಿ ಈ ಪುಸ್ತಕವನ್ನು ಉಪಯೋಗಿಸಲು ಮಂಜೂರ ಮಾಡಿರುತ್ತಾರೆ ಅಲ್ಲದೆ, ಈ ಬಗ್ಗೆ ಎಲ್ಲಾ ಶಾಲಾ ಮಾಸ್ತರರಿಗೂ ಸರ್ಕ್ಯುಲರ ಹೋಗಿದೆ.

“ನೈರ ಬಿನ್ಯಾಯ” ಮತ್ತು “ನೋಡಿ ಹೇಳುವ” ಎಂಬೆರಡು ಮಿಶ್ರ ಕ್ರಮಗಳ ಆಧಾರದ ಮೇಲೆ ಅಕ್ಷರೋಚ್ಚಾರಣೆಯನ್ನು ಮಾಡಿಸುವದು, ದ. ರ. ಈ ಕ್ರಮ ಹಿಡಿದು ಅಕ್ಷರ ರಚನೆಯನ್ನು ಮಾಡಿಸುವದು ಈ ಪುಸ್ತಕದ ಧ್ಯೇಯವಾಗಿರುತ್ತದೆ ಇದರಿಂದ ಮಕ್ಕಳಿಗೆ ಅಕ್ಷರಾಭ್ಯಾಸ ಮಾಡಿಸಲು ಅತ್ಯಂತ ಯೋಗ್ಯವಾಗಿದೆ. ಮತ್ತು ಈ ವರೆಗೆ ಪ್ರಚಾರದಲ್ಲಿರುವ ಎಲ್ಲಾ ಬಾಲಬೋಧಗಳಿಗಿಂತಲೂ ಈ ಬಾಲಬೋಧೆಯು ಹೆಚ್ಚು ಸುಧಾರಣ ಉಳ್ಳದ್ದಾಗಿದೆ ನಮ್ಮಲ್ಲಿ ಅನೇಕ ವಿಧವಾದ ಪುಸ್ತಕಗಳು ದೊರೆಯುತ್ತವೆ.

೭೨ ಪುಟಗಳುಳ್ಳ ಈ ಪುಸ್ತಕದ ಕ್ರಯ ೦-೨ ಆಣೆ ಮಾತ್ರ!
ಪುಸ್ತಕ ವ್ಯಾಪಾರಿಗಳಿಗೆ ಯೋಗ್ಯ ಕಮಿಶನ್ ದೊರೆಯುತ್ತೆ.
ಎಲ್ಲಾ ಪುಸ್ತಕ ವ್ಯಾಪಾರಿಗಳಲ್ಲೂ, ಕೆಳಗಿನ ವಿಳಾಸದಾರರಲ್ಲೂ ದೊರೆಯುವದು:—
ಇಡೀ ಬೊಂಬಾಯಿ ಕರ್ನಾಟಕ ಸೋಲ ಡಿಸ್ಟ್ರಿಬ್ಯೂಟರ್ ಏಜಂಟ,
ವಿ. ಆರ್. ಶಿವನಾಂಗ[illegible] ಮ್ಯಾನೇಜರ,
ವಾಗ್ವಿಲಾಸ ಬುಕ್ ಡಿಪೊ ಮತ್ತು ಪ್ರಿಂಟಿಂಗ್ ಪ್ರೆಸ್,
ಗಾಂಧಿ ಚೌಕ, ಹುಬ್ಬಳ್ಳಿ.

ವಾರ್ತೆಗಳು.

— ಬೆ ಗಳೂರಿನೊಳಗೆ ಹುರುಪಿನಿಂದ ಪಿಕೆಟಿಂಗ ನಡೆದದೆ. ಶ್ರೀ ಎ–ರಂಗ ಆ ಕ ಪ್ರೆಸಿಡೆಂಟರಾಗಿದ್ದ ರಾಜ್ಯ ಪದಗಾವ ನಾರಾಯಣ ಚೆಟ್ಟಿ, ವೆಂಕಟಸುಬ್ಬಪತಿ ಸೆಟ್ಟಿ, ಅವರು ತಾಲೂಕ ಕಾಂಗ್ರೆಸ ಕಮಿಟಿಯ ಅಧ್ಯಕ್ಷ–ಕಾರ್ಯದರ್ಶಿಗಳಾಗಿ ಪಿಕೆಟಿಂಗ ನಡಿಸುತ್ತಿದ್ದಾರೆ. ಇದರಿಂದ ಅಂಗಡಿಗಳಲ್ಲಿ ವ್ಯಾಪಾರವಿಲ್ಲ ಮುಚ್ಚಿದವರು ೧೦ ಯವಾರ್ಡ ಪ್ರಕಾರದೊಳಗೆ ಪಿಕೆಟಿಂಗ ಮಾಡಬೇಕೆಂದು ನಿರ್ಧರಿಸಿದರು. ಅಷ್ಟೇ ಅಲ್ಲದೆ ಕೆಲವು ಹೆಂಗಸರೂ ಪಿಕೆಟಿಂಗ ಮಾಡುತ್ತಿದ್ದಾರೆ.

— ಸ್ವದೇಶೀ ಸಂಘ ಸರ್ಕಾರದ ವಸ್ತುಗಳನ್ನು ಮಾರಿ ಸಂತ ಸುಂಕಗಳನ್ನು ಸರಕಾರದವರಾಗಿ ಜಿಲ್ಲಾಧಿಕಾರಿಗೆ ಬರೆದು ಕೇಳಿದೆ. ಆದ್ದರಿಂದ ವ್ಯವಹಾರ ಮಾರಲು ಅನುಮತಿಸಿದ್ದಾರೆ.

— ಮುಂಬಯಿಯಲ್ಲಿ ಕಠಿಣ ಪಿಕೆಟಿಂಗ ನಡೆದದೆ. ಅದರಿಂದ ಕೇವಲ ಒಂದೇ ದಿನ ಅಂಗಡಿಗಳು ಮುಚ್ಚಲ್ಪಟ್ಟವು. ಸರಕಾರಕ್ಕೆ ೧–೧॥ ಲಕ್ಷ ರೂಪಾಯಿ ನಷ್ಟ.

— ಮಾಗಲಮಾಡೊಳಗೆ ಸರಕಟ್ಟೆ ೩೦೦೦ ಜನರು ಮಾಡಿದವರು ಕರೆಯಿಂದು ಅಳಿದಾಡುತ್ತಿದ್ದರೆ ಅವರಿಗಾಗಿ ನಿರಾಶ್ರಿತ ಸಮಿತಿಯು ಏರ್ಪಡಿಸುತ್ತಿದ್ದಾರೆ ಶೀಘ್ರ ಅತ್ತ!

ದಿ ಬೋಂಬೆ ಲೈಫ್ ಎಶ್ಯೂರನ್ಸ ಕಂಪನಿ, ಲಿಮಿಟೆಡ್,

ಸ್ಥಾಪನೆ 1908.

ಈ ಕಂಪನಿಯು ಪೂರ್ಣ ಹಿಂದೀ ಇದ್ದು, ಅದರ ಕಂಪನಿ ದರಗಳೂ, ಶರ್ತುಗಳೂ ಒಳ್ಳೆ ಸೋಯಿಯುಳ್ಳ ಇವೆ. ಕಂಪನಿಯ ಹಣವು ಸರಕಾರಿ ಪ್ರೊ. ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳಂತೆ ಜವಾಬ್ದಾರಿಯ ಸೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ.

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಯ ಲಾಭಕರವಾಗಿದೆ.

ಸವಿಸ್ತರ ಮಾಹಿತಿ ಸ್ಥಳಿಕ ಏಜಂಟರ ಕಡೆಗೆ ಅಥವಾ ಪತ್ರದ್ವಾರದಿಂದ ಕೆಳಗಿನ ವಿಳಾಸಕ್ಕೆ ಬರೆದಲ್ಲಿ ಸಿಗುವದು.

Kumta Agents –
D. K NAYAK Esq
D S PAI Esq.
Honavar Agent-
R V. PARBHU Esq.

K. Padmanabha Rao & Sons.,
BELGAUM
Chief Agents for
Karnatak Districts & S. M States

ಸುಲಭ ಕ್ರಯ! ಡಾಕ್ಟರ ಜೀ. ಬೀ. ಯವರ ಸುಗಂಧಿ ನಸ್ಯದ ಪುಡಿ. ಕಡಿಮೆ ಕ್ರಯ!

ಲೋಕಪ್ರಸಿದ್ಧವಾದ ಈ ಸುಗಂಧ ನಸ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ನಾಲ್ವತ್ತು ವರುಷಗಳು ಇದನ್ನು ಉಪಯೋಗಿಸಿ, ನಾವಿರಾರು ಜನರು ಸರ್ಟಿಫಿಕೇಟುಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಸ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪೀನಸಿ, ಜಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೆ ತಂಡಕ್ಕೆ ಬೇಕಾದ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾನ ಶಕ್ತಿಯನ್ನು ಹೆಚ್ಚು ಮಾಡುತದೆ, ಮೂರು ಚಿಟ್ಟಿನ ಸಾಧಾರಣ ನಸ್ಯದ ಸಂಗಡ ಈ ಸುಗಂಧ ನಸ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಬೆರಸಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪ್ಯಾಕೆಟ ಕಳಿಸಲಾಗುವದು. ಬಾಟ್ಲಿ ಒಂದಕ್ಕೆ ಕ್ರಯ ರೂ. ೦–೪–೦, ವ್ಹಿ. ಪಿ ೪ ಆಣೆ ಡಜನ್ ೧ಕ್ಕೆ ರೂ. ೩–೮–೦. ವ್ಹಿ ಪಿ. ೦–೮–೦ ದಯಮಾಡಿ ನಿಮ್ಮ ಹೆಸರನ್ನು ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.



ಪತ್ತೆ – ಗುರುಬುಸವ ಅಂಡ್ ಕಂಪನಿ ಲಿಮಿಟೆಡ್ ಪೋ. ಬಾ. ೫೧೦, ಪಾರ್ಕಟೌನ, ಮದರಾಸ

ಅಮೃತಾಂಜನ



ಎಲ್ಲ ನೋವುಗಳ ಮೇಲೆ ಅದ್ವಿತೀಯವು ಹಿಂದೀ ಮಲಮು!

ಎಲ್ಲ ಪ್ರಕಾರದ ನೋವು, ಶೂಲಿಗಳನ್ನು ಗುಣಪಡಿಸುತ್ತದೆ.

ಇಡೀ ಹಿಂದುಸ್ಥಾನದಲ್ಲೆಲ್ಲ ಇದನ್ನು ಉಪಯೋಗಿಸುತ್ತಾರೆ.

ಬೆಲೆ ಡಬ್ಬಿ ೧೭ ೧೦ ಆಣೆ.

(ಅಂಚೆವೆಚ್ಚ ಬೇರೆ.)

ಎಲ್ಲ ಕಡೆಯಲ್ಲಿ ಸಿಗುವದು—

ಅಮೃತಾಂಜನ ಡಿಪೋ,

ಮುಂಬಯಿ ಮತ್ತು ಮದ್ರಾಸ



ಚಳಿಜ್ವರದಿಂದ

ನೀವು ನರಳುತ್ತೀರಾದರೆ,

ಇಸಾನೊಫೀಲನ್ನು

ಕೊಳ್ಳಿರಿ.

ಕಳಿನ ಯುಗದಲ್ಲಿ ಅಖಿಲ ಜಗತ್ತಿನಲ್ಲಿ ಹೆಸರಾದ ಏಕೈಕ ಔಷಧವೊಂದೇ! ಇದರ ಗುಣ ಪ್ರಚಂಡವಾದದ್ದು, ಖಾತ್ರಿಯದ್ದು. ನಕಲಿ ಮಾಲಿನ ಬಗ್ಗೆ ಎಚ್ಚರ!! Special formula for India ಎಂಬ ಶಬ್ದಗಳಿದ್ದ ಹಳದಿ ಬಣ್ಣದ ಲೇಬಲಿರುವ ನಮ್ಮ ಅಸಲಿ ಬಾಟ್ಲಿಗಳನ್ನೇ ಕೊಂಡುಕೊಳ್ಳಿ!

Sole Agents –

Messrs Gorio Ltd.,
P. O. Box 159. Fort, Bombay

'झंडू'

द्राक्षासव– – मृद्विकारिष्ट – शारंगधरम. अ.१०

रामबाण औषध

भूक	वाढविणारें
मूळे	बांधविणारें
शौचास साफ करणारें	
झोप	आणणारें
शक्ति	देणारें
तरतरीपणा	आणणारें

रुचिकर पेय

किंमत एक रत्तलास १॥ रुपये

झंडू फार्मास्युटिकल वर्क्स लिमिटेड
मुंबई नं. १४

सिरसी एजंट पंडित आणी कंपनी.
सिरसि एजंट एम्. एल. भाकप्पा आणि ब्रदर्स
हुबळी एजंट तिप्पण्णा शत्रि. भूसपेठ

ದಿಲ್ ಖುಷ್ ಜವಳಿ ಅಂಗಡಿ!

ನಮ್ಮಲ್ಲಿ ಗಂಡಸರು, ಹೆಂಗಸರು, ಮಕ್ಕಳು, ಇವರ ಗಿರುತಿಗೆ ಸ್ವದೇಶೀ ಪದ್ಧತಿಗೆ ತಕ್ಕಂತೆ ಬೆಲೆಗಳ ಬಗ್ಗೆ ಬೇಕಾಗುವ ಎಲ್ಲ ತರದ ಹೊಸ ಹೊಸ ನಮೂನೆಯ ಎಲ್ಲ ಬಣ್ಣದ ಪ್ಯಾಶನ್ ನ

ತ್ತಾದ ವಸ್ತ್ರಗಳು ಬಂದಿವೆ. ಅಲ್ಲದೆ ಖಾದೀ, ರೇಶ್ಮೆ, ಮಫ್ಲರ್, ಟ್ವಿಲ್ ಸಿಲ್ಕ, ಬನಾರಸಿ ದೇಶೀ ಮಿಲ್ಲಿನ ಜವಳಿ, ಫ್ಲ್ಯಾನಲ್ ಗಳೂ, ಪ್ಯಾಂಟ ಪೀಸುಗಳೂ ಎಲ್ಲ ತರದ ಹೊಸ ಪಟ್ಟೆಗಳೂ ಚಿತ್ರಗಳೂ ಮ ಬಗೆಯ ಮಾಲು ಸಿಗುವದು. ಒಂದು ಸಾರೆ ಬಂದು, ದಯವಿಟ್ಟು ನೋಡಿರಿ.

ನಾರಾಯಣರಾವ ಗೋವಿಂದ ಕಾಮತ,
ದಿಲ್ ಖುಷ್ ಜವಳಿ ಅಂಗಡಿ, ಶಿರಸಿ.

ವಾರ್ತೆಗಳು.

— ಸಿಮ್ಲಾದಲ್ಲಿ ಪಂಜಾಬದ ಸಂಸ್ಥಾನ ಖಂಪತ್ತು ಸೇರಿದಾಗ ಪೋಲೀಸರಿಗೂ, ಕೆಂಗ್ರೆಸ ಕಾರ್ಯಕಾರಿ ಮಂಡಳದ ಸಭಾಸದರಾದ ಸರದಾರ ಶಾರ್ದೂಲಸಿಂಗ ಕವೀಶ್ವರರಿಗೂ ತಿಕ್ಕಾಟವಾಗಿ ಸರದಾರ ಶಾರ್ದೂಲಸಿಂಗರವರಿಗೆ ಸರಹಿಡಿಯೋಗಿತ್ತು. ಅವರಿಗೆ ಜಾಮೀನ ಮೇಲೆ ಬಿಡಲು ಬಿಟ್ಟು, ಈ ಮೇಲೆ ಸರಕಾರವು ಅವರ ಮೇಲಿನ ಖಟ್ಲೆಯನ್ನು ಹಿಂತೆಗೆದುಕೊಂಡಿತು. ಈ ಗೊಂದಲಕ್ಕೆ ಕಾರಣವಾದ ಪಟ್ಟಾಲಿ ಕಮೀಶನರ ಮಿ॥ ಕ್ರಂಪರವರಿಗೆ ಸರಕಾರವು ಒತ್ತಾಯದಿಂದ ರಜೆ ಕೊಡಲ್ಪಟ್ಟಿತು. ಮಿ॥ ಕ್ರಂಪರವರು ಈ ವ್ಯಥೆಯಿಂದಲೋ ಏನೋ, ೪-೫ ದಿವಸ ಅಸ್ವಸ್ಥ ಬಿದ್ದು ತೀರಿಕೊಂಡರು; ಇದು ಒಂದು ದುಃಖದ ಸಂಗತಿ.

— ಅಜೋಹರದೊಳಗೆ ಗವ್ಹರ್ನರರ ಮೇಲೆ ಗುಂಡು ಹೊಡೆದ ಶಿಕ್ಷೆ ಮಾಡಿದ ಒಳಸಂಚಿನ ಖಟ್ಲೆ ವಿಚಾರ ನಡೆಸಿತ್ತು. ಸಕಲ ಪ್ರಜೆಗಳು ಇದ್ದ ಕೋರ್ಟಿನಿಂದ ತಪ್ಪು ಜುಬಾನಿ ಮೇಲಿಂದ ಕಳಬಿದ್ದರು. ಇಷ್ಟರಲ್ಲಿ ಆರಸಿ ಉಪಚಾರ ನಡೆಸೆ ಈ ಸ್ಥಿತಿಯಲ್ಲಿಯೇ ಬಂಗ್ಲೆಗೆ ಒಯ್ಯಲಾಯಿತು.

— ಬಂಗಾಲದ ಚೋಕರಗಂಜ ಜಿಲ್ಲೆಯಲ್ಲಿ ನೆರೆ ಕಟ್ಟಿ ಹೇರಳ ನಷ್ಟ ಬೆಳೆ ಕಳ್ಳಿತು.

ದಿ ಬೊಂಬೆ ಲ್ಯಾಫ್ ಎಶ್ಯೂರನ್ಸಕಂಪನಿ, ಲಿಮಿಟೆಡ್.

ಸ್ಥಾಪನೆ: 1908.

ಈ ಕಂಪನಿಯು ಪೂರ್ಣ ಹಿಂದೀ ಇದ್ದು, ಇದರ ಕಂತಿನ ದರಗಳೂ, ಶರ್ತುಗಳೂ ಬಹಳ ಸೋಯಿಯವು ಇವೆ. ಕಂಪನಿಯ ಹಣವು ಸರಕಾರಿ ಪ್ರೊ. ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳಂತೆ ಜವಾಬ್ದಾರಿಯ ಸೆಕ್ಯೂರಿಟಿಗಳಲ್ಲಿಯೂ ಇಡಲ್ಪಟ್ಟಿದೆ.

ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ವಿಮೆದಾರರಿಗೆ ಅತಿಶಯ ಲಾಭಕರವಾಗಿದೆ.

ಸವಿಸ್ತರ ಮಾಹಿತಿ ಕೆಳಗಿನ ಏಜಂಟರ ಕಡೆಗೆ ಅಥವಾ ಪತ್ರವ್ಯವಹಾರದಿಂದ ಕೆಳಗಿನ ವಿಳಾಸಕ್ಕೆ ಬರೆದರೆ ಸಿಗುವದು.

Kumta Agents:-
D. K. NAYAK Esq.
D. S. PAI Esq.
Honavar Agent:-
R. V. PARBHU Esq.

K. Padmanabha Rao & Sons.,
BELGAUM
Chief Agents for
Karnatak Districts & S. M. States

ಸುಲಭ ಕ್ರಯ! ಡಾಕ್ಟರ ಜೇ. ಬೀ. ಯವರ ಸುಗಂಧಿ ನಶ್ಯದ ಪುಡಿ. ಸುಲಭ ಕ್ರಯ!

(Registered Trade Mark.)

ಲೋಕಪ್ರಸಿದ್ಧವಾದ ಈ ಸುಗಂಧ ನಶ್ಯದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು. ಯಾವವೆಂದರೆ— ಪೀನಸಿ, ಒಂಟಿಕಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೇ ಕಂತಕ್ಕೆ ಮೇಲ್ಪಟ್ಟ ವ್ಯಾಧಿಗಳನ್ನು ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನು ಹೆಚ್ಚು ಮಾಡುತದೆ, ಮೂರು ಚಿಟ್ಟಿನ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ನಮ್ಮಿಂದ ಸೀಸೆ ಪ್ಯಾಕೆಟ ಕಳಿಸಲಾದೀತು ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦, ವ್ಹಿ. ಪಿ. ೪ ಆಣೆ. ಡಜನ್ ೧ಕ್ಕೆ ರೂ. ೩-೬-೦. ವ್ಹಿ. ಪಿ. ೦-೮-೦ ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ:—ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ. ಬಾ. ೫೧೦, ಪಾರ್ಕ್‌ಟೌನ, ಮದರಾಸ

ಅಮೃತಾಂಜನ

ರಿಜಿಸ್ಟರ್ಡ್

ಎಲ್ಲ ನೋವುಗಳ ಮೇಲೆ ಅತ್ಯುತ್ತಮ ಹಿಂದೀ ಪೇನಬಾಮು!

ಎಲ್ಲ ಪ್ರಕಾರದ ನೋವು, ಶೂಲಿಗಳನ್ನು ಗುಣಪಡಿಸುತ್ತದೆ.

ಇಡೀ ಹಿಂದುಸ್ಥಾನದಲ್ಲೆಲ್ಲ ಇದನ್ನೇ ಉಪಯೋಗಿಸುತ್ತಾರೆ.

ಬೆಲೆ ಡಬ್ಬಿ ೧ಕ್ಕೆ ೧೦ ಆ.

(ಅಂಚೆವೆಚ್ಚ ಬೇರೆ.)

ಎಲ್ಲ ಕಡೆಯಲ್ಲಿ ಸಿಗುತ್ತೆ:—

ಅಮೃತಾಂಜನ ಡಿಪೋ

ಮುಂಬಯಿ ಮತ್ತು ಮದ್ರಾಸ

ಈ 'ಫ್ರೆಂಚ್ ಸಿಸ್ಟಂ ಆಫ್ ಕಟ್ಟಿಂಗ'

ಎಂಬ ಸರ್ವೋತ್ಕೃಷ್ಟವಾದ ಪುಸ್ತಕವು ಕನ್ನಡದಲ್ಲಿ ತರ್ಜುಮೆಯಾಗಿದೆ. ಗಂಡಸರು, ಹೆಂಗಸರು ಮತ್ತು ಹುಡುಗರ ಉಡುಪುಗಳನ್ನು ಶಾಸ್ತ್ರರೀತಿಯಿಂದ ತಪ್ಪಿಲ್ಲದೇ ಕತ್ತರಿಸುವದನ್ನು ಬೋಧಿಸುತ್ತದೆ. ಪ್ರತ್ಯೇಕ ನಕ್ಷೆಗಳ ಸಹಿತ ಬೆಲೆ ರೂಪಾಯಿ ೩. ಟಪಾಲು ಖರ್ಚು ಹೊರತು.

Rao's Tailoring College.
143, Princess street, BOMBAY 2.

ESANOFELE FOR MALARIA

ಚಳಿಜ್ವರದಿಂದ

ನೀವು ನರಳುತ್ತಿದ್ದರೆ,

ಇಸಾನೊಫೀಲನ್ನು

ಕೊಳ್ಳಿರಿ.

ಈಗಿನ ಯುಗದಲ್ಲಿ ಅಖಿಲ ಭೂಮಂಡಳದಲ್ಲಿ ಹೆಸರಾದ ಔಷಧಿ ಇದೊಂದೇ! ಇದರ ಗುಣ ಪ್ರಚಂಡವಾದದ್ದು; ಶಾಶ್ವತವಾದದ್ದು. ಸಕಲಿ ಮಾಲಿನ ಬಗ್ಗೆ ಜಾಗ್ರತೆ!! Special formula for India. ಎಂಬ ಶಬ್ದಗಳುಳ್ಳ ಹಳದಿ ಬಣ್ಣದ ಲೇಬಲ ಇರುವ ನಮ್ಮ ಅಸ್ಸಲ ಬಾಟ್ಲಿಗಳನ್ನೇ ಕೊಂಡುಕೊಳ್ಳಿ!

Sole Agents:—
Messrs. Gorio Ltd.,
P. O. Box 159, Fort, Bombay.

'झंडू'

द्राक्षासव— – मृद्वीकारिष्ट – शारंगधर प. अ. १०

रामबाण औषध

सर्दि	घालविणारें
भूक	वाढविणारें
शौचास साफ	करणारें
झोंप	आणणारें
शक्ति	देणारें
तेजस्वीपणा	आणणारें

कल्कित्तकर वैद्य

किंमत एक रतलास १॥ रुपये.

झंडु फार्मास्युटिकल वर्क्स लिमिटेड

मुंबई नं. १

तीर्थहळ्ळी एजंट:- पंडित आणि कंपनी.
सिर्सि एजंट एम. एल. धाकप्पा आणि ब्रदर्स
हुबळी एजंट:—तिप्पण्णा ...

ಸ್ವದೇಶಿ ಸಿಮೆಂಟುಗಳು

ಲಿಂಗರ ಛಾಪು

(ನೀರು ಬಿದ್ದರೂ ಕೆಡದೇ ಇರುವ ಚೀಲಗಳಲ್ಲಿ ತುಂಬಿವೆ.)

ಮತ್ತು

ಗಣಪತಿ ಛಾಪು

[ನಮ್ಮಲ್ಲಿಂದ ಸೀದಾ ತರಿಸಿಕೊಳ್ಳುವವರಿಗೆ
ಮೇಲ್ಕಂಡ ಎರಡು ಛಾಪು ಸಿಮೆಂಟುಗಳೂ
ಬ್ರಿಟಿಶ ಸ್ಟಾಂಡರ್ಡ ಮಾನೂನಿಗೆ
ಅನುಸಾರವಾಗಿವೆಯೆಂದು ಖಾತರಿ ಕೊಡುತ್ತೇವೆ.
ಅಲ್ಲದೆ, ಪಬ್ಲಿಕ್ ವರ್ಕ್ಸ ಡಿಪಾರ್ಟಮೆಂಟಿನಿಂದ
ಅನುಮೋದಿಸಲ್ಪಟ್ಟಿವೆ.]

ಹಡಗಗಳು ಚಲಾವಣಿಯಾಗುವ ಕಾಲ ಸಮೀಪಿಸಿರುವದರಿಂದಲೂ,
ಮತ್ತು ಮಳೆಗಾಲ ಕಳೆದ ನಂತರ
ಮನೆಗಳನ್ನು ದುರಸ್ತು ಮಾಡುವದು ಅತ್ಯವಶ್ಯಕವಾಗಿರುವದರಿಂದಲೂ
ಸಿಮೆಂಟಿನ ಬೆಲೆ ಮತ್ತು ಹೆಚ್ಚು ವಿಷಯಗಳಿಗೆ
ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ದಿ ಸಿಮೆಂಟ ಮಾರ್ಕೆಟಿಂಗ ಕಂಪನಿ ಆಫ ಇಂಡಿಯಾ ಲಿಮಿಟೆಡ್

ಹೋಮ ಸ್ಟ್ರೀಟ, **ಮುಂಬಯಿ.**

ಹಿಂದುಸ್ಥಾನ ಹಾಗು ಪ್ರಾಂತಿಕ ಸರಕಾರಗಳು ನಡಿಸಿದ ಅವಿಚಾರಗಳ ತಕ್ತೆ.

ರೌಂಡ ಟೇಬಲ್ ಪರಿಷತ್ತಿನಲ್ಲಿ ಮಹಾತ್ಮರು ಸೇರಲೊಪ್ಪಲಿಲ್ಲ. ಸರಕಾರಕ್ಕೂ ಕಾಂಗ್ರೆಸ್ಸಿಗೂ ನಡೆದ ಪತ್ರವ್ಯವಹಾರವನ್ನೆಲ್ಲ ಪ್ರಕಟಿಸಲು ಅಪ್ಪಣೆ ಕೊಡಬೇಕೆಂದು ಮಹಾತ್ಮರು ಮಾಡಿದ ಸೂಚನೆಗೆ ಸರ್ವಾಧಿಪತಿಗಳು ಸಂಬಂಧಪಟ್ಟಷ್ಟೇ ಪತ್ರಗಳನ್ನು ತಾವು ಶುಕ್ರವಾರ ತಾ ೧೪ನೇ ಅವರಾವು ಪ್ರಕಟಿಸುತ್ತೇವಾಗಿ ಮಹಾತ್ಮರಿಗೆ ತಿಳಿಸಿದರು. ಸರಕಾರದ ಅಂತರಂಗ ಸ್ಫುಟ ಮಾಡುವ ಪತ್ರಗಳನ್ನು ಸರ್ವಾಧಿಪತಿಗಳು ಪ್ರಕಟಿಸಲಿಲ್ಲ. ಮಹಾತ್ಮರು ಮಾರ್ಚ ೨೫ನೇ ಯಿಂದ ಅಗಸ್ಟ ೧೪ನೇ ವರೆಗಿನ ಸುಮಾರು ೧೯ ಪತ್ರಗಳನ್ನು ಪ್ರಕಟಿಸಿದ್ದಾರೆ. ಮೇಲೆ ಸರಕಾರವು ನಡಿಸಿದ ಒಡಂಬಡಿಕೆಯ ಕಲಮುಗಳ ಭಂಗವನ್ನು ವಿವರಿಸಿದ್ದಾರೆ. ಈ ಕಲಮುಗಳೊಳಗೆ ಸರಕಾರವು ಒಡಂಬಡಿಕೆಯನ್ನು ಮುರಿದ ಉದಾಹರಣೆಗಳು ಅನೇಕವಾಗಿವೆ. ಅವು ಯಾವವೆಂದರೆ ೧ ಓ ಗ್ರಾ ೧೨ನೇ ತಾರೀಖಿಗೆ ಅಜಮೀರ ಲಿಸಾ ಪಿಸ ... ಪಿಕೆಟಿಂಗ ಮಾಡಿದ್ದರಿಂದಾಗಿ ಸ ವ್ಯಾಸ ಸರಕಾರವು ಪ್ರಗಟಣೆಯನ್ನು ಹೊರಡಿಸಿತು. ... ಲಿವಾಂವಿನಲ್ಲಿ ಪಿಕೆಟಿಂಗ ಮಾಡಿದ್ದರಿಂದಾಗಿ ಅವರ ಮೇಲೆ ಕ್ರಿ ಪ್ರೊ ... ಕಲಮಿನನ್ವಯ ಪ್ರತಿಬಂಧಕ ಹುಕುಮು ... ಟಿತ, ತಿರುಕಟ್ಟುಪಳ್ಳಿಯಲ್ಲಿ ಪಿಕೆಟಿಂಗ ನಿರ್ಧಕ ವಾಗದೆ ಕೆಂದು ... ೨೦೦ ... ದೂರ ನಿಂತು ಪಿಕೆಟಿಂಗು ಮಾಡಬೇಕು. ... ವಾಯಿತು, ಮುಂಬಯಿ ... ಸ್ವಯಂಸೇವಕರು ... ದಿನ ಪಿಕೆಟಿಂಗ ನಡಿಸಿದ ಸ್ವಲ್ಪ ಆರೋಪದ ಮೇಲೆ ಸ್ವಯಂಸೇವಕರಿಗೆ ಶಿಕ್ಷೆ ... ಯಾದರು, ಕೊಯಿಬಪಟ್ಟಿಯಲ್ಲಿ ಸ್ವಯಂಸೇವಕರಿಗೆ ಹೊಡೆದರು, ಕೊಡೆ ಹಿಡಿಯಲಿಕ್ಕೆ ಕೊಡಲಿಲ್ಲ. ಸ್ವಯಂಸೇವಕರಿಗೆ ಕುಡಿಯಲು ನೀರು ಕೊಡದಂತೆ ... ಗದ್ದರಿಸಿದರು. ಮುಂಬಯಿಯಲ್ಲಿ ಸ್ವಯಂಸೇವಕರ ಮೇಲೆ ... ಅಂಗಡಿಕಾರರಿಗೆ ಲೈಸೆನ್ಸಿಲ್ಲದ ... ಸ್ಥಳಗಳಲ್ಲಿ ಸರಾಯಿ ಮಾರಗೊಟ್ಟಿದ್ದು ... ಅಹಮದಾಬಾದ, ರತ್ನಾಗಿರಿ ಜಿಲ್ಲೆಗಳಲ್ಲಿ ನಡೆದ ಇಂಥ ಪ್ರಕಾರಗಳನ್ನು ಮುಂಬಯಿ ಸರಕಾರದ ಸರ್ವಾಧಿಪತಿ ... ಸಿದೆ, ಬಂಗಾಲದ ಗುತ್ತಿಗೆದಾರರು ಸ್ವಯಂಸೇವಕರಿಗೆ ಹೊಡೆದರು. ಸರಕಾರವು ಅಲಕ್ಷ್ಯ ಮಾಡಿತು. ೨ ಸೂರತ ಜಿಲ್ಲೆಯಲ್ಲಿ ಸ್ವಯಂಸೇವಕರ ಮೇಲೆ ಜನರು ಫಿರ್ಯಾದು ಮಾಡಿದ್ದರು. ಅವನ್ನು ಒಮ್ಮೆ ಪರತ ತೆಗೆದುಕೊಂಡಾಗ್ಯೂ, ಪೋಲೀಸ ಸುಪರಿಂಟೆಂಡೆಂಟರು ಫಿರ್ಯಾದವನ್ನು ಮುಂದುವರಿಸಲು ಒತ್ತಾಯ ಮಾಡಿದರು. ಬಿಹಾರ ಹೈಕೋರ್ಟಿನ ವಕೀಲರ ಮೇಲೆ ಪ್ರಕರಣ ನಡೆದು ... ರಾಜಕೀಯ ಬಂದಿಗಳಿಗೆ ಬಿಡಲಿಲ್ಲ. ರಾಜಾ ಬಾಗ ರತನಜೀಯವರಿಗೆ ಬಿಡುಗಡೆಯಾಗುವದೆಂದು ತಿಳಿಸಿದರೆ ... ಭಾಷಣಗಳನ್ನು ಮುಂಬಯಿ ಸರಕಾರವು ಸರ್ವ ಬಂದಿಗಳಿಗೆ ಕಳಿಸಿದೆ. ಅವುಗಳ ವಾಚನದಿಂದ ಅವರು ಜನರಿಗೆ ಅತ್ಯಾಚಾರಕ್ಕೆ ಪ್ರವೃತ್ತ ಮಾಡಿ ತೋರುವದಿಲ್ಲ. ೪ ಕರಡ ಜಿಲ್ಲೆಯ ಓಲಪಾಡ ಗ್ರಾಮದಲ್ಲಿ ೨ ಕಡೆ ಸ್ವಯಂಸೇವಕರ ಶಿಬಿರಗಳಿದ್ದವು. ಅವು ದೇಸಾಯಿಯವರ ಜಮೀನುಗಳವೆಂದು ಸರಕಾರವು ಭೂಕಂದಾಯ ಕಟ್ಟದ್ದಕ್ಕೆ ದಂಡ ವಿಧಿಸಿತು. ಸರಕಾರವು ಶಿಬಿರಗಳನ್ನು ನಾಶ ಮಾಡಿ, ಅವಾಗ್ಯೂ ದಂಡ ಕೊಟ್ಟ ಜಮೀನು ಭೂಮಿಯನ್ನು ಖಾತೇದಾರರಿಗೆ ಬಿಟ್ಟುಕೊಡಲಿಲ್ಲ. ೫ ಹಿಸಾರ ಜಿಲ್ಲೆಯ ಚೌಟಾಲಾ ಗ್ರಾಮದಲ್ಲಿ ಶಿಕ್ಷಾ ಪೋಲೀಸ ದಂಡಿದೆ. ಅದಕ್ಕಾಗಿ ೮೦೦೦ ರೂಪಾಯಿಗಳ ವಸೂಲಿಯಾಯಿತು. ಅಮೃತಸರ ಜಿಲ್ಲೆಯ ಪವಸಾರಾ ಗ್ರಾಮದಲ್ಲಿಯೂ ಸತ್ಯಾಗ್ರಹಯುಗದಲ್ಲಿ ಇಟ್ಟ ಶಿಕ್ಷೆಯ ಬಂದೋಬಸ್ತು ಇನ್ನೂ ರದ್ದು ಮಾಡುವದಿಲ್ಲ. ೬ ಖೇಡಾ ಜಿಲ್ಲೆಯಲ್ಲಿ ಒಡಂಬಡಿಕೆಯಾದ ಬಳಿಕ, ಉಪ್ಪಿನ ಖಾತೆಯವರು ಬಂದು ದೋಣಿಯನ್ನು ತಪ್ಪಿಸಿದ ಲಿಲಾಂವು ಮಾಡಿದರು. ಆ ಬಗ್ಗೆ ದೋಣಿಕಾರನಿಗೆ ನಷ್ಟಭರಪಾಯಿ ಕೊಡಲಿಲ್ಲ. ಕೇಳಿದರೆ, ಸವಾಲದಾರನ ಕಡೆ ಹೋಗಹೇಳುತ್ತಾರೆ. ಸವಾಲಿನಲ್ಲಿ ಒಂದ ಕಲ್ಪು ಹಣ ಹಿಡ್ಕೊಳ್ಳುತ್ತಾರೆ. ಒಪ್ಪಿದ ಅನೇಕ ತುಬಾಕಿ ಲೈಸೆನ್ಸುಗಳನ್ನು ಇನ್ನೂ ಕೊಟ್ಟಿಲ್ಲ. ೭ ಬಿಹಾರದ ಸತ್ಯಾಗ್ರಹ ... ಆದ ... ಆದಿನ್ನೂ ಒಪ್ಪಿಸಲಿಲ್ಲ. ಕರ್ನಾಟಕದಲ್ಲಿ ಜಪ್ತಾದ ಮನೆ ಹಾಗು ಇನಾಮು ಭೂಮಿಗಳನ್ನು ತಿರುಗಿ ಕೊಡಬೇಕಾದರೆ, ಮುಂದೆ ಚಳವಳಿಯಲ್ಲಿ ಸೇರಲಿಕ್ಕಿಲ್ಲೆಂಬ ಕರಾರು ಬರಕೊಡಬೇಕಾಗಿ ಕೇಳಲ್ಪಡುತ್ತದೆ. ೮ ಸೂರತ ಜಿಲ್ಲೆಯೊಳಗೆ ಲಿಲಾಂವಿನಲ್ಲಿ ಪಡೆದ ಕೆಲವು ಭೂಮಿಯನ್ನು ಹಳೆಯ ಮೂಲ ಮಾಲೀಕರಿಗೆ ತಿರುಗಿ ಕೊಡಬಯಸ್ಸಿದ್ದಾಗಿದ್ದರು. ಹೀಗೆ ಮಾಡಿದ್ದರಿಂದಾಗಿ ಪೋಲೀಸರು ಅವರಿಗೆ ಉತ್ತೇಜನ ಕೊಟ್ಟರು. ೯ ವ ... ಯಾಗಿ ನೇಮಿಸಿದ ಪಟೇಲರಿಗೆ ಕಾಯಂ ಎಂದು ತಿಳಿಯಲ್ಪಡುತ್ತದೆ. ಅವರೊಳಗಿನ ಅನೇಕರು ... ರೆಂದು ಸರಕಾರದ ಕಡೆ ಸಿದ್ಧಪಡಿಸೋಣವಾಯಿತು. ಒಪ್ಪಾಲಪ್ಪರ ಖೇಡಾ ಜಿಲ್ಲೆಯೊಳಗಿನ ಅನೇಕ ತಲಾಟಿಗಳಿಗೆ ಇನ್ನೂ ಕೆಲಸ ಸಿಕ್ಕಿಲ್ಲ. ಸತ್ಯಾಗ್ರಹದಲ್ಲಿ ... ರಿದ ಬಳಿಕ ಒಂದೇ ಲಿಯಲ್ಲಿ ಒಬ್ಬ ತಲಾಟಿಗೆ ತಿರುಗಿ ನೇಮಿಸಿಕೊಳ್ಳಲಿಲ್ಲ. ... ನೇಮಿಸಿಕೊಂಡರು. ರಾಜೀನಾಮೆ ಕೊಟ್ಟ ... ಡೆಪ್ಯುಟಿ ಕಲೆಕ್ಟರರು ಪೆನ್ಶನು ... ಅರ್ಜಿ ... ಕೊಳ್ಳಬೇಕೆಂದು ... ಇನ್ನು ... ಗೆ, ... ಅವಕಾಶ ಕಿತ್ತುಕೊಳ್ಳಲ್ಪಟ್ಟಿತು. ೧೦ ಸಿಂಧದವರು ... ನಡಾವಳಿಯ ಬಗ್ಗೆ ಒಂದು ಪತ್ರ ಪ್ರಕಟಿಸಿದ್ದರು. ಕ್ಷಮೆ ಬೇಡಬೇಕೆಂದು ಸರಕಾರದ ಹುಕುಮು. ಅವರು ಬೇಡಲಿಲ್ಲ. ಅವರಿಂದ ಅವರಿಗೆ ಪ್ರಾಯಶ್ಚಿತ್ತವಾಯಿತು. ಡಾ ಚಂದುಲಾಲದೇವರ ರಾಜೀನಾಮೆ ಕೊಟ್ಟಿದ್ದರ, ಕಾರಣ ಡಾ ಸಿಂಧ-ಹೈದರಾಬಾದವರಿಗೆ ಅರ್ಜಿ ... ನ್ ಒಪ್ಪಿದವರು ಕೆಲಸವನ್ನು ... ಮಾಡಿ ಕೊಳ್ಳಲಿಲ್ಲ. ಕಾರಣ ಕೊಡಲಿಲ್ಲ. ಅವರ ದಿವಾಣ ಜಿಲ್ಲೆಯ ಪೋಲೀಸ ಗ್ರಾಮದ ಮೋಹನಲಾಲ ಎಂಬ ೨೦ ವರ್ಷದ ಬ್ರಾಹ್ಮಣ ಶಿಕ್ಷಕರ ರಜ್ಜಾದ ಪ್ರತಿಸ್ತವು ... ೧೯೩೦ನೇ ಇಸ್ವಿ ಎಪ್ರಿಲ್ ತಿಂಗಳಲ್ಲಿ ರಾಜೀನಾಮೆ ಕೊಟ್ಟು ಇ... ೧೯೩೦ ... ಸತ್ಯಾಗ್ರಹ ... ಎಸ್, ... ಜೋಶಿಯವರಿಗೆ ಎಂದಿಗೂ ಸರಕಾರಿ ನೌಕರಿ ಕೊಡಬಾರದಾಗಿ ಹುಕುಮು, ಗುಂಟೂರಿನ ರಾಜೀನಾಮೆ ಕೊಟ್ಟ ಡಾ ಸನ್ಯಾಸಿರಾವ ... ರಿಗೆ ಮೇ ತಿಂಗಳಲ್ಲಿ ಹಾಜರ ಮಾಡಿಕೊಂಡರು. ಜೂನ ೧೦ನೇ ತಾರೀಖಿಗೆ ಕ್ಷಮೆ ಬೇಡಿಕೊಳ್ಳಿರಿ ಎಂದು ಅವರು ಬೇರೇ ಹುಕುಮು ಕೇಳಿದರು. ... ಅವಕ್ಕೇ ಅ ... ಜೂನ ... ರಿಗೆ ಸರಕಾರವು ಅವರಿಗೆ ನೇಮಿಸಿಕೊಳ್ಳುವಂತೆ ಮಾಡಲಿಲ್ಲವಾಗಿ ತಿಳಿಸಿತು. ಲುಧಿಯಾನಾ ಜಿಲ್ಲೆಯ ಗುಜಾರವಾಲ ಗ್ರಾಮದ ಭಾಯಿ ಮಹಾರಸಿಂಗ ಎಂಬ ಸೈನಿಕನು ಗಾಂಧಿ ದಿನ ಹರತಾಳದಲ್ಲಿ ಸೇರಿದನೆಂದು ಅವನ ಪೆನ್ಶನು ರದ್ದು. ಮೀರತದ ಇಂಗ್ಲಿಷ ಶಾಲೆಯ ಅಧ್ಯಾಪಕರಾದ ಶ್ರೀ ಸಿತಾಲ ಪ್ರಸಾದ ಸಕ್ಸೇನಾ, ಎಮ್ ಎ, ಬಿ ಎಸ್ ಸಿ, ಅವರಿಗೆ ರಾಜಕೀಯ ಪ್ರಚಾರ ಮಾಡಿದ ಬಗ್ಗೆ ಸಸ್ಪೆಂಡ ಮಾಡಿತು. ಕೆಲಸ ತಿಗಬೇಕಾಗಿ ಅರ್ಜಿ ಮಾಡಲು, ಕಾಯಂ ಜಾಗೆಯ ನೇಮಣೂಕಿಯಾಯಿತೆಂದು ತಿಳಿಸಿತು, ಕಾಯಂ ಇಸಮು ಕೆಲಸ ಮಾಡಲೊಪ್ಪಲಿಲ್ಲ. ಬೇರೆ ಹಂಗಾಮಿ ಇಸಮಿಗೆ ಕಾಯಂ ಮಾಡಿತು. ಪ್ರಯಾಗದೊಳಗಿನ ಸರಕಾರಿ ಮುದ್ರಣಾಲಯದಲ್ಲಿ ರಾಜೀನಾಮೆ ... ಹಂಗಾಮಿ ... ಸರು, ಇವರು ರಾಜೀನಾಮೆ ಕೊಟ್ಟಿದ್ದರು. ಇವರಿಗೂ ತಿರುಗಿ ನೇಮಿಸಿಕೊಳ್ಳಲಿಲ್ಲ. ಗೌಹತಿಯಲ್ಲಿ ಮೆಟ್ರಿಕ್ಯುಲೇಶನ ಪಾಸಾದ ವಿದ್ಯಾರ್ಥಿಗಳ ಕಡೆಯಿಂದ ಸತ್ಯಾಗ್ರಹದಲ್ಲಿ ಸೇರಿದ ಬಗ್ಗೆ ದಾವಿಸ ಕೊಳ್ಳುವ ಪ್ರಸಂಗ ಬಂದಿದೆ. ಅಹಮದಾಬಾದದ ಆ ಮುಂದಿ ಹುಡುಗಿಯರಿಗೂ, ೧೧ ದಿ ಹುಡುಗರಿಗೂ ಯಾವದೇ ಶಾಲೆಯಲ್ಲಿ ಸೇರಿಸಿಕೊಳ್ಳಬಾರದಾಗಿ ಹುಕುಮು. ಸತ್ಯಾಗ್ರಹದಲ್ಲಿ ಸೇರಿದ ಅಪರಾಧದ ಬಗ್ಗೆ ಅಂಕೋಲೆಯಲ್ಲಿ ೪ ವಿದ್ಯಾರ್ಥಿಗಳಿಗೆ ಇನ್ನೂ ಶಾಲೆಯಲ್ಲಿ ಪ್ರವೇಶವಿಲ್ಲ. ರಬ್ಬಾದ್ದ ಶಿಷ್ಯವೃತ್ತಿ ಇನ್ನೂ ಸಿಗಲಿಲ್ಲ. ಸಂಯುಕ್ತ ಪ್ರಾಂತದಲ್ಲಿಯೂ, ದಿಲ್ಲಿಯಲ್ಲಿಯೂ ವಿದ್ಯಾರ್ಥಿಗಳಿಗೆ ಶಾಲೆಯಲ್ಲಿ ಸೇರಿಸಿಕೊಳ್ಳಬೇಕಾದರೆ, ಮುಂದಿನ ಚಳವಳಿಯಲ್ಲಿ ಕರಾರು ಬರೆದುಕೊಡಬೇಕೆಂತ್ತಾರೆ. [ಗರ್ವನಾವನಾಸ್ಥ ಆರೋಪಗಳು.] ಮುಂಬಯಿ— ಸೂರತ ಜಿಲ್ಲೆಯೊಳಗೆ ೨೦ ಲಕ್ಷದಲ್ಲಿ ೧೯ ಲಕ್ಷ ರೂ ತಿರ್ವೆ ವಸೂಲಾಯಿತು. ಇಷ್ಟು ಹಣ ಕೊಡಬೇಕಾದರೂ ರೈತರಿಗೆ ಬಹಳ ಕಷ್ಟ. ಈಗ ಹಿಂದಿನ ತಿರ್ವೆ ವಸೂಲಿಯ ಹಾಗು ಈ ವರ್ಷದ ಬಾಕಿ ತಿರ್ವೆ ವಸೂಲಿಯ ಸಕ್ತಿ ನಡೆದಿದೆ. ಇದು ಒಡಂಬಡಿಕೆಯ ಉಲ್ಲಂಘನೆ. ಸತ್ಯಾಗ್ರಹದಲ್ಲಿ ಉಂಟಾದ ನಷ್ಟವನ್ನು ರಾಷ್ಟ್ರೀಯ ಸಭೆಯವರು ಅಧಿಕಾರಿಗಳಿಗೆ ತಿಳಿಸಿದ್ದಾರೆ. ಈಗಲೂ ಪುನರ್ವಿಚಾರ ಮಾಡಲು ತಯಾರಿದ್ದಾರೆ. ಸಕ್ತಿಯ ಕ್ರಮ, ಪೋಲೀಸರ ಹಾವಳಿಗಳಿಂದ ರಾಷ್ಟ್ರೀಯ ಸಭೆಯವರು ಬೇಜಾರಾಗಿದ್ದಾರೆ. ಶಿರ— ಸಿದ್ಧಾಪುರಗಳಲ್ಲಿ ಕಾಯಿದೆ ಕೌನ್ಸಿಲಿನ ಸದಸ್ಯರಾದ ರಾ| ಚಿಕ್ಕೋಡಿಯವರ ಪ್ರಯತ್ನದಿಂದ ನಡಿಸಿದ ವ್ಯವಸ್ಥೆ ಕೆಲವಂತೆ ಸ್ವಲ್ಪ ಸೌಕರ್ಯ ಸಿಕ್ಕಿತು. ರಾಷ್ಟ್ರೀಯ ಸಭೆಯವರೂ ಸಹಕಾರ ಮಾಡಿದರು. ಇಷ್ಟರಿಂದ ಕೃಷಿಯಾಗದ ಜಮೀನಿಗೆ ಸೂಟು ಕೊಡದ ... ದೆ ... ಸಿದ್ದು ಬಾಕಿ ಉಳಿದಿದೆ. ಸಂಯುಕ್ತ ಪ್ರಾಂತ— ಆ ಪ್ರಾಂತದ ಮಥುರಾ ಜಿಲ್ಲೆಯ ... ಹಾರಿಗ್ರಾಮದಲ್ಲಿ ... ಪೋಲೀಸರು ದಂಡೆತ್ತಿ ... ರಾಷ್ಟ್ರೀಯ ಸಭೆಯವರ ಮನೆಗಳನ್ನು ಲೂಟಿ ಮಾಡಿದರು. ಹೆಂಗಸರಿಗೆ ... ದರ ... ಕಸಕೊಂಡು ... ನಾನಾ ಪ್ರಕಾರ ಹೊಡೆದು ... ಸಟ್ಟ ... ಹಾಕಿದರು. ಮುಕ್ಕಿಗೆ ಪ್ರಭಾತ ಫೇರಿಗಳಲ್ಲಿ ಸೇರಲಿಕ್ಕಿಲ್ಲ. ಕ್ರಿ ಪ್ರೊ ಕೋಡ ೧೦೭ನೇ ಕಲಮಿನನ್ವಯ ೧೪ ಜನರ ಮೇಲೆ ದಾವಿಯ ಪ್ರಕರಣ ನಡೆದಿದೆ. ನಾಲ್ವರ ಮೇಲೆ ಹರತಾಳದ ಆರೋಪ. ಸವದಲಪುರದಲ್ಲಿ ತಾ ೨೬-೬-೩೧

ಸಂಯುಕ್ತ ಪ್ರಾಂತ—ಗಡಿನಾಡುಗಳಲ್ಲಿ ನಡೆದ ಅದ್ಭುತ ಅತ್ಯಾಚಾರಗಳು!

ನೇಗೆ ಶಾಂತತೆಯಿಂದ ಸೇರಿದ ಸಭೆಯು ಚದರಿಸಲ್ಪಟ್ಟಿತು. ರಹಿಮತುಲ್ಲಾಪುರದಲ್ಲಿ ಸ್ವಯಂಸೇವಕನಿಗೆ ಪೋಲೀಸರು ತಾ. ೧೦-೭-೩೧ನೇಗೆ ಬೆಟ್ಟನಿಂದ ಹೊಡೆದರು. ಗ್ರಾಮಸ್ಥರಿಗೆ [illegible] ಮಧುರಾ ಜಿಲ್ಲಾ ಕಾಂಗ್ರೆಸ ಕಮಿಟಿಯ ಅಧಿಕಾರಿಗಳ ಮೇಲೆ ಜರುಗಿದ ಪ್ರಕರಣಗಳು ನಡೆದಿವೆ. ಸುಲ್ತಾನಪುರ ಜಿಲ್ಲಾ ಕಾಂಗ್ರೆಸ ಕಮಿಟಿಯ ಪ್ರಮುಖ ಕಾರ್ಯಕರ್ತರ ಮೇಲೆ [illegible] ನೇ ಕಲಮಿನ ಹುಕುಮು. ಬಾರಾಬಂಕಿ ಜಿಲ್ಲೆಯಲ್ಲಿ ಡೆಪ್ಯುಟಿ ಕಮಿಶನರರು ಫೌಜದಾರರ ಕಡೆ [illegible] ಕಲಮಿನ ಹುಕುಮು ಮಾಡಿ ಹೊರಡಿಸಿದ್ದಾರೆ. ರಾಯ ಬರೇಲಿಯಲ್ಲಿ ಇದೇ ರೀತಿ [illegible] ಪ್ರಕರಣಗಳು ನಡೆದಿವೆ ಮತ್ತು [illegible] ಗಿ [illegible] ಮೇಲೆ ಈ ಕಲಮಿನ ಪ್ರಯೋಗವಾಗುತ್ತಿದೆ. ಪೂರ್ಣವಾಗಿ ಗೊತ್ತಿಲ್ಲ. ಒಬ್ಬನ [illegible] ಮಾಡ್ಡಿ ಬೆಂಕಿ ಹಚ್ಚಿದ ರಾಷ್ಟ್ರಧ್ವಜವನ್ನು ತಗೆದು, ಸ್ವಯಂಸೇವಕ ಪಟದೊಳಗಿಂದ ಹೆಸರನ್ನು ತೆಗೆದುಕೊಂಡರೆ ಮಾತ್ರ [illegible] ದಾಗಿ ಪೋಲಿಸ ಪ್ರತಿಬಂಧಕ ಹುಕುಮಿನಲ್ಲಿದೆ. ಬರೆದಿದ್ದ [illegible] ಬಾರಾಬಂಕಿಯ ದಾಲ [illegible] ಗ್ರಾಮಕ್ಕೆ ಡೆಪ್ಯುಟಿ ಕಮಿಶನರರು ತಾ. ೭-೭-೩೧ನೇಗೆ ಹೋ[illegible] ನರು, ಒಕ್ಕಲಿಗರು ಹಾಕಿಕೊಂಡ ಗಾಂಧಿ ಟೊಪ್ಪಿಗಳನ್ನು ತೆಗೆದು, ಇನ್ನು ಮುಂದೆ ಗಾಂಧಿ-ಟೊಪ್ಪಿಯ ಉಪಯೋಗವನ್ನು ಧರಿಸಬಾರದಾಗಿ ವಿಧಿಸಿ ರಾಷ್ಟ್ರೀಯ ಸಭೆಗೆ ತಮ್ಮ ಸಂಬಂಧವಿಲ್ಲವಾಗಿ ಪ್ರತಿಜ್ಞಾಪತ್ರಗಳನ್ನು ಬರೆಸಿಕೊಂಡರು. ತಾ. ೨೭-೭-೩೧ನೇಗೆ ಭುವರಿಗೆ ಫೌಜದಾರರು ಹೋಗಿ ರಾಷ್ಟ್ರಧ್ವಜಗಳನ್ನು ಇಳಿಸಿದರು, ರಾಷ್ಟ್ರೀಯ ಸಭೆಯ ದಾಖಲೆಗಳನ್ನು ಬಸ್ತ ಮಾಡಿ ಪೊಲೀಸರಿಗೆ ಸರಕಿಟ್ಟರು. ರಾಷ್ಟ್ರೀಯ ಸಭೆಯೊಳಗಿಂದ ರಾಜೀನಾಮೆ ಕೊಡದಿದ್ದರೆ ಅನರ್ಥವಾಗುವದಾಗಿ ಇತರರಿಗೆ ಗದ್ದರಿಸಿದರು. ಬಸ್ತಿಯಲ್ಲಿ ಗಾಂಧಿ ಟೊಪ್ಪಿಗೆ ಧರಿಸಬಾರದಾಗಿ ಡೆಪುಟಿ ಕಲೆಕ್ಟರರು ಪ್ರಕಟವಾಗಿ ಅಪ್ಪಣೆ ಕೊಟ್ಟರು. ಒಬ್ಬರು ಅವರಿಗೆ ಅಲ್ಲಿಂದಲ್ಲೇ ಆಕ್ಷೇಪಿಸಲು, ಅವರಿಗೆ ದೇಹಪ್ರಹಾರವಾಯಿತು. ಗೋಂಡಾ ಜಿಲ್ಲೆಯಲ್ಲಿ ರಾಷ್ಟ್ರೀಯ [illegible] ರಾಘವೇಂದ್ರರವರು ಡೆ. ಕಮಿಶನರರಿಗೆ ಭೆಟ್ಟಿಯಾದರು. ರಾಷ್ಟ್ರೀಯ ಸಭೆಯ ಕೆಲಸವನ್ನು ಬಿಡದಿದ್ದರೆ ಕ್ಷೇಮವಾಗಲಿಕ್ಕಿಲ್ಲವಾಗಿ ಡೆ| ಕ| ರು ಗದ್ದರಿಸಿದರು. ೧೪೪ನೇ ಕಲಮಿನನ್ವಯ ಮುಖ್ಯ ಮುಖ್ಯ ಕಾಂಗ್ರೆಸ ಕಾರ್ಯಕರ್ತರ ಮೇಲೆ ಹುಕುಮುಗಳು ಹೊರಟಿವೆ. ಇನ್ನು ಸರಕಾರದ ಉತ್ತೇಜನದ ಮೇಲೆ ಒಡೆಯನವರು ನಡೆಸಿದ ದುರಾಚಾರಗಳು— ರಾಯಬರೇಲಿಯಲ್ಲಿ ಬಸರು ಹೆಂಗಸಿಗೆ ತಾಲೂಕದಾರರ ಪರಿವಾರದವರು ಹೊಡೆದರು.— ಅವಳು ಎಚ್ಚರದಪ್ಪಿ ಬಿದ್ದಳು. ನಾನಪರದಲ್ಲಿ ಪೋಲೀಸರೂ, ಒಡೆಯನದಾರರೂ ಒಟ್ಟಾಗಿ ಕಾಂಗ್ರೆಸ ಸ್ವಯಂಸೇವಕರಿಗೆ ಹೊಡೆದರ, ಕಾರ್ಯಕರ್ತರಿಗೆ ಹಿಡಿದಿದ್ದಾರೆ. ಅನೇಕ ಸ್ವಯಂಸೇವಕರ ಮನೆಗೆ ಬೆಂಕಿ ಹಚ್ಚಿದ್ದಾರೆ. ಬಾಳಾರಾಮಪುರದಲ್ಲಿ ಅಪ್ರಾಯಸ್ಥ ಒಡೆಯನದಾರರ ಆಸ್ತಿಯ ರಕ್ಷಣೆರನಾತೆಯಿಂದ ಕಲೆಕ್ಟರ ಕಳಗಿದೆ. ಗೇಣಿ ವಸೂಲಿಗಾಗಿ ಅಧಿಕಾರಿಗಳು ಒಕ್ಕಲಿಗರ ಕಡೆ ಹೋಗಿ ಮನೆ ನುಗ್ಗಿ ಕೆಲವರಿಗೆ ಹೊಡೆದರು. ೨೩ ಜನರ ಮೇಲೆ ಏಟ್ಟ ಹೆಂಗಸರಿಗೂ, ಗಂಡಸರಿಗೂ ಒಕ್ಕಲ [illegible] ಅಪಮಾನ ಮಾಡಿದರು. ಕಾನ್ಪುರ-ಕಡಿ ಬಸ್ತ ಮಾಡಿ ಮಡ್ಡಿನ ಮಾಲು ಕಾಸಿಗೆ ಕಡು ಮಾರಿದರು. ಸಿನಾರಿಯಾ ಗ್ರಾಮದಲ್ಲಿ ಠಾಣಾದಾರ ಪೋಲೀಸರು ೩ ದಿನಗಳ ತನಕ ಹೆಂಗಸರಿಗೆ ಬಾವಿಯ ನೀರು ಎತ್ತಗೊಡಲಿಲ್ಲ. [illegible] ಜನರ ಮೇಲೆ ಒಕ್ಕಲಿಗರು ಕ್ರೈ ಮಾಡಿದರೆಂದು ಅವರ ಮೇಲೆ ಏಟ್ಟ ನಡೆಸಿದೆ. ಪ್ರಯಾಗ ಜಿಲ್ಲೆಯಲ್ಲಿ ಜಮೀನದಾರರು ಒಕ್ಕಲಿಗರಿಗೆ ಹೊಡೆದು ಬಡಿದು ಪೂರ್ಣ ಗೇಣಿ ಹಣವನ್ನು ವಸೂಲು ಮಾಡಿದರು. ಗೋರಖಪುರ ಜಿಲ್ಲೆಯ ಪೀಪರಾಯಿ, ಗಿರಧರಪುರ, [illegible] ಬರೋಲಿ ಗ್ರಾಮಗಳ ಮೇಲೆ ಜಮೀನದಾರರು ೧೫ ಜನರೊಡನೆ ಸಾಗಿ ಹೋಗಿ ರಾಜಬಾಲಿ ಒಕ್ಕಲಿಗರ ಆಸ್ತಿಯನ್ನು ಲೂಟಿ ಮಾಡಿದರು. ಈ ಸಂಗತಿಯನ್ನು ಸರಕಾರವು ದುರ್ಲಕ್ಷ ಮಾಡಿತು. ರಾಬಿರಾ ಗ್ರಾಮದಲ್ಲಿ ಪೋಲೀಸರ ಬೆಂಬಲದಿಂದ ಒಡೆಯರು ಕೆಲವ ಒಕ್ಕಲಿಗರ ಮೇಲೆ ಗುಂಡು ಹಾರಿಸಿದರು. ಏಟ್ಟ ಒಕ್ಕಲಿಗರು ಗುಂಡಿಗೆ ತುತ್ತಾದರು. ಸರಕಾರವು ಈ ಕಡೆ ದುರ್ಲಕ್ಷ ಮಾಡಿತು. ಒಕ್ಕಲಿಗರಿಗೆ [illegible] ಬಿಸಿಲಲ್ಲಿ ನಿಲ್ಲಿಸಿ [illegible] ಶಿಕ್ಷೆ ಕೊಡುತ್ತಾರೆ. ರಾಯಬರೇಲಿ ಜಿಲ್ಲೆಯಲ್ಲಿ ಕಾಂಗ್ರೆಸ ಕಾರ್ಯಕರ್ತರ ಕಡೆ [illegible] ಮಾಡಿದರೆ ಏಟ್ಟಯಾಗುವದಾಗಿ ಹಸ್ತಪತ್ರಿಕೆಗಳು ಹಂಚಲ್ಪಟ್ಟಿವೆ. ಉನ್ನಾವ ಜಿಲ್ಲೆಯಲ್ಲಿ ಸಬಡಿವ್ಹಿಜನಲ ಮೆಜಿಸ್ಟ್ರೇಟರ ಬೆಂಬಲದ ಮೇಲೆ ಜಮೀನದಾರರು ಮನೆಗಳ ಬಾಗಿಲು ಮುರಿದು, ಹೆಂಗಸರಿಗೆ ಅವಹೇಳನಗಳನ್ನಾಡುತ್ತಾರೆ, ದಾಗಿನಗಳ ಲೂಟಿ ಮಾಡುತ್ತಾರೆ. ಅಗ್ರಾ ಜಿಲ್ಲೆಯಲ್ಲಿ ತಾವು ರಾಷ್ಟ್ರಸಭೆಯ ವಿರೋಧಕರೆಂದು ಪ್ರತಿಜ್ಞಾಪತ್ರ ಬರೆದುಕೊಟ್ಟ ಒಕ್ಕಲಿಗರಿಗೆ ಮಾತ್ರ ಗೇಣಿ ಸೂಟ ಸಿಕ್ಕಿದೆ. ರಾಷ್ಟ್ರೀಯ ಸಭೆಗೆ ಸಂಬಂಧವಿದೆಂದು ತೋರುವವರಿಗೆ ಸೂಟ ಸಿಗಲಿಕ್ಕಿಲ್ಲವಾಗಿ ಅಧಿಕಾರಿಗಳು ಪ್ರಕಟಿಸಿದ್ದಾರೆ. ಬಂಗಾಲ— ಕೋಂಟಯ ಗ್ರಾಮದಲ್ಲಿ ಶಾಂತತೆಯಿಂದ ಗ್ರಾಮಸಂಘಟನೆ ಮಾಡುವ ಕಾರ್ಯಕರ್ತರಿಗೆ ಪೀಡಿಸುತ್ತಾರೆ. ಪಂಜಾಬ— ಕಾರಣದೂರಗಿನ ಶಾಂತ ಮೆರವಣಿಗೆಯವರಿಗೆ ದೊಣ್ಣೆಯಿಂದ ಹೊಡೆದರು. ಫೌಜದಾರರು ಕಾಂಗ್ರೆಸ ಡಾಕ್ಟರರಿಗೆ ಹೊಡೆದರು. ಅನೇಕರ ಮೇಲೆ ಕ್ರಿ| ಪ್ರೊ| ಕೋಡಿನ ೧೦೭ನೇ ಕಲಮಿನನ್ವಯ ಜರುಗಿದ ಪ್ರಕರಣಗಳು ನಡೆದಿವೆ. ಅಂಬಾಲಾ ಕೆಂಟೋನಮೆಂಟಿನಲ್ಲಿ ಮತ್ತು ಯಾವದೇ ಕೆಂಟೋನಮೆಂಟಿನಲ್ಲಿ ಸಭೆ ಸೇರಗೊಡಲಿಕ್ಕಿಲ್ಲವಾಗಿ ಅಂಬಾಲಾ ಧುಸಿಜಂಬರರಿಗೆ ಡೆಪ್ಯುಟಿ ಕಮಿಶನರರು ಹೇಳಿದರು. ತಾ. ೧೬-೫-೩೧ನೇಗೆ ಲುಧಿಯಾನಾದಲ್ಲಿ ಒಂದು ಸಭೆ ಸೇರಿತ್ತು. ಅದನ್ನು ನಿರ್ದಯದಿಂದ ಮೆಜಿಸ್ಟ್ರೇಟರು ಚದರಿಸಿದರು. ಡಾ| ಕಿಚಲೂ ರವರು ತಮಗಾದ ಗಾಯಗಳನ್ನು ಮೆಜಿಸ್ಟ್ರೇಟರಿಗೆ ತೋರಿಸಲು, ಅವರಿಗೆ ಮೆಜಿಸ್ಟ್ರೇಟರು ಬೈದರು. ಆಸಾಮ— ತಾ. ೧೯-೬-೩೧ನೇಗೆ ಜೋರಹಾಟದಲ್ಲಿ ಪ್ರಭಾತ ಫೇರಿ ಹುಡುಗರಿಗೆ ಪೋಲೀಸ ಕಮಿಶನರರ ಹುಕುಮಿನಂತೆ ಪೋಲೀಸರು ಹೊಡೆದರು. ಡಾ| [illegible] ದಾಸರವರು [illegible] ರಾಷ್ಟ್ರೀಯ ಸಭೆಯ ಠರಾವನ್ನು ಅನುಮೋದಿಸಿದ್ದರ ಅವರ ಪೆನ್ಷನ ಯಾಕೆ ಬಸ್ತ ಮಾಡಬಾರದಾಗಿ ನೋಟೀಸು ಹೊರಟಿದೆ. ಗಡಿನಾಡು— [illegible] ಪಠಾಣಸ್ತಿಯಲ್ಲಿ ಖುದಾಯಿ-ಖಿದಮತಗಾರರಿಗೆ ದಣಿಸುತ್ತಾರೆ. ಅಲ್ಲಿ ಕೆಲವರು ಸರೆಮನೆಯಲ್ಲಿದ್ದರು; ಖುದಾಯಿ-ಖಿದಮತಗಾರರ ಮೇಲೆ ಗುಂಡುಹಾರಿಸಲಿಕ್ಕೆ ಸರಿ ಅವರಿಗೆ ಬಿಡುಗಡೆಯಾಗಿ ತಹಸೀಲದಾರರು ಹೇಳಿದರು. ಇಲ್ಲವೆ ಕೈಗೆ ಶಿಕ್ಷೆ ಬಿದ್ದ ಸಿಗಾರರನ್ನು ಹಿಡಿದು ಅವರು ೨೦-೨೦೦ ರೂಪಾಯಿ ದಂಡ ಕೊಟ್ಟರೊಪ್ಪಿದ್ದಲ್ಲಿ ಅಪರಾಧಿಗಳೆ ಸೆರೆಮನೆಯಿಂದ ಬಿಡುಗಡೆಯಾಗುವದಾಗಿ ತಹಸೀಲದಾರರು ಹೇಳಿದರು. ಸಾವಡೂರ ಗ್ರಾಮದಲ್ಲಿ ಸಿಪಾಯಿಗಳ ನ್ನ ಹೊಟ್ಟೆಯಲ್ಲಿ ಹೊಡೆದು ಕೊಂದರು. ರೋಹಸ್ತದಲ್ಲಿ ಗೋಲಿಬಾರಾಯಿತು. ದೌಲತಪುರದಲ್ಲಿ ಪ್ಯಾಠಾಣರು ಪೋಲೀಸರ ಸಹಾಯದಿಂದ [illegible] ರದ ದಿನ [illegible] ಬಟ್ಟೆ ಮಾಡಿ, ಅವರೊಳಗಿನ ೬ ಮಂದಿಗಳು ಒಂದು ಕೋಣೆಯಲ್ಲಿ ಹಾಕಿದರು. [illegible] ಜರಿಗೆ [illegible] ಕೋಣೆಯೊಳಗೆ ಹೊಗೆ ಹಾಕಿ [illegible] "[illegible] ಮಾಡಿರಿ," ಹೀಗೆ ಅವರಿಗೆ ಹೇಳೋ [illegible] ಗಳನ್ನು ಹಿಂಬದಿಗೆ ಕಟ್ಟಿ ಬಿಸಿಲಲ್ಲಿ ಕೂಡ್ರಿಸಲ್ಪಟ್ಟಿತು. [illegible] ನವರಿಗೆ [illegible] ಹಿಡಿದು [illegible] ರು. ಇದರಿಂದ ಮನುಷರು ಎಚ್ಚರದಪ್ಪಿ ಬಿದ್ದರೆ [illegible] ಅಧಿಕಾರಿಗಳು [illegible] ಗೃಹ ಕೆಲಸ [illegible], ಅವರೊಪ್ಪಲಿಲ್ಲ, ಅವರಿಗೆ ಬಿಕ್ಷೆ ಮಾಡಿ ಹೊಡೆದರು. ಕಾಲು ಕಟ್ಟಿ ಬಿಸಿಲೊಳಗೆ ಮಲಗಿಸಿದರು. ಈ ಶಿಕ್ಷೆಗಿಂತ ಮರಣವೇ ಸಹಿಯೆಂದು ಪಠಾಣರು ಎಣಿಸುತ್ತಾರೆ. ಸರಬಂದದಲ್ಲಿ ಮುಸ್ಲಿಮರಿಗೆ [illegible] ಮಾಡಿದ ಅಪರಾಧದ ಮೇಲೆ ಸರಕಾರವು [illegible] ಮನೆ ನುಗ್ಗಿ [illegible] ರೂಪಾಯಿಗಳನ್ನೊಯ್ದರು. ಅವರು ಖುದಾಯಿ-ಖಿದಮತಗಾರರು 'ನಾನಾಯಿ [illegible]' ಎಂದು ಘೋಷಿಸಿದ ಬಗ್ಗೆ ಸರಾಯಿಯಲ್ಲಿ ಹೊಡೆದರು. ಮುಸ್ಲಿಮರ ಮನೆಯಲ್ಲಿರಲಿಲ್ಲ. ಅವರು [illegible] ಗಿ ಪೋಲೀಸರ ವಶವಾದರು. [illegible] ಅವರಿಗೆ ಬಿಟ್ಟುಕೊಟ್ಟರು. [illegible] ಮಾಡಿದರೆಂಬ ಸುಳ್ಳು ಆರೋಪದ ಮೇಲೆ [illegible] ಖಿದಮತಗಾರರಿಗೆ ಸೆರೆಹಿಡಿದರು. ಕೋಹಟದಲ್ಲಿ ಕಾಂಗ್ರೆಸ ಕಮಿಟಿಯ ಅಧ್ಯಕ್ಷರು ಸ್ವಯಂಸೇವಕರನ್ನು ಕರಕೊಂಡು ಗ್ರಾಮಗಳ ಕಡೆಗೆ ಸಂಚರಿಸುತ್ತಿದ್ದರು. [illegible] ಗ್ರಾಮದ ಬಳಿ ಪೋಲೀಸರು ಅವರಿಗೆ [illegible] ಗುಂಡು ಹೊಡೆದರು. ಖುಲೀಲ— [illegible] ಪೇಶಾವರ ತಹಸೀಲಿನಲ್ಲಿಯೂ [illegible] ಮೆರವಣಿಗೆಗಳಿಗೆ ಪ್ರತಿಬಂಧವಾಗಿದೆ. [illegible] ರು [illegible] ದಕ್ಷಿಣ ಪತ್ರಿಕೆಯ [illegible] ನಡೆಸುತ್ತಾರೆ. ಇದನ್ನು [illegible] ಅಧಿಕಾರಿಗಳು [illegible] ಹೇಳಬೇಕಾದದ್ದೇನಿಲ್ಲ, ಕಾರಣ [illegible] ದೇಶದ [illegible] ನಡೆಸಿದ ಅವಿಚಾರಗಳನ್ನು [illegible] ಸರಕಾರದ ಮೇಲೆ ಹೊರಿಸಿದ್ದಾರೆ. ಈ [illegible] ಗಳನ್ನು ಮಹಾತ್ಮಾಜಿ [illegible] ಸಿಮ್ಲಾಕ್ಕೆ ಹೋದಾಗ ಹಿಂದಸ್ಥಾನ ಸರಕಾರದ ಕಾರ್ಯವಾಹಕರಾದ ಮಿ| ಇಮರ್ಸನರವರ [illegible] ಕೊಟ್ಟಿದ್ದರು. ಇದಕ್ಕೆ ಪ್ರತಿಯಾಗಿ ಹಿಂದಸ್ಥಾನ ಸರಕಾರವು ತಮ್ಮದೊಂದು ತಕ್ರಾರವನ್ನು ತಯಾರಿಸಿರುವದಂತೆ, ಅದು ಹೊರಬೀಳುವ [illegible]।

ಸಿಮ್ಲಾದಲ್ಲಿ ಹಿಂದುಸ್ಥಾನ ಸರಕಾರದ ಕಾರ್ಯಕಾರಿ ಮಂಡಳದ ವಿಶೇಷ ಸಭೆ!

ಕಾನಡಾವೃತ್ತ.

ಪ್ರಜಾಪತಿ ಸಂ| ಶ್ರಾವಣ ಶು| ೧೧| ಸೋಮವಾರ.

ಆಶೆ ಬೆನ್ನು ಬಿಡದು!

ಈ ವಾರದಲ್ಲಿ ಪ್ರಸಂಗವು ಬಹಳ ಮೊಳೆಯುತ್ತ ಲಂಘಿಸಿದ ಮಹಾತ್ಮರು ರೌಂ. ಟೇಂ. ಪರಿಷತ್ತಿಗೆ ಬಹಿಷ್ಕಾರ ಹಾಕಿದರೆಂದೂ, ಕೊಂಗ್ರೆಸ ಕಾರ್ಯಕಾರಿ ಮಂಡಳವು ಮುಂದಿನ ವಿಷಯವನ್ನು ಮುಂದಾಗಿ ಆಲೋಚಿಸಿ ರಾಷ್ಟ್ರೀಯ ಸಭೆಯ ಅಧ್ಯಕ್ಷರಿಗೆ ಪ್ರಾಧಿಕಾರ ಕೊಟ್ಟು ವಿಸರ್ಜನೆ ಹೊಂದಿತು. ಒಡಂಬಡಿಕೆಯಂತೆ ನಡಕೊಳ್ಳಲು ರಾಷ್ಟ್ರೀಯ ಸಭೆಯು ಇನ್ನೂ ಸಿದ್ಧವಿದೆ, ಅದನ್ನು ಮುರಿದರೆ, ಸರಕಾರದೊಡನೆ ಎದುರಾಳಿಯಾಗಿ ಕಾದಾಡಲಿಕ್ಕೂ ಸಿದ್ಧವಿದೆ, ಎಂಗ ಮಹಾತ್ಮರು ಪ್ರಕಟಿಸಿದರು. ಸರಕಾರವು ಸತ ಹರಣ ಮಾಡತೊಡಗಿದರೆ, ದೇಶಹಿತಕ್ಕಾಗಿ, ದೇಶರಕ್ಷಣೆಗಾಗಿ ಸರಕಾರದೊಡನೆ ಹೋರಾಡಲಿಕ್ಕೆ ತಾವು ತಯಾರಿರುವದಾಗಿ ಅಹಮದಾಬಾದಿನಲ್ಲಿ ಮಹಾತ್ಮರು ಪತ್ರಿಕಾ ಪ್ರತಿನಿಧಿಗಳ ಬಳಿ ಹೇಳಿದರು. ಸರ್ವಾಧಿಪತಿಗಳಾದ ವಿಲಿಂಗಡನ್ ದೊರೆಗಳು ಸರಕಾರಿ ಅಧಿಕಾರಿಗಳಿಗೂ, ಮಹಾತ್ಮರಿಗೂ ನಡೆದ ೭-೮ ಪತ್ರಗಳನ್ನಷ್ಟೇ ಪ್ರಕಟಿಸಿದ್ದರು, ಇದರಿಂದ ಸತ್ಯಸ್ಥಿತಿ ಗೋಚರವಾಗುವದಿಲ್ಲವಾಗಿ ಮಹಾತ್ಮರ ಅಭಿಪ್ರಾಯವಾಗಿ, ಮಹಾತ್ಮರು ತಂತಿ-ಪತ್ರ ಕೂಡಿ ಸುಮಾರು ೩೫ ದಾಖಲೆಗಳನ್ನು ಪ್ರಕಟಿಸಿದ್ದಾರೆ, ಒಡಂಬಡಿಕೆಯ ಯುಗದಲ್ಲಿ ಅಧಿಕಾರಿಗಳು ನಡಿಸಿದ ಅತ್ಯಾಚಾರಗಳ ಪಟ್ಟಿಯನ್ನೂ ಪ್ರಕಟಿಸಿದ್ದಾರೆ. ಆ ಪಟ್ಟಿಯನ್ನು ಜೋಡಿಸಿದರೆ ಓದಬಹುದು ಮಹಾತ್ಮರಿಗೂ, ಸರಕಾರಿ ಅಧಿಕಾರಿಗಳಿಗೂ ನಡದ ಪತ್ರವ್ಯವಹಾರವನ್ನು ಸಹ ಪ್ರಕಟಿಸಬೇಕೆಂದು ನಮಗೆ ಬಹಳ ಮನಸ್ಸಿತ್ತು. ಆದರೆ, ಅದು ಅಸಾಧ್ಯ ಮಾತು. ಇಂದಿನ ಮುಹೂರ್ತಕ್ಕೆ ಆ ಪತ್ರಗಳನ್ನೆಲ್ಲ ಪ್ರಕಟಿಸುವದು ಅಸಾಧ್ಯ. ಆ ಪತ್ರ ಪ್ರಕಟಣೆಗೆ ಈ ಪತ್ರಿಕೆಯ ೧೨-೧೩ ಪುಟಗಳು ತಗಲುವವು. ಆದರಿಂದ ಶ್ರೀ|| ಮಹಾದೇವಭಾಯಿ ದೇಸಾಯಿಯವರು ಆ ಪತ್ರಗಳಿಗೆ ಬರೆದ ಪ್ರಸ್ತಾವನೆಯನ್ನಷ್ಟೇ ನಾವು ಬೇರೊಂದೆಡೆ ಕೊಟ್ಟಿರುತ್ತೇವೆ. ಅದರ ಮೇಲಿಂದ ಮಹಾತ್ಮರಿಗೂ, ಸರಕಾರಕ್ಕೂ ಉಂಟಾದ ವಿವಾದ ವಿಷಯವು ವ್ಯಗ್ಗೋಚರವಾಗಬಹುದು. ಕೈತರ ಪರವಾಗಿ ಸರಕಾರದೊಡನೆ ಮಧ್ಯಸ್ಥಿಕೆ ನಡಿಸಲು ರಾಷ್ಟ್ರೀಯ ಸಭೆಯವರಿಗೆ ಅಧಿಕಾರವಿಲ್ಲವಾಗಿ ಕಮಿಶನರ ರಾವ ಗೆರೆಟ್ ಮೊದಲಾದವರ ಹೇಳಿಕೆ, ಅದಿಕಾರವಿರುವದಾಗಿ ಮಹಾತ್ಮರ ಅಂಬೋಣ. ಈ ವಿವಾದವು ಕೊನೆ ತನಕ ನಿರ್ಣಯಿಸಲ್ಪಡಲಿಲ್ಲ. ಮುಂಬಯಿ ಸರಕಾರವು ಕಮಿಶನರರ ಹೇಳಿಕೆಯನ್ನೇ ಎತ್ತಿ ಹಿಡಿಯಿತು. ಹಿಂದುಸ್ಥಾನ ಸರಕಾರವು ಕೊನೆ ತನಕ ಈ ವಿಷಯವನ್ನು ನಿರ್ಣಯಿಸಲೇ ಇಲ್ಲ. "ಒಡಂಬಡಿಕೆಯಂತೆ ಸರಕಾರದ ಮೇಲೆ ಬಂದ ಆರೋಪಗಳನ್ನು ವಿಚಾರ ಮಾಡುವದಕ್ಕಾಗಿ ಪಂಚ ಮಂಡಳವನ್ನು ನೇಮಿಸಿರಿ, ಬಾರ್ಡೋಲಿಯ ಸ್ಥಿತಿಯನ್ನು ನಾನು ಕಣ್ಣಾರೆ ಕಂಡಿದ್ದೇನೆ; ಅಲ್ಲಿ ಅಧಿಕಾರಿಗಳು ಒಮ್ಮೆ ಹಾವಳಿ ಹಾಕಿದ್ದಾರೆ, ಅದನ್ನು ಚೌಕಶಿ ಮಾಡಿರಿ, ಅಥವಾ ನೀವೇ ವಿಚಾರ ಮಾಡಿ ಅನ್ಯಾಯದಿಂದ ವಸೂಲು ಮಾಡಿದ ಕಂದಾಯವನ್ನು ತಿರುಗಿ ಕೊಡಿರಿ" ಎಂಬದಾಗಿ ಮಹಾತ್ಮರು ಹೇಳಿದ್ದಕ್ಕೆ, "ರಾಷ್ಟ್ರೀಯ ಸಭೆಯು ಉದ್ದೇಶಿಸಿದಂತೆ ಕಂದಾಯ ವಸೂಲಿಯ ಕ್ರಮ ನಡೆಯುವದಿಲ್ಲ, ಕಾಯಿದೆಯಂತೆ ಅದು ನಡೆಯಬೇಕು; ಬೇಕಾದರೆ ಜಾತಿವಾರು ಆರೋಪಗಳಿಗೆ ಸ್ವಲ್ಪ ನಾವೇ ವಿಚಾರ ಮಾಡುತ್ತೇವೆ" ಹೀಗೆ ನಿರಂಕುಶ ಉತ್ತರವನ್ನು ಮುಂಬಯಿ ಸರಕಾರವು ಮಹಾತ್ಮರಿಗೆ ಕಳಿಸಿ ಒಡಂಬಡಿಕೆಯ ಮೂಲಾಧಾರವನ್ನೇ ಕಿತ್ತಿತು. ಮಹಾತ್ಮರು [illegible] ಇನ್ನು [illegible] ಇನ್ನು [illegible]. ತತ್ಕ್ಷಣ ಅದು ಗಡಂತೆ, ಸರಕಾರದ ವಚನಭಂಗವಾಗದಂತೆ ಜೋಕೆಯ ಮಾತು ಮಹಾತ್ಮರು ಒಪ್ಪಿದ್ದರು. ಸರಕಾರವು [illegible] ವಿಚಾರ ಮಾಡುವುದು ಸರಕಾರದ [illegible] ಸ್ಥಿತಿ [illegible] ಮಹಾತ್ಮರು ಸರಕಾರದೊಡನೆ ಸಹಕಾರ ಮಾಡುವುದು [illegible] ಈ [illegible] ಗಳಿಗೆ [illegible] ಇಂಥ ಸ್ಥಿತಿಯನ್ನು [illegible] ಪರಿಷತ್ತಿಗೆ ಪ್ರಯಾಣಿಸುವದು ನಿರರ್ಥಕವಿದೆ. ಇಲ್ಲಿಯ ಸರಕಾರಿ ವ್ಯಾಪಾರಗಳು ಸ್ವತಂತ್ರವಾಗಿ ನಡೆಯುತ್ತವೆಂದು ತಿಳಿಯುವದು ತಪ್ಪು. ಸಾಮ್ರಾಜ್ಯ ವಿಧ್ವಂಸಕ ಇಡೀ ಒಂದು ಭಾಗ, ಹೀಗೆ ನಾವು ಎಣಿಸಿದರೆ ಲಂಡನ್ ಪರಿಷತ್ತಿನಲ್ಲಿ ಹಿಂದುಸ್ಥಾನಕ್ಕೇನೂ ಸಿಗದೆಂದು ಸ್ಪಷ್ಟವಾಗುತ್ತದೆ. ಅಧಿಕಾರಿಗಳ ಅನಾಚಾರಗಳನ್ನು, ವಚನಭಂಗಗಳನ್ನು ಪಿಡಿದು ಮಾತಲೊಪ್ಪದ ಸರಕಾರದ ಹಿಂದುಸ್ಥಾನಕ್ಕೆ ಸ್ವರಾಜ್ಯ ಯಾ ಸ್ವಾತಂತ್ರ್ಯ ಕೊಡುವದೆಂಬ ಕಲ್ಪನೆ ಮಾಡಬಹುದೇ? ಹೀಗೆ ಮಹಾತ್ಮರು 'ಯಂಗ ಇಂಡಿಯಾ' ಪತ್ರಿಕೆಯಲ್ಲಿ ಪ್ರಶ್ನಿಸುತ್ತಾರೆ. ಅಧಿಕಾರಿಗಳು ಸರ್ವಜ್ಞರು; ಸ್ವಯಂಭೂಗಳು. ಇವರಿಗೆ ತಪ್ಪು ತೋರಿಸಿಕೊಡುವ ಅಧಿಕಾರ ಯಾರಿಗೂ ಇಲ್ಲ. ರಾಷ್ಟ್ರೀಯ ಸಭೆಯವರು ತಮ್ಮ ತಪ್ಪುಗಳನ್ನು ತಿಳಿದು ತಲೆಬಾಗಿ ನಡಕೊಳ್ಳುವವರಾದರೆ, ಅವರ ಸಹಕಾರವನ್ನು ಸ್ವೀಕರಿಸಲು ಅಧಿಕಾರಿಗಳು ಒಪ್ಪಿಯಾರು, ಇಲ್ಲದಿದ್ದರೆ, ಅಧಿಕಾರಿಗಳು ರಾಷ್ಟ್ರೀಯ ಸಭೆಗೆ ಲೆಕ್ಕಿಸುವದಿಲ್ಲ. ಆದರಿಂದ ಪ್ರಜೆಗಳು ಇನ್ನು ಸ್ವಾರ್ಥತ್ಯಾಗಕ್ಕೆ ಸಿದ್ಧರಾಗಬೇಕಾಗಿ ಮಹಾತ್ಮರು 'ಯಂಗ ಇಂಡಿಯಾ' ಪತ್ರಿಕೆಯ ವಿದ್ವತ್ಪೂರ್ಣ ದೇಶಬಾಂಧವರಿಗೆ ಆಜ್ಞಾಪಿಸಿದ್ದಾರೆ. ಸದ್ಯಸ್ಥಿತಿಯಿದು ಈ ಸ್ಥಿತಿಯಲ್ಲಿ ಸಂಧಿಯಾಗುವ ಲಕ್ಷಣಗಳಿಲ್ಲ. ಆಶೆಯಲ್ಲಿ ನಿರಾಶೆಯಾಯಿತು.

ಆದಾಗ್ಯೂ, ಆಶೆ ಬೆನ್ನು ಬಿಡದು; ನಿರಾಶೆಯಲ್ಲಿ ಆಶೆ ಹುಟ್ಟಿದೆ! ಆಶೆಯೇ ಮನುಷ್ಯನ ಜೀವನಾಧಾರ! ಮಹಾತ್ಮರ ಬಹಿಷ್ಕಾರದಿಂದ ಹಿಂದುಸ್ಥಾನ ಸರಕಾರವೂ, ಸಾಮ್ರಾಜ್ಯ ಸರಕಾರವೂ ಲೋಕದಲ್ಲಿ ಅಪಕೀರ್ತಿಗೀಡಾಗುವ ಪ್ರಸಂಗ ಬಂದಿದೆ. ಪತ್ರವ್ಯವಹಾರದ ಪ್ರಕಟಣೆಯಿಂದಲೂ, ಒಡಂಬಡಿಕೆಯನ್ನು ಉಲ್ಲಂಘಿಸಿ ನಡಿಸಿದ ದುರಾಚಾರಗಳಿಂದಲೂ ಬ್ರಿಟಿಶ ರಾಜ್ಯದ ಅಂತರಂಗವು ಲೋಕದಲ್ಲಿ ಸ್ಪಷ್ಟವಾಗಿದೆ. ಹಿಂದೀ ಪ್ರಜೆಗಳಿಗಿರುವ ಪ್ರಜಾಧಿಕಾರದ ಕಲ್ಪನೆಯೂ ಲೋಕದಲ್ಲಿ ಪ್ರಕಟವಾಯಿತು. ಆದರಿಂದ ಪ್ರಸ: ಸೂತ್ರಗಳು ಚಲಿಸಲಾರಂಭಿಸಿವೆ. ಮಹಾತ್ಮರು ಸಜ್ಜನರು; ಸರಕಾರದ ಮಾನ ಕಾಯುವವರು, ಅವರಿಗೆ ರಾಜಕಾರಣ ತಿಳಿಯದು, ಹಠಗಟ್ಟಿ ಲಂಡನಿಗೆ ಹೋಗುವರು; ಎಂದು ಇಲ್ಲಿಯ ಅಧಿಕಾರಿಗಳು ಕಲ್ಪನೆ ಮಾಡಿಕೊಂಡಿದ್ದರೋ ಏನೋ! ರೌಂಡ ಟೇಬಲ್ ಪರಿಷತ್ತು ಅದೊಂದು ದೊಡ್ಡ ಸಂಭ್ರಮ! ಬಾರ್ಡೋಲಿಯೊಳಗಿನ ಕೈತರಿಗಾಗಿ ಅಖಿಲ ಭರತ ಭೂಮಿಯ ಕಲ್ಯಾಣ ಕಾರ್ಯವನ್ನು ಮಹಾತ್ಮರು ತೊರೆಯರು, ಎಂಬದಾಗಿ ಸಹ ಅಧಿಕಾರಿಗಳು ಗ್ರಹಿಸಿದ್ದರೋ ಏನೋ! ಆದರೆ, ಮಹಾತ್ಮರು ಯಾವಾಗಲೂ ವಿಮೂಢರಾಗಲಿಲ್ಲ. ಕೈತರ ಪರವಾಗಿ ತಮಗೆ ಅಧಿಕಾರಿಗಳ ಕಡೆ ಮಾತನಾಡಲು ಇಂಬಿರದಿದ್ದರೆ, ಒಡಂಬಡಿಕೆ ನಿರರ್ಥಕವೆಂದು ಮಹಾತ್ಮರು ಎಪ್ರಿಲ್ ತಿಂಗಳಲ್ಲಿಯೇ ಮುಂಬಯಿ ಸರಕಾರಕ್ಕೆ ತಿಳಿಸಿದ್ದರು. ಆದಾಗ್ಯೂ, ಸರಕಾರಕ್ಕೆ ದೀರ್ಘಾಲೋಚನ ಬರಲಿಲ್ಲ. ಒಡಂಬಡಿಕೆಯ ಸಾರು ಪತ್ರವನ್ನೆಲ್ಲ ತಾವು ಸ್ವತಃ ನೋಡಿಕೊಳ್ಳುತ್ತೇವೆಂದು ಸರ್ವಾಧಿಪತಿ ವಿಲಿಂಗಡನ್ ದೊರೆಗಳು ಸವಿ ಸವಿ ನುಡಿದರು. ಮಹಾತ್ಮರು ಆ ಗೊಡವೆಯನ್ನೇ ಬಿಟ್ಟುಬಿಡಬೇಕಾಗಿ ಬರೆದರು. ಆದರೆ, "ನಿಮ್ಮ ವಚನದಂತೆ ನಾಡದೊಳಗೆ ಅಧಿಕಾರಿಗಳು ನಡಕೊಳ್ಳುವದಿಲ್ಲವಾಗಿ ಮಹಾತ್ಮರು ತಂತಿ ಮಾಡಿ ಸವಿ ಮಾತಿನಲ್ಲಿ ಒಳಗುಂಡು ಕಹಿ ಕಹಿ ಸತ್ಯವನ್ನು ಸರ್ವಾಧಿಪತಿಗಳಿಗೆ ತಿಳಿಸಿ ರೌಂಡ ಟೇಬಲ್ ಪರಿಷತ್ತನ್ನು ಬಹಿಷ್ಕರಿಸಿದರು. ಇದರಿಂದ ಈಗ ಗಾಬರಿಯುಂಟಾಗಿದೆ. ರಾಷ್ಟ್ರೀಯ ಸಭೆಯವರ ಅಭಾವದಲ್ಲಿ ತನ್ನೇ ಸಲ ರೌಂಡ ಟೇಬಲ್ ಪರಿಷತ್ತನ್ನು ಸೇರಿಸುವದವಶ್ಯವಿಲ್ಲೆಂದು ಎಲ್ಲರೂ ಹೇಳುತ್ತಾರೆ. ಆದರಿಂದ ಸರ್ವಾಧಿಪತಿಗಳು ಪುನಃ ವಿಚಾರ ಮಾಡುವರಂತೆ. ಸರ್ವಾಧಿಪತಿಗಳು ಕಲಿಕತ್ತೆಗೆ ದಿಗ್ವಿಜಯಕ್ಕೆ ಹೋಗಿದ್ದರು. ಥಟ್ಟನೆ ಅಲ್ಲಿಯ ಕಾರ್ಯಕ್ರಮವನ್ನೆಲ್ಲ ತೊರೆದು, ಒಮ್ಮೆಲೇ ಸಿಮ್ಲಾ ಪಟ್ಟಣಕ್ಕೆ ಗುರುವಾರ ಹೊರಟಿದ್ದಾರೆ. ಮೊನ್ನೆ ಶನಿವಾರ ಹಿಂದುಸ್ಥಾನ ಸರಕಾರದ ಕಾರ್ಯಕಾರಿ ಮಂಡಳದ ವಿಶೇಷ ಸಭೆಯಾಗುವದಿತ್ತು. ಸ್ವತಂತ್ರ ಪಂಚಮಂಡಳವನ್ನು ನೇಮಿಸುವದು ಬೇಡ. ಒಬ್ಬ ಹೈಕೋರ್ಟ ಜಜ್ಜರಿಗೆ ನೇಮಿಸಿ ಕೊಂಡು ಒಡಂಬಡಿಕೆಯ ವಚನಭಂಗಗಳ ವಿಚಾರ ನಡಿಸಿದಾಗ್ಯೂ, ಮಹಾತ್ಮರು ರೌಂಡ ಟೇಬಲ್ ಪರಿಷತ್ತಿನಲ್ಲಿ ಸೇರಲು ಒಪ್ಪುತ್ತಾರೆ. ಇದೇ ವಿಚಾರ ಮೊನ್ನೆ ಶನಿವಾರ ಸಿಮ್ಲಾದಲ್ಲಿ ನಡೆಯಲಿತ್ತು. ಪಂಡಿತ ಮಾಲವೀಯರವರು ಆಶಾಭರಿತರಾಗಿ ಮಹಾತ್ಮರು ಮುಂದಿನ ಶನಿವಾರ ಹೊರಡುವರೆಂದು ಉದ್ಗರಿಸುತ್ತಾರೆ. ಮಹಾತ್ಮರು ಸರಕಾರದ ನಿಃಪಕ್ಷ ಮಾಡಲು ಮತ್ತೂ ಒಂದು ಸೂಚನೆ ಮಾಡಿದ್ದಾರೆ. ರಾಷ್ಟ್ರೀಯ ಸಭೆಯವರ ಮೇಲೆ ಸರಕಾರವು ಒಡಂಬಡಿಕೆಯಂತೆ ನಡಕೊಳ್ಳಲಿಲ್ಲವಾಗಿ ಪ್ರತಿಪಕ್ಷಿಯನ್ನೊಂದು ತಯಾರಿಸಿದುವದಂತೆ. ಮಹಾತ್ಮರ ಪಟ್ಟಿಗಿಂತಲೂ ಅದೊಂದು ದೊಡ್ಡ ಗ್ರಂಥವಂತೆ. ಇನ್ನು ದೊಡ್ಡ ಗ್ರಂಥವು ಹಿಂದೆಂದೂ ತಯಾರಾಗಿದ್ದಿಲ್ಲವಾಗಿ 'ಕ್ರೊನಿಕಲ್' ಪತ್ರಿಕೆಯ ಸಿಮ್ಲಾ ಸುದ್ದಿಗಾರರ ಅನುಮಾನ. ಈ ಆರೋಪಗಳನ್ನೂ, ರಾಷ್ಟ್ರೀಯ ಸಭೆಯ ಮೇಲೆ ಸರಕಾರವು ಹೊರಿಸಿದ ಆರೋಪಗಳನ್ನೂ ವಿಚಾರ ಮಾಡುವದಕ್ಕಾಗಿ ನಿಷ್ಪಕ್ಷಪಾತಿ ನ್ಯಾಯಾ

ಗಾಂಧಿ–ಸರಕಾರಗಳೊಳಗೆ ನಡೆದ ಪತ್ರವ್ಯವಹಾರದ ಸಾರಾಂಶ.

ಸನ ನೇಮಿಸಿದಾಗ್ಯೂ, ತಾವು ರೌಂಡ ಟೇಬಲ್ ಪರಿಷತ್ತಿನಲ್ಲಿ ಸೇರಲೊಪ್ಪುತ್ತೇನಾಗಿಯೂ ಎಂದು ನಾಬಾಡದ 'ಬಾಂಬೆ ಕ್ರಾನಿಕಲ್' ಪತ್ರಿಕೆಯ ಪ್ರತಿನಿಧಿಗಳ ಬಳಿ ಮಹಾತ್ಮರು ನುಡಿದಿದ್ದಾರೆ. ಮಹಾತ್ಮರಿಗೆ ಬೇಕಾದಷ್ಟು ನಿಷ್ಪಕ್ಷಪಾತಿ ವಿಚಾರ ಮಂಡಳವೇ ತಕ್ಕದ್ದು; ಅದು ರಾಷ್ಟ್ರೀಯ ಸಭೆಯ ಮೇಲಿನ ಆರೋಪಗಳಿಗಾದರೂ ಅಡ್ಡಿ ಇಲ್ಲ, ಸರಕಾರದ ಮೇಲಿನ ಆರೋಪಗಳಿಗಾದರೂ ಅಡ್ಡಿ ಇಲ್ಲ! ಹೀಗೆ ಸರಕಾರಕ್ಕೆ ಮಹಾತ್ಮರು ಸಂಕಟದಲ್ಲಿ ಸಿಲುಕಿ ಹಾಕಿದ್ದಾರೆ. ಸರಕಾರದ ಪ್ರಾಮಾಣಿಕತನವನ್ನು, ನ್ಯಾಯಪ್ರಿಯತನವನ್ನು ಮಹಾತ್ಮರು ಒರೆಗಲ್ಲಿಗೆ ಹಚ್ಚಲು ಉದ್ಯುಕ್ತರಾಗಿದ್ದಾರೆ. ಸರ್ವಾಧಿಪತಿಗಳು ಸಿಮ್ಲಾ ಪಟ್ಟಣಕ್ಕೆ ಗುರುವಾರ ಸಾಯಂಕಾಲಕ್ಕೆ ತಲ್ಪಿದರು. ಪ್ರಾಂತಿಕ ಸರಕಾರಗಳಿಂದ ಅಭಿಪ್ರಾಯಗಳನ್ನು ಕೇಳಿ ತರಿಸಿಕೊಂಡು ಕಾರ್ಯಕಾರಿ ಮಂಡಳದಲ್ಲಿ ನಿನ್ನೆ ರವಿವಾರ ಪಟ್ಟಿಯ ವಿಚಾರವಾಗುವದಿತ್ತು. ಮಹಾತ್ಮರಿಗೆ ಉತ್ತರ ಕೊಡುವ ವಿಚಾರವೂ ನಿನ್ನೆ ನಡೆಯುವದಿತ್ತು. ಮುಂಬಯಿಯ 'ಟ್ಯಾಮ್ಸ ಆಫ್ ಇಂಡಿಯಾ' ಪತ್ರಿಕೆಯು ಸಹ ಇತ್ತಟ್ಟಿನ ಆರೋಪಗಳ ವಿಚಾರವಾಗುವದು ಉಚಿತವಾಗಿ ಉದ್ಗರಿಸುತ್ತದೆ! ಮುಂಬಯಿ 'ಟ್ಯಾಮ್ಸ' ಪತ್ರಿಕೆಯು ಸರಕಾರ ಪಕ್ಷಪಾತಿ ಪತ್ರಿಕೆಯೆಂದು ಎಲ್ಲರೂ ಬಲ್ಲಾದ ವಿಷಯ. ಇದರ ಮೇಲಿಂದ ಹಿಂದುಸ್ಥಾನ ಸರಕಾರವು ಚೌಕಶಿ ಮಾಡಿಕೊಳ್ಳಲೊಪ್ಪುವದಾಗಿ ಎಣಿಕೆ. ಬರುವ ಶನಿವಾರ ೨೯ನೇ ತಾರೀಖಿಗೆ ಮಹಾತ್ಮರು ಜಲಪರ್ಯಟನ ಮಾಡುವರಾಗಿ ಸಿಮ್ಲಾದೊಳಗಿನ ವರ್ತಮಾನ. ಹೀಗೆ ಆಶೆ ಬೆನ್ನಟ್ಟುತ್ತಿದೆ, ನಿರಾಶೆಯಲ್ಲಿ ಒಂದು ಹುಟ್ಟಿದ !

ಮಹಾತ್ಮರು ಯಾವಾಗಲೂ ಆಶಾವಾದಿಗಳು. ಆದಾಗ್ಯೂ ತಾವು ಲಂಡನಿಗೆ ಹೋಗುವ ಆಶೆಯಿಲ್ಲವಾಗಿ ಮಹಾತ್ಮರು ನುಡಿಯುತ್ತಾರೆ. ದೇಶದ ಕಲ್ಯಾಣವು ಇದರಲ್ಲಿಯೇ ಉಂಟೆಂದು ಮಹಾತ್ಮರು 'ನವಜೀವನ' ಪತ್ರಿಕೆಯಲ್ಲಿ ಬರೆದಿದ್ದಾರೆ. ಸರ್ವಾಧಿಪತಿಗಳು ತಮ್ಮ ಬಿನ್ನಹವನ್ನು ಧಿಕ್ಕರಿಸಿ ಈಶ ಸಂಕೇತದಂತೆ ನಡಕೊಂಡರೆಂದು ಮಹಾತ್ಮರು ಸಮಾಧಾನ ಮಾಡಿಕೊಂಡು ಈಶೇಚ್ಛೆಯಂತೆ ಮುಂದೆ ಎಲ್ಲ ಕಾರ್ಯಕ್ರಮ ನಡೆಯುವದಾಗಿ ನುಡಿಯುತ್ತಾರೆ. ಈಶ ಸಂಕೇತ ಹೇಗಿದೆಂದು ನಿರೀಕ್ಷಿಸುವ !

— ತಾವು ಪ್ರಕಟಿಸಿದ ಪತ್ರವ್ಯವಹಾರವನ್ನು, ಸರಕಾರದ ಮೇಲಿನ ಆರೋಪಗಳ ಪಟ್ಟಿಯನ್ನು ಪ್ರಕಟಿಸಿದ್ದರಿಂದ ಸಂಧಿ ಪ್ರಸ್ತಾಪ ದೂರವಾಗಲಿಕ್ಕೆ ಕಾರಣವಿಲ್ಲ, ಸರಕಾರಕ್ಕೆ ನನ್ನ ಆಹ್ವಾನವಿಲ್ಲ, ಸ್ಥಿತಿ ತಿಳಿಯುವದಕ್ಕಾಗಿ ಸರ್ವಾಧಿಪತಿಗಳ ಅಪ್ಪಣೆ ಪಡೆದು ಪತ್ರವ್ಯವಹಾರವನ್ನು ಪ್ರಕಟಿಸಿದ್ದೇನೆ. ರಾಷ್ಟ್ರೀಯ ಸಭೆಯ ಮೇಲಿನ ಸರಕಾರದ ಆರೋಪಗಳ ಪಟ್ಟಿಯನ್ನು ನಾನು ಸ್ವಾಗತೀಕರಿಸುತ್ತೇನೆ, ಹೀಗೆ ಮಹಾತ್ಮರು ನುಡಿಯುತ್ತಾರೆ. ನಾನು ರೌಂಡ ಟೇಬಲ್ ಪರಿಷತ್ತಿನಲ್ಲಿ ಸೇರಬಾರದೆಂದು ಇಲ್ಲಿಯ ಅಧಿಕಾರಿಗಳು ಕುಹಕ ನಡಿಸಿದರು. ಇಲ್ಲಿಯ ಅಧಿಕಾರಿಗಳ ಒಪ್ಪಿಗೆಯಿಲ್ಲದೆ, ಅವರ ಆಶೀರ್ವಾದವಿಲ್ಲದೆ ನನ್ನಂಥವರು ಹಿಂದುಸ್ಥಾನಕ್ಕೆ ಲಂಡನಿನಿಂದ ಸ್ವರಾಜ್ಯ ತರಲಾರರಾಗಿ ಮಹಾತ್ಮರು 'ಯಂಗ ಇಂಡಿಯಾ' ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ.

ಒಡಂಬಡಿಕೆ ಮುರಿದ ಕಥೆ !

ಕಳೆದ 'ಯಂಗ ಇಂಡಿಯಾ' ಪತ್ರಿಕೆಯಲ್ಲಿ ಮಹಾತ್ಮರಿಗೂ, ಸರಕಾರಿ ಅಧಿಕಾರಿಗಳಿಗೂ ನಡೆದ ಪತ್ರವ್ಯವಹಾರವು ಪ್ರಕಟವಾಗಿದೆ. ತಾ ೨೧-೩-೩೧ ನೇಯಿಂದ ತಾ ೧೪-೮-೩೧ನೇ ವರೆಗಿನ ಪತ್ರ-ಸಂಗ್ರಹವು ಪ್ರಕಟಿಸಲ್ಪಟ್ಟಿದೆ. ಮಹಾತ್ಮರ ರಾಜಕಾರಣ ಕಾರ್ಯದರ್ಶಿಗಳಾದ ಶ್ರೀ ಮಹಾದೇವಭಾಯಿ ದೇಸಾಯಿಯವರು ಈ ಪತ್ರವ್ಯವಹಾರಕ್ಕೆ ಪ್ರಸ್ತಾವನೆ ಬರೆದಿದ್ದಾರೆ. ಈ ಪ್ರಸ್ತಾವನೆಯಲ್ಲಿ ಇಡೀ ಪತ್ರವ್ಯವಹಾರದ ತಾತ್ಪರ್ಯವು ಅಡಕವಾಗಿದೆ. ಅದೇನಂದರೆ:—

ರಾಜಾಧಿಪತಿ ವಿಲಿಂಗ್ಡನ್ ದೊರೆಗಳೊಡನೆ ಹಾಗು ಹಿಂದುಸ್ಥಾನ ಸರಕಾರದ ಮುಖ್ಯ ಕಾರ್ಯದರ್ಶಿಗಳಾದ ಮಿ। ಎಮರಸನ್‌ರವರೊಡನೆ ಚರ್ಚೆ ನಡೆದು ಸರಕಾರಿ ಪ್ರಕಟಣೆಯು ಹಿಕ್ಕಾಗತೆಯನ್ನು ಕಾರ್ಯಕಾರಿ ಮಂಡಳಕ್ಕೆ ತಕ್ಕಂತೆ ತಯಾರಿಸಿ ಮಹಾತ್ಮರು ಲಂಡನಿಗೆ ಹೊರಟರು. ಸಿಮ್ಲಾದಿಂದ ನೆಟ್ಟಗೆ ಮುಂಬಯಿಗೆ, ಅಲ್ಲಿಂದ ಲಂಡನಿಗಾಗಿ ಮಹಾತ್ಮರು ತೆರಳಿದರು. ಆಗ ಉಗಿಬಂಡಿ ಹೊರಡುತ್ತಾಗಿತ್ತು, ಅದರಿಂದ ಸ್ಪೆಶಲ್ ಉಗಿಬಂಡಿಯನ್ನು ರೇಲ್ವೆ ಅಧಿಕಾರಿಗಳು ಓಡುವ ವ್ಯವಸ್ಥೆ ಮಾಡಿದರು. ಈ ಉಗಿಬಂಡಿ ಹತ್ತಿ ಮಹಾತ್ಮರು ದಿಲ್ಲಿಯಲ್ಲಿ ಮುಂಬಯಿಗೆ ಹೋಗುವ ಉಗಿಬಂಡಿ ಹತ್ತಲೋಸುಗ ಸಿಮ್ಲಾದಿಂದ ಗುರುವಾರ ರಾತ್ರೆ ೧೧॥ ಘಂಟೆಗೆ ಹೊರಟರು. ದಿಲ್ಲಿಯಲ್ಲಿ ಶುಕ್ರವಾರ ಮುಂಜಾವಿಗೆ ಇಡೀ ಸ್ಟೇಶನು ಜನಸಂದಣಿಯಿಂದ ಕಿಕ್ಕಿರಿದುಹೋಗಿತ್ತು. ಇಲ್ಲಿ ಪೇಶಾವರ ಸಿಮ್ಲಾ ಮಾರ್ಗವಾಗಿ ಬಂದ ಟಪಾಲ ಉಗಿಬಂಡಿಯು ಆಬ್ಬಾಗಮಾಗುತ್ತದೆ. ಬೊಂಬೇ ಬರೋಡಾ ಸೆಂಟ್ರಲ್ ಇಂಡಿಯನ್ ರೇಲ್ವೆ ಮತ್ತು ಗ್ರೇಟ ಇಂಡಿಯನ್ ಪೆನಿನ್ಸುಲಾ ರೇಲ್ವೆ; ಹೀಗೆ ಎರಡು ಮಾರ್ಗಗಳಿಂದ ಜನರು ಪ್ರಯಾಣ ಮಾಡುತ್ತಾರೆ. ಮಹಾತ್ಮರು ಸಿಮ್ಲಾದಿಂದ ದಿಲ್ಲಿಗೆ ಮುಂಜಾವಿಗೆ ಬಂದು ತಲ್ಪಲಿಲ್ಲ, ಸ್ವಲ್ಪ ವಿಳಂಬವಾಯಿತು. ಮಹಾತ್ಮರಿಗೆ ಕಾಯ್ದಿರಿಸಿದಂತೆ ಹೊರಡುವ ಈ ಉಗಿಬಂಡಿಗಳಿಗೆ ಹೊರಡಲು ಆಗಲಿಲ್ಲ. ಸಿಮ್ಲಾ ಪರಿವಾರವು ೮-೩೦ ಘಂಟೆಗೆ ದಿಲ್ಲಿಗೆ ಬಂದು ತಲ್ಪಿತು. ಸರದಾರ ವಲ್ಲಭಭಾಯಿ ಪಟೇಲ, ಪಂಡಿತ ಜವಾಹಿರಲಾಲ, ಶ್ರೀ। ದೇವಿದಾಸ ಮಹಾದೇವಭಾಯಿ ಮೊದಲಾದ ಮಹಾತ್ಮರ ಪರಿವಾರದವರು ಕೆಳಗಿಳಿದರು. ಮಹಾತ್ಮರು ಮಾತ್ರ ಎಲ್ಲಿಯೂ ಕಾಣಲಿಲ್ಲ. ಸಿಮ್ಲಾದಿಂದ ಬಂದ ೧ನೇ ವರ್ಗದ ಡಬ್ಬಿಯಲ್ಲಿ ಸರ್ ಪ್ರಭಾಶಂಕರ ಪಟ್ಟಣಿಯವರೊಡನೆ ಮಹಾತ್ಮರು ಕುಳಿತಿದ್ದರು. "ಮಹಾತ್ಮಾ ಗಾಂಧೀಕೀ ಜಯ! ಅಹೋ, ಮಹಾತ್ಮರು!" ಹೀಗೆ ಅನ್ಯಾನ್ಯ ಜನರು ಅತ್ಯುತ್ಸಾಹ ತೋರಿಸಿ ತಂಡುಗಟ್ಟಿ ಓಡ್ಯಾಡುತ್ತಿದ್ದರು. ಉಗಿಬಂಡಿ ಬಿಡುವ ತಯಾರಿಯಾದ ಕೂಡಲೆ ಮಹಾತ್ಮರು ಥಟ್ಟನೆ ಕೆಳಗಿಳಿದು ತಮಗಾಗಿ ಕಾದಿಟ್ಟ ಇಂಟರ ಕ್ಲಾಸ ಡಬ್ಬಿಯಲ್ಲಿ ಹೋಗಿ ಕೂತರು. ಆಗ ಇಡೀ ಸ್ಟೇಶನು ಮಹಾತ್ಮರ ಜಯಘೋಷದಿಂದ ತುಂಬಿಹೋಯಿತು. ಉಗಿಬಂಡಿ ಹೊರಟಿತು; ಅಷ್ಟರಲ್ಲಿ ಡಾ। ಅನ್ಸಾರಿಯವರು ಮಹಾತ್ಮರ ಅಪ್ಪಣೆ ಪಡೆದು ಇಲ್ಲಿಯೇ ಇಳಿದರು. ದಿಲ್ಲಿಯಿಂದ ಮಹಾತ್ಮರು ಅಲ್ಲಲ್ಲಿ ತಕ್ಕ ಸತ್ಕಾರಗಳನ್ನು ಸ್ವೀಕರಿಸುತ್ತ, ಶನಿವಾರ ಮುಂಜಾವಿಗೆ ಬಲಸಾರ ಸ್ಟೇಶನಿಗೆ ತಲ್ಪಿದರು. ಆಗ 'ಮುಂಬಯಿ ಕ್ರಾನಿಕಲ್' ಪತ್ರಿಕೆಯ ಪ್ರತಿನಿಧಿಗಳು ಉಪಾಯದಿಂದ ಮಹಾತ್ಮರ ಡಬ್ಬಿಯಲ್ಲಿ ಸೇರಿದರು. ಆಗ ಮಹಾತ್ಮರು ಪತ್ರಗಳಿಗೆ ಉತ್ತರಗಳನ್ನು ಹೇಳಿ ಬರೆಸುತ್ತಿದ್ದರು. ಪತ್ರಗಳ ದೊಡ್ಡ ರಾಶಿ ಬಿದ್ದಿತ್ತು. ಬಲಸಾರದಿಂದ ಬಂಡಿಯು ಪಾಲಘಾಟ ಸ್ಟೇಶನಿಗೆ ತಲ್ಪಿತು. ಅಲ್ಲಿ ಒಬ್ಬ ಮುದಿ ಹೆಂಗಸು ಮಹಾತ್ಮರಿಗೆ ಕಾಣಲು ಬೇಕೆನಿಸಿದಳು, ಕೂಡಲೇ ಅವಳಿಗೆ ಮಹಾತ್ಮರ ಕಡೆ ಹುಯ್ಯಲು, ಅವಳು ಮಹಾತ್ಮರಿಗೆ ಸಾಷ್ಟಾಂಗವೆರಗಿ ಆನಂದಬಾಷ್ಪಗಳನ್ನು ಸುರಿಸಿದಳು. ಮಹಾತ್ಮರು ಅವಳಿಗೆ ಸಾವಕಾಶವಾಗಿ ಎತ್ತಿ ಹಿಡಿದು ಅವಳ ವಯಸ್ಸು ಕೇಳಿದರು. "ನನಗೆ ೮೦ ವರ್ಷ!" ಹೀಗೆ ಅವಳು ಉತ್ತರಿಸಿದಳು "ಇಷ್ಟು ವರ್ಷಗಳ ತನಕ ನಾನು ಬದುಕಿದರೆ, ದೇಶಕ್ಕೆ ಬಹಳ ಸೇವೆ ಮಾಡುವೆನೆಂದು ಮಹಾತ್ಮರು ಉದ್ಗರಿಸಿದರು. ಆ ಮೇಲೆ 'ಕ್ರಾನಿಕಲ್' ಪತ್ರಿಕೆಯ ಪ್ರತಿನಿಧಿಗಳು ಮಹಾತ್ಮರ ಮುಲಾಖತನ್ನು ಪಡೆದರು. "ಸರಕಾರಿ ಅಂತರಂಗವು ಬದಲಾಗಲಿಲ್ಲ; ರಾಷ್ಟ್ರೀಯ ಸಭೆಯು ತತ್ವಗಳನ್ನು ತ್ಯಜಿಸಲಿಲ್ಲ. ರಾಷ್ಟ್ರೀಯ ಸಭೆಯು ಪ್ರಕಟಿಸಿದ ತತ್ವದೊಳಗಿನ ಆರೋಪಗಳನ್ನು ಪರಿಹರಿಸಲು ಹಿಂದುಸ್ಥಾನ ಸರಕಾರವು ಮನಃಪೂರ್ವಕವಾಗಿ ಪ್ರಯತ್ನ ಮಾಡುವದು, ಸಮಾಧಿಪತ್ರಗಳು ಹಾಗೆ ಆಶ್ವಾಸನ ಕೊಟ್ಟ ಉತ್ತರ ಸಂಯುಕ್ತ ಪ್ರಾಂತದೊಳಗಿನ ಕಿಸಾನ ಒಕ್ಕಲಿಗರ ತೊಂದರೆಯನ್ನು ಪರಿಹರಿಸುವದಕ್ಕಾಗಿ ಪಂಡಿತ ಜವಾಹಿರಲಾಲರೊಡನೆ ಚರ್ಚೆಯಾಗಿ ಕಾರ್ಯಕ್ರಮವು ನಿಶ್ಚಯಿಸಲ್ಪಟ್ಟಿದೆ, ಈಗಿನ ಪರಿಸ್ಥಿತಿಯು ಮೇಲಿಂದ ರೌಂಡ ಟೇಬಲ್ ಪರಿಷತ್ತಿನಲ್ಲಿ ಒತ್ತಿ ಹೋಗುವದಿಲ್ಲ, ಆದಾಗ್ಯೂ ನಾನು ಆಶಾವಾದಿ, ಕಗ್ಗತ್ತಲೆಯಾದಾಗ್ಯೂ ನಾನು ಆಶಾಕಿರಣವನ್ನು ಹುಡುಕುತ್ತೇನೆ. ರಾಷ್ಟ್ರೀಯ ಸಭೆಯವರು ಸತ್ಯದಿಂದಲೂ, ಅಹಿಂಸೆಯಿಂದಲೂ ನಡಕೊಳ್ಳಲಿ, ರಾಷ್ಟ್ರೀಯ ಸಭೆಯ ಅಜ್ಞೆಯಂತೆ ರೌಂಡ ಟೇಬಲ್ ಪರಿಷತ್ತಿನಲ್ಲಿ ನಾನು ಸ್ವರಾಜ್ಯದ ಆಗ್ರಹ ಹಿಡಿಯುವೆನು, ಅದಕ್ಕಿಂತ ಕಡಿಮೆಯಾದ ಸ್ವರಾಜ್ಯವನ್ನು ನಾನು ಅಂಗೀಕರಿಸಲಿಕ್ಕಿಲ್ಲ, ಹಿಂದೂ-ಮುಸಲ್ಮಾನರ ಐಕ್ಯ ರಾಷ್ಟ್ರೀಯ ಸಭೆಯು ಕೈಕೊಂಡ ಠರಾವಿಗೆ ನಾನು ಬದ್ಧನಿದ್ದೇನೆ, ಶೀಂ...ಖಾಯದ ಜನರು ಕರೆದರೆ, ಹೋಗುತ್ತೇನಾಗಿ ...ಮಾತು ಕೊಟ್ಟಿದ್ದೇನೆ, ಯುರೋಪದ ದೇಶಗಳಲ್ಲಿಯೂ ನಾನು ಅಡ್ಡಾಡಬಹುದು. ರಾಜಕೀಯ ಪರಿಸ್ಥಿತಿ ಮಾತ್ರ ಅನುಕೂಲವಿರಬೇಕು. ಸ್ವರಾಜ್ಯ ಸಿಕ್ಕಿದರೆ ರಾಜಕಾರಣವನ್ನು ನಾನು ತೊರೆದು ಬಿಡಲಿಕ್ಕಿಲ್ಲ. ಸರಕಾರಿ ಕೆಲಸದವರಲ್ಲೇ ನಾನು ಉಳಕೊಳ್ಳುವೆ, ಅವರು ನನ್ನಂತೆಯೇ ಬಡವರಿಗಾಗಿ ದುಡಿಯುವರೇ." ಹೀಗೆ ಮಹಾತ್ಮರು 'ಕ್ರಾನಿಕಲ್' ಪತ್ರಿಕೆಯ ಪ್ರತಿನಿಧಿಗಳ ಬಳಿ ನುಡಿದರು. ಇನ್ನು 'ಕ್ರಾನಿಕಲ್' ಪತ್ರಿಕೆಯವರು ಮಹಾತ್ಮರಿಗೆ ಕೇಳ ಹತ್ತಲು, "ನನ್ನ ಕಡೆಯಿಂದ ಬಹಳ ಕೇಳಿಕೊಂಡಿರುವಿರಿ, ಇನ್ನು ನನ್ನ ಉಪಕಾರ ಮನ್ನಿಸಿ ನೀವು ಇಲ್ಲಿಂದ ಬಿಡಿಹೋಗಬೇಕು." ಹೀಗೆ ಮಹಾತ್ಮರು ಪತ್ರಿಕಾ ಪ್ರತಿನಿಧಿಗಳ ಬಳಿ ಮಾತನಾಡುತ್ತಿರುವಾಗ ಉಗಿಬಂಡಿಯು ಮುಂಬಯಿ ಪಟ್ಟಣಕ್ಕೆ ತಲ್ಪಿತು. ಅಲ್ಲಿ ಕಾಂಗ್ರೆಸ ಕಮಿಟಿಯ ಸತ್ಕಾರ ಸ್ವೀಕರಿಸಲು ಮಹಾತ್ಮರು ಇಳಿಯುವವರಿದ್ದರು, ಆದರೆ, ಜನಸಂದಣಿಯ ಮೂಲಕ ಇಳಿಯಲಿಲ್ಲ. ಉಗಿಬಂಡಿ ಮುಂದಾಯಿತು ಮಹಾತ್ಮರು ದಾದರದಲ್ಲಿ ಇಳಿದರು. ನೆಟ್ಟಗೆ ಮೋಟಾರದ್ವಾರಾಗಿ ಅಝಾದ ಮೈದಾನಿಗೆ ತೆರಳಿದರು. ಮಹಾತ್ಮರ ಮೋಟಾರವನ್ನು ಅಲ್ಲಲ್ಲಿ ನಿಲ್ಲಿಸಿ ಜನರು ಮಹಾತ್ಮರಿಗೆ ನೂಲಿನ ಮಾಲೆಗಳನ್ನೂ, ಪುಷ್ಪಹಾರಗಳನ್ನೂ ಅರ್ಪಿಸುತ್ತಿದ್ದರು. ಇಡೀ ಮೋಟಾರು ತರತರದ ಹೂವುಗಳಿಂದ ತುಂಬಿ ಹೋಯಿತು. ಮಹಾತ್ಮರು ಅಝಾದ ಮೈದಾನದ ಎಡಬದಿಯ ಉಪ್ಪರಿಗೆಯನ್ನು ಹತ್ತಿ ಮಾತನಾಡಿದರು.

"ನಾನೀಗ ಲಂಡನಿಗೆ ಹೊರಟಿದ್ದೇನೆ, ಈ ಸಮಯ ನನಗೆ ತಾವೆಲ್ಲರೂ ಆಶೀರ್ವಾದ ಕೊಡಬೇಕೆಂದು" ಮಹಾತ್ಮರು ಹೇಳಿದೊಡನೆ, ಅಝಾದ ಮೈದಾನದಲ್ಲಿ ತಂಡುಗಟ್ಟಿ ಸೇರಿದ ಸಾವಿರಾರು ಸ್ತ್ರೀ-ಪುರುಷರು, ಆಬಾಲವೃದ್ಧರು ಚಪ್ಪಾಳೆಯ ಘೋಷದಿಂದ ಮಹಾತ್ಮರಿಗೆ ಆಶೀರ್ವಾದವನ್ನಿತ್ತರು. "ಸರಕಾರದೊಡನೆ ನಾನು ೩ನೇ ಬಾರಿ ರಾಜಿ ಮಾಡಿಕೊಂಡಿದ್ದೇನೆ; ಅದನ್ನು ಚನ್ನಾಗಿ ಪರಿಶೀಲಿಸಿರಿ, ಅದರಂತೆ ವರ್ತಿಸಿರಿ, ಕಾಂಗ್ರೆಸ್ಸಿಗರಾಗಬೇಡಿ. ನನ್ನ ಮೇಲೆ ರಾಷ್ಟ್ರವು ನಂಬಿಗೆ ಇಟ್ಟಿದೆ; ಆ ನಂಬಿಗೆಯಿಂದಲೇ ನಾನು ರಾಷ್ಟ್ರದ ಹಿಡಿಯೊಂಟಿಗ ಪ್ರತಿನಿಧಿಯಾಗಿದ್ದೇನೆ; ನನ್ನ ದೋಷಗಳನ್ನು ನಾನು ಬಲ್ಲೆ, ಪರಿಸ್ಥಿತಿಯನ್ನೂ ಜವಾಬ್ದಾರಿಗಳನ್ನೂ ಬ್ರಿಟಿಶ ನೇತಾರರ ಸ್ಥಿತಿಯನ್ನು ವಿಚಾರಿಸಿದರೆ, ನಾನು ನಿಮಂತ್ರಣ ಸ್ವೀಕರಿಸಬೇಕಿದ್ದಿಲ್ಲ. ಆದರೆ, ನಿಮ್ಮ ನಂಬಿಗೆಯೇ ನನಗೆ ಹಿಮಾಲಯದಷ್ಟು ದೊಡ್ಡ ಆಧಾರ; ಇದರಿಂದ ನನ್ನ ಮೇಲಿನ ಯಾವತ್ತು ಜವಾಬ್ದಾರಿಗಳು ದೂರವಾಗುವವೆಂದು ನಾನು ತಿಳಿಯುತ್ತೇನೆ; ಕೋಟ್ಯಾವಧಿ ದೇಶಬಾಂಧವರು ಕೂಳಿಗೆ, ಗತಿಯಿಲ್ಲದೆ ಅಲೆದಾಡುತ್ತಿದ್ದಾರೆ; ರಾಷ್ಟ್ರೀಯ ಸಭೆಯು ಅವರ ಸ್ಥಿತಿಯನ್ನು ಸುಧಾರಿಸುವದಕ್ಕಾಗಿ ಯತ್ನಿಸುತ್ತಿದೆ. ಈ ಪ್ರಕಾರ ನಮ್ಮ ರಾಷ್ಟ್ರವು ಹೇಳವನಂತೆ ದುರ್ಬಲವಾಗಿದೆ, ನಾನೂ ದುರ್ಬಲನೇ! ದುರ್ಬಲ ರಾಷ್ಟ್ರದ ಪ್ರತಿನಿಧಿಯಾಗಲು ದುರ್ಬಲನೇ ಯೋಗ್ಯನು; ದುರ್ಬಲನಿಗೇ ದುರ್ಬಲ ರಾಷ್ಟ್ರದ ಅಂತರಂಗದ ಪ್ರತೀತಿಯಾಗುತ್ತದೆ. ಸತ್ಯ-ಅಹಿಂಸೆಗಳ ಪ್ರತಿನಿಧಿಯಾಗಿ ನಾನು ಲಂಡನಿಗೆ ಹೋಗುತ್ತೇನೆ, ಸತ್ಯ-ಅಹಿಂಸೆಗಳು ಕೊನೆಗೆ ಎಲ್ಲ ವಿಘ್ನಗಳನ್ನು ಪರಿಹರಿಸಿ ಸ್ವಯಂಪ್ರಕಾಶದಿಂದ ಮೆರೆಯುವವೆಂದು ನಾನು ಸಂಪೂರ್ಣವಾಗಿ ನಂಬಿಕೊಂಡಿದ್ದೇನೆ; ನನಗೆ ಪರಮಾತ್ಮನಲ್ಲಿ ಸಂಪೂರ್ಣ ಶ್ರದ್ಧೆಯಿದೆ, ಆತನೇ ಈಗಿನ ಅವಸ್ಥೆಯನ್ನು ಒದಗಿಸಿ ತಂದಿದ್ದಾನೆಂದು ನನ್ನ ನಂಬಿಗೆ. ಪರಮಾತ್ಮನನ್ನು ನಂಬಿಕೊಂಡವರು ಯಶಸ್ಸು ಪಡೆಯಲೇ ಬೇಕು. ನಿಃಶಸ್ತ್ರರಾಗಿ ಹೊರಟ ದುರ್ಬಲರ ರಕ್ಷಣೆಯ ಭಾರವು ಪರಮಾತ್ಮನಿಗೇ ಹೊಂದಿಕೊಂಡಿದೆ. ನಮ್ರ ಭಾವದಿಂದ ದುರ್ಬಲರೆಂದು ಭಾವಿಸಿ ದುಡಿಯುವವರೇ ವಿಜಯಶಾಲಿಗಳಾಗುತ್ತಾರೆ. ಅಹಿಂಸೆಯು ಬಹು ದೊಡ್ಡ ಸಾಮರ್ಥ್ಯವು, ಅದರಿಂದ ಬಹಳ ಕಾರ್ಯಭಾಗವಾಗುವದು. ಆ ನಂಬಿಗೆಯಿಂದಲೇ ನಾನು ಈಗ ಹೊರಟಿದ್ದೇನೆ. ಬರಿಗೈಯಿಂದ ಹಿಂತಿರುಗಿದರೂ ನೀವು ನಿರಾಶರಾಗಕೂಡದು; ಯಶಪ್ರಾಪ್ತಿಯಾದಲ್ಲಿ ನೀವು ಉಬ್ಬಿ ಹೋಗಕೂಡದು. ಯಶಾಪಯಶಗಳು ಪರಮಾತ್ಮನ ಅಧೀನವಾದವುಗಳು. ರಾಷ್ಟ್ರೀಯ ಸಭೆಯ ಅಜ್ಞೆಯಂತೆ ನಾನು ನಡಕೊಳ್ಳುವೆನು; ನಿಮಗೆ ದ್ರೋಹ ಮಾಡತಕ್ಕದ್ದಾದರೆ, ನಿಮ್ಮ ಮೇಲೆ ದ್ರೋಹ ಬಗೆದರೆ, ನನಗೆ ನೀವು ರಾಷ್ಟ್ರೀಯ ಸಭೆಯಿಂದ ಹೊರತಳ್ಳಬಹುದು. ನನಗೆ ಕೊಂದು ಹಾಕಬಹುದು; ನಾನು ಅದು ಹಿಂಸೆ ಎಂದು ಎಣಿಸಲಾರೆ, ಅಹಿಂಸೆಯೊಂದೇ ಎಣಿಸುವೆನು; ನಾನು ನಿಮಗೆ ಮೋಸಮಾಡಲಾರೆ. ನಿಮ್ಮಂಥ ದುರ್ಬಲರಿಗೆ ನಿರಾಧಾರಿಗಳಿಗೆ ನಾನು ಹೇಗೆ ಮೋಸ ಮಾಡಬಲ್ಲೆ? ನನಗೆ ವೈರಿಗಳಿಲ್ಲ. ಹಿಂದುಸ್ಥಾನದೊಳಗಿನ ಸಮಸ್ತ ಪ್ರಜೆಗಳ ಪರವಾಗಿ ನಾನು ಹೋರಾಡುತ್ತೇನೆ; ಯಾರಿಗೂ ಕೇಡು ಬಗೆಯಲಾರೆ." ನನ್ನ

ಧರ್ಮವನ್ನು ನಾನು ನಿಮ್ಮ ಬಳಿ ನಿವೇದಿಸಿದ್ದೇನೆ. ನೀವು ರಾಷ್ಟ್ರೀಯ ಸಭೆಯ ಆಜ್ಞೆಯನ್ನು ಪರಿಪಾಲಿಸಬೇಕು. ನನ್ನ ಯಾತ್ರೆಯು ಸಾಧ್ಯವಾಗಲೆಂದು ನೀವು ಈಗ ನನಗೆ ಹರಸಿರಿ. ನಿಮ್ಮ ಆಶೀರ್ವಾದದಿಂದಲೂ ದಯಾಸಾಗರನ ದಯೆಯಿಂದಲೂ ನನ್ನ ಕಾರ್ಯವು ಸಾಧ್ಯವಾಗುವದು." ಹೀಗೆ ಮಹಾತ್ಮರು ಆಝಾದ ಮೈದಾನದಲ್ಲಿ ಸೇರಿದ ರಾಷ್ಟ್ರಪುರುಷರ ಕಡೆಯಿಂದ ಆಶೀರ್ವಾದ ಪಡೆದುಕೊಂಡು ಪುನಃ ಮೋಟಾರ ಹತ್ತಿ ಮಣಿ ಭವನಕ್ಕೆ ಮರಳಿದರು.

ಅಲ್ಲಿಯೂ ಒಬ್ಬರಂತೆ ಮಹಾತ್ಮರಿಗೆ ಹಾರೈಸುತ್ತ ಜನರು ಮಣಿಭವನದ ಸುತ್ತುಮುತ್ತ ನೆರೆದಿದ್ದರು. ಸ್ವಯಂಸೇವಕರು ಒಳಸೇರುವವರನ್ನು ಅಟ್ಟೋಡಿಸುತ್ತಿದ್ದರು. ಶ್ರೀಮತಿ ವಿಠಲಬಾಯಿಯವರು, ಹಾರವೇ ಮೊದಲಾದ ಕರಕುಶಲ ಸಾಮಾನುಗಳನ್ನು ಕಟ್ಟುತ್ತಿದ್ದರು. ಕಸ್ತೂರಬಾ ಅವರು ಹೊರಗೆ ಬಂದರು. ನಿದ್ದೆ ಮಾಡಿದ್ದವರಂತೆ, ಆಶ್ರಮ ಸಮಾಚಾರವನ್ನು ವಿಚಾರಿಸುತ್ತಿಯುವವರು ಹ್ಯಾಗೆ ಸಂಪಾದಿಸಿದರೆಂದು ಎತ್ತಿ ಹೇಳುವಷ್ಟು ಕೇಳುತ್ತಿದ್ದರೆ ಉಗಿಹಡಗಿನ ಕಂಪನಿಯವರ ಮಣಿ ಭವನದಲ್ಲೇ ಬಂದು ಮಹಾತ್ಮರ ಗಂಟು-ಪೆಟ್ಟಿಗೆಗಳನ್ನು ಒಯ್ಯುತ್ತಿದ್ದರು. ಸುಮಾರು ೩ ಪೆಟ್ಟಿಗೆ ಕಟ್ಟಿದ್ದರು. ಮುದ್ರಿಸಿದ ಕ್ಯಾರಟ ಯೂ ಇತ್ತು. ಮಹಾತ್ಮರ ಕಾರ್ಯದರ್ಶಿಗಳಾದ ಶ್ರೀ| ಮಹಾದೇವಭಾಯಿಯವರೂ, ಶ್ರೀ| ಪ್ಯಾರೇಲಾಲರವರೂ ಅಲ್ಲಿ ಪುಸ್ತಕಗಳ ಪಾಸುಗಳನ್ನು ಸರಿಪಡಿಸುತ್ತಿದ್ದರು. ಮಹಾತ್ಮರು ಉಪ್ಪರಿಗೆಯ ಮೇಲೆ ಹೋದರು. ಸರದಾರ ವಲ್ಲಭಭಾಯಿ ಪಟೇಲ, ಪಂಡಿತ ಜವಾಹರಲಾಲ ನೆಹರೂ, ಸೌ| ಸರೋಜಿನಿ ನಾಯುಡುರವರೊಡನೆ ಮುಂದಿನ ಕ್ರಮದ ಕುರಿತು ಮಹಾತ್ಮರು ಮಾತನಾಡಿದರು. ಶ್ರೀ| ಪರ್ಸಿ ಮೆಹೆರ್ ನ ಸರ್ಗುಪ್ತರವರು ಅದರಾಚೆ ಕಲಕತ್ತೆಯಿಂದ ಬಂದು ಬಂಗಾಲದಲ್ಲಿ ನಡೆದ ದಬ್ಬಾಳಿಕೆಯನ್ನು ಮಹಾತ್ಮರಿಗೆ ಅರುಹಿದರು. ಶ್ರೀ| ದಾಸ್ಗುಪ್ತರಾದ ಅನೇಯವರು ಪಂಜಾಬ ಪ್ರಾಂತದ ಪ್ರಶ್ನೆಯನ್ನು ಚರ್ಚಿಸಿದರು. ಅಷ್ಟರಲ್ಲಿ ಪೋಲೀಸ ಅಧಿಕಾರಿಯು ಮಹಾತ್ಮರಿಗೂ ಅವರ ಪರಿವಾರದವರಿಗೂ ಪಾಸಪೋರ್ಟ ತೊಂದುಕೊಟ್ಟರು. ಮಹಾತ್ಮರಿಗೆ ಉಪ್ಪಿಟ್ಟಿಯೇನು ಕೇಳಲು, 'ಪಸ್ತು ಮಾಡಿದ ಬೆರಿಕ್ಕರಿ' ಎಂದು ಮಹಾತ್ಮರು ವಿನೋದದಿಂದ ನುಡಿದರು. ಸ್ನಾನ ಮೊದಲಾದ ವಿಧಿಗಳನ್ನು ತೀರಿಸಿಕೊಂಡು ಮಹಾತ್ಮರು ಸವಿನಯ ಹೊರಟರು. ಕೆಲವು ಕಾರ್ಯಕರ್ತರು ಮಹಾತ್ಮರಿಗೆ ಭಾರ್ಗವ ಕಿಲಕದಿಂದ ಬರೆಯಿಸಿದ ಬಳಿಕ, ಮಹಾತ್ಮರು ಉಪ್ಪರಿಗೆಯ ಕೋಣೆಯನ್ನಿಳಿದು ಬಂದು ಎಲ್ಲರಿಗೆ ದರ್ಶನವನ್ನಿತ್ತರು. ಆಗ "ಮಹಾತ್ಮಾ ಗಾಂಧೀಕಿ ಜಯ" ಎಂಬ ನಿನಾದದಿಂದ ಭೂಮ್ಯಾಕಾಶಗಳು ದುಮುದುಮಿಸಿದವು. ಈ ಪ್ರಕಾರ ಮಹಾತ್ಮರು ಅಪ್ಪಣೆ ಪಡೆದುಕೊಂಡು—ಕೆಳಗಿಳಿಯುವಷ್ಟರಲ್ಲಿ—ನಿಷ್ಠಣೆಯ ಬಳಿ ಬಿಟ್ಟ ಚಿಕ್ಕ ಸಾಹೇಬ ಹುಡುಗನು ಸಾಷ್ಟಾಂಗವೆರಗಿ "ಬ್ರಿಂಗ ಸ್ವರಾಜ್ಯ" (ಸ್ವರಾಜ್ಯ ಸಂಪಾದಿಸಿಕೊಂಡು ಬನ್ನಿ) ಹೀಗೆ ನುಡಿದನು. ಮಹಾತ್ಮರು ಆತನಿಗೆ ಮುದ್ದಿಟ್ಟರು. ಹುಡುಗನಿಗೆ ಹೇಳಲಾರದಷ್ಟು ಆನಂದವಾಯಿತು. "ಬ್ರಿಂಗ ಸ್ವರಾಜ್ಯ ಫುಲ್ ಎಂಡ್ ಕಂಪ್ಲೀಟ" (ಸಂಪೂರ್ಣ, ಪರಿಪೂರ್ಣ ಸ್ವರಾಜ್ಯ ತನ್ನಿ) ಹೀಗೆ ಹುಡುಗನು ಮತ್ತೆ ಮಹಾತ್ಮರಿಗೆ ಹರಸಿದನು. ಮಹಾತ್ಮರು ನಿಷ್ಠಣಿಕೆ ಇಳಿದುಬಂದರು. ಪಂಡಿತ ಜವಾಹಿರಲಾಲ ನೆಹರೂ,

"ನಾನು ದೇವರನ್ನೇ ನಂಬಿಕೊಂಡು ಹೊರಟಿದ್ದೇನೆ."

ವಿಠಲಭಾಯಿಯ ಮೊದಲಾದವರು ಮೊಟಾರಿನಲ್ಲಿ ರಾಗಿ ಮುಂದಾದರು. ಸರಿಯಾಗಿ ೧೧ ಘಂಟೆಗೆ ಮಹಾತ್ಮರು ಬಲ್ಲಾರ್ಡ ಪಿಯರ ಬಂದರದ ಮೇಲೆ ಬಂದರು. ಆಗ ಪುನಃ "ಮಹಾತ್ಮಾ ಗಾಂಧೀಕಿ ಜಯ" ಎಂಬ ಜಯಘೋಷದವಾಯಿತು. ಸಮುದ್ರವು ದ ಮುಮುಮಿಸಿತು. ಈ ಪ್ರಕಾರ ಜಯಘೋಷಗಳಿಂದ ಮಹಾತ್ಮರು ಹರಸಿಕೊಳ್ಳುತ್ತ ಬಲು ದರ್ಶನಕ್ಕೆ ಕೊಡು ಮಾಡಿದರು ಅಲ್ಲಿಯ ನೋಟ ವರ್ಣಿಸಲರದು.

ಧಡದ ಮೇಲಿನ ಜನಸಂದಣಿಗೆ ಧಡದ ಆಚೆಯ ಸಮುದ್ರದ ತಡಿಯೇ ಕೊಳ್ಳುತ್ತಿತ್ತು! ಅಷ್ಟು ಕಿಕ್ಕಿರಿದ. ಕಂಡುಗಟ್ಟ ಜನಸ್ತೋಮ ನೆರೆದಿತ್ತು. ಮುಂಬಯಿಯಲ್ಲಿ ಆ ದಿನ ಹಿಪ್ಪತ್ತು ಎತ್ತು ಸಮೃದ್ಧಿಯಿತ್ತು. ಮಹಾತ್ಮರಿಗೆ ಅಪ್ಪಣೆ ಕೊಡುವದಕ್ಕಾಗಿ, ಪತ್ರಿಕೆಯ ಪ್ರತಿನಿಧಿಗಳು ಹರಿಸಿ ಕಾದುದು ದಕ್ಕಾಗಿ ದೇಶಾಭಿಮಾನಿಗಳು ನಾಲ್ಕು ದಿವಸಿಂದ ಧರ್ಮಯುಕ್ತ ರಾಗಿದ್ದರು, ಸಾಗುತ್ತಿದ್ದರು ಮೊದಲು ಸ್ವಾತಂತ್ರ್ಯದ ಸಕಲ ಮುತ್ತಲಿನ ಕಟ್ಟಡಗಳಲ್ಲಿ ಉತ್ಸಾಹ ಭರಿತ ಸ್ತ್ರೀ-ಪುರುಷರಿಂದ ತುಂಬಿ ಹೋಗುತ್ತಿದ್ದವು ಮಾರ್ಗದ ಮೇಲೆಯು ಕಟಿದಾರಳಿಂದಲೂ ಎಲ್ಲರೂ ಮಹಾತ್ಮರನ್ನೇ ಹಾರೈಸುತ್ತಿದ್ದರು. ಸ್ವಯಂಸೇವಕರೂ, ದೇಶಸೇವಿಕೆಯರೂ, ಪೋಲೀಸರೂ, ಕಾಂಗ್ರೆಸರೂ ಸಹಕಾರದಿಂದಲೂ, ಪ್ರೇಮದಿಂದಲೂ, ವ್ಯವಸ್ಥೆಯಿಂದಲೂ ವ್ಯವಸ್ಥೆ ಕಾದಿರುವ ನೋಟ ನೋಡತಕ್ಕ ಸಂತೋಷವಾಯಿತು. ಎಲ್ಲೆಲ್ಲಿಯೂ ಕೇಸರಿ ರಾಷ್ಟ್ರಧ್ವಜವು ವಿಜಯದಿಂದ, ಅಭಿಮಾನದಿಂದ ಹಾರಾಡುತ್ತಿತ್ತು. "ಮಹಾತ್ಮಾ ಗಾಂಧೀಕಿ ಜಯ" ಎಂಬ ಜಯಘೋಷವು ಆಗಿಂದಾಗ ಎದ್ದೇಳುತ್ತಿತ್ತು. ಅಷ್ಟರಲ್ಲಿ ಹನ್ನೆರಡರ ಸಮಯವಾಯಿತು. ಆಗ ೧೨॥ ಬಡಿದಿತ್ತು. "ಗಾಂಧೀಕಿ ಜಯ" "ಭಾರತ ಮಾತಾಕಿ ಜಯ" ಎಂಬ ಜಯಘೋಷಗಳಿಂದ ಮಹಾತ್ಮರ ಆಗಮನದ ದುಂದುಭಿ ಮೊಳಗಿತು. ಮಹಾತ್ಮರು ತಲೆಬಗ್ಗಿಸಿ, ಕೈಜೋಡಿಸಿ ನಸುನಗುತ್ತ ಜನತೆಗೆ ವಂದಿಸುತ್ತಿದ್ದರು. ಮಹಾತ್ಮರಿಗೆ ಸುತ್ತಲೂ ತುಂಬಿ ಪುಷ್ಪಹಾರಗಳನ್ನು, ನೂಲಿನ ಮಾಲೆಗಳನ್ನು ಹಾಕಿದ್ದರು. ಆ ಹೂವಿನ ನೋಡಿ ಪುನಃ ಜಯಘೋಷಗಳಾದವು. ಎಡಗಡೆ ಪೋಲೀಸ ಅಧಿಕಾರಿಗಳು, ಬಲಗಡೆ ಸರದಾರ ವಲ್ಲಭಭಾಯಿಯವರು, ಹೀಗೆ ಮಹಾತ್ಮರು ಹಡಗದ ಮೇಲೆ ಕಾಲಿಟ್ಟೊಡನೆ ಮಹಾತ್ಮರಿಗೆ ಪುನಃ ಹೂಮಾಲೆಗಳಿಂದ ಸತ್ಕರಿಸಿದರು. ಅಷ್ಟರಲ್ಲಿ ಬಟ್ಟ ಹೆಂಗಸು ಲಗಬಗೆಯಿಂದ ಓಡಿಹೋಗಿ ಮಹಾತ್ಮರ ಚರಣಗಳ ಬಳಿಗೆ ಮೇಲೆ ಹಣ್ಣು-ಹೂವುಗಳ ಬುಟ್ಟಿಯನ್ನಿಟ್ಟು ಕಾಣಿಕೆ ಕೊಟ್ಟಳು. ಹಡಗದ ಮೇಲೆ ಮಹಾತ್ಮರು ಹತ್ತಿದ್ದ ಅಡ್ಡಾಡಿ ಅಪ್ಪಣೆ ಕೊಡಬಂದ ಲೋಕನಾಯಕರೊಡನೆ ಮಾತಾಡಿಕೊಂಡು, ತಮ್ಮ ಕೋಣೆಗೆ ತೆರಳಿದರು. ಅಲ್ಲಿ ಪತ್ರಿಕಾ ಪ್ರತಿನಿಧಿಗಳು ಮಹಾತ್ಮರನ್ನೇ ಹಾರೈಕೆ ಕಾದುಕೊಂಡಿದ್ದರು. ಮಹಾತ್ಮರು ಇವರಿಗೆ ಕಂಡು ಅವರವಾಕ್ಯಗಳನ್ನು ವ್ಯಕ್ತಪಡಿಸಿ ಗನಿಮಿಷ ಸಂದೇಶವನ್ನು ಕೊಟ್ಟರು. ಆ ಸಂದೇಶದ—

ಅದೇನಂದರೆ — "ಅಲೆಪಡುವ ಸ್ಥಿತಿ ಕ್ಷಿತಿಜದ ಮೇಲೆ ಕಾಣದು. ಆದಾಗ್ಯೂ, ನಾನು ಆಶೆಹಿಡಿಯುತ್ತೇನೆ. ನಾನು ದೇವರನ್ನೇ ನಂಬಿಕೊಂಡಿದ್ದೇನೆ; ಅವನೇ ನನಗೆ ಲಂಡನಿಗೆ ಹೋಗಲು ದಾರಿ ಮಾಡಿ ಕೊಟ್ಟಿರುವನು. ಮುಂದಿನ ಕೆಲಸವೂ ಕಲ್ಯಾಣಕ್ಕಾಗಿ ಅವನು ನನಗೆ ಮುಂದೆ ಮಾಡಿದವನು. ಮಾನವಕೋಟಿಯ ಕಲ್ಯಾಣವೇ ಭಾರತಭೂಮಿಯ ಸೇವೆ. ರಾಷ್ಟ್ರೀಯ ಸಭೆಯನ್ನು ಕೆಲ ಹಿಂದವಾಸಿಯರು ಅಲಕ್ಷಿಸಿದಾಗ್ಯೂ, ನಾನು ಸಮಸ್ತ ಜನಾಂಗದ ಪರವಾಗಿ ಪ್ರಯತ್ನ ಮಾಡುವೆನು. ಪ್ರಾಂತಿಕ ಸರಕಾರಗಳೂ, ಇಂಗ್ಲಿಷ ಸರಕಾರವೂ, ಅಧಿಕಾರಿಗಳೂ ರಾಷ್ಟ್ರೀಯ ಸಭೆಗೆ ನೆರವಾಗುವರೆಂದು ನಾನು ನಂಬುತ್ತೇನೆ. ಅಹಿಂಸೆ-ಸತ್ಯಗಳನ್ನಾಶ್ರಯಿಸಿ ರಾಷ್ಟ್ರೀಯ ಸಭೆಯು ದುಡಿಯುತ್ತಿದೆ. ರಾಷ್ಟ್ರೀಯ ಸಭೆಗೆ ಸಮಸ್ತ ಜನಾಂಗದ ಪ್ರತಿನಿಧಿತ್ವ ಬೇಕು; ಅದನ್ನೇ ನನಗೆ ಎಲ್ಲರೂ ದಯಪಾಲಿಸುವರೆಂದು ನಂಬಿಗೆಯಿದೆ." ಹೀಗೆ ನಿಮಿಷಗಳಲ್ಲಿ ರಾಷ್ಟ್ರಸಂದೇಶವನ್ನು ಮಹಾತ್ಮರು ಪ್ರಕಟಿಸಿ, ಉಪ್ಪರಿಗೆ ಹತ್ತಿ ಅಲ್ಲಿ ಜನರೊಡನೆ ಮಾತನಾಡಿದರು. ಪಂಡಿತ ಜವಾಹಿರಲಾಲ, ಸರದಾರ ವಲ್ಲಭಭಾಯಿ, ಸೌ| ಸರೋಜಿನಿ ನಾಯುಡು ಮೊದಲಾದವರೊಡನೆ ಮಹಾತ್ಮರು ಮಾತನಾಡುತ್ತ ಜನರಿಗೆ ಮುಗುಳ ನಗೆಯಿಂದ ವಂದಿಸುತ್ತ ನಿಂತುಕೊಂಡರು. ಪಂಡಿತ ಮದನ ಮೋಹನ ಮಾಳವೀಯರವರು ಬಂದೊಡನೆ ಪುನಃ ಜಯಘೋಷವಾಯಿತು. ಹಡಗದ ಮೇಲೆ ಸುತ್ತುಮುತ್ತ ನೆರೆದ ಜನಸಂದಣಿಯೊಳಗಿಂದ ಮಹಾತ್ಮರಿಗೆ ತಪ್ಪಿಸುವದಕ್ಕಾಗಿ ಕಪ್ತಾನರಾದ ಕಪ್ತನ್ ಬೆಕ್'ರವರು ಒಂದು ಹಂಚಿಕೆ ತೆಗೆದರು. ಮಹಾತ್ಮರ ಕಡೆ ಪ್ರಯಾಣದಿಂದ ಸಾಗಿಹೋಗಿ ಹಡಗದ ಮೇಲಿನ ಅಕ್ಕಂತ ಉಚ್ಚಸ್ಥಾನದಲ್ಲಿದ್ದ ತಮ್ಮ ಕೆಬಿನ್ನಿನ ಬಳಿ ಒಯ್ದು ಕುಳ್ಳಿರಿಸಿದರು. ಜೊತೆಗೆ ಸೌ| ಕಸ್ತೂರಬಾಯಿ ಗಾಂಧಿಯವರನ್ನೂ, ಪಂಡಿತ ಮದನಮೋಹನ ಮಾಲವೀಯ, ಸೌ| ಸರೋಜಿನಿ ನಾಯುಡು, ಸರದಾರ ವಲ್ಲಭಭಾಯಿ ಪಟೇಲರವರನ್ನೂ ಕರೆಕೊಂಡರು. ಅಲ್ಲಿಂದ ಮಹಾತ್ಮರ ದರ್ಶನವು ಸಮಸ್ತರಿಗೆ ಲಭಿಸಿತು. ಉಚ್ಚಸ್ಥಾನದ ಮೇಲೆ ಮಹಾತ್ಮರನ್ನು ನೋಡಿ ಪುನಃ ಜಯಘೋಷಗಳಾದವು. ಅಲ್ಲಿ ಮಹಾತ್ಮರಾದಿ ನಾಲ್ವರ ಭಾವಚಿತ್ರ ಕೊಳ್ಳಲಾಯಿತು. "ಲಗು ತೀರಿಸಿಕೊಂಡು, ನನಗೊಂದು ಬಿಡುಗಡೆ ಮಾಡಿ" ಹೀಗೆ ಮಹಾತ್ಮರು ಫೋಟೋಗ್ರಾಫರರ ಕಡೆ ನುಡಿದರು. ಫೋಟೋ ತೆಗೆದುಕೊಳ್ಳಲಾಯಿತು; ಅಷ್ಟರಲ್ಲಿ ಹಡಗ ಹೊರಡುವ ಹೊತ್ತಾಯಿತು, ಇತರರು ಹಡಗದಿಂದಿಳಿದು ಹೋಗಬೇಕೆಂಬ ಸೂಚನೆಯು ಘಂಟೆಯಿಂದಾಯಿತು. ಜನರು ಲಗುಬಗೆಯಿಂದ ಇಳಿಯಲಾರಂಭಿಸಿದರು, ಇಳಿದು ಓಡಿದರು. ಮಹಾತ್ಮರು ಉಚ್ಚಸ್ಥಾನದಿಂದಿಳಿದು ಕೆಳಗಿಳಿದು ತಮ್ಮ ಕೋಣೆಗೆ ಬಂದರು. ಅಲ್ಲಿ ಸೌ| ಕಸ್ತೂರಬಾಯಿ ಗಾಂಧಿಯವರು ಕೈಜೋಡಿಸಿಕೊಂಡು ಸ್ತಬ್ಧ ನಿಂತಿದ್ದರು. "ಯಾಕೆ ಹೆದರುತ್ತೀ? ಹೆಂಗಸರೆಂದರೆ ಈಗ ಹೋಗಬೇಕು." ಹೀಗೆ ಮಹಾತ್ಮರು ಕಿರುನಗೆಯಿಂದ ಧರ್ಮಪತ್ನಿಯವರಿಗೆ ಸಮಾಧಾನ ಹೇಳಿ ಮರಳ ಮಾನಪೂರ್ವಕ ಕಳಿಸುತ್ತಿದ್ದರು. ಅಷ್ಟರಲ್ಲಿ ರಾಷ್ಟ್ರಪತಿಗಳಾದ ಸರದಾರ ವಲ್ಲಭಭಾಯಿಯವರು ಮಹಾತ್ಮರಿಗೆ ಸಾಷ್ಟಾಂಗವೆರಗಿದರು. ಮಹಾತ್ಮರು, ಅವರಿಗೆ ಎತ್ತಿ

(ಮುಂದೆ ಪಾನಿನ ಮೇಲೆ ಮುಂದುವರಿಸಿದೆ.)

ಕಾನಡಾವೃತ್ತ.

ಪ್ರಜಾಪತಿ ಸಂ ಭ್ರಾದ್ರ ಶು ೧೫ ಸೋಮವಾರ

ಕಠಿಣ ಪರಿಸ್ಥಿತಿ.

ರೌಂಡ ಟೇಬಲ್ ಪರಿಷತ್ತಿಗೆ ಮಹಾತ್ಮರು ಹೋಗುವದು ಖಚಿತವಾಯಿತೆಂದು ಜನರು ತಿಳಿದಿರುವರು. ಸರಕಾರದ ಮಾರ್ಗದಲ್ಲಿ ಇವನ್ನು ತಾತ್ಪೂರ್ತ ಸಮಾಧಾನ ಹೊಂದಿ ಬಾರದೆ ಬಿಟ್ಟಾಗಬಾರದೆಂದು ತಮ್ಮ ನಿರ್ಧಾರದೆ ರೌಂಡ ಟೇಬಲ್ ಪರಿಷತ್ತಿನಲ್ಲಿ ಹಿಂದುಸ್ತಾನಕ್ಕೆ ಸಂಪೂರ್ಣ ರಾಜ್ಯಾಧಿಕಾರ ದೊರಕುವಂಥ ಮಹಾತ್ಮರಿಗೆ ಆಶೆಯಿಲ್ಲ. ಮುಂಬಯಿಯ ತಮ್ಮ ನ್ಯಾಯ ಸಿನ ಸಭೆಯಲ್ಲಿ ಮಹಾತ್ಮರು ಈ ಸಂಗತಿಯನ್ನು ಸ್ಪಷ್ಟವಾಗಿ ತಿಳಿಸಿದ್ದಾರೆ. ಕಳೆದ ಗುರುವಾರದ 'ಯಂಗ ಇಂಡಿಯಾ' ಪತ್ರಿಕೆಯಲ್ಲಿಯೂ ಮಹಾತ್ಮರು ತಿರಿಗಿ ಸ್ಪಷ್ಟಪಡಿಸಿದ್ದಾರೆ. ನಿರುಪಾಯದಿಂದ ಆನಿವಾರ್ಯವೆಂದು ಹಿಂದುಸ್ತಾನ ಸರಕಾರವು ಬಾರ್ಡೋಲಿಯೊಳಗಿನ ಅತ್ಯಾಚಾರವನ್ನು ಚೌಕಶಿ ಮಾಡಲೊಪ್ಪಿತು. ಹೊರತು ಆತ್ಮಸಂತೋಷದಿಂದಲ್ಲ. ಸರಕಾರವು ಹಿಡಿಯುವ ಹಟ, ಸಿಟ್ಟು, ಒಣ ಬಿಗುಮಾನತನವು ನಮ್ಮ ಒಳಕೆಯನ್ನು ಕೊಂಗ್ರೆಸ ಕಾರ್ಯಕಾರಿ ಮಂಡಳಕ್ಕೆ ಸಮ್ಮತವಾಗುವಂತೆ ಘಟಿಸಬಹುದು 'ಯುದ್ಧ ಪ್ರಸ್ಥಿತಿ'ಯೆಂದು ಮಹಾತ್ಮರು ಎಚ್ಚರಿಕೆ ಕೊಟ್ಟಿದ್ದಾರೆ. ಸರಕಾರವು ಒಗ್ಗಿ ನಡೆಯುತ್ತ ಜವಾಹಿರಲಾಲರ ಜೊತೆಗೆ ಕಲಿಯೋದ್ಯಬೋಧಗಿ ಮಹಾತ್ಮರ ಜೀವನ ಗೆಳೆಯರಾದ ಶೇಠ ಜಮನಾಲಾಲವರು ಸತ್ಯಾಗ್ರಹ ಮಾಡಿದ್ದರು. ಆದರೆ ಹಿಂದುಸ್ತಾನದ ಸ್ಥಿತಿಯು ಕ್ಷೋಭಜನಕವಲ್ಲ. ಅಧಿಕಾರಿಗಳ ಮನಸ್ಸು ಇನ್ನು ಏನಸ್ತಾಂತರ ಹೊಂದಿಲ್ಲ. ಕ್ಷಿತಿಜದಲ್ಲಿ ಕಗ್ಗತ್ತಲೆಯಿಂದ ತುಂಬಿಹೋಗಿದೆ. ಹೀಗೆ ಮಹಾತ್ಮರು ಬರೆದು, ಜವಾಹಿರಲಾಲ, ವಲ್ಲಭಭಾಯಿ, ಅನ್ಸಾರಿ ಮೊದಲಾದ ಲೋಕನಾಯಕರನ್ನು ಹಿಂದುಸ್ಥಾನದ ಕಾರ್ಯಕ್ಷೇತ್ರದಲ್ಲಿಟ್ಟು ಹೋಗುತ್ತೇನಾಗಿ ತಿಳಿಸಿದ್ದಾರೆ. ರೌಂಡ ಟೇಬಲ್ ಪರಿಷತ್ತಿಗೆ ಹೋಗಿ ಬರಿಗೈಯಿಂದ ಬರುವ ಸಂಭವವೇ ಹೆಚ್ಚು. ಹೀಗೆ ಮಹಾತ್ಮರು ಕಂಡ ಮಾತನ್ನು ಜನಾಂಗಕ್ಕೆ ಕಂಡಂತೆ ತೋರಿಸಿದ್ದಾರೆ. ರಾಷ್ಟ್ರೀಯ ಸಭೆಯ ಪರವಾಗಿ ಸರಕಾರದ ಮೇಲೆ ಹೊರಿಸಿದ ಆರೋಪಗಳನ್ನು ಅಲ್ಲಗಳೆದು ಸರಕಾರವು ಪ್ರಕಟಿಸಿದ ಪ್ರಕಟಣೆಗೆ ರಾಷ್ಟ್ರೀಯ ಸಭೆಯವರಿಂದ ಉತ್ತರ ತಯಾರಾಗುತ್ತಿದೆ ಪೂರ್ವಸೂಚನೆಯೆಂದು ಶ್ರೀ| ಮಹಾದೇವಭಾಯಿಯವರು 'ಯಂಗ ಇಂಡಿಯಾ' ಪತ್ರಿಕೆಯಲ್ಲಿ ಪ್ರಕಟಿಸಿದ ಲೇಖದಲ್ಲಿ ಸರಕಾರದ ಸುಳ್ಳುತನವೆಲ್ಲ ಹೊರಬಿದ್ದಿದೆ. ಸರಕಾರವು ಒರಿದ ಪತ್ರಗಳಿಗೂ, ಉತ್ತರಗಳಿಗೂ ಮೇಳಗೂಡುವದಿಲ್ಲವಾಗಿ ಶ್ರೀ| ಮಹಾದೇವಭಾಯಿಯವರು ಬರೆಯುತ್ತಾರೆ. ಶ್ರೀ| ಮಹಾದೇವಭಾಯಿಯವರು ಬರೆದ ಲೇಖದೊಳಗಿನ ಮುಖ್ಯಾಂಶಗಳನ್ನು ಇಂದಿನ ಸ್ಥಳಸಂಕೋಚದಿಂದ ಕೊಡಲಾಗದು. ಸ್ವರಾಜ್ಯರ ಗಳಿಗೆ ಆಡುಹ ಆರಿಷ್ಟ ಒಂದು ಮಾತು ಖಂಡಿತ ಅಧಿಕಾರಿಗಳಿಗೆ ಇನ್ನು ಒಪ್ಪಂದಿಕೆಯಾಗಲಿಲ್ಲ. ಮಹಾತ್ಮರು 'ರಜಪುತಾನಾ' ಹಡಗದಿಂದ ಬಿನ್ನಣ ಮಾಡಿಕೊಂಡಂತೆ, ರಾಜ್ಯಾಧಿಕಾರವು ಕೈತಪ್ಪಿ ಪ್ರಜೆಗಳಿಗೆ ಹೋಗುತ್ತವಾಗಿ ಅವರನ್ನು ಗ್ರಹಿಸರು. ಜವಾಹಿರಲಾಲರ ಸಂಯುಕ್ತ ಪ್ರಾಂತದಲ್ಲಿಯೂ, ಗಫೂರಖಾನರ ಗಡಿನಾಡಿನಲ್ಲಿಯೂ ಇನ್ನು ಸಮಾಧಾನವಿಲ್ಲ, ಸುಖವಿಲ್ಲ, ಕ್ಷೇಮವಿಲ್ಲ. ಕಿಸಾನ ಒಕ್ಕಲಿಗರು ಹೋರಾಂತರ ಮಾಡತಯಾರಾಗಿದ್ದಾರೆ. ಇಂಥ ಸ್ಥಿತಿಯಲ್ಲಿ ಮಹಾತ್ಮರು ವಚನಭಂಗವಾಗಬಾರದೆಂದು ಲಂಡನಿಗೆ ಹೊರಟಿದ್ದಾರೆ. ಸಮೋಪಚಾರದ ಉಪಾಯಗಳೆಲ್ಲ ನಿರುಪಯೋಗವಾದಾಗ ಆತ್ಮರಕ್ಷಣೆಗಾಗಿ ಸತ್ಯಾಗ್ರಹ ಕೈಕೊಳ್ಳುವದು ಅನಿವಾರ್ಯವಾಗಿ ಸರಕಾರಕ್ಕೆ ತಿಳಿಸಿ ಮಹಾತ್ಮರು ಒಲ್ಲದ ಮನಸ್ಸಿನಿಂದ ಪ್ರಯಾಣ ಕೈಕೊಂಡಿದ್ದಾರೆ. ಸತ್ಯಸ್ಥಿತಿಯನ್ನು ಜನರೂ ಗ್ರಹಿಸಬೇಕು.

ಅತ್ತ ಲಂಡನಿನೊಳಗಿನ ವಾರ್ತೆಗಳು ಸುಖಸೂಚನೆಯವಲ್ಲ. ಭರತಮಂತ್ರಿ ಹೋರರವರು ಅಧಿಕಾರ ವಹಿಸಿಕೊಂಡೊಡನೆ ಇಲ್ಲಿಯ ನೌಕರರಿಗೆ "ನಿಮ್ಮ ರಕ್ಷಣೆ ಮಾಡುಗುವದೆಂದು" ಹರಸಿದರು. ರೌಂಡ ಟೇಬಲ್ ಪರಿಷತ್ತಿನಲ್ಲಿ ಕೂಲಿಕಾರ ಪಕ್ಷದ ಪ್ರತಿನಿಧಿಗಳನ್ನು ಹಿಂತೆಗೆದುಕೊಂಡು ಹಿಂದಹಿತವಿರೋಧಕ ರಾಜಪಕ್ಷದ ಪ್ರತಿನಿಧಿಗಳನ್ನು ನೇಮಿಸುವ ಕುಟಿಲ ಕಾರಸ್ಥಾನ ನಡೆದಿದೆ. ಕೂಲಿಕಾರ ಸರಕಾರವು ರೌಂಡ ಟೇಬಲ್ ಪರಿಷತ್ತನ್ನು ವಿಸರ್ಜಿಸುವಾಗ ನುಡಿದ ಪ್ರತಿಜ್ಞೆಯನ್ನೇ ಮೀರುವ ಪ್ರಕಾರ ನಡೆದಿದೆ. 'ಎಕ್ಸಪ್ರೆಸ' ಪತ್ರಿಕೆಯ ಸುದ್ದಿಗಾರರು ಧ್ವನಿಸುತ್ತಾರೆ. ಹೊಸ ಪ್ರಧಾನಮಂಡಳವು ಈ ವಿಷಯವನ್ನು ಆಲೋಚಿಸುವದಾಗಿಯೂ ಬಹುತರವಾಗಿ ಹಿಂದಿನ ಪ್ರಕಟಣೆಯು ಮಾನ್ಯವಾಗುವ ಲಕ್ಷಣ ತೋರುತ್ತದಾಗಿಯೂ ಸುದ್ದಿಗಾರರ ತರ್ಕ. ರಾಜಪಕ್ಷವು ರೌಂಡ ಟೇಬಲ್ ಪರಿಷತ್ತಿನ ಯಾವದೇ ನಿರ್ಣಯವನ್ನು ಎಂದೂ ಮಾನ್ಯಮಾಡಲಿಲ್ಲ. ರೌಂಡ ಟೇಬಲ್ ಪರಿಷತ್ತಿನ ನಿರ್ಣಯಗಳನ್ನು ವಿರೋಧಿಸುವ ಹಕ್ಕು ಯಾವಾಗಲೂ ಕಾಯ್ದುಕೊಂಡಿದೆ. ಈ ಸಂಗತಿ ಲೋಕವಿದಿತವಿದೆ. ಮೆಕಡೋನಲ್ಡ ಸರಕಾರವು ನಿರಪಾಯರು ಭಾರತೀಯರನ್ನು ಸಂತೈಸುವದಕ್ಕಾಗಿ ರೌಂಡ ಟೇಬಲ್ ಪರಿಷತ್ತನ್ನು ಏರ್ಪಡಿಸಿತ್ತು. ಈಗಿನ ಪ್ರಧಾನ ಮಂಡಳದಲ್ಲಿ ರಾಜಪಕ್ಷದವರು ಪ್ರಾಬಲ್ಯ ಹೊಂದಿದೆ. ಮೆಕಡೋನಲ್ಡರು ಪ್ರಧಾನರು ಸ್ವತಂತ್ರರಾದರು. ರಾಜಪಕ್ಷದ ಮಿ| ಬಾಲ್ಡವಿನ್‌ರವರು ಇಂಥ ಸ್ಥಿತಿಯಲ್ಲಿ ರೌಂಡ ಟೇಬಲ್ ಪರಿಷತ್ತಿನ ಕಾರ್ಯವು ಹಿಂದುಸ್ತಾನಕ್ಕೆ ಅನುಕೂಲವಾಗಿ ಪರಿಣಮಿಸುವದೆಂದು ಹೇಳಿದರು.

ಹೀಗೆ ಸ್ಥಿತಿಯು ಕಠಿಣವಿದೆ. ಪುನಃ ಸಂಗ್ರಾಮವಾಗುವ ಭೀತಿಯಿದೆ. ಆದಾಗ್ಯೂ ಮಹಾತ್ಮರ ರಾಯಭಾರವು ಯಶಸ್ಸು ಹೊಂದುವದೆಂದು, ಹೊಂದಬೇಕೆಂದು ನಮಗನಿಸುತ್ತದೆ. ಮಹಾತ್ಮರು ನುಡಿದಂತೆ, ನಿರಾಶೆಯಲ್ಲಿ ನಿರಾಧಾರಿಗಳಿಗೆ ಪರಮಾತ್ಮನೇ ಸರದಾರನಾಗುತ್ತಾನೆ. ಮುಂಬಯಿಯ 'ಟೈಮ್ಸ' ಪತ್ರಿಕೆಯ ಸಿಮ್ಲಾದ ಸುದ್ದಿಗಾರರು ಎಚ್ಚರ ಎಂಬ ಭವಿಷ್ಯವಾದಿಯ ಭವಿಷ್ಯದಂತೆಯೇ ಸರಕಾರಕ್ಕೂ ಮಹಾತ್ಮರಿಗೂ ತಿರುಗಿ ಒಡಂಬಡಿಕೆಯಾಯಿತೆಂದು ತಿಳಿಸಿದ್ದಾರೆ. ಮಹಾತ್ಮರ ಗ್ರಹಬಲವು ಒಡಂಬಡಿಕೆಗೆ ಅನುಕೂಲವಿದೆ, ಕಳೆದ ಮೂರು ತಿಂಗಳಿನಿಂದ ಒಡಂಬಡಿಕೆಯ ಕಡೆ ಮಹಾತ್ಮರ ಗ್ರಹಗಳು ಬಲಿದಿವೆ, ಹೀಗೆ ಸಹ ಅವರು ಪ್ರಕಟಿಸುತ್ತಾರೆ. ಮಹಾತ್ಮರ ಜನ್ಮಾವಸ್ಥೆಯು ರಾಂತಿಯು, ಗ್ರಹಬಲವು ಸಂಧಾನದ ಕಡೆ, ಇಂಥ ಸ್ಥಿತಿಯಲ್ಲಿ 'ಮಹಾತ್ಮರ ರೌಂಡ ಟೇಬಲ್ ಪರಿಷತ್ತನ್ನು ಅನುಕೂಲವಾಗಿ ಪರಿಣಮಿಸುವದೆಂದು ತೋರುತ್ತದೆ. ಮೇಲಾಗಿ ರಾಜಪಕ್ಷದಂತೆಯೇ ರಾಷ್ಟ್ರೀಯ ಸಭೆಯವರೂ ರೌಂಡ ಟೇಬಲ್ ಪರಿಷತ್ತಿನ ಯಾವದೇ ನಿರ್ಣಯವನ್ನು ಮಾನ್ಯಮಾಡಿಲ್ಲ. ಪುನಃ ಸ್ವತಂತ್ರ ಚರ್ಚೆ ಮಾಡಿ ರಾಜ್ಯಘಟನೆಯನ್ನು ತಯಾರಿಸಲು ಅವರು ಸಿದ್ಧರಿದ್ದಾರೆ. ರಾಜ್ಯಘಟನೆ ಯಾವುದೆಂಬುದೇ ಮುಖ್ಯವಾದದ್ದು. ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ಕೊಡಬಾರದೆಂದು ಹಟಹಿಡಿದರೆ, ಪುನಃ ಸತ್ಯಾಗ್ರಹವಾಗುವದು, ಬಹಿಷ್ಕಾರ ಬೀಳುವದು, ಲೋಕದಲ್ಲಿ ಗೊಂದಲವಾಗುವದು, ಮಹಾತ್ಮರಿಗೆ ಅಸಮಾಧಾನವಾಗುವದು, ಇತರ ರಾಷ್ಟ್ರಗಳಲ್ಲೆಲ್ಲ ಬ್ರಿಟಿಶರು ಸ್ವಾರ್ಥಿಗಳೆಂದು ಡಂಗುರ ಸಾರಲ್ಪಡುವದು. ಸ್ವಾತಂತ್ರ್ಯ ಕೊಟ್ಟರೆ ಹಿಂದುಸ್ಥಾನಕ್ಕೆ ಸಮಾಧಾನವಿದೆ, ಅಭ್ಯುದಯವಿದೆ. ಮುಂಚಿನಂತೆ ಹಿಂದುಸ್ಥಾನದೊಳಗೆ ಎರಡೂ ಕೈಬೀಸುತ್ತ ಸುಲಿಯಬರದಿದ್ದಾಗ್ಯೂ ಸ್ನೇಹಭಾವದಿಂದ ವ್ಯಾಪಾರವನ್ನು ಬೆಳೆಸಲು ಇಂಬಿದೆ, ದ್ವೇಷದಿಂದ ಏಗಹರಿಯುವದಾಗಿಲ್ಲ, ಇವನ್ನು ರಾಜಪಕ್ಷವು ಸಾಮಾನ್ಯವಾಗಿ ಅರಿತುಕೊಂಡಿದ ರಾಜಪಕ್ಷದ ವಿಚಾರವಂತ 'ಸ್ಪೆಕ್ಟೇಟರ' ಪತ್ರಿಕೆಯು ನಿರ್ಮಲಚಿತ್ತದಿಂದ ಈ ವಿಷಯವನ್ನು ಕೇವಲ ಪಕ್ಷದಲ್ಲಿ ಪ್ರತಿಪಾದಿಸಿರುವದು ತಿಳಿಸಲು ತುಂಬಾ ಸಂತೋಷ. "ಹಿಂದುಸ್ತಾನಕ್ಕೆ ಸಂಪೂರ್ಣ ರಾಜ್ಯಾಧಿಕಾರ ಬೇಕು, ಬ್ರಿಟಿಶರ ಅಂಕೆಯಿರಬಾರದು ಇವನ್ನು ಅಲ್ಲಗಳೆದರೆ, ಬ್ರಿಟಿಶ ಸಾಮ್ರಾಜ್ಯವು ಬಹುಕಾಲ ಬಾಳದು" ಈ ಪ್ರಕಾರ 'ಸ್ಪೆಕ್ಟೇಟರ' ಪತ್ರಿಕೆಯು ಬರೆದು ಬ್ರಿಟಿಶ ಪ್ರತಿನಿಧಿಗಳು ಪರಿಷತ್ತಿನ ಕಾರ್ಯಕ್ರಮವನ್ನು ವಿವೇಕದಿಂದಲೂ, ಮಧ್ಯಸ್ಥರಂಬ ಭಾವನೆಯಿಂದಲೂ ನೆರವೇರಿಸಬೇಕಾಗಿ ಸೂಚಿಸಿದೆ. ಹಿಂದೀ ಪ್ರತಿನಿಧಿಗಳೊಳಗೆ ಮತಭೇದವುಂಟಾದಾಗ ಅದನ್ನು ತ್ರಯಸ್ಥನಾತೆಯಿಂದ ಬ್ರಿಟಿಶ ಪ್ರತಿನಿಧಿಗಳು ಪರಿಹರಿಸಿ ಎಲ್ಲರ ಮನವೊಲಿಸಬೇಕಾಗಿಯೂ 'ಸ್ಪೆಕ್ಟೇಟರ' ಪತ್ರಿಕೆಯ ಮೇಲ್ಬರಹ. 'ಮಹಾತ್ಮರ ದೃಷ್ಟಿಕೋನ ಬೇರೆ, ನಮ್ಮ ದೃಷ್ಟಿಕೋನ ಬೇರೆ, ಅವರ ವಿಧಾನ ಬೇರೆ, ಆದರಿಂದ ಮಹಾತ್ಮರಿಗೆ ವಿಶೇಷ ಆದರದಿಂದ ನಡಿಸಿಕೊಳ್ಳಬೇಕು, ಕುಚೇಷ್ಟೆ ಮಾಡಲಾಗದು" ಹೀಗೆ 'ನ್ಯೂಸ ಕ್ರೋನಿಕಲ್' ಪತ್ರಿಕೆಯು ಎಚ್ಚರಿಕೆ ಕೊಟ್ಟಿದೆ. ಈ ಪ್ರಕಾರ ರೌಂಡ ಟೇಬಲ್ ಪರಿಷತ್ತಿನ ಹಿಂದಿನ ನಿರ್ಣಯಗಳನ್ನು ಮಾನ್ಯ ಮಾಡದ ಪಕ್ಷಗಳೇ ಈಗಿನ ರೌಂಡ ಟೇಬಲ್ ಪರಿಷತ್ತಿನಲ್ಲಿ ಒತ್ತಟ್ಟಿಗ ಕೂತುಕೊಂಡು ವಿಚಾರ ವಿನಿಮಯ ಮಾಡುವವು. ರಾಜಪಕ್ಷವು ಬ್ರಿಟಿಶ ವ್ಯಾಪಾರದೊಳಗೆ ನಿರ್ದಾಕ್ಷಿಣ್ಯದಿಂದ ಹಿಂದುಸ್ತಾನವು ವಿರೋಧ ಮಾಡುವ ಪಕ್ಷವು, ರಾಷ್ಟ್ರೀಯ ಸಭೆಯು ಬ್ರಿಟಿಶ ರಾಜ್ಯಪದ್ಧತಿಯನ್ನು ಆಮೂಲಾಗ್ರ ಕಿತ್ತೆಗೆದು ಹೊಸ ರಾಜ್ಯಭಾರವನ್ನು ಸ್ಥಾಪಿಸಲು ಟೊಂಕಕಟ್ಟಿದ ಪಕ್ಷವು, ಹೀಗೆ ಪರಸ್ಪರವಿರೋಧಿ ಪಕ್ಷಗಳು ರೌಂಡ ಟೇಬಲ್ ಪರಿಷತ್ತಿನಲ್ಲಿ ಹೋರಾಡುವವು. ರಾಜಪಕ್ಷವು ಮುಖ್ಯ ಪಕ್ಷವಾದದ್ದರಿಂದ ರೌಂಡ ಟೇಬಲ್ ಪರಿಷತ್ತಿನ ನಿರ್ಣ

ಯುಗಳು ಕಾಲೇಜಿನ ಅಟ್ಟದಲ್ಲಿ ಗುಣ್ಡೇಟುಗಳು ಬಿದ್ದಾಗ ರಾಷ್ಟ್ರೀಯ ಸಭೆಯು ಬಿಸ್ತ್ರಗಳನ್ನೂ ತು ಹೊನ್ನೆಗಾಡಲು ಹಿಂದೇ ಪ್ರಯತ್ನಿಸಿದ್ದರೆ ರೌಂಡ ಟೇಬಲ್ ಪರಿಷತ್ತಿನಲ್ಲಿ ಪ್ರತಿನಿಧಿಗಳು ಬರಲಿಲ್ಲ, ಸಂಸ್ಥೆಗಳ ಪ್ರಕಟಣೆಯು ಬಾರಾದರೆ ಬಿಸ್ಲಿಗಳಿಯುವವಲಿ, ಆ ಎಗ್ಗ ಬಬ್ಬರೂ ಘ ಸಮ ನ ಕಾರಣವಿಲ್ಲ ಮಹಾತ್ಮರಿಗೆ, ರಾಜಪಕ್ಷದ ಬಾಳ್ವೆ ನಿನ್ನೆದವರು ಕೂಡಿ ಕೈಕೊಂಡ ನಿರ್ಣಯವು ಸರ್ವ ಮಾನ್ಯವಾಗುವದು ರಾಜಪಕ್ಷವು ಅಧಿಕಾರಾರೂಢ ವಾದ್ದರಿಂದ ರೌಂಡ ಟೇಬಲ್ ಪರಿಷತ್ತಿನಲ್ಲಿ ಮಹಾತ್ಮರು ಸೇರಿದ್ದರಿಂದ, ಗಾಂಧಿ ತಿ ಕಠಿಣವಾದಾಗ್ಯೂ ಸುಖ ರಿಪು ಸ್ಥಿತಿಯೆಂದು ಎಣಿಸಬೇಕು ಧಿಸ ನಂದು ವಾಗ ಪೊಸ್ಸದಾಗುತ್ತದೆಂಬ ಪ್ರತ್ಯಕ್ಷ ಅನುಭವ ವಿರುವದಲ್ಲವೇ?

ರಜಪುತಾನಾ ಹಡಗದ ಮೇಲಿನ ವೃತ್ತಾಂತ

ಮಹಾತ್ಮರು ಸುಖವಾಗಿದ್ದಾರೆ. ಪ್ರಯಾಣಿಕರೊಡನೆ, ಚಿಕ್ಕ ಮಕ್ಕಳೊಡನೆ ಮುದದಿಂದ ಮಾತನಾಡು ವರು. ಕಪ್ತಾನರು ಮಹಾತ್ಮರ ಮೇಲೆ ಬರಹ ಕಿಡ ಸಿ ಅದರಂತೆ ಮಹಾತ್ಮರು ಹೋದರು "ಒಂದು ವಸ್ತ್ರದ ಕವಚ ನಾವು ನಿಮ್ಮ ಕೈಬಿ" ಹೀಗೆ ಮಹಾತ್ಮ ರು ಉದ್ಗರಿಸಿದರು "ನಿಮಗೆ ನಾನು ಹಳ್ಳಿ ರೀತಿಯಿಂದ ನಡೆಕತ್ತೇನೆ, ಹವೆಯ ಬಗ್ಗೆ ಮಾತ್ರ ನಾನು ಮಾತಾಡುತ್ತೇನೆ," ಹೀಗೆ ಕಪ್ತಾನರು ನಗುನಗುತ್ತ ನುಡಿದರು "ನೆರವಾಗಕ್ಕಿಂತ ನಾವಿಕರನ್ನು ಕೇಳ ಬಲ್ಲೆ" ಹೀಗೆ ಮಹಾತ್ಮರು ನುಡಿದರು. ನಿತ್ಯದಂತೆ ಮಹಾತ್ಮರು ಶನಿವಾರ ಸಂಜೆ ಡೆಕ್ಕಿನ ಮೇಲೆ ಪ್ರಾರ್ಥನೆ ನಡಿಸಿದರು. ಅನೇಕ ಪ್ರಯಾಣಿಕರು ಪ್ರಾರ್ಥನೆಗೆ ಬಂದಿದ್ದರು. ನಂತರ, ಬರೆಯುತ್ತ, ಹಿಮುತ್ತ ಪತ್ರಗಳಿಗೆ ಉತ್ತರ ಕೊಡುತ್ತ ಕಾಲ ಕಳೆದರು. ಅನೇಕ ಪ್ರಯಾಣಿಕರು ಮಹಾತ್ಮರ ಸ್ನಾಪ್ ಶಾಟ್ ಫೋಟೋಗಳನ್ನು ಕೊಂಡರು. ತಮ್ಮ ಪುಸ್ತಕದ ಮೇಲೆ ಮಹಾತ್ಮರ ಸಹಿ ಪಡೆದರು. ಸಮುದ್ರವು ಪ್ರಕ್ಷುಬ್ಧವಿದ್ದಾಗ್ಯೂ, ಮಹಾತ್ಮರು ಡೆಕ್ಕಿನ ಮೇಲೆ ಹೊರಮಗ್ಗಲಿಗೆ ನಕ್ಷತ್ರಗಳನ್ನು ನೋಡುತ್ತ ಮಲಗಿದ್ದರು. ರವಿವಾರ ೮ ಘಂಟೆಗೆ ಎದ್ದು, ನಿತ್ಯದಂತೆ ಪ್ರಾರ್ಥನೆ ಮಾಡಿದರು. ಸರ್ ಪ್ರಭಾಶಂಕರ ಪಟ್ಟಣಿ ಶ್ರೀ ಬಿರ್ಲಾ, ಮದನಮೋಹನ ಮಾಲವೀಯರೊಡನೆ ಮಹತ್ವದ ರಾಜಕಾರಣ ವಿಷಯ ಚರ್ಚೆ ನಡೆಯಿತು. ಯಾರೂ ಗೌಪ್ಯ ಸ್ಫೋಟ ಮಾಡಲಿಲ್ಲ. ಬ ಧವಾರ ಮಹಾತ್ಮರು ಹಿಂದವಾಸಿಯರಿಗೆ ತಮ್ಮ ಗೈರಹಾಜರಿಯಲ್ಲಿ ಕಡೆತನವಾಗಿ ಅಹಿಂಸೆಯನ್ನು ಪಾಲಿಸಲು ಆಜ್ಞೆ ಹೊರಡಿಸಿದ್ದಾರೆ. ಪರ-ದೇಶಿ ಕುಡಿಯದೆ, ಗಾಂಜಾ-ಅಫೀಮು ಸೇದದೆ, ಪರ ದೇಶಿ ಬಟ್ಟೆಯನ್ನು ತೊರೆದು, ಅಸ್ಪೃಶ್ಯತೆಯನ್ನು ಹೋಗಲಾಡಿಸಿ, ಖಾದಿಯನ್ನು ಉದ್ಧರಿಸಿರಿ, ಸ ಮಾಜಗಳಲ್ಲಿ ಐಕ್ಯತೆಯನ್ನು ಸಾಧಿಸಿರಿ, ಹೀಗೆ ಜನಾಂ ಗಕ್ಕೆ ಸಂದೇಶ ಕಳಿಸಿದ್ದಾರೆ. ರಾಷ್ಟ್ರೀಯ ಸಭೆಗೂ, ಸಭೆಯವರಿಗೂ ನಂಬಿಕೆಯಿಡಿರಿ. ಒನರ ಕೈಯಲ್ಲಿ ಅಧಿಕಾರ ಹೋಗಬಾರದೆಂದು ನಂಬಿರಿ. ಹೀಗೆ ಮಹಾತ್ಮರು ಬ್ರಿಟಿಶರಿಗೂ ಅಧಿಕಾರಿಗಳಿಗೂ ವಿಶ್ವಾಸಿಕರೂ ಆಗಿದ್ದಾರೆ. ಪಂಡಿತ ಮದನಮೋಹನ ಮಾಲವೀಯ, ಸೌ| ಸರೋಜಿನಿ ನಾಯಡು, ಮೀರಾಬಾಯಿ ಮತ್ತು ಪ್ಯಾರೇಲಾಲರವರಿಗೆ ಶಾಂತಿಯಾಗಿತ್ತು. ಈಗ ಅವರಿಗೆ ಗುಣವಾಗ ಹಾರ್ಕ ಒಂದಿದೆ. ಹಡಗದ ಮೇಲೆ ಸ ಪಕ್ಷಿಯ ಭಾಗ್ಯ ದೊರೆತದೆ. ಅದು ಯಾವಾಗಲೂ ಮಹಾತ್ಮರ ಬಳಿಯಲ್ಲಿದೆ. ಉಳಿದ ಹೊತ್ತಿನಲ್ಲಿ ಮಹಾತ್ಮರು ಇದಕ್ಕೆ ಅರಿವಿನ ಹಾಲು ಹಾಕುತ್ತಾರೆ. ರಾತ್ರಿ ಮಹಾತ್ಮರ ಬಳಿ ವಾಸಿಸಿಯು ಪೇಟಿ ಮಲಗುತ್ತದೆ.

ಮಹಾತ್ಮರು ಏಡನ್ನಿಗೆ ತಲ್ಪಿದರು.

ರಜಪುತಾನಾ ಹಡಗವು ಗುರುವಾರ ಮುಂಜಾವು ೪ ಘಂಟೆಗೆ ಏಡನ್ ಬಂದರಕ್ಕೆ ತಲ್ಪಿತು. ೧೨ ತಾಸು ವಿಳಂಬವಾಯಿತು. ಮಹಾತ್ಮರಿಗೆ ಸ್ವಾಗತ ಮಾಡುವದಕ್ಕಾಗಿ ಜನರು ಧಕ್ಕೆಯ ಮೇಲೆ ಮಧ್ಯರಾತ್ರಿಯಿಂದ ಕಾಯುತ್ತಿದ್ದರು. ೮ ಘಂಟೆಗೆ ಸೌ| ಸರೋಜಿನಿ ನಾಯಡು, ಶ್ರೀ| ಮಹಾದೇವಭಾಯಿಯವರೊಡನೆ ಮಹಾತ್ಮರು ಬಂದರದಲ್ಲಿಳಿದರು. ಊರೊಳಗೆ ಆಶ್ಚರ್ಯ ನೋಡತಕ್ಕಂಥ ಸ್ಥಳಗಳನ್ನು ನೋಡಿ ಕೊಂಡರು. ೭ ಘಂಟೆಗೆ ಮಹಾತ್ಮರಿಗೆ ಜನರು ಮಾನಪತ್ರವನ್ನರ್ಪಿಸಿ, ರೌಂಡ ಟೇಬಲ್ ಪರಿಷತ್ತಿನಲ್ಲಿ ಮಹಾತ್ಮರಿಗೆ ವಿಜಯವಾಗಲೆಂದು ಹರಸಿ, ಏಡನ್ನಿನ ಕಾಣಿಕೆಯನ್ನಿತ್ತರು. ಏಡನ್‌ದೊಳಗಿನ ಮಹಿಳೆಯರಿಂದ ಇನ್ನೂ ಹೆಚ್ಚಿನ ಕಾಣಿಕೆ ಶೇಖರವೆಂದು ಗಾಢ ಎಣಿಸಿದ್ದರಾಗಿ ಮಹಾತ್ಮರು ನುಡಿದು, ಹಿಂದು-ಮುಸಲ್ಮಾನರೊಳಗೆ ಐಕ್ಯವಿರಬೇಕೆಂದು ನುಡಿದಿರಲಿಕ್ಕೆ ಬೋಧಿಸಿದರು. ಒಬ್ಬ ಬ್ರಿಟಿಶ ರಹಿವಾಸಿಯೊಡನೆ ಮಾತನಾಡಿ, ಪರ್ಶಿಯನರೊಡನೆ ಉಪಹಾರ ಕೊಟ್ಟು ಮಹಾತ್ಮರು ಪುನಃ ಹಡಗ ಹತ್ತಿದರು. ೯ ಘಂಟೆಗೆ ಹಡಗ ಹೊರಟಿತು. ಮಹಾತ್ಮರು ಹಡಗದ ಡೆಕ್ಕಿನ ಮೇಲೆ ಹಿಡಿದು ಹಡಗ ನಡಿಸಿದರು. ಕನಿಷ್ಠವರ್ಗದ ಇಸ್ಟ್‌ನ್ ಎಟ್ ವೆಸ್ಟರ್ನ ಜೋರವರು ಬಳಿಲ್ ಪ್ರಶ್ನೆ ಕೇಳಿದ್ದರು "ಬಂದೇರ್ಘನ ಮೈಲಿ ಹಡಗ ಅಪ್ಪಳಿಸಿ ಎತ್ತರಿಸು ಕಿಗಿರಬೇಕಾಗಿ ನಾತು" ಹೀಗೆ ಮಹಾತ್ಮರು ವಿನೋದದಿಂದ ನುಡಿದು, ಡೆಕ್ಕಿನ ಚಕ್ರವನ್ನು ತಿರುಗಿಸಿದರು. ರಾಷ್ಟ್ರದ ಚುಕ್ಕಾಣಿಯನ್ನು ಸರಿಯಾಗಿ ತಿರುಗಿಸಿ ಜನರಿಗೆ ಕಾರ್ಯವಹನ ಹಡಗದ ಚುಕ್ಕಾಣಿಯನ್ನು ತಪ್ಪಿಸಿ ಜನರಿಗೆ ಮುಳುಗಿಸುವದಂಟೆ? ಕಪ್ತಾನರು ಇಂಜಿನು ರೀತಿಯೊಡನೆ ಹಡಗದ ಭಾಗಗಳನ್ನೆಲ್ಲ ಮಹಾತ್ಮರಿಗೆ ತೋರಿಸಿದರು. ಮಹಾತ್ಮರಿಗೆ ವಂದಿಸುವ ಕಾರ್ಯಕ್ರಮ ತೀರಿತು. ಹಡಗದ ಪತ್ರಿಕಾ ಪ್ರತಿನಿಧಿಗಳು ಪ್ರಶ್ನಿಸಲು, "ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ಬೇಕು, ಸಿಪ್ಪೆ ಮಾತ್ರದ ದರ್ಜೆಯ ಸಹ ಇದ ರೆ, ಹೀಗೆ ಓದುವರಿಗೆ ಸಹ ನಮ್ಮ ದೇಶದ ಭಾವನೆ ಹುಟ್ಟಿದೆ. ಹಿಂದು-ಮುಸಲ್ಮಾನರ ಭೇದವಿರ ಕೂಡದು, ಎಲ್ಲರೂ ಐಕ್ಯಮತ್ಯದಿಂದ ಪ್ರಸಂಗ ನಡೆಸಬೇಕು. ಅಸ್ಪೃಶ್ಯತೆಯಿರಕೂಡದು. ಮಾನವ ಧರ್ಮಗಳಿಗೆ ಇಂಬಿಲ್ಲ. ಪರದೇಶಗಳೊಡನೆ ಹಗೆ ಹಿಡಿಯುವ ಕಾರಣ, ನನಗೆ ಚಿಕ್ಕಿನ ಸ್ವಪ್ನವಿರುವ ಕಾರಣವಿಲ್ಲ. ಸಾಮಾನ್ಯರ ಹಿತಕ್ಕೆ ಭಂಗವಾಗದಂತೆ ದೇಶ-ವಿದೇಶಗಳೊಳವು ವಿಶೇಷ ಹಿತಸಂಬಂಧಗಳು ಕಾಪಾಡಲ್ಪಡುವವು ಇಂಥ ರಾಷ್ಟ್ರಬಾಂಧವ್ಯಕ್ಕಾಗಿ ರೌಂಡ ಟೇಬಲ್ ಪರಿಷತ್ತಿನಲ್ಲಿ ನಾನು ಪ್ರಯತ್ನಿಸುವೆನು" ಹೀಗೆ ಮಹಾತ್ಮರು ನುಡಿದರು.

'ರ್ಯೂಟರ' ಸಂಸ್ಥೆಯು ಸ್ವಂತ ಸುದ್ದಿಗಾರರು ಇದೇ ಹಡಗದ ಮೇಲೆ ಕಳಿಸಲ್ಪಟ್ಟಿದ್ದಾರೆ. ಮಹಾತ್ಮರ ಸುದ್ದಿ ಎಲ್ಲ ಸುದ್ದಿ ತಿಳಿಸುವದಕ್ಕಾಗಿ ಈ ಏರ್ಪಾಟಾಗಿದೆ.

ಮಹಾತ್ಮರಿಗೆ ಡಾಕ್ಟರರು ಪರೀಕ್ಷೆ ಮಾಡದೆ ಹಡಗದ ಮೇಲೆ ಹತ್ತಗೊಟ್ಟರು. ಆ ದಿನ ಹಡಗದವೇ ಲೆಕ್ಕ ತಿಕೀಟುಗಳು ಕೇವಲ ಒಂದೇ ದಿನ ಹೀಗೆ ಹುಟ್ಟಿದ ಹಣವನ್ನು ಕಂಪನಿಯವರು ಧರ್ಮಕಾರ್ಯಕ್ಕೆ ವಿನಿಯೋಗಿಸಬೇಕೆಂದು ಗೊತ್ತು ಮಾಡಿದ್ದಾರಂತೆ. 'ರಜಪುತಾನಾ' ಹಡಗವು ಪಿ. ಎಂಡ್ ಓ ಕಂಪನಿಯದು. ಇದರ ಮಾಲ್ಕಿ ಯಜಮಾನರು ಇ ಚಕ್ರದ ದೊರೆಗಳ. ಮಹಾತ್ಮರ ಮೇಲೆ ಇವರು ಬೆಂಕಿ ಕಾರುತ್ತಾರೆ ಇಂಥ ಕಂಪನಿಗ ಧರ್ಮ ಸೂಚಿಸಿತು. ಮಹಾತ್ಮರ ಮಹಿಮೆ ನೋಡಿ!!

ರಜಪುತಾನಾ ಹಡಗದ ಕಪ್ತಾನರ ಹೆಸರು ಜಸ್ಟಿನ್ ಬೆಕ್ ಎಂದು. ಇವರು ಗೊನಮಾಂತಳದ ಕ್ರಿಸ್ತ ನ್ನರು. ಮಹಾತ್ಮರಂಥ ಜಗದ್ವಂದ್ಯ ಮಹಾಪುರುಷರಿಗೆ ತಮ್ಮ ಹಡಗದಿಂದ ಒಯ್ಯುವ ಭಾಗ್ಯ ಲಭಿಸಿದ್ದಕ್ಕಾಗಿ ಅವರಿಗೆ ಅತ್ಯಂತ ಹರುಷವಾಯಿತು "ನನ್ನ ಆಯುಷ್ಯದಲ್ಲಿ ಈ ಪ್ರಸಂಗ ಜನ್ಮದಲ್ಲಿಲ್ಲ ಇನ್ನು ನನ್ನ ಭಾಗ್ಯೋದಯವಾಯಿತು" ಹೀಗೆ ಅವರು ಉದ್ಗರಿಸಿದರು. ಖಲಾಶಿಗಳೂ, ಇತರರೂ ಹೀಗೆಯೇ ಅಭಿಮಾನಪಟ್ಟರು.

ಹಡಗದ ಮೇಲೆ ಪ್ರಯಾಣ ಮಾಡುತ್ತಿರುವ ಬ್ರಿಟಿಶರೂ, ಅವರ ಗೆಳೆಯರೂ ಮಹಾತ್ಮರ ಸತ್ಕಾರ ನೋಡಿ ಆಶ್ಚರ್ಯಚಕಿತರಾದರು "ಒಮ್ಮೆ ಗಾಂಧಿಗೆ ನೋಡಿಕೊಳ್ಳಿ!" ಹೀಗೆ ಅವರು ತಮ್ಮ ತಮ್ಮೊಳಗೆ ಮಾತಾಡಿಕೊಂಡು. ಮಹಾತ್ಮರ ವೈಭವ ಹೊಗಳುತ್ತಿದ್ದರು.

ಮಹಾತ್ಮರಿಗೆ ಶುಭಚಿಂತನ ಮಾಡಿ ಕವನರು ತಂತಿ ಮುಖಾಂತರ ಸಂದೇಶಗಳು ಬಂದವು. ಸರ್ವಾಧಿಪತಿ ವಿಲಿಂಗ್ಡನ್ ದೊರೆಗಳು "ಭಾಗ್ಯವಂತರಾಗಿ" ರೆಂದು ಹರಸಿ ಕಳಿಸಿದ ಸಂದೇಶವು ಅಲ್ಲಿತ್ತು. ಹೀಗೆ ಮಹಾತ್ಮರೊಬ್ಬರಿಗೇ ಸಂದೇಶ ಕಳಿಸಿದ್ದು ಲೀಕ್ಷರ್ಮಿ ವಾಗಿ ಸರಕಾರ ಪಕ್ಷದಾತಿ ಪತ್ರಿಕಾಕರ್ತರ ಅಕ್ಷೇಪದ ಎಷ್ಟರಂತೆ ಮಹಾತ್ಮರು ವ್ಯಕ್ತಿ ಪ್ರತಿನಿಧಿಗಳಲ್ಲ, ರಾಷ್ಟ್ರಪ್ರತಿನಿಧಿಗಳವರು!

ಮಹಾತ್ಮರಿಗೆ ಸರ್ ಪ್ರಭಾಶಂಕರ ಪಟ್ಟಣಿಯವರು ಗಸ್ ವರ್ಗದಲ್ಲಿ ಇರಲು ಆಗ್ರಹ ಮಾಡಿದರು. ಮಹಾತ್ಮರು ಒಪ್ಪಲಿಲ್ಲ.

ಮುಂಬಯಿಯಲ್ಲಿ ರಾಷ್ಟ್ರೀಯ ಕ್ರಿಶ್ಚನ್ ಸಂಘವು ಮಹಾತ್ಮರಿಗೆ ಮಾನಪತ್ರವನ್ನರ್ಪಿಸಿತು. ಕ್ರಿಸ್ತರಿಗಾಗಿ ನಾನು ಎಲ್ಲವನ್ನು ಮಾಡುವೆನು, ನೀವು ನೂಲಿರಿ, ಖಾದಿಯನ್ನು ಧರಿಸಿರಿ, ಪರ-ದೇಶಿ ಕುಡಿಯ ಬೇಡಿರಿ, ಹೀಗೆ ಮಹಾತ್ಮರು ಸ ಭೆಗೆ ಆಜ್ಞೆ ಮಾಡಿದ್ದಾರೆ. ಈ ಮಾನಪತ್ರಕ್ಕೆ ದಿವಾನ ಬಹಾದ್ದೂರ ಆರೋಗ್ಯ ಸ್ವಾಮಿ ಮುದಲಿಯಾರ, ಎ ನೋರ್ಕ್ಸ, ಎಸ್ ಪಿ ಎಸ್ ವರಿ, ಸಂಪಾದಕ 'ದಿ ವೀಕ್,' ಕಿ ಅಯ್ ಕುರಿಯನ್ಸನ್, ಎಲ್ ಎಲ್. ಬಿ, ಜೆ ಎಸ್ ಓಂ ಮೇರವರ ಸಹಿಗಳಿವೆ.

ಮಹಾತ್ಮರು ವಾಡಿಕೆಯಂತೆ ಪಂಜಿಯು ಸುತ್ತಿ ಕೊಂಡಿದ್ದರು, ಶಾಲನ್ನು ಎತಿಕೋಳಿನ ಮೇಲೆ ಮಡಚಿ ಇಟ್ಟುಕೊಂಡಿದ್ದರು.

ಶ್ರೀ| ಶೌಕತ ಅಲ್ಲಿಯವರು ಪೋರ್ಟಸಯ್ಯದ ಬಂದರದಲ್ಲಿ ಇಳಿದು ನಿಂತಿದ್ದಾರೆ. ಮಹಾತ್ಮರೊಡನೆ ರಜಪುತಾನಾ ಹಡಗ ಹತ್ತಿ ಲಂಡನಿಗೆ ತೆರಳುವರು.

ಮಹಾತ್ಮರ ಅಪೂರ್ವ ಸ್ವರಾಜ್ಯ ಯಾತ್ರೆ.

(೬ನೇ ಪಾನಿನಿಂದ ಮುಂದರಿಸಿದ್ದು)

ಅಪ್ಪಿಕೊಂಡರು. ಹಾಗೆಯೇ ಸರದಾರ ವಲ್ಲಭಭಾಯಿಯವರು ಪಂಡಿತ ಮಾಲವೀಯಾಜೀಯವರಿಗೆ ಆದರದಿಂದ ವಂದಿಸಿ ಆಶೀರ್ವಾದ ಪಡೆದು ಸೌ| ಕಸ್ತೂರಬಾಯಿ ಗಾಂಧಿ, ಪಂಡಿತ ಜವಾಹಿರಲಾಲ ಮೊದಲಾದವರನ್ನು ಕರಕೊಂಡು ಕೆಳಗಿಳಿದರು. ಪುನಃ ಮಹಾತ್ಮರು, ಪಂಡಿತ ಮದನಮೋಹನ ಮಾಲವೀಯ, ಸೌ| ಸರೋಜಿನಿ ನಾಯಡೂರವರೊಡನೆ ಮೇಲಕ್ಕೆ ಹೋಗಿ ಸಮಸ್ತರಿಗೆ ವಂದಿಸಿ ಪುನಃ ಎಲ್ಲರ ಅಗ್ಗಳ ಕೊಂಡರು. ಹಾಗೆಯೇ ಕೆಳಗಿಳಿದು ಬಂದು ತಮ್ಮ ಕೋಣೆಯ ಮುಂದೆ ಕಟಾಂಜನಕ್ಕೆ ಒರಗಿ ನಿಂತರು. ಗಾಂಧಿ–ಮಾಲವೀಯ–ನಾಯಡೂ ತ್ರಿಮೂರ್ತಿಗಳ ಮೇಲೆ ನಿಂತಲ್ಲಿಂದಲೇ ಪುಷ್ಪವೃಷ್ಟಿ ಮಾಡುತ್ತಿದ್ದರು. ೧| ಘಂಟೆಯಾಯಿತು. ಹಡಗ ಹೊರಟಿತು. ಮಹಾತ್ಮರೂ, ಪಂಡಿತ ಮಾಲವೀಯರವರೂ ನಸುನಗುತ್ತ ಕೈಮುಂದೆ ಮಾಡಿ ' ನಾವು ಹೋಗಿ ಬರುತ್ತೇವೆ, ನೀವು ಒಮ್ಮೆ ಮನೆಗೆ ತೆರಳಿರಿ " ಹೀಗೆ ನುಡಿದರು. ನೋಡನೋಡುತ್ತ 'ರಜಪೂತಾನಾ' ಹಡಗವು ಗಾಂಧಿ–ಮಾಲವೀಯ–ನಾಯಡೂಗಳಂಥ ಭರತಭೂಮಿಯ ಶ್ರೇಷ್ಠ ನರರತ್ನಗಳೊಡನೆ ಪಯಣ ಶುರು ಮಾಡಿ ಅದೃಶ್ಯವಾಯಿತು. ಜನರು ಹಿಂತಿರುಗಿದರು.

ಪಂಡಿತ ಮದನಮೋಹನ ಮಾಲವೀಯರವರು ಪ್ರಯಾಗದಿಂದ ಮಹಾತ್ಮರ ಆಗಮನದಂತೆ ಶುಕ್ರವಾರ ಹೊರಟು ರವಿವಾರ ಮುಂಬಯಿಗೆ ಬಂದು ಸೇರಿದ್ದರು. ಆಝಾದ ಮೈದಾನದಲ್ಲಿ ಮಹಾತ್ಮರ ಭಾಷಣ ಮುಗಿದ ಬಳಿಕ, ಪಂಡಿತ ಮಾಲವೀಯರವರು ಮಾಡಿದ್ದ ನಂತರ — " ನಮಗೆ ಆಶೀರ್ವಾದ ಕೊಡಲು ತಾವೆಲ್ಲರೂ ಬಂದಿದ್ದೀರಿ. ಸತ್ಸಂಕಲ್ಪವನ್ನು ಪರಮಾತ್ಮನು ಕರುಣಿಸಲಿ. ನಮ್ಮ ಲೋಕನಾಯಕನು ಸ್ವದೇಶಕ್ಕೆ ಸ್ವಾತಂತ್ರ್ಯ ಸಂಪಾದಿಸಿಕೊಳ್ಳುವದಕ್ಕಾಗಿ ಪರದೇಶಕ್ಕೆ ಪ್ರಯಾಣ ಬೆಳಸಿದ್ದಾನೆ. ನಮ್ಮಂಥ ಪುರಾತನ ಪ್ರಬಲ ರಾಷ್ಟ್ರವು ಪರತಂತ್ರ್ಯಕ್ಕೊಳಗಾದದ್ದು ವಿಧಿಘಟನೆ. ಈ ತನಕ ಪರಸ್ವಾಧೀನವಾಗಿ ಉಳಿದದ್ದೇ ನಾಚಿಕೆಗೇಡಿತನ. ಮಹಾತ್ಮರ ಅಹಿಂಸೆಯಿಂದಲೇ ನಮಗೆ ಸ್ವರಾಜ್ಯಪ್ರಾಪ್ತಿಯಾಗುವದು. ಅತ್ಯಾಚಾರಗಳಾಗುತ್ತವೆ, ಪ್ರತಿ ಅತ್ಯಾಚಾರಗಳಾಗುತ್ತವೆ, ಕೊನೆಗೆ ನಾಶವಾಗುತ್ತದೆ, ಅಹಿಂಸೆಯೇ ಕ್ಷೇಮದಾಯಕವು. ಲೋಕಮಾನ್ಯರು ನುಡಿದಂತೆ, ಸ್ವರಾಜ್ಯವು ನಮ್ಮ ಜನ್ಮಸಿದ್ಧ ಹಕ್ಕು, ಇನ್ನು ಅದನ್ನು ಅಲ್ಲಿಗಳಿಯ ಬರದು. ಆತ್ಮಬಲದಿಂದ ನಾವು ಹೋರಾಡುತ್ತಿದ್ದೇವೆ. ಸ್ವರಾಜ್ಯ ಸಿಗದೆಂದು ಎಂದಿಗೂ ಸಂದೇಹಪಡಬೇಡಿ. ಯಶಸ್ಸು ಸಿಕ್ಕುವದೆಂದು ನನಗೆ ದೃಢವಿಶ್ವಾಸವಿದೆ. ನಾವು ಸ್ವದೇಶದ ಸ್ವಾಮಿಗಳಾಗವೆವು. ಆ ಹಕ್ಕು ಕೂಡ ನ್ಯಾಯತಃ ಬಂದರೆ ನಮ್ಮ ಅಸಮಾಧಾನವಾಗುವದ. ಜಗತ್ಪಾಲಕನು ಮಹಾತ್ಮರಿಗೆ ಯಶಸ್ಸನ್ನು ದಯಪಾಲಿಸಲಿ. ಸ್ಥೈರ್ಯವನ್ನು, ನ್ಯಾಯನಿಷ್ಠುರತೆಯನ್ನೂ ನಮಗೆ ದಯಪಾಲಿಸಲಿ." ಹೀಗೆ ಪಂಡಿತ ಮದನಮೋಹನ ಮಾಲವೀಯರವರು ಆಶೀರ್ವಾದರೂಪವಾಗಿ ನುಡಿಯಲು, ಜನಸಮೂಹವೆಲ್ಲ ಚಪ್ಪಾಳೆಯ ಘೋಷದಿಂದ ಪಂಡಿತ ಮಾಲವೀಯರಿಗೆ ಸತ್ಕರಿಸಿತು.

ಸೌ| ಸರೋಜಿನಿ ನಾಯಡೂರವರಿಗೆ

ಸರ್ವಾಧಿಪತಿ ವಿಲಿಂಗ್ಡನ್ ದೊರೆಗಳು ಮಹಾತ್ಮರ ಜೊತೆಗೆ ರೌಂಡ ಟೇಬಲ್ ಪರಿಷತ್ತಿಗೆ ಹೋಗಲು ಒಪ್ಪಿಗೆಯಿತ್ತಿರುವರೆಂದ. ಸೌ| ಅವರಿಗೆ ತಂತಿಯಿಂದ ಕೇಳಿದರು. ಸಂತೋಷದಿಂದ ಹೋಗಲೊಪ್ಪುತ್ತೇನೆಂದು ಸೌಭಾಗ್ಯವತಿಯವರು ಮರು ತಂತಿ ಕೊಟ್ಟರು. ಅಂದಿನಿಂದ ಸೌ| ಯವರು ಹೊರಡುವ ತಯಾರಿ ನಡಿಸಿದರು. ಚಿತ್ರವಿಚಿತ್ರ ಸೀರೆಗಳನ್ನು, ಕುಪ್ಪಸಗಳನ್ನು, ಬಹು ಬೆಲೆಬಾಳುವ ಉಡಿಗೆ–ತೊಡಿಗೆಗಳನ್ನು, ಗಂಟು ಕಟ್ಟಲಾರಂಭಿಸಿದರು. ಸೌ| ಯವರು ಅವನ್ನೆಲ್ಲ ತೋರಿಸಿ ' ಇವೆಲ್ಲ ಸ್ವದೇಶಿ, ಕಾಶ್ಮೀರದವು, ರಾಜಸ್ಥಾನದವು ' ಹೀಗೆ ಹೇಳುತ್ತಿದ್ದರು. ' ಹಿಂದೂ–ಮುಸಲ್ಮಾನರೆಲ್ಲರೂ ಮೆಚ್ಚುವಂಥ ಹಿಂದುಸ್ಥಾನಿಗಳೆಂದು ತಿಳಿದು ದೇಶಸೇವೆ ಮಾಡಬೇಕಾಗಿ ' ಸೌ| ಯವರು ಇಂಗ್ಲೆಂಡಕ್ಕೆ ಅಪ್ಪಣೆ ಕೊಟ್ಟು ಹೊರಟಿದ್ದಾರೆ. ಇದೇ ಹಡಗದಲ್ಲಿ ಶ್ರೀ ಸರ್ ಪ್ರಭಾಶಂಕರ ಪಟ್ಟಣಿ, ರಾ| ಘನಶ್ಯಾಮದಾಸ ಬಿರ್ಲಾ, ಪ್ರೊ| ಕೆ. ಟಿ. ಶಹಾ, ಶ್ರೀ| ಸ್ವಾಮಿ ಸ್ವದೇಶಿ ಪ್ರಭೃತಿಗಳು ಹೊರಟಿದ್ದಾರೆ. ಮಾಲವೀಯಜಿಯವರ ಮಗ ಗೋವಿಂದ ಮಾಲವೀಯರೂ ಹೊರಟಿದ್ದಾರೆ. ಪಂಡಿತ ಗೋವಿಂದ ಮಾಲವೀಯರವರು ತಂದೆಯವರ ಕಾರ್ಯದರ್ಶಿಗಳು. ಮಹಾತ್ಮರ ಜೊತೆಗೆ ಇದ್ದ ಕಾರ್ಯದರ್ಶಿಗಳಾದ ಶ್ರೀ| ಮಹಾದೇವಭಾಯಿ ದೇಸಾಯಿ, ಪ್ಯಾರೇಲಾಲ, ಮಗ ದೇವಿದಾಸ ಗಾಂಧಿ ಹಾಗು ಮಿರಾಬಾಯಿಯವರು ತೆರಳಿದ್ದಾರೆ. ಮುಂಬಯಿಯ ಡಾ| ಜೀವರಾಜ ಮೆಹೆತಾರವರೂ ಇದೇ ಹಡಗದಿಂದ ಲಂಡನಿಗೆ ಹೊರಟಿದ್ದಾರೆ, ಅವರು ಮಹಾತ್ಮರ ಪ್ರಕೃತಿಯ ಸಂರಕ್ಷಣೆಗಾರರು. ಮಹಾತ್ಮರು ಒಂದೇ ವರ್ಗದ ಕೋಣೆಯನ್ನು ಕೊಂಡಿದ್ದಾರೆ. ಅದರೊಳಗೆ ಮೂರನೆಯ ವ್ಯವಸ್ಥೆಯಿದೆ. ಮಹಾತ್ಮರ ಸಾಮಾನೆಂದರೆ, ೨ ಗಂಟು, ೩ ಪೆಟ್ಟಿಗೆ, ಪೆಟ್ಟಿಗೆಯಲ್ಲಿ ಖರ್ಜೂರ, ಜೇನುತುಪ್ಪ, ಆಡಿನ ಹಾಲು, ಕೈರಾಟೆಗಳಿವೆ. ಶ್ರೀ| ದೇವಿದಾಸ ಗಾಂಧಿ, ಮಹಾದೇವಭಾಯಿ ಮೊದಲಾದವರು ಬೇರೆ ಒಂದು ಕೋಣೆಯಲ್ಲಿರುವರು. ಪಂಡಿತ ಮದನಮೋಹನ ಮಾಲವೀಯರವರಿಗೆ ಹೀಗೆಯೇ ಬೇರೆ ಕೋಣೆಯಲ್ಲಿರುವ ವ್ಯವಸ್ಥೆಯಾಗಿದೆ. ಅವರೆಲ್ಲರಿಗೆ ಪ್ರತ್ಯೇಕವಾದ ಅಡಿಗೆ ಕೋಣೆಯ ಏರ್ಪಾಟಾಗಿದೆ. ಪಂಡಿತ ಮದನಮೋಹನ ಮಾಲವೀಯರವರು ನಿಷ್ಠಾವಂತ ಸನಾತನಿಗಳು. ಇದ್ದ್ಯಾಗ್ಯೂ ಅವರು ಪರದೇಶಗಮನ ಮಾಡುತ್ತಿದ್ದು, ಗಂಗಾಜಲವನ್ನೂ, ಆಕಳ ಹಾಲನ್ನೂ ಇವರು ಸಂಗ್ರಹಿಸಿಕೊಂಡು ಹೊರಟಿದ್ದಾರೆ.

NOTICE.

Prize books, text books other than Kanarese, Marathi and Urdu readers, slates, chalkhumas, khadi suits (comprising of a cap, paran, half pant and a coat) for boys aged , 12 & 15, polkas parkars for girls aged 8, 10 & 12, combs, inkstands, slate-pencils, looking glasses, etc. worth about Rs. 900- as detailed below are required for distribution to schools.

Prize books	Rs. 97-8-0
Text books other than readers	Rs. 92-8-0
Slates	Rs. 111-0-0
Chalkhumas	Rs. 61-0-0
Inkstands, pencils, combs, looking glasses etc.	Rs. 35-0-0
Suits, polkas etc.	Rs. 470-0-0
Total	Rs. 900-0-0

Those that are interested in the sale of those articles should submit to the undersigned their tenders giving rates of each articles on or before 20th September 1931. Detailed lists of books, slates, chalkhumas etc. required will be available for perusal in the D. S. B. office at Karwar during office hours.

The slates should be of stone and of the required dimensions. The articles will have to be supplied within two months from the date of the order, and will have to be delivered in the D. S. B. office at Karwar. Articles, if found unsatisfactory, are liable to be rejected.

Tenders should be sent under sealed covers and superscribed as "Tender for supply of books, slates, etc." Tenders received after 20-9-1931 will not be accepted.

The undersigned reserves the right to reject any or all tenders without assigning any reason.

Karwar,

3rd September, 1931

P. S. MUJUMDAR,
Chairman,
District School Board Kanara

ಸ್ಥಾನಿಕ ವೃತ್ತಾಂತ.

ಕುಮಟಾ— [illegible]

[illegible] ಜಿಲ್ಹಾ ಕಾಂಗ್ರೆಸ ಕಮಿಟಿಯ [illegible] ಕಾಂಗ್ರೆಸ ಕಮಿಟಿಗಳನ್ನು [illegible] ಜಿಲ್ಹಾ ಕಾಂಗ್ರೆಸ ಕಮಿಟಿಯ [illegible] ಉಪಾಧ್ಯಕ್ಷರಾಗಿ ನೇಮಿಸಲ್ಪಟ್ಟರು [illegible] ಜಿಲ್ಹಾ ಕಾಂಗ್ರೆಸ ಕಮಿಟಿಯು [illegible] ಸಭೆಯು ವಿಸರ್ಜನವಾಯಿತು.

ಜಿಲ್ಹಾ ಬೋರ್ಡಿನ ಸಭೆ [illegible] ಅಧ್ಯಕ್ಷರು [illegible] ಸಭೆಯಲ್ಲಿ [illegible] ಜಿಲ್ಹಾ ಬೋರ್ಡಿನ [illegible]

[illegible] ಅಧ್ಯಕ್ಷರು ಬೋರ್ಡಿನ ಉಪಾಧ್ಯಕ್ಷರ [illegible] ಸ್ಥಾನದಲ್ಲಿ [illegible]

ಹೊನ್ನಾವರ— [illegible] ಕಳೆದ ಬುಧವಾರ [illegible] ಒಂದು ತೀರ ಸಣ್ಣ [illegible]

ಮ್ಯುನಿಸಿಪಾಲಿಟಿಯ [illegible] ಕಾಂಗ್ರೆಸ [illegible] ಸಂಸ್ಕೃತ [illegible] ವಿದ್ಯಾಸಂಸ್ಥೆ [illegible]

ಭಟಕಳ— [illegible] ಮ್ಯುನಿಸಿಪಾಲಿಟಿ ಚೇರಮನರಿಗೆ ರಾಜಿನಾಮೆ ಕೊಟ್ಟರು [illegible] ಮ್ಯುನಿಸಿಪಾಲಿಟಿ [illegible]

[illegible] ಆರ್ಜಿ ಅಧ್ಯಕ್ಷರ [illegible]

ಶಿರಸಿ— [illegible]

ಸಿದ್ದಾಪುರ— [illegible]

[illegible]

ಅಲ್ಲಿಲ್ಲಿ ಇಷ್ಟಿಷ್ಟು!

ಫ್ರಾನ್ಸದೇಶದ ಸರಕಾರದವರು ಒಂದು ಹೊಸ ಒಪ ಕ್ರಮ ಮಾಡಿರುತ್ತಾರೆ ಸ್ವದೇಶೀಯರಿಗೆ ಪ ರಂಚದ ಪರಿ ಚಯ ಮಾಡಿಕೊಡಬೇಕೆಂಬುದೇ ಇದರ ಉದ್ದೇಶ. ಬ್ಯಾಡ ವಿನ್‌ಸನಿಸ ಎಂಬ ಗ್ರಾಮದಲ್ಲಿ ೨೫೦ ಎಕ್ರೆ ಜಾಗದ ಮೇಲೆ ೪೦ ಕೋಟಿ ರೂಪಾಯಿ ವೆಚ್ಚ ಮಾಡಿ ಏಷಿಯಾ ಯುರೋಪ, ಆಫ್ರಿಕಾ, ಉತ್ತರ-ದಕ್ಷಿಣ ಅಮೇರಿಕಾ ಇವುಗಳ ಜನರ ಮಂದಿರಗಳ ಸೂಕ್ಷ್ಮ ಪ್ರತಿಕೃತಿ ನಿರ್ಮಿಸಿದ್ದಾರೆ ಅದಾ ದೇಶದೊಳಗಿನ ಪ್ರಖ್ಯಾತ ಮಂದಿರ-ಗುಡಿ ಮಾಡ ಬಾರ ನೋಡತಕ್ಕಂಥ ನೋಟಗಳನ್ನೆಲ್ಲ ನಿರ್ಮಿಸಿದ್ದಾರೆ ಹಕ್ಕಿಮುಟ್ಟಿಗೆ ಆ ತಾಸು ಸಾಕ್ಷ್ಯ ಪ್ರಪಂಚದಲ್ಲಿ ಅಡ್ಡಾಡಿ ದರೆ, ವಿಶಾಲ ಭೂಗೋಲದ ಕಲ್ಪನೆ ಬರುತ್ತದೆ

* * *

ಪ್ರಾಚೀನ ಧರ್ಮವನ್ನು ಕೊನೆಗಾಣಿಸುವವರು ಗ್ರೀಕ ಸಾರಸ್ವತ ಪ್ರಸಿದ್ಧನಾದವ್ರು ಇದ್ದ ಧರ್ಮಗಳನುಯಾಯಿಗಳು ಪಾಲಿ ಭಾಷೆಯಲ್ಲಿ ನಿಘಂಟು ಇವರು ಮಗ್ಗೂಸನ್ ಕಾಲೇಜಿನಲ್ಲಿ ಪ್ರೊಫೆಸರರಿದ್ದರು ಅವರು ಕರ್ನಾಟಕದಲ್ಲಿ ಸಹ ಸಂಚರಿಸಿ ಅನುಭವ ಗಳಿಸಿದವರು ಸನ್ಯಾಸಿಗಳ ಸಂಗ್ರಹವು ದಲ್ಲಿ ಸೇರಿದ ಸುಪ್ರಸಿದ್ಧರಾದ ಮುನಿಯಿಸಂ ಪ್ರವರ್ತನಾ ಸಭಾಸದರೊಳಗೆ ಒಬ್ಬರು. ಅಹಿಂಸಾ ಧರ್ಮದಲ್ಲಿ" ವಿಷಯವನ್ನು ಬೋಧಿಸಿದರು ಅಹಿಂಸೆಯು ಮೊಲಕದಿಂ ಜೀವಕರುಣೆ ಬೋಧಿಸುವ ಬೌದ್ಧ ಮುನಿಗಳು ಅವರೇ ಆದ್ಯ ಧರ್ಮಪ್ರಸಾರವನ್ನು ಆರಂಭ ಮಾಡಿದ್ದಾರೆ ಬುಂಬೈ ಕೋಟ್ಟೆ ಗ್ರಾಮ—ಕರಾವಳಿಗಳನ್ನು ಬಿಟ್ಟು ಬಿಕ್ಷುಗಳು ತಿರುಗುವುದು ಸುಖಕರವಾಗುವದರ, ಸ್ವರ್ಗಕ್ಕೆ ದಾರಿ ಧರ್ಮಪ್ರಸಾರಕ್ಕೆ ಅವಶ್ಯವಾದ ನಿಗ್ರಹವನ್ನು ತೋರಿದರು, ಅಹಿಂಸೆಯು ಲೋಕದಲ್ಲಿ ಮಾನ್ಯವಾಗುತ್ತ ಬಂದಿತು. ಹೀಗೆ ಸಾಧಿಸುವ ಇತರಂತೆ ಎಲ್ಲ ಧರ್ಮಗಳ ಅಭ್ಯುದಯಕ್ಕಾಗಿ ಸಾಧುಗಳಿಗೆ ಸಹಾಯವು ಬೇಕಷ್ಟು ಸಂದಿದೆ, ಮೇಲೆ ಗೌರವವಿದೆ ಜಪಿಸಿದರೆ ಧರ್ಮ ಪ್ರಸಾರದ ಕೆಲಸ ಕಾರ್ಯವನ್ನು ನಿರಾತಂಕವಾಗಿ ನಡೆಸಲು ಪ್ರಾಪಂಚಿಕ ಉಪದ್ರವವಿಲ್ಲವೆಂದು ಹಿರಿಯರಿಗೆ ಎಲ್ಲ ಅನುಕೂಲತೆಗಳು ಮಾಡಿಕೊಡಲ್ಪಟ್ಟವು, ಆದರೆ ಈಗ ಧರ್ಮಕ್ಕೆ ಬಾಧಿಸಲಾರಂಭಿಸಿದೆ ಇದು ಕಾಲಚಕ್ರವಲ್ಲವೇ? ಶೀಲ ಧೀರರು ಎಲ್ಲಿ ಹೋದರು? ಸ್ಪೇನ ದೇಶದೊಳಗಿನ ದ ವರ್ಣದವರ ವಿರುದ್ಧ ದಂಗೆಗಳಾಗಲಾರಂಭಿಸಿವೆ ಮಠಾಧೀಶರು ಪಲಾಯನಮಾಡಿ ಸ್ವದರ್ಶಕಾರ್ಯವನ್ನು ಪುರಸ್ಕರಿಸತಕ್ಕದ್ದು

* * *

ಪ ಪ್ರಾಚ ಕಾಯಿದೆ ಕೌನ್ಸಿಲಿನಲ್ಲಿ ಕೌನ್ಸಿಲು ಸಭಾಸದ ಮೆಂಬರು ಒಂದು ಠರಾವನ್ನು ಸೂಚಿಸತಕ್ಕವರಿದ್ದರೆ ರೈತರು ಸಾಲದಲ್ಲಿ ಮುಳುಗಿದ್ದಾರೆ, ಅವರ ಸ್ಥಿತಿ ಸುಧಾರ ಸಬೇಕೆಂಬುದೇ ಈ ಠರಾವಿನ ಮುಖ್ಯ ಉದ್ದೇಶ ಸಹಕಾರಿ ಸಂಘ ಬ್ಯಾಂಕುಗಳಿಂದ ರೈತರಿಗೆ ಕಲ್ಯಾಣವಾಗಲಿಲ್ಲ ಸಾವಿರ ಕೋಟಿ ಬಡ್ಡಿಯಿಂದ ೨೫ ವರ್ಷದ ಕಂತಿನ ಮೇಲೆ ಭದ್ರತೆ ಕೊಂಡು ರೈತರಿಗೆ ಸರಕಾರವೇ ಸಾಲ ಕೊಟ್ಟಲ್ಲಿ ರೈತರು ಬೀಗೆ ಬಿಡಬಹುದೆಂದು ಈ ಠರಾವು ಸರಕಾರಕ್ಕೆ ಸೂಚಿಸು ಪಡಲಾಗುತ್ತದೆ ಸರಕಾರವು ಎಲ್ಲಿಯ ತನಕ ಯೋಜನೆ ಕೈಕೊಳ್ಳುವದು ನಿಜತ ಬಹಳ ಬೇಗ ಕೈಕೊಳ್ಳಬೇಕು ಜನರ ಸ್ಥಿತಿ ಶೀರ ಕೆಟ್ಟಿದೆ.

* * *

ಆಕಾಶದಿಂದ ದನಗಳೇ? ಮನೆಯೇ ಹುಟ್ಟಿದ್ದಾವೆ! ಇಂಗ್ಲೆಂಡು ದೇಶದಲ್ಲಿ ಗುಡುಗಿನ ಮಳೆಯಾಗಿ ಒಂದು ಕಡೆ ಮಟ್ಟದ ಕಣಿಕೆ ತಲೆಯ ಮೇಲೆ ಬಂದು ಕೂಡಿದೆ ಒಂದೇ ತೊಲ, ೩೬೦ ಅಂಗುಲ ಉದ್ದ! ಅದ್ರ ಮೇಲೆ ಪತ್ತರವಿದೆ, ಸ್ಪಷ್ಟವಾಗಿ ಕಾಣುತ್ತದೆ ಹೊಟ್ಟೆಯ ಮೇಲ್ಭಾಗ ನೀಲ ವರ್ಣದ್ದು ಬಾಲ ೧೧ನೇ ಅವತಾರ ಮೀನ ಜನರ ಗ್ರಹಿಕೆಯಾಗಿದೆ ಈ ತವಕ ಸಾಸು ಬಿದಾಸಿದ್ದುದೆಂಬುದೊಂದು ವಾರ್ತೆ!

* * *

ಚೀನ ದೇಶದೊಳಗಿನ ಕೊನೆಯನೇ ವಿಂಬಲ್ಲಿವಲ್ಲ ಬಿಸಿ ಮೊದಲಿದ ಇದರ ಕ್ಷೇತ್ರ ೮೦ ಚದರ ಮೈಲು ಅದೇ ದೇಶದ ರೈತನದ ಇದ್ದಲಿ ಬಿಸಿಯಲ್ಲಿ ಒಂದು ದೊಡ್ಡ ವಿಪತ್ತಿದೆ ೧೦ ತೊಲೆ ತೂಕದ್ದು! ಸ್ವದೇಶಿಯಾ ದೇಶದ ಭಾಗ್ಯ ಹೊಸ, ಒಂದು ಚಿನ್ನದ ಬಿಸಿ, ಒಂದು ಬೆಳ್ಳಿಯ ಬಿಸಿ, ಹೀಗೆ ಎ ಚೆಲುವುಳ್ಳ ದಾಸಗಳ ಗಸಿಗೆ ದೊರಕಿವೆ

* * *

ಹ್ಯಾರಾಲ ಗೌಸ್ಮಿ ಎಂಬವರು "ಡಿವೆಲೊಪ ಟರ್ ಪ್ರಿನ್ಸಸ" ಎಂಬ ಆರಸರ ಸ್ವಭಾವಚಿತ್ರದೊಳು ಪುಸ್ತಕ ಪ್ರಕಟಿಸಿದ್ದಾರೆ ದೇಶದ ಉತ್ಪನ್ನದ ವಾರದಿಂದ ಅರಸರು ಸ್ವಂತ ವೈಭವದ ಹಾಗೆ ಖರ್ಚ ಮಾಡುವ ಪ್ರಮಾಣವನ್ನು ಈ ಗ್ರಂಥದಲ್ಲಿ ಅವರು ವಿವರಿಸಿದ್ದಾರೆ ಇಂಗ್ಲಂಡ ದೇಶದ ಅರಸರ ಖರ್ಚ ೧೬೦೦ಕ್ಕೆ ೧ ಈ ಪ್ರಮಾಣದಲ್ಲಿದೆ ಬೆಲ್ಜಿಯಮದಲ್ಲಿ ೧೦೦೦ಕ್ಕೆ ೧ ನೋರ್ವೆ ದಲ್ಲಿ ೭೦೦ಕ್ಕೆ ೧, ನೆದರ್ಲಂಡದಲ್ಲಿ (ರಾಣಿ) ೬೦೦ಕ್ಕೆ ೧ ಇಟಾಲಿಯಲ್ಲಿ ೫೦೦ಕ್ಕೆ ೧, ಜಪಾನದಲ್ಲಿ ೪೦೦ಕ್ಕೆ ೧ ಡೆನ್ಮಾರ್ಕದಲ್ಲಿ ೩೦೦ಕ್ಕೆ ೧ ನಮ್ಮ ಹಿಂದುಸ್ಥಾನದೊಳಗೆ ಬ್ರಾವಣಕೋರದ ಮಹಾರಾಜರ ಖರ್ಚ ೧೭೫ಕ್ಕೆ ೧, ಮೈಸೂರ ಮಹಾರಾಜರ ಖರ್ಚ ೧೪ಕ್ಕೆ ೧ ನಿಜಾಮ

ಮನೋಹರವಾದ ಕೂದಲನ್ನು ಚೆನ್ನಾಗಿ ಸಾಕಬೇಕು.

ಆದರೆ, ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ಪರೀಕ್ಷೆ ಮಾಡುತ್ತಾರೆ. ಕೂದಲು ಮನೋಹರವಾಗಿರಬೇಕಾದರೆ, ನೀವು ವಿಶೇಷ ಲಕ್ಷ್ಯಕೊಡಬೇಕು. ಕೂದಲುಗಳನ್ನು ಅಲಕ್ಷ ಮಾಡಿದರೆ, ಅವು ಬಾಡಿ ಸಣ್ಣ ಮತ್ತು ಉದುರುವವು. ನೀವು ಅವಕ್ಕೆ ಚೆಲುವಾದ ಕಾಂತಿಯುಳ್ಳ ಕೂದಲನ್ನು ಬಯಸುವಿರಾ?

ಕಾಮಿನಿಯಾ ಆಯಿಲ್. (ರಜಿಸ್ಟರ್ಡ)

ದಿನಾ ಮುಂಜಾನೆ ಅರ್ಧ ಚಮಚೆ ಎಣ್ಣೆಯನ್ನು ಚೆನ್ನಾಗಿ ತಿಕ್ಕಿದರೆ ತುಂಬ ತಿಕ್ಕಿದ ಕೂದಲಿನ ತಲೆಯ ಹೊಟ್ಟು ಹೋಗುತ್ತದೆ, ಕೇಶರಂಧ್ರಗಳು ತೆರೆದು ಎಣ್ಣೆಯಿಂದ ತಲೆಗೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ ಆಹಾರ ಸಿಗುತದೆ ಹೀಗೆ ಸಿಕ್ಕಿದ ಚೈತನ್ಯ ಕೂದಲುಗಳಿಗೆ ಮುಟ್ಟಿ ನಿಮ್ಮ ಕೂದಲು ಹಸನಾಗಿ ಬೆಳೆಯುತ್ತವೆ.

ಎಲ್ಲ ಔಷಧೀ ಅಂಗಡಿಕಾರರಲ್ಲಿ

ಈ ತೈಲವು ದೊರೆಯುತ್ತದೆ.

ಅಥವಾ

ನಮಗೇ ಬರೆದು ತರಿಸಿಕೊಳ್ಳಿರಿ

ಬಾಟ್ಲಿ ೧ಕ್ಕೆ	ರೂ	೧—೦—೦
ಅಂಚೆವೆಚ್ಚ	,,	೦—೩—೦
೩ ಬಾಟ್ಲಿಗಳಿಗೆ	,,	೨—೧೦—೦
ಅಂಚೆವೆಚ್ಚ	,,	೦—೧೨—೦

ನಿಮ್ಮ ಅಂಗಡಿಕಾರರಿಂದ

ತರಿಸಿಕೊಳ್ಳಿರಿ.

೩ ಔಂಸಿಗೆ	ರೂ	೨—೦—೦
ಔಂಸಿಗೆ	,,	೧—೪—೦
ಡ್ರಾಮಿಗೆ	,,	೦—೧೨—೦
ಅಂಚೆವೆಚ್ಚ	,,	೦ ೬—೦

ಒಟ್ಟೋ-ದಿಲ್ ಬಹಾರ

ಹೇಳಲಿಕ್ಕೆ ಮರೆಯಬೇಡಿರಿ!

"ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ"

ಒಂದು ಸುಗಂಧದ್ರವ್ಯದಲ್ಲಿ ಇದನ್ನು ಕಂಡಾಡಿಕಬಹುದು ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಕಂಡಾಡಿಕಬಹುದು—ಆಶ್ಚರ್ಯವಲ್ಲವೆ?



ಒಟ್ಟೋ-ದಿಲ್ ಬಹಾರ್! (ರಜಿಸ್ಟರ್ಡ)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ನಿಜ ಪರಿಮಳವಿಲ್ಲ. ಅವುಗಳಲ್ಲಿ ಆಲ್ಕೋಹೋಲ ಯಾನೆ ಮದ್ಯವು ಸೇರಿರುತ್ತದೆ. ಇದರಿಂದ ಹೂವಿನ ಸಹಜ ಪರಿಮಳವು ಸಿಗುವದು ಒಟ್ಟೋದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು ಇದಕ್ಕೆ ಮುಸ್ಸಂಜೆ ಪ್ರಕಾಶವಿದೆ

THE ANGLO INDIAN DRUG & CHEMICAL CO.
POST BOX 2082, BOMBAY No 2.

[illegible]

* *

[illegible]

* *

[illegible]

Siromani Udipi Narayanacharya

CHAUKHAMBA, BENARES CITY

[illegible] 108 ಸರ 1ಕ್ಕೆ 0-6-0 [illegible] 10 [illegible] 32 [illegible] ರೂ 0 8 0 [illegible] 100 [illegible] 1ಕ್ಕೆ ರೂ. 3 8 0 [illegible] 0 1 0 [illegible]

ಶಿರೋಮಣಿ ನಾರಾಯಣಾಚಾರ್ಯ,

ಚೌಖಾಂಬಾ, ಕಾಶೀ ಕ್ಷೇತ್ರ

[illegible]

ಆಯುರ್ಧನ್ವಂತರಿ ಔಷಧಾಲಯ, ಕುಮಟಾ.

ನಮ್ಮಲ್ಲಿ ಆಯುರ್ವೇದ ಪದ್ಧತಿಯಿಂದ ಶಾಸ್ತ್ರೋಕ್ತ ತಯಾರಿಸಿದ ಔಷಧಗಳು ಮಾರಾಟಕ್ಕೆ ಸಿದ್ಧವಿರುವವು. ಬೇಕಾದವರು ತರಿಸಿಕೊಂಡು ಪ್ರಯೋಜನ ಪಡೆಯಬೇಕು.

ಚ್ಯವನಪ್ರಾಶಾವಲೇಹ— ರತ್ತಲ ೧ಕ್ಕೆ .	ರೂ ೨-೮-೦
ಅಶ್ವಗಂಧಿಮಿಶ್ರ ಕುಷ್ಮಾಂಡ ಪಾಕ - ರತ್ತಲ ೧ಕ್ಕೆ	ರೂ ೨-೬-೦
ಮಹಾನಾರಾಯಣ ತೈಲ— ೬೦ ತೊಲೆ ಬಾಟ್ಲಿಗೆ ..	ರೂ ೬-೦-೦
ಹಿಮಸಾಗರ ತೈಲ ೬೦ ತೊಲೆಗೆ	ರೂ ೬-೦-೦
ಬೃಹತ್ ಭೃಂಗರಾಜ ತೈಲ - ೬೦ ತೊಲೆಗೆ	ರೂ ೩-೦-೦

ಅರ್ಧಾಣೆಯ ಪೋಸ್ಟೇಜ ಸ್ಟಾಂಪ ಕಳಿಸಿ ರೋಗಿಗಳು ತಮ್ಮ ಪ್ರಕೃತಿಯನ್ನು ಸವಿಸ್ತಾರವಾಗಿ ಬರೆದು ತಿಳಿಸಿದಲ್ಲಿ ಯೋಗ್ಯ ಔಷಧಗಳು (ಅನುಪಾನ ಸಹಿತ) ಕಳುಹಿಸಿಕೊಡಲಾಗುವವು.

ನಮ್ಮ ಪತ್ತೆ - ಪಿ. ಅಚ್ಯುತ ಪಂಡಿತ,

ಆಯುರ್ಧನ್ವಂತರಿ ಔಷಧಾಲಯ, ಕುಮಟಾ.

NOTICE.

Sealed tenders are invited from recognised contractors for the undermentioned work of furniture total cost being approximately Rs. 7 0/

Name of article	No	Description
Chairs	15	Ordinary with arms and plank seat. plank to be single & of 1' thickness (legs and arms should be sufficiently thick i. e. at least 2' thick)
Stools	15	1½' × 1½' × 1½' top plank single of 1' thickness
Benches (big)	30	6' × 1½' (ht) × 1' (breadth of plank) to be supported on 3 pairs of square legs, size measuring 3'
Benches (small)	70	Measurements same as above, except that height is 1'

Tenders will be received in the office of the D S B Kanara, Karwar, up to **20 9-1931** Tenders received after that date will be rejected.

The articles should be made of good seasoned teak wood of the above dimensions and will have to be supplied in the D S B office at Karwar within three months of the date of the order. Articles, if found unsatisfactory, will be returned.

All tenders must be correctly totalled up and the rates tendered must be written both in words and figures. They should be sent under sealed covers and superscribed as "Tender for Furniture"

Undersigned reserves the right to reject any or all tenders without assigning any reasons.

Any further information can be had from the undersigned's office at Karwar on application.

Karwar,
1st September, 1931

P. S Mujumdar
Chairman,
District School Board, Kanara

NAIK & CO.'S MOTOR SERVICE.

Honavar to Dharwar! Dharwar to Honavar!!

HAS BEEN OPENED FROM

1st SEPTEMBER 1931.

ನಾಯ್ಕ ಎಂಡ್ ಕೋಸ್ ಮೋಟರ ಸರ್ವಿಸ್.

ಹೊನ್ನಾವರದಿಂದ ಧಾರವಾಡಕ್ಕೆ! ಧಾರವಾಡದಿಂದ ಹೊನ್ನಾವರಕ್ಕೆ!

ಇದೇ ಸಪ್ಟಂಬರ ತಾ ೧ನೇಯಿಂದ ಸರ್ವಿಸ್ ಚಾಲು ಆಗಿದೆ!!

ಹೊಸ ಹೊಸ ಲೋರಿಗಳು!] [ಬಹು ಸುಖಕರ ಪ್ರಯಾಣ!!

ಅನೇಕ ಜನರ ಆಗ್ರಹದ ಮೇರೆಗೆ ಪ್ರಯಾಣಿಕರ ಅನುಕೂಲತೆಗಾಗಿಯೇ

ಈ ಸರ್ವಿಸ್ ಹೊಸದಾಗಿ ಚಾಲು ಮಾಡಿರುತ್ತದೆ!!

ಈ ಸರ್ವಿಸಿನ ಒಂದು ಮೋಟರವು ಪ್ರತಿ ದಿನ ಬೆಳಿಗ್ಗೆ ಹೊನ್ನಾವರದಿಂದ ೭ ಘಂಟೆಗೆ ಹೊರಟು, ಕುಮಟಾ ಶಿರ್ಸಿ ಮುಂಡಗೋಡ ಮಾರ್ಗವಾಗಿ ಹುಬ್ಬಳ್ಳಿಗೆ ಹೋಗಿ ಧಾರವಾಡಕ್ಕೆ ಸಾಯಂಕಾಲ ೬ ಘಂಟೆಗೆ ಮುಟ್ಟುವದು. ಅದರಂತೆಯೇ ಪ್ರತಿ ದಿವಸ ಬೆಳಗಿನ ೬ ಘಂಟೆಗೆ ಧಾರವಾಡದಿಂದ ಹೊರಟು, ಹುಬ್ಬಳ್ಳಿ-ಮುಂಡಗೋಡ ಸಿರ್ಸಿ ಮಾರ್ಗವಾಗಿ ಕುಮಟೆಗೆ ಬಂದು, ಹೊನ್ನಾವರಕ್ಕೆ ೬ ಘಂಟೆಗೆ ತಲ್ಪುವದು. ಪ್ರಯಾಣಿಕರ ಅನುಕೂಲತೆಯ ಬಗ್ಗೆ ಆಯಾಯ ಸ್ಟೇಶನಗಳಲ್ಲಿ ಯೋಗ್ಯ ವ್ಯವಸ್ಥೆ ಇಟ್ಟಿರುತ್ತೇವೆ ಹಾಗು ವ್ಯಾಪಾರಸ್ಥರ ಬಗೆಗೆ ಯೋಗ್ಯ ಹಾಸಲು ಕೊಂಡು ಆಯಾಯ ವಿಳಾಸದಂತೆ ಮುಟ್ಟಿಸಲ್ಪಡುವದು. ಈ ಸರ್ವಿಸು ವ್ಯಾಪಾರಸ್ಥರಿಗೆ ವಿಶೇಷ ಅನುಕೂಲವಾದದ್ದಿರುತ್ತದೆ ಕಾರಣ, ಈ ಸರ್ವಿಸಿಗೆ ತಾವೆಲ್ಲರೂ ಸಹಾನುಭೂತಿಯಿಂದ ಪ್ರೋತ್ಸಾಹಿಸಬೇಕಾಗಿ ವಿನಂತಿ.

ಗೋಕರ್ಣ ಹಾಗು ಮಂಗಳೂರಿಗೆ ಲ್ಯಾಂಚಿಗೆ ನಮ್ಮ ಗಾಡಿಗಳ ಕನೆಕ್ಷನ್ ಇದೆ.

ಈ ಸರ್ವಿಸಿನ ಜೊತೆಗಾಗಿ ನಮ್ಮಲ್ಲಿ ಬಸ್ಸುಗಳು ಸ್ಪೇಶಲ್ ಬಾಡಿಗೆಗೆ ಸಿಗುವವು!!

Lorries can be had for special hire!!

ಟಿಕೇಟು ಸಿಗುವ ಸ್ಥಳಗಳು:—

ಹೊನ್ನಾವರದಿಂದ ಲೋರಿ ಹೊರಡುವ

ವೇಳೆ.-	ಸ್ಥಳ:-	ಏಜಂಟ.-
7—30 A.M.	ಹೊನ್ನಾವರ-	ಎಸ್. ಎಮ್. ಪಂಡಿತ, ದುರ್ಗಾಕೇರಿ.
8—30 A.M.	ಕುಮಟಾ-	ದಿ ರೋಯಲ್ ಸೋಡಾ ಫೆಕ್ಟರಿ.
1 P.M.	ಶಿರ್ಸಿ-	ನಾಯ್ಕ ಬ್ರದರ್ಸ ಮೋಟರ ಆಫೀಸ, ಮೋಟರ ಸ್ಟೆಂಡ.
3 P.M.	ಮುಂಡಗೋಡ-	ನಾಯ್ಕ ಬ್ರದರ್ಸ ಮೋಟರ ಆಫೀಸ.
5 P.M.	ಹುಬ್ಬಳ್ಳಿ-	ನಾಯ್ಕ ಬ್ರದರ್ಸ ಮೋಟರ ಆಫೀಸ.
6 P.M.	ಧಾರವಾಡ-	C/o ಸ್ಟೂಡಿಂಟ್ಸ್ ಫಾರ್ಮಸಿ.

ಧಾರವಾಡದಿಂದ ಲೋರಿ ಹೊರಡುವ

ವೇಳೆ.-	ಸ್ಥಳ:-	ಏಜಂಟ:-
6-30 A.M.	ಧಾರವಾಡ-	C/o ಸ್ಟೂಡಿಂಟ್ಸ್ ಫಾರ್ಮಸಿ.
7-20 A.M.	ಹುಬ್ಬಳ್ಳಿ-	ನಾಯ್ಕ ಬ್ರದರ್ಸ ಮೋಟರ ಆಫೀಸ.
10 30 A.M.	ಮುಂಡಗೋಡ-	ನಾಯ್ಕ ಬ್ರದರ್ಸ ಮೋಟರ ಆಫೀಸ.
2-30 P.M.	ಶಿರ್ಸಿ-	ನಾಯ್ಕ ಬ್ರದರ್ಸ ಮೋಟರ ಆಫೀಸ, ಮೋಟರಸ್ಟೆಂಡ
5 P.M.	ಕುಮಟಾ-	ದಿ ರೋಯಲ್ ಸೋಡಾ ಫೆಕ್ಟರಿ.
6. P.M.	ಹೊನ್ನಾವರ-	ಎಸ್. ಎಮ್. ಪಂಡಿತ ದುರ್ಗಾಕೇರಿ

ಎಚ್. ಡಿ. ನಾಯಕ್, ಶಿರ್ಸಿ.

ಸೂಚನೆ.— ವಿಶೇಷ ಮಾಹಿತಿ ಸಮಕ್ಷ ಯಾ ಅರ್ಜಿಯು ಏಜಂಟರ ಕಡೆಗೆ ಸಿಗುವದು.

ಮೆನೇಜರ

ಇದನ್ನು ಪಾಂಡುರಂಗ ಕೃಷ್ಣ ರಾನಡೆ ಸಂಪಾದಕ ಇವರು "ಸ್ಟಾರ ಆಫ್ ಕೆನರಾ ಪ್ರೆಸ್ಸಿ"ನಲ್ಲಿ ಮುದ್ರಿಸಿ ಪ್ರಕಟಿಸಿದರು

Reg No. B. 1270. Monday, 14th September, 1931.

ವರ್ಷ ೬

ಪತ್ರದ ದರಗಳು

ಕುಮಟೆಯಲ್ಲಿ ಸಾಲಿಕ ರೂಪಾಯಿ 2-1-0.
ಮನೆಯಹೊರಗಿನವರಿಗೆ ರೂ. 3-0-0
ವ್ಹಿ. ಪಿ. ಖರ್ಚು ಸೇರಿ ರೂಪಾಯಿ 3-2-0
ಬಿಡಿ ಸಂಚಿಕೆಗೆ 0-1-0
ಹಳೇ ಸಂಚಿಕೆಗೆ 0-2-0

ಕಾನಡಾವೃತ್ತ.

THE KANARA NEWS.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रः।
इति महति विरोधे वर्तमाने समाने नृपतिजनपदानां दुर्लभः कार्यकर्ता

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಸಂಚಿಕೆ ೪೫

ಜಾಹೀರಾತುಗಳ ದರ
ಕನ್ನಡ, ಇಂಗ್ಲಿಷ ಪ್ರತಿ ಪಂಕ್ತಿಗೆ (೧೫ ಎಮ್ ಉದ್ದ) ೮ ಸಾಲುಗಳವರೆಗೆ ರೂ. 1-0-0 ಆ ನಂತರ ಪ್ರತಿಸಾಲಿಗೆ 0-2-0
ಹೆಚ್ಚಿಗೆ ಸಾಲು ಎಷ್ಟು ಹಾಕಿಸುವರೋ ಆ ದರದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು
ಬಾಕಿ ಜಾಹೀರಾತುಗಳ ಬಗ್ಗೆ ಪತ್ರವ್ಯವಹಾರ ಮಾಡಬೇಕು.

—(ಕುಮಟಾ— ಕಾನಡಾವೃತ್ತ ಸೋಮವಾರ. ತಾರೀಖು ೧೪ ನೇ ಮಾಹೆ ಸಪ್ಟಂಬರ ಸನ್ ೧೯೩೧ ನೇ ಇಸವಿ.)—

ಜಗತ್ತಿನಲ್ಲಿ ಪವಿತ್ರ ಸ್ತ್ರೀಯರಿಲ್ಲವೇ?

ಸೌಭಾಗ್ಯ ತಿಲಕ

ಎಂಬ ಸಾಮಾಜಿಕ ಕಾದಂಬರಿಯನ್ನು ತರಿಸಿ ಓದಿರಿ. ಅಬಲೆಯ ಸಹಿಷ್ಣುತೆಯನ್ನು, ಕಾಣುವಿರಿ. ಅವರ ಮೇಲೆ ಎಂಥೆಂಥ ಆಪಾದನೆ ಬರುತ್ತವೆಂಬದನ್ನು, ತಮ್ಮ ಪಾತಿವ್ರತ್ಯವನ್ನು ಕಾಯ್ದುಕೊಂಡು ಅವನ್ನೆಲ್ಲ ತಮ್ಮ ಸತ್ಯಪ್ರಭಾವದಿಂದ ಹೇಗೆ ನಿವಾರಿಸುವರೆಂಬುದನ್ನು ನೋಡಿದರಲ್ಲಿ ಒಮ್ಮೆ ನಿಮ್ಮ ಹೃದಯವು ಕರಗಿ ನೀರಾಗದಿರದು. ಸಾತ್ವಿಕ ಭಾವ ಉಕ್ಕಿ ಹೊಟ್ಟೆಪಾಡಿಗಾಗಿ ಹೋದ ನಮ್ಮ ಬಂಧುಗಳ ಕಷ್ಟವನ್ನು ನೋಡಿ ನಿಮ್ಮ ನೆತ್ತರವು ಕುದಿಯದಿರದು! ಬೆಲೆ ೧ ರೂ ಇದಲ್ಲದೆ ನಮ್ಮಲ್ಲಿ ಶಿವಾಜಿ, ರಾಜವಂಶ, ಭಗವಾನದಾಸ, ತಾಯಿನಾಡು, ಶಕ್ತಿಸಾಧನ, ಜ್ವರಪ್ರಕರಣ, ಚಿಲ್ಲಾಮೋಹ ಪರಿಹರ, ಹಿರಿಗೆಗಳು ಇತ್ಯಾದಿ ಇನ್ನು ಪ್ರತಿಯೊಂದಕ್ಕೆ ೧ ರೂ ಹಾಗೂ ಐತಿಹಾಸಿಕ, ಸಾಮಾಜಿಕ, ಪೌರಾಣಿಕ, ಪತ್ತೇದಾರಿ ಕಾದಂಬರಿಗಳು, ಪುಸ್ತಕಗಳು, ನಾಟಕ, ಗ್ರಾಮೀಣ ಮೊದಲಾದ ನೂರಾರು ಗ್ರಂಥಗಳು ದೊರೆಯುತ್ತವೆ ಕ್ಯಾಟಲಾಗಿಗಾಗಿ ಬರೆಯಿರಿ

ವಿಳಾಸ— ಬಿ. ಪಿ. ಕಾಳೆ. ಪ್ರೊಪ್ರೈಟರ ಶ್ರೀ ಕೇಸರಿ ಬಲ ಪ್ರೆಸ್ ಮತ್ತು ಗ್ರಂಥಮಾಲೆ, ಪೋಸ್ಟ ಆನಂದವನ. ಓ ದ್ವಾರವಾಡ

ಪ್ರೆಸಿಡೆನ್ಸಿ ಪ್ರೊವ್ಹಿಡೆಂಟ ಎಂಡ್ ಜನರಲ್ ಇನ್ಸುರನ್ಸ ಕಂಪನಿ, ಲಿಮಿಟೆಡ್.
ಹೆಡ್ ಆಫೀಸ – ಅಪ್ಪೊಲೊ ಬಿಲ್ಡಿಂಗ,
ನೆಲ್ಸನ ಇಸ್ಟೇಟ, ಫೋರ್ಟ, ಮುಂಬಯಿ

"ಇಂಡಿಯನ್ ಇನ್ಶುರನ್ಸ ಜರ್ನಲ್" ಎಂಬ ಪತ್ರಿಕೆಯು ಸಪ್ಟಂಬರ ಸಂಚಿಕೆಯಲ್ಲಿ ಬರೆದದ್ದೇನಂದರೆ,- ಜೀವ ವಿಮೆ ಕಂಪನಿಯ ಸಾಂಪತ್ತಿಕ ಸ್ಥಿತಿಯನ್ನು ಪರೀಕ್ಷಿಸಬೇಕಾದರೆ, ವಿಮೆಯು ಕೊಟ್ಟಿದ ಮಾಹಿತಿಯದ್ದ ಕವಾನಕರು ಪಡೆದ ಕಂಪನಿಯ ಸ್ಥಿತಿಗತಿಯು ಪತ್ರಿಕೆಯನ್ನೋದಬೇಕು ಪ್ರೊವ್ಹಿಡೆಂಟ ಸೊಸೈಟಿಯು ಸ್ಥಿತಿಯಾವದೂ ಹಾಂಗಿಯೇ. 'ದಿ ಪ್ರೆಸಿಡೆನ್ಸಿ ಪ್ರೊವ್ಹಿಡೆಂಟ' ಕಂಪನಿಯು ಇಂಥ ಪರೀಕ್ಷೆಯಲ್ಲಿ ಈಗ ತೇರ್ಗಡೆ ಹೊಂದಿರ ಪದು. ಇಡೀ ಹಿಂದುಸ್ಥಾನದಲ್ಲಿ ಇದೊಂದೇ ಸಮೃದ್ಧ ಸ್ಥಿತಿಯುಳ್ಳದ ಪ್ರೊವ್ಹಿಡೆಂಟ ಕಂಪನಿಯೆಂದರೆ, ಇದೊಂದೇ ಎಂದು ನಿರ್ವಿವಾದವಾಗಿ ಸಿದ್ಧವಾದ ವಿಷಯ. ವಿಮೆ ಇಳಿಸುವ ಜನರಿಗಾಗಿ ಈ ಕಂಪನಿಯು ಭದ್ರತೆಯು ಮಾದರಿಯನ್ನೇದು ನಿಸ್ಸಂಶಯವಾಗಿ ಹೇಳಬಹುದು ಸ್ತ್ರೀ-ಪುರುಷರೂ, ಮಕ್ಕಳೂ ವಿಮೆ ಇಳಿಸಬಹುದು

ಪ್ರೀಮಿಯಮ್:- ರೂ. ೩, ೧, ೦-೮-೦.

ಮೊದಲಿನಿಂದ ಕಂಪನಿಯು ಕೆಲಸ ಮಾಡುವವರಿಗೆ ಒಳ್ಳೇ ಪ್ರತಿಫಲ ಸಿಗುತ್ತ

The Canara Industrial & Banking Syndicate, Ltd.

Head Office — UDIPI.
Branches — BRAHMAVAR KUMTA & KARWAR

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ ಸಿಂಡಿಕೇಟ, ಲಿಮಿಟೆಡ್.

Laxmi Provident Deposit.: ಲಕ್ಷ್ಮೀ ಆಪನ್ನಿಧಿಯು.

ನಿಮ್ಮ ವೃದ್ಧಾಪ್ಯದ ನಿಶ್ಚಿಂತಾಯುಕ್ತದ ಕಾಲಕ್ಕಾಗಿ, ದಿನದಿನಕ್ಕೂ ಬೆಳೆವ ಸಣ್ಣ ಬಾಲೀ ಗಂಡನ ಸನಸನ್ನು ಮುಕ್ತಿಸತ್ತರವ ನಿಮ್ಮ ಮಗಳ ಮದುವೆಗಾಗಿ, ಶಾಲೆಯಲ್ಲಿ ಸುಜ್ಞ ನೆನಸಿದರೂ, ಧನಾಭಾವದಿಂದ ಹಿಂದ ಬೀಳುವ ನಿಮ್ಮ ಮಗನ ವಿದ್ಯಾಭ್ಯಾಸಕ್ಕಾಗಿ ನೀವೇನು ಮಾಡುವಿರಿ? ಲಕ್ಷ್ಮೀ ಆಪನ್ನಿಧಿಯು—

ನಿಮ್ಮ ಆ ಸರ್ವ ಯೋಜನೆಗಳನ್ನು ಪೂರೈಸುವದು. ನಿಮ್ಮಿಂದ ಉಳಿಸಿಕೊಳ್ಳಬಹುದಾದ ಹಣವನ್ನು ನಮ್ಮ ಜೋಡಿನ ಲಕ್ಷ್ಮೀ ಆಪನ್ನಿಧಿಯಲ್ಲಿ ಇಟ್ಟರೆ ಚಕ್ರವೃದ್ಧಿಯಿಂದ ಬೆಳೆದು ೧೦ ವರುಷಗಳಲ್ಲಿ ಸಾಧಾರಣ ಎರಡು ಪಾಲಿಗಿಂತ ಹೆಚ್ಚಿಗೆ ನಿರಾಯಾಸವಾಗಿ ಲಭಿಸುವದು.—

ಎಂದರೆ,

ರೂ	೨೫/—	೧೦ ವರುಷಗಳಲ್ಲಿ	ರೂ	೪೬/—
"	೫೦/—	೧೦ "	"	೯೨/—
"	೧೦೦/—	೧೦ "	"	೧೮೪/—
"	೨೦೦/—	೧೦ "	"	೩೬೮/—

ಎಂತೆಲ್ಲಾ

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

Kumta, 16—8—1931.

A. S. KINI.
Agent, KUMTA BRANCH,
The Canara Industrial & Banking Syndicate Ltd. KUMTA

EAST & WEST INSURANCE CO., LTD. BOMBAY.

ಈಸ್ಟ ಎಂಡ್ ವೆಸ್ಟ ಇನ್ಸ್ಯೂರನ್ಸ ಕಂಪನಿ ಲಿಮಿಟೆಡ್, ಮುಂಬಯಿ.

(ಸರಕಾರ ಭದ್ರತೆಯಿಟ್ಟು, ೧೯೧೩ರಲ್ಲಿ ಹಿಂದುಸ್ಥಾನದೊಳಗೆ ರಜಿಸ್ಟರಾದದ್ದು)

ಸಂಪೂರ್ಣವಾಗಿ ಹಿಂದೀ ಕಂಪನಿ!

ಹಿಂದೀಯರಿಂದ ಹಿಂದೀಯರ ಹಿತಕ್ಕಾಗಿ ನಡಿಸಲ್ಪಟ್ಟು,

ವಿಮೆದಾರರಿಗೆ ತೀರ ಕಡಿಮೆ ಪ್ರೀಮಿಯಮ್ಮಿನಿಂದ ಅಧಿಕವಾದ ಲಾಭವಾಗುವಂತೆ ಈ ಕಂಪನಿಯಲ್ಲಿ ಏರ್ಪಾಟಾಗಿರುತ್ತೆ!

ಈ ಕಂಪನಿಯಲ್ಲಿ ವಿಮೆಯನ್ನು ಇಳಿಸಿದರೆ ಜೀವಂತ ಇರುವಾಗಲೂ, ಮುಂದಿನ ಕಂತುಗಳನ್ನು ತುಂಬದೇ ವಿಮೆಯ ಸಂಪೂರ್ಣ ಸೌಕರ್ಯವು ಸಿಗುವವು!!

ಈ ಕಂಪನಿಯು ಪ್ರತಿನಿಧಿಗಳಿಲ್ಲದಿದ್ದಲ್ಲಿ, ವಜನದಾರ ಹಾಗು ದಕ್ಷ ಏಜಂಟರು ಬೇಕಾಗಿದ್ದಾರೆ ಅವರಿಗೆ ಒಳ್ಳೆ ಸವಲತ್ತು ಕೊಡಲ್ಪಡುವದು

ವಿಶೇಷ ಮಾಹಿತಿಯ ಬಗ್ಗೆ ಈ ಕೆಳಗಿನ ಪತ್ತೆಗೆ ಬರೆಯಿರಿ

ಕುಮಟಾ, ತಾ. ೮-೯-೩೧.

ಸಿ. ಎಸ್. ಶ್ಯಾನಭಾಗ,
ಉತ್ತರ-ಕನ್ನಡ, ಬೆಳಗಾಂವ, ವಿಜಾಪುರ, ಧಾರವಾಡ ಜಿಲ್ಲೆಗಳ ಪ್ರಾಮುಖ್ಯ ಏಜಂಟರು

ವಾರ್ತೆಗಳು.

— ಬ್ರಿಟಿಷ ದೇಶದ ಅರಿಬು ಬಂಕ್ಸನಿನಲ್ಲಿ ಬಿಟ್ಟಿ ಶ್ರೀ ಮಂತರು ಹಗೇವಿನಲ್ಲಿ ಹೇರಳ ಧಾನ್ಯ ಸಂಗ್ರಹಿಸಿದ್ದರು. ತಾ ೧-೯-೩೭ನೇ ದಿನ ೨೦೦-೩೦೦ ಜನ ಕಾಳಿಗೆ ಗತಿಯಿಲ್ಲದವರು ಹೋಗಿ ಧಾನ್ಯ ಉದ್ರಿ ಕೊಡಬೇಕೆಂದರು, ಶ್ರೀಮಂತರು ಒಪ್ಪದಿದ್ದು ಪೋಲೀಸರಿಗೆ ಕರೆಯ ಹೋದರು; ಜನರು ಧಾನ್ಯದ ಉಗ್ರಾಣ ಒಡೆದು ಬೇಕಷ್ಟು ಧಾನ್ಯ ಒಯ್ದರು. ಹೊಟ್ಟೆಗೆ ದೊರೆಯದ ಬಳಿಕ ನೀತಿ ಕೇಳುವವರಿಲ್ಲ. ಸರಕಾರದವರೂ ಊರ ಶ್ರೀಮಂತರೂ ಶೀಘ್ರವೇ ವಿಚಾರ ಮಾಡಿ ಇಂಥ ಅನರ್ಥ ಒದಗದಂತೆ ಜಾಗ್ರತೆ ವಹಿಸತಕ್ಕದ್ದು.

— ಸರಕಾರವು ರೂಪಾಯಿಯು ದರ ಏರಿಸಿ, ಪವನಿಗೆ ೧೮ ರೂಪಾಯಿ ಮಾಡಿದ್ದರಿಂದ ಹಿಂದೀ ಪ್ರಜೆಗಳು ಗತಿಗೆಟ್ಟು ಕೂಡಿದರು, ಸರಕಾರದ ಸಿಟ್ಟು ಏರಿಬಾರಾಯಿತು, ಬದಲು-ಬದಲಾಗಿ ಬಾಯಿ ಗಡಬಡಿಸಬೇಕಷ್ಟೇ ಆದ ಗಿದೆ, ಕಾರಣ ಪಂಜಿನಂತೆ ೧೮ ರೂಪಾಯಿ ಮಾಡಿದವನು ದರ ಹಿಡಿದು ಸರಕಾರವು ಪಂಜಿನಂತೆ ಒಂದೇ ನೀತಿಯು ದರ ನಿಶ್ಚಯಿಸಬೇಕಾಗಿ, ಲಾರ್ಡ್ ಜಗದೀಶ ಪ್ರಸಾದರವರು ಕಾನ್ಸಿಲ್ ಆಫ್ ಸ್ಟೇಟಿನಲ್ಲಿ ಠರಾವು ಸೂಚಿಸತಕ್ಕವರಿದ್ದಾರೆ.

ಈ 'ಜೆಂ ಸಿಸ್ಟೆಂ ಆಫ್ ಕಟ್ಟಿಂಗ್'

ಎಂಬ ಸರ್ವೋತ್ಕೃಷ್ಟವಾದ ಪುಸ್ತಕವು ಕನ್ನಡದಲ್ಲಿ ತರ್ಜುಮೆಯಾಗಿದೆ. ಗಂಡಸರು, ಹೆಂಗಸರು ಮತ್ತು ಹುಡುಗರ ಉಡುಪುಗಳನ್ನು ಶಾಸ್ತ್ರರೀತಿಯಿಂದ ತಪ್ಪಿಲ್ಲದೇ ಕತ್ತರಿಸುವದನ್ನು ಬೋಧಿಸುತ್ತದೆ. ಪ್ರತ್ಯೇಕ ನಕ್ಷೆಗಳ ಸಹಿತ ಬೆಲೆ ರೂಪಾಯಿ ೩. ಟಪಾಲು ಖರ್ಚು ೧. ಆಣೆ.

Rao's Tailoring College
143, Princess street, BOMBAY 2.

'झंडु'

द्राक्षासव — मद्विकारिष्ट — शारंगधर म. अ. १०

रामबाण औषध

सर्दि	घालविणारें
शुक	वाढविणारें
शौचास साफ करणारें	
झोप	आणणारें
शक्ति	देणारें
तेजस्वीपणा	आणणारें

रुचिकर पेय
किंमत एक रतलास १॥ रुपये

झंडु-फार्मास्युटिकल वर्क्स लिमिटेड
मुंबई नं: १४

तीर्थहळ्ळी एजंट: पंडित आणि कंपनी,
सिर्सि एजंट: एस्. एल्. धाकप्पा आणि ब्रदर्स
हुबळी एजंट: तिप्पण्णा क्षत्रि, भुसपेठ

USE ESANOFELE FOR MALARIA

ವಿಷಮಜ್ವರದ ಮೇಲೆ ನಮ್ಮ ಪ್ರಸಿದ್ಧ ಇಸಾನೋಫೀಲ ಔಷಧ ಉಪಯೋಗಿಸಿರಿ.
ಗುಳಿಗೆಯ ಮಾದರಿಯಲ್ಲಿಯೂ ದೊರೆಯುತ್ತದೆ.

SOLE AGENTS GORIO LTD. P.O. BOX 159 BOMBAY

AVAILABLE AT ALL CHEMISTS

ದಿ ಬೋಂಬೆ ಲ್ಯಾಫ್ ಎಶ್ಯೂರನ್ಸ ಕಂಪನಿ, ಲಿಮಿಟೆಡ್.

ಸ್ಥಾಪನೆ 1908.

ಈ ಕಂಪನಿಯು ಪೂರ್ಣ ಹಿಂದೀ ಇದ್ದು, ಅದರ ಕಂತಿನ ದರಗಳೂ, ಶರ್ತುಗಳೂ ಬಹಳ ಸೋಯಿಯವು ಇವೆ. ಕಂಪನಿಯು ಹಣವು ಸರಕಾರಿ ಪ್ರಾಮಿಸರಿ ನೋಟುಗಳಲ್ಲಿಯೂ, ಇಂಡಿಯನ್ ಟ್ರಸ್ಟ ಎಕ್ಟಿನ ನಿಯಮಗಳಂತೆ ಜವಾಬ್ದಾರಿಯು ಹೆಚ್ಚಾಗಿರುವಂತೆ ಇಡಲ್ಪಟ್ಟಿದೆ.
ಮಲ್ಟಿಪಲ್ ಬೆನಿಫಿಟ್ ಎಂಬ ಕಲಮು ನಮ್ಮದಾರಿಗೆ ಅತಿಶಯ ಲಾಭಕರವಾಗಿದೆ.
ಹೆಚ್ಚಿನ ಮಾಹಿತಿ ಕೆಳಗಿನ ವಿಳಾಸಕ್ಕೆ ಬರೆಯಿರಿ.

Kumta Agents.—
D. K. NAYAK Esq
D. S. PAI Esq
Honavar Agent
R. V. PARBHU Esq

K. Padmanabha Rao & Sons.,
BELGAUM
Chief Agents for
Karnatak Districts & S. M. States

ಸುಲಭ ಕ್ರಯ! ಡಾಕ್ಟರ ಜೇ. ಬೀ. ರಯರ ಸುಗಂಧಿ ಸತ್ವದ ಪುಡಿ. ಸುಲಭ ಕ್ರಯ!

ಲೋಕಪ್ರಸಿದ್ಧವಾದ ಈ ಸುಗಂಧ ಸತ್ವದ ಪುಡಿಯು ಕಂಡು ಹಿಡಿಯಲ್ಪಟ್ಟು ಸಾವಿರಾರು ಮಂದಿ

(Registered Trade Mark)

ಗಳು ಇದನ್ನು ಉಪಯೋಗಿಸಿ, ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ಸತ್ವದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿತ್ತ, ಒಂದುತಲೆನೋವು, ಕಟಿಯ ಸ್ಥಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಜಲದೋಷ ಮುಂತಾದ ವ್ಯಾಧಿಗಳು ಪರಿಹಾರವಾಗುವದಲ್ಲದೆ ತಂಡಕ್ಕೆ ಹೇಳಲ್ಪಟ್ಟ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತದೆ. ಮೂರು ಬಟ್ಟಲ ಸಾಧಾರಣ ಸತ್ವದ ಸಂಗಡ ಈ ಸುಗಂಧ ಸತ್ವದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಯಿಸಿದರೆ ಎಲ್ಲರೂ ಪರಿಮಾಳವಾಗುವದು. ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ. ಮಾದರಿ ಸೀಸೆ ಪುಕ್ಕಟೆ ಕಳಿಸಲಾಗದು. ಒಂದು ಡಬ್ಬಿಗೆ ಕ್ರಯ ರೂ ೦-೪-೦. ಸ್ಟ್ಯಾಂಪ ೪ ಬೇಡ ಡಜನ್ ೧ ಕ್ಕೆ ರೂ. ೨-೬-೦. ವ್ಹಿ. ಪಿ. ೦-೮-೦ ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸ್ಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ದ. ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ. ಬಾ. ೫೧೦, ಪಾರ್ಕಟೌನ, ಮದರಾಸ

ಅಮೃತಾಂಜನ

ಎಲ್ಲ ನೋವುಗಳ ಮೇಲೆ ಅತ್ಯುತ್ತಮ ಹಿಂದೀ ಲೇಪಬಾಮು!

ಎಲ್ಲ ಪ್ರಕಾರದ ನೋವು, ಶೂಲಿಗಳನ್ನು ಗುಣಪಡಿಸುತ್ತದೆ.
ಇಡೀ ಹಿಂದುಸ್ಥಾನದಲ್ಲಿ ಇದನ್ನು ಉಪಯೋಗಿಸುತ್ತಾರೆ.
ಬೆಲೆ ಡಬ್ಬಿಗೆ ೧೦ ಆಣೆ.
(ಅಂಚೆವೆಚ್ಚ ಬೇರೆ)

ರಜಿಸ್ಟರ್ಡ್.

ಎಲ್ಲ ಕಡೆಯಲ್ಲೂ ಸಿಗುತ್ತದೆ:—

ಅಮೃತಾಂಜನ ಡಿಪೋ,

ಮುಂಬಯಿ ಮತ್ತು ಮದ್ರಾಸ

ಸ್ವದೇಶಿ ಸಿಮೆಂಟುಗಳು

ಲಂಗರಛಾಪ್

(ನೀರು ಬಿದ್ದರೂ ಕೆಡದೇ ಇರುವ ಚೀಲಗಳಲ್ಲಿ ತುಂಬಿವೆ.)

ಮತ್ತು

ಗಣಪತಿಛಾಪ್

[ನಮ್ಮಲ್ಲಿಂದ ಸೀದಾ ತರಿಸಿಕೊಳ್ಳುವವರಿಗೆ

ಮೇಲ್ಕಂಡ ಎರಡು ಛಾಪು ಸಿಮೆಂಟುಗಳೂ

ಬ್ರಿಟಿಶ ಸ್ಟಾಂಡರ್ಡ ಮಾನೂನಿಗೆ

ಅನುಸಾರವಾಗಿವೆಯೆಂದು ಖಾತರಿ ಕೊಡುತ್ತೇವೆ.

ಅಲ್ಲದೆ, ಪಬ್ಲಿಕ್ ವರ್ಕ್ಸ ಡಿಪಾರ್ಟಮೆಂಟಿನಿಂದ

ಅನುಮೋದಿಸಲ್ಪಟ್ಟಿವೆ.]

ಹಡಗಗಳು ಚಲಾವಣಿಯಾಗುವ ಕಾಲ ಸಮೀಪಿಸಿರುವದರಿಂದಲೂ,

ಮತ್ತು ಮಳೆಗಾಲ ಕಳೆದ ನಂತರ

ಮನೆಗಳನ್ನು ದುರಸ್ತು ಮಾಡುವದು ಅತ್ಯವಶ್ಯಕವಾಗಿರುವದರಿಂದಲೂ

ಸಿಮೆಂಟಿನ ಬೆಲೆ ಮತ್ತು ಹೆಚ್ಚು ವಿಷಯಗಳಿಗೆ

ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ದಿ ಸಿಮೆಂಟು ಮಾರ್ಕೇಟಿಂಗ ಕಂಪನಿ ಆಫ ಇಂಡಿಯಾ ಲಿಮಿಟೆಡ್

ಹೋಮ ಸ್ಟ್ರೀಟ, **ಮುಂಬಯಿ.**

ಪ್ರಕೃತ ವಿಷಯ.

ಸಿಮ್ಲಾದ ಗಾಂಧಿ ವಿಲಿಂಗಡನ್ ಒಡಂಬಡಿಕೆ

ಮಹಾತ್ಮರಿಗೂ ಸರ್ವಾಧಿಕಾರಿ ವಿಲಿಂಗಡನ್ ದೊರೆಗಳಿಗೂ ಆದ ಒಡಂಬಡಿಕೆಯಂತೆ ಮಹಾತ್ಮರು ಐಲ ನ ಸಂಚಲನವನ್ನು ಕೈಕೊಂಡರು. ಆ ಒಡಂಬಡಿಕೆಯ ಪ್ರಕಟಣೆಯು ಅಗಸ್ಟ ೨೮ ನೇ ತಾರೀಖಿಗೆ ಹೊರಬಿತ್ತು. (೧) ಸರ್ವಾಧಿಕಾರಿಗಳಿಗೂ ಮ. ಗಾಂಧಿಯವರಿಗೂ ನಡೆದ ಸಂಭಾಷಣದಿಂದ ರೌಂಡ ಟೇಬಲ್ ಪರಿಷತ್ತಿನಲ್ಲಿ ಮ॥ ಗಾಂಧಿಯವರು ರಾಷ್ಟ್ರೀಯ ಸಭೆಯ ಪ್ರತಿನಿಧಿಗಳಾಗುವರು. (೨) ತಾ ೫ ಮಾರ್ಚ ೧೯೩೧ನೇ ಆದ ಒಡಂಬಡಿಕೆಯು ಇನ್ನೂ ಸಹ ಬಂಧನಕಾರಕವಿದೆ. ಹಿಂದುಸ್ಥಾನ ಸರಕಾರವೂ ಪ್ರಾಂತಿಕ ಸರಕಾರಗಳೂ ಆ ಒಡಂಬಡಿಕೆಯ ಭಂಗ ಸಿದ್ಧವಾದಲ್ಲಿ ಅವನ್ನು ಪರಿಹರಿಸುವವು. ಈ ಕುರಿತು ಅವರಿಗೆ ಸಾದರಪಡಿಸಿದ ಅರ್ಜಿಗಳನ್ನು ಜಾಗ್ರತೆಯಿಂದ ವಿಚಾರಿಸುವವು. ರಾಷ್ಟ್ರೀಯ ಸಭೆಯು ಆ ಕರಾರಿನಂತೆ ನಡೆಯುವದು. (೩) ಸೂರತ ಜಿಲ್ಲೆಯೊಳಗಿನ ಕರ್ ವಿಷಯದಲ್ಲಿ ಪಾರಡಿಗ್ರಾಮದ ಪ್ರಶ್ನೆಯೆಂದರೆ ಕೆಲವು ಗ್ರಾಮಗಳಲ್ಲಿ ಪೋಲೀಸ ಬಂದೋಬಸ್ತಿನಿಂದ ಬಾರ್ಡೋಲಿ ತಾಲೂಕ ಹಾಗು ವೇರೆ ತಾಲೂಕುಗಳ ಕಂದಾಯ ಅಧಿಕಾರಿಗಳು ಕರ್ ವಸೂಲಿಗೆ ಹೋದಾಗ ದೈವ ಸಾಕ್ಷಿ ವಿಚಾರ ಮಾಡದೆ ಒತ್ತಾಯದಿಂದ ಕಂದಾಯ ವಸೂಲಿ ಮಾಡಿದರೆಂದು ಹಿಂದುಸ್ಥಾನ ಸರಕಾರವು ಮುಂಬಯಿ ಸರಕಾರದ ಸಂಪೂರ್ಣ ಒಪ್ಪಿಗೆಕೊಂಡು ಈ ವಿಷಯದ ಚೌಕಶಿ ಮಾಡಬೇಕೆಂದು ನಿರ್ಧರಿಸಿದೆ. ಚೌಕಶಿಯ ವ್ಯಾಪ್ತಿಯೇನೆಂದರೆ — ಈ ಗ್ರಾಮದೊಳಗಿನ ಸಾಹುಕಾರರ ಮೇಲೆ ಪೋಲೀಸರ ವಿದ್ಯಮಾನ ಕಂದಾಯ ವಸೂಲ ಮಾಡಲು ಒತ್ತಾಯವಾಯಿತೋ ಹೇಗೆ? ಈ ತಾಲೂಕಿನ ಬೇರೆ ಗ್ರಾಮಗಳಲ್ಲಿ ೫ ೨-೨ನೇ ತಾರೀಖಿನಿಂದ ಪೋಲೀಸ ಸಹಾಯವಿಲ್ಲದೆ ನಡೆದ ವಸೂಲಿ ಕ್ರಮಕ್ಕೆ ಮಿಕ್ಕಿ ಒತ್ತಾಯವಾಯಿತೋ ಹೇಗೆ? ಹಾಗಿದ್ದರೆ ಒತ್ತಾಯದಿಂದ ವಸೂಲಾದ ರಕಮೆಷ್ಟು? ಇವನ್ನು ಚೌಕಶಿ ಮಾಡುವದಕ್ಕಾಗಿ ನಾಶಿಕದ ಕಲೆಕ್ಟರರಾದ ಮಿ॥ ಆರ್ ಜಿ ಗೋರ್ಡನ್‌ರವರಿಗೆ ಮುಂಬಯಿ ಸರಕಾರವು ನೇಮಿಸತಕ್ಕದ್ದು. ಇನ್ನಿತರ ವಾದಗ್ರಸ್ತ ಮುದ್ದೆಯ ಮೇಲೆ ಬೇರಾದ ಪುರಾವೆ ಹಾಜರಪಡಿಸಬಹುದು. (೪) ರಾಷ್ಟ್ರೀಯ ಸಭೆಯವರು ಎತ್ತಿದ ಇತರ ಆಕ್ಷೇಪಗಳ ಕುರಿತು ಹಿಂದುಸ್ಥಾನ ಸರಕಾರವೂ, ಪ್ರಾಂತಿಕ ಸರಕಾರಗಳೂ ಚೌಕಶಿ ಮಾಡಲು ಹೊರಡಿಸಲಿಕ್ಕೆ ಒಪ್ಪುವದಿಲ್ಲ. (೫) ಒಡಂಬಡಿಕೆಯಲ್ಲಿ ಸ್ಪಷ್ಟವಾಗಿ ಸೇರದ ವಿಷಯಗಳ ಕುರಿತು ರಾಷ್ಟ್ರೀಯ ಸಭೆಯವರು ಆಕ್ಷೇಪ ಮಾಡಿದ್ದಲ್ಲಿ ಅವನ್ನು ಸಾಮಾನ್ಯ ಸರಕಾರಿ ಕ್ರಮದಂತೆ ಸರಕಾರವು ವಿಚಾರ ಮಾಡಬೇಕು. ಚೌಕಶಿ ಮಾಡುವ ಅವಶ್ಯಕತೆ ಕಂಡುಬಂದಲ್ಲಿ, ಪ್ರಾಂತಿಕ ಸರಕಾರವು ತಕ್ಕ ಕ್ರಮ ಕೈಕೊಳ್ಳುವದು.

***

ಪ್ರತ್ಯಕ್ಷ ಹೋರಾಟಕ್ಕೆ ತಡೆ, ಅವರೆ ?

ಮೇಲಿನ ಒಡಂಬಡಿಕೆಯ ಜೊತೆಗೆ ಮಹಾತ್ಮರ ಅಪೇಕ್ಷೆಯಂತೆ ಅಗಸ್ಟ ೨೭ನೇ ತಾರೀಖಿನ ೩ ಪತ್ರಗಳು ಪ್ರಕಟವಾಗಿವೆ. ಮಹಾತ್ಮರು ಹಿಂದುಸ್ಥಾನ ಸರಕಾರದ ಕಾರ್ಯದರ್ಶಿಗಳಾದ ಮಿ॥ ಇಮರಸನ್‌ರವರಿಗೆ ಬರೆದದ್ದು, ಅದಕ್ಕೆ ಉತ್ತರವಾಗಿ ಮಹಾತ್ಮರಿಗೆ ಮಿ॥ ಇಮರಸನ್‌ರವರು ಬರೆದದ್ದು. ಮೇಲ್ಕಂಡ ಸರಕಾರಿ ಪ್ರಕಟಣೆಯನ್ನು ಇತ್ತಿತ್ತಲಿನ ಚರ್ಚೆಯಿಂದ ತಯಾರಿಸಿದ ಬಳಿಕ, ಮಹಾತ್ಮರ ಕೇವಲ ಒಪ್ಪಿಗೆಗಾಗಿ ಮಿ॥ ಇಮರಸನ್‌ರವರು ಮಹಾತ್ಮರ ಬಳಿ ಕಳುಹಿದರು. ಅದನ್ನು ಮಹಾತ್ಮರು ಸ್ವೀಕರಿಸಿ ಬರೆದದ್ದೇನೆಂದರೆ: ಈ ಜೊತೆಗೆ ಹೊಸದಾಗಿ ತಯಾರಿಸಿ ಕಳಿಸಿದ ಪತ್ರ ತಲ್ಪಿರುತ್ತದೆ. ಸರ್ ಕಾವಸಜಿಯವರ ವಿದ್ಯಮಾನದ ಷರತ್ತುಗಳನ್ನು ನನಗೆ ತಿಳಿಸಿದ್ದಾರೆ. ಸರಕಾರಿಗಳೊಡನೆ ತಮ್ಮಂಗಡಿಯ ಮಾತುಕತೆಯನ್ನು ನಾನು ಆಳವಾಗಿ ಪರಾಮರಿಸಿದೆನು. ಅದನ್ನು ಅಂಗೀಕರಿಸಲು ನಾವು ತಯಾರಿದ್ದೇವೆ. ಆದರೆ, ಆ ಕುರಿತು ಒಂದು ಮಾತು ಬರೆಯಬೇಕಾಗಿದೆ. ರಾಷ್ಟ್ರೀಯ ಸಭೆಯ ಪರವಾಗಿ ಒಪ್ಪಿಗೆ ಕೊಡುವ ಮೊದಲು ಸ್ಪಷ್ಟಪಡಿಸುವದು, ಒಡಂಬಡಿಕೆಯಂತೆ ಅಪರಾಧವಾದಾಗ ಅದನ್ನು ನಿವಾರಿಸುವ ಚೌಕಶಿ ಮಾಡುವಂಥ ಹಕ್ಕು ರಾಷ್ಟ್ರೀಯ ಸಭೆಗುಂಟು. ದಿಲ್ಲಿ ಒಡಂಬಡಿಕೆಯಂತೆ ಸತ್ಯಾಗ್ರಹ ಕೈಕೊಳ್ಳಲು ಅಸಾಧ್ಯವಾದದ್ದರಿಂದ ಹೀಗೆ ರಾಷ್ಟ್ರೀಯ ಸಭೆಗೆ ಅಧಿಕಾರ ಪ್ರಾಪ್ತಿಯಾಗುತ್ತದೆ. ಆದರೆ, ಹಿಂದುಸ್ಥಾನ ಸರಕಾರವು, ಪ್ರಾಂತಿಕ ಸರಕಾರಗಳೂ ಚೌಕಶಿ ಮಾಡಿಕೊಳ್ಳಲೊಪ್ಪದಿದ್ದರೆ ಆ ಕೆಲಸ ಹಾಗೇ ಎದುರೊಡ್ಡಲಿಕ್ಕೆ ನನ್ನದ ಇದರ ಪರಿಣಾಮವೆಂದರೆ — ರಾಷ್ಟ್ರೀಯ ಸಭೆಯು ಇತರ ತಕರಾರುಗಳನ್ನು ಪರಿಹರಿಸಿಕೊಳ್ಳಲು ಚೌಕಶಿ ಮಂಡಳ ನೇಮಿಸಬೇಕಾಗಿ ಆಗ್ರಹ ಮಾಡಲಿಕ್ಕಿಲ್ಲ. ಅದರ ಅನ್ವೇಷಣದಿಂದ ಅಷ್ಟು ಪರಿಹಾರ ಮಾಡಿಕೊಳ್ಳುವ ಪ್ರಸಂಗ ಬಂದಲ್ಲಿ ತಕ್ಕ ಸಂದರ್ಭಕ್ಕೆ ದೇಶೀಯ ಉಪಾಯ ಕೈಕೊಳ್ಳಲು ರಾಷ್ಟ್ರೀಯ ಸಭೆಗೆ ಸ್ವಾತಂತ್ರ್ಯವಿರಬೇಕು. ಸತ್ಯಾಗ್ರಹ ತಕರಾರಿಯು ಕರ್ನಿಸಿಂದ ಬಾಧಕ ಬರಲಾರದು. ರಾಷ್ಟ್ರೀಯ ಸಭೆಯವರು ಅವಶ್ಯರ ಮಟ್ಟಿಗೆ ಪ್ರತ್ಯಕ್ಷವಾಗಿ ಹೋರಾಡಲಿಕ್ಕಿಲ್ಲ. ಚರ್ಚೆಯಿಂದ ಮನವೊಲಿಕೆಯಿಂದ ಕಾರ್ಯಭಾಗವನ್ನು ಸಾಧಿಸಿಕೊಳ್ಳಲು ಪ್ರಯತ್ನಪಡುವರು. ಮುಂದೆ ತಪ್ಪು ಗ್ರಹಿಕೆಯಾಗಬಾರದೆಂದು, ರಾಷ್ಟ್ರೀಯ ಸಭೆಯ ಮೇಲೆ ಒಡಂಬಡಿಕೆ ಮುರಿದ ಆಕ್ಷೇಪ ಬರಬಾರದೆಂದು ನಾನು ರಾಷ್ಟ್ರೀಯ ಸಭೆಯ ಮುಂದಿನ ಕಾರ್ಯಕ್ರಮ ಸೂಚಿಸಬೇಕಾಯಿತು. ಸರಕಾರಿ ಪ್ರಕಟಣೆಯ ಜೊತೆಗೆ ಈ ಪತ್ರವನ್ನೂ, ಇದಕ್ಕೆ ನಿಮ್ಮ ಉತ್ತರವನ್ನೂ ನೀವು ಪ್ರಕಟಿಸಬೇಕಾಗಿ ನಂಬಿದ್ದೇನೆ. ಇದಕ್ಕೆ ಮಿ॥ ಇಮರಸನ್‌ರವರು ಅದೇ ದಿನ ಉತ್ತರ ಬರೆದರು. ಹೊರಡಿಸತಕ್ಕ ಪ್ರಕಟಣೆಯು ಸ್ವೀಕಾರವಾದದ್ದು ನೋಡಿ ಸಂತೋಷವಾಗುತ್ತದೆ. ಬೇರೆ ದೂರುಗಳ ವಿಷಯ ರಾಷ್ಟ್ರೀಯ ಸಭೆಯು ಚೌಕಶಿ ಮಂಡಳದ ಆಗ್ರಹ ಮಾಡುವದಿಲ್ಲವಾಗಿ ನೀವು ಬರೆದ ಸಂಗತಿಯನ್ನು ಹಿಂದುಸ್ಥಾನ ಸರಕಾರವು ನಮೂದಿಸಿಕೊಂಡಿದೆ. ರಾಷ್ಟ್ರೀಯ ಸಭೆಯವರು ಅವಶ್ಯರ ಮಟ್ಟಿಗೆ ಪ್ರತ್ಯಕ್ಷ ಹೋರಾಡಲಿಕ್ಕಿಲ್ಲವಾಗಿಯೂ, ಚರ್ಚೆ-ಮನವೊಲಿಕೆಗಳಿಂದ ದೂರ್ನಿವಾರಣ ಮಾಡಿಕೊಳ್ಳುವ ಯತ್ನ ಮಾಡುವದಾಗಿಯೂ ಬರೆದು, ಮುಂದೆ ರಾಷ್ಟ್ರೀಯ ಸಭೆಯು ಕೈಕೊಳ್ಳಬಹುದಾದ ಕಾರ್ಯಕ್ರಮವನ್ನೂ ಸೂಚಿಸಿದ್ದೀರಿ. ರಾಷ್ಟ್ರೀಯ ಸಭೆಯು ಪ್ರತ್ಯಕ್ಷ ಹೋರಾಟ ನಡೆಸಲಿಕ್ಕಿಲ್ಲವಾಗಿ ನಿಮ್ಮಂತೆಯೇ ಹಿಂದುಸ್ಥಾನ ಸರಕಾರಕ್ಕೂ ಆಶೆಯಿದೆ. ಸರಕಾರದ ಮುಂದಿನ ಕ್ರಮವು ಸರ್ವಾಧಿಕಾರಿಗಳು ಅಗಸ್ಟ ೧೯ನೇ ತಾರೀಖಿಗೆ ನಿಮಗೆ ಬರೆದ ಪತ್ರದಲ್ಲಿ ಕಾಣಿಸಲ್ಪಟ್ಟಿದೆ. ಸರಕಾರಿ ಪ್ರಕಟಣೆ ನಂ. ೨, ಈ ಜೊತೆಯ ನಿಮ್ಮ ಪತ್ರವೂ, ಈ ಉತ್ತರವೂ ಒಮ್ಮೆಗಲೇ ಸರಕಾರದಿಂದ ಪ್ರಕಟಿಸಲ್ಪಡುವವು.

***

ಹೋರಾಟದ ತಯಾರಿಯನ್ನಿಡಿರಿ

ಡೋರ್ಚೆಸ್ಟರ ಹೊಟೆಲು ಲಂಡನಿನಲ್ಲಿ ದೊಡ್ಡ ವಿಲಾಸ ಮಂದಿರ. ಶ್ರೀ|| ಸಪ್ರು-ಜಯಕರರವರು ಇಲ್ಲಿಯೇ ಇಳಕೊಂಡಿದ್ದಾರೆ. ಔತಣದ ನಿಮಂತ್ರಣ ಒಂದು ನೆವ, ಮುಂದಿನ ರಾಜಕಾರಣದ ವಿಚಾರಕ್ಕಾಗಿಯೇ ಗಾಂಧಿ-ಮಾಲವೀಯಜೀಯವರಿಗೆ ನಿಮಂತ್ರಣವಾಗಿತ್ತು. ಸಂಕಿ ದೊರೆಗಳಿಗೂ, ಮುಖ್ಯ ಪ್ರಧಾನರಾದ ಮೆಕಡೋನಲ್ಡರವರಿಗೂ ನಿಮಂತ್ರಿಸಲ್ಪಟ್ಟಿತ್ತು. ಮಹಾತ್ಮರು ಶ್ರೀ|| ವಿಠ್ಠಲಬಾಯಿ ಪಟೇಲ, ರಂಗಸ್ವಾಮಿ ಅಯ್ಯಂಗಾರರವರೊಡನೆ ಮುಂದಾಗಿ ಆಲೋಚನೆ ಮಾಡಿ ಡೋರ್ಚೆಸ್ಟರ ಹೊಟೆಲಿಗೆ ಹೋದರು. ಶ್ರೀ|| ವಿಠ್ಠಲಬಾಯಿ ಪಟೇಲರವರು ವಿಯೆನ್ನಾದಿಂದ ಉಪಚಾರ ಹೊಂದಿ ಮಹಾತ್ಮರು ತಲ್ಪಿದ ಸಮಯವೇ ವಿಮಾನ ಮಾರ್ಗವಾಗಿ ಲಂಡನ್ನಿಗೆ ತಲ್ಪಿದ್ದಾರೆ. ಅವರು ಮಹಾತ್ಮರ ಜೊತೆಗೇ ಬರುತ್ತಾರೆ. ಇದರಿಂದ ನೇಮುಸ್ತ ರಾಜಕಾರಣಿಗಳಿಗೆ ಏನು ತೊಂದರೆಯಾಗಿರುವದಂತೆ. ಈ ಪ್ರಕಾರ ಪ್ರವಾಸ ತಯಾರಿ ಮಾಡಿಕೊಂಡು ಮಹಾತ್ಮರು ಡೋರ್ಚೆಸ್ಟರ ಹೊಟೆಲಿಗೆ ತಲ್ಪಿದರು. ಆಗ ಅವರ ಊಟವು ಆಗಿಯುತ್ತಲಿತ್ತು. ಮಹಾತ್ಮರಿಗೆ ನೋಡುವದಕ್ಕಾಗಿ ಗುಂಪುಗಟ್ಟಿ ಜನರು ನೆರೆದಿದ್ದರು. ಮುಖ್ಯ ಪ್ರಧಾನರು ಊಟ ಮುಗಿದ ಮೇಲೆ ಬಂದರು. ಅರ್ಧ ತಾಸು ಪರಸ್ಪರ ಕುಶಲ ಪ್ರಶ್ನೆ ಕೇಳಿಕೊಂಡು, ಹವೆಯ ವಿಷಯ ಹರಟೆಯಾಡಿ ಹಾಗೆಯೇ ಪ್ರಧಾನ ಮಂಡಳದ ಸಭೆಗಾಗಿ ಮುಖ್ಯ-ಪ್ರಧಾನರು ತೆರಳಿದರು. ಸಂಕಿ ದೊರೆಗಳಿಗೂ, ಗಾಂಧಿ-ಮಾಲವೀಯಜೀಯವರಿಗೂ, ಸಪ್ರು ಜಯಕರ-ಶಾಸ್ತ್ರಿಗಳವರಿಗೂ ಚರ್ಚೆಯಾಯಿತು ಮತ್ತು ವಿಶೇಷ ಗುಪ್ತವಾಗಿ ಮಾತನಾಡುವದಕ್ಕಾಗಿ ಸಂಕಿ ದೊರೆಗಳು ಡಾ|| ಸಪ್ರು ಮೊದಲಾದವರಿಗೆ ಹೊರಗಿಟ್ಟು ಗಾಂಧಿ-ಮಾಲವೀಯಜೀಯವರೊಡನೆ ೩ ತಾಸುಗಳ ತನಕ ಚರ್ಚೆ ನಡಿಸಿದರು. ಮಹಾತ್ಮರು ಮಾತನಾಡುತ್ತಿದ್ದರಂತೆ, ಸಂಕಿ ದೊರೆಗಳು ಜಾಗ್ರತೆಯಿಂದ ಕೇಳುತ್ತಿದ್ದರಂತೆ. ಸಂಕಿ ದೊರೆಗಳು ಸಭೆಯ ಕ್ರಮವನ್ನು ಮಹಾತ್ಮರಿಗೆ ತಿಳಿಸಿದರು; ಮಹಾತ್ಮರು ತಮ್ಮ ಅಭಿಪ್ರಾಯ ತಿಳಿಸಿದರಂತೆ. ಕರಾಚಿ ರಾಷ್ಟ್ರೀಯ ಸಭೆಯ ಆಜ್ಞೆಯಂತೆ ಮೂಲ ತತ್ವಗಳನ್ನಷ್ಟೆ ಚರ್ಚಿಸುವೆನಾಗಿ ಮಹಾತ್ಮರು ಹೇಳಿದರಂತೆ. ಸಭೆಯಲ್ಲಿ ಯಾವದೂ ನಿರ್ಣಯವಾಗಲಿಲ್ಲ. ಮಹಾತ್ಮರು ರಾತ್ರೆ ೧೧|| ಘಂಟೆಗೆ ಕಿಂಗಸ್ಲೀ ಹೋಲಿಗೆ ತಲ್ಪಿದರು. ಅವರ ಬೆನ್ನಿಗೇ ಸಂಕಿ ದೊರೆಗಳು ಗಂಭೀರ ಮುದ್ರೆ ತಾಳಿ ಹೊರಟು ಒಂದು ಸಂಗತಿಯನ್ನು ಇಲ್ಲಿ ನಮೂದಿಸಬೇಕು. ಅದೇನಂದರೆ — ಮಹಾತ್ಮರು ಅಮೇರಿಕೆಯವರಿಗೆ ಬಾಯರಲೆಸ್ಸಿನಿಂದ ಕಳುಹಿದ ಸಂದೇಶ "ಇಂದಿನ ತನಕ ಮನುಷ್ಯರು ಪಶುಗಳಂತೆ ಜಗಳಾಡಿದರು, ಪಶುಕೋಟಿಯ ನಿಯಮ ಬೇರೆ, ಮಾನವಕೋಟಿಯ ನಿಯಮ ಬೇರೆ. ಎಂದು ಹಿಂದೀಯರ ಭಾವನೆಯದೆ. ಹಿಂಸೆಯಿಂದ ಹಿಂದುಸ್ಥಾನಕ್ಕೆ ಸ್ವರಾಜ್ಯ ಪ್ರಾಪ್ತಿ ಮಾಡಿಕೊಳ್ಳುವದಕ್ಕಿಂತ ಅಹಿಂಸೆಯಿಂದ ಸಾಧ್ಯ ಮಾಡಿಕೊಳ್ಳುವದಕ್ಕಾಗಿ ನಾನು ಸ್ವತಃ ಎಷ್ಟೋ ಪೀಳಿಗೆಗಳ ತನಕ ಹಾದಿನೋಡಲು ಒಪ್ಪುವೆನು. ಯುದ್ಧದಿಂದ ಜಗತ್ತಿಗೆ ಬೇಸರ ಬಂದಿದೆ. ತಕ್ಕ ಮಾರ್ಗ ತೋರಿಸುವ ಅಧಿಕಾರವು ಹಿಂದುಸ್ಥಾನಕ್ಕೆ ಪ್ರಾಪ್ತವಾಗಿದೆ. ಆದರಿಂದ ಸಮಸ್ತ ರಾಷ್ಟ್ರಗಳು ಈ ಕಾರ್ಯಕ್ಕೆ ನೆರವಾಗಬೇಕು. ಹಿಂದು ಮುಸಲ್ಮಾನ ದೊಂಬಿಯಿಂದ, ಅಸ್ಪೃಶ್ಯತೆಯ ಪಾಲನೆಯಿಂದ ನನಗೆ ವ್ಯಸನವಾಗಿದೆ. ಮದ್ಯಪಾನೋಚ್ಚಾಟನ ಕಾರ್ಯಕ್ರಮದಲ್ಲಿ ಸರಕಾರದವು ನನಗ ನೆರವಾಗಲಿಲ್ಲ. ಪರರಾಷ್ಟ್ರಗಳು ಇದರ ವಿಚಾರ ಮಾಡಬೇಕು" ಹೀಗೆ ಅರ್ಧ ಘಂಟೆಯ ತನಕ ಕಿಂಗಸ್ಲೀ ಹೋಲಿನಿಂದ ಮಹಾತ್ಮರು ಮಾಡಿದ ಭಾಷಣವು ಅಮೇರಿಕೆಯ ನ್ಯೂಯೋರ್ಕ ಪಟ್ಟಣದಲ್ಲಿ ಏಳಿಯಂಪಿನಿಂದ ಸ್ಪಷ್ಟವಾಗಿ ಕೇಳಿದ ಮಹಾತ್ಮರ ಇಂಗ್ಲಿಷ ಭಾಷಾ ನೈಪುಣ್ಯಕ್ಕೆ ಅಮೇರಿಕೆಯವರು ಚಕಿತರಾಗಿದ್ದಾರೆ!

ಸೋಮವಾರ ಫೆಡರಲ್ ಸ್ಟ್ರಕ್ಚರ ಕಮಿಟಿಯ ಕೆಲಸಕ್ಕೆ ಪ್ರಾರಂಭ. ಮಹಾತ್ಮರು ನಿತ್ಯನೇಮದಂತೆ ಎದ್ದು ಪ್ರಾರ್ಥನೆ ನಡಿಸಿದರು. ಆ ಮೇಲೆ ಫೆಡರಲ್ ಸ್ಟ್ರಕ್ಚರ ಕಮಿಟಿಗೆ ಹೊರಟರು. ದಾರಿಯಲ್ಲಿ ಜನಸಂದಣಿಯಾದ್ದರಿಂದ, ೧೦ ಮಿನಿಟು ವಿಳಂಬವಾಯಿತು. ಸಂಕಿ ದೊರೆಗಳು ಮಹಾತ್ಮರಿಗೆ ಕರಕೊಂಡು ಭಾರತ ಮಂತ್ರಿ ಸರ್ ಸಮ್ಯುಅಲ್ ಹೋರರವರಿಗೆ ಔಪಚಾರಿಕ ಪರಿಚಯ ಮಾಡಿಕೊಟ್ಟು, ತಮ್ಮ ಎಡಬದಿಯ ಆಸನದ ಮೇಲೆ ಕುಳ್ಳಿರಿಸಿಕೊಂಡರು. ಮಹಾತ್ಮರಿಗೆ ತಾಗಿ ಮಾಲವೀಯರವರು, ಆ ಮೇಲೆ 'ಹಿಂದು' ಪತ್ರಿಕೆಯ ಸಂಪಾದಕರಾದ ರಂಗಸ್ವಾಮಿ ಅಯ್ಯಂಗಾರರವರೂ, ಆ ಬಳಿಕ, ಡಾ|| ಸಪ್ರು-ಜಯಕರ-ಶಾಸ್ತ್ರಿ; ಹೀಗೆ ಹಿಂದೀ ಪ್ರತಿನಿಧಿಗಳು ಆಸನಸ್ಥರಾಗಿದ್ದರು. ಬಲಕ್ಕೆ ಭಾರತ ಮಂತ್ರಿ ಸರ್ ಸಮ್ಯುಅಲ್ ಹೋರರವರೂ, ಸೀಲ-ರೀಡಿಂಗ-ಲೋಥಿಯನ್ ಮೊದಲಾದ—ದೊರೆಗಳೂ— ಕುಳಿತುಕೊಂಡಿದ್ದರು. ಮಹಾತ್ಮರು ಕಂಬಳಿ ಹೊದ್ದುಕೊಂಡು ಬಿಡಿನ ದಾಲಿನ ಒಂದು ಬಾಟ್ಲಿ ಕೊಂಡು ಕೂತುಕೊಂಡಿದ್ದರು. ಸಂಕಿ ದೊರೆಗಳು ಬಡೋದೆಯ ಗಾಯಕವಾಡ ಮಹಾರಾಜರಿಗೂ, ಮಹಾತ್ಮರಿಗೂ, ಪಂಡಿತ ಮಾಲವೀಯರಿಗೂ ಸ್ವಾಗತಮಾಡಿ, ಅವರ ಆಗಮನದಿಂದ ರೌಂಡ ಟೇಬಲ್ ಪರಿಷತ್ತು ಪ್ರಾತಿನಿಧಿಕವಾಗುವದೆಂದು ಉದ್ಗರಿಸಿದರು. ಆ ಮೇಲೆ ಗಾಯಕವಾಡ ಮಹಾರಾಜ ಮೊದಲಾದವರ ಭಾಷಣಗಳಾದ ಬಳಿಕ ಸಭೆಯು ವಿಸರ್ಜನ ಹೊಂದಿತು. ಮಹಾತ್ಮರು ಅಂದು ಮೌನ ವ್ರತದಿಂದ ಸಭಾಕಾರ್ಯ ಪರಾಂಬರಿಸಿದರು.

ಮಂಗಳವಾರ ಮಹಾತ್ಮರು ಮುಂಜಾವಿಗೆ ಎದ್ದರು, ಪ್ರಾರ್ಥನೆ ಮಾಡಿದರು. ಕು. ಮೀರಾಬೇನರವರು

ರಘುಪತಿ ರಾಘವ ರಾಜಾರಾಮ |
ಪತಿತ ಪಾವನ ಸೀತಾರಾಮ ||

ಎಂಬ ಪ್ರಾರ್ಥನೆ ಕಲಿಸಿ ಮುಗಿಸಿದ ಬಳಿಕ, ಮಹಾತ್ಮರು ೧ ತಾಸಿನ ತನಕ ಅಡ್ಡಾಡಿದರು. ಆ ಮೇಲೆ ಡೆನ್ಮಾರ್ಕ ದೇಶದ ಇಬ್ಬ ಸ್ತ್ರೀಯರಿಗೆ ಕಂಡರು. ಒಬ್ಬಳು ಚಿತ್ರಕಲಾಕೋವಿದೆಯು; ಇನ್ನೊಬ್ಬಳು ಲೇಖಿಕೆಯು. ಆ ಮೇಲೆ ಮಹಾತ್ಮರು ತಮ್ಮ ಭಾಷಣಕ್ಕಾಗಿ ಟಿಪ್ಪಣೆಗಳನ್ನು ತಯಾರಿಸಿದರು. ಭಾರತ ಮಂತ್ರಿಗಳಾದ ಸರ್ ಸಮ್ಯುಅಲ್ ಹೋರರವರಿಗೆ ಇಂಡಿಯಾ ಆಫೀಸಿನಲ್ಲಿ ಭೆಟ್ಟಿಯಾಗಿ, ಹಾಗೆಯೇ ಫೆಡರಲ್ ಸ್ಟ್ರಕ್ಚರ ಕಮಿಟಿಯ ಸಭೆಗಾಗಿ ಸೇಂಟ ಜೇಮ್ಸ ಅರಮನೆಗೆ ತೆರಳಿದರು. ಮೊಟ್ಟಮೊದಲು ಮಹಾತ್ಮರದೇ ಭಾಷಣ. ಮಹಾತ್ಮರು ಕೂತು ಭಾಷಣ ಮಾಡಿದರು. ನಿಂತು ಭಾಷಣ ಮಾಡುವ ಶಕ್ತಿಯಿಲ್ಲದ್ದರಿಂದ ಕೂತು ಭಾಷಣ ಮಾಡುತ್ತೇನಾಗಿ ಮಹಾತ್ಮರು ಹೇಳಿ, ೮೦ ಮಿನಿಟುಗಳ ತನಕ ಅಸ್ಖಲಿತವಾಗಿ, ಸ್ಥಿರವಾಗಿ ಸ್ಫೂರ್ತಿಯಿಂದ ಭಾಷಣ ಮಾಡಿದರು. (ಇದರ ತಾತ್ಪರ್ಯ ೮ನೇ ಪುಟದ ಮೇಲೆ) ಬಳಿಕ, ಪಂಡಿತ ಮಾಲವೀಯರವರು ಹಿಂದುಸ್ಥಾನದ ಆಡಳಿತೆಯ ಖರ್ಚನ್ನು ಕುಗ್ಗಿಸಬೇಕಾಗಿಯೂ, ಬ್ರಿಟಿಶ ಸೈನ್ಯವನ್ನು ಹಿಂಗರಿದುಕೊಳ್ಳಬೇಕಾಗಿಯೂ ನುಡಿದರು. ಇನ್ನು ಕೆಲ ಭಾಷಣಗಳಾದ ಬಳಿಕ ಸಭೆ ಮುಗಿಯಿತು.

ಬುಧವಾರ ಇಡೀ ದಿನ, ಗುರುವಾರ ಒಪ್ಪತ್ತು ಕ್ಯಾಬಿನೆಟ ಕೌನ್ಸಿಲುಗಳು ಹ್ಯಾಗಿರಬೇಕೆಂದು ವಿವಿಧ ಸಭಾಸದರು ವಿವಿಧ ಯೋಜನೆ ಪ್ರತಿಪಾದಿಸಿದರು. ಗೊತ್ತು-ಗುರಿಯಿಲ್ಲದ ಭಾಷಣ ಕೇಳಿ ಮಹಾತ್ಮರಿಗೆ ಬೇಸರ ಹುಟ್ಟಿತು. ಗುರುವಾರ ಅಪರಾಹ್ನ ಮಹಾತ್ಮರು ಹೀಗೆ ವಿದ್ಯಾರ್ಥಿಗಳಂತೆ ನಿರರ್ಥಕ ವಾದ-ವಿವಾದ ನಡಿಸಿ ಆ ಮೇಲೆ ಹೊತ್ತುಗಳೆಯ ಬಾರದಾಗಿ ಎಚ್ಚರಿಕೆಕೊಟ್ಟು, ಬ್ರಿಟಿಶ ಪ್ರಧಾನರು ಒಂದು ಯೋಜನೆಯನ್ನು ಸೂಚಿಸಿ, ಅದನ್ನು ಚರ್ಚಿಸಬೇಕಾಗಿಯೂ, ಇಲ್ಲವೆ ಪ್ರೋಟ ಮಂಡಳ ನೇಮಿಸಬಹುದಾಗಿಯೂ, ರಾಷ್ಟ್ರಸಭೆಯ ಘಟನೆ ಮೇರೆಗೆ ಕೌನ್ಸಿಲುಗಳ ಮತದಾರಮಂಡಳ ರಚನೆಯಾಗಬಹುದಾಗಿಯೂ ಸೂಚಿಸಿ ಮಾತನಾಡಿದರು.

ಸ್ಥಾನಿಕ ವೃತ್ತಾಂತ [೯ನೇ ಪಾನಿನಿಂದ ಮುಂದರಿಸಿದ್ದು.]

ಪೋಲೀಸ ಕಾಜಿಯು ನಿಷ್ಪನಿಗೆ ಆದಾರಿಸಿದ್ದನೆ. ಅನೇಕರಿಗ ಪೋಲೀಸ ಕಾಜಿಯು ವರದಿಗೆ ಹೋಗಗೊಡುವದಿಲ್ಲವಾಗಿ ಬಾರ ಕಾಜಿ ಕಡೆಯುವರ ಮಾರು.

ಹ್ಯಾಗ್ಲಿ ಗ್ರಾಮದಲ್ಲಿ ತಾ. ೧೦ನೇಗೆ ಗ್ರಾಮ ಕಾಂಗ್ರೆಸ ಕಮಿಟಿ ಸ್ಥಾಪನೆಯಾಗಿದೆ. ರಾ|| ತಿಮ್ಮಪ್ಪ ನಾಯಕರು ಗ್ರಾಮ ಕಮಿಟಿಯ ಕಾರ್ಯವನ್ನು ಜನರಿಗೆ ತಿಳಿಸಿಕೊಟ್ಟು ಕಾರ್ಯಾರಂಭ ಮಾಡಿದ್ದಾರೆ.

ಅಂಕೋಲಾ— ಇದೇ ತಾ. ೨೬ನೇ ಮಧ್ಯಾಹ್ನ ೧ ಘಂಟೆಗೆ ಗ್ರಾಮ ಸಂಘಟನೆ, ಜಿಲ್ಲಾ ಸ್ವಯಂಸೇವಕ ಸಂಘದ ಸಾಧನೆ, ಅಸ್ಪೃಶ್ಯತಾನಿವಾರಣೆ, ಸ್ಥಾನಿಕ ಅದಿಕಾರಿಗಳ ಅನಾಚಾರ ವಿಚಾರ, ಗೋಚರಾವ ಫೀ ಮೊದಲಾದ ವಿಷಯಗಳು ಚರ್ಚಿಸಲ್ಪಡುವವು.

ತಾ. ೨೭ನೇಗೆ ಬೆಳಗಿನ ೮|| ಘಂಟೆಗೆ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಸಭೆಯದೆ. ಪ್ರಾಂತಿಕ ಸ್ವಯಂಸೇವಕ ದಳ, ಗ್ರಾಮಸಂಘಟನೆ, ವ್ಯಾಪಾರ, ಜಮಾಬಂದಿ, ಇಲೆಕ್ಷನ್ ನಿಯಮ, ಗೋಚರಾವ ಫೀ, ಮದ್ಯಪಾನೋಚ್ಚಾಟನ, ಇತ್ಯಾದಿ ವಿಷಯಗಳು ಚರ್ಚಿಸಲ್ಪಡುವವು.

ಮಹಾತ್ಮರ ಪ್ರವಾಸ.

—[illegible]—

ಸೋಮವಾರ ಮುಂಜಾವು ೬ ಘಂಟೆಗೆ ಪೋರ್ಟ ಸೈದದಿಂದ ಹೊರಟ ಹಡಗವು ಭೂಮಧ್ಯ ಸಮುದ್ರ ದಾಟಿ ಶುಕ್ರವಾರ ೧೨ ಗಂಟೆಗೆ ಫ್ರಾನ್ಸ ದೇಶದೊಳಗಿನ ಮಾರ್ಸೇಲೀಸ ಬಂದರಕ್ಕೆ ತಲ್ಪಿತು. ಇಲ್ಲಿಯೇ ಮಹಾತ್ಮರು ಇಳಿಯುದಕ್ಕಾಗಿತ್ತು. ಮಹಾತ್ಮರಿಗೆ ಸ್ವಾಗತವನ್ನಾಗಿ ಧಕ್ಕೆಯ ಮೇಲೆ ನೂರಾರು ಜನರು ನೆರೆದಿದ್ದರು. ಬಿಳಿ ಕಾಚ, ಶಾಲು ಹೊದ್ದ ಮಹಾತ್ಮರಿಗೆ ನೋಡಿದೊಡನೆ ಜನರು ಒಂದೇ ಸಲದಿಂದ ಸತ್ಕರಿಸಿದರು. ಅದೆಲ್ಲಕ್ಕೆ ಮಹಾತ್ಮರು ನಸುನಗುತ್ತ ಕೈಗಳ ಮೇಲಿಂದಲೇ ವಂದಿಸಿದರು. ಪತ್ರಿಕಾ ಪ್ರತಿನಿಧಿಗಳೂ, ಫೋಟೋಗ್ರಾಫರರೂ ತಂಡ ಗಟ್ಟಿ ನೆರೆದಿದ್ದರು. ಪೋಲೀಸರು ಅವರೆಲ್ಲರಿಗೆ ಹಡಗು ಹತ್ತುವದಕ್ಕೆ ನಿರ್ಬಂಧ ಮಾಡಿದ್ದರು. ಮಹಾತ್ಮರಿಗೆ ಮುಂದಿನ ಚಿಂತೆಯಿಂದ ಗುರುವಾರ ರಾತ್ರಿ ನಿದ್ದೆ ಬಂದಿದ್ದಿಲ್ಲ. ಮಹಾತ್ಮರು ಇಳಿದೊಡನೆ ಗಾಳಿಯೇ ಹಚ್ಚಿಕೊಂಡು ಗಾಳಿ ಬಿಟ್ಟು, ಒಂದು ಗಂಟೆಯ ಕಾಲ ಮಹಾತ್ಮರು ಪ್ರತಿನಿಧಿಗಳೊಡನೆ ಮಾತಾಡಿದರು. ಮುಂದೆ ಪತ್ರಿಕಾ ಪ್ರತಿನಿಧಿಗಳು ಗಾಂಧಿ ಕಡೆ ಬರಬೇಕಾಗಿ ಮಹಾತ್ಮರು ವಿನಂತಿಸಿದರು. ಅವರ ಕೆಲ ಕೇಳಿದ ಪ್ರಶ್ನೆಗಳಿಗೆ ಮಹಾತ್ಮರು ಉತ್ತರಕೊಟ್ಟು ಕೇಳಿದರು. 'ಲಂಡನ ದ್ದ ಹಾಗೂ ಪಾರ್ಲಮೆಂಟದ ಬಗ್ಗೆ ನಿಮ್ಮ ಅಭಿಪ್ರಾಯ — ಹೋಗುವದೇನೆಂದು ಮಹಾತ್ಮರಿಗೆ ಪ್ರಶ್ನೆ ಮಾಡಲು ಕೇಳಲು, ಮಹಾತ್ಮರು ನಗುನಗುತ್ತ ಮಾತಾಡಿ ನಂತರ — ನೀವು ದೇಶಾಂತ್ಯದಿಂದ ಹೆಚ್ಚು ಉಡುಪು ಧರಿಸುವಿರಿ, ನಾನು ಕಡಿಮೆ ಉಡುಪು ಧರಿಸುತ್ತೇನೆ" ಇಷ್ಟರಲ್ಲಿ ಶಸ್ತ್ರ ಇನ್ನಷ್ಟರು ಕಾಣಿಸಿಕೊಂಡರು. ಎಲ್ಲರೂ ನೇರಲು, 'ಇನ್ನು ಬೆಚ್ಚಗಾಗಿ, ಟೋಪಿ, ಬೂಟು, ಪ್ಯಾಂಟು ಮತ್ತು ಮತ್ತು ಗಡಿಯಾರ ಹಾಕಿದವರು, ಕೈಯಲ್ಲಿನ ಪುಸ್ತಕ ಕರವಸ್ತ್ರಗಳು, ಮತ್ತು ಬರೆಯುವ ಹೊರತು ಇನ್ನಿಲ್ಲ ನನ್ನ ಪ್ರಪಂಚ" ಎಂದರು. ಅನಂತರ ದರು ಹೋಗಲು ಹೇಳಿದ ಮುಂದಾದರು. ಇಲ್ಲಿ ಫ್ರೆಂಚ ಪ್ರತಿನಿಧಿ ಸ್ವಾಗತಿಸಿದರು ಮಹಾತ್ಮರ ಸಂದೇಶ ಪಡೆದರು: "ಗೋಲ ಮೇಜಿನ ಪರಿಷತ್ತಿಗಾಗಿ ಇಂಗ್ಲಂಡಕ್ಕೆ ನಾನು ಇಂದು ಹೋಗುತ್ತೇನೆ. ಕೇವಲ ಸಮಾಧಾನ ಸೂಚಕರಾಯಿತ. ಕಡ್ಡಾಸರೂ, ೨೨ ಸಿಗರೂ ಪ್ರೀತಿಯಿಂದ ನನಗೆ ನಡೆಸಿಕೊಂಡರು. ಈಗ ಸ ಲ್ಪಕಾಲದಿಂದ ಹಚ್ಚಿನ ಕಾರ್ಯಭಾಗವು ಸುಲಭವಾಗಿ ನನಗೆ ತೋರುತ್ತದೆ. ದೇಶಸ್ವಾತಂತ್ರ್ಯಕ್ಕಾಗಿ ನಾನು ಇಂಗ್ಲಂಡಕ್ಕೆ ಹೋಗುತ್ತೇನೆ. ಪ್ರಧಾನ ಮಂಡಳ ಬದಲಿದ್ದರಿಂದ ನನ್ನ ಧೋರಣ ಬದಲಲಿಲ್ಲ. ಭಾರತ ಮಂತ್ರಿಗಳಾದ ಸರ್ ಸೆಮ್ಯುಅಲ್ ಹೋರರವರು ಬ್ರಿಟಿಶರಲ್ಲಿ ಗೃಹಸ್ಥರು. ಅವರು ನನಗೆ ಸಮಾಧಾನಕಾರಿಯಾಗಿಯೇ ನಡಿಸಿಕೊಳ್ಳುವರು, ಹೀಗೆ ಧೃಢ ನಂಬಿಗೆಯುಂಟು." ಪತ್ರಪ್ರತಿನಿಧಿಗಳಿಗೆ ಕೊಟ್ಟ ಹೇಳಿಕೆಯಲ್ಲಿ ವೃತ್ತಿನೀತಿ ಬಗ್ಗೆ, "ನಾನು ಇಂಗ್ಲಿಷ ಸರಕಾರದ ಕೈದಿಯಾಗಿದ್ದೆನೆ, ಆಕ್ಷಣ ಸಂತೋಷದಿಂದಾದ ಕ್ಷಣ!" ಹೀಗೆ ಮಹಾತ್ಮರು ನುಡಿದರು. ಸಂಜೆ ೪॥ ಘಂಟೆಗೆ ಉಗಿಬಂಡಿ ಹತ್ತಿ ಮಹಾತ್ಮರು ಹೊರಟರು. ಶನಿವಾರ ಮುಂಜಾನೆಗೆ ಉಗಿಬಂಡಿ ಪಾರೀಸಕ್ಕೆ ತಲ್ಪಿತು. ಹಿಂದೀ ವಿದ್ಯಾರ್ಥಿಗಳು ಜಯ ಘೋಷದಿಂದ ಮಹಾತ್ಮರಿಗೆ ಅಲ್ಲಿ ಸ್ವಾಗತವಿತ್ತರು. ಜಾಗತಿಕ ಶಾಂತತೆಗಾಗಿ ಅಮೇರಿಕೆಯವರು ಮಹಾತ್ಮರಿಗೆ ಫೋಟೋ ತೆಗೆದುಕೊಳ್ಳಲಿಕ್ಕೂ ಸಂಭಾಷಣೆ ಮಾಡಲಿಕ್ಕೂ ಅತ್ಯಾಗ್ರಹ ಮಾಡಿದರು, ಮಹಾತ್ಮರು ಒಪ್ಪಲಿಲ್ಲ. ಫ್ರಾನ್ಸದಂಥ ಲೋಕಶಾಹಿಯ ರಾಜ್ಯದೊಳಗಿನ ಸ್ವತಂತ್ರ ಹವೆಯಿಂದ ತಮಗೆ ರೋಮಾಂಚಗಳಾದವೆಂದು ಮಹಾತ್ಮರು ಉದ್ಗರಿಸಿದರು. ಇದನ್ನು ಅಮೇರಿಕೆಯವರು ವ್ಯಾಕ್ಯೂಮ್ ವ್ಹೋನಿನಿಂದ ಊರ ತುಂಬ ಹಬ್ಬಿಸಿದರು. ಉಗಿಬಂಡಿ ಮುಂದಾಯಿತು, ಮಹಾತ್ಮರು ೧೧॥ ಘಂಟೆಗೆ ಬೋಲಾನ್ಯಕ್ಕೆ ತಲ್ಪಿದರು. ಅಲ್ಲಿ ಸಣ್ಣ ಹಡಗ ಹತ್ತಿ ಇಂಗ್ಲೀಷ ಸಾಮುದ್ರಧುನಿ ದಾಟಿ ಲಂಡನಕ್ಕೆ ಹೋಗಬೇಕು. ಇಲ್ಲಿಂದ ಇಂಗ್ಲಂಡದ ಧಡ ಕಾಣುತ್ತದೆ. "ನೀವೀಗ ಇಂಗ್ಲಂಡದ ದೃಷ್ಟಿಪಥದಲ್ಲಿದ್ದೀರಿ! ನಿಮಗೇನಾದರೂ ಹೇಳತಕ್ಕದ್ದುಂಟೇನೆಂದು 'ರೈಟರ' ಪತ್ರಕಾರರು ಕೇಳಲು, "ನೀವು ನನಗೆ ಅಕ್ಷರಶಃ ಕೇಳಿ ಕೇಳಿ ಎಲ್ಲವನ್ನೂ ಕೇಳಿಕೊಂಡಿದ್ದೀರಿ. ಆಡಿದ ಮಾತು ಹಿಂದುಮುಂದೆ ಎಲ್ಲ ಹೇಳಿ ಹಿಂಡಿ ಬಿಟ್ಟಿದೆ. ಈಗ ಹೇಳುವದಕ್ಕೆ ಏನೂ ಉಳಿದಿಲ್ಲ" ಎಂದು ಮಹಾತ್ಮರು ಉತ್ತರಿಸಿ ಹಡಗ ಹತ್ತಿದರು. ೨ ಘಂಟೆಗೆ ಮಹಾತ್ಮರು ಫೋಕ್ಸ್‌ಟನ್ನಿಗೆ ತಲ್ಪಿದರು. ಇಲ್ಲಿಯೂ ಜನಸಂದಣಿ. ಮಳೆ ಬೀಳುತ್ತಿತ್ತು. ಆದಾಗ್ಯೂ ಜನರ ಉತ್ಸಾಹವೇನೂ ಕಡಿಮೆಯಾಗಿದ್ದಿಲ್ಲ. ಆಂದೋಲನದ ಸ್ತ್ರೀಯರು ಬಹಳ ಹಿಂದಿನವರಿಗೆ ಮಾರ್ಗ ಬಿಡದವಲ್ಲಿ ನೆರೆದಿದ್ದರು. ಇಲ್ಲಿ ಸಾಮ್ರಾಜ್ಯ ಸರಕಾರದ ಪರ ನಿಂತಿಲ್ಲ; ಭಾರತ ಮಂತ್ರಿಗಳ ಕಡೆಯಿಂದ ಆಗಮಿಸಿದ ಜೆ. ಬಿ. ಕಿನ್ನರಗಾಂಧಿಯವರು ಮಹಾತ್ಮರಿಗೆ ಸ್ವಾಗತ ಮಾಡಿದರು. ಸರ್ ತೇಜಬಹಾದ್ದೂರ ಸಪ್ರುರವರು, ನವಾಬ [illegible] ರಂಗೋಪಾಚಾರ್ಯರು, ಹಿಂದೀ [illegible] ಹೊರಬಂದು ಬರಮಾಡಿಕೊಂಡರು. ಮಹಾತ್ಮರು ಪ್ರವಾಸ ತೀರಿಸಿ ಹೊರಟರು. ಹತ್ತಿ ಲಂಡನಿಗೆ ೪ ಘಂಟೆ ೨೦ ನಿಮಿಷಕ್ಕೆ ತಲ್ಪಿದರು.

ಈ ಪ್ರಕಾರ ಮಹಾತ್ಮರು ಶನಿವಾರ ಸಂಜೆ ಲಂಡನಿಗೆ ತಲ್ಪಿದರು. ಅಲ್ಲಿಯ ಸ್ವಾಗತವು ಅಪೂರ್ವವು. ಅಲ್ಲಿ 'ಫ್ರೆಂಡ್ಸ ಮೀಟಿಂಗ ಹೌಸ' ಎಂಬ ಸಭಾಗೃಹದ ಸಭಾಮಂದಿರದಲ್ಲಿ ನೆರೆಯುತ್ತಿದ್ದರೂ ಸಭೆ ನೇಮಿಸಿದ್ದರು. ಸಹಸ್ರಾವಧಿ ಜನರು ಮತ್ತು ನೂರಾರು ಪ್ರತಿನಿಧಿಗಳು ಮಹಾತ್ಮರನ್ನು ಕಾಯ್ದು ನಿಂತುಕೊಂಡಿದ್ದರು. ಮಳೆ ಬೀಳುತ್ತಿತ್ತು. ಆದಾಗ್ಯೂ ಜನರ ಉತ್ಸಾಹ ಹಿಂಗಿದ್ದಿಲ್ಲ. ಮೋಟಾರಿನಿಂದ ಆಗಮಿಸಿದ ಮಹಾತ್ಮರಿಗೆ ತಾಳ್ಮೆಯಿಂದ ನಿಂತ ಜನರು ಜಯ ಜಯಕಾರ ಮಾಡಿದರು. ಪಂಡಿತ ಮದನಮೋಹನ ಮಾಲವೀಯ, ಶ್ರೀ ಸರೋಜಿನಿ ನಾಯುಡು ಇವರ ಜೊತೆಗೆ ಮಹಾತ್ಮರಿಗೆ ಕಂಡೊಡನೆ ಅಪಾರ ಜಯ ಘೋಷವಾಯಿತು. ಸ್ವಾಗತ ಕಮೀಟಿಯ ಅಧ್ಯಕ್ಷರಾದ ಮಿ. ಲಾರೆನ್ಸ ಹೌಸಮನ್‌ರವರು ಸಭಾಗೃಹದ ಹೊರಬಾಗಿಲಿಗೆ ಮಹಾತ್ಮರ ಸ್ವಾಗತಕ್ಕಾಗಿ ನಿಂತಿದ್ದರು. ಮಹಾತ್ಮರಿಗೂ, ಪಂಡಿತ ಮಾಲವೀಯಜೀ ಹಾಗು ಸರೋಜಿನಿ ದೇವಿಯವರಿಗೂ ಪುಷ್ಪಹಾರಗಳಿಂದ ಅಲಂಕರಿಸಿ ಮಿ। ಹೌಸಮನ್‌ರವರು ಅತಿಥಿಗಳಿಗೆ ಉಚ್ಚಾಸನವನ್ನು ನೀಡಿದೊಯ್ದರು. ಮಹಾತ್ಮರು ಹಲವಾರು ಸಲ ನಮಸ್ಕರಿಸಿದ ಪಿಚ್ಚಾರಮುಗ್ಧರಾಗಿ ಕೂಡಲು, ಆಗ ಜನರು ಚಪ್ಪಾಳೆಗಳ ಘೋಷದಿಂದ ಮಹಾತ್ಮರಿಗೆ ಸತ್ಕರಿಸಿದರು. ಎಲ್ಲರೂ ಸ್ತಬ್ಧರಾದರು. ಮಿ। ಹೌಸಮನ್‌ರವರು ಇಂಗ್ಲಂಡಕ್ಕೆ ಮಹಾತ್ಮರು ದಯಮಾಡಿಸಿದ ಬಗ್ಗೆ ಉಪಕಾರ ಮನ್ನಿಸಿ ಎಲ್ಲರೂ ಮಹಾತ್ಮರ ಕಾರ್ಯದ ಸಿದ್ಧಿ ಅಂತಃಕರಣಪೂರ್ವಕವಾಗಿ ನೆರವಾಗುವರೆಂಬ ಅಭಿವಚನ ಕೊಟ್ಟರು. "ಈ ಸ್ವಾಗತ ಮಾಡುವ ಕಾರ್ಯವನ್ನು ವಹಿಸಿ ನನಗೆ ಬಹು ಸನ್ಮಾನ ಕೊಡಲಾಗಿದೆ, ಇಷ್ಟು ಮಾನವು ಈವರೆಗೆ ನನಗೆಂದೂ ಸಿಗಲಿಲ್ಲ." ಹೀಗೆ ಹೌಸಮನ್‌ರವರು ಉದ್ಗರಿಸಿದರು. ಮಹಾತ್ಮರು ಭಾಷಣ ಮಾಡತೊಡಗಲು ಆಗ ಪ್ರಚಂಡ ಘೋಷವಾಯಿತು. ಸ್ತಬ್ಧವಾದ ಬಳಿಕ, ಮಹಾತ್ಮರು ನುಡಿದದ್ದೇನಂದರೆ:— 'ನನಗೆ ಕ್ಷಮೆ ಮಾಡಬೇಕು, ನಾನು ನಿಂತು ಮಾತನಾಡಬೇಕೆ. ನಿಮ್ಮ ಸ್ವಾಗತದ ಆಡಂಬರ ನೋಡಿ ನಾನು ದಿಗಿಲು ಬಿದ್ದಿದ್ದೇನೆ. ನಾನು ಹಿಂದೀ ರಾಷ್ಟ್ರೀಯ ಸಭೆಯ ಪ್ರತಿನಿಧಿಯಾಗಿ ಬಂದಿದ್ದೇನೆ ಮಾತ್ರ, ಅರೆಹೊಟ್ಟೆ ಉಣ್ಣುವ ಲಕ್ಷಾವಧಿ ಜನರಿಗಾಗಿ ರಾಷ್ಟ್ರೀಯ ಸಭೆಯು ನಿರ್ಮಲವಾದ ಸ್ವಾತಂತ್ರ್ಯವನ್ನು ಕಾಂಕ್ಷಿಸುತ್ತದೆ. ಸತ್ಯ-ಅಹಿಂಸೆಗಳಿಂದ ಸ್ವಾತಂತ್ರ್ಯ ಸಂಪಾದಿಸುವದಕ್ಕಾಗಿ ರಾಷ್ಟ್ರೀಯ ಸಭೆಯು ಬದ್ಧಕಂಕಣವಾಗಿದೆ. ಇಂಗ್ಲೆಂಡಿನ ಬಡವರ ಗಳು ಘನತೆಯ ಬ್ರಿಟಿಶರು, ಅವರೊಡನೆ ಮಾತಿಗೆ ಕೊಂಡ ಪವಿತ್ರವಾದ ಒಡಂಬಡಿಕೆಯಂತೆ ನಾನು ಅಗಬನೆಯಿಂದ ಲಂಡನಿಗೆ ಬಂದಿದ್ದೇನೆ. ನೀವೀಗನ್ನದೇ ದಿನದೊಳಗಿನ ಕಷ್ಟನಿವಾರಣೆಯ ವಿಚಾರದಲ್ಲಿ ನನ್ನ ನಂಬಿಗೆ. ಆದರೆ, ಬ್ರಿಟಿಶ ಸ್ತ್ರೀ-ಪುರುಷರು ಹಿಂದುಸ್ಥಾನವನ್ನು ಲಕ್ಷವಿಟ್ಟು ನೋಡಬೇಕು. ಹಿಂದುಸ್ಥಾನ ಹಾಗು ಬ್ರಿಟಿಶ ದೇಶಗಳೊಳಗಿನ ಜನಸಾಮಾನ್ಯ ಬಾಂಧವ್ಯ ಗಾಢವಾದ ಬ್ರಿಟಿಶರ ಕಾರ್ಯವಾಗಿ ಒದಗಿಸುವದು" ಹೀಗೆ ಮಹಾತ್ಮರ ಭಾಷಣವಾದ ಬಳಿಕ ಪುನಃ ಚಪ್ಪಾಳೆಯ ಘೋಷವಾಯಿತು. 'ವಂದೇ ಮಾತರಂ' 'ಗಾಂಧಿಜೀ ಜಯ' ಎಂಬ ಜಯ ಘೋಷಗಳಾದವು. ಮಹಾತ್ಮರು ಸಭಾಮಂದಿರದೊಳಗಿಂದ ಎದ್ದು ಹೊರಬಂದು ಮಳೆಯಲ್ಲಿಯೇ ನಿಂತ ಜನರ ಗುಂಪು ಮಹಾತ್ಮರಿಗೆ ಜಯ ಘೋಷದಿಂದ ಸತ್ಕರಿಸಿ ದರ್ಶನ ಪಡೆದ ತರುವಾಯ ಮೋಟಾರ ಹತ್ತಿ ಮಹಾತ್ಮರು ಕಿಂಗಸ್ಲೀ ಹೋಲಿಗೆ ಹೋದರು. ಅಲ್ಲಿ ಮಹಾತ್ಮರಿಗೆ ಆ ಭಾಗದ ಮ್ಯುನಿಸಿಪಾಲಿಟಿಯ ಅಧ್ಯಕ್ಷರು ಸ್ವಾಗತ ಮಾಡಿದರು ಗಸ್ತು ಕೋಲಿಗೆ ಒಯ್ದರು. ಅಲ್ಲೇ ಮಹಾತ್ಮರು ಇಳಕೊಂಡಿದ್ದಾರೆ. ಜಗತ್ತಿನ ಅನೇಕ ತಾರೀಖಿಗೆ ಭಾಷಣಗಳಿಂದ ಹೊರಟ ಮಹಾತ್ಮರು ಸಪ್ಟಂಬರ ೧೨ನೇ ತಾರೀಖಿನ ಸಂಜೆ ಲಂಡನಿನೊಳಗಿನ ಕಿಂಗಸ್ಲೀ ಹೋಲಿಗೆ ತಲ್ಪಿದರು. ಹೀಗೆ ಮಹಾತ್ಮರ ಸ್ವರಾಜ್ಯಯಾತ್ರೆಯು ಕ್ಷೇಮದಿಂದ ಕೊನೆಗಂಡಿತು.

ಮಹಾತ್ಮರು ಇಷ್ಟು ಚಳಿಯಾದಾಗ್ಯೂ ಪಂಚೆ ಉಟ್ಟು, ಶಾಲನ್ನಷ್ಟೇ ಹೊದ್ದುಕೊಳ್ಳುತ್ತಾರೆ. ಪ್ರವಾಸದಲ್ಲಿ ವಿಶ್ರಾಂತಿ ದೊರೆತದಾಗ್ಯೂ, ಮಹಾತ್ಮರ ತೂಕವು ಅರ್ಧ ರತ್ತಲು ಮಾತ್ರ ಹೆಚ್ಚಿದೆ. ೯೮ ರತ್ತಲು ಇದ್ದದ್ದು ೯೮॥ ರತ್ತಲು ಆಗಿದೆ. ಹಡಗದ ಮೇಲೆ ನಿತ್ಯ ನೇಮದಂತೆ ಮಹಾತ್ಮರು ರಾತ್ರಿ ೯॥ ಘಂಟೆಗೆ ಮಲಗುತ್ತಾರೆ. ೪ ಘಂಟೆಗೆ ಏಳುತ್ತಾರೆ. ನಿತ್ಯನೇಮದಂತೆ ಪ್ರಾರ್ಥನೆ ನಡೆಯುತ್ತದೆ. 'ರಘುಪತಿ ರಾಘವ ರಾಜಾರಾಮ' ಎಂಬ ರಾಮನಾಮ ಸಂಕೀರ್ತನ, ಭಗವದ್ಗೀತೆಯೊಳಗಿನ ಒಂದು ಅಧ್ಯಾಯ, ಆಶ್ರಮ ಭಜನಾವಳಿಯೊಳಗಿನ ಒಂದು ಪದ್ಯ ಇವನ್ನು ಹಾಡುತ್ತಾರೆ. ಆ ಬಳಿಕ ಹಿಂದೀ ಬೇರೆ ಬೇರೆ ಸಂಸ್ಥೆಗಳ ಬ್ಲೋಕಗಳನ್ನು ರಾಮರಾಗ ಮನಸ್ಸಿಗೆ ತರುವದು ನಡೆಯುತ್ತದೆ.

ಸ್ಥಾನಿಕ ವೃತ್ತಾಂತ.

ಕುಮಟಾ— ಈ ವಾರದಲ್ಲಿ ೩-೪ ದಿನ ಚಲೋ ಮಳೆ ಬಿತ್ತು. ಗದ್ದೆಗಳಿಗೆ ತುಂಬ ಒಳ್ಳೇದು. ಈ ವಾರದಲ್ಲಿ ೪—೫ ಇಂಚು ಮಳೆ. ಇಂದು ವರೆಗೆ ೧೬೩—೫೧ [illegible] ಮಳೆಯಾಯಿತು.

ಇಲ್ಲಿಯ ಬೊಂಬೆಗಳಾಗಿನ ಸ್ವಯಂಸೇವಕರೆಲ್ಲರೂ ರಾಜಿನಾಮೆ ಕೊಟ್ಟರು. ಒಬ್ಬ ಬಾಹ್ಮಣ [illegible] ಚಹಾ [illegible] ಮಾಡಿದನು. ಅದಕ್ಕಾಗಿ [illegible] ಒಬ್ಬ ಸ್ವಯಂಸೇವಕರಿಗೆ [illegible], ಇದಕ್ಕೆ ಇಲ್ಲಿಯ ಅಧ್ಯಕ್ಷರ ಹಾಗು ಕಾರ್ಯದರ್ಶಿಗಳ ಸಮ್ಮತಿಯಿರಲಿಲ್ಲ. ಈ ಮೇಲೆ ಕಾರ್ಯದರ್ಶಿಗಳ ಮನಸಿನವರ [illegible] ದ ಬಗ್ಗೆ [illegible] ಅಂಗವಿದು [illegible] ಸಾರ ಪತ್ರ [illegible]. ಅದರಿಂದ ಸ್ವಯಂಸೇವಕರಿಗೆ ಜನರು [illegible] ಆದರಿಂದ ರಾಜಿನಾಮೆ ಕೊಡುವ ಪ್ರಸಂಗ ಬಂತೆಂದು [illegible] ಎಲ್ಲ ಸಂಗತಿಗಳನ್ನು ವಿವರವಾಗಿ ದೊಡ್ಡ ಪತ್ರ ಬರೆದಿದ್ದಾರೆ. ಜಿಲ್ಲಾ ಕೊಂಗ್ರೆಸ ಕಮಿಟಿಯವರು, ಇದೇ ರೀತಿ ಸೇರಲಿರುವ ಪ್ರಾಂತಿಕ ಕೊಂಗ್ರೆಸ ಕಮಿಟಿಯವರು ಈ ವಿಷಯವನ್ನು ವಿಚಾರಿಸಿ [illegible] ಅನುಕೂಲತೆ ಮಾಡಿ [illegible] ಸಮಿತಿಯ [illegible] ಬಗ್ಗೆ ಸಾಗರ [illegible] ಬೇಡುತ್ತಾರೆ.

ಈಗ ೩-೪ ವರ್ಷಗಳಿಂದ ಶ್ರೀ ವೆಂಕಟ್ರಮಣ ದೇವರ ಭಂಡಾರದ ವಹಿವಾಟಿನ ಕುರಿತು ಮೊಕ್ತೇಸರರ ಮೇಲೂ, 'ವೈಶಾಟರ' ರಾ। ಅಣ್ಣಪ್ಪನ ಮೇಲೂ [illegible] ರಾ। ಅಣ್ಣಪ್ಪನು [illegible] ಜಡ್ಜರು ತೀರ್ಪು ಕೊಟ್ಟು ಅವರ [illegible] ಶ್ರೀ ದೇವರ [illegible] ಮೊಕ್ತೇಸರರ [illegible] ತೀರ್ಪು ಕೊಟ್ಟಿದ್ದಾರೆ. ಶ್ರೀ ದೇವರ ಭಂಡಾರದ ವಹಿವಾಟನ್ನು ದಕ್ಷತೆಯಿಂದ ನಡೆಸಲಿಲ್ಲ, ಸ್ವಂತ [illegible] ಲೆಕ್ಕ-ಪತ್ರದ [illegible] ಮೊಕ್ತೇಸರರ ಮೇಲೆ ದೇವಳ ಕಮಿಟಿಯವರು [illegible] ಹೀಗೆ ಜಡ್ಜರು [illegible] ಅಪ್ಪೀಲು [illegible] ರಾ। [illegible] ಶ್ರೀ ವೆಂಕಟ್ರಮಣ ದೇವರ ಭಂಡಾರಕ್ಕೆ [illegible] ಜಡ್ಜರ [illegible].

ಈ ಕಡೆ [illegible] ಪ್ರಾರಂಭವಾಯಿತು. ಬಸನಾಕ [illegible] ಬಂತು, [illegible] ಬಂತು.

ಹೊನ್ನಾವರ— ಇಲ್ಲಿಯ ಮುನಸಿಪಾಲಿಟಿ [illegible] ವಿಚಿತ್ರವಿದೆ. ಕೌನ್ಸಿಲಿಗೆ [illegible] ರಾ। ವಿಶ್ವನಾಥ ಪ್ರಭುಗಳು ರಾ। [illegible] ನಾರಾಯಣ ಪ್ರಭು, ರಾ। [illegible] ನಾಯಕ, ರಾ। ಮುಕುಂದ [illegible] ಪ್ರಭುಗಳ [illegible] ಮಂದಿ ರಾ। ವಿಶ್ವನಾಥ ಪ್ರಭುಗಳಿಗೆ [illegible] ರಾ। [illegible] ನೇಮಕ [illegible] 'ವೀರಭದ್ರ' [illegible] ರಾ। ಗಣಪತಿ [illegible] ಕಾರ್ಯ [illegible] 'ವೀರಭದ್ರ' [illegible] ಕೊಂಗ್ರೆಸಿನ ಬಹುಮತ [illegible] ರಾ। [illegible] ರಾಷ್ಟ್ರೀಯ [illegible] ಅಧ್ಯಕ್ಷರಾದ [illegible] ೧೧ ನೇಗೆ [illegible]

ಕೌನ್ಸಿಲು ಇಲೆಕ್ಷನಿನಲ್ಲಿ ರಾಷ್ಟ್ರೀಯ ಪಕ್ಷದವರು ಪ್ರವೇಶ [illegible] ಅಪ್ಪಣೆ ಕೊಟ್ಟವರು, ಇವರೂ ಕೊಂಗ್ರೆಸ ಕಾರ್ಯಕರ್ತರೆಂದು ಹೇಳಿಕೊಳ್ಳುತ್ತಾರೆ. ಅಂಥ [illegible] ಪಕ್ಷದವರು [illegible] ಬಗೆ ಹೇಗೆಂದು [illegible].

ರಾ। ಗಂಗೊಳ್ಳಿಯವರು ಬರೆಯುವದೇನೆಂದರೆ — ಕೌನ್ಸಿಲಿಗೆ ರಾಷ್ಟ್ರೀಯ ಪಕ್ಷದ [illegible] ವಕೀಲರು [illegible] ಕೌನ್ಸಿಲಿಗೆ ಕೊಂಗ್ರೆಸಿನವರು [illegible]. ಕೊಂಗ್ರೆಸ ಪರವಾಗಿ ಕೊಂಗ್ರೆಸ [illegible] ಸೋಲಿಗೆ [illegible] [ರಾಷ್ಟ್ರೀಯ ಪಕ್ಷದಲ್ಲಿ [illegible] ಮಂಜೂರು [illegible] ಕೌನ್ಸಿಲು [illegible] ಈ [illegible] ಕೌನ್ಸಿಲು [illegible] ಇಲೆಕ್ಷನಿನ [illegible] ಪಕ್ಕಾ [illegible] ರಾ। ಗಂಗೊಳ್ಳಿಯವರು [illegible] ಸಂ]

ಇಲ್ಲಿಯ ಸಾರ್ವಜನಿಕ ಗಣಪತಿ ಉತ್ಸವವು ಕೀರ್ತನ ಗಾಯನ, ಪುರಾಣ [illegible] ನಾಟಕಗಳಿಂದ ಸಾಂಗವಾಗಿ ನೆರವೇರಿತು.

ಇಲ್ಲಿಯ [illegible] ಬೆಂಕಿನಲ್ಲಿ [illegible] ಇದರಿಂದ [illegible] ರಾ। ಗಣೇಶ [illegible] ರಾ। ಗಣಪತಿ ಸುಬ್ರಾಯ ಗಂಗೊಳ್ಳಿ ವಕೀಲ [illegible] ರಾಜಿನಾಮೆ [illegible] ಪ್ರಕರಣದ ಮೂಲಕ [illegible] ಮಂಜೂರಾಗಲಿಲ್ಲ.

ಭಟಕಳ— ಇಲ್ಲಿಯ 'ವೃತ್ತದ' ಪ್ರತಿನಿಧಿಗಳಾದ ರಾ। [illegible] 'ವೃತ್ತ'ಕ್ಕೆ [illegible] ಇನ್ನು ಮುಂದೆ ಅವರು 'ವೃತ್ತ'ದ ಪ್ರತಿನಿಧಿಗಳಾಗಿ ಕೆಲಸ ಮಾಡಲಿಕ್ಕಿಲ್ಲ.

ಶಿರಸಿ— [illegible] ನಿಧಿಯ ಕುರಿತು ಜಿಲ್ಲಾ ಬೋರ್ಡಿನ [illegible] ಅನುಕೂಲ [illegible] ರಾ। ವಿಶ್ವನಾಥ ಪ್ರಭುಗಳವರು [illegible] ಜಿಲ್ಲಾ ಬೋರ್ಡಿನ [illegible] ನಿಧಿಗೆ [illegible] ಅಧ್ಯಕ್ಷರು [illegible] ಜಿ। ಬೋ। ಅಧ್ಯಕ್ಷರು [illegible] ರವಾನಿಸಿದ [illegible] ಜಿಲ್ಲಾ ಬೋರ್ಡಿನಿಂದ [illegible] ಸಹಾನುಭೂತಿ ದೊರೆಯುವ [illegible] ಜಿಲ್ಲಾ ಬೋರ್ಡಿನ ಸಭೆಯಲ್ಲಿ [illegible] ರಾ। ವಿಶ್ವನಾಥ [illegible]

ಪ್ರಭುಗಳು ಬರೆಯುತ್ತಾರೆ. ಇದರ ಮೇಲಿಂದ ಜನರಲ್ಲಿ [illegible] ಗ್ರಹಿಕೆ ದೊರೆಯಬೇಕು.

ಶಿದ್ದಾಪುರ— [illegible] ಗ್ರಾಮದ ತೋಟಿಗರು [illegible] ಕಲೆಕ್ಟರರಿಗೆ [illegible] ರಾ। [illegible] ಭಟ್ಟ, ತಿಮ್ಮಣ್ಣ ಭಟ್ಟ, [illegible] ಭಟ್ಟ [illegible] ಹರಿ, [illegible] ಅರ್ಜಿಗಳನ್ನು [illegible] ಸಾಹೇಬ್ [illegible] ಲೆಕ್ಕ ಮಾಡಿದರು. ಜಂಗು [illegible] ಮರಗಳನ್ನು [illegible] ಜಂಗು [illegible] ಲೆಕ್ಕಕ್ಕೆ [illegible] ಮರಗಳ ಲೆಕ್ಕ [illegible] "ನಿಮ್ಮ ಹೇಳಿಕೆಯಂತೆ [illegible]" ರೈತರಿಗೆ ಉತ್ತರ ಕೊಟ್ಟರು. ಜಂಗು ಇಲ್ಲದ ಮರಗಳ [illegible] ಈ [illegible] ಜಂಗು ಇಲ್ಲದ ಮರಗಳ ಲೆಕ್ಕ [illegible] ರೈತರು ಹೇಳಿದರು. [illegible] ಸರಿ ಮಾಡಬೇಕಾಗಿ ರೈತರು ಹೇಳಿದರು. [illegible] ರೈತರು [illegible] ರಾ। [illegible] ಅರ್ಜಿಯ [illegible] ಸಕ್ಷೇತಿ [illegible] ೪ ಫರಂಗಿ [illegible] ಜಂಗಿಲ್ಲದ ಮರಗಳು [illegible] ಮರಗಳು [illegible] ರಾ। ಗಣಪಯ್ಯ ಭಟ್ಟನವರ [illegible] ರೈತರು [illegible] ಅಧಿಕಾರಿಗಳ [illegible]

[illegible] ಗ್ರಾಮದಲ್ಲಿ [illegible] ಜ್ವರದ ಬಾಧೆ, ಜಂಗಲು ನಿಬಂಧನೆ, ಕೊಳೆಯ [illegible] ಈ ಆಧಿ-ವ್ಯಾಧಿಗಳಿಂದ ಅನೇಕ [illegible] ಮುಂಚೆ ೩೦-೪೫ [illegible] ಕೊಳೆ ರೋಗದಿಂದ [illegible] ರಾ। ಗಣಪಯ್ಯ [illegible] ೧೨೦೦ ಮರಗಳಿಗೆ [illegible] ಮುಂದಿನ [illegible] ಮಾಡಬೇಕೆಂದು [illegible].

ಇಲ್ಲಿ ಇರುವ [illegible] ಮನೆಯ [illegible] ಮೇಲೆ [illegible] ಬಂದ ಪೋಲೀಸರ ಹಾಗು [illegible] ಸಂಜೆ ೫೦-೬೦ [illegible] ಜನರೊಳಗೆ [illegible] ಬಿಟ್ಟು [illegible] ಪೋಲೀಸ [illegible] ಪೋಲೀಸ-ಕಾಜಿಯ ಹಾಗು [illegible] ಪೋಲೀಸ ಕಾಜಿಗೆ [illegible]

(ಇನ್ನೂ ಬಹಳ ಮೇಲೆ ಮುಂದುವರಿಸಿದೆ)

ಅಲ್ಲಲ್ಲಿ ಇಷ್ಟಿಷ್ಟು!

ಲೋಕದಲ್ಲಿ ಯುದ್ಧಗಳು ಘಟಿಸಬಾರದೆಂದು ರಾಷ್ಟ್ರಗಳು ಜಾಹೀರನಾಮೆಗಳನ್ನು ಹೊರಡಿಸುತ್ತಿವೆ, ರಾಜಕಾರಣಧುರಂಧರರು ದೊಡ್ಡ ದೊಡ್ಡ ಉಪನ್ಯಾಸ ಕೊಡುತ್ತಾರೆ. ಆದರೆ, ಗುಪ್ತವಾಗಿ ಯುದ್ಧಸಾಮಗ್ರಿಗಳ ತಯಾರಿ ನಡೆದಿದೆ. ಹಂತಕರ ವಿಷಧೂಮಗಳನ್ನು ಸೂಚಕರು ಪತ್ತೆ ಹಚ್ಚಿದ್ದಾರೆ. ೧೦೦೦ ಪ್ರಕಾರದ ವಿಷದ್ರವ್ಯಗಳು ತಯಾರಾಗಿವೆ. ಅಮೇರಿಕೆಯವರು ವಿಷದ್ರವ್ಯ ತಯಾರಿಸುವುದಕ್ಕಾಗಿ ವರ್ಷಾವಧಿ ಮೂರು ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಾರೆ. ವಿಷದ ಗ್ಯಾಸ್‌ಗಳನ್ನು ಕೊಂಡೊಯ್ಯುವ ಮೋಟಾರನ್ನು ತಯಾರಿಸಿದ್ದಾರೆ. ಇದಲ್ಲದೆ, ಟೆಂಕುಗಳು ತಯಾರಿಸಲ್ಪಟ್ಟಿವೆ. 'ಟೆಂಕ್' ಅಂದರೆ, ಕಬ್ಬಿಣದ ಕೆರೆ ಎಂದರ್ಥ. ಕೆರೆಯಲ್ಲಿ ನೀರಿರುವಂತೆ, ಈ ಟೆಂಕುಗಳಲ್ಲಿ ಮದ್ದುಗುಂಡು ತುಂಬಿರುತ್ತದೆ. ಗುಂಡು ಹಾರಿಸುವ ತುಪಾಕಿಗಳೂ ಉಂಟು. ಕೋಟೆ-ಕೊತ್ತಲದಂತೆ ಇಪ್ಪ ಬದ್ಧವಾಗಿವೆ ಇವನ್ನು ಬೇಕಾದಲ್ಲಿಗೆ ಒಯ್ಯಬಹುದು. [illegible] ರಾಷ್ಟ್ರದಲ್ಲಿ ಟೆಂಕುಗಳನ್ನು ಬೇಕಾದಲ್ಲಿ ಒಯ್ದು, ಬೇಕಾದವರ ಮೇಲೆ ಬೇಕಷ್ಟು ಗುಂಡು ಹಾರಿಸಬಹುದು. ಗುಂಡು ತಾಗಿ ಇವನ್ನು ಒಡೆಯಬಾರದು. ಗುಂಡುಗಳಿಂದ ಟೆಂಕುಗಳು ಅಪಾಯವಾಗುವದಿಲ್ಲ. ಈ ಟೆಂಕುಗಳ ಘಂಟೆಗೆ ೯೦ ಮೈಲು ಓಡುತ್ತವೆ. ಇಂಥ ಟೆಂಕುಗಳು ಇಂಗ್ಲಂಡದಲ್ಲಿಯೂ ತಯಾರಾಗಿವೆ, ಫ್ರಾನ್ಸ ದೇಶದಲ್ಲಿಯೂ ತಯಾರಾಗಿವೆ. ಇವೆಲ್ಲ ರಾಷ್ಟ್ರಗಳು ಲೋಕದಲ್ಲಿ ಶಾಂತಿ ಸಾಮ್ರಾಜ್ಯವನ್ನು ಪ್ರಸ್ಥಾಪಿಸ ಬಯಸುವಕೋಸುಗ ಕಲ್ಯಾಣವನ್ನು ಸಾಧಿಸಲು ಟೊಂಕಕಟ್ಟಿದ ಜನಾಂಗಗಳು. ೧೯೧೪ನೇ ಇಸ್ವಿಯಲ್ಲಿ ಮಹಾಯುದ್ಧ ಸದ್ಯ ೩೦ ಕರದ ವಿಷದೂಮಗಳಿದ್ದವು. ಈಗ ವಿಷದೂಮಗಳ ಸಂಖ್ಯೆ ೧೦೦೦ಕ್ಕೆ ಏರ್ಪಟ್ಟಿದೆ. ಶಾಂತಿಸಾಮ್ರಾಜ್ಯದೊಳಗೆ ರಣದೇವಿಯು ನಡಿಸಿದ ದರ್ಬಾರಿನಿದು!

***

ಸಿಂಧ ಪ್ರಾಂತದ ಹೈದರಾಬಾದ ಮ್ಯುನಿಸಿಪಾಲಿಟಿಗೆ ಮನಃಪೂರ್ವಕವಾದ ಅಭಿನಂದನೆ ಮತ್ತು ದಾನವನ್ನು ಸಲ್ಲಿಸುವದಕ್ಕಾಗಿ ಮ್ಯುನಿಸಿಪಾಲಿಟಿಯವರು ಹೊಸ ಉಪಕ್ರಮ ಮಾಡಿದ್ದಾರೆ. ಶಹರಗಳಲ್ಲಿರುವ ಮ್ಯುನಿಸಿಪಾಲಿಟಿಯ ನೌಕರನು ಹಿಂದಿ ಕಲಿತು ಪಾಸಾದರೆ ಪಗಾರದಲ್ಲಿ ಬಡತಿಯಾಗುವದೆಂದು ವಿಧಿಸಿದೆ.

***

ಒಂದು ಸಂಸ್ಥಾನದಲ್ಲಿ ಒಬ್ಬ ಶ್ರೀಮಂತನು ಉದಾರವಾದ ಧರ್ಮ ಮಾಡಿದನು. ಆತನು ಗುಜರಾತಿನವನು. ಆತನಿಗೆ ೨೦ ವರ್ಷ ವಯಸ್ಸು. ತಾಯಿಗೂ ತಂದೆಗೂ ಹುಟ್ಟಿದ ಮಗನ ಹಿಂದೆ ಏಳು ವರ್ಷದ ಹುಡುಗನೊಬ್ಬನನ್ನು ಸಾಕುತ್ತಾನೆ, ಅಲ್ಲಿ ಆತನ ಕತೆ ಕಂಡು ಬರುತ್ತದೆ. ಹಾಗಾಗಿ ವಿಷದಿಂದ ಈತನಿಗೆ ಬಾಧೆಯಾಗುವದಿಲ್ಲ. ಅವನ ಕಣ್ಣಿಗೆ ಕತ್ತಲೆ ಬರುವದಿಲ್ಲ. ಈತನಿಗೆ ಅಪಾಯವಾಗುವದಿಲ್ಲ. ಈಗೊಂದು ಮೂರು ವಾರಗಳ ಹಿಂದೆ ಬಾಲಕನಿಗೆ ಒಂದು ನಾಗರ ಹಾವು ಕಚ್ಚಿತು. ಅದು ಕೊಂಡಾಡತಕ್ಕ ಸುದ್ದಿಯಾಯಿತು. ಬಾಲಕನು ಆಸ್ಪತ್ರೆಗೆ ಹೋದನು. ಆತನ ಮೈಮೇಲೆ ವಿಷದ ಪರಿಣಾಮ ಏನೂ ಆಗಲಿಲ್ಲ. ಆದರೆ, ಬಾಲಕನ ಮೇಲೆ ಜನರ ಪ್ರೀತಿ ವಿಶೇಷ, ಆದರಿಂದ ಆತನು ಕಲ್ಲು ಹೊಡೆದು ಹಾವನ್ನು ಕೊಂದನು. ಆತನನ್ನು ನೋಡಿ ಬಾಲಕನು ವಾರದೊಳಗೆ ಪೂರ್ಣ ಗುಣಹೊಂದಿದನು. ಎಲ್ಲ ಅದ್ಭುತ ಚಮತ್ಕಾರ!

***

ಸ್ವರಾಜ್ಯ-ಪರರಾಜ್ಯಗಳೊಳಗಿನ ಭೇದ ತಿಳಕೊಳ್ಳುವದಕ್ಕಾಗಿ - ಬ್ರಿಟಿಶ ಸಾಮ್ರಾಜ್ಯದಲ್ಲಿ ಜಮಾ-ಖರ್ಚಿನ ಬಾಬಿಗೊಡುವದಿಲ್ಲ. ಅದಕ್ಕಾಗಿ ಬಡವರು ತಮ್ಮ ಸ್ವಂತ ಆದಾಯದ ಖರ್ಚಿನಲ್ಲಿ ಸ್ವಯಂಸ್ಫೂರ್ತಿಯಿಂದ ಅರ್ಧ ಲಕ್ಷ ಹಣವನ್ನು ಕುಗ್ಗಿಸಿ ರಾಷ್ಟ್ರಕ್ಕೆ ಉದಾಹರಣೆ ತೋರಿಸಿಕೊಟ್ಟರು. ಯುವರಾಜರು ತಾವಾಗಿ ೧೦ ಲಕ್ಷ ಹಣವನ್ನು ಧರ್ಮ ಕೊಟ್ಟರು. ಮುಖ್ಯ ಪ್ರಧಾನರಾದಿ ದೊಡ್ಡ ದೊಡ್ಡ ಅಧಿಕಾರಿಗಳು ತಮ್ಮ ಸಂಬಳವನ್ನು ಇಳಿಸಿಕೊಂಡರು. ಮತ್ತು ಬೇರೆ ಬೇರೆ ಅಧಿಕಾರಿಗಳ ಸಂಬಳ ಕತ್ತರಿಸುವದಕ್ಕಾಗಿ ವರ್ಕಿಂಗ್ ಕಾನ್ಸಿಲ್ ದೊಡ್ಡ ರಾಜಕಾರಣಗಳನ್ನು ತೊರೆಯಿಸುವ ಸಂಕಲ್ಪವಾಗಿದೆ. ಹಿಂದುಸ್ಥಾನದಲ್ಲಿ ಖರ್ಚು ಕಡಿಮೆ ಮಾಡುವ ಆಲೋಚನೆಯೂ ನಡೆಸಿದೆ. ಕಮಿಟಿಗಳು ವಿಚಾರ ಮಾಡುತ್ತಿವೆ. ನಮ್ಮ ಸಾರ್ವಭೌಮರು ಹಿಂದುಸ್ಥಾನದಲ್ಲಿ ಸಾರ್ವಭೌಮರು ಇದ್ದರು ತಮ್ಮ ಖರ್ಚು ಕಡಿಮೆ ಮಾಡಿಕೊಳ್ಳುವರೊತ್ತಟ್ಟಿಗಿರಲಿ, ಈ ಕಾಲದಲ್ಲಾದರೂ, ತ್ಯಾಗ ಆವಶ್ಯಕ ಮಾಡುತ್ತಾರೆಂದು ನೋಡಿರಿ. ಸಾರ್ವಭೌಮರಿಗೆ ಸಂಚರಿಸುವದಕ್ಕಾಗಿ ಸ್ಪೆಶಲ್ ಟ್ರೇನು ಇರುತ್ತದೆ. ಈ ಸ್ಪೆಶಲ್ ಟ್ರೇನಿಗೆ ೧೩ ಡಬ್ಬಿಗಳು, ಮೋಟಾರಗಳು-ಮೊದಲನೆಯದು, ಅಂಗರಕ್ಷಕರು, ನೌಕರರು, ಹೀಗೆ ಎಲ್ಲರಿಗೆ ಇದರೊಳಗೆ ವ್ಯವಸ್ಥೆಯಿದೆ. ಆದರೆ ಈಗ, ಬಾಲಗಾಡಿ ತೆಗೆದು ಬಿಟ್ಟು ಮೊದಲಿನ ಸರ್ವ ಪರಿವಾರದ ಇದ ಟ್ರೇನಿಗೆ ಹೊಂದಿ ಇನ್ನು ಇಲ್ಲ. ಈಗ ಸಿಮ್ಲಾದಿಂದ ರೈಲಿನ ಸಂಚಾರದಲ್ಲಿ ಬಿಟ್ಟು ಬಿಟ್ಟು, ಎಲ್ಲ ಡಬ್ಬಿಗಳನ್ನು ಪುನರ್ಘಟಿಸಬೇ

ಮನೋಹರವಾದ ಕೂದಲನ್ನು ಚನ್ನಾಗಿ ಸಾಕಬೇಕು.

ಆದರೆ, ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ದುರ್ಲಕ್ಷ ಮಾಡುತ್ತಾರೆ, ಕೂದಲು ಮನೋಹರವಾಗಿರಬೇಕಾದರೆ, ನೀವು ದಿನಾ ಅದರ ಕಡೆಗೆ ಲಕ್ಷಕೊಡಬೇಕು. ಕೂದಲುಗಳನ್ನು ಅಲಕ್ಷ ಮಾಡಿದರೆ, ಅವು ಬಾಡುವವು, ಮತ್ತು ಉದುರುವವು. ನೀವು ಅವಕ್ಕೆ ಚನ್ನಾದ 'ಕೂದಲಿನ' ಪೋಷಕ ಕ್ರಿಯಾದ ಕೂದಲನ್ನೆ ನ್ಯಾವದು?

ಕಾಮಿನಿಯಾ ಆಯಿಲ್. (ರಜಿಸ್ಟರ್ಡ)

ದಿನಾ ಮುಂಜಾನೆ ಅರ್ಧ ಚಮಚೆ ಎಣ್ಣೆಯನ್ನು ಚನ್ನಾಗಿ ತಿಕ್ಕಬೇಕು. ಹೀಗೆ ತಿಕ್ಕಿದ ಕೂಡಲೆ ತಲೆಯ ಹೊಟ್ಟು ಹೋಗುತ್ತದೆ, ಕೇಶರಂಧ್ರಗಳು ತೆರೆದು ಎಣ್ಣೆಯಿಂದ ತಲೆಗೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ ಆಹಾರ ಸಿಗುತ್ತದೆ. ಹೀಗೆ ಸಿಕ್ಕಿದ ಚೈತನ್ಯದ ಕೂದಲುಗಳಿಗೆ ಮತ್ತೆ ನಿಮ್ಮ ಕೂದಲು ದಪ್ಪವಾಗಿ ಬೆಳೆಯುತ್ತವೆ.

ಎಲ್ಲಾ ಚಲೋ ಅಂಗಡಿಕಾರರಲ್ಲಿ ಈ ತೈಲವು ದೊರೆಯುತ್ತದೆ.

ಅಥವಾ

ನಮಗೇ ಬರೆದು ತರಿಸಿಕೊಳ್ಳಿರಿ

ಬಾಟ್ಲಿ ೧ಕ್ಕೆ ರೂ.		೧—೦—೦
ಅಂಚೆವೆಚ್ಚ	,,	೦—೩—೦
೩ ಬಾಟಲಿಗಳಿಗೆ	,,	೨—೧೦—೦
ಅಂಚೆವೆಚ್ಚ	,,	೦—೧೨—೦

ನಿಮ್ಮ ಅಂಗಡಿಕಾರರಿಂದ ತರಿಸಿಕೊಳ್ಳಿರಿ.

೪ ಔಂಸಿಗೆ ರೂ		೨—೦—೦
ಔಂಸಿಗೆ	,,	೧—೪—೦
ಡ್ರಾಮಿಗೆ	,,	೦—೧೨—೦
ಅಂಚೆವೆಚ್ಚ	,,	೦—೬—೦

ಒಟ್ಟೋದಿಲ್ ಬಹಾರ ಹೇಳಲಿಕ್ಕೆ ಮರೆಯಬೇಡಿರಿ!

"ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ"

ಒಂದು ಸುಗಂಧದ್ರವ್ಯದಲ್ಲಿ ಇದನ್ನು ಕಂಡಾಬಿಟ್ಟಿದ್ದೀರಾ ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು ಎನ್ನುವದು?

ಒಟ್ಟೋದಿಲ್ ಬಹಾರ್! (ರಜಿಸ್ಟರ್ಡ)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ, ಅವುಗಳಲ್ಲಿ ಆಲ್ಕೋಹೋಲು ಯಾವ ಮದ್ಯವು ಸೇರಿರುತ್ತದೆ. ಇದರಿಂದ ಹೂವಿನ ಸಹಜ ಪರಿಮಳವು ಹೀಗವು ಒಟ್ಟೋದಿಲ್ ಬಹಾರದಿಂದ ಹಕ್ಕಿಯಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮುಖ್ಯ ಪ್ರತಿನಿಧಿ

THE ANGLO INDIAN DRUG & CHEMICAL CO..

POST BOX 2082. **BOMBAY No. 2**

ಕಾಗಿ ಅಕ್ಷೇಪವಾಯಿತು. ಇಷ್ಟೇ ಏಕೆ, ಸಂಪಾದಕರು ಬೇರೆ; ಆಪ್ತ ಹಿಂದುಸ್ಥಾನದಲ್ಲಿ ಗುಣಂಪದಲ್ಲ ಇಂಗ್ಲಂಡದಲ್ಲಿ ಗುತ್ತವೆ ಟಿಪಾಲ ಪತ್ರ ಹಾಕಿದರೆ, ಪತ್ರ ಕಳ್ಳಿ ಸದ್ಯ ಒರುವ ವರೆಗೆ ವಿಳಂಬವಾಗುತ್ತದೆ, ಆದರಿಂದ ಕಂತೆಯಿಂದ ಆರ್ಡರು ಕೊಡಲು ಸಾಯಿಕು ಬಗಬಗೆಯಿಂದ ಕೆಲಸ ಬಗಬೇಕು, ಆದರಿಂದ ಸಿಪಾಯಿ ದಿವಾಂದ ರಜೆ ದಿನಗಳಲ್ಲಿ ಸಹ ಕೆಲಗಾರರ ಕಡೆಯಿಂದ ಕೆಲಸ ಮಾಡಬೇಕು. ಇದಕ್ಕೆ ಎಷ್ಟು ರೂಪಾಯಿ ಖರ್ಚಾಯಿತೆಂಬದು ತಿಳಿದ ಬಿಲ್ಲ. ಈ ದುಂದುಗಾರಿಕೆ ನೋಡಿ ಮುಂದೋಡಿಯ ನಾಳಿಗೆ ಸಹ ಸಹಾಸವಾಗಲಿಲ್ಲ ಲಂಡನಿನ ಟ್ರಿಬ್ಯೂನ ಪತ್ರಿಕೆಯಲ್ಲಿ ಈ ಕುರಿತು ಒಬ್ಬರು ಮನೋಹರವಾದ ಬರಹ, ಅನ್ನ ಕ್ಕೆ ಬಯಿ !

* *

ದ ಪ್ಲೈಯಲ್ಲಿ ಇದೇ ಒರುವ ನವಂಬರ ತಿಂಗಳ ಕೊನೆಯ ವಾರದಲ್ಲಿ ಜರುಗುವ ಭಾರತೀಯ ಸ್ವದೇಶೀ ವಸ್ತು ಪ್ರದರ್ಶನ ಸೇರುವದಿದೆ ಸ್ವದೇಶೀವಸ್ತುಗಳಿಗೆ ಈ ಪ್ರದರ್ಶನದಿಂದ ಕರ್ನಾಟಕದಲ್ಲಿ ಜಾಹೀರಾತು ಸಿಗುವದು. ಪದು ಆದರಿಂದ ಕರ್ನಾಟಕಸ್ಥರೆಲ್ಲರೂ ತಮ್ಮಲ್ಲಿಯ ತಮ್ಮ ಸ್ವದೇಶೀ ಪದಾರ್ಥಗಳನ್ನೆಲ್ಲ ಪ್ರದರ್ಶನದಲ್ಲಿಟ್ಟು ಲಾಭ ಹೊಂದಬೇಕು ೧ ರೂಪಾಯಿ ಕಳಿಸಿದಲ್ಲಿ ಕಾರ್ಯದರ್ಶಿಗಳು ಎಲ್ಲ ಮಾಹಿತಿ ಪೂರೈಸುತ್ತಾರೆ.

* *

ಬಾಗಲಕೋಟೆಯ ಮ್ಯುನಿಸಿಪಾಲಿಟಿಯ ಪ್ರಕಾರಗಳ ಚಿತ್ರವೇ ಬೇರೆ ಅಧ್ಯಕ್ಷರಿಗೆ ಇಂಗ್ಲಿಷ ಬರುವದಿಲ್ಲ ವೆಂಬ ದರೆಂದು ಕೆಲ ಸಭಾಸದರ ಅಂಬೋಣ ಉಪಾಧ್ಯಕ್ಷರು ಎಲ್ಲ ಕಾಗದ-ಪತ್ರಗಳ ಸಹಿ ಹಾಕಿಸಿದರಾಯಿತು. ಕೆಲವರಿಗೆ ಇದು ಸಹನವಾಗಲಿಲ್ಲ ಅಧ್ಯಕ್ಷರು ಉಪಾಧ್ಯಕ್ಷರ ಕಡೆ ಕಾಗದ-ಪತ್ರಗಳನ್ನು ಕಳಿಸಲೊಪ್ಪಲಿಲ್ಲ ಮಾನ ಮುಳ್ಳು ಕಟ್ಟಿಕೊಂಡರು ಉಪಾಧ್ಯಕ್ಷರು ರೇಗಿದರು, ತಮ್ಮದೊಂದು ಪಕ್ಷ ತಯಾರಿಸಿಕೊಂಡರು ಈ ಪಕ್ಷಕ್ಕೆ ಬಹುಮತವಿದೆ ಬಜೆಟಿನ ಚರ್ಚೆ ನಡೆದಾಗ ಅಧ್ಯಕ್ಷರಿಗೆ ಸಭಾಸದರು ಒಂದು ಪ್ರಶ್ನೆ ಕೇಳಿದರು ಅಧ್ಯಕ್ಷರು ಪತ್ರದ ವಿರೋಧವನ್ನು ಲಕ್ಷಿಸದೆ, ಹಿಂದೆ ಬಹುಮತದಿಂದ ಪಾಸಾದ ಠರಾವುಗಳಂತೆ ಅಧ್ಯಕ್ಷರು ಮಾತ ನಡೆಸೋಣ ವೆಂಬದಾಗಿ ಒಬ್ಬ ಸಭಾಸದರು ಕೇಳಿದರು. ಅದಕ್ಕೆ ಅಧ್ಯಕ್ಷರು ಉತ್ತರ ಕೊಡಲಿಲ್ಲ ಸಭಾಸದರು ಪ್ರೊಸೀಡಿಂಗ್ಸ ಪುಸ್ತಕವನ್ನು ಕಸಕೊಂಡರು ಅಧ್ಯಕ್ಷರು ವಿ ಕಿವಿ ಕಿ ನೋಡಿ, ಬೇರೆ ಕಾಗದ ಕೆಂಪು ಪ್ರೊಸೀಡಿಂಗ್ಸ ಬರೆದರು. ಉಪಾಧ್ಯಕ್ಷರ ಪಕ್ಷದವರು ತಮ್ಮ ಸಭೆ ಸೇರಿಸಿ ಪ್ರೊಸೀಡಿಂಗ್ಸ ಪುಸ್ತಕದಲ್ಲಿ ತಮ್ಮ ಸಭೆಯು ಕಡೆ ಬರೆದರು ಪಾ ನೆ ದಿನ ಮ್ಯುನಿಸಿಪಾಲಿಟಿಯ ಸಭೆಯಲ್ಲಿ ಎರಡು ಪಕ್ಷದವರು ಬಂದಿದ್ದರು. ಅಧ್ಯಕ್ಷರು ಬಂದಿದ್ದಿಲ್ಲ ಉಪಾಧ್ಯಕ್ಷರ ಸಭೆಯ ವೃತ್ತಾಂತ ಓದಿಸಿದಾಗ, ಅಧ್ಯಕ್ಷರ ಪಕ್ಷದವರು ಈ ಸಭೆಯ ಮ್ಯುನಿಸಿಪಾಲಿಟಿಯ ಕಾಯಿದೆಯ ಪ್ರಕಾರ ನಡೆದಿದ್ದು ಹೀಗೆ ಕಕ್ಷಿಯಲ್ಲಿ ಆ ಸಭೆ ವಿಸರ್ಜನ ಹೊಂದಿತು ಮುಂದೆ ಒಂದು ವಾರದಲ್ಲಿ ಮತ್ತೆ ಸಭೆಯಾಯಿತು ಆ ಸಭೆಗೆ ಹಿಂದಿನ ಅಧ್ಯಕ್ಷರಿಗೆ ಕಳಿಸಿದರೆ, "ನಾನಿಲ್ಲ" ಉತ್ತರ! ಒಂದು ಸಭಾಸದರು ಹೊಸ ಕಾಗದ ಸಹಿ ಮಾಡಿ ಹೊರದು ಇರಿಕರೆದ ಸಭೆಗಳಿಗೆ ಮುಂದಾಗಬೇಕೆಂಬ ನಿರ್ಧಾರ ಠರಾವುಗಳು ಜರಿಗಾಗ ಬರುತ್ತಿವೆ! ಬಜೆಟು ಪಾಸು ಆದ್ದರಿಂದ ಅಧ್ಯಕ್ಷರು ಎಲೆ ಟಿಪ್ಪಣಿ ಜನರಲ್ಲಿಗೆ ಬರೆದು, ನೌಕರ ಇವರ ಪಗಾರವನ್ನು ಕೊಟ್ಟರು. ಇದರಿಂದ ಉಪಾಧ್ಯಕ್ಷರ ಪಕ್ಷಕ್ಕೆ ಮತ್ತಷ್ಟು ಬೇಸರವಾಗಿದೆ ನೌಕರರಿಗೆ ಸಂಬಳ ಕೊಡಕೂಡದ ಅಧ್ಯಕ್ಷರಿಗೆ ಹೆಣ್ಣಿಗ ತರಬೇಕೆಂದು ಅವರು ಮಾಡಿದ ಯುಕ್ತಿ ನಿಷ್ಫಲವಾಯಿತು. ಈ ಪ್ರಕಾರ ಮ್ಯುನಿಸಿಪಾಲಿಟಿಯಲ್ಲಿ ಲೋಕೋಪಕಾರ ಮಾಡುವ ಪುಣ್ಯಾತ್ಮರ ಗುಣಸಂಕೀರ್ತನೆಯು 'ನವ ಕರ್ನಾಟಕ' ಹಾಗು 'ಕರ್ನಾಟಕ ವೃತ್ತ' ಪತ್ರಿಕೆಗಳಲ್ಲಿ ಬಹಳ ಬರುತ್ತದೆ!

ಒಂದೇ ಸವನಾಗಿ ಮೂವತ್ತು ವರ್ಷದ ಅನುಭವದಿಂದ ಹಿಂದುಸ್ಥಾನದ ಸಾವಿರಾರು
ಜನರಿಂದ ವರ್ಣಿಸಲ್ಪಟ್ಟ ಆಯುರ್ವೇದೋಕ್ತ

ಡಾಕ್ಟರ ಮತ್ತು ವೈದ್ಯಕ ಶಾಸ್ತ್ರಿಗಳಿಂದ ತಯಾರಿಸಿದ ಮತ್ತು ಇದರ ಗುಣಕ್ಕಾಗಿ ಅನೇಕ ಸರ್ಟಿಫಿಕೇಟುಗಳು ಮತ್ತು ಭಂಗಾರದ ಪದಕು ದೊರೆತಿರುವ ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ಜಗಪ್ರಸಿದ್ಧ

ದ್ರಾಕ್ಷಾಸವ.

ಈ ದ್ರಾಕ್ಷಾಸವವು ಸಹ್ಯಾದ್ರಿಪರ್ವತದಲ್ಲಿರುವ ಅನೇಕ ವನಸ್ಪತಿಗಳ ರಸಾರ್ಕಗಳೊಂದಿಗೆ ದ್ರಾಕ್ಷಾರಸವನ್ನು ಮಿಶ್ರಮಾಡಿ ಸ್ವದೇಶಿ ಯಂತ್ರದಿಂದ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರ ಮಾಡಿರುವದರಿಂದ ಸ್ವಾದಿಷ್ಟವೂ ಗುಣದಾಯಕವೂ ಆಗಿದೆ.

ಇದರ ಸೇವನೆಯಿಂದ ಶರೀರದೊಳಗಿನ ಹಳೇ ಕಡಕಿ (ಗರಮಿ) ಸಂಪೂರ್ಣ ನಾಶವಾಗುತ್ತದೆ. ಮತ್ತು ಧಾತುಸ್ರಾವ ಸ್ವಪ್ನಾವಸ್ಥೆಯಿಂದ ಅಥವಾ ಬೇರೆ ಯಾವದೇ ವಿಕಾರದಿಂದ ಬಂದ ಅಶಕ್ತತೆಯಿಂದ ಕೈಕಾಲು ಕಣ್ಣುಗಳ ಉರಿ ಬೀಳುವದು, ಯಾವಾಗಲೂ ಎಲುಬಿನಲ್ಲಿ ಜ್ವರ ಇರೋಣ, ನಡೆಯಲು ಬಾರದೆ ಇರೋಣ, ಪಿತ್ತದಿಂದ ಕಣ್ಣಿಗೆ ಕತ್ತಲಿ ಬಂದು ಘೇರಿಕೆ ಬರೋಣ, ಶೌಚಕ್ಕೆ ಸಾಫ ಆಗದೇ ಇರೋಣ, ಮುಂತಾದ ಎಲ್ಲ ವಿಕಾರಗಳು ನಷ್ಟವಾಗಿ ಜಠರಾಗ್ನಿಯು ಬೆಳೆಯುತ್ತದೆ. ಮತ್ತು ಅನ್ನ ಚೆನ್ನಾಗಿ ಪಚನವಾಗಿ ಶರೀರಕ್ಕೆ ಪುಷ್ಟಿ ಬರುತ್ತದೆ. ಇದರ ಸೇವನೆಯಿಂದ ತರುಣರಿಗೆ ವ್ಯಭಿಚಾರದಿಂದ ಅಥವಾ ಬೇರೆ ಕಾರಣದಿಂದ ಬಂದ ದುರ್ಬಲತೆ, ನಪುಂಸಕತ್ವ ಇದ್ದರೆ ಅದು ಹೋಗಿ ಪುನಃ ಯೌವನವಂತರಾಗಿ ಶರೀರ ಬಲವಾಗಿ ಮಕ್ಕಳು ಪುಷ್ಟವಂತರಾಗುವರು. ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ. ಬಾಣಂತಿಗೆ ಕೊಟ್ಟರೆ ಮತ್ತು ಹುಟ್ಟುವ ಗರ್ಭ ಸಂಬಂಧವಾದ ರೋಗಗಳೆಲ್ಲವೂ ಅವೆಲ್ಲ ಗುಣವಾಗಿ ಹೆಂಗಸರಿಗೆ ಶಕ್ತಿ ವೃದ್ಧಿಯಾಗುವದು. ಅಶಕ್ತ ಹುಡುಗರು ಬಲವಂತರಾಗುವರು. ಈ ಔಷಧದ ಮೂರು ಬಾಟ್ಲಿಗಳನ್ನು ಸೇವನೆ ಮಾಡಿದರೆ ಪೂರ್ಣ ಗುಣಬರುತ್ತದೆ. ಇದರ ವನ ಧನ ... ಸೇವನೆ ಮಾಡಿದ ನಂತರ ತಿಳಿದೀತು ೧ ಬಾಟ್ಲಿ ಬೆಲೆ ೧-೪-೦, ೩ ಬಾಟ್ಲಿಗೆ ೩-೧-೦, ಒಂದು ಡಜನ ಬಾಟ್ಲಿಗೆ ೧೧-೦-೦ ಪಟ್ಟಿಗೆ ೧ ಡಜನ್ ತೆಗೆದುಕೊಂಡರೆ ೧ ಬಾಟ್ಲಿ ಕಮಿಶನ ಕೊಡುತ್ತೇವೆ. ಟಪಾಲ ಖರ್ಚ ಪೋಷ್ಟೇಜ ಬೇರೆ ಬೀಳುತ್ತದೆ

ಏಜಂಟರ ಮುಖಾಂತರ ೧ ಬಾಟ್ಲಿಗೆ ೧-೪-೦, ೩ ಬಾಟ್ಲಿಗೆ ೩-೮-೦, ೮, ೧೨ ರೂಪಾಯಿ.

ಮ್ಯಾನೇಜರ, ದ್ರಾಕ್ಷಾಮೃತ ಕಾರ್ಯಾಲಯ, ಪೋ ನಿಪ್ಪಾಣಿ. (ಜಿಲ್ಹಾ ಬೆಳಗಾವಿ)

ಪ್ರಸಿದ್ಧ ಕೆಮಿಸ್ಟ ಮತ್ತು ಸ್ಟೋರ್ಸದೊಳಗೆ ಮತ್ತು ಕಿರಾಣಿ ಅಂಗಡಿಯಲ್ಲಿ ಸಿಗುವದು

ಕುಮಟಾ ಏಜಂಟ — ... ಏಜಂಟ.— ಗೋಕರ್ಣ ಏಜಂಟ.—

ನ್ಯೂಸಪ್ಲಾಯ ಏಜನ್ಸಿ. ಎಸ್. ಎಲ್. ಧಾಕಪ್ಪನವರ ಬ್ರದರ್ಸ ವಾಸುದೇವ ಶೇಷ ಕಾಮತ.

Siromani Udipi Narayanacharya

CHAUKHAMBA, BENARES CITY

SUN & CO
BINARES CITY

ಮಹಾಕಾಳಯಂತ್ರ, ರುದ್ರನೇತ್ರ ಸ್ವಪ್ನವಾದ ರುದ್ರಾಕ್ಷಿಯನ್ನು ಧರಿಸಿಕೊಂಡು ತಮ್ಮ ಸಮಸ್ತ ಮನೋರಥವನ್ನು ಹೊಂದಿಕೊ ಳಿರಿ. 108 ಸರ 1ಕ್ಕೆ 0-6-0 ಯಿಂದ 10 ರೂಪಾಯಿ ವರೆಗೆ ಇದು ಸಣ್ಣ ದಾಗುತ್ತ ಆಗುತ್ತ ಕ್ರಯ ಹೆಚ್ಚುವದು. ಕಂಠಿ ಸರ 32 ದರ1ಕ್ಕೆ ರೂ.0-8-0ಯಿಂದ ರೂ 100. ವರೆಗೆ ಗೌರಿಶಂಕರ 1ಕ್ಕೆ ರೂ. 3-8-0ರಿಂದ 350 ವರೆಗೆ ಮತ್ತು ಬೇರೆ ಮಾಲುಗಳ ವಿವರ ತಿಳಿಯಲು ಅಪೇಕ್ಷಿಸುವವರು 0-1-0ಸ್ಟಾಂಪು ಕಳಿಸಿದರೆ, 1ಕಾಶೀಸಕ್ತ, 1ವಿಶ್ವೇಶ್ವರನ ಪಟ, ನಮ್ಮ ಕೆಟಲಾಗು ಸಹ ಇನಾಂ ಕಳಿಸಲಾಗುವದು ಪತ್ತೆ.—

ಶಿರೋಮಣಿ ನಾರಾಯಣಾಚಾರ್ಯ,
ಚೌಖಾಂಬಾ, ಕಾಶೀ ಕ್ಷೇತ್ರ

ಆಯುರ್ಧನ್ವಂತರಿ ಔಷಧಾಲಯ, ಕುಮಟಾ.

ನಮ್ಮಲ್ಲಿ ಆಯುರ್ವೇದ ಪದ್ಧತಿಯಿಂದ ಶಾಸ್ತ್ರೋಕ್ತ ತಯಾರಿಸಿದ ಔಷಧಗಳು
ಮಾರಾಟಕ್ಕೆ ಸಿದ್ಧವಿರುವವು ಬೇಕಾದವರು ತರಿಸಿಕೊಂಡು ಅನುಭವ ಪಡೆಯಬೇಕು

ಚ್ಯವನಪ್ರಾಶಾವಲೇಹ— ರತ್ತಲ ೧ಕ್ಕೆ	ರೂ ೩-೮-೦
ಅಶ್ವಗಂಧಿಮಿಶ್ರ ಕುಷ್ಮಾಂಡಪಾಕ— ರತ್ತಲ ಕ್ಕೆ	ರೂ. ೩-೮-೦.
ಮಹಾ ನಾರಾಯಣ ತೈಲ— ೬೦ ತೊಲೆ ಬಾಟ್ಲಿ ಕ್ಕೆ ...	ರೂ ೬-೦-೦.
ಹಿಮಸಾಗರ ತೈಲ— ೬೦ ತೊಲೆಗೆ	ರೂ. ೬-೦-೦
ಬೃಹತ್ ಭೃಂಗರಾಜ ತೈಲ— ೬೦ ತೊಲೆಗೆ	ರೂ ೩-೦-೦.

ಆರ್ಡರಿನ ಜೊತೆಗೆ ಅರ್ಧ ಹಣ ಕಳಿಸಬೇಕು ರೋಗಿಗಳು ತಮ್ಮ ಪ್ರಕೃತಿಮಾನ ಸವಿಸ್ತರವಾಗಿ
ಬರೆದು ತಿಳಿಸಿದಲ್ಲಿ ಯೋಗ್ಯ ಔಷಧಗಳು (ಅನುಪಾನ ಸಹಿತ) ಕಳುಹಿಸಿಕೊಡಲಾಗುವದು

ನಮ್ಮ ಪತ್ತೆ:— ಸಿ. ಅಚ್ಯುತ ಪಂಡಿತ,
ಆಯುರ್ಧನ್ವಂತರಿ ಔಷಧಾಲಯ, ಕುಮಟಾ.

NAIK & CO.'S MOTOR SERVICE.

Honavar to Dharwar! Dharwar to Honavar!!

HAS BEEN OPENED FROM

1st SEPTEMBER 1931.

ನಾಯ್ಕ ಎಂಡ್ ಕೋನ್ ಮೋಟರ ಸರ್ವಿಸ್.

ಹೊನ್ನಾವರದಿಂದ ಧಾರವಾಡಕ್ಕೆ! ಧಾರವಾಡದಿಂದ ಹೊನ್ನಾವರಕ್ಕೆ!

ಇದೇ ಸಪ್ಟಂಬರ ತಾ ೧ನೇಯಿಂದ ಸರ್ವಿಸ್ ಚಾಲು ಆಗಿದೆ!!

ಹೊಸ ಹೊಸ ಲೋರಿಗಳು!] [ಬಹು ಸುಖಕರ ಪ್ರಯಾಣ!

ಅನೇಕ ಜನರ ಆಗ್ರಹದ ಮೇರೆಗೆ ಪ್ರಯಾಣಸ್ಥರ ಅನುಕೂಲತೆಗಾಗಿಯೇ

ಈ ಸರ್ವಿಸ್ ಹೊಸದಾಗಿ ಚಾಲು ಮಾಡಿರುತ್ತದೆ!!

ಈ ಸರ್ವಿಸಿನ ಒಂದು ಮೋಟರವು ಪ್ರತಿ ದಿನ ಬೆಳಿಗ್ಗೆ ಹೊನ್ನಾವರದಿಂದ ೭ ಘಂಟೆಗೆ ಹೊರಟು, ಕುಮಟಾ ಶಿರ್ಸಿ ಮುಂಡಗೋಡ ಮಾರ್ಗವಾಗಿ ಹುಬ್ಬಳ್ಳಿಗೆ ಹೋಗಿ ಧಾರವಾಡಕ್ಕೆ ಸಾಯಂಕಾಲ ೬ ಘಂಟೆ ಮುಟ್ಟುವದು. ಅದರಂತೆಯೇ ಪ್ರತಿ ದಿವಸ ಬೆಳಗಿನ ೬|| ಘಂಟೆಗೆ ಧಾರವಾಡದಿಂದ ಹೊರಟು ಹುಬ್ಬಳ್ಳಿ-ಮುಂಡಗೋಡ ಶಿರ್ಸಿ ಮಾರ್ಗವಾಗಿ [illegible] ಹೊನ್ನಾವರಕ್ಕೆ ೬ ಘಂಟೆಗೆ ತಲ್ಪುವದು. ಪ್ರಯಾಣಸ್ಥರ ಅನುಕೂಲತೆಯ ಬಗ್ಗೆ ಆದಷ್ಟು [illegible] ಹಾಗು ಪ್ರಯಾಣಸ್ಥರ ಲಗೇಜ ಯೋಗ್ಯ [illegible] ಕೂಡು ಆದಷ್ಟು [illegible] ಈ ಸರ್ವಿಸು ಪ್ರಯಾಣಸ್ಥರಿಗೆ ವಿಶೇಷ ಅನುಕೂಲವಾಗಿದ್ದಿರುತ್ತದೆ. ಕಾರಣ, ಈ ಸರ್ವಿಸಿಗೆ ಎಲ್ಲರೂ ಸಹಾನುಭೂತಿಯಿಂದ ಪ್ರೋತ್ಸಾಹಿಸಬೇಕಾಗಿ ವಿನಂತಿ

ಗೋಕರ್ಣ ಹಾಗು ಮಂಗಳೂರ ಲ್ಯಾನಿಗೆ ನಮ್ಮ ಗಾಡಿಗಳ ಕನೆಕ್ಷನ್ ಇದೆ

ಈ ಸರ್ವಿಸಿನ [illegible] ಸಿಗುವವು!!

Lorries can be had for special hire!!

ಟಿಕೀಟು ಸಿಗುವ ಸ್ಥಳಗಳು:—

ಹೊನ್ನಾವರದಿಂದ ಲೋರಿ ಹೊರಡುವ		
ವೇಳೆ	ಸ್ಥಳ	ಏಜಂಟ
7 A.M.	ಹೊನ್ನಾವರ	ಎಸ್ ಎಮ್ ಪಂಡಿತ, ಮಗ್ಗಾರಕೇರಿ
8 30 A.M.	ಕುಮಟಾ	ದಿ ರೋಯಲ್ ಸೋಡಾ ವೆಕ್ಟರಿ
1 P.M.	ಶಿರ್ಸಿ	ನಾಯ್ಕ ಬ್ರದರ್ಸ ಮೋಟರ ಆಫೀಸ, ಮೋಟರ ಸ್ಟೆಂಡ
3 P.M.	ಮುಂಡಗೋಡ	ನಾಯ್ಕ ಬ್ರದರ್ಸ ಮೋಟರ ಆಫೀಸ
5 P.M.	ಹುಬ್ಬಳ್ಳಿ	ನಾಯ್ಕ ಬ್ರದರ್ಸ ಮೋಟರ ಆಫೀಸ.
6 P.M.	ಧಾರವಾಡ	C/o ಯೂನಿಯನ್ ಫಾರ್ಮಸಿ

ಧಾರವಾಡದಿಂದ ಲೋರಿ ಹೊರಡುವ		
ವೇಳೆ	ಸ್ಥಳ	ಏಜಂಟ
6 30 A.M.	ಧಾರವಾಡ	C/o ಯೂನಿಯನ್ ಫಾರ್ಮಸಿ
7-20 A.M.	ಹುಬ್ಬಳ್ಳಿ	ನಾಯ್ಕ ಬ್ರದರ್ಸ ಮೋಟರ ಆಫೀಸ
10-30 A.M.	ಮುಂಡಗೋಡ	ನಾಯ್ಕ ಬ್ರದರ್ಸ ಮೋಟರ ಆಫೀಸ
2 30 P.M.	ಶಿರ್ಸಿ	ನಾಯ್ಕ ಬ್ರದರ್ಸ ಮೋಟರ ಆಫೀಸ ಮೋಟರಸ್ಟೆಂಡ
5 P.M.	ಕುಮಟಾ	ದಿ ರೋಯಲ್ ಸೋಡಾ ಫೆಕ್ಟರಿ
6 P.M.	ಹೊನ್ನಾವರ	ಎಸ್ ಎಮ್ ಪಂಡಿತ ಮಗ್ಗಾರಕೇರಿ,

ಎಚ್. ಡಿ. ನಾಯಕ್, ಶಿರ್ಸಿ,

ಮೆನೇಜರ

ಸೂಚನೆ — ವಿಶೇಷ ಮಾಹಿತಿ ಸದರಿ ಸ್ಥಳಗಳಲ್ಲಿಯ ಏಜಂಟರ ಕಡೆಗೆ ಸಿಗುವವು

ಇದನ್ನು ಪಾಂಡುರಂಗ ಕೃಷ್ಣ ಭಾಸಭಾಗ (ಸಂ. ಪ್ರಕಾ) ಇವರು "[illegible]" ದಲ್ಲಿ ಮುದ್ರಿಸಿ ಪ್ರಕಾಶಿಸಿದರು

Reg No B 1270.

…September, 1931

ವರ್ಷ ೧೬

ಸಂಚಿಕೆ ೪೭

ಕಾನಡಾವೃತ್ತ

THE KANARA NEWS.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेन्द्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಪತ್ರದ ದರಗಳು

ಕುಮಟೆಯಲ್ಲಿ ಆಗಾವು
ರೂಪಾಯಿ 2-4-0
ಮನೆಯಾರ್ಡರಿಯಿಂದ
ರೂ 3-0-0
ವ್ಹಿ. ಪಿ. ಅಂಚೆವೆಚ್ಚ ಸಹಿತ
ರೂಪಾಯಿ 3-2-0
ಬಿಡಿ ಸಂಚಿಕೆಗೆ 0-1-0
ಹಳೇ ಸಂಚಿಕೆಗೆ 0-2-0

ಜಾಹೀರಾತುಗಳ ದರ

ಕನ್ನಡ, ಇಂಗ್ಲಿಷ ಪ್ರಾಕಾ ಟೈಪಿನ (೧೫ ಎಮ್ ಉದ್ದ) ೪ ಸಾಲುಗಳವರೆಗೆ ರೂ 1 0 0
೪ ನಂತ್ರ ಪ್ರತಿಸಾಲಿಗೆ 0 2 0
ಹೆಚ್ಚಿಗಂದ ಸಾಲು ಎಷ್ಟು ದೊಡ್ಡದಿರುವವೋ ಆ ಪ್ರಮಾಣದಿಂದ ಅಷ್ಟು ಸಾಲುಗಳು ಹಿಡಿಯಲ್ಪಡುವವು
ಬಾಕಿ ಜಾಹಿರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು

—(ಕುಮಟಾ— ಕಾನಡಾವೃತ್ತ ಸೋಮವಾರ, ತಾರೀಖು ೨೮ ಮಾಹೆ ಸಪ್ಟಂಬರ ಸನ್ ೧೯೩೧ನೇ ಇಸವಿ.)—

ಜಗತ್ತಿನಲ್ಲಿ ಪವಿತ್ರ ಸ್ತ್ರೀಯರಿಲ್ಲವೇ?

ಸೌಭಾಗ್ಯ ತಿಲಕ

ಪಂಜಾಬ ಸಾಮಾಜಿಕ ಕಾದಂಬರಿಯನ್ನು ಓದಿರಿ ಓದಿಸಿರಿ ಪವಿತ್ರತೆಯನ್ನು ಕಾಣುವಿರಿ ಅವರ ಸೇರಿ ಎಂಬಂಥ ಅಪರಾಧ ಒಪ್ಪತ್ತಿನಂಬದನ್ನು ಪತ್ನಿಗಾ ಪ್ರತ್ಯಕ್ಷ ಕಾಯ್ದುಕೊಂಡು ಅವನಲ್ಲಿ ತನ್ನ ಸತ್ಪ್ರಭಾವದಿಂದ ದೋಷ ನಿವಾರಿಸುವರೆಂಬುದನ್ನು ನೀವಿದರಲ್ಲಿ ಓದಲು ನಿಮ್ಮ ಹೃದಯವು ಕರಗಿ ನಿಂತಾಗದಿರದು ಪಾತ್ರಗಳನ್ನು ಚಿತ್ರಿಸಿದ್ದೂ ಮೊಟ್ಟಮೊದಲಿಗಾಗಿ ಹೋದ ನಿಮ್ಮ ಬಂಧುಗಳ ಕಣ್ಣು ಪನ್ನು ನೋಡಿ ನಿಮ್ಮ ನೇತ್ರದಲ್ಲಿ ಕಡಿಯದಿರದು! ಬೆಲೆ ೧ ರೂ ಇದಲ್ಲದೆ ನಮ್ಮಲ್ಲಿ ವಿಮಲಾ, ರಾಜದಂಡ, ಭಗವಾನದಾಸ, ನಾಯಿನಾಡು, ಶಕ್ತಿಮಯಿ, ಭ್ರತಪ್ರಕರಣ, ಬಲ್ಲಾಳ ಲಕಣಿ, ಹಿರಂಗಿಗೆ ಉತ್ಪತ್ತಿ, ಇತ್ಯ ಪ್ರಯೋಜನಕ್ಕೆ ೧ ರೂ ಹಾಗು ಐತಿಹಾಸಿಕ, ಸಾಮಾಜಿಕ, ಪೌರಾಣಿಕ, ಪತ್ತೇದಾರಿ ಕಾದಂಬರಿಗಳು, ನಾಟಕಗಳು, ನಾಣ್ಯ ಮೊದಲಾದ ಪುರಾಣ ಗ್ರಂಥಗಳು ದೊರೆಯುತ್ತವೆ ಕ್ಯಾಟಲಾಗಿಗಾಗಿ ಬರೆಯಿರಿ

ವಿಳಾಸ— ಭಿ ಹ ಕಾಳೆ. ಪ್ರೊಪ್ರೈಟರ ಶ್ರೀ ರಾಮಚಲ ಪ್ರೆಸ್ ಮತ್ತು ಗ್ರಂಥಮಾಲಾ,
ಶ್ರೀ ಆನಂದವನ ೨ ಧಾರವಾಡ

ಪ್ರೆಸಿಡೆನ್ಸಿ ಪ್ರೊವ್ಹಿಡೆಂಟ ಎಂಡ್ ಜನರಲ್
ಇನ್ಶ್ಯುರನ್ಸ ಕಂಪನಿ, ಲಿಮಿಟೆಡ್
ಹೆಡ್ ಆಫೀಸ— ಅಮ್ಯುಸ ಬಿಲ್ಡಿಂಗ,
ಬೆಲರ್ಡ ಇಸ್ಟೇಟ, ಫೋರ್ಟ, ಮುಂಬಯಿ

'ಇಂಡಿಯನ್ ಇನ್ಶ್ಯುರನ್ಸ ಜರ್ನಲ್' ಎಂಬ ಪತ್ರಿಕೆಯ ಸಪ್ಟಂಬರ ಸಂಚಿಕೆಯಲ್ಲಿ ಬರೆದದ್ದೇನಂದರೆ –

ಜೀವ ವಿಮೆ ಕಂಪನಿಯ ಸಾಂಪತ್ತಿಕ ಸ್ಥಿತಿಯನ್ನು ಪರೀಕ್ಷಿಸಬೇಕಾದರೆ, ವಿಮೆಯ ಲೆಖ್ಖದ ಮಾಹಿತಿಯಿದ್ದ ಕವಾಸಕರು ಮಾಡಿದ ಕಂಪನಿಯ ಸ್ಥಿತಿಗತಿಯು ಪತ್ರಿಕೆಯನ್ನೋದಬೇಕು ಪ್ರೊವ್ಹಿಡೆಂಟ ಸೊಸೈಟಿಯ ಸ್ಥಿತಿಯಾದರೂ ಹಾಗೆಯೇ 'ದಿ ಪ್ರೆಸಿಡೆನ್ಸಿ ಪ್ರೊವ್ಹಿಡೆಂಟ' ಕಂಪನಿಯು ಇಂಥ ಪರೀಕ್ಷೆಯಲ್ಲಿ ಈಗ ತೇರ್ಗಡೆ ಹೊಂದಿರುವದು ಇದೇ ಹಿಂದ ಸ್ಥಾನದಲ್ಲಿ ಚಲೋ ಸಮೃದ್ಧ ಸ್ಥಿತಿಯಲ್ಲಿದ ಪ್ರೊವ್ಹಿಡೆಂಟ ಕಂಪನಿಯೆಂದರೆ ಇದೊಂದೇ ಎಂದು ನಿರ್ವಿವಾದವಾಗಿ ಸಿದ್ಧವಾದ ಮಾತ ವಿಮೆ ಇಳಿಸುವ ಜನರಿಗಾಗಿ ಈ ಕಂಪನಿಯು ಭದ್ರತೆಯು ಹಾದರಿಯನ್ನೊದ ಸ್ಥಾಪಿಸಿದೆಂದು ಹೇಳಬಹುದು ಸ್ತ್ರೀ-ಪುರುಷರೂ, ಮಕ್ಕಳೂ ವಿಮೆ ಇಳಿಸಬಹುದು

ಪ್ರೀಮಿಯಮ್ – ರೂ ೨, ೧, ೦-೮-೦.

ಮಹಿನಕರೊಂದ ಕಂಪನಿಯು ಕೆಲಸ ಮಾಡುವದರಿಂದ ಚಲೋ ಪ್ರತಿಫಲ ಸಿಗುತ್ತೆ

The Canara Industrial & Banking Syndicate, Ltd.

Head Office— UDIPI
Branches— BRAHMAVAR KUMTA & KARWAR

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ ಸಿಂಡಿಕೇಟ, ಲಿಮಿಟೆಡ್

Laxmi Provident Deposit. : ಲಕ್ಷ್ಮೀ ಆಪನ್ನಿಧಿಯು.

ನಿಮ್ಮ ವೃದ್ಧಾಪ್ಯದ ನಿಸ್ಸಹಾಯಕತ್ವದ ಕಾಲಕ್ಕಾಗಿ, ದಿನದಿನಕ್ಕೂ ಬೆಳೆವ ತನ್ನ ಭಾವೀ ಗಂಡನ ಮನೆ ನಿಮ್ಮ ಮಕ್ಕಳ ಪುತ್ರರ ಪ ನಿಮ್ಮ ಮಗಳ ಮದುವೆಗಾಗಿ, ೨ ಲೆಯಲ್ಲಿ ಜನಿಸಿದ ವರ್ಷದಿಂದ ಬೆಳೆಯುತ್ತಿರುವ ನಿಮ್ಮ ಮಗನ ವಿದ್ಯಾಭ್ಯಾಸಕ್ಕಾಗಿ ನೀವೇನು ಮಾಡುವಿರಿ? ಲಕ್ಷ್ಮೀ ಆಪನ್ನಿಧಿಯು—

ನಿಮ್ಮ ಆದಾಯದ ಒಂದು ಭಾಗವನ್ನು ಕೂಡಿಸಿಡುವ ಅಭ್ಯಾಸದಿಂದ ನಿಮ್ಮಿಂದ ಉಳಿಸಿದ ಹಣವನ್ನು ನಮ್ಮ ಬೇಂಕಿನ ಲಕ್ಷ್ಮೀ ಆಪನ್ನಿಧಿಯಲ್ಲಿ ಇಟ್ಟರೆ ಚಕ್ರಬಡ್ಡಿಯಿಂದ ಬೆಳೆದು ೧೦ ವರುಷಗಳಲ್ಲಿ ಸಾಕಷ್ಟು ಹಣ ನಿಮಗೆ ದೊರೆಯುವದು —

ಅಂದರೆ,

ರೂ	೨೫ —	೧೦ ವರುಷಗಳಲ್ಲಿ	ರೂ	೪೫/—
”	೫೦ —	೧೦	”	೯೦/—
”	೧೦೦/—	೧೦	”	೧೮೦/—
”	೨೦೦/—	೧೦	”	೩೬೦/—

ಎಂದಿಷ್ಟು

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ

Kumta,
16—3—1931

A. S. KINI,
Agent, KUMTA BRANCH,
The Canara Industrial & Banking Syndicate Ltd. KUMTA

EAST & WEST INSURANCE CO., LTD. BOMBAY.

ಈಸ್ಟ ಎಂಡ್ ವೆಸ್ಟ ಇನ್ಶ್ಯೂರನ್ಸ ಕಂಪನಿ ಲಿಮಿಟೆಡ್, ಮುಂಬಯಿ.

(ಸರಕಾರಿ ಪ್ರತಿಷ್ಠಿತ, ೧೯೧೩ರಲ್ಲಿ ಹಿಂದುಸ್ತಾನದಲ್ಲಿ ರಜಿಸ್ಟರಾದದ್ದು)

ಸಂಪೂರ್ಣವಾಗಿ ಹಿಂದೀ ಕಂಪನಿ!

ಹಿಂದೀಯರಿಂದ ಹಿಂದೀಯರ ಹಿತಕ್ಕಾಗಿ ನಡಿಸಲ್ಪಟ್ಟಿದ್ದು,
ವಿಮೆದಾರರಿಗೆ ತೀರ ಕಡಿಮೆ ಪ್ರೀಮಿಯಮ್ಮಿನಿಂದ ಅಧಿಕವಾದ ಲಾಭವಾಗುವಂತೆ
ಈ ಕಂಪನಿಯಲ್ಲಿ ಏರ್ಪಾಟಾಗಿರುತ್ತೆ!

ಈ ಕಂಪನಿಯಲ್ಲಿ ವಿಮೆಯನ್ನು ಇಳಿಸಿದರೆ ನಿಮ್ಮ ನಿರಂತರವಾದಲ್ಲಿ,
ಮುಂದಿನ ಕಾಲದಲ್ಲಿ ನಿಮಗೆ ಸಂಪೂರ್ಣ ಸೌಕರ್ಯ ಸಿಗುವದು!!
ಈ ಕಂಪನಿಯ ಪ್ರತಿನಿಧಿಗಳಿದ್ದಲ್ಲಿ, ಮನೆದಾರ ಹಾಗು ವಕ್ಷ ಏಜಂಟರು
ಬೇಕಾಗಿರುತ್ತಾರೆ ಅವರಿಗೆ ಒಳ್ಳೇ ಸವಲತ್ತು ಕೊಡಲ್ಪಡುವದು

ವಿಶೇಷ ಮಾಹಿತಿಯ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಕುಮಟಾ,
ತಾ ೮-೯-೩೧

ಪಿ. ಎಸ್. ಶ್ಯಾನಭಾಗ,
ಉತ್ತರ ಕನ್ನಡ, ಬೆಳಗಾಂವ, ವಿಜಾಪುರ, ಧಾರವಾಡ ಜಿಲ್ಲೆಗಳ
ಪ್ರಾಮುಖ್ಯ ಏಜಂಟರು

ಕಾಸಡಾನ್ಪತ್ರ.

ಪ್ರಜಾಪತಿ [illegible]

ದುಡ್ಡಿಗೆ ಸಂಕ್ರಾಂತಿ!

[illegible]

ಈಗ [illegible] ಇಂಗ್ಲೆಂಡ [illegible] ಇಂಗ್ಲೆಂಡ ದೇಶದ [illegible] ಬ್ರಿಟಿಶ ಸಾಮ್ರಾಜ್ಯ [illegible] ಇಂಗ್ಲೆಂಡ ದೇಶದಿಂದ [illegible] ಬ್ರಿಟಿಶ [illegible] ಪ ಮೊರಪ್ರತಿಷ್ಠಾಗ್ಯೂ [illegible] ತಕ್ಕಷ್ಟು ವಿಶ್ವಾಸ [illegible] ನ್ಯ ಪಾಲದ ಸಾಹುಕಾರರ ಕಡೆಯಿಂದ ಬ್ರಿಟಿಶ [illegible] ಸಿಗಿಸಿ ಅಗ್ಗ ಬಡ್ಡಿಯಿಂದ ದೊಡ್ಡ ಮೊತ್ತದ ಸಾಲ ಪಡೆದು ವರ್ತಕರಿಗೆ [illegible] ಉದ್ಯೋಗ ನಡೆದಿತ್ತು [illegible] ಸಂಕಾರದ ಜಮಾ ಖರ್ಚಿನ ಸ್ಥಿತಿ ಸ್ವಲ್ಪ [illegible] ಪರದೇಶಿ ಸಾಹುಕಾರರು ತಮ್ಮ ರೊಕ್ಕದ ಹಣಗಳನ್ನು ರವಸದಿಂದ ಹಿಂದೆಗೆದುಕೊಂಡರು. [illegible] ಪ್ರಾನ್ಸ ದೇಶಕ್ಕೆ ೫ ಕೋಟಿ ಪವನು ರವಾನೆ ಇನ್ನೂ ಪ್ರವಾಹ ತಡೆಯಲಿಲ್ಲ. ಈ ಪ್ರಕಾರ ಇದ್ದ ಚಿನ್ನದ ಪಾಠಹೋದರೆ ಮುಂದಿನ ಸ್ಥಿತಿ [illegible] ಕಷ್ಟಕ್ಕೊಳಗಾಗುವ ರೀತಿಯನ್ನು ಪಾರ್ಲಿಮೆಂಟದ ಸ್ನೋಡನ್ ಸಾಹೇಬರು ತಿಳಿಸಿ ಕೊಟ್ಟಿತ್ತು, ಮಿಕಬೋನಲ್ಡರು ಹೊಸ ಪ್ರಧಾನರಾದ ದಳವನ್ನು ಏರ್ಪಡಿಸಿದರು. ಆದಾಗ್ಯೂ, ಈ ಪ್ರವಾಹ ಕ್ಕೆ ತಡೆಬೀಳಲಿಲ್ಲ. ಮುಂದಾಗೆಂಬ ಪ್ರಧಾನ ಮಂಡಲವು ಆಲೋಚಿಸತೊಡಗಿತು. ಎಲ್ಲೆಲ್ಲಿಯೂ ಗುಪ್ತಾಲೋಚನೆಗಳು ನಡೆದವು.

ಇಂಗ್ಲೆಂಡದಲ್ಲಿ ಒಂದು ನಿಯಮ. ಪವನಿನಲ್ಲಿ ಪವನು ಚಿನ್ನದ ಬೆಲೆಯ ಚಿನ್ನವಿರಬೇಕು. ಚಿನ್ನದ ದರ ಹೆಚ್ಚು-ಕಡಿಮೆಯಾದರೆ, ಪವನಿನ ಬೆಲೆಯನ್ನು ಸ್ಥಿರಪಡಿಸುವದಕ್ಕಾಗಿ ಇಂಗ್ಲೆಂಡ ಬೇಂಕು ಯಾವ ಸಾಮ್ರಾಜ್ಯ ಬೇಂಕು ಚಿನ್ನವನ್ನು ನಿಶ್ಚಿತ ಬೆಲೆಗೆ ಕೊಡುತ್ತಿತ್ತು, ಅದೇ ಬೆಲೆಗೆ ಕೊಳ್ಳುತ್ತಿದೆ. ಚಿನ್ನದ ದರದಲ್ಲಿ ಬೇಂಕು ಏನನ್ನು ಸ್ವೀಕರಿಸುತ್ತಿತ್ತು, ಬೇಕಾದಾಗ ಅದನ್ನು ಮಾರುತ್ತಿತ್ತು. ಬ್ರಿಟಿಶ ದೇಶದ ವ್ಯಾಪಾರವು ಹೆಚ್ಚು-ಕಡಿಮೆಯಾದ ಹಾಗೆ ಪವನಿನ ಬೆಲೆ ಹೆಚ್ಚು-ಕಡಿಮೆ ಆಗುತ್ತಿದೆ. ಆದರೆ, ಇತ್ತಲಾಗಿ ಚಿನ್ನದ ದರ ಏರಿತು. ದೇಶದೊಳಗಿನ ವರ್ತಕರು ಕೂಡ ಸರಿಯಾದ ಬೆಲೆಯಿಂದ ಚಿನ್ನವನ್ನು ರಫ್ತು ಮಾಡಬೇಕಾಯಿತು, ಬೇರೆ ಉಪಾಯವಿರಲಿಲ್ಲ. ಇದರಿಂದ ಚಿನ್ನಕ್ಕೆ ಗಿರಾಕಿ ಏರಿಯಿತು. ಅದಕ್ಕೆ ತಕ್ಕದ್ದಾಗಿ ಚಿನ್ನದ ಪೂರವಠೆಯಿರಲಿಲ್ಲ. ಇಂಗ್ಲೆಂಡ ಬೇಂಕು ಕಟ್ಟಳೆಯಂತೆ ಒಂದೇ ದರದಿಂದ ಪವನಿಗೆ ಬೆಲೆಯನ್ನು ಸ್ಥಿರಪಡಿಸುವದಕ್ಕಾಗಿ ಚಿನ್ನವನ್ನು ಸರಕಾರದ ದರದಿಂದ ಮಾರಿತು. ಎಷ್ಟು ಮಾರಿದರೂ, ಚಿನ್ನದ ಗಿರಾಕಿ ಕುಗ್ಗಲಿಲ್ಲ. [illegible] ಮತ್ತು ಕೊಡುತ್ತ ಹೋದರೆ, ಬಿಕ್ಕಟ್ಟಿನ ಸಮಯ ಬೇಂಕು [illegible] ಇದರಿಂದ ಸಮಸ್ತ ಗಣೀಜಿಗೆ [illegible] ಪ್ರಮಾಣದಂತೆ ಅದರ ದರ [illegible] ಕಡಿಮೆಯಾಗಲೆಂದು ಸಾಮ್ರಾಜ್ಯ ಸರಕಾರ [illegible] ಸಿವ ಮನ ದರ [illegible] ಸರಕಾರ [illegible] ಇದರಿಂದ [illegible] ಬ್ರಿಟಿಶ ಹಿಂದುಸ್ಥಾನ [illegible] ರಾಜಿ [illegible] ಗಿದೆ.

[illegible] ಪವನಿನ ದರ [illegible] ಮಾರ್ಕಿನಲ್ಲಿ ಪವನು ಬೆಲೆಯು ಬಂಗಾರದಲ್ಲಿ [illegible] ಪವನು ಸಾಮ್ರಾಜ್ಯದ [illegible] ಸರಕು [illegible] ಸರಕುಗಳು [illegible] ಕೊಯಮರಿಗೆ [illegible] ಪ್ರತಿಸಲ [illegible] ಹಿಸು ಪವನ [illegible] ಚಿನ್ನಕ್ಕೆ ಸ್ವಲ್ಪ ತಡ [illegible] ಯಾಕಂದರೆ ಪವನು ಚಿಕ್ಕದ ಕಾಲದ ರಕ್ಷಣೆಗ ಪವನು [illegible] ರಿಂದ ಸ ವ್ಯಾಪಾರದ ರೂಪದ ರಕಮನ್ನು ಹಿಂತೆಗೆದ [illegible] ಗಳಿಸಲಾರಂಭಿಸಿದರು. ಆದರ ಈ ಉಪಾಯದಿಂದ ಬ್ರಿಟಿಶ ರಾಷ್ಟ್ರವು ಪತ್ತುಗೇಡಾಯಿತು. ಪವನು ಬೆಲೆಯ ನಷ್ಟ ಪವನಿನಂತೆಯೇ ಇಳಿಯಿತು. ಈ ಪ್ರಕಾರ ಬ್ರಿಟಿಶ ಜನಾಂಗದವರಿಗೆ ಬಹು ಹೊಡೆತ ಕೊಟ್ಟಿತು. ಆದಾಗ್ಯೂ ಬ್ರಿಟಿಶ ದೇಶಕ್ಕೆ ಇದರಿಂದ ಲಾಭವಿದ ಪವನಿನ ದರ ಕುಗ್ಗಿ [illegible] ದರ ಏರಿ ಸರಕುಗಳ ಪರಸ್ಪರ ಏರಿಳಿತದಿಂದ ಸರಕುಗಳನ್ನು ರಫ್ತು ಮಾಡಲು ಅನುಕೂಲವಾಯಿತು. ಸರಕುಗಳು ಹೆಚ್ಚಾಗಿ ರಫ್ತಾದರೆ, ಅವುಗಳು ರಫ್ತುಗಳು ಬಾಯಿಗೂಡಿ ಬ್ರಿಟಿಶ ಜನಾಂಗಕ್ಕೆ ಹಿತವಾಗುವಂತಿದೆ.

ಆದರೆ, ನಮ್ಮ ಹಿಂದುಸ್ಥಾನದ ಅವಸ್ಥೆಯೇನು? ಹಿಂದುಸ್ಥಾನ ಸರಕಾರದ ಹಾಗು ಪ್ರಾಂತಿಕ ಸರಕಾರಗಳ ಜಮಾ-ಖರ್ಚು ಬಾಯಿಗೂಡದೆ ನಮ್ಮ ರೂಪಾಯಿಗೂ ಬ್ರಿಟಿಶರ ಪವನಿಗೂ ಋಣಾನುಬಂಧವಿದೆ. ಪವನಿಗೆ ಹದಿನೆಂಟು ಪೆನ್ಸಿನಂತೆ ರೂಪಾಯಿ ಬೆಲೆಯಿದ್ದು, ಇತ್ತ ೧೫ ರೂಪಾಯಿ ಇಪ್ಪತ್ತಿಂದ ರೂಪಾಯಿಗೆ ೧೮ ಪೆನ್ಸು ಅಂದರೆ, ಪವನಿಗೆ ರೂ ೧೩ ಬೆಲೆಯಾಗದೆ. ಇದು ಕೃತ್ರಿಮ ಬೆಲೆ. ಇದಕ್ಕೆ ಪ್ರತ್ಯಕ್ಷ ಪವನು ಕೈಗೆ ದೊರೆಯುವದಿಲ್ಲ. ಹಿಂದುಸ್ಥಾನ ಸರಕಾರವು ವರ್ತಕರಿಗೆ ಈ ದರದಿಂದ ಕೌನ್ಸಿಲ್ ಬಿಲ್ಲುಗಳನ್ನು ಮಾತ್ರ ಮಾರುತ್ತದೆ. ಇದರಿಂದ ಬ್ರಿಟಿಶ ವರ್ತಕರಿಗೆ ಮಾತ್ರ ಲಾಭ. ಮುಂಚೆ ೧೫ ರೂಪಾಯಿಗೆ ಸಿಗುವ ಅವರ ಪವನು ಇಲ್ಲಿ ೧೩ ರೂ ಗಳಿಗೆ ಸಿಗುವಂತಾಯಿತು. ಇದರಿಂದ ಹಿಂದುಸ್ಥಾನ ಸರಕಾರಕ್ಕೆ ಬಹಳ ನಷ್ಟ. ಪವನಿನ ಬೆಲೆ ರೂ ೧೫ರ ದರಕ್ಕಿಂತ ಹೆಚ್ಚಿರುವದರಿಂದ ಹಿಂದುಸ್ಥಾನ ಸರಕಾರಕ್ಕೆ ಅಷ್ಟು ನಷ್ಟ ಬಂತು. ಇಲ್ಲಿಂದ ಯುರೋಪಿಯನ್ ಅಧಿಕಾರಿಗಳ ಸಂಬಳ-ಪೆನ್ಶನ್ ಮುಂತಾದ ರಕಮುಗಳು ರವಾನೆಯಾಗುತ್ತವೆ. ಅವರ ಸಂಬಳ ರೂಪಾಯಿ ಲೆಕ್ಕದಂತೆ, ೧೫ ರೂಪಾಯಿಗೆ ಇಂಗ್ಲೆಂಡದಲ್ಲಿ ೧ ಪವನು ಸಿಗುವ ಬದಲು, ಅವರಿಗೆ ರೂ ೧೩ಕ್ಕೆ ಪವನು ಸಿಗಲಾರಂಭಿಸಿತು. ಹೀಗೆ ಸಹ ಅವರಿಗೆ ಲಾಭವಾಯಿತು. ಅವರಿಗೆ ಲಾಭ, ಹಿಂದುಸ್ಥಾನಕ್ಕೆ ನಷ್ಟ. ಈ ಪ್ರಕಾರದಿಂದ ಹಿಂದುಸ್ಥಾನವು ಸುಲಿಯಲ್ಪಟ್ಟಿತೆಂದು ಜನರು ಬೊಬ್ಬಿರಿದಾಗ್ಯೂ, ಸರಕಾರವು ಕಿವಿಗೊಡಲಿಲ್ಲ. ಸರ್ ಪುರುಷೋತ್ತಮದಾಸ ಠಾಕೂರದಾಸರಂಥ ದೊಡ್ಡ ದೊಡ್ಡ ವರ್ತಕರು ಇದನ್ನು ನಿಷೇಧಿಸಿದ್ದಾರೆ. ಇದರಿಂದ ಸರಕಾರಕ್ಕೆ ಆಜ್ಞಾವಧಿ ರೂಪಾಯಿಗಳ ನಷ್ಟವಾಯಿತು. ಡಾ| ಮೂಂಜೆ ಕರಸನದಾಸರವರು ' ಕ್ರಾನಿಕಲ್ ' ಪತ್ರಿಕೆಯಲ್ಲಿ ಬರೆದಂತೆ, ಸರಕಾರದಿಂದ ಜನರಿಗೆ ೨ ಅಬ್ಜ ೫೩ ಕೋಟಿ ರೂಪಾಯಿ ಸಲ್ಲಬೇಕು. ಸರಕಾರದ ಕಡೆ ೧ ಅಬ್ಜ ೧೧ ಕೋಟಿ ರೂಪಾಯಿಗಳ ಬೆಳ್ಳಿ—ಬೆಳ್ಳಿ ನಿಕ್ಕಿದ [illegible] ಕಾಯಿದೆಯಂತೆ ಸರಕಾರವು ನೋಟು ಹೊರಡಿಸಿದ ಕೂಡಲೆ ಅಷ್ಟು ರೂಪಾಯಿಗಳು ಕಟ್ಟಿಡಬೇಕು. ಅಥವಾ ಅದೇ ಮಾದರಿಯ ಸಪ್ರಿಟಿಯನ್ನು ಕಾದಿಡಬೇಕು. ಈ ಖಾತೆಯೊಳಗೆ ೧ ಅಬ್ಜ ೫೩ ಕೋಟಿ ಒನ್ನವಿರಬೇಕು. ಈಗ ಒಬ್ಬರೇ ೧ ಕೋಟಿ ಬೆಲೆಯ ಬಿನ್ನ ಯಾ ಚಿನ್ನದ ಬೆಪ್ರತಗಳಲ್ಲಿ ರೂಪಾಯಿಯಲ್ಲಿ ರೂಪಾಯಿ ಬೆಲೆಯು ಸ್ಥಿರವಿರುವದಿಲ್ಲ. ಸರಕಾರವು ರೂಪಾಯಿ ನಾಣ್ಯದಿಂದುಂಟಾಗುವ ಲಾಭವನ್ನು “ಗೋಲ್ಡ ಸ್ಟಾಂಡರ್ಡ ರಿಝರ್ವ” ಎಂಬ ನಿಧಿಯ [illegible] ಕಾದಿಡಬೇಕೆಂದು ಕಲ್ಪಿಸಿಯಿದೆ. ಈಗ ೨ ಅಬ್ಜ ರೂಪಾಯಿಗಳ ಪ್ರಕಾರದಲ್ಲಿದೆ ೧೪೦ ಕೋಟಿ ರೂಪಾಯಿ. ಬೆಲೆಯ ಚಿನ್ನ ಯಾ ಬೆಳ್ಳಿ ನಿಧಿಯಲ್ಲಿ ಇಟ್ಟಿರಬೇಕು, ಇಲ್ಲಿ ಇದ್ದದ್ದು ೩೦ ಕೋಟಿ. ಈ ಅಂಕಿಗಳು ತಿಗಸ್ಸ ತಾ ಹೇಳಿಕೆ ಅಂತ್ಯವಾದ ಪಕ್ಷವೆಂದು ಡಾ| ಮೂಂಜೆಯವರು ಪ್ರಕಟಿಸುತ್ತಾರೆ. ಹಿಂದುಸ್ಥಾನ ಸರಕಾರದ ಕೋಶಾಧಿಕಾರಿಗಳಾದ ಸರ್ ಜಾರ್ಜ ಶೂಸ್ಟರವರು ಸಪ್ಟೆಂಬರ ತಾ ೧೮ನೇ ಮಾಡಿದ ಭಾಷಣದಲ್ಲಿ ೧೪೦ ಕೋಟಿ ಬೆಲೆಯ ನೋಟುಗಳ ಭದ್ರತೆಯ ಬಗ್ಗೆ ೧೪೦ ಕೋಟಿ ರೂಪಾಯಿಗಳಿರುವ ವಾಗಿ ಪ್ರಕಟಿಸಿದ್ದಾರೆ. ಇದರ ನೋಟಿಂದಲೂ ಹಿಂದುಸ್ಥಾನ ಸರಕಾರದ ದತ ರಕ್ಕೆ ಭದ್ರತೆಯಿರುವದಿಲ್ಲ ವಾಗಿ ಸ್ಪಷ್ಟವಾಗುವಂತಿದೆ. ಈಗ ಹಿಂದುಸ್ಥಾನದೊಳಗೆ ೩ ಕೋಟಿ ಪವನು ಬೆಲೆಯ ಚಿನ್ನವಿದೆ. ಅದನ್ನು ಸಹ ಬ್ರಿಟಿಶ ದೇಶಕ್ಕೆ ರವಾನೆ ಮಾಡುವ ಕುಹಕ ನಡೆದದ್ದಾಗಿ ಈ ಸಲ ತುಂಬಾ ವ್ಯಸನವಾಗುತ್ತದೆ.

ಬ್ರಿಟಿಶ ಸರಕಾರವು ಪವನಿನ ಗೊಡವೆ ಬಿಟ್ಟಂತೆ ಹಿಂದುಸ್ಥಾನ ಸರಕಾರವು ರೂಪಾಯಿಯ ಗೊಡವೆ

ಯನ್ನು ಬಿಟ್ಟುಬಿಡಲು ಪ್ರಾಯಶಃ ಸಿದ್ಧರಿತ್ತು. ಪವನಿನಗೂ, ರೂಪಾಯಿಗೂ ಸರಕುಗಳ ಆಮದು-ರಫ್ತಿನ ಮೇಲೆ ಪರಸ್ಪರ ಬೆಲೆಯು ನಿಶ್ಚಯವಾಗುತ್ತಿತ್ತು. ಆದಾಗ್ಯೂ, ಭಾರತ ಮಂತ್ರಿ ಸರ್ ಸಮ್ಯುಯಲ್ ಹೋರರವರು ತಮ್ಮ ದೇಶದ ಸ್ವಾರ್ಥಕ್ಕಾಗಿ, ಬ್ರಿಟಿಶ ದೇಶದ ಸರಕುಗಳು ಅಗ್ಗವಾಗಿ ಸಿಗಬೇಕೆಂದು ಇಷ್ಟೇ ರೂಪಾಯಿ ದರದಿಂದ ಪವನಿನ ಪ್ರಮಾಣವಾಗದಾಗಿ ಪ್ರಕಟಿಸಿದ್ದಾರೆ. ವ್ಯಾಪಾರದ ಮಾನದಿಂದ ಪವನಿಗ ಇಷ್ಟು ದರವಿಲ್ಲ, ಕಾಯಿದೆಯಂತೆ ಪವನಿಗೆ ಇಷ್ಟು ದರ ಹುಟ್ಟುವದಿಲ್ಲ. ರೂಪಾಯಿಯು ಲಕ್ಷಕ್ಕೆ ಗ್ರೇನು ತೂಕ ಚಿನ್ನದ ಬೆಲೆಯಾಗಿರುವದಾಗಿ ೧೯೨೭ನೇ ಇಸವಿಯ ಕರನ್ಸಿ ಕಟ್ಟಳೆಯ ಲಕ್ಷ್ಯ. ಪವನಿಗ ಪವನು ತೂಕ ಒಪ್ಪಿಸುವಾಗ ಹೀಗ ದರವಿತ್ತು, ಈಗ ಆ ದರವಿಲ್ಲ. ಪವನಿನ ದರ ಇಳಿದದೆ, ಒಂದೆ ಮೇಲೆ ಈ ಪ್ರಮಾಣವು ತಪ್ಪಿತು. ಈಗ ಪುನಃ ಅದನ್ನೇ ಸ್ಥಿರಪಡಿಸುವದಕ್ಕಾಗಿ ಭಾರತ ಮಂತ್ರಿಗಳು ಹಟ ತೊಟ್ಟಿದ್ದಾರೆ. ಈ ಪ್ರಮಾಣ ಹಿಡಿದು ಹಿಂದುಸ್ಥಾನದೊಳಗಿದ್ದ ೩ ಕೋಟಿ ಪವನಿನ ಭಂಗಾರವನ್ನು ಸಹ ಬ್ರಿಟಿಶ ದೇಶಕ್ಕೆ ಒಯ್ದು ಹಿಂದುಸ್ಥಾನ ಸರಕಾರದ ಭದ್ರತೆಯನ್ನು ಆಮೂಲಾಗ್ರ ನಷ್ಟಪಡಿಸುವ ದುರಾಲೋಚನೆಯಲ್ಲಿದ್ದಾರೆ.

ಈ ಕುರಿತು ಹಿಂದುಸ್ಥಾನ ಸರಕಾರಕ್ಕೂ, ಭಾರತ ಮಂತ್ರಿಗಳಿಗೂ ಮತಭೇದವಾಯಿತಂತೆ. ಹಿಂದುಸ್ಥಾನ ಸರಕಾರವು ಪವನು ರೂಪಾಯಿಗಳ ಪ್ರಮಾಣವನ್ನು ಹಿಂದಿನಂತೆ ಕಾಪಾಡಲು ಅಸಾಧ್ಯವೆಂದು ತಂತಿಯಿಂದ ತಿಳಿಸಿತು, ಇದಕ್ಕೆ ಭಾರತ ಮಂತ್ರಿಗಳು ಒಪ್ಪಲಿಲ್ಲ. ಕೋಶಾಧಿಕಾರಿಗಳಾದ ಸರ್ ಜೋರ್ಜ ಶುಸ್ಟರರವರು ರಾಜಿನಾಮೆ ಕೊಡಲು ಸಹ ತಯಾರಾಗಿರುವರಾಗಿ ಮುಂಬಯಿಯ 'ಇಂಡಿಯನ್ ಡೇಲಿ ಮೇಲ' ಪತ್ರಿಕೆಯ ಗುಪ್ತ ವಾರ್ತೆ. ಹೀಗೆ ಭಾರತ ಮಂತ್ರಿಗಳಿಗೂ, ಹಿಂದುಸ್ಥಾನ ಸರಕಾರಕ್ಕೂ ವಿವಾದವಿಷಯವಾಗುತ್ತಿದ್ದ ಕಾರಣ ಬೇಂಕುಗಳಿಗೆ ೩ ದಿನಗಳ ತನಕ ಸರ್ವಾಧಿಕಾರಿಗಳು ರಾಜಶಾಸನ ಹೊರಡಿಸಿ ಅನಪೇಕ್ಷಿತವಾಗಿ ಬೇಂಕುಗಳನ್ನು ಮುಚ್ಚಲು ಆಜ್ಞಾಪಿಸಿದ್ದರಂತೆ. ಪವನು-ರೂಪಾಯಿಗಳ ದರವನ್ನು ಸರಕಾರವು ಈಗಿನಂತೆಯೇ ಕಾಪಾಡಿದರೆ, ಬ್ರಿಟಿಶ ಸರಕುಗಳು ಇನ್ನೂ ಅಗ್ಗವಾಗುವವು. ಅವನ್ನು ಹಿಂದುಸ್ಥಾನಕ್ಕೆ ರಫ್ತುಮಾಡಲು ಹೆಚ್ಚಿನ ಅನುಕೂಲತೆ ದೊರೆಯುವದಾಗಿ ಲಂಡನಿನ 'ಮಾರ್ನಿಂಗ ಪೋಸ್ಟ' ಪತ್ರಿಕಾಕರ್ತರ ಅಂಬೋಣ. ಮಹಾತ್ಮರು ಈ ಧೋರಣವನ್ನು ನಿಷೇಧಿಸಿದರು, ಇದರಿಂದ ಹಿಂದುಸ್ಥಾನಕ್ಕೆ ಅಕಲ್ಯಾಣವಾಗುತ್ತದಾಗಿ ನುಡಿದರು, ಆದಾಗ್ಯೂ ಭಾರತ ಮಂತ್ರಿಗಳು ತಮ್ಮ ಮತವನ್ನು ಬದಲಿಸಲಿಲ್ಲ. ತಮ್ಮ ಮತದಂತೆಯೇ ರಾಜಶಾಸನ ಹೊರಡಿಸುವಂತೆ ಸರ್ವಾಧಿಪತಿಗಳಿಗೆ ಮಾಡಿದ ಅಪ್ಪಣೆಯನ್ನು ಹಿಂದುಸ್ಥಾನ ಸರಕಾರವು ಶಿರಸಾ ಮನ್ನಿಸಿಕೊಂಡು ಗುರುವಾರ ಪವನು-ರೂಪಾಯಿಗಳ ಪ್ರಮಾಣವನ್ನು ಈಗಿನಂತೆಯೇ ನಿತ್ತರಿಸುವ ರಾಜಶಾಸನ ಹೊರಡಿಸಿಬಿಟ್ಟಿತು. ಗುರುವಾರ ವಿಲಾಯತಿಯೊಳಗಿನ 'ಇಂಡಿಯಾ ಆಫೀಸಿ'ನಲ್ಲಿ ಮಹಾತ್ಮರಾದಿ ಕೆಲ ಗೌಂಡ ಟೇಬಲ ಪ್ರತಿನಿಧಿಗಳ ಸಭೆಯನ್ನು ಭಾರತ ಮಂತ್ರಿಗಳು ಕೂಡಿಸಿ ತಮ್ಮ ಧೋರಣದಿಂದ ಹಿಂದುಸ್ಥಾನಕ್ಕೆ ಕಲ್ಯಾಣವಿರುವದಾಗಿ ಪ್ರತಿಪಾದಿಸಿದರು. ಮಹಾತ್ಮರಿಗೆ ಸಮಾಧಾನವಾಗಲಿಲ್ಲ. ನ್ಯಾಯವಾದಿಕವಾಗಿ ಹಿಂದುಸ್ಥಾನದ ಕಲ್ಯಾಣಬುದ್ಧಿಯಿಂದ ಭಾರತ ಮಂತ್ರಿಗಳು ಈ ಉಪಾಯ ಕೈಕೊಳ್ಳಲಿಲ್ಲವಾಗಿ ಮಹಾತ್ಮರು ಅಲ್ಲಿಯೇ ಹೇಳಿದರಾಗಿಯೂ, ಹಿಂದುಸ್ಥಾನಕ್ಕೆ ಕಲ್ಯಾಣಕರವಾದದ್ದರೆ ವರಿಷ್ಠ ಶಾಯಿದೆ ಕೌನ್ಸಿಲಿನ ಸಭಾಸದರನ್ನು ಯಾಕೆ ಆಲೋಚಿಸಲಿಲ್ಲವಾಗಿಯೂ ಕೇಳಿದರಂತೆ.

ಈ ಪ್ರಕರಣದಿಂದ ಜನರೊಳಗಲ್ಲಿ ಗಾಬರಿಯುಂಟಾಗಿದೆ. ಕರಾಚಿ, ದಿಲ್ಲಿ ಮೊದಲಾದ ಪಟ್ಟಣಗಳಲ್ಲಿ ಜನರು ಪೋಸ್ಟ ಸೇವಿಂಗ್ಸ ಬೇಂಕಿನೊಳಗಿಂದ ಬರಬರತ ತಮ್ಮ ಹಣಗಳನ್ನು ತಿರುಗಿ ಪಡೆದರಂತೆ. ಸರಕಾರವು ಈ ಪ್ರಕಾರ ಗಾಬರಿಪಡುವ ಕಾರಣವಿಲ್ಲವಾಗಿಯೂ, ಸರಕಾರದ ಭದ್ರತೆ ಎಂದಿನಂತೆ ಭದ್ರವಿರುವದಾಗಿಯೂ ಪ್ರಕಟಿಸಿದ್ದರೂ, ಜನರ ಗಾಬರಿಯೇನು ಕಡಿಮೆಯಾಗಿಲ್ಲ. ಎಲ್ಲರೂ ಸಂಶಯಗ್ರಸ್ತಸ್ಥಿತಿಯಲ್ಲಿದ್ದಾರೆ. ಅವಸರ ಮಸ್ತಿಗೆ ಎಲ್ಲರೂ ಹಣವನ್ನು ತಿರುಗಿ ತರಕೊಳ್ಳುವ ಆಲೋಚನೆಯಲ್ಲಿರುತ್ತಾರೆ. ತೊಡಗಿದ್ದರೆ ಹಿಂದುಸ್ಥಾನ ಸರಕಾರದ ಮೇಲೆ ರಣವು ಬಡಬಡಿದ್ದರೆ, ಭಯಂಕರ ಸ್ಥಿತಿ ಒದಗುವದಾಗಿ ಶ್ರೀ| ಪುರುಷೋತ್ತಮದಾಸ ಠಾಕೂರ ಮೊದಲಾದ ತಜ್ಞ ವ್ಯಾಪಾರಿಗಳು ಅಂಬೋಣ. ಮುಂಬಯಿಯಲ್ಲಿ ಕೂಡಿದ ವರ್ತಕರ ಸಂಘದವರು ಇದೇ ಪ್ರಕಾರ ಮಂಗಳವಾರ ಅಭಿಪ್ರಾಯ ಪ್ರಕಟಿಸಿದ್ದಾರೆ. ಸರಕಾರವು ಒಂದೆ ಉತ್ತಮವಾಗಿ ಒಂದು ಪ್ರಕಟಣೆ ಹೊರಡಿಸಿದ್ದರಿಂದ ಗಾಬರಿಯು ಪರಿಹಾರವಾಗದು. ವ್ಯವಹಾರಕುಶಲ ಲೋಕರ ಯೋಗ್ಯ ಸಮಾಧಾನ ಮಾಡಿ ಸರಕಾರದ ಭದ್ರತೆ ಕೆಡುವದಿಲ್ಲವಾಗಿ ಮನಗಾಣಿಸಿದರೆ ಜನರಲ್ಲಿ ಸಮಾಧಾನವಾಗುವದು. ಇದಬಗ್ಗೆ ನಿರ್ಭಯರಾಗುವರು. ಸರಕಾರವು ಶೀಘ್ರವಾಗಿ ಈ ಉಪಾಯ ಕೈಕೊಳ್ಳಬೇಕಾಗಿ ನಮ್ಮ ಸೂಚನೆ.

ಸ್ಫುಟ ಸೂಚನೆ.

— ಮಹಾತ್ಮರ ಮರಣಾಂತ್ಯವ್ರತವು ಕ್ರಿಸ್ತಶಕದಂತೆ ಒದಗುವ ಶುಕ್ರವಾರ, ವಿಕ್ರಮ ಶಕದಂತೆ ಸೋಮವಾರ ತಾ ೨೮ನೇ ಗುರುವಾರ. ಇದನ್ನು ರಾಷ್ಟ್ರವು ಹೇಗೆ ಪಾಲಿಸಬೇಕೆಂಬ ಕುರಿತು ಚರ್ಚೆಯಾಗುತ್ತಿದೆ. ಮಹಾತ್ಮರಿಗೆ ಈ ಕುರಿತು ಕೇಳಲು "*I shall eat drink and be merry*" (ತಿನ್ನುವೆ ಕುಡಿಯುವೆ, ಮತ್ತು ಸಮಾಧಾನದಿಂದಾಗಿ ಕಾಲ ಕಳೆಯುವೆ) ಹೀಗ ಮಹಾತ್ಮರು ಉದ್ಗರಿಸಿದರಾಗಿ ಪ್ರಕಟವಾಗಿದೆ. ಶುಕ್ರವಾರಕ್ಕೆ ಲಂಡನಿನೊಳಗ ಒಂದು ಔತಣ ಸಮಾರಂಭವಿದೆ. ಮಹಾತ್ಮರು ನಿಮಂತ್ರಿತ ಗೃಹಸ್ಥರಿಗೆ ನಾಲ್ಕು ಮಾತು ಹೇಳುವದಾಗಿ ಪ್ರಕಟವಾಗಿದೆ. ರಾಷ್ಟ್ರಸಭಾಪತಿ ಸರದಾರ ವಲ್ಲಭಭಾಯಿ ಪಟೇಲರವರೂ, ನಮ್ಮ ಕರ್ನಾಟಕ ಪ್ರಾಂತದ ಪ್ರಮುಖರಾದ ಶ್ರೀ| ದೇಶಪಾಂಡ ಗಂಗಾಧರರಾಯರೂ ಒಂದು ಪ್ರಕಟಣೆಯನ್ನು ಹೊರಡಿಸಿ, ಗಾಂಧಿ ಜಯಂತ್ಯುತ್ಸವದ ಕಾರ್ಯಕ್ರಮವನ್ನು ಜನಾಂಗಕ್ಕೆ ಬೋಧಿಸಿದ್ದಾರೆ. ಮಹಾತ್ಮರಿಗೆ ಖಾದಿಯ ಮೇಲಿನ ಮಮತೆ, ಕೈರಾಟಿ-ಕೈನೂಲು-ಕೈಮಗ್ಗಗಳ ಮೇಲಿನ ಮಮತೆ, ಮಹಾತ್ಮರ ದೇಶೋದ್ಧಾರದ ತಳಹದಿಯನ್ನು ಕಲ್ಪಿಸಿದ್ದಾರೆ. ನೂಲುಗಾರರೂ, ನೇಕಾರರೂ ಆತ್ಮವರಿಯಾದರೆ, ಅವರಿಗೆ ಉದ್ಯೋಗ ದೊರಕಿಸಿ ಕೊಟ್ಟರೆ, ವಿದ್ಯಮಾನ ಪರದೇಶೀ ಜವಳಿಯನ್ನು ಭರತಭೂಮಿಯೊಳಗಿಂದ ಹೊಡೆದೋಡಿಸಿದರೆ, ಹಿಂದುಸ್ಥಾನಕ್ಕೆ ಕ್ಷೇಮವಾಗುವದಾಗಿಯೂ, ಸ್ವರಾಜ್ಯಪ್ರಾಪ್ತಿಯ ಹಾದಿ ಸುಗಮವಾಗುವದಾಗಿಯೂ ಮಹಾತ್ಮರು ದೃಢವಾಗಿ ನಂಬಿದ್ದಾರೆ. ಇದೀಗ ಚೋಕವಿದ್ದು ನಮ್ಮ ಸಂಗತಿ. ಈ ಸಮಯ ಖಾದಿಗೆ ತುಂಬ ಗಿರಾಕಿಯಿರಬೇಕಾಗಿತ್ತು, ಆದರೆ ವಸ್ತುಸ್ಥಿತಿಯೇ ಬೇರೆ. ಅಖಿಲ ಭಾರತೀಯ ನೂಲುಗಾರರ ಸಂಘದ ೧೫ ಲಕ್ಷ ರೂಪಾಯಿಗಳ ಖಾದಿಯಲ್ಲಿ ತೊಡಕಿಕೊಂಡಿದೆ. ಖಾದಿಯ ಗಂಟುಗಳು ಖಾದಿಭಾಂಡಾರಗಳಲ್ಲಿ ರಾಶಿಯಾಗಿ ಬಿದ್ದಿವೆ, ಅವುಗಳಿಗೆ ಗಿರಾಕಿಯಿಲ್ಲ. ಇದರಿಂದ ನೂಲುಗಾರರ ಸಂಘದವರು ಕೆಲ ಖಾದಿ ಕೇಂದ್ರಗಳನ್ನು ಮುಚ್ಚುವ ಆಲೋಚನೆಯಲ್ಲಿ ಬಿದ್ದಿದ್ದಾರೆ. ಕರ್ನಾಟಕದೊಳಗೂ ೧—೧| ಲಕ್ಷ ರೂಪಾಯಿಗಳ ಖಾದಿ ಗಿರಾಕಿಯಿಲ್ಲದೆ ರಾಶಿಯಾಗಿ ಬಿದ್ದಿದೆ. ಶ್ರೀ| ದೇಶಪಾಂಡೆ ಗಂಗಾಧರರಾಯರು ನಿರುಪಾಯರಾಗಿ ಖಾದಿ ಕೇಂದ್ರಗಳನ್ನು ಮುಚ್ಚುವದರಂತೆ, ವ್ಯಸನಪಟ್ಟು ಮುಚ್ಚಿದರು, ಖಾದಿ ತಯಾರಿಕೆ ನಿಲ್ಲಿಸಿದರು. ಈಗ ದಿನಮಾನ ಕಠಿಣ. ಹೆಚ್ಚಿನದಾಗಿ ಕೆಲಸವನ್ನು ಪೂರೈಸಿ ಜನರ ಬವಣೆಯನ್ನು ನೀಗಿಸಬೇಕು. ನೀಗಿಸುವದಕ್ಕಾಗಿ ರಾಷ್ಟ್ರೀಯ ಸಭಾಭಿಮಾನಿಗಳ ಪ್ರತ್ನಿವಾರಿ ದುಡಿಯಬೇಕು. ಇದನ್ನು ತಿಳಿದಾಗ್ಯೂ ಇಷ್ಟು ಖಾದಿ ಕೇಂದ್ರಗಳನ್ನು ಮುಚ್ಚಬೇಕಾಯಿತು. ಈ ಸಂಗತಿ ನಿಜವಾಗಿ ಕಾಂಗ್ರೆಸಿನ ಅಭಿಮಾನಿಗಳಿಗೆ ಉಚಿತವಲ್ಲ, ಮಹಾತ್ಮರ ಅನುಯಾಯಿಗಳಿಗೆ, ಪ್ರಶಂಸಕರಿಗೆ ಪ್ರಶಸ್ತವಲ್ಲ. ಆದರಿಂದ ಈ ವಾರದಲ್ಲಿ ಮಹಾತ್ಮರ ಮೇಲೆ ಪ್ರೀತಿಯಿದ್ದವರೆಲ್ಲರೂ ಖಾದಿಯನ್ನು ಕೊಂಡು ಕೊಂಡು ಖಾದಿಯ ಕಾರ್ಯಕ್ಕೆ ಪ್ರೋತ್ಸಾಹಿಸಬೇಕು. ಹಿಂದೂಯ ಖಾದಿ ಭಾಂಡಾರದವರು ಈ ಸಪ್ತಾಹದಲ್ಲಿ ಕುಮಟಾ, ಹೊನ್ನಾವರ ಅಂಕೋಲಾ, ಕಾರವಾರ ಕಡೆಗೆ ಖಾದಿಯನ್ನು ಮಾರಾಟವಾಗಿ ನಮಗ ತಿಳಿಸುತ್ತಾರೆ. ಅವರಿಗೆ ಜನರೆಲ್ಲರೂ ಪ್ರೋತ್ಸಾಹ ಕೊಟ್ಟು ರಂದ ಖಾದಿಯನ್ನಲ್ಲಿ ಕೊಂಡು ಕೊಂಡು ಒದಬೇಕಾದರೆ ಈಗಿನ ಕಠಿಣ ಕಾಲದಲ್ಲಿ ಹಿಡಿ ಅಕ್ಕಿ ಪೂರೈಸಿದ ಶ್ರೇಯಸ್ಸು ಪಡೆಯುವರಾಗಿ ನಾವು ತುಂಬಾ ಸೂಚಿಸುತ್ತೇವೆ.

— ಹಡೆದ ಮೇಲೆ ಮಹಾತ್ಮರ ಕಡೆ ಚಿಕ್ಕ ಮಕ್ಕಳು ಆಡುವ ಸಮಾಚಾರವನ್ನು ಶ್ರೀ| ಮಹಾದೇವಭಾಯಿಯವರು ವರ್ಣಿಸಿದ್ದಾರೆ. ಹುಡುಗರಿಗ ವರ್ಣಭೇದ, ಜಾತಿ ಭೇದ, ಧರ್ಮ ಭೇದ, ಲಿಂಗ ಭೇದವಿರಲಿಲ್ಲ. ಮಹಾತ್ಮರ ಕೋಣೆಯೊಳಗ ಎಲ್ಲರೂ ಒಂದು ಓಡಾಡುತ್ತಿದ್ದರು. ಮಹಾತ್ಮರು ಅವರಿಗೆ ಕೈ ಹಿಡಿಯುತ್ತಿದ್ದರು, ಬೆನ್ನ ಮೇಲೆ ಕೈಯಾಡಿಸಿ ಮಾತಾಡುತ್ತಿದ್ದರು, ಊಟಕ್ಕೆ ಕೂತಾಗ ಒಂದೆರಡು ಕಿತ್ತಳಿಗ ದ್ರಾಕ್ಷ ಬೇಕೋ, ಖರ್ಜೂರ ಬೇಕೋ? ಕೇಳಿ ಕೇಳಿ ತಿನಿಸು—ತಿನಿಸುವನ್ನು—ಕೊಡುತ್ತಿದ್ದರು. ಅವನ್ನು ಕೂಡಲೆ ಬಾಯಿ ಮಾಡಿ ಹುಡುಗರು ಮಹಾತ್ಮರಿಗ ಎಂಜಲು ತಂದು ಕೊಡುತ್ತಿದ್ದರು.

— ರಾಷ್ಟ್ರೀಯ ಸಭೆಯವರು ಪ್ರಕಟಿಸಿದ ಆರೋಪಗಳ ತಕ್ಕಾಗಿ ಸರಕಾರವು ನಿಷ್ಕೃ-ನಿರಾಧಾರ ಹೇಳಿಕೆ ಹೊರಡಿಸಿದು ಸರಕಾರಿ ಪ್ರಕಟಣೆ ಹೊರಡಿಸಿತ್ತು. ಕಳೆದ ತಾ ೨೪ನೇ 'ಯಂಗ ಇಂಡಿಯಾ' ಪತ್ರಿಕೆಯಲ್ಲಿ ರಾಷ್ಟ್ರೀಯ ಸಭೆಯವರು ಸಂಯುಕ್ತಪ್ರಾಂತ, ಪಂಜಾಬ ಪ್ರಾಂತಗಳಲ್ಲಿ ನಡೆದ ವೃತ್ತಾಂತವನ್ನು ಸವಿಸ್ತರವಾಗಿ ಪ್ರಕಟಿಸಿ ಆರೋಪಗಳು ಸಾಧಾರವಿರುವವಾಗಿ ಪ್ರಕಟಿಸಿದ್ದಾರೆ.

ಸ್ಥಾನಿಕ ವೃತ್ತಾಂತ.

ಕುಮಟಾ— ಈ ವಾರದಲ್ಲಿ ಅಲ್ಪಸ್ವಲ್ಪ ಮಳೆ ಬೀಳಲಿಕ್ಕೆ ಪ್ರಾರಂಭವಾಗಿ, ಈಗ ಬಿದ್ದಷ್ಟು ಸಾಕು ಎಂಬ ಅಭಿಪ್ರಾಯ ಉಂಟಾಗಿದೆ.

ಕೌನ್ಸಿಲ ಇಲೆಕ್ಷನಿನ ಮೇಲಾಟ ಭರದಿಂದ ಸಾಗಿದೆ. ಡಾ॥ ವಿಶ್ವನಾಥ ಪಾಂಡುರಂಗ ಪ್ರಭುಗಳ ಪರವಾಗಿ ಕೆಲವರೂ, ರಾ॥ ಗಣಪತಿ ಗಂಗೊಳ್ಳಿಯವರ ಪರವಾಗಿ ಹಲವರೂ ಮತದಾರರನ್ನು ಪ್ರೋಟು ಕೊಡುವಂತೆ ಪ್ರಯತ್ನಿಸುತ್ತಿದ್ದಾರೆ.

ಇಲ್ಲಿಯ ತಾಲೂಕಾ ಕಾಂಗ್ರೆಸ ಕಮಿಟಿಯು ತಾ ಪರ್ ದಾರಗಳು ರಾಜಿನಾಮೆ ಕೊಟ್ಟುದಾಗಿ ತಿಳಿಯುತ್ತದೆ. ಕಾರಣವೇನೆಂದು ತಿಳಿಯಲಿಲ್ಲ.

ಹನೇಹಳ್ಳಿಯಲ್ಲಿ ಕೆಲ ಅಂಗಡಿಯ ಗುತ್ತೇದಾರನಿಗೆ ಅಂಗಡಿಗೆ ಸ್ಥಳ ದೊರೆಯದ ಕಾರಣ ತೊಂದರೆಯಾಗಿದೆ. ಆತನಿಗೆ ಅಂಗಡಿಗೆ ಸ್ಥಳ ಕೊಡಬಾರದೆಂದು ಯಾವದೋ ಪ್ರಕಾರದಿಂದ ಸಮಾಜ ವಿರೋಧವೆಂದೂ ಇಲ್ಲಿಯ ಕಾಂಗ್ರೆಸ ಕಮಿಟಿಯವರು ನಿರ್ಧರಿಸಿದ್ದಾರೆ.

ಮೆಸರ್ಸ ನಾಯ್ಕ ಎಂಡ್ ಕಂಪನಿಯವರು ಹೊನ್ನಾವರದಿಂದ ಧಾರವಾಡಕ್ಕೆ ಹೊಂದಿಸಿದ ಮೋಟರ ಸರ್ವಿಸು ನಿಯಮಿತವಾಗಿ ನಡೆದಿದೆ. ಪ್ರಯಾಣಿಕರಿಗೂ, ವ್ಯಾಪಾರಸ್ಥರಿಗೂ ಇದರಿಂದ ಒಳ್ಳೇ ಅನುಕೂಲವಾಗಿದೆ. ಅಲ್ಲದೆ, ಸರ್ವಿಸಿನ ಮೋಟರುಗಳಿಗೆ ಹುಬ್ಬಳ್ಳಿಯಲ್ಲಿ ಟಪಾಲ ಘಂಟೆ ತನಕ ತ್ರಾಸ ದೊರೆದ ವಿಳಂಬವಾಗುತ್ತಿರುವದರಿಂದ ಮುಂದೆ ಹೋಗುವ ಪ್ರಯಾಣಿಕರಿಗೆ ತೊಂದರೆಯಾಗುತ್ತದೆಂದೂ ತಿಳಿಯುತ್ತದೆ. ಕುಮಟೆ ಹೊನ್ನಾವರ-ಧಾರವಾಡ ತನಕ ಹೆಚ್ಚು ಟಿಕ್ಕೆಟು ಆಗುತ್ತದೆ. ಇದನ್ನು ಪೋಲೀಸ ಅಧಿಕಾರಿಗಳು ಗ್ರಹಿಸಿ ಜನರಿಗೆ ಅನುಕೂಲವಾಗುವಂತೆ ಟ್ರಾಮಿನ ವ್ಯವಸ್ಥೆ ಮಾಡಬೇಕಾಗಿ ಸೂಚನೆ.

ಹೊನ್ನಾವರ— ಮಳೆ ಸ್ವಲ್ಪ ಸ್ವಲ್ಪ ಬೀಳುತ್ತದೆ. ಅಕ್ಕಿಯ ದರ ಕಡಿಮೆ. ಈ ವಾರದಲ್ಲಿ ಯಾವದೂ ಹಬ್ಬ ಹುಣ್ಣಿಮೆ ಇಲ್ಲ.

ವರ್ತಕರ ಸಂಘದ ಸಭೆ ದಿನಾ ನಡೆಯುತ್ತದೆ. ಸಕ್ಕರೆ ಕಡಿಮೆಯಾಗಿ ಎರಡು ಕಾಗದದ ಮೇಲೆ, ಸಕ್ಕರೆ ಅಂಗಡಿಯಲ್ಲಿ! ಈ ವ್ಯವಸ್ಥೆ ಶ್ರಮ ನಡೆದಿದೆ. ವ್ಯಾಪಾರಿಕ ವರ್ತಕರಿಗೆ ಕಷ್ಟ! ಮ್ಯುನಿಸಿಪಾಲಿಗೆ ಅಕಟ್ರಾಯ ಸಿಗದ ನಷ್ಟ!

ಇಗರ್ಜಿ ಕಡೆ ಹೋಗುವ ಮಾರ್ಗ ಕೆಟ್ಟಿದೆ. ಅಲ್ಲಿ ಕಲ್ಲು ರಿಪೇರಿ ಮಾಡಬೇಕು. ಈಗ ರಾ ಮಾಡಿಟ್ಟ ಕೆರೆ ಮಣ್ಣನ್ನು ತಾಕಿದರೆ, ರಸ್ತೆ ಸಂಪೂರ್ಣ ಕೆಟ್ಟುಹೋಗುವದು. ಮ್ಯುನಿಸಿಪಾಲಿಟಿಯವರು ಇತ್ತ ಕಡೆ ಲಕ್ಷ್ಯಗೊಡಬೇಕು.

ಮಂಗಳವಾರ ಸರಕಾರಿ ಪ್ರಿಜನರಿ ಮುಚ್ಚಬೇಕೆಂತ ಕಲೆಕ್ಟರರ ಕಡೆಯಿಂದ ಹಂತ ಹಂತ ಜನರಿಗೆ ಅಂಜಿಕೆಯುಂಟಾಯಿತು. ಪರದೇಶ ದೇವಾ-ದೇವಿಯ ಕಾಲಾಕಾಲಕ್ಕೆ ಯೋಜನೆಯನ್ನು ತಯಾರಿಸುವದಕ್ಕಾಗಿ ಕಲ್ಲು ಅವಗಾಹ ಪದಕಳ್ಳಲು ಬೇಕಾಗಿಗೆ ೨ ದಿನ ರಜೆ ಕೊಟ್ಟಿತೆಂತಲೂ, ಸರಕಾರದ ಸಾಂಪತ್ತಿಕ ಸ್ಥಿತಿ ನೆಟ್ಟಗಿರುವದಾಗಿಯೂ, ಮಾಡಿಕೊಳ್ಳುವಂತೆ ಬ್ಯಾಂಕುಗಳನ್ನು ಸರಿಯಾಗಿ ಜನರಿಗೆ ಹಣ ದೊರೆಯಲು ತೊಂದರೆಯಾಗದಾಗಿಯೂ ತಾಲೂಕ ಕಚೇರಿಯಿಂದ ಹುಕೂಮ ಪ್ರಕಟವಾಗಿದೆ.

ಇಲ್ಲಿಯ ಕೆಲ ಮುಸಲ್ಮಾನರು ಈ ಬಾರಿ ಅಲ್ಲದ ಪಟ್ಟ ತೊಟ್ಟರು. ಪ್ರತಿವರ್ಷದಲ್ಲಿ ಶ್ರೀ ಗಣಪತಿಯ ವಿಸರ್ಜನೆ ಮಾಡುವದಕ್ಕೋಸ್ಕರ ನಡುವೆಯೊಳಗಿಂದ ಪಳ್ಳೀ ಫೋಸ್ಟ ಆಫೀಸ ಎದುರ್‌ಗಾಗಿ ಎಂದಿನಂತೆ ವಾದ್ಯ ಬಾರಿಸಿಕೊಂಡು ಮೆರವಣಿಗೆಯಿಂದ ಹೋಗುತ್ತಿದ್ದರು. ಪೈಕಿಯ 'ನವಮಾಡಿ ದ ಜಮಾನಾಗ'ರ ಮುಂದಿಂದ ವಾದ್ಯ ಬಾರಿಸಿಕೊಂಡು ಹೋಗುವದಕ್ಕೆ ಆತಂಕ ಮಾಡಿದರು. ಪ್ರತಿಜ್ಞೆಯನ್ನು ಮುರಿದಾಗ ಮೌನದಿಂದ ತಮ್ಮ ಉತ್ಸವವನ್ನು ಸಾಗಿಸಿಕೊಂಡರು. ಮಾರನೇ ದಿನ ಶ್ರೀ ಅನಂತವ್ರತದ ಕಾಲಕ್ಕೆ ಬಂದು ಬೇಡುವದಕ್ಕಾಗಿ ಹತ್ತುಸಾವಿರ ಜನರಿಂದ ಕಡುವತಿ ನದಿಗೆ ಅದೇ ಮಾರ್ಗವಾಗಿ ಹೋದ ವಾದ್ಯಕ್ಕೆ ಮುಸಲ್ಮಾನರಿಂದ ಆತಂಕವಾಗಲಿಲ್ಲ. ವಿಚಾರವಂತ ಮುಸಲ್ಮಾನರು ಪ್ರೇಮದ ವಾತಾವರಣವನ್ನು ಕಲುಷಿತ ಮಾಡಬಾರದು, ಹೀಗೆ ಮಾಡುವದು ವಿಹಿತವಲ್ಲ, ಈ ಕಡೆಕಡೆ ಮಾರ್ಗದಿಂದ ಹಾಯುವ ವಾದ್ಯಕ್ಕೆ ತೊಂದರೆಯಾಗಿದ್ದಿಲ್ಲ. ಇಂಥ ಕಾರಣ ಜಗಳವಿಟ್ಟಿದರಿಂದ ಪ್ರಮುಖರು ಸ್ವಸ್ಥರಾಗಿರುವರಿಗೆ ಬುದ್ಧಿ ಹೇಳಬೇಕು.

ಹೊನ್ನಾವರ ಕನ್ನಡ ಸಹಕಾರಿ ಬ್ಯಾಂಕಿನ ಚೇರಮನ್‌ರಾದ ರಾ॥ ಮಹಾಬಲ ಕೇಶವ ಹೆಗಡೆ, ಎಮ್.ಎ., ಎಲ್.ಎಲ್.ಬಿ., ಇವರು ಒದೆಯುತ್ತಿದ್ದರೆಂದರೆ — ಕಳೆದ ಸಂಚಿಕೆಯಲ್ಲಿ ನಮ್ಮ ಬೇರಿನ ಒಳ್ಳೆ ಒಂದು ಮಾಹಿತಿ ಯ ವಾರ್ತೆಯಲ್ಲಿ ಬ್ಯಾಂಕಿನ ಗೌರವ ಕಗ್ಗಿಸುವ ಇರಾದೆಯಿಂದ ಯಾರೋ ಬಳ್ಳರು ನಿಮಗೆ ಈ ಮಾಹಿತಿ ಪೂರೈಸಿರಬೇಕು. ನಿಜ್ಯಾ ಸ್ಥಿತಿ ಏನೆಂದರೆ — ಈ ಬ್ಯಾಂಕಿನ ಮೂಲಧನ ಹೆಚ್ಚಾಗಿ ಹ್ಯಾಗಾಯಿತೆಂದರೆ, ಅವರೇ ಸಾಲಗಾರರು ಕಳೆದ ವರ್ಷ ಬೆಳೆ ನಷ್ಟವಾಯಿತು, ಸುಗ್ಗಿ ಮಳೆಗೆ ಬಾರದೆ ಹೋಯಿತು. ಅದರಿಂದ ಸಾಲ ತಿರುಗಿ ಕೊಡಲಾಗಲಿಲ್ಲ. ಮುದ್ದತ್ತು ಮುಗಿದರೂ ಬ್ಯಾಂಕಿನಲ್ಲಿ ಹೆಚ್ಚು ಕೊಡ-ಕೊಳ್ಳುವ ವ್ಯವಹಾರ ನಡೆಯಲಿಲ್ಲ. ಆದಾಗ್ಯೂ ಬ್ಯಾಂಕಿನ ಕೆಲಸಕ್ಕೆ ಏನೂ ಅಡ್ಡಿಯಾಗಲಿಲ್ಲ. ಈ ಬ್ಯಾಂಕ (ತಾ ೨೮-೯-೩೦) ದಿನ ಇಂದಿಗಿನಂತೆ ವಿತ್ತೀಯ ಹಾನಿ ಆದರೆ ಆ ಪದ್ಧತಿಗೆ ಹಣ ಇಟ್ಟು ಮುನ್ನಡೆಸುತ್ತಿದೆ. ತಿರಸ್ಕಾರ ವ್ಯವಸ್ಥೆ ನಡೆದಿದೆ. ಶ್ರೀ ಗಂಗೊಳ್ಳಿಯವರು ತಮ್ಮ ಸಭಾಸದತ್ವಕ್ಕೆ ರಾಜೀನಾಮೆ ಕೊಟ್ಟದ್ದೇನಿದ್ದರೂ ಸುಳ್ಳು. ತಮ್ಮ ಸ್ವಂತ ಕೆಲವು ಕಾರಣಗಳನ್ನು ಬೇರೆಯವರ ಹೆಸರಿಗೆ ಟ್ರಾನ್ಸಫರ ಮಾಡಬೇಕಾಗಿ ಅರ್ಜಿ ಕೊಟ್ಟದ್ದರಿಂದ ಟ್ರಾನ್ಸಫರ ರಿಜಿಸ್ಟರಿನಲ್ಲಿ ಅದರ ಅರ್ಜಿ ಇದ್ದೀತು. ಬ್ಯಾಂಕಿನ ಹಿತಕ್ಕೆ ವರ್ತನ್ನು ಜನಗಳು ಸಾಲ ತಗೆದವನ್ನು ನೀಡಿದ ಬ್ಯಾಂಕಿನಲ್ಲಿ ಬಾಕಿ ಇದ್ದ ಮೂಲಧನವಿಲ್ಲ. ಇಲ್ಲಿಯ ಸೊಸೈಟಿಯಲ್ಲಿರುವ ಮೊಬಲಗು ಈ ಬ್ಯಾಂಕಿನ ಮೊಬಲಗಿರುತ್ತದೋ ಹೇಗೆ? ಒಂದೇ ಕುಟುಂಬದಲ್ಲಿ ಎಷ್ಟು ಜನರು ಈ ಬ್ಯಾಂಕಿನ ಮೊಬಲಗಿರುತ್ತಾರೆ? ವಗೈರೆ ಬಗ್ಗೆ ಮಾಡಿ ರಿಪೋರ್ಟ ಮಾಡುವದಕ್ಕೆ ಬ್ಯಾಂಕಿನ ಪಕ್ಷ ದವರೇ ಅವರಿಗೆ ಸಮಯ ಕೊಡದಿದ್ದರು.

ಭಟಕಳ— ಈ ವರ್ಷದ ವಿಘ್ನೇಶ್ವರನ ಉತ್ಸವಕ್ಕೆ ಉಂಟಾದ ವಿಘ್ನಗಳನ್ನು ನಿಘ್ನೇಶ್ವರ ಪರಿಹರಿಸಿಕೊಂಡ, ಉತ್ಸವವನ್ನು ವಿಜೃಂಭಣೆಯಿಂದ ನೆರವೇರಿಸಿಕೊಂಡನು. ಶ್ರೀ ಹನುಮಂತ ದೇವಸ್ಥಾನದಲ್ಲಿ ಉತ್ಸವದ ಕಾರ್ಯಕ್ರಮವನ್ನು ರಾ॥ ಜೀವೋತ್ತಮ ಭಟ್ಟರು ನಡೆಸಿದ್ದರು. ಇದನ್ನು ಮಾಡಗೊಡಲಿಕ್ಕಿಲ್ಲವಾಗಿ ಅಧಿಕಾರಿಯಾದ ಮಾಮಲೇದಾರರೊಬ್ಬರು ವಿಘ್ನ ತಂದರು. ಶಾಂತಿಯ ಪಾಲಿಕ ಸರಕಾರಿ ನೌಕರರೊಬ್ಬರು ಗಣಪತಿ ಉತ್ಸವ ಮಾಡಿದ್ದಲ್ಲಿ ಶ್ರೀ ದೇವಸ್ಥಾನದ ಅಧ್ಯಕ್ಷರು ಸೆಲ್ಲುತವಾಗಿ ಗದ್ದಲಿಸಿದರು. ಆದರೆ, ಉದ್ದೇಶ ಪವರು ತಮ್ಮ ನಿರ್ಧಾರ ಬಿಡಲೊಪ್ಪಲಿಲ್ಲ. ಎಲ್ಲ ವಿಷ್ಯಗಳು ದೊಡ್ಡದಾದವು. ಕೀರ್ತನ-ಪ್ರವಚನ-ಆಟ-ಪಾಟಗಳಿಂದ ಉತ್ಸವವು ಒಳ್ಳೇ ಹುರುಪಿನಿಂದ ನೆರವೇರಿತು.

ಕೌನ್ಸಿಲು ಇಲೆಕ್ಷನಿನ ಮತಸಂಗ್ರಹ ಮಾಡುವದಕ್ಕಾಗಿ ಡಾ॥ ವಿಶ್ವನಾಥ ಪ್ರಭುಗಳು ಗೆಳೆಯರ ಸಹಿತ ಬಂದು ಹೋದರು. ರಾ॥ ಗಂಗೊಳ್ಳಿಯವರ ಪರವಾಗಿ ಪ್ರಚಾರ ಮಾಡುವದಕ್ಕಾಗಿ ರಾ॥ ಜನಜಾಗೃತಿ-ಗುಲಾಬಿಹಾಜರು ಬಂದಿದ್ದರು. ಕಾಂಗ್ರೆಸ ಕಲಸಗಾರರು ಬಂದುದರ ಕಾರಣಗಳನ್ನು ಕೇಳಲು ದೇಶಭಕ್ತ ಗುಲವಾಡಿಯವರು ಒಂದ ಜನರ ಸಂಘಟನೆಯು ಸಲುವಾಗಿ (ಪೈಕಿ ಮೆಸ್ಸ ಎಸೋಸಿಯೇಶನ್) ಬಂದಿರುತ್ತೀನೆಂತಲೂ, ಪ್ರೋಟು ಕೊಡುವದಾದಲ್ಲಿ ರಾ॥ ಗಂಗೊಳ್ಳಿಯವರಿಗೇ ಕೊಡಿರೆಂತಲೂ ಕಾಂಗ್ರೆಸ ಕಲಸಗಾರರಿಗೆ ತಿಳಿಸಿದರಂತೆ. ಪ್ರಥಮ ಮೆಸ್ಸ ಎಸೋಸಿಯೇಶನಿನ ಹೊಸ ವೇಷ ಎಲ್ಲಿ ಹುಟ್ಟಿದೆ? ಅದರ ಧ್ಯೇಯ—ಕಾರ್ಯಗಳ್ಯಾವವು? ಈ ದೇಶಭಕ್ತರಿಗೆ ಆ ಎಸೋಸಿಯೇಶನಿನಲ್ಲಿ ಯಾವ ಸಂಬಂಧವಿದೆ? ಎಂಬುದನ್ನು ತಿಳಿಯಲು ಜನರು ಕಾತರಪಡುತ್ತಾರೆ.

ಮುಣ್ಣಳ್ಳಿಕೇರಿಯ ರಸ್ತೆ ಪೂರಾ ಕೆಟ್ಟುಹೋಯಿತು. ಈ ವರ್ಷ ದುರುಸ್ತಿ ಸಹ ಆಗಲಿಲ್ಲ. ಆ ಕೇರಿಯ ತಂಗಿ ೧೦೦ರು ಕಮಿಶನರಿಗೆ ಅರ್ಜಿ ಮಾಡಿಕೊಂಡಿರುತ್ತಾರೆ.

ಮಂಗಳವಾರ ಇಲ್ಲಿಯ ಮ್ಯುನಿಸಿಪಾಲಿಟಿಯು ಸಭೆಯಲ್ಲಿ ಬಜಾರ ಚೌಕಿನಿಂದ ಪಶ್ಚಿಮಕ್ಕೆ ಮುಸಲ್ಮಾನ ಕೇರಿ ಚೌಕದ ವರೆಗಿನ ಮಾರ್ಗಕ್ಕೆ 'ಮಹಮ್ಮದ ಅಲ್ಲಿ ರೋಡ' ಎಂದು ಹೆಸರಿಟ್ಟಿದ್ದಾರೆ. ಪೂರ್ವಕ್ಕೆ ಶ್ರೀ ಹನುಮಂತ ದೇವಸ್ಥಾನದ ವರೆಗಿನ ಮಾರ್ಗಕ್ಕೆ 'ಪೇಟೆ ದಾರಿ ರೋಡ' ಎಂದು ಹೇರಿಟ್ಟಿದ್ದಾರೆ.

ಇಲ್ಲಿ ಕಾಡುಕೆರೆ ವೀರಣ್ಣ ದೇವರ ಗುಡಿಯಿದೆ. ಈ ದೇವರು ನಮ್ಮ ಗ್ರಾಮರಕ್ಷಕ ದೇವರು. ಕಸಬಾ ಕೇರಿ ಗುತ್ತೇದಾರನಾದ ಗರೀಕಾರ ಸುಬ್ಬಯ್ಯನು ಈ ದೇವರಲ್ಲಿ ಗುರುವಾರ ದೊಡ್ಡ ಪೂಜೆ ಏರಡಿಸಿ ವಿಚಾರ ನಡೆಸಿದನು. "ಕಳ್ಳ ಮಾಡುತ್ತಿದ್ದ ನನ್ನ ಅಣ್ಣನ ಮಗ ಕೀರಿಕರೂಂದ, ಬಾನೆಯಲ್ಲಿ ಹಲವರು ಅಸ್ವಸ್ಥರಾಗಿದ್ದಾರೆ. ನಾನಾ ತರದ ಕಷ್ಟಗಳು ಬಂದೊದಗಿವೆ, ದೇವರೇ ಇವೆಲ್ಲ ನಿವಾರಣೆ ಮಾಡಬೇಕು" ಹೀಗೆ ಪ್ರಾರ್ಥನೆ ಮಾಡಿಕೊಳ್ಳಲು, ಕಾಡುಕೆರೆ ವೀರಣ್ಣ ದೇವರು ನುಡಿದದ್ದೇನೆಂದರೆ— "ನೀನು ಮಹಾತ್ಮಾ ಗಾಂಧಿಯವರ ಅನುಯಾಯಿಗಳ ಮನಸ್ಸಿನ ನೋಯಿಸಿದ ಬಡ ಕೈದಿಗೆ ಕೇಡಿಯ ಕಷ್ಟ ವ್ಯಸನ ಹೆಚ್ಚಲು ಪ್ರಯತ್ನ ಮಾಡಿದೆ, ಇದರಿಂದ ಈ ಕಷ್ಟಗಳು ಬಂದೊದಗಿದವು" ಹೀಗೆ ದೇವರು ಹೇಳಲು, "ನನ್ನ ಹಿಂದಿನ ಪುತ್ರ್ಯರೂ ಹೀಗೆ ಮಾಡಲಿಲ್ಲವೇ?" ಎಂದು ಸುಬ್ಬಯ್ಯನು ಪ್ರಶ್ನೆ ಕೇಳಲು "ನೀನು ನಾನಾ ತರದ ಕಷ್ಟಗಳನ್ನು ಕೊಟ್ಟಿರುತ್ತೀ." ಎಂದು ದೇವರು ನುಡಿದನು. ಆಗ ಸುಬ್ಬಯ್ಯನು ನಿರುತ್ತರನಾದನು. ಸತ್ಯಾಗ್ರಹ ನಡೆದಾಗ ೫ ಜನ ಸ್ವಯಂಸೇವಕರ ಮೇಲೆ ನಡೆದ ಏಟಿನಲ್ಲಿ ಇವನ ಕೈ ಸಾಕ್ಷಿಯಾಗಿತ್ತು.

ಪ್ಲೇಗಿನಿಂದ ರಾ॥ ಶ್ರೀಧರ ಮಂಜುನಾಥಯ್ಯಾ ಪೈ ಇವರ ಇವರ ತಾ. ೨೮-೯-೩೦ನೇಗೆ ಪತ್ರ ಬರೆದು ತಿಳಿಸುವದೇನೆಂದರೆ — ಇಲ್ಲಿಯ ಜನರು ತೀರ ಹಿಂದುಳಿದು ಪಶ್ಚಿಮಕ್ಕೆ ಸಮುದ್ರ; ಪೂರ್ವಕ್ಕೆ ದಟ್ಟ ಗುಡ್ಡ ಬೆಟ್ಟ, ಆದರಿಂದ ಸಾಗುವಳಿ ಭೂಮಿ ತೀರ ಕಡಿಮೆ ಬತ್ತ ಬೆಳೆಯಕ್ಕೆ ಇಂಬಿಲ್ಲ. ತಾಳೆಕಟ್ಟ ಅಂಬ್ಲಿ ಕುಡಿಯುವರೇ ಹೆಚ್ಚು. ಘಟ್ಟದ ಮೇಲೆ ಹೋಗಿ ತೋಟಗಳಲ್ಲಿ ಕೂಲಿ ಮಾಡಿ ಹೊಟ್ಟೆ ಹೊರೆಯಕೊಳ್ಳುವವರೇ ಹೆಚ್ಚು. ಈಗ ಆ ಪಧಾಂ ತಪ್ಪಿದೆ. ಆದರೊಳಗೂ ಜನರು ೨೦೦೦ ದುಡ್ಡಿಗೆ ಘಾ ಟುಪೂ ಪೋಜಿತ ಹಣವನ್ನು ತೆರಬೇಕಾಯಿತು. ಇದಕ್ಕು—ಇಲ್ಲಾದನ್ನು ಆಡಲಿಟ್ಟು, ಮಾರಿ ಹ್ಯಾಗೋ ತೆತ್ತರು. ಕೆಲವು ಹಣ ತೆರಲಾರದ ಇನ್ನೂ ಬಾಕಿ ಬಿದ್ದಿದೆ. ಇಲ್ಲಿ ಬನಗಳ ಸಾಲೆ ೧೧೦೦೦ ಮೋಬಲಗಿಟ್ಟ ಜೊತೆ ಒಟ್ಟು ೩೦೦ ಎಕ್ರೆ ಒಂದಾಗಿ ಗ್ರಾಮಸ್ಥರ ಅಂಬೋಣ. ಕಾಯಿದೆಯಂತೆ ೫೦೦೦ ಎಕ್ರೆ ಇರಬೇಕು. ಕಾರಣ ಗೋಕಟಾವ ಹಣವನ್ನೂ, ಬಾಕಿಯಿರುವ ಪೋಜಿತ ಹಣವನ್ನೂ ಮಾಫ ಮಾಡುವಂತೆ ಜುಲೈ ತಿಂಗಳಲ್ಲಿ ಕಲೆಕ್ಟರರಿಗೆ ಮಾಡಿದ ಅರ್ಜಿಗೆ ಇನ್ನೂ ಸರಕಾರ ಉತ್ತರವಿಲ್ಲ. ಗ್ರಾಮಸ್ಥರು ಬಿತ್ತಾಯ ಮಾಡುತ್ತಿದ್ದಾರೆ. ಪಟ್ಟಾಪಿಪತಿಗಳು ಸ್ವತಃ ಇಂದು ಬಗೆಹ ಮಾಡಿ ಏತರಂಗೆ ಕಾಣಬೇಕು ಇತ್ಯಾದಿ.

ಶಿರಸಿ— ಟೀ-ಸ್ಕ್ವಾಡ ನಿಧಿಯ ಇದೇ ತಿಂಗಳ ಲೆಕ್ಕ ಪ್ರಕಟವಾಗಿದೆ. ಈ ತನಕ ರೂ ೨೦೩೬-೧೧-೬ ಕೂಡಿದವು. ಅದರೊಳಗೆ ರೂ ೩೬೭೬-೧-೬ ಖರ್ಚಾದವು. ಈಗ ೫೧ ಕುಟುಂಬಗಳಿಗೆ ಸಹಾಯ ದೊರೆಯುತ್ತದೆ. ಈ ಸಂಖ್ಯೆ ೧೦೦ರ ತನಕ ಬೆಳೆಯಬಹುದು. ಸಾರಾಬಾಬಿಯ ಯುದ್ಧದ ಫಂಡ್ ಸಿಯವರು ಇದಕ್ಕೆ

ರಿಗೆ ಹಂಚುವದಕ್ಕಾಗಿ ಉಚಿತವಾದ ವಸ್ತುಗಳನ್ನು ಕಳಿಸಿದ್ದಾರೆ. ಡಿಸೆಂಬರ ತಿಂಗಳ ಕೊನೆಯ ವಾರದಲ್ಲಿ ಅನ್ನದಾನ, ಗ್ರಾಮಸ್ಥರ ಸಭೆ, ಕ್ರೀಡೆ, ನೃತ್ಯ, ಭಜನೆ, ನಾಟಕ ಮುಂತಾದ ಕಾರ್ಯಕ್ರಮಗಳು ನಡೆಯುವ ಸಂಭವ ಇದೆ. ಊರ ಹಿರಿಯರು, ಪುರೋಹಿತರು, ಸ್ವಯಂಸೇವಕರು ಉತ್ಸಾಹದಿಂದ ಪಾಲುಗೊಳ್ಳುತ್ತಿದ್ದಾರೆ.

ಮುರಡೇಶ್ವರ, ಹಳ್ಳೇರ, ಹೊಳೆಗದ್ದೆ, ಬೆಳಂಬರ, ಅಳ್ವೆಕೋಡಿ ಮುಂತಾದ ಗ್ರಾಮದ ಜನರು ಸಾರ್ವಜನಿಕ ಗಣಪತಿ ವಿಸರ್ಜನ ಸಮಾರಂಭದಲ್ಲಿ ಅತ್ಯುತ್ಸಾಹದಿಂದ ಪಾಲುಗೊಂಡು ಉತ್ಸವವನ್ನು ನೆರವೇರಿಸಿದರು.

ಸಿದ್ದಾಪುರ— ಸನಿಟರಿ ಬೋರ್ಡಿನ ಹಣದ ವಸೂಲಿ ಕ್ರಮಭಂಗದಿಂದ ನಡೆದದೆ. ೧೯೨೬-೨೭, ೨೭-೨೮, ೨೮-೨೯, ೨೯-೩೦ ಹೀಗೆ ಹಿಂದಿನ ೪ ವರ್ಷಗಳ ಬಾಕಿಯು ವಸೂಲಿ ನಡೆದರೆ, ಚಾಲು ಸಾಲಿನ ವಸೂಲಿಯು ಕ್ರಮಪ್ರಕಾರ ನಡೆದೀತು. ಗ್ರಾಮಾಧಿಕಾರಿಗಳು ಹೀಗೆ ಕೊಡುತ್ತಿದ್ದರೋ? ಜಪ್ತಿ ಮಾಡಬೇಕೋ? ಎಂದು ಗದ್ದಲವಾಗಿದೆ. ಜನರ ಕಡೆ ಹಣವಿಲ್ಲ. ಬಡವರ ಅವಸ್ಥೆ ಬಹಳ. ಟೆಕ್ಸನ್ನು ಅಂಕೋಲಾ ಮೇಲೆ ಏರಿಸಿದ ಬೋರ್ಡಿನ ಠರಾವು ಮೇಲೆ ಜಾರಿಯಾಗಿದೆ. ಈ ಕುರಿತು ಜನರು ತಾ. ೩ನೇ ತಾರೀಖಿನ ಸಭೆಯಲ್ಲಿ ಮಾಡಿದ ಠರಾವಿನಂತೆ ಕಲೆಕ್ಟರ ಸಾಹೇಬರಿಗೆ ಅರ್ಜಿ ಮಾಡಿಕೊಂಡಿದ್ದರೆ ಹೊಸ ಠರಾವು ಆದೀತು. ಆದರೆ ಅದಕ್ಕೆ ಕಾಲವಾಗುವದು. ಅದು ತಪ್ಪಿ ಎಲ್ಲರಿಗೂ ಒಂದೇ ಪ್ರಕಾರ ಏರಿಸುವದಾಗಬೇಕು. ಇಷ್ಟು ದಿವಸ ಪತ್ರಿಕೆಯನ್ನು ನೋಡಿ ಪ್ರಕಟಿಸಿ ಜನರ ಆಕ್ಷೇಪಗಳನ್ನು ಕೇಳಿಕೊಂಡು ಅವರಲ್ಲಿ ತಕ್ಕ ತಿದ್ದುಪಡಿ ಮಾಡಬೇಕು. ಕೆಲವು ಜನ ಲಂಗಡಿ ಇಲ್ಲದವರಿಗೆ ಟೆಕ್ಸ ಮಾಫಿ ಮಾಡಿದ್ದು ಸರಿಯಲ್ಲ. ಹಿಂದಿನ ವರ್ಷಗಳ ಬಾಕಿ ಈ ವರ್ಷ ತೆರಲಿಕ್ಕೆ ಜನರಿಗೆ ಸಾಮರ್ಥ್ಯವಿಲ್ಲ. ಮೇಲಾಗಿ ಸನಿಟರಿ ಕೆಲಸ ಸರಿಯಾಗಿ ನಡೆಯಲಿಲ್ಲ. ಸನಿಟರಿ ಬೋರ್ಡಿಗೆ ಸಾಲವೂ ಇಲ್ಲ. ಕಾರಣ ಹಿಂದಿನ ೩ ವರ್ಷದ ಸನಿಟರಿ ಬೋರ್ಡಿನ ಟೆಕ್ಸನ್ನು ಮಾಫಿ ಮಾಡಬೇಕು. ಚಾಲೂ ಸಾಲಿನ ಟೆಕ್ಸನ್ನು ಪತ್ರಿಕೆಯ ಮೇಲೆ ಜನರ ಆಕ್ಷೇಪ ಕೇಳಿಕೊಂಡು ತಕ್ಕ ತಿದ್ದುಪಡಿ ಮಾಡಿ ಆ ಮೇಲೆ ವಸೂಲಿಯ ಕ್ರಮ ನಡಿಸಬೇಕು. ಇತ್ಯಾದಿ ಜಿಲ್ಲಾಧಿಕಾರಿಗಳು ವಿಚಾರಮಾಡುವದನ್ನು ಲಕ್ಷಕ್ಕೆ ತಂದ. ವಸೂಲಿಯ ಕ್ರಮಕ್ಕೆ ತಡೆಮಾಡಬೇಕಾಗಿ ವಿನಂತಿ.

ಜಮಾ-ಖರ್ಚ ಪತ್ರಿಕೆ ತಯಾರಿಸುವಾಗ ಜಾಗ್ರತೆ ತೆಗೆದುಕೊಳ್ಳುವದಿಲ್ಲವಾಗಿಯೂ, ಪುರವಣಿ ಜಮಾ-ಖರ್ಚ ತಯಾರಿಸುವಾಗ ಮತ್ತಿಷ್ಟು ಅಜಾಗ್ರತೆಯಾಗುತ್ತದಾಗಿಯೂ ಸರಕಾರಿ ಅಡಿಟರ-ಜನರಲ್‌ರಾದ ಮಿ| ಬರ್ಡನ್‌ರವರೇ ಆಕ್ಷೇಪ ಮಾಡಿದ್ದಾರೆ. ಜಮೆಗಿಂತ ಖರ್ಚ ಹೆಚ್ಚು, ಸಾಲ ತೆಗೆದು ಖರ್ಚ ಸಿಕ್ಕಷ್ಟು ಮಾಡಿದಾಗ್ಯೂ ಜಮಾ-ಖರ್ಚಿನ ಬಾಯಿಗೂಡಲಿಲ್ಲ. ಇದನ್ನೇ ವರ್ಣಿಸಿ ಮಿ| ಬರ್ಡನ್‌ರವರು ಬರೆಯುವದೇನಂದರೆ:- ಮುಂಚಿನ ವರ್ಷಗಳಲ್ಲಿ ಜಮಾ-ಖರ್ಚ ಬಾಯಿಗೂಡಲಿಲ್ಲ. ಅದಕ್ಕಾಗಿ ಕಾದಿಟ್ಟ ನಿಧಿಯೊಳಗಿಂದ ೭೧ ಲಕ್ಷ ರೂಪಾಯಿ ತೆಗೆದುಕೊಳ್ಳಬೇಕಾಯಿತು. ಜಮೆಗೆ ಮಿಕ್ಕಿ ಖರ್ಚ ಮಾಡುವದು ಯೋಗ್ಯ ಕಾರಭಾರವಲ್ಲ; ಶಿಸ್ತಲ್ಲ. ಮುಂಬಯಿ ಸರಕಾರವು ಹಾಸಿಗೆ ನೋಡಿ ಕಾಲು ಚಾಚದೇಕು. ಹೀಗೆ ಅಡಿಟರ ಜನರಲ್‌ರಾದ ಮಿ| ಬರ್ಡನ್‌ರವರು ಬರೆಯುತ್ತಾರೆ. ಇದಕ್ಕೆ ಮುಂಬಯಿ ಸರಕಾರವು ಕೊಟ್ಟ ಉತ್ತರವೇನಂದರೆ:- "ಇತ್ತಕಡೆ ಜಮಾ-ಖರ್ಚ ಪತ್ರಿಕೆಗಳಲ್ಲಿ ಖರ್ಚ ಹೆಚ್ಚಾಗಬಹುದು ಹೆಚ್ಚಿಗೆ; ಆದರೆ, ನಾವೇನು ಮಾಡುವದು? ಜಮೆಗಿಂತ ಖರ್ಚ ಹೆಚ್ಚು ಮಾಡಿದವರ ಹಿಂದಿನ ಸರಕಾರವು ಕಾದಿಟ್ಟ ನಿಧಿಯೊಳಗಿಂದ ಹಣ ಖರ್ಚ ಮಾಡಬೇಕೆಂದೆ ಮಾಡಿಲ್ಲ ಅದು ಖರ್ಚಿಗೆ ತೆಗೆಯಲೆಂದು ಈ ಪ್ರಕಾರ ಜಮಾ-ಖರ್ಚಿನ ಪತ್ರಿಕೆ ತಯಾರಿಸಿದೆವು." ಇದರಿಂದ ಸರಕಾರವು ಬುದ್ಧಿಪೂರ್ವಕವಾಗಿ ಹಣವನ್ನು ಅಪವ್ಯಯ ಮಾಡಿತೆಂಬುದು ಸ್ಪಷ್ಟವಾಗುತ್ತದೆ. ಈಗಿನಂತೆಯೂ ವಾರ್ಷಿಕ ಜಮಾಖರ್ಚನ್ನು ಬಾಯಿಗೂಡಿಸಬೇಕಾಗಿ ಮಿ| ಬರ್ಡನ್‌ರವರು ಹೇಳುತ್ತಾರೆ. ಅವಕ್ಕೆ ಮುಂಬಯಿ ಸರಕಾರದ ಉತ್ತರವೇನಂದರೆ:- ಮದ್ಯಪಾನಕ್ಕೆ ಪ್ರತಿಬಂಧಿಸುವ ಶೋಚನೀಯ ಕನಕ ಜಮಾ-ಖರ್ಚನ್ನು ಬಾಯಿಗೂಡಿಸಲಿಕ್ಕೆ ಸಾಧ್ಯವೇ ಇಲ್ಲ. ಅದರೊಳಗೂ ಈಗ ವ್ಯಾಪಾರ ಮಂದವಾಗಿದೆ. ಅಬಕಾರಿ ಖಾತೆಯ ಉತ್ಪನ್ನ ತೀರ ಕುಗ್ಗಿದೆ. ವ್ಯಾಪಾರದ ಅಭಿವೃದ್ಧಿಯಾಗಿ ಜನರ ಕೈಯೊಳಗೆ ಹಣ ಬಂದ್ದಾದರೆ, ಜನರು ಮದ್ಯ ಕುಡಿಯುವರು; ಅಬಕಾರಿ ಖಾತೆಗೆ ಉತ್ಪನ್ನ ಬೆಳೆಯುವದು; ಜಮಾ-ಖರ್ಚಿನ ಬಾಯಿಗೂಡುವದು. ಮದ್ಯಪಾನವನ್ನು ನಿಷೇಧಿಸಿದರೆ, ಹೊಸ ಕರಗಳನ್ನು ಹೇರಿದ ಹೊರತು ಜಮಾ-ಖರ್ಚಿನ ಬಾಯಿಗೂಡುವದು." ಅಧಿಕಾರಿಗಳ ಮನ ನೋಡಿರಿ! ಕಂತಂತೆ ಖರ್ಚ ಮಾಡಿ ಕಾದಿಟ್ಟ ನಿಧಿ ಸಂಪೂರ್ಣವಾಗಿ ಅಧಿಕಾರಿಗಳು ನುಂಗಿಬಿಟ್ಟರು; ಮೇಲೆ ಸಾಲ! ಈಗ ಹಾಸಿಗೆ ನೋಡಿ ಕಾಲು ಚಾಚಹೇಳಿದರೆ, ಜನರು ಹೆಂಡ ಕುಡುಕರಾದರೆ ಜಮಾ-ಖರ್ಚಿನ ಬಾಯಿಗೂಡುವದಾಗಿ ಹೇಳುತ್ತಾರೆ. ಇಲ್ಲದಿದ್ದರೆ, ಹೊಸ ಕರ ಹೇರಿಕೊಳ್ಳಬೇಕಂತೆ! ರಾಜ್ಯಕಾರಭಾರದಲ್ಲಿ ನಿಪುಣರಾದ ಬ್ರಿಟಿಶರೆಲ್ಲರು ಉಂಟು ಮಾಡಿದ ಅವಸ್ಥೆಯಿದು. ಹೊಸ ಹೊಸ ಕರಗಳನ್ನು ಹೇರಿಕೊಂಡು ಉಂಡಾಡಿ ದಿವಸನ್ನಾವಸ್ಥೆಯಿದು. ಇವರು ರಾಜ್ಯಕಾರಭಾರ ನಡೆಸಲು ತೀರ ಅಯೋಗ್ಯರೆಂದು ಅಡಿಟರ ಜನರಲ್‌ರಾದ ಮಿ| ಬರ್ಡನ್‌ರವರು ಜಮಾ-ಖರ್ಚನ್ನು ವರ್ಣಿಸಿ ತಿಳಿಸಿದ್ದಾರೆ. ಹೊಸ ಹೊಸ ಕರಗಳನ್ನು ಎಷ್ಟು ದಿವಸ ಮಾಡಬೇಕೆಂದು ಸೂಚಿಸುವ ಮುಂತೆ ಅಧಿಕಾರಿಗಳು ಆತ್ಮಶುದ್ಧಿಯನ್ನು ಮಾಡಿಕೊಳ್ಳುವದುಚಿತವಲ್ಲವೇ?

* * *

ಚೀನ-ಜಪಾನರ ಯುದ್ಧ.

ಚೀನ-ಜಪಾನ ದೇಶಗಳೊಳಗೆ ನಡೆದ ಯುದ್ಧ ದಿನೇದಿನೇ ಕಡೆಯುತ್ತದೆಂದು ಹಿಂದು ವಾರ್ತೆ. ಕಣ ಯಲಿಕ್ಕಿಲ್ಲವಾಗಿ ಮತ್ತೊಂದು ವಾರ್ತೆ; ರಾಷ್ಟ್ರಸಂಘದಲ್ಲಿ ಅಂತರಂಗದಿಂದ ಗುಪ್ತ ಕಾರಸ್ಥಾನಗಳು ನಡೆದು ಚೀನ-ಜಪಾನ ದೇಶಗಳು ತಮ್ಮ ತಕರಾರಿನ ವಿವಾದವನ್ನು ಬಗೆಹರಿಸಿಕೊಳ್ಳಬೇಕಾಗಿ ನಿರ್ಣಯವಾಗಿರುವದಂತೆ. ಅಮೇರಿಕಾ-ಫ್ರಾನ್ಸ ಮೊದಲಾದ ದೇಶಗಳು ವಿವಾದವನ್ನು ರಾಷ್ಟ್ರಸಂಘದ ವಿಸ್ತೃತವಾದ ಚರ್ಚೆಯಿಂದ ಇತ್ಯರ್ಥಪಡಿಸಿಕೊಳ್ಳಬೇಕೆಂದು ಲೀಗ್ ಕಹನಾಮೆ ಮಾಡಿದವು. ಯುದ್ಧಗಳಾಗದಂತೆ ಶಸ್ತ್ರಸನ್ಯಾಸ ಪರಿಷತ್ತಿನ ಅಧಿವೇಶನಗಳಾಗುತ್ತಿವೆ. ಚೀನ ರಾಷ್ಟ್ರವು ಈ ಸಂಘಕ್ಕೊಪ್ಪಿದ್ದು, ಜಪಾನ ದೇಶವು ಬಲಾತ್ಕಾರದಿಂದ ತನಗೆ ರಕ್ಷಣೆಗಾಗಿ ರಾಷ್ಟ್ರಸಂಘದ ಕಡೆ ಅದು ಹೋಗಿತೆಂದು ಹೇಳಿತು. ಜಪಾನ ದೇಶವು ಹಿಂದೆಯೇ ಆ ಸಂಘದಲ್ಲಿ ನೀಗಿತು. ಜಪಾನ ದೇಶದವರು ಬಲಾತ್ಕಾರದಿಂದ ಮಂಚೂರಿಯಾ ಪ್ರಾಂತದಲ್ಲಿ ಬಲಸೇರಿಸಿದ ಸೈನ್ಯವನ್ನು ಹಿಂತೆಗೆದುಕೊಳ್ಳುವದಿಲ್ಲ. ಸೈನ್ಯವನ್ನು ಹಿಂತೆಗೆದುಕೊಂಡರೆ, ಜಪಾನಿಗರ ಕೊಲೆಯಾಗಿ ಅನರ್ಥವಾಗುವದೆಂಬ ನೆವ. ಕವಿಸ್ತ ರಾಷ್ಟ್ರಗಳ ಪ್ರತಿನಿಧಿಗಳನ್ನು ಅಪ್ರದೇಶದಲ್ಲಿಟ್ಟು ಜಪಾನಿಗಳ ಸಂರಕ್ಷಣೆಯಾಗುವಂತೆ ಉಪಾಯ ಕಲ್ಪಿಸಬಹುದಾಗಿ ರಾಷ್ಟ್ರಸಂಘದ ಸೂಚನೆ ಇದೆ. ಇದಕ್ಕೆ ಜಪಾನ ಸರಕಾರವು ಒಪ್ಪುವದಿಲ್ಲ. ಜಪಾನಿಗಳ ಬಹಿಷ್ಕಾರಕ್ಕೆ ತಡೆಯಬೇಕು; ಉಗಿಬಂಡಿ ರಸ್ತೆಗಳು ಹಾಕಿದ ಭಂಡವಲಿನ ಬದ್ರತೆ ದೊರೆಯಬೇಕ; ಕಹನಾಮೆಯನ್ನು ಇಪ್ಪತ್ತರಂತೆ ಪಾಲಿಸುವ ಕರಾರಾಗಬೇಕು; ಅಂದರೆ, ಸೈನ್ಯವನ್ನು ಹಿಂತೆಗೆದುಕೊಳ್ಳುವ ವಿಚಾರ ಮಾಡಬಹುದೆಂದು ಜಪಾನ ಪ್ರತಿನಿಧಿಯ ಅಂಬೋಣ. ರಾಷ್ಟ್ರಸಂಘವು ಹಟವಾದಿ ಜಪಾನಕ್ಕೆ ಕಡಿವಾಣ ಹಾಕಲಾರದು. ಇಷ್ಟಾಗಿ, ರಾಷ್ಟ್ರಸಂಘದಲ್ಲಿ ಸೇರಿದ ಶಾಂತಿಕಾರರ ಪಡೆ ಕರಿದು! ಚೀನ-ಜಪಾನ ದೇಶಗಳಿಗೆ ವಿವಾದ ವಿಷಯವನ್ನು ಶವೆಮ್ಮಾರಿಗೆ ನಿರ್ಣಯಿಸಿಕೊಳ್ಳಬೇಕಾಗಿ ರಾಷ್ಟ್ರಸಂಘವು ಕೇಳಿ ನವೆಂಬರ ೧೬ನೇ ಅಧಿವೇಶನವನ್ನು ನಿಶ್ಚಯಿಸಿದೆ. ಕೆಲಿಸನ್ ಕಹನಾಮೆಯಂತೆ ಯುದ್ಧ ಮಾಡದೆ ಪ್ರಶ್ನೆಯನ್ನು ಇತ್ಯರ್ಥಪಡಿಸಿಕೊಳ್ಳಬೇಕಾಗಿ ಎಲ್ಲ ರಾಷ್ಟ್ರಗಳು ಚೀನ-ಜಪಾನ ದೇಶಗಳಿಗೆ ಪತ್ರ ಕಳಿಸಿವೆ. ಈ ಪ್ರಕಾರ ಬೇರೆ ಬೇರೆ ರಾಷ್ಟ್ರಗಳ ಅಭಿಪ್ರಾಯ ಸಂಗ್ರಹಿಸಿದ ಬಗ್ಗೆ ರಾಷ್ಟ್ರಸಂಘಕ್ಕೆ ನಾಲ್ಕೂ ದಿಕ್ಕಿನಿಂದ ಅಭಿನಂದನೆಯಾಗುತ್ತಿದೆ. ತಪ್ಪು ಮಾಡುವವರೂ ಅವರೇ; ಅಭಿನಂದನೆ ಮಾಡುವವರೂ ಅವರೇ! ಅಂತೂ ದುರ್ಬಲವಾದ ಚೀನ ರಾಷ್ಟ್ರಕ್ಕೆ ಕಾಯುವವರ್‍ಯಾರಿಲ್ಲ. ಶಸ್ತ್ರಬಾಧವ ರಾಷ್ಟ್ರ ಕೇಳಿದಷ್ಟು ಸಂಘದ ಅಧಿವೇಶನಗಳೆಲ್ಲ ವ್ಯರ್ಥವಾಗಿದೆ. ಚೀನ-ಜಪಾನ ದೇಶಗಳು ಪ್ರಕರಣವನ್ನು ಹೇಗೆ ಇತ್ಯರ್ಥಪಡಿಸಿಕೊಳ್ಳುತ್ತವೆ ನೋಡಬೇಕು.

* * *

ಮಹಾತ್ಮರೂ, ಮಕ್ಕಳೂ.

ಶ್ರೀ| ಮಹಾದೇವಭಾಯಿ ದೇಸಾಯಿಯವರು ಕಳೆದ 'ಯಂಗ ಇಂಡಿಯಾ' ಪತ್ರಿಕೆಯಲ್ಲಿ ಮಹಾತ್ಮರು ಮಕ್ಕಳೊಡನೆ ಸಂಗ್ರಹಿಸಿದ ಗೆಳೆತನವನ್ನು ವರ್ಣಿಸಿದ್ದಾರೆ. ೭ ವರ್ಷದ ಹುಡುಗನೊಬ್ಬನು ಮಹಾತ್ಮರಿಗೆ "ಅಂಕಲ್ ಗಾಂಧಿ" ಯಾನೆ ಗಾಂಧಿ ಚಿಗಪ್ಪನೆಂದು ಕರೆದನು; ಈಗ ಅದೇ ಹೆಸರಿನಿಂದ ಎಲ್ಲರೂ ಕರೆಯುತ್ತಾರೆ. ಮಹಾತ್ಮರಿಗೆ ಹುಟ್ಟಿದ ಹಬ್ಬದ ದಿನ ಮಕ್ಕಳು ನಾಯಿಯು ಗೊಂಬೆ, ಮಿಠಾಯಿ ಮೊದಲಾದ ವಸ್ತುಗಳನ್ನು ಮಹಾತ್ಮರಿಗೆ ಕಳಿಸಿ ಹರಸಿದರು. ಒಬ್ಬನು ಮಹಾತ್ಮರ ಕಡೆ ಮಕ್ಕಳ ಉಪದ್ರವವನ್ನು ನಿನೋಡದಿಂದ ಹೇಳಿದನು. ನನ್ನ ಳ ವರ್ಷದ ಚೀನಸು ಪ್ರತಿನಿತ್ಯ ನನಗೆ ಹೊಡೆದು ಎಬ್ಬಿಸುತ್ತಾನೆ. "ನನಗೆ ಹೊಡೆಯಬೇಡ; ಪ್ರೀತಿಯಾಗಿ ಹೊಡೆಯಬಾರದೆಂದು ಗಾಂಧಿ ಹೇಳಿದ್ದಾನೆ." ಹೀಗೆ ನನಗೆ ಉಪದೇಶ ಮಾಡುತ್ತಾನೆ. ಮಕ್ಕಳು ಸಸುಕು ಹರಿಯುವದರೊಳಗೆ ಎಷ್ಟೆತ್ತ ಮುಖಂಡರು ಆಶ್ರಮದ ಹೋದಾಗ ಅವರಿಗೆ "ಗುಡ್ ಮೋರ್ನಿಂಗ!" ಎಂದು ವಂದಿಸುತ್ತಾರೆ! ತಾಯಿ-ತಂದೆಗಳಿಗೆ ಬೇಗನೆ ಏಳುವದು ಬೇಡ, ಅವರಿಗಿದೊಂದು ಉಪದ್ರವವಾಗಿದೆ. ಒಬ್ಬ ಹುಡುಗಳು ಮಹಾತ್ಮರ ಬದಿನ್ನನ ಸಣ್ಣ ನಿಬಂಧ ಬರೆದು ಮಹಾತ್ಮರಿಗೆ ಅರ್ಪಿಸಿದರು: "ಮಹಾತ್ಮರು ಸಂತ ಫ್ರಾನ್ಸಿಸ್‌ರಂತೆ ಇರುತ್ತಾರೆ; ಅವರು ತೆಲೀ ಕಾಲಕ್ಷೇಪ ಮಾಡುತ್ತಾರೆ. ಹಾಗೆಯೇ ಪರೋಪಕಾರ ಮಾಡುತ್ತಾರೆ." ಹೀಗೆ ಒಬ್ಬ ಹುಡುಗಿ ಬರೆದು ತಿಳಿಸಿದ್ದಾಳೆ. ಸ್ವಂತ ಧರ್ಮಶಸ್ತ್ರಗಳನ್ನು ಮಹಾತ್ಮರು ಪರಿಪಾಲಿಸುತ್ತಾರಾಗಿ ಒಬ್ಬ ಹುಡುಗನು ಮಹಾತ್ಮರಿಗೆ ಹರಸಿದ್ದಾನೆ. ಮಹಾತ್ಮರಿಗೆ ಕಾಣಿಕೆ ಹುಡುಗರು ಅರ್ಪಿಸಿದ ತ್ತಾರಾಗಿಯೂ ಶ್ರೀ| ಮಹಾದೇವಭಾಯಿಯವರು ಬರೆದು ಈ ಗೆಳೆತನದಿಂದ ಹಿಂದುಸ್ಥಾನಕ್ಕೂ, ಬ್ರಿಟಿಶ ದೇಶಕ್ಕೂ ಮುಂದೆ ಕಲ್ಯಾಣವಾಗುವದಾಗಿ ಅಭಿಪ್ರಾಯಪಟ್ಟಿದ್ದಾರೆ.

* * *

ಚಿನ್ನ ಹಾರುತಿದೆ!

ಇನ್ನೂ ಚಿನ್ನದ ಪ್ರವಾಹಕ್ಕೆ ತಡೆಬೀಳಲಿಲ್ಲ. ಆತಿಶನಿವಾರ ೧ ಕೋಟಿ ರೂಪಾಯಿಗಳ ಚಿನ್ನ ಅಮೇರಿಕೆಗೂ, ಬ್ರಿಟಿಶ ದೇಶಕ್ಕೂ ಹಿಂದುಸ್ಥಾನದಿಂದ ರವಾನೆಯಾಯಿತು. ಮೊನ್ನಿನ ಹಡಗದಿಂದ ಮತ್ತೆ ಅರ್ಧ ಕೋಟಿ ರೂಪಾಯಿಗಳ ಚಿನ್ನ ಹೋಗುವದಿತ್ತು. ಚಿನ್ನ ರಫ್ತಿಗನುಕೂಲ ಸರಕಾರದ್ದು ಪ್ರತಿಬಂಧ ಮಾಡುವದಿಲ್ಲ. ಅಮೇರಿಕೆಯಲ್ಲೂ, ಫ್ರಾನ್ಸ ದೇಶದಲ್ಲೂ ಚಿನ್ನ ಬಂಡಿಯಾಗಿ ಬಿದ್ದಿದೆ. ಕೆಲ ಚಿನ್ನ ಅಮೇರಿಕೆಯಿಂದ ಫ್ರಾನ್ಸ ದೇಶಕ್ಕೆ ಬಂತು. ಅದರಿಂದ ಮತ್ತೆ ಚಿನ್ನ ಹಾರಿಹೋಗದಂತೆ ಅಲ್ಲಿಯ ಬ್ಯಾಂಕಿನವರು ಪ್ರತಿಬಂಧವನ್ನು ಮಾಡಿಸಿದ್ದಾರೆ. ದಿಲ್ಲಿಯಿಂದ ರಾಷ್ಟ್ರಗಳು ಚಿನ್ನದ ಕೆಲಸ ನೀಗಿಸಿಕೊಳ್ಳುವ ವಿಚಾರ ಮಾಡಿದ್ದಲ್ಲಿ ಚಿನ್ನದ ಹಸಿವೆ ಕಡಿಮೆಯಾದಾಗಿ ಲಂಡನಿನ ಸರ್ ಹ್ಯೂಗೋ ಕನಲಿಫ್ ಓವೆನ್‌ರವರ ಅಂಬೋಣ. ಬ್ರಿಟಿಶರೂ, ಅಮೇರಿಕೆಯವರೂ, ಫ್ರೆಂಚರೂ ಚಿನ್ನ-ಬೆಳ್ಳಿಗಳ ಪ್ರಮಾಣವನ್ನು ನಿಶ್ಚಯಿಸಿದರೆ, ಈಗಿನ ಚಿನ್ನದ ಹಸಿವೆ ಕಡಿಮೆ ಸುಖವಾಗುವದಾಗಿ ಅವರ ಹೇಳಿಕೆ. ಹಿಂದುಸ್ಥಾನ ಸರಕಾರಕ್ಕೆ ಹಣದ ಅಡಚಣೆಯಾಗಿದೆ. ನಿತ್ಯನಿತ್ಯ ಖರ್ಚಿಗೂ ಹಣ ಬೇಕು. ಇದರಿಂದ ಹಿಂದುಸ್ಥಾನ ಸರಕಾರವು ೨-೩ ಕೋಟಿ ರೂಪಾಯಿಗಳ ಸಾಲ ತೆಗೆಯುವ ವಿಚಾರದಲ್ಲಿರುವದಂತೆ. ಶೇಕಡಾ ೭-೮ರಂತೆ ಬಡ್ಡಿ ಸಿಗುವದಾಗಿ ವಾರ್ತೆ.

— ತಂತಿಯ ದರ ಇನ್ನು ೧ ಆಣೆ ಏರಿತು. ಸಾಮಾನ್ಯ ತಂತಿಗೆ ಈಗ ಇಪ್ಪತ್ತು ದರ ಕೊಟ್ಟು, ಮೇಲೆ ಪ್ರತಿ ಶಬ್ದಕ್ಕೆ ೧-೧ ಆಣೆ ಹೆಚ್ಚು ಕೊಡಬೇಕು; ಅಗತ್ಯದ ತಂತಿಗಾದರೆ ೩ ಆಣೆ.

ಸ್ಥಾನಿಕ ವೃತ್ತಾಂತ.

ಕುಮಟಾ— ಸಾಮಾನ್ಯ ಚಳಿ ಬೀಳಹತ್ತಿದೆ. ಒಂದೆರಡು ದಿನ ಮಳೆ ಬಿದ್ದು ಕೊಯ್ದ ಬೆಳೆಗೆ ನಷ್ಟ.

ದಸರಾದಲ್ಲಿ ಇಲ್ಲಿಯ ದೇವಸ್ಥಾನಗಳಲ್ಲಿ ಕೀರ್ತನೆಗಳು ನಡೆದವು. ದಸರೆ ಹಬ್ಬದ ದಿನ ಪರದೇಶಿ ನಿಷೇಧಕರು ಊರವರಿಗೆ ಪಕ್ಕ ಪತ್ರಿಕೆ ಮೊದಲಾದವುಗಳನ್ನು ಹಂಚಿ ಪ್ರಚಾರ ಕಾರ್ಯ ಮಾಡಿದರು. ದೇವಸ್ಥಾನದ ಉಪಕಾರ ಶ್ರೀ ದೇವರ ಕಡೆ ಪ್ರಸಾದ-ಅಕ್ಷತೆ ತೆಗೆದುಕೊಂಡು ಈ ಕವಕ ನಡೆದು ಒಂದ ಪರಂಪರೆಯಂತೆ ಕಾ.ಕ–ಕೊಟ್ಟಾಗ ಒಲಿ ಕೊಟ್ಟರು.

ಶ್ರೀ ಗೋಕರ್ಣ ಕ್ಷೇತ್ರದ ಕಂಪದಂಗಡಿಗಳ ಬೆಂಕಿ ಹತ್ತಿದ ಪ್ರಕರಣದಲ್ಲಿ ಪೋಲೀಸರು ಈವರೆಗೆ ಸರಿಹಿಡಿದು ತಂದಿದ್ದಾರೆ.

ಹೊಸ ಮ್ಯುನಿಸಿಪಾಲಿಟಿಯ ಮೊದಲನೇ ಸಭೆಯು ಸೋಮವಾರ ತಾ ೨೬ರಂದು ನಡೆಯಲಿದೆ. ಆ ದಿನ ಅಧ್ಯಕ್ಷ ಮೊದಲಾದ ಕಾರ್ಯಕಾರಿ ಮಂಡಳಿಯವರ ಚುನಾವಣೆಯಾಗುವದು.

ಕಾಮಲೆಕ್ಕದಂತೆ, ಇಲ್ಲಿಯ ಗಿಬ್ಬ ಹೈಸ್ಕೂಲಿನ ವಿದ್ಯಾರ್ಥಿಗಳ ವಾರ್ಷಿಕ ಸಮ್ಮೇಲನವು ನಿನ್ನೆ-ಮೊನ್ನೆ ಜರುಗಿತು. ವಿದ್ಯಾರ್ಥಿಗಳ ಉಪನ್ಯಾಸ, ಸಂಭಾಷಣ ನಡೆದವು. ನಿನ್ನೆ ಧಾರವಾಡ ಕರ್ನಾಟಕ ಕಾಲೇಜದ ಇತಿಹಾಸ ಅಧ್ಯಾಪಕರಾದ ಪ್ರೊ॥ ಮುಗಳಿಯವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಶಾಲೆಯ ವಾರ್ಷಿಕ ವರದಿಯನ್ನು ಓದಿ ಹೇಳಿದರು. ಸಂಸ್ಥೆಯ ಜನಾ-ಜನಾಂಗ ವಿಷಯವಾಗಿ ಪ್ರೊ॥ ಮುಗಳಿಯವರು ತಮಗೆ ಈ ಸಮಾರಂಭಕ್ಕಾಗಿ ನಿಮಂತ್ರಿಸಿದ ಬಗ್ಗೆ ಆಭಾರ ಮನ್ನಿಸಿ, ಈ ಶಾಲೆಯು ಇಲ್ಲಿ ಸ್ಥಾಪನೆಯಾಗಿ – ಏಕೆ, ಅಖಿಲ ಹಿಂದೂ ಸ್ಥಾನದಲ್ಲಿ ಪ್ರಾರಂಭ ಶಾಲೆಯೊಂದು ಕೊಂಡಾಡಿದರು! ಇಲ್ಲಿಯ ವಿದ್ಯಾರ್ಥಿಗಳು ಚುರುಕರೆಂದೂ, ಆ ಮದರಗಳ ಹಿಂದೆ ಹಲವು ಇಲ್ಲಿ ಹಿಂದಾಗ ಇಷ್ಟೇ ಇರುತ್ತಿಯ ವಿದ್ಯಾರ್ಥಿಗಳಿಗೆ "ಮುಂದೇನು ಮಾಡುವಿರಿ" ಎಂದು ಪ್ರಶ್ನೆ ಕೇಳಿದ್ದಕ್ಕೆ, "ಮಾತೃಭೂಮಿಯ ಸೇವೆ ಮಾಡ ಬೇಕಾಗಿ" ಉತ್ತರ ಕೊಟ್ಟರಾಗಿ ಹೇಳಿದರು. ಕೊಂಡಾಡಿದರು. ಈಗಿನ ಶಿಕ್ಷಣಕ್ರಮದಲ್ಲಿ ಹೊಸ ಯುನಿವ್ಹರ್ಸಿಟಿ ಆಕ್ಟಿನಿಂದ ಬಹಳ ತಿದ್ದುಪಾಟುಗಳಾಗಬೇಕಾಗಿಯೂ, ಅವುಗಳಿಂದ ಪ್ರಯೋಜನ ಪಡೆಯಬೇಕಾಗಿಯೂ ಬೋಧಿಸಿದರು. ಶಿಕ್ಷಕರು ಸ್ವಾರ್ಥತ್ಯಾಗಿಗಳಾಗಿದ್ದರೆ, ವಿದ್ಯಾರ್ಥಿಗಳು ನಿಸ್ವಾರ್ಥ ಸೇವಕರಾಗುತ್ತಾರೆಂದು ಒಬ್ಬ ವಿದ್ಯಾರ್ಥಿಯ ಉಪನ್ಯಾಸ ಕೊಟ್ಟದ್ದನ್ನು, ಅದನ್ನು ಉಲ್ಲೇಖಿಸಿ ಪ್ರೊ॥ ಮುಗಳಿಯವರು ಶಿಕ್ಷಕರ ವ್ಯಸನದಿಂದ ವಿದ್ಯಾರ್ಥಿಗಳು ವ್ಯಸನಾಧೀನರಾಗುವಲ್ಲವಾಗಿ ನುಡಿದರು. ಶಿಕ್ಷಕರು ತಮ್ಮ ಶಿಕ್ಷಣ ಕಾರ್ಯ ಮಾಡಿಯಬೇಕಾಗಿಯೂ ಬೋಧಿಸಿದರು. ಈಗ ಸರಕಾರ ನೌಕರಿಗಾಗಿ ದಿನಗಳಲ್ಲಿ ಎಂಥವಕ್ಕೂ ತಯಾರಿಬೇಕು; ಸೇವೆಗೆ ಅಣಿಗೊಳಬೇಕು. ಜಾತಿಯ ದುರಭಿಮಾನ ಹಿಡಿಯಕೂಡದು, ಅಧ್ಯಯನಾರ್ಜನೆಗೆ ಅಭ್ಯಾಸ ಬೇಕಾಗುತ್ತದೆ, ಅದಕ್ಕಾಗಿ ಮಾತೃಭೂಮಿಯ ಸೇವೆ ಪ್ರಾಪ್ತಿಯಾಗುತ್ತದೆ, ಹೀಗೆ ಸಭಾ ಅಧ್ಯಕ್ಷರು ನುಡಿದು, ಸ್ವಸ್ಥಾನಕ್ಕೆ ತೆರಳಿದರು. ಸಭೆ ವಿಸರ್ಜನ ಹೊಂದಿತು.

ಸ್ವೀಕಾರ –ರಾ॥ರಾ॥ ಮಂಜುನಾಥ ಭಟ್ಟ ಅವರಿಂದ, ಮುದ್ರಿತ ಸಂಚಿಕೆಯಲ್ಲಿ.

ಹೊನ್ನಾವರ— ಗುರುವಾರ ಬೆಳಿಗ್ಗೆ ಹೊಸ ಮ್ಯುನಿಸಿಪಾಲಿಟಿಯ ಸಭೆಯಾಯಿತು. ರಾ॥ ಅಲ್ಲಾಭಕ್ಷರವರು ಒಮ್ಮತದಿಂದ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ರಾ॥ ಪಂಡರೀನಾಥ ಕಾಮತರು ಉಪಾಧ್ಯಕ್ಷರಾಗಬೇಕಾಗಿ ಸೂಚಿಸಿದರು. ರಾ॥ ಮಂಜುನಾಥ ಶಾನಭಾಗ ಅವರು ಅನುಮೋದಿಸಿದರು. ರಾ॥ ಸುಬ್ರಾಯ ಪ್ರಭು ಉಪಾಧ್ಯಕ್ಷರಾಗಬೇಕೆಂದು ರಾ॥ ರಾ॥ ಮಹಾಬಲೇಶ್ವರ ಭಟ್ಟ ಸೂಚಿಸಿದರು. ಅದಕ್ಕೆ ರಾ॥ ಕೃಷ್ಣ ವಾಸುದೇವ ಶಾನಭಾಗರು ಅನುಮೋದಿಸಿದರು. ೨ ಮತಗಳನ್ನು ಗುಪ್ತವಾಗಿ ಪೆಟ್ಟಿಗೆಯಲ್ಲಿ ಹಾಕಬೇಕೆಂದು ಎಂ॥ ಅಮೀರ ಸಾಹೇಬರವರು ಅಂದ ಸೂಚನೆಗೆ ಎಂ॥ ಫರ್ನಾಂಡೀಸರವರು ಅನುಮೋದಿಸಿದರು. ಈ ಸೂಚನೆ ಬಹುಮತವಾಗಿ, ಅಧ್ಯಕ್ಷರ ಚುನಾವಣೆಯಾಯಿತು. ರಾ॥ ನಾಯ್ಕರಿಗೆ ೮ ಮತಗಳು, ರಾ॥ ಕರ್ಕಿಯವರಿಗೆ ೩ ಮತಗಳು ಬಿದ್ದು, ರಾ॥ ನಾಯ್ಕರು ಅಧ್ಯಕ್ಷರಾಗಿ ನೇಮಿಸಲ್ಪಟ್ಟರು.

ಇನಕಮ್ ಟ್ಯಾಕ್ಸ ಕಚೇರಿ ಇಲ್ಲಿ ಬಂದಿದೆ. ನ್ಯಾಯಾಲಯದ ಸ್ಥಿತಿ ಕಂಗೆಟ್ಟಿದೆ. ಆದರೆ, ಇನಕಮ್ ಟ್ಯಾಕ್ಸ ಪ್ರಾಪ್ತಿ ಹೆಚ್ಚಿದೆ. ವರ್ತಕರು ಬಹು ಗೋಳಿಡುತ್ತಾರೆ. ಜನರು ವ್ಯಾಪಾರದಿಂದ ಸಂಸಾರ ಸಾಗಿಸುವ ಬಗೆ ಹೇಗೆಂದು ವಿಚಾರ ಮಾಡುತ್ತಿರುವಾಗ, ಕಸ್ಟಮ್ಸ್ ಇನಕಮ್ ಟ್ಯಾಕ್ಸಿನ ಉಪದ್ರವ ದಿನ್ನಿಗೆ ಎಲ್ಲೆಲ್ಲೂ ಸಂಕ್ರಾಂತಿ ಬಂದಾಗ ಟ್ಯಾಕ್ಸಿನ ದರಗಳನ್ನು ಪುನರಾಲೋಚನೆ ಮಾಡಬೇಕಾಗಿ ಸೂಚನೆ.

ಡಿಸ್ಟ್ರಿಕ್ಟ ಲೋಕಲ್ ಬೋರ್ಡಿನ ಹೊಸ ಅಧ್ಯಕ್ಷರ ಚುನಾವಣೆಯ ದಿವಸ ತಾರೀಖು ನವೆಂಬರ ೩ನೇ ತಾರೀಖಿಗೆ ಬರೋ ಕಡೆ ಸಂಕ್ಷೇಪವಾಗಿ ಚುನಾವಣೆ ತೀರ್ಮಾನಗುವದು.

ಮುಂಡಗೋಡ— ಇಲ್ಲಿಯ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳು ಶ್ರೀ ಮಹಾತ್ಮಾ ಗಾಂಧಿ ಜನ್ಮೋತ್ಸವವನ್ನು ನಡೆಸಿದರು. ಅನೇ ತಾರೀಖಿಗೆ ಮುಂಜಾನೆ ಪ್ರಭಾತಫೇರಿಯ ಮುರವಣಿಗೆ ಶಾಲೆಯಿಂದ ಹೊರಟು, ಪೇಟೆ ಮಾರ್ಗದಿಂದ ಶ್ರೀ ದೇವಸ್ಥಾನಕ್ಕೆ ಬಂದು ಮಹಾತ್ಮರಿಗೆ ದೀರ್ಘಾಯುರಾರೋಗ್ಯ ಪ್ರಾಪ್ತವಾಗಲೆಂದೂ, ಮಹಾತ್ಮರು ಕೈಕೊಂಡ ಕಾರ್ಯದ ವಿಜಯವಾಗಲೆಂದೂ ಪ್ರಾರ್ಥಿಸಿಕೊಂಡರು. ಊರ ಪ್ರಮುಖರೆಲ್ಲರೂ ಮೆರವಣಿಗೆಯಲ್ಲಿ ಸೇರಿದ್ದರು. "ಖಾದಿಯೂ, ಸ್ವರಾಜ್ಯವೂ" ಎಂಬ ಪುಸ್ತಕದ ಪ್ರತಿಗಳನ್ನು ವಿದ್ಯಾರ್ಥಿಗಳಿಗೆ ಹಂಚಿದರು. ರಾತ್ರಿ ರಾ॥ ಗು॥ ಭಟ್ಟರ ಕೀರ್ತನೆಯಾಯಿತು.

ಇಲ್ಲಿಯ ಶ್ರೀ ಮಂಜುನಾಥ ದೇವರ ಭಕ್ತರು ತಿಳಿಸುವದೇನಂದರೆ — ಶ್ರೀ ದೇವರ ಪಾತ್ರವು ಇನ್ನು ಸಮಾಪ್ತವಾಗದೆ ಇದೆ. ಅರ್ಚಕರು ಸಮಸ್ತರ ಕಡೆ ಶ್ರೀ ದೇವರ ಸಾಮಾನನ್ನು ಕಟ್ಟಿಸುವದಕ್ಕಾಗಿ ಹಣಗಳ ಬೇಡುತ್ತಾರೆ. ಶ್ರೀ ದೇವಸ್ಥಾನದಲ್ಲಿ ಪಾವುಗೆ ಅನಾದಿ ಕಾಲದಂತೆ ಪ್ರವೇಶ ಕೊಟ್ಟಿಲ್ಲ. ಹರಿಜನ ಕೊಡುವದು ಯೋಗ್ಯವಾಗಿ ಜನರ ಅಂಬೋಣ. ಅರ್ಚಕರು ಅದಕ್ಕೊಪ್ಪುವದಿಲ್ಲ. ಆದದರಿಂದ ಪಟ್ಟ ಕಡಿತವಿದು ಯುಕ್ತವಾಗಿದೆ. ಅನಾದಿ ಕಾಲದಿಂದ ಈ ದೇವಸ್ಥಾನದಲ್ಲಿ ಎಲ್ಲರಿಗೂ ಪ್ರವೇಶವಿತ್ತು. ಅರ್ಚಕರು ನಿರ್ಬಂಧ ಮಾಡಿ ಮುಂಚಿನಂತೆ ಎಲ್ಲರಿಗೆ ಶ್ರೀ ದೇವಸ್ಥಾನದಲ್ಲಿ ಪ್ರವೇಶ ಕೊಟ್ಟು, ಎಲ್ಲರ ಸಹಕಾರದಿಂದ ದೇವಸ್ಥಾನದ ಜೀರ್ಣೋದ್ಧಾರ ಮಾಡಬೇಕು. ಹಿಂದು ಧರ್ಮದ ಪ್ರಸ್ತುತ ಬೆಳೆದು ಸಂಘಟನೆಯಾಗುತ್ತಿರುವಾಗ, ಅರ್ಚಕರಿಂದ ದುರಭಿಮಾನ ಹಿಡಿಯಲಾಗದು ಇತ್ಯಾದಿ.

ಚಿತ್ರಾಪುರದೊಳಗೆ ಒಂದರಾತ್ರಿ ಹುಲಿ ಕೊಟ್ಟಿಗೆ ಹೊಕ್ಕು ಒಂದು ಆಕಳಿಗೆ ಕೊಂದು ಹಾಕಿತು. ಹಾವಳಿ ದಿನ ಒಟ್ಟಿನಲ್ಲಿ ಗದ್ದೆಯಲ್ಲಿ ಇನ್ನೊಂದು ಆಕಳು ಬಲಿಬಿತ್ತು. ಕಳ್ಳರ ಸಾಕಟಲು ಗುರುವಾರ ಇಲ್ಲಿ ಬೇಟೆಯಾಡುವದಕ್ಕಾಗಿ ಕಾದುಕೊಂಡು ಅಡಕಿ ಗದ್ದೆ. ಹುಲಿಯು ಪತ್ತೆಯಾಗಲಿಲ್ಲ. ಇಲ್ಲಿಯ ಕಳವಿನ ಪತ್ತೆ ಇನ್ನೂ ಪೋಲೀಸರಿಗೆ ಹತ್ತಲಿಲ್ಲ. ಪ್ರಯತ್ನ ಮಾಡುತ್ತಿದ್ದಾರೆ. ಹಿಂದೆ ಆಗಿದ್ದ ಕಳವುಗಳ ಪತ್ತೆಯೂ ಹತ್ತಿಲ್ಲ, ಇದೂ ಸಹ ಅಪತ್ತೆ ಎಂದು ಜನರಿಗೆ ತೋಚಿರುವದೆ ಸಹಜ.

ಶಾಲೆಯ ನಾಗರಿಕರೊಬ್ಬರು ತಿಳಿಸುವದೇನಂದರೆ:— ೧೯೩೧ನೇ ಸಾಲಿನ ಮುಟ್ಟುಗೋಲಿನ ಲೆಕ್ಕ ಪ್ರಕಟವಾದ್ದು ನೋಡಿ ಸಂತೋಷವಾಯಿತು. ಆದರೆ ಪ್ರಮುಖರು ೧೯೩೧ನೇ ಸಾಲಿನಲ್ಲಿ ಕಾಣಿಕೆ ಮುಟ್ಟಿಸಿದ ಜವಾಬ್ದಾರಿ ಲೆಕ್ಕ ಈ ತನಕ ಪ್ರಕಟವಾಗಿಲ್ಲ. ಅದನ್ನು ಬೇಗನೆ ಪ್ರಕಟಿಸಬೇಕಾಗಿ ಅರಿಕೆ.

ಭಟ್ಕಳ— ಚಲೋ ಬಿಸಿಲು ಬೀಳುತ್ತದೆ. ಒಕ್ಕಲಿಗರು ಕೃಷಿ ಕೆಲಸದಲ್ಲಿ ತೊಡಗಿದ್ದಾರೆ. ಒಂದೆರಡು ದಿನ ಚಲೋ ಮಳೆ ಬಿದ್ದು ಬಹಳ ಉಪದ್ರವ.

ವೆಂಕಟಾಪುರದಿಂದ ಬೆಳ್ಕೆ ವರೆಗಿನ ೧೩ ಗ್ರಾಮಗಳ ಅಧಿಕ ತೋಟಿಗರು ಕಳೆದ್ಯಾರೆಂದಿಗೂ, ಸರಕಾರಕ್ಕೆ ಒಂದು ಅರ್ಜಿ ಮಾಡಿಕೊಂಡಿದ್ದಾರೆ. ಬೆಳೆ ಹುಟ್ಟಲಿಲ್ಲ, ಹುಟ್ಟಿದ ಬೆಳೆಗೆ ದರವಿಲ್ಲ; ಸಂಸಾರ ಮಾಡುವದು ಕಷ್ಟ; ತೀರ್ವೆ ಸೂಟು ಬಿಡಬೇಕು; ಕಾಗಾದಿ ಸಾಲ ಕೊಡಬೇಕು. ಇತ್ಯಾದಿ ಬರೆದು ಸರಕಾರಕ್ಕೆ ಸರವಾಗಲು ಬೇಡಿಕೊಂಡಿದ್ದಾರೆ. ಜಿಲ್ಹಾಧಿಕಾರಿಗಳ ದಾಕ್ಷಿಣ್ಯವು ಇಲ್ಲಿಯೇ ಉಂಟು. ಅವರು ತೋಟಿಗರ ಸ್ಥಿತಿಯನ್ನು ಸ್ವತಃ ಚೌಕಶಿ ಮಾಡಿ ಕಷ್ಟಸ್ಥಿತಿಯನ್ನು ಸರಕಾರಕ್ಕೆ ತಿಳಿಸಿ ದೈಹಿಕರಿಗೆ ಸಹಾಯ ಮಾಡಬೇಕಾಗಿ ವಿನಂತಿ.

ಇಲ್ಲಿಯ ಶ್ರೀ ಶಾಂತೇರಿ ಕಾಮಾಕ್ಷಿ ದೇವಸ್ಥಾನದಲ್ಲಿ ನವರಾತ್ರಿ ಉತ್ಸವವು ಎಂದಿನಂತೆ ಉತ್ಸಾಹದಿಂದ ನೆರವೇರಿತು. ಇಲ್ಲಿ ಹುಡುಗಾರ ದಸರೆ ದಸರೆಯ. ದಿನ ಎಂದಿನಂತೆ ಶಾಲೆಗಳ ಹುಡುಗರ ಸವಾರಿಯಾಯಿತು. ಪರದೇಶಿ ನಿಷೇಧಕರಿಗೆ ಹೀಗೆ ವ್ಯಸನವಾಗಿದೆ.

ಶಿದ್ದಾಪುರ— ಬಿಸಿಲು. ರೈತರು ಅಧಿಕ ಕೊಸೆ ಕೊಯ್ಯಲಾರಂಭಿಸಿದ್ದಾರೆ. ಸಮಯ ಸಾಧಿಸಿ ಮೇಘರಾಜನು ಸೊಡ್ಡು ತಿರಿಸುತ್ತಾನೆ.

ಪ್ರಾಂತ ಸಾಹೇಬರ ಮುಕ್ಕಾಮು ಇಲ್ಲಿದೆ. ಹಳ್ಳಿಗಳ ಅಧಿಕ ತೋಟಿಗಳ ಪೀಕಪಹಾಣಿ ಮಾಡುವ ಬಗ್ಗೆ ಪೀಕಪಹಾಣಿಯನ್ನು ಸಾಹೇಬರು ಸರಿಯಾಗಿ ಮಾಡಿ ರೈತರಿಗೆ ಸಹಾಯ ಮಾಡಬೇಕು.

ಹೇರೂರ, ಹೊಸಕೋಟೆ, ಶಾನಗಾರ ಕಡೆ ಹುಲಿಯ ಉಪದ್ರವ ವಿಪರೀತ. ಪ್ರಾಂತ ಸಾಹೇಬರು ಈ ಕಡೆ ಲಕ್ಷ ಕೊಡಬೇಕು.

ಬಡಸಾಲೆ ಪ್ರೋಬೇಶನರಿ ದಾರಿ ಸ್ವಚ್ಛ ಕೊಡಹತ್ತಿದ್ದಾರೆ. ಇವರ ಅರ್ಜಿ ತಿಳಿಯಲಿಲ್ಲ. ಸತ್ಯಾಗ್ರಹದ ದಿನಗಳಲ್ಲು ಇಡಬಹುದು ಹುಚ್ಚಿಗೆ ಬೀಳಲಿಯಿತೇನು?

ಸರಕಾರಿ ಶಾಲೆಯಲ್ಲಿ ಶ್ರೀ ಸರಸ್ವತೀ ದೇವಿಯ ಪೂಜೆ ಮಾಡಿತು. ಶಿಕ್ಷಕರೂ, ವಿದ್ಯಾರ್ಥಿಗಳೂ ಬಲ್ಲೇ ಬಹಳ ದಿಂದ ಉತ್ಸವವನ್ನು ಹಿಂಗಗೊಳಿಸಿದರು. ಶ್ರೀ ವೆಂಕಟರಮಣ ದೇವರಲ್ಲಿ ನವರಾತ್ರಿಯ ಪ್ರೀತ್ಯರ್ಥ ವಿಶೇಷ ವಿವಿಧ ಯೋಗಗಳು ನಡೆಯುತ್ತವೆ.

ದಸರೆಯ ದಿನ ಯಾಲಕ್ಕಿ ಮಾ॥ ಗಳ್ಳ ದಿನ, ಎಂದಿನಂತೆ ದಸರೆಯಾಯಿತು.

ಅಂಕೋಲಾ— ಮಳೆ ದಿನಾ ಬೀಳುತ್ತಿದೆ. ಆದದರಿಂದ ಬೆಳೆ ಕೊಯ್ಯುವಿಕೆಯ ಅನುಕೂಲವಾಗದೆ ತೊಂದರೆ ಯುಕ್ತವಾದದರಿಂದ ಮಳೆ ಸ್ವಲ್ಪ ತಡೆದಿದೆ. ಇನ್ನೊಂದು ಆ ದಿನ ಕಡೆದರೆ, ಹುಟ್ಟಿದ ಬೆಳೆ ಒಕ್ಕಲಿಗರ ಕೈಸೇರುವದು.

ಇನಕಮ್ ಟ್ಯಾಕ್ಸ ಆಫೀಸರರು ಇಲ್ಲಿಯ ತಮ್ಮ ಸಕಲ ಕೆಲಸ ಮುಗಿಸಿಕೊಂಡು ಮುಂಬೈಗೆ ಹೋದರು. ಲೆಕ್ಕವಿಡದವರಿಗೆ ಯಾವದಾದರೊಂದು ಕಾರಣ ಲೆಕ್ಕ ತರುವಂತೆ ಹೇಳುತ್ತಾರೆ. ಲೆಕ್ಕ ತಂದವರಿಗೆ ಆಧಾರ ಕೇಳುತ್ತಾರೆ. ಆಧಾರ ತೆಗೆದು ತಂದವರಿಗೆ ತಮಗೆ ಸರಿಯಾದುದಾಗುವಂತೆ ಆಧಾರ ತೆಗೆದು ತರಹೇಳುತ್ತಾರೆ. ಲೆಕ್ಕ ಬಿಂದಲೂ, ಆಧಾರಗಳಿಂದಲೂ-ನಿರ್ಧಾರ-ಮಾಡಿಕೊಳ್ಳದೆ ದಿಂದ ಲೆಕ್ಕವನ್ನು ಅಲಕ್ಷಿಸಿ ಯೋಗ್ಯ ತೆರಿಗೆ ನಿರ್ಧರಿಸಬೇಕಾಯಿತು ಎಂದು ವ್ಯಸನಪಟ್ಟೇನೆ ನುಡಿದು, ಹೇಗೆ ತೆರಿಗೆ ಹೆಚ್ಚಿಸುತ್ತಾರೆ. ಯಾವ ರೀತಿಯಿಂದ ಲೆಕ್ಕವಿಡಬೇಕು, ಯಾವ ರೀತಿಯಿಂದ ಆಧಾರ ಪತ್ರಿಕೆ ಕಾಪಾಡಬೇಕು, ಯಾವ ರೀತಿಯಿಂದ ಅವರಿಗೆ ಸಮಾಧಾನ ಮಾಡಬೇಕು ಎಂಬುದು ತಿಳಿಯದ ಜನರ್ಗ್ಗರ ವ್ಯಾಪಾರಿಗಳನ್ನೂ, ಆಧಾರವು ಭ್ರಾಮಕಗಳನ್ನೂ ಕಾಪಾಡಿ ಅವರೊಳಗೆ ಆಯ್ದು ಲೆಕ್ಕ ಹಾಕಿ, ಆಧಾರ ತೆಗೆದು ಲೆಕ್ಕದ ಪದ್ಧತಿ ತೋರಿಸಬೇಕು. ಒಂದು ಪಾಠ ನಡೆಸಬೇಕೆಂದು ಕೂಡಲೇ ಅರ್ಜಿ

ಸಾಯಿ ಜನರಿಗೆ ವಗವೆಗರಿಂದ ಸ್ವಾಗತ ಮಾಡುತ್ತಾರೆ, ಸವಾಸ್ಥಾನ-ಚಮತ್ಕಾರಗಳಾಗುತ್ತವೆ. ಇದನ್ನೆಲ್ಲ ನೋಡಿದರೆ, ಮಾತ್ರ ಕೊಟ್ಟರೂ ದಕ್ಷಾಸ್ತಾರವಾಗುವದಿಲ್ಲ. ಅಂತು ಈ ವರ್ಷದ ಸಂಕ್ರಾಂತಿ ತಪ್ಪಿತು.

ಸರಯು ಅಂಗಡಿಯ ಬಿಕೆಟಿಂಗು ಅಕ್ಷಯವಾಗಿ ನಡದವೆ. ಇಂಕೆಂದು ಗಾರ್ ಭುವನದ ಕಾಫಿ ದಾಕಾನದಾರನು ಶ್ರೀ ಪ್ರತಿಜ್ಞೆ ಮಾಡಿದ ಚರಡ ಮಾಡಿದನು. ಪ್ರಸ್ತುತ ಪಿಕೆಟಿಂಗಾಯಿತು ಬೇಗನೆ ಕ್ರಮವಾದ ವಿಧಿ ನಡೆದುದು.

ಇಲ್ಲಿಯ ಎಸ್ಸ್ವಾರ್ ಹೈಸ್ಕೂಲಿನಲ್ಲಿ ವಾಡಿಕೆಯಂತೆ ಶ್ರೀ ಸರಸ್ವತೀ ಪೂಜೆಯ ಉತ್ಸವವು ವಿಜೃಂಭಣೆಯಿಂದ ನಡೆಯಿತು.

ಒಬ್ಬರು ತಿಳಿಸುವದೇನಂದರೆ,— ಇಲ್ಲಿಯ ಹೈಸ್ಕೂಲಿನಲ್ಲಿ ನಡೆಸುವ ವಿದ್ಯಾರ್ಥಿಗಳ ಸಮ್ಮೇಲನದೊಳಗೆ ಹುಡುಗರ ಜೊತೆಗೆ ಹುಡುಗಿಯರು ನಾಟಕ ಪಾತ್ರ ವಹಿಸುವ ರೆಂಬ ಪ್ರಕಟವಾದ ಸುದ್ದಿ ಯಥಾರ್ಥವಲ್ಲ, ಹುಡುಗರು ಮಾತ್ರ ಪಾತ್ರ ವಹಿಸುವರು.

ಕಳೆದ ೩ ೧೩-೧೪ನೇಗೆ ಇಲ್ಲಿ ಶಿಕ್ಷಕರ ಸಮ್ಮೇಲನವಾಯಿತು. ಸುಪರಿಂಟೆಂಡೆಂಟಾದ ರಾ| ಕಸಬೇಕರರು ಅಧ್ಯಕ್ಷರಾಗಿದ್ದರು. ೫ ಮಾದರಿಯ ಪಾಠಗಳು ಕಲಿಸಲ್ಪಟ್ಟವು. ಶಿಕ್ಷಣ ವಿಷಯಕ ಪ್ರದರ್ಶನ ನಡೆದಿತ್ತು. ಹುಡುಗರು ಮಾಡಿದ ಉಪಕರಣಗಳೂ, ಕಸೂತಿಯ ಕೆಲಸಗಳೂ, ಅಂಕಿ-ಮಗ್ಗಿಗಳ ಪಟಗಳೂ, ನೂಲುವ ರಾಟಿಯೂ, ಹಸ್ತ ಕಾರಿಯುವ ಮಾದರಿಗಳೂ ಚಿನ್ನಾಗಿದ್ದವು. ರಾ| ಕಸಬೇಕರರು ಭಾಷಣ ಮಾಡಿ ಶಿಕ್ಷಕರಿಗೆ ಕಲಿಸುವ ಸಮಾಧಾನೆಯನ್ನು ತಿಳಿಸಿಕೊಟ್ಟರು. ರಾ| ವೆಂಕಟರಮಣ ಕಾಂಬ ಭಟ್ಟರೂ, ರಾ| ಗಣೇಶ ಕಾಣ್ಣಲಗೇಕರರೂ ಭಾಷಣ ಮಾಡಿದರು. ಸಹಕಾರದ ಉಪದೇಶವಾಯಿತು. ಸಹಕಾರದ ಮೇಲೆ ಉತ್ತಮ ನಿಬಂಧ ಬರೆದ ಮೂವರು ಹುಡುಗರಿಗೆ ೫ ರೂಪಾಯಿಗಳೊಳಗೆ ೩ ಬಹುಮಾನ ಕೊಡುತ್ತೇನಾಗಿ ರಾ| ಕೆಗದೆರು ಮುಗ್ದಾವ ಮಾಡಿದ್ದಾರೆ.

(೫ನೇ ಕಲಮಿನಿಂದ ಮುಂದರಿಸಿದ್ದು)

ರ ಕಾರ್ಯದರ್ಶಿಗಳಾದವರು "ಮೆಕಡೋನಲ್ಡರವರಿಗೆ ರಾಜ್ಯಾಧಿಕಾರ ದೊರಕುವದಾಗಿ ನಾವು ಹಿಂದೆಯೇ ಹೇಳಿದ್ದೆ. ಆಗ ಇಜಿಪ್ತ-ಹಿಂದುಸ್ಥಾನ ದೇಶಗಳಿಗೆ ಹ್ಯಾಗೆ ನಡಿಸಿಕೊಳ್ಳಬೇಕೆಂದು ತಿಳಿಸಿದ್ದೆ. ಒವರದರಂತೆ ನಡೆಕೊಂಡಿದ್ದರೆ, ಇಂದಿಗೆ ಈ ಸ್ಥಿತಿ ಬರುತ್ತಿರಲಿಲ್ಲ." ಹೀಗೆ ಮಿ| ಅಗೋರ ಯಸುಫರವರು ನುಡಿದರು

[೭ನೇ ಪಾನಿನಿಂದ ಮುಂದರಿಸಿದ್ದು]

ದೊಳಗೇನಿದೆಂದು ನೋಡಬೇಕಲಿಲ್ಲ ಕಾಲಹರಣಮಾಡಿ ತಮ್ಮ ಮನಸ್ಸಿನಲ್ಲಿದ್ದಷ್ಟನ್ನೇ ಕೊಟ್ಟು, ಮೇಲೆ ಪರೋಪಕಾರಿಗಳೆಂದೂ, ಹಿಂದುಸ್ಥಾನದೊಳಗಿನ ಪರಿಸ್ಥಿತಿಗೆ ಕೊಟ್ಟದ್ದೇ ಹೆಚ್ಚಾಯಿತೆಂದೂ ಲೋಕದಲ್ಲಿ ಘಾಸನಾಡುವದಕ್ಕೋಸ್ಕರ ಪರಿಷತ್ತು, ಕಮಿಟಿ, ಮಂಡಲ-ಉಪಮಂಡಲ, ಶಿಷ್ಟರ ದಿಗ್ವಿಜಯ ಮೊದಲಾದ ಉಪಕ್ರಮಗಳು ನಡೆಯುತ್ತವಾಗಿ ಜನಸಾಮಾನ್ಯರ ಅಂಬೋಣ.

ಮುಸಲ್ಮಾನರಿಗೂ, ಮಹಾತ್ಮರಿಗೂ ಐಕ್ಯಮತ್ಯವಾಗಲಿಲ್ಲ ಸ್ವರಾಜ್ಯ ಸರಕಾರಕ್ಕೆ ಮುಂಚೆ ಮುಸಲ್ಮಾನರು ಬಂಬಲ ಕೊಟ್ಟು, ಆ ಮೇಲೆ ಅಧಿಕಾರದ ಪಾಲುಗಾರಿಕೆಯನ್ನು ವಿಚಾರ ಮಾಡಲು ಮುಸಲ್ಮಾನರು ಒಪ್ಪರು. ಪಂಜಾಬ ಪ್ರಾಂತವನ್ನು ತುಂಡರಿಸಿ ಕೆಲ ಭಾಗ ಸಂಯುಕ್ತ ಪ್ರಾಂತಕ್ಕೆ ಒಪ್ಪಿಸಿ ಲೋಕಸಂಖ್ಯೆಯ ಮಾನದಿಂದ ಆಸನ ಕೊಡಬೇಕಾಗಿ ಒಂದು ಸೂಚನೆ ಬಂದಿತ್ತು, ಅದಕ್ಕೆ ಶೀಖರು ಒಪ್ಪಲಿಲ್ಲ. ಮಹಾತ್ಮರು ಬರ್ಮಿಂಘೆಮದ ಭಾಷಣದಲ್ಲಿ ಸತ್ಯಸ್ಥಿತಿಯನ್ನು ಹೇಳಿಬಿಟ್ಟರು: "ಕಳ್ಳರು ಲೂಟಿಯನ್ನು ಹಂಚಿಕೊಳ್ಳುವಂತೆ ಪ್ರತಿನಿಧಿಗಳು ಜನಸಾಮಾನ್ಯರ ಹಕ್ಕು ಮುಳುಗಿಸಿ ಸ್ವಾರ್ಥ ಸಾಧಿಸಹತ್ತಿದೆಸುತ್ತಾರೆ; ಬ್ರಿಟಿಶರು ಹಿಂದುಸ್ಥಾನದಿಂದ ಕಾಲ್ತೆಗೆದು ಕೊಳ್ಳುತ್ತೇವಾಗಿ ಹೇಳಿದ ಕ್ಷಣಕ್ಕೆ ನಮ್ಮೊಳಗೆ ರಾಜಿಯಾಗುತ್ತದೆ ಪರಚಕ್ರದಿಂದ ನಮ್ಮ ಐಕ್ಯಭಂಗವಾಗಿದೆ ಬ್ರಿಟಿಶ ಜನಾಂಗವು ಸಾಮ್ರಾಜ್ಯ ಸರಕಾರದ ಪ್ರಧಾನರಿಗೆ ಒತ್ತಾಯ ಮಾಡಿದನಕ ರೌಂಡ ಟೇಬಲ್ ಪರಿಷತ್ತು ಸಾರ್ಥಕವಾಗದು. ಸಾಮ್ರಾಜ್ಯ ಸರಕಾರದ ಪುನರ್ವ್ಯವಸ್ಥೆಯಿಂದ ತಮಗೆ ಆಯೋಗ್ಯ ಲಾಭಸಿಗುವದೆಂದೆಣಿಸಿ ಅಲ್ಪ ಸಂಖ್ಯಾಕರು ಒಕ್ಕಟಾಗುವದಿಲ್ಲ ಹೀಗೆ ಮಹಾತ್ಮರು ಬರ್ಮಿಂಘೆಮದಲ್ಲಿ ಹೇಳಿಬಿಟ್ಟರು.

ಮಹಾತ್ಮರು ನೋಟಿಂಘೆಮದಲ್ಲಿ ವಿದ್ಯಾರ್ಥಿಗಳಿಗೆ ಸದುಪದೇಶ ಮಾಡಿದರು ರಾಷ್ಟ್ರೀಯ ಸಭೆಯ ಧ್ಯೇಯವನ್ನೂ ಹಿಂದುಸ್ಥಾನದ ಸ್ಥಿತಿಯನ್ನೂ ತಿಳಿಸಿಹೇಳಿದರು. ಆಸರ ಲಂಡನಿನೊಳಗಿನ ಪಾಕಕ್ರಾಸ್ಟ್ರೀಯ ವಿದ್ಯಾರ್ಥಿಗಳ ಪರಿಷತ್ತಿನಲ್ಲಿ ಮಹಾತ್ಮರು ಮಾಡಿದ ಪ್ರ ಬಹು ಚಿತ್ತಾಕರ್ಷಕವಿದೆ ಈ ಸಮಾರಂಭದಲ್ಲಿ ೫೨ ದೇಶಗಳ ೪೦೦ ಮಂದಿಗಳು ಸೇರಿದ್ದರು. ಭಿನ್ನ ಭಿನ್ನ ಅಭಿಪ್ರಾಯಗಳ ಜನರಿದ್ದರು. ಮಹಾತ್ಮರು ನಿರ್ದಾಕ್ಷಿಣ್ಯದಿಂದ ಮಾತಾಡಿದರು. "ನಿಮ್ಮ ಇಡೀ ಜೀವನಕ್ರಮವು ತಿದ್ದುಪಡಿಯಾಗಬೇಕು. ಬ್ರಿಟಿಶರು ಅಮೂಲಾಗ್ರ ಸುಧಾರಿಸಬೇಕು ಪರರಾಷ್ಟ್ರಗಳ ಸುಲಿದು ಜೀವಿಸುವ ಜನಾಂಗದವರು ನೀವು. ವಿಪರೀತವಾಗಿ ಭದ್ರಪಡಿಸಿದ ಉದ್ದಿಮೆಗಳನ್ನು ತೊರೆದು ಗ್ರಾಮಾಂತರಗಳಲ್ಲಿ ಹೋಗಿ ಜೀವಿಸಿರಿ. ನಿಮಗೆ ಗರ್ವ ಬಂದಿದೆ, ನಿಮಗೆ ಅರಸರು, ನಮಗ ಮಾತ್ರ ಅವರು ಬಾದಶಹರು; ಅರಸರಲ್ಲ ಈ ಶಬ್ದದ ಉತ್ಪತ್ತಿಯೇ ನಿಮ್ಮ ಗರ್ವದ ದ್ಯೋತಕ." ಹೀಗೆ ಮಹಾತ್ಮರು ಜನರಿಗೆ ತಿಳಿಸಿ, ಬ್ರಿಟಿಶರಿಂದ ಹಿಂದುಸ್ಥಾನಕ್ಕಾದ ಅನ್ಯಾಯವನ್ನು ತಿಳಿಸಿದರು ಲೋಥಿಯನ್ ದೊರೆಗಳ ಅಧ್ಯಕ್ಷತೆಯಲ್ಲಿ ಹಿಂದಹಿತವಿರೋಧಕ ಬ್ರಿಟಿಶರ ಸಭೆಯಾಯಿತು ಈ ಸಭೆಗೆ ಪತ್ರಿಕಾ ಪ್ರತಿನಿಧಿಗಳಿಗೆ ಪ್ರವೇಶವಿರಲಿಲ್ಲ ಮಹಾತ್ಮರು ಸಮಾರೋಪ ಮಾಡುವಾಗ ಬ್ರಿಟಿಶರು ಹಿಂದುಸ್ಥಾನದಲ್ಲಿ ನಡಿಸಿದ ಅನ್ಯಾಯವನ್ನು ವಕ್ತೃತ್ವಪೂರ್ಣವಾಗಿ ವಿವರಿಸಿದರಂತೆ ಯೊರ್ಕದ ಆರ್ಚಬಿಶೊಪರ ಅಧ್ಯಕ್ಷತೆಯಲ್ಲಿ ಬಿಶೊಪ್ ಯಾನೆ ಧರ್ಮಾಧಿಕಾರಿಗಳ ಸಭೆಯಾಯಿತು ಮಹಾತ್ಮರು ಧಾರ್ಮಿಕ ಪ್ರವಚನ ಕೊಟ್ಟರು. ಇನ್ನೊಂದು ಸಭೆಯಲ್ಲಿ "ಹಿಂದೀಯರು ಜಾಗ್ರತರಾಗಿದ್ದಾರೆ, ಅವರಿಗೆ ಸಂಪೂರ್ಣ ಸ್ವಾತಂತ್ರ್ಯ ಸಿಗದನಕ ಸಮಾಧಾನವಿಲ್ಲ; ಅದಕ್ಕಾಗಿ ಅವರು ಹೋರಾಡುವರು ಅವರಿಗೆ ಪ್ರತಿಬಂಧಿಸಲು ಭೂಲೋಕದಲ್ಲಿ ಯಾವ ಸಾಮರ್ಥ್ಯವೂ ಇಲ್ಲ" ಹೀಗೆ ಮಹಾತ್ಮರು ನುಡಿದರು

ಸೋಮವಾರ ಲಂಡನಿನಲ್ಲಿರುವ ಇಜಿಪ್ತದ ನಿವಾಸಿಗಳು ಮಹಾತ್ಮರಿಗೂ, ಪಂಡಿತ ಮಾಲವಿಯರಿಗೂ ನಿಮಂತ್ರಿಸಿದ್ದರು. ಅವರಿಗೂ ಹೋಗಲಾಗಲಿಲ್ಲ ಮಗಂದಿರಿಗೆ ಕಳಿಸಿದ್ದರು "ಮಹಾತ್ಮರ ಮೇಲೆ ಇಜಿಪ್ತರಿಗೆ ಮಮತೆ; ಮಹಾತ್ಮರು ಇಡಿ ಮಾನವಕೋಟಿಯ ಕಲ್ಯಾಣಕ್ಕಾಗಿ ದುಡಿಯುತ್ತಾರೆ" ಹೀಗೆ ಮಿ| ಅಮೀನ ಯುಸುಫರವರು ನುಡಿದರು ಅವಿವಾನ ಯುಸಾಸರವರು ಇಜಿಪ್ತದೊಳಗಿನ ರಾಷ್ಟ್ರೀಯ ಪಕ್ಷದ ಏಸ್ತರು; ಝಗಲೂಲ ಪಾಶಾರ

(ಮುಂದ ೧ನೇ ಕಲಮು ನೋಡಿರಿ)

ಹಣ್ಣು-ಹಂಪಲಗಳ ಬಾಗಾಯತವು!

ಲೇಖಕ— ಶ್ರೀ| ಶಂಭು ಭಟ್ಟ, ಎಮ್. ಎಜಿ.

ಶ್ರೀ| ಶಂಭುಭಟ್ಟ, ಎಮ್. ಎಜಿ ಇವರು ಕನ್ನಡದಲ್ಲಿ ಒರೆದ ಪುಸ್ತಕವು ಹಿಂದುಸ್ಥಾನದಲ್ಲಿ ಬೆಳೆಯಬಹುದಾದ ಎಲ್ಲ ತರದ ಹಣ್ಣು-ಹಂಪಲಗಳ ತೋಟದ ವ್ಯವಸಾಯಕ್ಕೆ ಬಹಳ ಪ್ರಯೋಜನಕಾರಿ ವ್ಯವಸಾಯದ ಕ್ರಮವು ಸುಲಭವಾಗಿ, ವಿವರವಾಗಿ ವರ್ಣಿಸಲ್ಪಟ್ಟಿದೆ ಇಷ್ಟು ಸುಗಮವಾಗಿ ಈ ವಿಷಯ ತಿಳಿಸಿಹೇಳಿದ ಪುಸ್ತಕವು ಇದೇ ಮೊದಲನೆಯದು ನೆಲದ ಪರೀಕ್ಷೆ, ಅಲ್ಲಿ ಬೆಳೆಯಿಸಬಹುದಾದ ಬೆಳೆ, ಮಳೆ-ಬೇಸಿಗೆ-ಚಳಿಗಾಲಗಳಲ್ಲಿ ಹಚ್ಚಬಹುದಾದ ಬೆಳೆ, ಹಣ್ಣಿನ ಗಿಡ ಹಚ್ಚುವ-ಬೆಳೆಯಿಸುವ ಕ್ರಮ ಮೊದಲಾದ ಸಂಗತಿಗಳು ತಿಳಿಸಿಹೇಳಲ್ಪಟ್ಟಿವೆ. ಸ್ವಲ್ಪ ಭಂಡವಾಲಿನಿಂದ ಸಾಮಾನ್ಯ ರೈತರು ಸಹ ಈ ಪುಸ್ತಕದೊಳಗಿನ ಕ್ರಮಗಳನ್ನು ಕೈಕೊಂಡು ಲಾಭ ಹೊಂದಬಹುದು ಈ ಪುಸ್ತಕವು ೨೬೦ ಪುಟಗಳಷ್ಟು ಬೆಲೆ ಬರೇ ೨ ರೂಪಾಯಿ!

ಪುಸ್ತಕ ಸಿಗುವ ಪತ್ತೆ:—

ಸೆಂಟ್ರಲ್ ಪ್ರಿಂಟಿಂಗ ಪ್ರೆಸ್, ಕಾರವಾರ.

Siromani Udipi Narayanacharya

CHAUKHAMBA, BENARES CITY.

ಸುಪ್ರಸಿದ್ಧ ರುದ್ರಾಕ್ಷಿಯನ್ನು ಧರಿಸಿಕೊಂಡು ತಮ್ಮ ಮನೋರಥವನ್ನು ಹೊಂದಿರಿ. ನಂ. 108 ರ 1ಕ್ಕೆ 0-6-0 ಯಿಂದ 10 ರೂಪಾಯಿ ವರೆಗೆ ಬಹು ಸಣ್ಣದಾಗುತ್ತ ಆಗುತ್ತ ಕ್ರಯ ಹೆಚ್ಚುವದು. ಕಂಠಿ ನರ 32 ದರ 1ಕ್ಕೆ ರೂ.0-8-0ಯಿಂದ ರೂ 100. ವರೆಗೆ ಗೌರಿಶಂಕರ 1ಕ್ಕೆ ರೂ. 3-8-0ರಿಂದ 35ರ ವರೆಗೆ ಮತ್ತು ಬೇರೆ ಮಾಲುಗಳ ವಿವರ ತಿಳಿಯಲು ಅಪೇಕ್ಷಿಸುವವರು 0-1-0ಸ್ಟಾಂಪು ಕಳಿಸುವರೆ, 1ಕಾರ್ಡಿನಲ್ಲಿ, 1ವಿಸ್ತೀರ್ಣದ ಪತ, ನಮ್ಮ ಕಟಲಾಗು ಸಹ ಉಚಿತ ಕಳಿಸಲಾಗುವದು ಪತ್ತೆ:-

ಶಿರೋಮಣಿ ನಾರಾಯಣಾಚಾರ್ಯ.

ಚೌಕಾಂಬಾ, ಕಾಶೀ ಕ್ಷೇತ್ರ.

ದಿ ಕೆನರಾ ಬುಕ್ ಬ್ಯಾಂಡಿಂಗ ಹೌಸ

ಉತ್ತಮ ಕೆಲಸ! ಯೋಗ್ಯ ದರ!!

ಇಲ್ಲಿ ಫುಲ್ ಲೆದರ, ಹಾಫ್‌ಲೆದರ, ಫುಲ್ ಕ್ಯಾಲಿಕೊ, ಹಾಫ್‌ಕ್ಯಾಲಿಕೊ, ಸಾದಾ ಇತ್ಯಾದಿ ಬ್ಯಾಂಡಿಂಗ ಕೆಲಸಗಳು ಮಾಡಿಕೊಡಲ್ಪಡುವವಲ್ಲದೆ, ಲೆದರ ಬ್ಯಾಂಡಿಂಗದ ಮೇಲೆ ಭಂಗಾರದಂತೆ ಹೊಳೆಯುವ ಗಿಲ್ಟ ಅಕ್ಷರಗಳು ಸಹ ಹೊಡೆದು ಕೊಡಲ್ಪಡುವವು. ಮತ್ತು ಆಫೀಸ ಉಪಯೋಗಕ್ಕೆ ಬೇಕಾಗುವ ಪೋರ್ಟಫೋಲಿಯೋ, ಫ್ಯಾಲ್ಸ, ಬ್ಲೊಟಿಂಗ ಪೆಡ್ ವಗೈರೆ ತಯಾರಿಸಿ ಕೊಡಲ್ಪಡುತ್ತವೆ. ಈವಿಷ್ಯಾ ಅಂಗಡಿಕಾರರಿಗೆ ಬೇಕಾಗುವ ಎಲ್ಲತರದ ಸಣ್ಣ-ದೊಡ್ಡ ಖಾತೆ-ವಹಿ-ವಹಿಗಳು ತಯಾರಿಸಿದ್ದು, ರಾ। ಕೃಷ್ಣರಾವ ಕೇರನ ಗ್ಯಾತೊಂಡೆ ಇವರ ದುಕಾನದಲ್ಲಿ ಮಾರಾಟಕ್ಕೆ ಸಿಗುತ್ತವೆ

☞ ಹಾಳಾದ ಪುಸ್ತಕಗಳೂ, ಹಳೇ ಪುಸ್ತಕಗಳೂ ಉತ್ತಮವಾಗಿ ಬ್ಯಾಂಡ ಮಾಡಿ ಕೊಡಲ್ಪಡುವವು.

ಪ್ರೊಪ್ರೈಟರ: ಡಿ. ಕೆ. ಶೈ, ನೆಲ್ಲಿಕೇರಿ, ಕುಮಟಾ

ಈ 'ಜೆಂ ಸಿಸ್ಟಿಂ ಅಫ್ ಕಟ್ಟಿಂಗ'

ಎಂಬ ಸರ್ವೋತ್ತಮ ವಾದ ಪುಸ್ತಕವು ಕನ್ನಡದಲ್ಲಿ ತರ್ಜುಮೆಯಾಗಿದೆ. ಗಂಡಸರು, ಹೆಂಗಸರು ಮತ್ತು ಹುಡುಗರ ಉಡುಪುಗಳನ್ನು ಶಾಸ್ತ್ರರೀತಿಯಿಂದ ತಪ್ಪಿಲ್ಲದೇ ಕತ್ತರಿಸುವದನ್ನು ಹೇಳಿಕೊಡುತ್ತದೆ. ಪ್ರತ್ಯೇಕ ನಕ್ಷೆಗಳ ಸಹಿತ ಬೆಲೆ ರೂಪಾಯಿ ೩. ಟಪಾಲು ಖರ್ಚು ೫ ಆಣೆ.

Rao's Tailoring College,
143, Princess street, BOMBAY 2.

'शंड्'

द्राक्षासव – मृद्विकारिष्ट – शारंगधर म. अ. १०

रामबाण औषध

सर्दी बोलविणारें
भूक वाढविणारें
शौच्यास साफ करणारें
झोंप आणणारें
शक्ति देणारें
तेजस्वीपणा आणणारें

रुचिकर पेय

किंमत- एक रतलास १॥ रुपये

शंडू फार्मास्युटिकल वर्क्स लिमिटेड

मुंबई नं. १४

तीर्थहळ्ळी- एजंट:- पंडित आणी कंपनी,
सिर्सि एजंट- एस. एल. धाकप्पा आणि ब्रदर्स
हुबळी एजंट: तिप्पण्णा क्षत्रि. भुसपेठ



ದಿ ಬೋಂಬೆ ಲ್ಯಾಫ್ ಎಶ್ಯೂರನ್ಸ ಕಂಪನಿ, ಲಿಮಿಟೆಡ್.

ಸ್ಥಾಪನೆ: 1908

ಈ ಕಂಪನಿಯು ಪ್ರೊಫಿಟ ಹಿಂದಿನ ಇಷ್ಟು, ಇತರ ಕಂಪನಿ ದರಗಳೂ, [illegible] ಕೊಡುತ್ತ ಇದೆ. ಈ ಕಂಪನಿಯು [illegible] ವಿಮೆದಾರರಿಗೆ [illegible] ಪ್ರೀಮಿಯಮ್ ಪ್ರಕಾರ ಎಕ್ಸಿಡೆಂಟ ನಿಯಮಗಳಂತೆ [illegible] ಕೊಡಲ್ಪಡುತ್ತದೆ.

ಮಲ್ಟಿಪಲ್ ಬೆನಿಫಿಟ್ ಎಂಬ ಹೊಸ ಪಾಲಿಸಿ [illegible] ಲಾಭಕರವಾಗಿದೆ,

[illegible] ಪತ್ರವ್ಯವಹಾರದಿಂದ ಕೇಳಿದ [illegible] ಕಳಿಸಲ್ಪಡುವವು.

Kumta Agents:-
D. K. NAYAK Esq.
D. S. PAI Esq.
Honavar Agents:-
R. V. PARBHU Esq.

K. Padmanabha Rao & Sons.,
BELGAUM
Chief Agents for
Karnatak Districts & S. M. States

ಸುಲಭ ಕ್ರಯ! ಡಾಕ್ಟರ ಎಸ್. ಕೆ. ಬರ್ಮನ ಸುಗಂಧಿ ನಶ್ಯದ ಪುಡಿ. ಸುಲಭ ಕ್ರಯ!

ಕೀರ್ತಿಶಾಲಿಯಾದ [illegible] ನಶ್ಯದ ಪುಡಿಯು ಅಂತು ಹಿಡಿಯಲಿಕ್ಕೆ ಸಾವಿರಾರು ಮಂದಿ

(Registered Trade Mark.)

ಗಳು ಇದನ್ನು [illegible], ಸಾವಿರಾರುಗಳಾಗಿ ಯೋಗ್ಯತಾಪತ್ರಗಳನ್ನು ಕೊಟ್ಟಿರುವರು. ಪ್ರಸಿದ್ಧವಾದ ಈ ನಶ್ಯದ ಪುಡಿಯಿಂದ ಸ್ವಸ್ಥವಾಗುವ ವ್ಯಾಧಿಗಳು ಯಾವವೆಂದರೆ— ಪಿನಸಿ, ಒಂಟಿತಲೆನೋವು, ತಲೆಯಲ್ಲಿಯ ರೋಗಗಳು, ಕಣ್ಣುಗಳಲ್ಲಿ ಉಂಟಾಗತಕ್ಕ ಸರ್ವ ವ್ಯಾಧಿಗಳು, ಹಲವೊಂದು ಮುಂತಾದ ವ್ಯಾಧಿಗಳು ಪರಿಹಾರವಾಗುವವಲ್ಲದೇ ಕಿಂತಕ್ಕೆ ಮೇಲ್ಪಟ್ಟ ವ್ಯಾಧಿಗಳನ್ನೂ ಸ್ವಸ್ಥಪಡಿಸಿ ಜ್ಞಾಪಕ ಶಕ್ತಿಯನ್ನೂ ಹೆಚ್ಚು ಮಾಡುತ್ತದೆ, ಮತ್ತು ಬೆಟ್ಟದ ಸಾಧಾರಣ ನಶ್ಯದ ಸಂಗಡ ಈ ಸುಗಂಧ ನಶ್ಯದ ಪುಡಿಯಲ್ಲಿ ಒಂದು ಚಿಟಿಕೆಯನ್ನು ಮಿಶ್ರಮಾಡಿದರೆ ಎಲ್ಲವೂ ಪರಿಮಳವಾಗುವದು- ಇದನ್ನು ಅನೇಕ ಪ್ರಭುಗಳು ತಮ್ಮ ಗೃಹದಲ್ಲಿ ಕುಟುಂಬ ಔಷಧವಾಗಿ ಉಪಯೋಗಿಸುತ್ತಾರೆ, ನಮೂನಾ ಸೀಸೆ ಪುಕ್ಕಟೆ ಕಳಿಸಲಾಗುವದು.

ಬುಡ್ಡಿ ಒಂದಕ್ಕೆ ಕ್ರಯ ರೂ. ೦-೪-೦, ವ್ಹಿ. ಪಿ. ೪ ಇಡಿ ಡಜನ್ ೧ ಕ್ಕೆ ರೂ. ೨-೦-೦. ವ್ಹಿ. ಪಿ. ೦-೮-೦ ದಯಮಾಡಿ ನಿಮ್ಮ ಹೆಸರನ್ನೂ, ಅಡ್ರೆಸನ್ನೂ ಸರಿಯಾಗಿ ತಿಳಿಯುವಂತೆ ಬರೆಯಿರಿ.

ಪತ್ತೆ: ಗುರುಬಸವ ಅಂಡ್ ಕಂಪನಿ ಲಿಮಿಟೆಡ್ ಪೋ. ಬಾ. ೫೧೦, ಪಾರ್ಕಟೌನ, ಮದರಾಸ

ಆಯುರ್ಧನ್ವಂತರಿ ಔಷಧಾಲಯ, ಕುಮಟಾ.

ಸ್ಥಾಪಿತ

ನಮ್ಮಲ್ಲಿ ಆಯುರ್ವೇದ ಪದ್ಧತಿಯಿಂದ ಶಾಸ್ತ್ರೋಕ್ತ ತಯಾರಿಸಿದ ಔಷಧಗಳು ಮಾರಾಟಕ್ಕೆ ಸಿದ್ಧವಿರುವವು. ರೋಗಿಗಳು ತರಿಸಿಕೊಂಡು ಅನುಭವ ನೋಡಬೇಕು.

ಚ್ಯವನಪ್ರಾಶಾವಲೇಹ— ರತ್ತಲ ೧ಕ್ಕೆ ... ... ರೂ. ೨-೮-೦.
ಅಶ್ವಗಂಧಿಮಿಶ್ರ ಕೂಷ್ಮಾಂಡ ಪಾಕ— ರತ್ತಲ ಕ್ಕೆ ... ... ರೂ. ೨-೮-೦.
ಮಹಾ ನಾರಾಯಣ ತೈಲ— ೬೦ ತೊಲೆ ಬಾಟ್ಲಿ ಕ್ಕೆ ... ರೂ. ೬-೦-೦.
ಓಮಸಾಗರ ತೈಲ— ೬೦ ತೊಲೆಗೆ ... ... ರೂ. ೬-೦-೦.
ಬೃಹತ್ ಭೃಂಗರಾಜ ತೈಲ— ೬೦ ತೊಲೆಗೆ ... ... ರೂ. ೩-೦-೦.

ಆರ್ಡರಿನ ಜೊತೆಗೆ ಅರ್ಧ ಹಣ ಕಳಿಸಬೇಕು. ರೋಗಿಗಳು ತಮ್ಮ ಪ್ರಕೃತಿಮಾನ ಸವಿಸ್ತರವಾಗಿ ಬರೆದು ತಿಳಿಸಿದಲ್ಲಿ ಯೋಗ್ಯ ಔಷಧಗಳು (ಅನುಪಾನ ಸಹಿತ) ಕಳುಹಿಸಿಕೊಡಲಾಗುವವು.

ನಮ್ಮ ಪತ್ತೆ:— ಪಿ. ಅಚ್ಯುತ ಪಂಡಿತ,
ಆಯುರ್ಧನ್ವಂತರಿ ಔಷಧಾಲಯ, ಕುಮಟಾ.

ಇದನ್ನು ಪಾಂಡುರಂಗ ಕೃಷ್ಣ ತ್ಯಾಗಭಾಗ (ಸಂಪಾದಕ) ಇವರು ತಮ್ಮ "ಸ್ಟಾರ ಅಫ್ ಕೆನರಾ ಪ್ರೆಸ್ಸ"ನಲ್ಲಿ ಮುದ್ರಿಸಿ ಪ್ರಕಟಿಸಿದರು.

Reg. No. B 1270. Monday, 2nd November, 1931.

ವರ್ಷ ೧೭

ಕಾನಡಾವೃತ್ತ

ಸಂಚಿಕೆ ೨

THE KANARA NEWS.

नरपतिहितकर्ता द्वेष्यतां याति लोके जनपदहितकर्ता त्यज्यते पार्थिवेंद्रैः ।
इति महति विरोधे वर्तमाने समाने नृपतिजनपदानां दुर्लभः कार्यकर्ता

ಪ್ರತಿ ಸೋಮವಾರಕ್ಕೆ ಹೊರಡಿಸಲ್ಪಡುವದು.

ಪತ್ರದ ವರ್ಗಣಿ.
ಸ್ಥಾನಿಕರಿಗೆ ವರ್ಷಕ್ಕೆ ರೂಪಾಯಿ 2-4-
ಮನಿಯಾರ್ಡರಿಯಿಂದ ರು. 3-0-0
ವ್ಹಿ. ಪಿ. ಖರ್ಚೆಲ್ಲ ಸೇರಿ ರೂಪಾಯಿ 3-2-0.
ಬಿಡಿ ಸಂಚಿಕೆಗೆ 0-1-0
ಹಳೇ ಸಂಚಿಕೆಗೆ 0-2-0

ಜಾಹೀರಾತುಗಳ ದರ.
ಕನ್ನಡ, ಇಂಗ್ಲಿಷ ಪ್ರತಿ ಇಂಚಿನ (೧೫ ಎಮ್ ಅಗಲ) ೪ ಸಾಲುಗಳವರೆಗೆ ರೂ. 1-0-0 ಆ ನಂತರ, ಪ್ರತಿಸಾಲಿಗೆ 0-2-0.
ಹೆಡಿಂಗದ ಸಾಲು ಎಷ್ಟು ದೊಡ್ಡದಿರುವವೋ ಆ ಮಾನದಿಂದ ಅಷ್ಟು ಸಾಲುಗಳು ಹಿಡಿಯುವವು.
ಬಾಕಿ ಜಾಹೀರಾತುಗಳ ಬಗ್ಗೆ ಪತ್ರದ್ವಾರ ಯಾ ಸಮಕ್ಷ ತಿಳಿಸಲ್ಪಡುವದು.

—(ಕುಮಟಾ— ಕಾನಡಾವೃತ್ತ, ಸೋಮವಾರ, ತಾರೀಖು ೨ ನೇ ನವಂಬರ ಸನ್ ೧೯೩೧ನೇ ಇಸವಿ.)—

ಇದೇ ೧೯೩೧ನೇ ಅಕ್ಟೋಬರ ತಿಂಗಳಲ್ಲಿ ಪ್ರಸಿದ್ಧವಾದ
ಶ್ರೀ ಶೇಷಾಚಲ ಗ್ರಂಥಮಾಲೆಯ

ಹೊಸ ಪುಸ್ತಕಗಳು.

೧ ಕಳವೋ-ಕೊಲೆಯೋ ?:- ಅತ್ಯುತ್ತಮ ಪತ್ತೇದಾರಿ ಕಾದಂಬರಿ. ಬೆಲೆ ೬ ಆಣೆ. ೨ ರಾಕಾಚಂದ್ರ:- ಅತ್ಯುತ್ತಮ ಸಾಮಾಜಿಕ ಕಾದಂಬರಿ. ಬೆಲೆ ೮ ಆಣೆ. ೩ ಲಲಿತೆ:- ಸುಬೋಧವಾದ ಪತ್ತೇದಾರಿ ಕಥೆ. ಬೆಲೆ ೧೦ ಆಣೆ. ೪ ವಿಚಿತ್ರ ಸಂಸಾರ:- ಸುಂದರವಾದ ಸಾಮಾಜಿಕ ಪ್ರಹಸನ. ಬೆಲೆ ೩ ಆಣೆ.

ಈ ತಿಂಗಳ ಕೊನೆಯೊಳಗಾಗಿ ಆರ್ಡರ ಕೊಡುವವರಿಗೆ ಈ ನಾಲ್ಕು ಪುಸ್ತಕಗಳನ್ನು [ಟಪಾಲ ವ್ಹಿ. ಪಿ. ಖರ್ಚು ೬ ಆಣೆ ನಾವೇ ವಹಿಸಿ] ೧ ರೂ. ೧೨ ಆಣೆಗೆ ವ್ಹಿ. ಪಿ. ಮೂಲಕ ರವಾನಿಸುತ್ತೇವೆ. ಮುಂದೆ ಈ ರಿಯಾಯತಿಯು ದೊರೆಯಲಿಕ್ಕಿಲ್ಲ. ಕಾರಣ ಬೇಗನೇ ಬರೆದು ತರಿಸಿಕೊಳ್ಳಿರಿ.

ಇವಲ್ಲದೆ, ನಮ್ಮಲ್ಲಿ ಐತಿಹಾಸಿಕ, ಸಾಮಾಜಿಕ, ಪೌರಾಣಿಕ, ಪತ್ತೇದಾರೀ ಕಾದಂಬರಿಗಳೂ, ಪಾರಮಾರ್ಥಿಕ-ಧಾರ್ಮಿಕವುಂತಾದ ನೂರಾರು ಬಗೆಯ ಗ್ರಂಥಗಳೂ ದೊರೆಯುತ್ತವೆ.

ವಿಳಾಸ:— ಭಿ. ಪ. ಕಾಳೆ, ಪ್ರೊಪ್ರೈಟರ,
ಶ್ರೀ ಶೇಷಾಚಲ ಪ್ರೆಸ್ ಮತ್ತು ಗ್ರಂಥಮಾಲೆ,
ಪೋ|| ಆನಂದವನ. ಜಿ. ಧಾರವಾಡ.

ಪ್ರೆಸಿಡೆನ್ಸಿ ಪ್ರೊವ್ಹಿಡೆಂಟ ಎಂಡ್ ಜನರಲ್ ಇನ್ಸೂರನ್ಸ ಕಂಪನಿ, ಲಿಮಿಟೆಡ್.
ಹೆಡ್ ಆಫೀಸ:- ಅಬ್ದುಲ ಬಿಲ್ಡಿಂಗ,
ಬೆಲಾರ್ಡ ಇಸ್ಟೇಟ, ಫೋರ್ಟ, ಮುಂಬಯಿ.

“ಇಂಡಿಯನ್ ಇನ್ಶೂರನ್ಸ ಜರ್ನಲ್” ಎಂಬ ಪತ್ರಿಕೆಯ ಸಪ್ಟಂಬರ ಸಂಚಿಕೆಯಲ್ಲಿ ಬರೆದದ್ದೇನಂದರೆ:- ಜೀವ ವಿಮೆ ಕಂಪನಿಯ ಸಾಂಪತ್ತಿಕ ಸ್ಥಿತಿಯನ್ನು ಪರೀಕ್ಷಿಸಬೇಕಾದರೆ, ವಿಮೆಯ ಲೆಕ್ಕದ ವಹಿಕೆಯಿದ್ದ ಕವಾಸಕರು ಮಾಡಿದ ಕಂಪನಿಯ ಸ್ಥಿತಿ-ಗತಿಯ ಪತ್ರಿಕೆಯನ್ನೇ ನೋಡಬೇಕು. ಪ್ರೊವ್ಹಿಡೆಂಟ ಸೊಸಾಯಿಟಿಯ ಸ್ಥಿತಿಯಾದರೂ ಹಾಗೆಯೇ 'ದಿ ಪ್ರೆಸಿಡೆನ್ಸಿ ಪ್ರೊವ್ಹಿಡೆಂಟ' ಕಂಪನಿಯು ಇಂಥ ಪರೀಕ್ಷೆಯಲ್ಲಿ ಈಗ ತೇರ್ಗಡೆ ಹೊಂದಿರುವದು. ಇಡೀ ಹಿಂದುಸ್ಥಾನದಲ್ಲಿ ಬಹಳೇ ಸಮೃದ್ಧ ಸ್ಥಿತಿಯುಳ್ಳ ಪ್ರೊವ್ಹಿಡೆಂಟ ಕಂಪನಿಯೊಂದರೆ, ಇದೊಂದೇ ಎಂದು ನಿರ್ವಿವಾದವಾಗಿ ಸಿದ್ಧವಾದ ಮಾತು. ವಿಮೆ ಇಳಿಸುವ ಜನರಿಗಾಗಿ ಈ ಕಂಪನಿಯು ಭದ್ರತೆಯ ಮಾದರಿಯನ್ನೊದಗಿಸಿದೆಯೆಂದು ಹೇಳಬಹುದು. ಸ್ತ್ರೀ-ಪುರುಷರೂ, ಮಕ್ಕಳೂ ವಿಮೆ ಇಳಿಸಬಹುದು.

ಪ್ರೀಮಿಯಮ್:- ರೂ. ೨, ೧, ೦-೮-೦.

ಮೊದಲಿನಿಂದ ಕಂಪನಿಯು ಕೆಲಸ ಮಾಡುವವರಿಗೆ ಬಹಳೇ ಪ್ರತಿಫಲ ಸಿಗುತ್ತೆ

The Canara Industrial & Banking Syndicate, Ltd.

Head Office:— UDIPI. *Branches:—* BRAHMAVAR, KUMTA & KARWAR.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ ಸಿಂಡಿಕೇಟ, ಲಿಮಿಟೆಡ್.

Laxmi Provident Deposit. : ಲಕ್ಷ್ಮೀ ಆಪನ್ನಿಧಿಯು.

ನಿಮ್ಮ ವೃದ್ಧಾಪ್ಯದ ನಿಸ್ಸಹಾಯಕತ್ವದ ಕಾಲಕ್ಕಾಗಿ, ದಿನದಿನಕ್ಕೂ ಬೆಳೆದು ತನ್ನ ಭಾವೀ ಗಂಡನ ಮನೆಯನ್ನು ಹುಡುಕುತ್ತಿರುವ ನಿಮ್ಮ ಮಗಳ ಮದುವೆಗಾಗಿ, ಶಾಲೆಯಲ್ಲಿ ಸುಜ್ಞನೆನಿಸಿದವನೂ, ಧನಾಭಾವದಿಂದ ಹಿಂದೆ ಬೀಳಬಹುದಾದ ನಿಮ್ಮ ಮಗನ ವಿದ್ಯಾಭ್ಯಾಸಕ್ಕಾಗಿ ನೀವೇನು ಮಾಡುವಿರಿ? ಲಕ್ಷ್ಮೀ ಆಪನ್ನಿಧಿಯು —

ನಿಮ್ಮ ಆ ಸರ್ವ ಯೋಚನೆಗಳನ್ನು ತೊಳೆಯುವದು. ನಿಮ್ಮಿಂದ ಉಳಿಸಿಕೊಳ್ಳಬಹುದಾದ ಹಣವನ್ನು ನಮ್ಮ ಬೇಂಕಿನ ಲಕ್ಷ್ಮೀ ಆಪನ್ನಿಧಿಯಲ್ಲಿ ಇಟ್ಟರೆ, ಚಕ್ರಬಡ್ಡಿಯಿಂದ ಬೆಳೆದು ೧೦ ವರುಷಗಳಲ್ಲಿ ಸಾಧಾರಣ ಎರಡು ಪಾಲಷ್ಟು ನಿಮಗೆ ನಿರಾಯಾಸವಾಗಿ ಲಭಿಸುವದು:—

ಅಂದರೆ,

ರೂ. ೨೫/—	೧೦ ವರುಷಗಳಲ್ಲಿ	ರೂ.	೪೮/—
" ೫೦/—	೧೦ "	"	೯೭/—
" ೧೦೦/—	೧೦ "	"	೧೯೪/—
" ೨೦೦/—	೧೦ "	"	೩೮೮/—

ಎಂತೆಯೋ
ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

Kumta, 16—3—1931.

A. S. KINI,
Agent, Kumta Branch,
The Canara Industrial & Banking Syndicate Ltd. KUMTA.

EAST & WEST INSURANCE CO., LTD. BOMBAY.

ಈಸ್ಟ ಎಂಡ್ ವೆಸ್ಟ ಇನ್ಶೂರನ್ಸ ಕಂಪನಿ ಲಿಮಿಟೆಡ್, ಮುಂಬಯಿ.
(ಸರಕಾರಿ ಭದ್ರತೆಯುಳ್ಳ, ೧೯೧೩ರಲ್ಲಿ ಹಿಂದುಸ್ಥಾನದೊಳಗೆ ರಜಿಸ್ಟರಾದದ್ದು.)

ಸಂಪೂರ್ಣವಾಗಿ ಹಿಂದೀ ಕಂಪನಿ!

ಹಿಂದೀಯರಿಂದ ಹಿಂದೀಯರ ಹಿತಕ್ಕಾಗಿ ನಡಿಸಲ್ಪಟ್ಟು,
ವಿಮೆದಾರರಿಗೆ ತೀರ ಕಡಿಮೆ ಪ್ರಿಮಿಯಮ್ಮಿನಿಂದ ಅಧಿಕವಾದ ಲಾಭವಾಗುವಂತೆ
ಈ ಕಂಪನಿಯಲ್ಲಿ ವ್ಯವಸ್ಥೆಯಾಗಿರುತ್ತೆ!

ಈ ಕಂಪನಿಯಲ್ಲಿ ವಿಮೆಯನ್ನು ಉತರಾಯಿಸಿ ನಿರಂತರ ನಿರಂಗರಾನಲ್ಲಿ, ಮುಂದಿನ ಕಂತುಗಳನ್ನು ತುಂಬದೆ, ವಿಮೆಯ ಸಂಪೂರ್ಣ ಸೌಕರ್ಯವು ಸಿಗುವದು !!
ಈ ಕಂಪನಿಯ ಪ್ರತಿನಿಧಿಗಳಿಲ್ಲದಲ್ಲಿ, ವಜನದಾರ ಹಾಗು ದಕ್ಷ ಏಜಂಟರು ಬೇಕಾಗಿರುತ್ತಾರೆ. ಅವರಿಗೆ ಬಹಳ ಸವಲತ್ತು ಕೊಡಲ್ಪಡುವದು.

ವಿಶೇಷ ಮಾಹಿತಿಯ ಬಗ್ಗೆ ಕೆಳಗಿನ ಪತ್ತೆಗೆ ಬರೆಯಿರಿ.

ಕುಮಟಾ, ತಾ. ೮-೯-೩೧.

ಪಿ. ಎಸ್. ಶ್ಯಾನಭಾಗ ಎಂಡ್ ಬ್ರದರ್ಸ್,
ಉತ್ತರ-ಕನ್ನಡ, ಬೆಳಗಾಂವ, ವಿಜಾಪುರ, ಧಾರವಾಡ ಜಿಲ್ಲೆಗಳ
ಪ್ರಮುಖ್ಯ ಏಜಂಟರು.

ಶಿರ್ಶಿ—ಸಿದ್ದಾಪುರ, ಯಲ್ಲಾಪುರ ತೋಟಗಳ ಅಂಶತಃ ಶೀರ್ವೆ ಮಾಫಿಯ ರಹಸ್ಯ.

[ಲೇಖಕ:- ತಿ. ಶ್ರೀ. ನಾಯಕ.]

ಮುಂಬಯಿ ಸರಕಾರವು ತಾ. ೧೭-೧೦-೩೧ಕ್ಕೆ ಹೊರಡಿಸಿದ ಜಾಹೀರ ಪತ್ರದಲ್ಲಿ ಪ್ರಕಟಿಸಿದ ಪ್ರಕಾರ, ಕೌನ್ಸಿಲ್ ಸಾಹೇಬರು ೧೯೩೧-೩೨ ರಲ್ಲಿ ಮಾಡಿದ ಠರಾವುಗಳ ಪ್ರಕಾರ ಶಿರ್ಶಿ-ಸಿದ್ದಾಪುರ, ಯಲ್ಲಾಪುರ ತಾಲೂಕುಗಳ ಕೆಲ ಭಾಗಗಳಲ್ಲಿದ್ದ ತೋಟಗಳ ಶೀರ್ವೆಯು, ೧೯೩೧-೧೯೩೨ರಿಂದ ಒಟ್ಟು ೧೭ ಸಾವಿರ ರೂಪಾಯಿ ಮಟ್ಟಿಗೆ ಕಡಿಮೆ ಮಾಡಲ್ಪಡುವದು. ಇದೇ ಜಾಹೀರ ಪತ್ರದಲ್ಲಿ ಸರಕಾರವು ಮುಂದೆ ಹೇಳುವದೇನಂದರೆ:— ಕೌನ್ಸಿಲ್ ಸಾಹೇಬರು ಮಾಡಿದ ಈ ಠರಾವುಗಳನ್ನು ಅವುಗಳಲ್ಲಿ ತಿಳುವಳಿಕೆ ಕೊಡುವದಕ್ಕೆ ತಕ್ಕ ಕಾರಣ ಇದ್ದದ್ದರಿಂದ, ಅದರ ತೋಟದ ಶೀರ್ವೆ ಮೊದಲಿನಂತೆ ಇಳಿಸುವ ಬಗ್ಗೆ ಮಾಡಿದ ಠರಾವಿನ ಫಾಯದೆಯನ್ನು ರೈತರಿಗೆ ಸಿಗದಂತೆ ಮಾಡುವದು ಯೋಗ್ಯವಲ್ಲ, ಮತ್ತು ತೋಟದ ಮೇಲಿನ ಧಾರಣೆಯು ಸದ್ಯಕ್ಕೆ ಇಳಿದು ಹೋದ್ದರಿಂದ ಈ ಸವಲತ್ತುಗಳನ್ನು ಕೊಡುವ ಅವಶ್ಯಕತೆಯು ಬಹಳವಾಯು ಹುಟ್ಟಾಗಿದೆ. ಈ ಪ್ರಕಾರ ಧಾರಣೆಯು ಇಳಿದದ್ದರಿಂದಲೇ ಈಗಿನ ವರ್ಷ ಶಿರ್ಶಿ-ಸಿದ್ದಾಪುರ ತಾಲೂಕುಗಳಿಗೆ ಕೂಡಿ ಸುಮಾರು ಇಪ್ಪತ್ತು ಸಾವಿರ ರೂಪಾಯಿ ಶೀರ್ವೆ ಮಾಫಿ ಬಿಟ್ಟಿದ್ದಾಗಿದೆ ಆದ್ದರಿಂದ ಸದ್ರಿ ಕ್ಷೇತ್ರಗಳಿಗಾಗಿನ ಶೀರ್ವೆ ಮಾಡುವಲ್ಲಿ ವಿಪರೀತ ಏರಬಾರದೆಂದು, ಕೌನ್ಸಿಲ್ ಸಾಹೇಬರು ತೋಟದ ಶೀರ್ವೆಯು ವಿಷಯದಲ್ಲಿ ಮಾಡಿದ ಠರಾವು ೧೯೩೧-೧೯೩೨ರಲ್ಲೇ ಅಮಲಿನಲ್ಲಿ ಬರಬೇಕೆಂಬುವದು ಸರಕಾರದ ಜಾಹೀರಪಡಿಸುತ್ತದೆ; ಎಂದು ಸದರೀ ಸರಕಾರೀ ಪತ್ರದ ಅಭಿಪ್ರಾಯವಿರುವದು.

ಈ ಬುದ್ಧಿಯು ಹೇಗೆ ಹುಟ್ಟಿತು?

ಈ ಹುಕುಮನ್ನು ರೈತರು ಸೂಕ್ಷ್ಮವಾಗಿ ವಿಚಾರಿಸುವದವಶ್ಯವಿದೆ. ಮೊದಲು ಕಳೆದ ವರ್ಷ ಕೇವಲ ೩೦೦೦೦ ರೂಪಾಯಿಯ ತಗಾವಿ ಅಥವಾ ಸೂಟಿನ ಬಗ್ಗೆ ಕುರಿತು ವಿಚಾರ ಮಾಡುವಾ. ಕಳೆದ ವರ್ಷ ಶಿರ್ಶಿ-ಸಿದ್ದಾಪುರ ರೈತರು, ಧಾರಣೆ ಬಹಳೇ ಇಳಿದು ಹೋಗಿದೆ; ಆದ್ದರಿಂದ ಈ ವರ್ಷ ಶೀರ್ವೆ ಬಗ್ಗೆ ಸವಲತ್ತು ತೋರಿಸಿರಿ; ಎಂದು ಅರ್ಜಿ ಮಾಡಿದ್ದಕ್ಕೆ ಅಧಿಕಾರಿಗಳು ಮೊದಲು ಸಟೆ ಮುಂಬಯಿ ಕಾಲಕ್ಕಿಂತ ಈ ವರ್ಷ ಧಾರಣೆಯು ಹೆಚ್ಚಿದೆ; ಮತ್ತು ಈ ವರ್ಷ ಮಳೆಯು ಚನ್ನಾಗಿ ಆಗಿದೆ, ಅದ್ದರಿಂದ ಸವಲತ್ತು ಕೊಡಲಾರೆವು; ಎಂದು ಎಲ್ಲರಿಗೂ ಒಂದೇ ಉತ್ತರ ಕೊಟ್ಟರು. ಅಧಿಕಾರಿಗಳಿಗೆ ರೈತರ ಮೇಲೆ ಸಹಾನುಭೂತಿ ಇದ್ದ ಪಕ್ಷಕ್ಕೆ ಕೌನ್ಸಿಲ್ ಠರಾವಿನ ಪ್ರಕಾರ ಆಗಲೇ ರೈತರ ಸವಲತ್ತು ಕೊಡಲಿಲ್ಲ? ಈ ರೀತಿ ಯಾಕೆ ಉತ್ತರ ಕೊಟ್ಟರು? ೩೦ ಸಾವಿರದ ಶೀರ್ವೆಯು ಒಗ್ಗಿ ವರೂ ಆಗಲೇ ಯಾಕೆ ಸವಲತ್ತು ತೋರಿಸಲಿಲ್ಲ? ಧಾರಣೆಯು ಇಳಿದಿದೆಯೆಂದೂ, ರೈತರಿಗೆ ಇಪ್ಪತ್ತರೂ ನ್ಯಾಯ ಕೊಡುವದೂ ಯುಕ್ತವೆಂದೂ ಮನವರಿಕೆಯಾಗಲು ಒಂದು ವರ್ಷ ಯಾಕೆ ಬೇಕಾಯಿತು?

"ಇದಕ್ಕಿಂತ ಹೆಚ್ಚಿನ ಸವಲತ್ತು ಕೊಡಲಾರೆವು."

ಅವಾಯಿತು ವ್ಯಕ್ತಿಶಃ ಮಾಡಿದ ಅರ್ಜಿಗಳಿಗೆ ಕೊಟ್ಟ ಉತ್ತರ. ಇನ್ನು ರೈತಸಂಘದ ಅಧ್ಯಕ್ಷರು ಮಾಡಿದ ಅರ್ಜಿಗೆ ನಿಕಾಲೆಯೆಂದು ಅಧಿಕಾರಿಗಳು ಕೊಟ್ಟ ಉತ್ತರವೆಂದರೆ: ಮನೇ ಪಟ್ಟಿ ಶೀರ್ವೆಯು ವಸೂಲಿಯು ಮುದ್ದತ್ತನ್ನು ಎಪ್ರಿಲ ತಿಕ್ಕೆ ಇದ್ದದ್ದನ್ನು ಮೇ ತಿಂಗಳಿಕ್ಕೆ ಮುಂದೆ ಹಾಕಿದೆ. ಇದಕ್ಕಿಂತ ಹೆಚ್ಚಿನ ಸವಲತ್ತು ಕೊಡುವದು ಶಕ್ಯವಿಲ್ಲ. This is the utmost concession that can be granted ಈ ಉತ್ತರವು ತಾ. ೩೧ ಮಾರ್ಚ ೧೯೩೧ ಕ್ಕೆ ಬಂತು. ಇಷ್ಟಾದರೂ ಉತ್ತರ ಕೊಡಲಿಕ್ಕೆ ಕಾರಣವೆಂದರೆ. ಸಿರ್ಸಿ-ಸಿದ್ದಾಪುರ ರೈತರು ತಮ್ಮ ನ್ಯಾಯ್ಯ ಬೇಡಿಕೆಗಳನ್ನು ಮಾನ್ಯ ಮಾಡಿಕೊಳ್ಳುವದಕ್ಕೋಸ್ಕರ ಸಂಘಶಕ್ತಿಯಿಂದ ಚಳುವಳಿಗೆ ಸಜ್ಜ ಮಾಡುತ್ತಿರುವರು. ಆಗ ಅಧಿಕಾರಿಗಳು ಈ ತರದ ಹುಕುಮಿನಿಂದ ಸವಲತ್ತು ತೋರಿಸಿದಂತೆ ಮಾಡಿದರು. ಆದರೆ ಎಪ್ರಿಲದಲ್ಲಿ ಬರೂ ಬಾಕಿ ಶೀರ್ವೆ ಮೇದಲ್ಲಿ ವಸೂಲಾಗಲಿ ಎಂದು ಹೇಳಿದ್ದರಿಂದ ರೈತರಿಗೇನು ಸವಲತ್ತು ಸಿಕ್ಕಿತು? ಆವರ ಕೈಯಲ್ಲಿ ಆಗ ಹೊಸ ಹಣ ಎಲ್ಲಿಂದ ಬರಬೇಕು? ಈ ವಿಚಾರವು ಸಹ ಅಧಿಕಾರಿಗಳಿಗೆ ಬರಲಿಲ್ಲ ಮತ್ತು ಇದಕ್ಕಿಂತ ಹೆಚ್ಚು ಸವಲತ್ತುಗಳು ಕೊಡುವದು ಶಕ್ಯವಿಲ್ಲೆಂದು ಸ್ಪಷ್ಟ ಉತ್ತರ ಕೊಟ್ಟರು. ಈ ಪ್ರಕಾರ ಉತ್ತರ ಕೊಟ್ಟವರೇ ಮುಂದೆ ೨೦ ಸಾವಿರ ಮಟ್ಟಿಗೆ ಯಾಕೆ ತಗಾವಿ ಕೊಟ್ಟರು? ಈಗ ೧೭ ಸಾವಿರದ "ಕಾಯಮ್" ಮಾಫಿ ಯಾಕೆ ಕೊಡುತ್ತಾರೆ? ಅದರ ರಹಸ್ಯ ತಿಳಕೊಳ್ಳುವದು ಅತಿ ಅವಶ್ಯವಿದೆ.

ರೈತರ ಸಂಘಶಕ್ತಿಯೇ ಕಾರಣ.

ಇದಕ್ಕೆ ಕಾರಣವೇನೆಂದರೆ, ರೈತರು ತಮ್ಮ ನ್ಯಾಯ ಮಾಗಣಿಗಾಗಿ ಗಟ್ಟಿಯಾಗಿ ನಿಂತರು. ಚಳುವಳಿಗಳನ್ನು, ಸಭೆ ಹರತಾಳಗಳನ್ನು, ಧೈರ್ಯದಿಂದ ಆರಂಭಿಸಿ ನೆಟ್ಟಗೆ ನಡೆಸಿಕೊಂಡು ನಿಂತರು. ಅಧಿಕಾರಿಗಳು ಎಷ್ಟು ಪ್ರಯತ್ನ ಮಾಡಿದರೂ ಶಿರ್ಶಿ-ಸಿದ್ದಾಪುರಗಳಲ್ಲಿ ಶೇಕಡಾ ೮೦ ಸಾವಿರ ರೂಪಾಯಿ ಶೀರ್ವೆಯು ವಸೂಲಾಗದೆ ಬಾಕಿ ಉಳಿಯಿತು. ಆಗ ಅಧಿಕಾರಿಗಳು ತಮ್ಮ ಕೈಯೊಳಗಿದ್ದ ಸಾಧನಗಳಿಂದ ರೈತರ ಸಂಘಶಕ್ತಿಯನ್ನು ಕೆಡಿಸಲು ಪ್ರಯತ್ನಿಸಿದರು. ಆದರೆ ರೈತರು ತಮ್ಮ ನ್ಯಾಯ್ಯ ಬೇಡಿಕೆಗಳನ್ನು ಬಿಡಲಿಲ್ಲ. ಆಗ ಸರಕಾರದವರು ರೈತರ ಬೇಡಿಕೆಗಳನ್ನು ಪುನಃ ವಿಚಾರ ಮಾಡಬೇಕಾಯಿತು. ಯೋಗ್ಯ ಕಾಂಗ್ರೆಸ್ ಸ್ವಯಂಸೇವಕರಾಗಿ ಮತ್ತು ರೈತರ ಸಂಘದ ವ್ಯವಸ್ಥೆ ಮಾಡಿ ಸಭೆ ಮಾಡಿ ಉತ್ತರ ಕೊಟ್ಟರು.

ವಚನಭಂಗ-ವಿಶ್ವಾಸಘಾತ.

ಈ ಒಪ್ಪಂದದ ಪ್ರಕಾರ ರೈತರು ಮನೇ ಪಟ್ಟಿಯ ಬಗ್ಗೆ ಸವಲತ್ತು ಸಿಕ್ಕಿತೆಂದು, ಅನೇಕರು ಕಷ್ಟ ಸಹ ಸಹಿಸಿ ಒಂದೇ ಹಪ್ತೆ ಕಟ್ಟಿದರು. ಆದರೆ ಅಧಿಕಾರಿಗಳಿಗೆ ಪ್ರತಿಜ್ಞೆಯಲ್ಲಿ ಹಣ ಕಾಣಿಸಲಿಲ್ಲ; ಅವರು ರೈತರ ಬಿಡಲಿಲ್ಲವೆಂದು ಜಪ್ತಿ ಹಾಕಿದರು. ಕಾಂಗ್ರೆಸ್ಸಿನವರ ಮೇಲೆ ದೋಷ ಹಾಕುತ್ತ, ಮನೇ ಪಟ್ಟಿಯ ಬಗ್ಗೆ ಯಾವ ಸವಲತ್ತೂ ಕೊಡಲಿಲ್ಲ; ಮನೇ ಪಟ್ಟಿ ಶೀರ್ವೆಯ ವಿಷಯದಲ್ಲಿ ಮಾಡಿದ ಅರ್ಜಿಗಳಿಗೆ ಉತ್ತರ ಸಹ ಕೊಡದೆ ಕಮೀಶನರ ಸಾಹೇಬರು ಈ ಒಪ್ಪಂದದ ನೋಟೀಸ ಮಾಡುವ ಗರ್ಜಿಲ್ಲ, ಇನ್ನು ಒಂದು ನೋಟೀಸು ಕೊಡದೆ ಬಾಕೀ ಶೀರ್ವೆಯನ್ನು ಈಗ ಅಮಲಿನಲ್ಲಿ ತಂದು ಬಾಕೀ ಎಲ್ಲ ಹಣ ವಸೂಲಾಗಬೇಕೆಂದು ನೋಟೀಸ ಕೊಟ್ಟರು. ಸಿರ್ಸಿ-ಸಿದ್ದಾಪುರ ತಾಲೂಕುಗಳಲ್ಲಿ ೩೦ ಹಳ್ಳಿಗಳಲ್ಲಿ ಮಾತ್ರ ಶರ್ತ ಪತ್ರ ಕೊಟ್ಟು ನಡೆಸಿಕೊಳ್ಳುವದಕ್ಕೆಂದು ಹುಕುಮ ಕೊಟ್ಟರು. ಈ ಹುಕುಮಿನ ಪ್ರಕಾರ ಸಿರ್ಸಿ-ಸಿದ್ದಾಪುರ ತಾಲೂಕುಗಳಲ್ಲಿ ಕೂಡಿ ೧೭ ಸಾವಿರ ರೂಪಾಯಿ ಮಾಫಿ ಆಗಿದ್ದು, ರೈತರ ಆಸ್ತಿ ಪಾತ್ರೆ-ಪಡಗ ಜಪ್ತಿಯಾದವು. ಇದರಿಂದ ಹಣವಿಲ್ಲದ ರೈತರು ಶೀರ್ವೆ ಎಲ್ಲಿಂದ ಕೊಡಬೇಕು?

ತಗಾವಿಯ ಘೋಷಣೆ.

ಆಗ ತಮ್ಮ ಇಜ್ಜತ್ತು ಉಳಿಸಿಕೊಳ್ಳುವದಕ್ಕಾಗಿ ಸರಕಾರವು ತಗಾವೀ ನಿಯಮದ ಉಪಯೋಗ ಮಾಡಬೇಕಾಯಿತು. ಒಂದು ಕೈಯಿಂದ ರೈತರಿಗೆ ಬೀಜಕ್ಕೆ ಎತ್ತಿಗೆ, ಗೊಬ್ಬರ ಕಟ್ಟಿಸಲಿಕ್ಕೆ ಎಂದು ತಗಾವೀ ಹಣ ಕೊಟ್ಟು ಕೂಡಲೇ ಮತ್ತೊಂದು ಕೈಯಿಂದ ಅದನ್ನು ಅಲ್ಲಿಂದಲ್ಲಿಯೇ ಶೀರ್ವೆಗೆ ಭರ್ತಿ ಮಾಡಿಕೊಂಡರು. ಈ ರೀತಿ ೨೦-೨೫ ಸಾವಿರ ರೂಪಾಯಿ ತಗಾವಿ ಕೊಟ್ಟು ಶೀರ್ವೆ ಭರ್ತಿ ಮಾಡಿಕೊಂಡರು.

ತಹಕೂಬಿಯ ಘೋಷಣೆ.

ಇನ್ನು ತಹಕೂಬಿ ಕೊಟ್ಟು ೩೦ ಹಳ್ಳಿಗಳಿಗಾದರೂ ಪ್ರಕಟ ತಹಕೂಬಿ ಸಿಕ್ಕಿತೋ ಇಲ್ಲ. ಅಲ್ಲಿ ಸಹ ಅನೇಕರಿಗೆ ತಗಾವೀ ಸಾಲದ ಮೋಹದಲ್ಲಿ ಸಿಲುಕಿಸಿ ಕೆಲ ಶೀರ್ವೆ ವಸೂಲ ಮಾಡಿಬಿಟ್ಟರು. ತಹಕೂಬಿಯ ಕೆಲ ಹಳ್ಳಿಗಳಲ್ಲಿ ಮೊದಲೇ ಶೀರ್ವೆ ವಸೂಲ ಮಾಡಿಬಿಟ್ಟಿದ್ದರು. ಇನ್ನು ಕೆಲವು ಕಡೆ ಮರದ ಶೀರ್ವೆಗೆ ತಹಕೂಬಿ ಇಲ್ಲವೆಂದು ತಹಕೂಬಿಯ ಹಳ್ಳಿಗಳಿಂದ ಶೀರ್ವೆ ವಸೂಲ ಮಾಡಿಬಿಟ್ಟರು.

ದಬ್ಬಾಳಿಕೆಯ ಯುಕ್ತಿಗಳು.

ಸಾಧಾರಣ ಕಳೆದ ವರ್ಷದ ಇತಿಹಾಸ ನೋಡಿದರೆ, ಅಧಿಕಾರಿಗಳು ರೈತರ ಮೇಲೆ ಶಕ್ತಿ ಮತ್ತು ವಚನಭಂಗ ಮೋಸ ಮತ್ತು ಸಕ್ತಿ; ಇವುಗಳ ಬಲದಿಂದ ಬರುವ ವಸೂಲ ಮಾಡಿದರು. ನಂತರ ಇನ್ನು ವಸೂಲ ಮಾಡುವದು ತೀರ ಅಶಕ್ಯವೆಂದು ಯಾವಾಗ ಕಂಡಿತೋ ಆವಾಗ ಅಂಗವನ್ನು ಎತ್ತಿ ಬಿಟ್ಟರು. ಅಧಿಕಾರಿಗಳು ನ್ಯಾಯ ತೋರಿಸಲು ಬಯಸಲಿಲ್ಲ. ಕೇವಲ ತಮ್ಮ ಇಜ್ಜತ್ತು ಉಳಿಸಲಿಕ್ಕೆ ಪ್ರಯತ್ನ ಮಾಡಿದರು. ಆದಷ್ಟು ರೈತರಿಂದ ಹಣವು ಕಸಿಯಲು ಯುಕ್ತಿಗಳನ್ನು ಸಹ ಪ್ರಯೋಗ ಮಾಡಿದರು. ನಿಜವಾಗಿ ಅವರಿಗೆ ರೈತರ ಬಗ್ಗೆ ಸಹಾನುಭೂತಿ ಇದ್ದರೆ, ಅದೇ ಸ್ಥಿತಿಯಲ್ಲಿದ್ದ ಯಲ್ಲಾಪುರ ತಾಲೂಕಿನ ತೋಟಗಳಿಗೆ ಕಳೆದ ವರ್ಷ ಯಾಕೆ ಏನೂ ಸವಲತ್ತು ತೋರಿಸಲಿಲ್ಲ? ಶಿರ್ಶಿ-ಸಿದ್ದಾಪುರ ರೈತರು ಸಂಘಶಕ್ತಿ ತೋರಿಸಿದ ಇದ್ದರೆ ಇಷ್ಟಾದರೂ ಸವಲತ್ತು ಸಿಗುತ್ತಿದ್ದಿಲ್ಲವೆಂಬುವದು ಇದರಿಂದ ಸ್ಪಷ್ಟವಾಗುವದಿಲ್ಲವೇ?

ಈಗ ಈ ಔದಾರ್ಯವೇಕೆ?

ಈ ಪ್ರಕಾರ ಮಾಡಿದ ಅಧಿಕಾರಿಗಳಲ್ಲಿ ಈಗ ಕಾರುಣ್ಯದ ಬುದ್ಧಿಯು ಏಕೆ ಹುಟ್ಟಿತು? ಮತ್ತು ಮೂರು ತಾಲೂಕುಗಳಿಗೆ ಕೂಡಿ ೧೭ ಸಾವಿರ ರೂಪಾಯಿ 'ಕಾಯಮ್' ಮಾಫಿ ಯಾಕೆ ಕೊಟ್ಟರು? ಇದರ ಗೂಢವನ್ನು ತಿಳಕೊಳ್ಳುವದವಶ್ಯವಿದೆ ಈ ಗೂಢವನ್ನು ಮುಂದಿನ ಲೇಖದಲ್ಲಿ ಪ್ರಕಟಿಸಲು ಇಚ್ಛಿಸುತ್ತೇವೆ.

Siromani Udipi Narayanacharya

CHAUKHAMBA, BENARES CITY.



ಮಹಾಶಯರೇ, ರುದ್ರನೇತ್ರೋತ್ಪನ್ನವಾದ ರುದ್ರಾಕ್ಷಿಯನ್ನು ಧರಿಸಿಕೊಂಡು ತಮ್ಮ ಸಮಸ್ತ ಮನೋರಥವನ್ನು ಹೊಂದಿರೆಂ. ಸಂ. 108 ಸರ 1ಕ್ಕೆ 0-6-0 ಯಿಂದ 10 ರೂಪಾಯಿ ವರೆಗೆ ಇರುವವು. ರುದ್ರಾಕ್ಷಿ ಆಗುತ್ತ, ಸ್ಫಟಿಕ ಜೆಟ್ಟುವವು. ಕಂಠಿ ಸರ 32 ಸರ1ಕ್ಕೆ ರೂ.0-8-0ಯಿಂದ ರೂ. 100, ವರೆಗೆ ಗೌರಿಶಂಕರ 1ಕ್ಕೆ ರೂ. 3-8-0ರಿಂದ 350 ವರೆಗೆ ಮತ್ತು ಬೇರೆ ಮಾಲುಗಳ ವಿವರ ತಿಳಿಯಲು ಅಪೇಕ್ಷಿಸುವವರು 0-1-0ಸ್ಟ್ಯಾಂಪು ಕಳಿಸಿದರೆ, 1ಕಾಟಿನಕ್ಕೆ, 1ಪಿಸ್ತ್ರಿಕ್ಕರದ ಪತ್ರ, ನನ್ನು ಕಟಲಾಗು ಸಹ ಉಚಿತ ಕಳಿಸಲಾಗುವದು. ಪತ್ತೆ:—

ಶಿರೋಮಣಿ ನಾರಾಯಣಾಚಾರ್ಯ.

ಚೌಕಾಂಬಾ, ಕಾಶೀ ಸಿಟಿ.

ಗಾಂಧಿವಾರ್ತೆ.

ಶ್ರೀ ಮಹಾದೇವಭಾಯಿ ದೇಸಾಯಿಯವರು ಮಹಾತ್ಮರ ಕಾರ್ಯಾವಳಿಗಳು. ರೌಂಡ ಟೇಬಲ್ ಪರಿಷತ್ತಿನೊಳಗಿನ ಮಹಾತ್ಮರ ಕಾರ್ಯಕ್ರಮವು ಪ್ರಗಿಂದಾಗ ಪ್ರಕಟವಾಗುತ್ತದೆ. ಆದರೆ, ಮಹಾತ್ಮರ ಇತರ ಕಾರ್ಯಕ್ರಮವು ಶಿ ೮ ಮಹತ್ವದ್ದಿದೆ. ರೌಂಡ ಟೇಬಲ್ ಪರಿಷತ್ತಿಗಿಂತ ಅವುಗಳಿಂದ ಹೆಚ್ಚಿನ ಪ್ರಯೋಜನವಾಗುತ್ತದೆಂದು ಮಹಾತ್ಮರು ಒಮ್ಮೆ ಉದ್ಗರಿಸಿದ್ದಾರೆ. ಆ ಕಾರ್ಯಕ್ರಮವನ್ನು ಶ್ರೀ ಮಹಾದೇವಭಾಯಿಯವರು 'ಯಂಗ ಇಂಡಿಯಾ' ಪತ್ರಿಕೆಯಲ್ಲಿ ವಿಸ್ತಾರ ಪ್ರಕಟಿಸುತ್ತಾರೆ. ಆ ವೃತ್ತಾಂತವು ಉದ್ಬೋಧಕವಿದೆ. ಅದರೊಳಗೆ ಪ್ರಕಟವಾದ ಮಹಾತ್ಮರ ದಿನಚರಿಯ ನಮೂನೆಯ ಮೇಲಿಂದ ಮಹಾತ್ಮರು ದೇಶೋದ್ಧಾರಕ್ಕಾಗಿ ಹೇಗೆ ಎಡೆಬಿಡದೆ ದುಡಿಯುತ್ತಾರೆಂದು ತಿಳಿಯಬಂದೀತು:—

ಪ್ರಾತಃ ಘಂಟೆ
೧ ಕಿಂಗಸ್ಲೀ ಹಾಲಿಗೆ ಮರಳಿದರು.
೧॥ ೧೬೦ ಗಜ ನಡೆದು ನಿಶಾ ಮುಗಿಸಿದರು.
೧—೩೦ ದಿನಚರಿ ಬರೆದರು.
೨—೩॥ ನಿದ್ರೆ.
೩॥—೪ ಎದ್ದು ಮೋರೆ ತೊಳೆದು ಪ್ರಾರ್ಥನೆ.
ಬೆಳಗಿನ ಘಂಟೆ
೪—೬ ನಿದ್ರೆ.
೬—೭ ತಿರುಗಾಡುವದು ಮತ್ತು ತಿರುಗಾಡುವಾಗ ಮುಲಾಖತು ಕೊಡುವದು.
೭—೮ ಜಳಕ ಮೊದಲಾದ ಪ್ರಾತರ್ವಿಧಿಗಳು.
೮—೮॥ ಬೆಳಗಿನ ಊಟ.
೮॥—೯। ಕಿಂಗಸ್ಲೀ ಹಾಲಿನಿಂದ ನೈಟ್ಸ ಬ್ರಿಜ್ಜಿಗೆ ಹೋಗುವದು. ['ನೈಟ್ಸ ಬ್ರಿಜ್' ಇದು ಮಹಾತ್ಮರು ಜನರ ಭೇಟಿಗಾಗಿ ಬಾಡಿಗೆಯ ನಿವಾಸಸ್ಥಾನ.]
೯।—೧೧॥ ವರ್ತಮಾನ ಪತ್ರಿಕಾಕರ್ತರೊಡನೆ ಮಾತನಾಡಿದರು; ಕಲಾಕೋವಿದರೊಡನೆ ಮಾತನಾಡಿದರು; ಶಿಲ್ಪಿಗಳೊಡನೆ ಮಾತನಾಡಿದರು; ವರ್ತಕರೊಡನೆ ಮಾತನಾಡಿದರು.
೧೧॥—೧೨ ಸೇಂಟ ಜೇಮ್ಸ ಅರಮನೆಗೆ ಪ್ರಯಾಣ. [ಸೇಂಟ್ಸ ಜೇಮ್ಸ ಅರಮನೆ ಇದು ರೌಂಡ ಟೇಬಲಿನ ಸಭಾಸ್ಥಾನ.]
ಮಧ್ಯಾಹ್ನ—
೧೨—೧ ಸೇಂಟ ಜೇಮ್ಸ ಸಭೆಯಲ್ಲಿ.
೧—೩॥ ಅಮೇರಿಕೆಯವರೊಡನೆ ಫಲಾಹಾರ ಕೂಟದಲ್ಲಿ.
೩—೫॥ ಮುಸಲ್ಮಾನರ ಒಳಸಭೆಯಲ್ಲಿ.
ಸಾಯಂಕಾಲ—
೫॥—೭ ಭಾರತ ಮಂತ್ರಿಗಳ ಕಡೆಗೆ.
೭—೭॥ ಪ್ರಾರ್ಥನೆಗಾಗಿ, ಸಾಯಂಕಾಲದ ಊಟಕ್ಕಾಗಿ ಬಿಡಾರಿಗೆ ಬಗೆಬಗೆಯಿಂದ ಹೊದರು.
ರಾತ್ರಿ—
೮—೯-೧೦ ಮುಸಲ್ಮಾನ ಪ್ರತಿಬಂಧಕರ ಪರಿಷತ್ತಿಗೆ. ಹಿಂದುಸ್ಥಾನದೊಳಗಿನ ಮತ್ಯಾಸದ ವಿಷಯ ಸಂಭಾಷಣ.
೯—೧೦ರಿಂದ .... ಘೋಟಾಳದ ಸಮಾಚಾರ ಸಹಿತ ಬರಿಗೆ ಕಾದಾವದಕ್ಕಾಗಿ ನಿದ್ರೆಗೆ ಹೋದರು. ಕಿಂಗಸ್ಲೀ ಹಾಲಿಗೆ ಯಾವಾಗ ಬರುತ್ತಾರೆಂದು ಗೊತ್ತಾಗುವದಿಲ್ಲ. ೧ ಘಂಟೆಗೆ ಮುಂಚಿತವಾಗಿ ಅವರು ಈ ತನಕ ಮಾರಿ ಬಂದದ್ದಿಲ್ಲ.

ಈ ಪ್ರಕಾರ ಮಹಾತ್ಮರು ದುಡಿಯುತ್ತಿದ್ದಾರೆ. ಈ ಪ್ರಕಾರ ಶ್ರಮಪಟ್ಟರೆ, ಮುಂದೆ ಹೇಗಾಗುವದೆಂದು ಶ್ರೀ ಮಹಾದೇವಭಾಯಿಯವರು ಬಹು ಚಿಂತಾಕ್ರಾಂತರಾಗಿ ಬರೆಯುತ್ತಾರೆ.

* * *

ಮಹಾತ್ಮರು ಮಿ। ಸಿ. ಪಿ. ಸ್ಕಾಟ್‌ರವರಿಗೆ ಭೆಟ್ಟಿಯಾದರು. ಮಿ। ಸ್ಕಾಟ್‌ರವರ ವಯಸ್ಸು ೮೫ ವರ್ಷ. ೫೦ ವರ್ಷಗಳ ತನಕ 'ಮಂಚೆಸ್ಟರ ಗಾರ್ಡಿಯನ್' ಪತ್ರಿಕೆಯ ಸಂಪಾದಕತ್ವ ನಡಿಸಿ ೧೯೨೯ನೇ ಇಸ್ವಿಯಲ್ಲಿ ಅವರು ಅದನ್ನು ತ್ಯಜಿಸಿ ಈಗ ಮನೆಯಲ್ಲಿ ವಿಶ್ರಮಿಸುತ್ತಿದ್ದಾರೆ. ಅದು ಅವರ ಅಕ್ಕನ ಮನೆ. ಅಕ್ಕನ ವಯಸ್ಸು ೯೩ ವರ್ಷ. ಅಕ್ಕನಾಗಲಿ, ತಮ್ಮನಾಗಲಿ ಮದುವೆಯಾಗಿದ್ದಿಲ್ಲ. ವಯೋವೃದ್ಧರಾದರೂ, ಹರೆಯದವರಂತೆ ಆರೋಗ್ಯವಂತರಿದ್ದಾರೆ. ಅಕ್ಕನಿಗೆ ಸ್ವಲ್ಪ ಕಿವಿ ಕೇಳಿಸುವದಿಲ್ಲ; ಇಷ್ಟೇ ದೋಷ. ಮೋರೆಗೆ ನಿರಿಗೆ ಕೂಡ ಬೀಳಲಿಲ್ಲ. ಮಹಾತ್ಮರಿಗೆ ನೋಡಿ ಅವಳಿಗೆ ಬಹು ಸಂತೋಷವಾಯಿತು. "ಇಂದು ನಾನು ಧನ್ಯಳಾದೆ" ಹೀಗವಳು ಉದ್ಗರಿಸಿದಳು. "ನನ್ನ ಕಾರ್ಯಕ್ಕೆ ತಮ್ಮ ಆಶೀರ್ವಾದವಿರಬೇಕಾಗಿ" ಮಹಾತ್ಮರು ನುಡಿದಷ್ಟೇ ತಡ; "ಅಹುದು, ಅಹುದು; ಬಹು ಸಂತೋಷದಿಂದ ಆಶೀರ್ವದಿಸುತ್ತೇನೆ," ಹೀಗೆಂದರವಳು! ಮಿ। ಸ್ಕಾಟ್‌ರವರಿಗೂ, ಮಹಾತ್ಮರಿಗೂ ಬಹುಕಾಲದ ವರೆಗೆ ಸಂಭಾಷಣೆಯಾಯಿತು. "ತಮ್ಮ ಮನೆ ಇದೊಂದು ಕ್ಷೇತ್ರ; ನಾನೊಬ್ಬ ಯಾತ್ರಿಕ. ನಿಮ್ಮ ಸರ್ಕಾರದವರಷ್ಟು ಹಿಂದಿನ ಕಾಲದ ತನಕ ಹಿಂದುಸ್ಥಾನದ ಸ್ಥಿತಿಯನ್ನು ಬ್ರಿಟಿಶ ಜನಾಂಗಕ್ಕೆ ತಿಳಿಸಿದ ವ್ಯತಿರಿಕ್ತ ತಿಳುವಳಿಕೆ ಸ್ಪಷ್ಟಪಡಿಸುವದಕ್ಕಾಗಿ ನಾನು ನಿಮಗೆ ಕಾಣಿಸಿದೆ." ಹೀಗೆ ಮಹಾತ್ಮರು ಮುದುಕರ ಕಡೆ ಹೇಳಲು, ಅವರು ಮಹಾತ್ಮರಿಗೆ ಹಲವು ಹಿಂದಿನ—ಮುಂದಿನ ಸಂಗತಿಗಳನ್ನು ಸುತ್ತ ಮುತ್ತ ಕನ್ನಡಿಸು ಅಟ್ಟ ಭರವಸೆಯ ಕೊಡೆಯಲ್ಲಿ ಇಷ್ಟೇ ಮಾತನಾಡಿದರು. 'ಬ್ರಿಟಿಶ ರಾಜ್ಯದಿಂದ ಹಿಂದುಸ್ಥಾನದಲ್ಲಿ ಐಕ್ಯ ನೆಲೆಗೊಂಡಿರುವದಿಲ್ಲವೇ?' ಹೀಗೆ ಮಿ। ಸ್ಕಾಟ್‌ರವರು ಮಹಾತ್ಮರಿಗೆ ಕೇಳಿದರು. "ಅಹುದು, ಆದರೆ, ಬ್ರಿಟಿಶರು ಅಧಿಕಾರಬಲದಿಂದ, ಬಲಾತ್ಕಾರದಿಂದ ಸಾಧಿಸಿದ ಐಕ್ಯವಿದು! ಇದರಿಂದ ನಮ್ಮೊಳಗಿನ ಮನಸ್ಸು ಒಂದಾಗಲಿಲ್ಲ. ಐಕ್ಯವನ್ನು ನಾವೇ ಸಾಧಿಸಿಕೊಳ್ಳುತ್ತೇವೆ. (ರೌಂಡ ಟೇಬಲಿನ ಚಾಲಕರಾದ ಮಿ। ಮೆಕಡೊನಲ್ಡರಿಗೆ ಮುಖ್ಯ ಪ್ರಧಾನರಿಗೆ) ನಾನು ಹೀಗೆ ಹೇಳಲು, ಅವರಿಗದು ಸೇರಲಿಲ್ಲ. ರೌಂಡ ಟೇಬಲ್ ಪರಿಷತ್ತಿನ ಪ್ರತಿನಿಧಿಗಳು ಜನರ ಪ್ರತಿನಿಧಿಗಳಾಗಿ ಬಂದಿದ್ದರೆ, ಐಕ್ಯವಾಗಲು ಸುಲಭವಾಗುತ್ತಿತ್ತು. ಸರ್ಕಾರವು ಅವರನ್ನು ಆರಿಸಿದಂತೆ, ಮುಖ್ಯ ಪ್ರಧಾನರ ಆಜ್ಞೆಯಂತೆ ನಾವು ಬಂದಿದ್ದೇವೆ. ಅಲ್ಪಸಂಖ್ಯಾತರ ಸಂಖ್ಯಾತರ ಪ್ರತಿನಿಧಿಗಳಿಗೆ ರೌಂಡ ಟೇಬಲ್ ಪರಿಷತ್ತಿನಲ್ಲಿ ಸ್ಥಾನ ಸಿಕ್ಕಿದೆ. ಅವರು ಅಲ್ಲಿ ಅಡ್ಡಿಗಳನ್ನು ಮುಂದೊಡ್ಡುತ್ತಾರೆ." ಹೀಗೆಲ್ಲ ಮಹಾತ್ಮರಿಗೂ, ಮಿ। ಸ್ಕಾಟ್‌ರವರಿಗೂ ಭೂತ—ವರ್ತಮಾನ—ಭವಿಷ್ಯ ಸಂಗತಿಗಳ ಕುರಿತು ಸಂಭಾಷಣ ನಡೆಯಿತು.

* * *

ಮಹಾತ್ಮರಿಗೆ ವಿದ್ಯಾರ್ಥಿಗಳು ತಮ್ಮ ಪರಿಷತ್ತಿಗೆ ಕರೆದಿದ್ದರು. ಈ ಪರಿಷತ್ತಿನಲ್ಲಿ ಬ್ರಿಟಿಶ ಹಾಗು ಬ್ರಿಟಿಶೇತರ ವಿದ್ಯಾರ್ಥಿಗಳಿದ್ದರು. ೫೩ ದೇಶಗಳ ವಿದ್ಯಾರ್ಥಿಗಳು. ಭಿನ್ನ ಭಿನ್ನ ಮತಸ್ಥರು ನಾಲ್ಕು ವಿದ್ಯಾರ್ಥಿಗಳು ಮಹಾತ್ಮರಿಗೆ ಪ್ರಶ್ನೆ ಕೇಳಿದರು. ಒಬ್ಬರು ಅಮೇರಿಕೆಯ ನಿಗ್ರೋ ಜಾತಿಯ ವಿದ್ಯಾರ್ಥಿಗಳು; ಇನ್ನೊಬ್ಬರು ಚೀನ ದೇಶದವರು; ಮತ್ತೊಬ್ಬರು ಕೊರಿಯಾ ದೇಶದವರು; ನಾಲ್ಕನೇಯವರು ಬ್ರಿಟಿಶರು. ಈ ನಾಲ್ಕು ವಿದ್ಯಾರ್ಥಿಗಳು ಸತ್ಯಶೋಧಕರಾಗಿ ಮಹಾತ್ಮರಿಗೆ ಪ್ರಶ್ನೆ ಕೇಳಿದರು. ಅವನ್ನು ಕೇಳಿಕೊಂಡು ಮಹಾತ್ಮರಿಗೆ ಆನಂದವಾಯಿತು. ಅವುಗಳಿಗೆ ಮಹಾತ್ಮರು ಗಾಂಭೀರ್ಯದಿಂದ ಉತ್ತರ ಕೊಟ್ಟರು. ಮಹಾತ್ಮರು ಕೊಟ್ಟ ಉತ್ತರದ ತಾತ್ಪರ್ಯವೇನೆಂದರೆ:— ವಿದ್ಯಾರ್ಥಿಗಳು ಕೈಕೊಂಡ ಬಂಧುಭಾವದ ಉದ್ದೇಶಕ್ರಮದಿಂದ ಬ್ರಿಟಿಶರ ಅಹಂಕಾರವು ಕೆಲ ಮಟ್ಟಿಗೆ ತಗ್ಗಬಹುದು. ಅವರ ಪರಿಶೀಲ್ಯ ವೃತ್ತಿಯು ಪರಿಹಾರವಾಗಬಹುದು. ಪಂಜಾಬದೊಳಗೆ ಬ್ರಿಟಿಶರ ಭಯಂಕರ ಸ್ವಭಾವವನ್ನು ನಾನು ನೋಡಿದ್ದೇನೆ. ಅದನ್ನು ಪರಿಹರಿಸುವದಕ್ಕಾಗಿ ನಾನು ಶಕ್ತಿ ಮೀರಿ ದುಡಿಯುವೆನು. ಇಂಥ ದುಷ್ಟ ಪ್ರಕಾರಗಳು ಇನ್ನು ನಡೆಯಲಾಗದು. ನನ್ನ ದೇಶಬಾಂಧವರಿಗೆ ಅನ್ಯಾಯವಾಗಬಾರದೆಂದು ಅಷ್ಟೇ ನಾನು ಹೇಳುವದಿಲ್ಲ; ಮನುಷ್ಯನು ದುರ್ಬಲನಾಗಬಾರದೆಂದು ನಾನು ಹೋರಾಡುತ್ತಿದ್ದೇನೆ. ದುಷ್ಕೃತ್ಯಗಳನ್ನು ಸಹಿಸುವವರಿಗಾಗಿ ನಾನು ಮರುಗುವದಿಲ್ಲ. ಅವರ ಸ್ಥಿತಿ ನೋಡಿ ನನಗೆ ಆನಂದವಾಗುತ್ತದೆ; ಅವರೇ ಮಾನವ ಕೋಟಿಯ ಕಲ್ಯಾಣಕರ್ತರು. ಆದರೆ, ಕ್ರಿಶ್ಚಿಯನರಿಗೆ ನೋಡುವದಕ್ಕಾಗಿ, ದುರ್ಬಲರಿಗೆ ನುಂಗುವದಕ್ಕಾಗಿ ವಿಶೇಷಕೋಸ್ಕರ ಪಶುಗಳಂತೆ ವರ್ತಿಸುವವರು ಈಶ್ವರನ ಕೋಪದಲ್ಲಿ ನಡೆಯುತ್ತಾರೆ. ಈ ಪ್ರಕಾರ ಮಾನವನ ಅಧಃಪಾತವಾಗುವದನ್ನು ನಾವು ನೋಡಲಾರೆವು. ನಾವೆಲ್ಲರೂ ಒಂದೇ ತಾತನ—ಪರಮಾತ್ಮನ—ಮಕ್ಕಳಾದರೆ, ಮತ್ತು ಆತನ ಅಂಶಭಾಗಿಗಳಾದರೆ, ನಾವೆಲ್ಲರೂ ಆ ಮಹಾ ಮಾನವ ಸಮುದಾಯಕ್ಕೆ ಬದ್ಧರಾಗಿದ್ದೇವೆ; ಹಾಗಿದ್ದ ಮೇಲೆ ಬಾಂಧವನೇ ಇರಲಿ ಅಥವಾ ಬೇರೆ ಜನಾಂಗದವನೇ ಇರಲಿ! ಇಂಗ್ಲಿಷ ಜನಾಂಗದವರಲ್ಲಿ ಅನೇಕರು ನನ್ನ ಗೆಳೆಯರಿದ್ದಾರೆ. ಗೆಳೆಯರ ದೇಶಬಾಂಧವರು ಹೀಗೆ ವರ್ತಿಸಿದ್ದನ್ನು ನೋಡಿ ನನಗೆ ವಿಷಾದವಾಗುತ್ತದೆ. ಅವರ ಈ ಪ್ರವೃತ್ತಿಯನ್ನು ಹೋಗಲಾಡಿಸುವದು ಅದೊಂದು ಮಹಾಕಾರ್ಯ. ಅದರೊಳಗೆ ನಿಮ್ಮ ನೆರವು ನನಗೆ ಬೇಕು. ಹಿಂದೀ ವಿದ್ಯಾರ್ಥಿಗಳು ಶೀಲವಂತರಾಗಬೇಕು. ಸತ್ಯಾಚರಣ, ಸಜ್ಜನತನ ಎಂದು ಹಿಂದೀ ವಿದ್ಯಾರ್ಥಿಗಳು ಪ್ರಕಟಪಡಿಸಬೇಕು, ತ್ಯಾಗಿಗಳಾಗಿ ಜೀವಿಸಬೇಕು; ಹಿಂದೀ ವಿದ್ಯಾರ್ಥಿಗಳು ಮತ್ತೊಂದು ಮಾರ್ಗವ ಬೇಡ. ಇದೇ ಸ್ವಾತಂತ್ರ್ಯ ಸಂಗ್ರಾಮಕ್ಕೆ ಅವರು ಕೊಡಬೇಕಾದ ಬೆಂಬಲ".

* * *

ಮಹಾತ್ಮರು ಅಕ್ಟೋಬರ ೧೦—೧೧ನೇ ತಾರೀಖಿಗೆ ಚಿಚೆಸ್ಟರ ಕಡೆ ಸಂಚರಿಸಿದರು. ಚಿಚೆಸ್ಟರದಲ್ಲಿ ಪುರಾತನ ಕ್ರೈಸ್ತ ದೇವಾಲಯಗಳಿವೆ. ಇದು ಲಂಡನದಿಂದ ೭೦ ಮೈಲು ದೂರವಿರುವ ಸ್ಥಳ. ಇಲ್ಲಿಯ ಬಿಶಪ್ ಯಾವ ಪಾದ್ರಿಗಳ ಬೆಲ್‌ರವರು ಬಹು ಸಜ್ಜನರು, ಮಹಾತ್ಮರ ಗುಣಗಳಿಗೆ ಶೀರ ಪಾತ್ರರು; ಸಾಧುಸ್ವಭಾವರು. ಅವರ ಮನೆಯಲ್ಲಿಯೂ, ಗುಡಿಯಲ್ಲಿಯೂ ಅವರು ಸೌಖ್ಯದಿಂದ ಇಳಿಯುತ್ತಿದ್ದರು. ಕೆಲ ಕಾಲ ಬಸ್ಕರ್ವಿಲ್ಲ ಕ್ಷೇತ್ರದಲ್ಲಿದ್ದರು. ಗಾಂಧಿ—ಇರ್ವಿನ್ ಒಪ್ಪಂದ ಮಾಡಿದ ಇರ್ವಿನ ದೊರೆಗಳೂ, ಬೆಲ್‌ರವರೂ ಒಂದೇ ಕಾಲೇಜಿನ ವಿದ್ಯಾರ್ಥಿಗಳಾಗಿದ್ದರು. ಇರ್ವಿನ್ ದೊರೆಗಳಿಗೂ, ಬೆಲ್‌ರವರಿಗೂ ಒಳ್ಳೇ ಸ್ನೇಹವಿದೆ, ಬೇರೆ ಬೇರೆ ಮಾರ್ಗಗಳೂ ಇನ್ನೂ ಸಹ ಬಲ್ಲಂಥರ ವ್ಯವಹಾರವಿದೆ. ಅವರಿಗೂ, ಮಹಾತ್ಮರಿಗೂ ಸವಿಸ್ತಾರ ಸಂಭಾಷಣೆಯಾಯಿತು. ಸಂಭಾಷಣ ಮುಗಿದ ಬಳಿಕ, ಬಿ। ಬೆಲ್ಲರವರು ಶ್ರೀ ಮಹಾದೇವಭಾಯಿಯವರ ಕಡೆ—ನುಡಿದದ್ದೇನಂದರೆ—ಅಲ್ಪಸಂಖ್ಯಾತರ ಪ್ರಶ್ನೆಯ ಮೇಲೆ ರೌಂಡ ಟೇಬಲ್ ಪರಿಷತ್ತು ಮುರಿದು ಹೋಗುವದಾಗಿ ನನಗನಿಸುವದಿಲ್ಲ. ಡಾ। ಗಾಂಧಿಯವರಿಗೆ ನಿನ್ನೆ ರಾತ್ರಿ ಅನೇಕ ಪಾದ್ರಿಗಳು ಪ್ರಶ್ನೆ ಕೇಳಿದರು. ಅಲ್ಪಸಂಖ್ಯಾತರ ವಿವಾದ ಹಿಂದುಸ್ಥಾನದಲ್ಲಿಯೇ ಇತ್ಯರ್ಥವಾಗುವದಾಗಿ ಒಬ್ಬರು ಉದ್ಗರಿಸಿದರು. ಆದ್ದರಿಂದ ಅದನ್ನು ತಾನು ನಿರ್ಣಯಿಸಿ ತೀರುವೆನೆಂದು ಡಾ। ಗಾಂಧಿಯವರು ಉದ್ಗರಿಸಿದರು. ಅವರು ಅದನ್ನು ನೆರವೇರಿಸುವರೆಂದು ನನಗೆ ತೋರುತ್ತದೆ. ಅವರು ಹಿರೀ ಸಾಹಸಿಗರು ಆದವರಲ್ಲ; ಡಾ। ಗಾಂಧಿಯವರ ಕಡೆ ನಾನು ಮಹಾಶಕ್ತಿ ಕಾಣುವೆ

[೬ನೇ ಪಾನಿನ ಮೇಲೆ ಮುಂದರಿಸಿದೆ.]

ಪ್ರಕೃತ ವಿಷಯ.

ಬೇಸಾಯಗಾರರ ಸ್ಥಿತಿ

ಈಗ ಬೇಸಾಯಗಾರರ ಸ್ಥಿತಿ ನೆಟ್ಟಗಿಲ್ಲ, ಎನ್ನುವ [illegible] ಕಷ್ಟ [illegible] ಕಷ್ಟ [illegible] ಸರಕಾರದ ರಿಪೋರ್ಟುಗಳ ಮೂಲಕ [illegible] ಸರಕಾರದ ಪಕ್ಷದ [illegible] ಪತ್ರಿಕೆಯಲ್ಲಿ [illegible] ಒಕ್ಕಲಿಗರ ಸ್ಥಿತಿ [illegible] ಒಕ್ಕಲಿಗರಿಗೆ [illegible] ಕೋಟಿ ರೂಪಾಯಿ [illegible] ಒಕ್ಕಲಿಗರ [illegible] ಕೋಟಿ ರೂಪಾಯಿ. ಹೀಗೆ ಸರಕಾರಿ [illegible] ರಿಪೋರ್ಟ [illegible] ಕೋಟಿ ರೂಪಾಯಿ [illegible] ಕೋಟಿ ರೂಪಾಯಿ [illegible] ಸರಕಾರಿ [illegible] ಕೋಟಿ ರೂಪಾಯಿ [illegible] ೬೦ ಕೋಟಿ ರೂಪಾಯಿ ಮಾತ್ರ ಉಳಿಯಿತು. ೬೦ ಕೋಟಿಯಷ್ಟು ಹೆಚ್ಚೆಂದರೆ, [illegible] ಜನರು [illegible] ಉಳಿದವರ ಪಾಡೇನು? ಈ ತೆರನಾದ ವಿಚಾರ [illegible] ಮಂತ್ರಿಯ ರಿಪೋರ್ಟಿನಲ್ಲಿ [illegible] ರೂಪಾಯಿ. ಇದು [illegible] ಕಥೆ. ಈಗಿನ ಸ್ಥಿತಿಯಲ್ಲಿ [illegible] ರೂಪಾಯಿ [illegible] 'ಮುಂಬಯಿ ಟೈಮ್ಸ್' ಪತ್ರಿಕೆಯಲ್ಲಿ 'ಸ್ಟ್ರೇಟರನು' [illegible] ಬರೆದಿದ್ದಾನೆ. ಅಂದರೆ, [illegible] ಈ ಸ್ಥಿತಿಯಲ್ಲಿ ಬೇಸಾಯಗಾರರಿಗೆ ಉದ್ಧಾರದ ದಾರಿಯ ಉಪಾಯಗಳನ್ನು 'ಸ್ಟ್ರೇಟರ'ನೇ ಸೂಚಿಸಿದ್ದಾನೆ. ಅವು ಯಾವವೆಂದರೆ:— (೧) [illegible] ಭಾರವನ್ನು ಕಡಿಮೆ ಮಾಡಬೇಕು [illegible] (೨) [illegible] ಒಕ್ಕಲಿಗರ [illegible] (೩) ಒಕ್ಕಲಿಗರಿಗೆ [illegible] (೪) ಕೈಗಾರಿಕೆಗಳನ್ನು ಅಭಿವೃದ್ಧಿ ಮಾಡಬೇಕು; (೫) ಉಪಜೀವನದ ಸಾಧನಗಳನ್ನು ಹೆಚ್ಚಿಸಬೇಕು, [illegible] (೬) [illegible] ಪ್ರಪಂಚವನ್ನು [illegible] ಲೋಕಮಾನ್ಯ ಟಿಳಕ, ಮಹಾತ್ಮಾ ಗಾಂಧಿ ಮೊದಲಾದ ಮಹರ್ಷಿಗಳು ಸೂಚಿಸಿದ ಉಪಾಯಗಳನ್ನೇ 'ಸ್ಟ್ರೇಟರನು' ಸ್ವಲ್ಪ ಅಸ್ಪಷ್ಟವಾಗಿ ಸೂಚಿಸಿದ್ದಾನೆ. ಶೀರ್ವೆ ಇಳಿಸಿರಿ; ಕೈದಾಟಿಗೆ ಆಶ್ರಯ ಕೊಡಿರಿ; ಖಾದಿಯ ಪ್ರಚಾರ ಮಾಡಿರಿ; ಹೀಗೆ ಮಹಾತ್ಮರು ಕೊಟ್ಟ ಸಂದೇಶವನ್ನೇ 'ಸ್ಟ್ರೇಟರನು' ಬೇರೆ ಶಬ್ದಗಳಿಂದ ಸೂಚಿಸಿದ್ದಾನೆ. ಈಗಲಾದರೂ ಸರಕಾರವು ಒಕ್ಕಲಿಗರ ಸ್ಥಿತಿ ಸುಧಾರಿಸಲು ಪ್ರಯತ್ನ ಮಾಡಬಹುದಲ್ಲವೇ? ಶೀರ್ವೆಯನ್ನು ಮೊಟ್ಟಮೊದಲು ಇಳಿಸಿ ಕೊಡುವ ಉಪಕ್ರಮ ಮಾಡಬಹುದು.

*

ರಾಜಪಕ್ಷಕ್ಕೆ ಪೆಟ್ಟು ಬಂತು.

ಪಾರ್ಲಿಮೆಂಟಿನ ಇಲೆಕ್ಷನು ಕಳೆದ ವಾರ ಮುಗಿಯಿತು. [illegible] ಕೂಲಿಕಾರ ಪಕ್ಷವು ಎಲ್ಲೆಲ್ಲಿಯೂ ಸೋತುಹೋಯಿತು. ಹಿಂದಿನ ಪಾರ್ಲಿಮೆಂಟಿನಲ್ಲಿ ಕೂಲಿಕಾರ ಪಕ್ಷದ ಸಭಾಸದರು ೨೬೦ ಮಂದಿ ಇದ್ದರು. ಪಾರ್ಲಿಮೆಂಟಿನ ಒಟ್ಟು ಸಭಾಸದರ ಸಂಖ್ಯೆ ೬೧೫. ಈಸಲ ಇಲೆಕ್ಷನಿನಲ್ಲಿ ೪೫೦ ಮಂದಿ ರಾಜಪಕ್ಷದವರು, ೧೩ ಮಂದಿ ಮೆಕಡೋನಲ್ಡ ಕೂಲಿಕಾರ ಪಕ್ಷದವರು, ೫೮ ಮಂದಿ ಹೆಂಡರಸನ್ ಪಕ್ಷದ ಕೂಲಿಕಾರರು ಆರಿಸಿ ಬಂದಿರುತ್ತಾರೆ. ಕೂಲಿಕಾರ ಸರಕಾರದ ಅಧಿಕಾರದಲ್ಲಿ ಹಣಕಾಸಿನ ಪ್ರಧಾನ ಮಂತ್ರಿಗಳಾಗಿದ್ದ ಹೆಂಡರಸನ್, ಸಾವಕಾರಿ ಬೆಂಡಫೀಲ್ಡ, [illegible] ಮೊದಲಾದ [illegible] ಸೋತರು. ಭಾರತ ಮಂತ್ರಿಗಳಾ[illegible]

ಮನೋಹರವಾದ ಕೂದಲನ್ನು ಚನ್ನಾಗಿ ಸಾಕಬೇಕು.

ಆದರೆ ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ದುರ್ಲಕ್ಷ ಮಾಡುತ್ತಾರೆ. ಕೂದಲು ಮನೋಹರವಾಗಿರಬೇಕಾದರೆ ಅವುಗಳ ವಿಷಯ ಲಕ್ಷ್ಯಕೊಡಬೇಕು. ಕೂದಲುಗಳನ್ನು ಅಲಕ್ಷ್ಯ ಮಾಡಿದರೆ, ಅವು ಬಾಡಿ [illegible] ಉದುರುತ್ತವೆ. [illegible] 'ಕೂದಲನ್ನು' [illegible] ಶ್ರೇಷ್ಠವಾದ ಕೂದಲನ್ನು [illegible]

ಕಾಮಿನಿಯಾ ಆಯಿಲ್. (ರಜಿಸ್ಟರ್ಡ)

ದಿನಾಲು ಮುಂಜಾನೆ [illegible] ಎಣ್ಣೆಯನ್ನು ಚನ್ನಾಗಿ ತಿಕ್ಕಬೇಕು. [illegible] ಎಣ್ಣೆಯಿಂದ ತಲೆಗೆ ತಂಪು [illegible] ಕೂದಲುಗಳ ಬೇರುಗಳಿಗೆ [illegible] ಕೂದಲುಗಳಿಗೆ [illegible] ಹಸನಾಗಿ ಬೆಳೆಯುತ್ತವೆ

ಎಲ್ಲಾ ಚಲತೀ ಅಂಗಡಿಕಾರರಲ್ಲಿ

ಈ ತೈಲವು ದೊರೆಯುತ್ತದೆ

ಅಥವಾ

ನಮಗೇ ಬರೆದು ತರಿಸಿಕೊಳ್ಳಿರಿ

ಬಾಟ್ಲಿ ೧ಕ್ಕೆ	ರೂ.	೧—೦—೦
ಅಂಚೆವೆಚ್ಚ	,,	೦—೬—೦
೩ ಬಾಟಲಿಗಳಿಗೆ	,,	೨—೧೦—೦
ಅಂಚೆವೆಚ್ಚ	,,	೦—೧೪—೦

ನಿಮ್ಮ ಅಂಗಡಿಕಾರರಿಂದ

ತರಿಸಿಕೊಳ್ಳಿರಿ

——— ೦ ———

೬ ಔನ್ಸಿಗೆ	ರೂ.	೩—೦—೦
ಔನ್ಸಿಗೆ	,,	೧—೪—೦
ಡ್ರ್ಯಾಮಿಗೆ	,,	೦—೧೨—೦
ಅಂಚೆವೆಚ್ಚ	,,	೦—೬—೦

ಒಟ್ಟೋ ದಿಲ್ ಬಹಾರ

ಕೇಳಲಿಕ್ಕೆ ಮರೆಯಬೇಡಿರಿ

“ ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ ”

ಒಂದು ಸುಗಂಧದ್ರವ್ಯದಲ್ಲಿ ಇವನ್ನು [illegible] ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು. ಅದ್ಯಾವುದು?———

ಒಟ್ಟೋ-ದಿಲ್ ಬಹಾರ್! (ರಜಿಸ್ಟರ್ಡ)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ಸಹಜ ವಾಸನೆ ಇಲ್ಲ. ಅವುಗಳಲ್ಲಿ ಅಲ್ಕೋಹೋಲ ಯಾನೆ ಮದ್ಯವು ಸೇರಿರುತ್ತದೆ. ಇದರಿಂದ ಹೂವಿನ ಸಹಜ ಪರಿಮಳವು ಸಿಗುವದು [illegible] ಒಟ್ಟೋದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು. ಇದಕ್ಕೆ ಮದ್ಯದ ಸ್ಪರ್ಶವಿಲ್ಲ.

THE ANGLO INDIAN DRUG & CHEMICAL CO.

POST BOX 2082 **BOMBAY No. 2.**

ದ ಮಿ॥ ಪೆಟ್ರಿಕ ಲಾರೆನ್ಸರೂ ಸೋತು ಹೋದರು. ಮೆಕಡೋನಲ್ಡರೂ, ಮಿ॥ ಬಾಲ್ಡವಿನ್‌ರ ರಾಜಪಕ್ಷವೂ ಗಳಿಸಿದ ಇಷ್ಟು ಪ್ರಚಂಡ ಬಹುಮತ ತಮಗೆ ದೊರೆಯುವದಾಗಿ ರಾಜಪಕ್ಷವು ಸ್ವಪ್ನದಲ್ಲಿ ಕೂಡ ಯೋಚಿಸಿರಲಿಲ್ಲ, ಅಷ್ಟು ದೊಡ್ಡ ದಿಗ್ವಿಜಯವಾಗಿದೆ. ಮಿ॥ ಮೆಕಡೋನಲ್ಡರೂ, ಬಾಲ್ಡವಿನ್‌ರವರೂ ಇರುವ ಪರಿಸ್ಥಿತಿಯಾಗಿದ್ದರೆ ಇಲೆಕ್ಶನಿನಿಂದ ಹಿಂದುಸ್ಥಾನಕ್ಕೆ ಲಾಭವಾಗದೆಂದು ಹೇಳುತ್ತಾರೆ. ರಾಜಪಕ್ಷವು ಹಿಂದುಸ್ಥಾನದ ವಿರೋಧವಾದ ಪಕ್ಷ. ಅಖಿಲ ಹಿಂದುಸ್ಥಾನದಲ್ಲಿ ಬಹಿಷ್ಕರಿಸಲ್ಪಟ್ಟ ಸೈಮನ್ ಕಮಿಶನದವರು ಮಾಡಿದ ವಶಿಸಿನ ರಿಪೋರ್ಟಿನಲ್ಲಿಯ ಅಧಿಕಾರ ಕೊಡತಕ್ಕದ್ದಾಗಿ ಸಂಕಲ್ಪವಾಗಿರುವದಾಗಿಯೂ, ಅದಕ್ಕನುಸಾರವಾಗಿಯೇ ಬರೆದು ಕಳುಹಲು ಹಿಂದುಸ್ಥಾನ ಸರಕಾರಕ್ಕೆ ಆಜ್ಞೆಯಾಗಿರುವದಾಗಿಯೂ ಆ ವಾರದಲ್ಲಿಯೇ ಹಿಂದುಸ್ಥಾನ ಸರಕಾರದ ರಿಪೋರ್ಟು ಸಾಮ್ರಾಜ್ಯ ಸರಕಾರಕ್ಕೆ ಸಾದರವಾಗುವದಾಗಿಯೂ ಪತ್ರಿಕೆಗಳ ಅಂಬೋಣ. ಸರ್ ಜಾನ್ ಸೈಮನರು ಇಲೆಕ್ಶನಿನಲ್ಲಿ ತಮ್ಮ ಪರವಾಗಿ ೩೪ ಮಂದಿ ಸಭಾಸದರನ್ನು ಸಂಗ್ರಹಿಸಿಕೊಂಡಿದ್ದಾರೆ. ರಾಜಪಕ್ಷಕ್ಕೆ ಅನುಕೂಲರವರು. ಮೆಕಡೋನಲ್ಡರ ಹೊಸ ರಾಷ್ಟ್ರೀಯ ಸರಕಾರದ ಪಕ್ಷದವರಾಗಿರು. ಹೀಗೆ ಸಾಮ್ರಾಜ್ಯ ಸರಕಾರದ ಬಲವು ಪ್ರತಿಕೂಲವಾಗಿರುತ್ತದೆ. ನಂತರ ಮಂಗಳವಾರ ಹೊಸ ಪಾರ್ಲಿಮೆಂಟಿನ ಸಭೆ ಸ್ಪೀಕರ ಎಂದರೆ ಸಭಾಪತಿಗಳನ್ನಾರಿಸುವರು. ಎಲ್ಲರೂ ರಾಜನಿಷ್ಠೆಯ ಪ್ರತಿಜ್ಞೆ ಕೊಳ್ಳುವರು. ೧೦ನೇ ತಾರೀಖಿನ ದಿವಸ ಮಹಾರಾಜರು ಪಾರ್ಲಿಮೆಂಟನ್ನು ತೆರೆಯುವರು. ಕಳೆದ ಗುರುವಾರ ಪರದೇಶಗಳ ರಾಜಕಾರಣ ಸ್ಥಿತಿಯನ್ನು ಪ್ರಧಾನ ಮಂಡಳವು ಆಲೋಚಿಸುವದು ತ್ತ. ಬಾದಶಹರ ಭಾಷಣವನ್ನು ಪ್ರಧಾನ ಮಂಡಳವು ತಯಾರಿಸುವದು. ಈ ಇಲೆಕ್ಶನಿನಲ್ಲಿ ೬೭ ಮಂದಿ ಪ್ರತಿಸ್ಪರ್ಧಿಗಳಿಲ್ಲದೆ ಆರಿಸಿ ಬಂದವರು. ಉಳಿದ ಜಾಗಕ್ಕಾಗಿ ೧೨೯೯ ಮಂದಿ ಉಮೇದ್ವಾರರಿದ್ದರು. ಅವರೊಳಗೆ ೫೨೭ ಮಂದಿ ರಾಜಪಕ್ಷದವರು, ೧೩೦ ಮಂದಿ ರಾಜಪಕ್ಷದ ಯಾನೆ 'ರಾಷ್ಟ್ರೀಯ' ಪಕ್ಷದ ವಲ್ಲಭಾಯಿಯಾಗಿದ್ದ ಸಭಾಸದರು. ಉಳಿದ ೫೫೭ ಉಮೇದ್ವಾರರು ಕಾರ್ಮಿಕರ ಪಕ್ಷದವರು ಹಾಗು ಕಾರ್ಮಿಕರ ಪಕ್ಷದ ಬಾತಿಯಾಗಿದ್ದವರು. ಇದರ ಮೇಲಿಂದ ಕಾರ್ಮಿಕ ಪಕ್ಷಕ್ಕೆ ಬರಬಂದ ಸಹಾಯ ಗಲಿಲ್ಲ. ಕಾರ್ಮಿಕರ ಪಕ್ಷದ ಪ್ರಧಾನರಾಗಿದ್ದ ಮಿ॥ ಹೆಂಡರ್ಸನ್—ಸ್ಕಾಟ್‌ಲಂಡ್ ಮೊದಲಾದವರು ಸ್ವಂತ ಪಕ್ಷಕ್ಕೆ ವಚನಭ್ರಷ್ಟ, ದ್ರೋಹ ಮಾಡಿದವರಿಗೆ ಉತ್ತರದಾಯಿ ಕೊಡಲಿಸಿದರಾಗಿ ಕಾರ್ಮಿಕರ ಪಕ್ಷದ 'ಡೇಲಿ ಹೆರಲ್ಡ್' ಪತ್ರಿಕೆಯು ಪ್ರಚರಿಸಿದೆ. ಇಲೆಕ್ಶನಿನ ದಿನ ಬಹಳ ಮಂದಿ ಬಿದ್ದವರಿಂದ ಕಾರ್ಮಿಕರ ಮತದಾರರು ಮತ ಕೊಡಲು ರಾಣ್ಯಕ್ಕೆ ಬರಲಿಲ್ಲವಾಗಿಯೂ ಹೇಳುತ್ತಾರೆ. ಈಗ ಎಷ್ಟು ಹೇಳಿದಾಗ್ಯೂ ಹೆಚ್ಚು ಅತಿ ಕೆಳಿಗೆ ಬೀಳಿ ಹೋಯಿತು. ಇಲೆಕ್ಶನಿನ ಖರ್ಚು ನಮೂದಿಸತಕ್ಕದ್ದಿದೆ. ಒಂದೊಂದು ಇಲೆಕ್ಶನಿಗೆ ಸರಕಾರಕ್ಕೆ ೫ ಲಕ್ಷ ಪವನು ಖರ್ಚು ಬರುತ್ತದೆ. ಉಮೇದ್ವಾರರಿಗೆ ಸಾಧಾರಣವಾಗಿ ೧೦ ಸಾವಿರ ಪವನು ಖರ್ಚು ಆಗಲುತ್ತದೆ. ಕಾರ್ಮಿಕರ ಪಕ್ಷವು ತಮ್ಮ ೫೧೦ ಮಂದಿ ಉಮೇದ್ವಾರರಿಗಾಗಿ ಸುಮಾರು ೧೧ ಸಾವಿರ ಪವನಿನ ನಿಧಿ ಕೂಡಿಸಿದೆ. ಪ್ರತ್ಯಕ್ಷ ಚುನಾವಣೆಯು ಹಿರಿಯ ಲಿಬ್ಬರ ಪಾರ್ಟಿನ ಬಲವಿಲ್ಲದ ರಿಂದ ದಿಗ್ವಿಜಯವಾಗಲಿಲ್ಲವಾಗಿ ತೋರುತ್ತದೆ. ರಾಜಪಕ್ಷದ ಬಳಿ ದೊಡ್ಡ ಹಣವಿದೆ. ಮೆಕಡೋನಲ್ಡರಿಗೆ ಈ ಬೆಂಬಲ ಸಿಕ್ಕಿತು. ಮೇಲೆ ಅವರ ರಾಜ್ಯದೊರಣೆಯಿಂದ ಲಾಭ ಪಡೆದ ದೊಡ್ಡ ದೊಡ್ಡ ವರ್ತಕರು ಮೆಕಡೋನಲ್ಡರಿಗೆ ಮೋಟರು ಕೊಟ್ಟು ಕಳ್ಳಿದ್ದ. ಒಂದು ಕಂಪನಿಯವರು ೧೧೦ ಮೋಟರುಗಳನ್ನು ಕೊಟ್ಟಿದ್ದರು. ಇನ್ನೊಂದರ ೩೦ ವಿಮಾನಗಳ ಸಹಾಯ ಮಾಡಿದ್ದರು. ಮೆಕಡೋನಲ್ಡರು ವಿಮಾನದ ಮೂಲಕ ಹಾರಿಯಾಡಿಂದ ಹತ್ತು ವ ಪರಾರದ ಕಡೆ ಮಾತ ನಾಡಿ ದಿಗ್ವಿಜಯ ಪಡೆದಿದರು. ಮೆಕಡೋನಲ್ಡರ ಮಗಂದಿರರು ಆರಿಸಿಬಂದಿದ್ದಾರೆ. ಮೆಕಡೋನಲ್ಡರು ಇಲೆಕ್ಶನಿನ ಮುಂಚೆ ಒಂದು ಜಾಹೀರನಾಮೆ ಹೊರಡಿಸಿದ್ದರು. ಇಷ್ಟು ಅಸ್ಪಷ್ಟ ಜಾಹೀರನಾಮೆ ಹಿಂದೆ ಯಾರೂ ಹೊರಡಿಸಿದ್ದಿಲ್ಲವೆಂದು ಹೇಳುತ್ತಾರೆ. ಅವರಿಂದಲೇ ದೇಶಕ್ಕಿದೆಂದು ಜನರು ಗ್ರಹಿಸಿರು. ಪ್ರತ್ಯಕ್ಷ ಮೆಕಡೋನಲ್ಡರ ಮನಸ್ಸಿನಲ್ಲಿ ಏನಿದೆಂದು ಬ್ರಹ್ಮದೇವರಿಗೆ ಸಹ ಗೋಚರವಾಗುವದು ಕಠಿಣ. ಇಲೆಕ್ಶನ ಹಿಂದಿನಲ್ಲಿ ರೇಡಿಯೋ ದಿನ ದಿವಸ ಹೇಳಲಿಲ್ಲ. ೧೯೩೦ ಮೊದಲಿನವರು ೧೫೦ ಪವನು ರೇಡಿಯೋದಿಂದ ಸನ್ನಿಷ್ಟ ಮತ ಸಂಗ್ರಹಣೆಯಾಗಿದ್ದರೆ, ಈ ಬ್ಯ ಸರಕಾರ ಬರ ಬಾಗಿ. ಸುಮಾರು ೫೦ ಮಂದಿ ಉಮೇದ್ವಾರರು ರಾಜ್ಯ ಬಿಟ್ಟಿಯಿತು. ಈ ಇಲೆಕ್ಶನಿನಲ್ಲಿ ೧೨ ಮಂದಿ ಸ್ತ್ರೀಯರೂ ಸಭಾಸದರಾಗಿ ಆರಿಸಿ ಬಂದಿದ್ದಾರೆ. ಕಮ್ಯುನಿಸ್ಟ್ ಜನರಲ್ ಬಲ ಕಡಿಮೆ. ರೌಂಡ ಟೇಬಲ್ ಪರಿಷತ್ತಿನ ಪ್ರಸ್ತಾಪಿಸುವಲ್ಲಿ ಮಧ್ಯಸ್ಥರಾಗಿ ವರಿಷ್ಠರೂ ಮಾಡುವರಂತೆ. ಭಾರತ ಮಂತ್ರಿಗಳು ಈಗ ನವರೇ ಆ ಎಂದು ಸರ್ ಸೆಮ್ಯುಎಲ್ ಹೋರರವರು.

ಕಾಂಗ್ರೆಸ ಕಾರ್ಯಕಾರಿ ಮಂಡಳ.

ಕಾಂಗ್ರೆಸ ಕಾರ್ಯಕಾರಿ ಮಂಡಳವು ವಿಲ್ಲಿಯಮ್ ಗಡಾ॥ ಅನ್ಸಾರಿಯವರ 'ದಯಾರ್ ಗಂಜ' ಎಂಬ ಸಂಸ್ಥೆಯಲ್ಲಿ ಮಂಗಳವಾರ ಸರದಾರ ವಲ್ಲಭಭಾಯಿ ಪಟೇಲರವರ ಅಧ್ಯಕ್ಷತೆಯಲ್ಲಿ ಕೂಡಿತು. ಮಂಗಳವಾರ ೫ ತಾಸಿನ ತನಕ ಚರ್ಚೆಯಾಯಿತು. ಒಂದು ಪ್ರಾಂತಿಕ ಕಾಂಗ್ರೆಸ ಕಮಿಟಿಯು ವಿವಾದಗಳನ್ನು ರಾಜೀಯಿಂದ ನಿರ್ಣಯಿಸಿದ ಬಗ್ಗೆ ಶ್ರೀ ಅನಂತಶಯನ ಅಯ್ಯಂಗಾರರವರ ಅಹವಾಲು ಕಲ್ಪಿಸಿದ್ದರು. ರೌಂಡ ಟೇಬಲ್ ಪರಿಷತ್ತಿನ ವಿಷಯ ಕಾಂಗ್ರೆಸ ಕಾರ್ಯಕಾರಿ ಮಂಡಳದಲ್ಲಿ ಚರ್ಚೆಯಾಗಲಿಲ್ಲ. ಚರ್ಚೆಯಾಗು ವ ಹಾಗಿಲ್ಲ. ಸಂಯುಕ್ತ ಪ್ರಾಂತದ ಒಕ್ಕಲಿಗರ ಸ್ಥಿತಿ ಕೆಟ್ಟಿದೆ. ಪಂಡಿತ ಜವಾಹಿರಲಾಲರು ಒಕ್ಕಲಿಗರ ಸ್ಥಿತಿಯ ವರ್ಣನೆಯನ್ನು ಬಹು ಚಿತ್ತವೇಧಕವಾಗಿ ಮಾಡಿದರಂತೆ. ಅಲ್ಲಿ ಕರ ನಿರಾಕರಣೆಯನ್ನು ಕೈಕೊಳ್ಳಬೇಕಾಗಿ ಪ್ರತಿಪಾದಿಸಿದರಂತೆ. ಮಹಾತ್ಮರಿಗೆ ಜವಾಹಿರಲಾಲರು ತಂತಿ ಕೊಟ್ಟು ಎಲ್ಲ ಸಂಗತಿ ಅರಿಕೆ ಮಾಡಿಕೊಂಡಿದ್ದರೂ ಪರಿಸ್ಥಿತಿಗೆ ತಕ್ಕಂತೆ ಬೇಕಾದ ನಿರ್ಧಾರವನ್ನು ಕೈಕೊಳ್ಳಬಹುದೆಂದೂ, ರೌಂಡ ಟೇಬಲ್ ಪರಿಷತ್ತಿನ ಮೇಲೆ ಅಲಯಿದವರ ಬಾಗಿಯೂ, ಮಹಾತ್ಮರ ಇಡಿಯಾದ ತಂತಿ ಬಂದಿ ದಿಯಿತ್ತದೆ. ರಾಷ್ಟ್ರೀಯ ಸಭೆಯ ಪ್ರತಿನಿಧಿಗಳಾದ ಮಹಾತ್ಮರಿಗೂ, ರಾಷ್ಟ್ರೀಯ ಸಭೆಯ ಅಧ್ಯಕ್ಷರಾದ ಸರದಾರ ವಲ್ಲಭಭಾಯಿಯವರಿಗೂ ಮಾಡಿಗೆ ಪತ್ರವ್ಯವಹಾರ ನಡೆದಿದೆ. ಅವರುಗಳ ಮೇಲಿಂದ ರೌಂಡ ಟೇಬಲ್ ಪರಿಷತ್ತು ಈಗ ನಿರ್ಧಾರವಾಗಿ ಲಿಕ್ಕಿಲ್ಲವಾಗಿಯೂ, ಮಹಾತ್ಮರು ಒಲ್ಗ್ಯಯಿಂದ ಬರಲಿಕ್ಕಿಲ್ಲವಾಗಿಯೂ ಬಿಟ್ಟುಹೋಗಿದ ವಾರ್ತೆ. ಸಂಯುಕ್ತ ಪ್ರಾಂತದೊಳಗಿನ ಒಕ್ಕಲಿಗರ ಸ್ಥಿತಿಯು ಕರಿಣ ಪ್ರತ್ಯಕ್ಷ ನೋಡಲಾದದ್ದಕ್ಕಾಗಿ ಪಂಡಿತ ಜವಾಹಿರಲಾಲರಿಗೆ ಸಂಯುಕ್ತ ಪ್ರಾಂತಿಕ ಸರಕಾರದ ವರಿಷ್ಠ ಕಾರ್ಯದರ್ಶಿಗಳು ಕರೆದಿದ್ದರಾಗಿಯೂ, ಪಟೇಲ ಮೌಲಾನ ಅಜಾದರೂ, ಕರೀಮರೂ, ಕಮಿಶನರಿರೂ ಕೂಡಿ ಪಂಡಿತ ಜವಾಹಿರಲಾಲರೊಡನೆ ಮಾತನಾಡ ಬಂದಿದ್ದರಾಗಿಯೂ ಶ್ರೀ ತಾಶಿ ಕ್ಷೇತ್ರದ ಹಗಿನ 'ಟುಡೇ' ಯಾನೆ ಈ ದಿನದ ಪತ್ರಿಕೆಯ ವಾರ್ತೆ. ಕಾಂಗ್ರೆಸ ಕಾರ್ಯಕಾರಿ ಮಂಡಳಕ್ಕೆ ಪಂಡಿತ ಜವಾಹಿರಲಾಲರು ಹೊಂದು ಹೋಗಿ ದೇಶಾಧ್ಯರಿಂದ ಸಟ್ಲಮೆಂಟ ಆಗಿ ಮಾತಾಡಿಕೊಂಡದ್ದನ್ನ ಸಾಧಿಸುತ್ತಿರುವವರು ಮುಂದೆ ಎತ್ತು. ಕಾಂಗ್ರೆಸ ಕಾರ್ಯಕಾರಿ ಮಂಡಳವು ಎಲ್ಲ ಪರಿಸ್ಥಿತಿಯನ್ನು ಆಲೋಚಿಸಿತು. ಸಂಯುಕ್ತ ಪ್ರಾಂತಿಕ ಕಾಂಗ್ರೆಸ ಕಮಿಟಿಯು ಒಕ್ಕಲಿಗರ ಸ್ಥಿತಿಗತಿಯನ್ನು ಅರವಾಗಿ ವರ್ಣಿಸಬೇಕಾಗಿಯೂ ಗಾಂಧಿ—ಅರ್ವಿನ್ ಒಪ್ಪಂದದ ಮುರಿಯಂತೆ ಅತ್ಯರಕ್ಷಣೆಗಾಗಿ ಸತ್ಯಾಗ್ರಹ ಹೂಡುವ ಪ್ರಸಂಗವಿರುವದೆಂದು ವಿಚಾರಿಸಿ ರಾಷ್ಟ್ರೀಯ ಸಭೆಯ ಅಧ್ಯಕ್ಷರಾದ ಸರದಾರ ವಲ್ಲಭಭಾಯಿ ಪಟೇಲರವರ ಅಪ್ಪಣೆ ಪಡೆದು ಸತ್ಯಾಗ್ರಹವನ್ನು ಹೂಡಿ ಬಹುದಾಗಿ ಠರಾವಾಯಿತು. ಸರಕಾರವು ಪವನಿಸಿತು.

[ಕಾಲು ಮಾಲಿನ ಮೇಲೆ ಮುಂದರಿಸಿದೆ]

ಗಾಂಧಿ ವಾರ್ತೆ.

(ಕಾಲು ಮಾಲಿನಿಂದ ಮುಂದರಿಸಿದ್ದು)

ಪ್ರಯೋಜನ ಪಡೆದ ತಿಳಕೊಳ್ಳಬಲ್ಲ ತಿಳಕೊಂಡಿದ್ದರೆ. ಕಲಕಾದ ಮೇಲೆ ಅವರಿಗೆ ಅವನಂಬಿಗೆಯ ದೆ. ಅದನ್ನು ಅವನಂಬಿಗೆ ಮಾಡುವ ಕಾರಣವಿಲ್ಲವಾಗಿ ನಾನು ತಿಳಿದು ಕೊಂಡೆ ಇಂಗ್ಲಿಷರು ಹಿಂದುಸ್ಥಾನದೊಳಗಿಂದ ಇಂಗ್ಲಿಷ್ ದೊರೆಗಳ ಹಿಂದುಸ್ಥಾನದೊಳಗೆ ಪಾರತಂತ್ರ್ಯದ ಬಂಧನದಿಂದ ಮುಕ್ತರಾಗುವದು, ಎಂಬ ಮಾತು ನಿಜ ದಾರಿಯದ ಕೇವಲ ಆಜ್ಞೆ ನವಿತು. ಇಂಥ ಪರಿಣತರನ್ನು ಬರಿ ದಿರಲಿಕ್ಕೆ ರಾಜ್ಯ ಕಟ್ಟಲೆಯಲ್ಲಿ ಬೇಕಾದ ಯೋಜನೆ ಕೈಕೊಳ್ಳಬಹುದು ಹೀಗೆಂದು ಉದ್ಗರಿಸಿದ್ದಾರೆ.

'ಗುಡ್ ವಿಲ್' ಪತ್ರಿಕೆಯಲ್ಲಿ ಪವಿತ್ರತ್ವದಿಂದಾದ ವಾಕ್ಯವನ್ನು ವರ್ಣಿಸುತ್ತ ಮಹಾತ್ಮರ ಉದಾಹರಣೆ ಕೊಟ್ಟಿರುತ್ತದೆ. ಮನುಷ್ಯನ ಪವಿತ್ರವೆಂದರೆ ಪ್ರಕೃತಿ ಮಾರ್ಗದಲ್ಲಿ ನಡೆಯುವದು ಸುಳ್ಳು. ಮಹಾತ್ಮರು ತಿರ ಸಾಮಾನ್ಯ ಆಹಾರ ತೆಗೆದುಕೊಳ್ಳುತ್ತಾರೆ. ಅವರ ಪ್ರಕೃತಿ ನಿಷ್ಟಗಿದ ಅನೇಕ ೧೦೦ ವರ್ಷ ಬದುಕುವರು ನಂಬಿಗೆಯಾಗಿ ಬಾಳ್ವೆ ಮಾಡುವ ಬಗೆಯನ್ನು ಮಹಾತ್ಮರೇ ವಿವರಿಸಿದ್ದಾರೆ. ನಿರ್ಮಲ ಅಂತಃಕರಣ, ನಿಷ್ಕಪಟ ವೃತ್ತಿ, ಈಶಪ್ರಾರ್ಥನೆ, ಮಾನಸಿಕ ಸನ್ನಸ್ತ್ವಭಾವ, ಸಂತೋಷ ಪ್ರವೃತ್ತಿ, ಸಹನಶೀಲತೆ ಇವು ಮೇಲಿನ ಮುಖ್ಯ ಗುಣಗಳು. ಬುದ್ಧಿ ಸೇವಿಸುವ ಗರು, ಬೀಡಿ ಸೇದಲಾಗದು, ಮಸಾಲೆ ಪದಾರ್ಥಗಳಿಗೆ ಮುಟ್ಟಲಾಗದು ಇವೇ ತಮ್ಮ ಆರೋಗ್ಯದ ನಿಯಮವೆಂದು ಮಹಾತ್ಮರು ಸಾರಿದ್ದಾರೆ. ಮಹಾತ್ಮರು ೧೮ ತಾಸು ಕೆಲಸ ಮಾಡುತ್ತಾರೆ. 'ಯಂಗ ಇಂಡಿಯಾ' ಪತ್ರಿಕೆಗೆ ಬರೆಯುತ್ತಾರೆ, ಕಾಗಾಬಂದವರೊಡನೆ ಮಾತನಾಡುತ್ತಾರೆ. ಅನೇಕ ಪತ್ರಗಳನ್ನು ಬರೆಯುತ್ತಾರೆ, ನೂಲುವದಂತೆ ನೂಲುತ್ತಾರೆ, ಪ್ರಾರ್ಥನೆ ಮಾಡುತ್ತಾರೆ, ಧ್ಯಾನ ಮಾಡುತ್ತಾರೆ. ಇವು ಅವರ ಮುಖ್ಯ ಗುಣಗಳು. ನಿತ್ಯದಲ್ಲಿ ಸಂಗ್ರಹಿಸಿ ನಿರ್ಧಾರ ಮಾಡಿದ್ದಾರೆ ಹೀಗೆ 'ಗುಡ್ ವಿಲ್' ಪತ್ರಿಕೆಯು ಅವರ ಪವಿತ್ರತ್ವಾಚರಣೆಯಿಂದ ಮನುಷ್ಯನ ಉದ್ಧಾರವಾಗುತ್ತದಾಗಿ ಅಭಿಪ್ರಾಯಪಟ್ಟು, ಮನುಷ್ಯರು ತ್ಯಾಗ ಮಾಡಲು ಬೋಧಿಸಿದ್ದಾರೆ.

ಕಾನಡಾವೃತ್ತ.

ಪ್ರಜಾಪತಿ ಸಂ॥ ಕಾರ್ತಿಕ ಶು॥ ೭ ಸೋಮವಾರ

ಚೀನ-ಜಪಾನ ಯುದ್ಧ?

ರಾಷ್ಟ್ರಸಂಘದ [illegible] ನಿರ್ಧಾರದಂತೆ ಚೀನ ಜಪಾನ ದೇಶಗಳ ರಾಜಿ [illegible] ರಾಷ್ಟ್ರಸಂಘದ ತೀರ್ಮಾನದಂತೆ ಜಪಾನ ಸರಕಾರದ [illegible] ಗಿಂದ ಮಂಚೂರಿಯದಲ್ಲಿ ತನ್ನ ಸೈನ್ಯವನ್ನು [illegible] ತರಬೇಕಾದದ್ದು [illegible] ಜಪಾನ ಸರಕಾರದ [illegible] ಜಪಾನ ಸರಕಾರವು ರಾಷ್ಟ್ರಸಂಘಕ್ಕೆ ರಾಜೀನಾಮೆ ಕೊಟ್ಟು ಹೊರಬೀಳಲಿಕ್ಕೆ ಸಿದ್ಧವಾಗಿದೆ. ರಾಷ್ಟ್ರಸಂಘದ ನಿರ್ಣಯವನ್ನು [illegible] ಮಂಚೂರಿಯಾ ದೇಶದ [illegible] ಪ್ರಯತ್ನವನ್ನು ಬಲಿ ಕೊಡಲು ತಯಾರಿಲ್ಲ [illegible] ಈ ಪ್ರಕಾರ ನಡೆಯುತ್ತಿರುವದರಿಂದ ಜಪಾನಿನ ಲಂಚೋಗ [illegible] ಚೀನಿಯರು ಈ ಮಾತಿಗೆ ತಲೆದೂಗುವದಿಲ್ಲ. ಮಂಚೂರಿಯಾ ದೇಶವು ಚೀನಿಯರದು. ಅಲ್ಲಿಯ ಬಹು ಜನರು ಜನರಿಗೆ ಸಂರಕ್ಷಣೆ [illegible] ಮಾಡಲು [illegible] ಸ್ವತಂತ್ರ ರಾಜ್ಯವನ್ನು ಆಪಾದಿಸುವದಕ್ಕಾಗಿ ಜಪಾನರು ಕುಹಕ ಮಾಡುತ್ತಿದೆ. ಇದಕ್ಕೆ ನಾವು ಒಪ್ಪಲಾರೆವು, ಜಪಾನ ಸರಕಾರದ ಒಪ್ಪಂದದಂತೆ ತಮ್ಮ ಉಸ್ತುವಾರಿಯ ಪ್ರದೇಶದಲ್ಲಿ ಮಾತ್ರ ಸೈನ್ಯವನ್ನಿಡಬೇಕಲ್ಲದೆ ಇಡೀ ಮಂಚೂರಿಯಾ ದೇಶವನ್ನು ಸಂಪೂರ್ಣವಾಗಿ ಖಾಲಿ ಮಾಡಬೇಕೆಂದು ಚೀನಿಯರ [illegible] ರಾಷ್ಟ್ರಸಂಘಕ್ಕೆ ಚೀನಿಯರ [illegible] ಇದರಂತೆಯೇ ಜಪಾನ ಸರಕಾರವು ನಡೆಯಬೇಕೆಂದು ರಾಷ್ಟ್ರಸಂಘದ ಠರಾವು [illegible] ರಾಷ್ಟ್ರಸಂಘವು ಬೇರೆ ಬೇರೆ ರಾಷ್ಟ್ರಗಳೊಡನೆ ಸಹಕಾರ ಮಾಡಿ ಜಪಾನ ಸರಕಾರಕ್ಕೆ ಹಣ್ಣಿಗೆ ತರುವದಾಗಿ ಧ್ವನಿಸಿದೆ. ಚೀನ ದೇಶದಲ್ಲಿ [illegible] ಬಹಳ ವ್ಯಾಪಾರವಿದ್ದಲ್ಲಿ ಬ್ರಿಟಿಶ ಸರಕಾರಕ್ಕೆ ಗಿರಾಕಿ ಹೆಚ್ಚುತ್ತಿದೆ, ಇದಕ್ಕಾಗಿ ಬ್ರಿಟಿಶರು ಚೀನಿಯರ ಪಕ್ಷವಹಿಸಿ ರಾಷ್ಟ್ರಸಂಘಕ್ಕೆ ದುಬ್ಬೋರೆ [illegible] ಜಪಾನ ಸರಕಾರದ ಅಭಿಪ್ರಾಯವಾಗಿದೆ. ಆತ್ಮರಕ್ಷಣೆಗಾಗಿ, (ಚೀನಿಯರ ಭಾಷೆಯಲ್ಲಿ [illegible] ಚೀನಿಯರ ಸುಲಿಗೆಗಾಗಿ) ಜಪಾನ ಪಕ್ಷವು ಬೇಕಾದವರೊಡನೆ ಹೋರಾಡಲು ಸಿದ್ಧವಿರುವದಾಗಿಯೂ ಪ್ರಕಟವಾಗಿದೆ. ಈ ಪ್ರಕಾರ ಸುದ್ದಿಗಳನ್ನು ಕೇಳಿದರೆ, ಯುದ್ಧವಾಗದಿರಲಿಕ್ಕಿಲ್ಲ ವೆಂದು ತೋರುತ್ತದೆ. ಇಂಥ ಸಮಯ ಮಂಚೂರಿಯಾ ದೇಶದ ಚೊಂಚ ಇತಿಹಾಸವನ್ನು ತಿಳಿಕೊಳ್ಳುವದುಚಿತ.

ಮುಂಬಯಿ ಇಲಾಖೆಯೊಳಗೆ ಒಬ್ಬರಿಗಾಗಿ ೧ ಕೋಟಿ ರೂಪಾಯಿ ಸಾಲವಿದೆ ಅದಕ್ಕೆ ವರ್ಷಕ್ಕೆ ೩ ೮ ಕೋಟಿ ರೂಪಾಯಿ ಬಡ್ಡಿ ಆಗುತ್ತದೆ ಈ ಮುಂಬಯಿ ಇಲಾಖೆ ವರ್ಷ ೧ ಕೋಟಿ ರೂಪಾಯಿ ಹುಟ್ಟುವಳಿ ೫೦ ಕೋಟಿ ಅದರೊಳಗೆ ಖರ್ಚು ೪೭ ಕೋಟಿ ತೀರ್ವೆ ವಸೂಲಿ ಯಾಗದೆ ಬಾಕಿ ೩ ಕೋಟಿಯಿಂದ ಬಿದ್ದಿ

ಕೊಡಬೇಕು ಹೀಗೆ ಹೇಗೆ? ಉದ್ದೇಶಿಸಿರುವ ಹೀಗೆ ಹೇಗೆ?

* *

ಅಖಿಲ ಭಾರತೀಯ ಚರಖಾ ಸಂಘದ ಕರ್ನಾಟಕ ಶಾಖೆಯವರು ಖಾದಿಯ ದರವನ್ನು ಇಳಿಸಿದ್ದಾರೆ ಗಜಕ್ಕೆ ೧೧ ಆಣೆ ಇದ್ದದ್ದು ಈ ತಿಂಗಳ ಕಡೆಯವರೆಗೆ ೧೩ ಆಣೆ ಇದ್ದದ್ದು ೧೦। ಆಣೆಗೆ ಡಿಸೆಂಬರ ತಿಂಗಳಲ್ಲಿ ಮಾತ್ರ ಈ ಸವಲತ್ತು ಸಿಗುವದು

* *

ಸತ್ಯಾಗ್ರಹ ಯುದ್ಧದಲ್ಲಿ ಭೂಮಿ ಕಳಕೊಂಡವರನ್ನು ಕೆಲವು ಸ್ವಯಂಸೇವಕರು ಕರೆದ ಹೀಗೆ ಇದೇ ಬಾಬ್ಬೂ ಪೂರ ಗ್ರಾಮದವರ ಮೇಲೆ ಪ್ರಾಂತಿಕ ಸರಕಾರವು ಅನ್ಯಾಯ ದಿಂದ ದಂಡ ಹಾಕಿತ್ತು ಇದನ್ನು ಬಾಬ್ಬೂಪೂರದವರು ಕೊಡಲೊಪ್ಪಲಿಲ್ಲ ಆದರಿಂದ ಅವರ ಮನೆಯಲ್ಲಿ ಜಪ್ತಿ ಗಳಾಗುತ್ತಿವೆ ಬಾಬ್ಬೂಪೂರದೊಳಗಿನ ಕೆಲ ಜೋಡಿಗ ಳಿಗೆ ಭೂಮಿ ಕೊಡುತ್ತೇವೆ ಎಂದು ನಂಬಿಸಿ ಅವರ ಕೈಯಿಂದ ದಂಡವನ್ನು ವಸೂಲ ಮಾಡಿದರು ಮಾತ್ರ ನಂತರ ಅವರಿಗೆ ಭೂಮಿ ದೊರೆಯಲಿಲ್ಲ ಕೆಲವು ಭೂಮಿಗಳು ಸ್ವಾಧೀನ ಕಾಲದಲ್ಲಿ ಬೇರೆ ವರ್ಗದಿದ್ದಂತೆ ಈಗ ಆ ಭೂಮಿಗಳು ಅವರವಾಗಿಲ್ಲ ಆದರೂ ಈ ಭೂಮಿಗಳ ಮೇಲೆ ಕೆಲವು ನ್ಯಾಯ ನಡೆಸಿದರು. ಇಂಗ ೧ ನೆಯ ಬೆಳ ಕೊಯ್ದರು ಹೀಗೆ ಬರೋಬರಿ ಸರಿ ಪೋಲೀಸರ ಜವಾಬು ಹೇಳಿದಾಗ್ಯೂ ಆ ಕಡೆ ಅವರು ಕಿವಿಗೊಡಲಿಲ್ಲ ಬೇರೆ ಕಡೆ ಒಂದೂ ಕಿತ್ತು ಹಾಕಿಸಿಯಿತ್ತು ಅದನ್ನು ಒಮ್ಮೆ ಪೋಲೀಸರು ಕಸಕೊಂಡರು ಹಾಗೆಯೇ ತಿರುಗಿ ಕೊಟ್ಟರು ಪ್ರಾಂತಿಕ ನಡೆಯಿತು ಆ ದಿನಗಳ ಕನಕ ೧೦ ೨೦ ಅಂತೆ ಡಿಸ್ಟ್ರಿಕ್ಟ್ ಮೆಜಿಸ್ಟ್ರೇಟರಿಗೆ ಹೇಳಿದ್ದು ಈಗ ೩೦ ಜನರಿಗೆ ಸರೆ ಆಗಿದೆ ಅವರ ಕಡೆಯಿಂದ ೨೦೦ ೩೦೦ ರೂಪಾಯಿ ದಂಡ ತೆಗೆದು ಬಿಡುಗಡೆ

ಮಾಡಿದ್ದಾರೆ ಬಾಬ್ಬೂಪೂರದಲ್ಲಿ ಬ್ರಿಟಿಶ ರಾಜ್ಯವಿದೇಯೆಂದು ಅವರು ಕಂಡ ಕಂಡಲ್ಲಿ ಹೇಳ್ಳುತ್ತಿದ್ದಾರೆ

* *

ಕರ್ನಾಟಕ ಪ್ರಾಂತವು ಮುಂಬಯಿ-ಮದ್ರಾಸ ಪ್ರಾಂ ತಗಳಲ್ಲಿ ಹಂಚಿಹೋಗಿದೆ ಇದರಿಂದ ಕನ್ನಡ ನಾಡು-ನುಡಿ ಗೆ ಅಪರಿಮಿತವಾದ ಹಾನಿಯಾಗಿದೆ ಸಂಸ್ಕೃತಿ ಸಂಪತ್ತು ಗಳು ಸುಧಾರಿಸುವದಿಲ್ಲ ಆದರಿಂದ ಕರ್ನಾಟಕವನ್ನು ಪ್ರತ್ಯೇಕ ಪ್ರಾಂತವಾಗಿ ನಿರ್ಮಿಸಬೇಕೆಂದು ಮದ್ರಾಸ ಇಲಾಖೆಯಿಂದ ರೌಂಡ ಟೇಬಲ್ ಪರಿಷತ್ತಿಗೆ ಹೋದ ಶ್ರೀ ಬೆನೆಗಲ್ಲ ರಾಮರಾಯರವರು ರೌಂಡ ಟೇಬಲ್ ಪರಿಷತ್ತಿನ ಮುಂದೆ ಸೂಚನೆ ಮಾಡಿದ್ದಾರೆ

* *

ತುಮಕೂರಿನಲ್ಲಿ ಮದ್ಯದಂಗಡಿಗಳ ಮುಂದೆ ಪಿಕೆ ಟಿಂಗ ಮಾಡಬಾರದಾಗಿ ಹೊರಡಿಸಿದ ಪ್ರತಿಬಂಧಕ ಹುಕು ಮನ್ನು ಮುರಿದು ದಿನಾ ಸರ್ಕಾರದಲ್ಲಿ ನಡೆದಿದ ಪೋಲೀ ಸರು ಲಾಠಿಪ್ರಹಾರ ಮಾಡಿದಾಗ್ಯೂ ಜನರು ಹೆದರಲಿಲ್ಲ ಕಾಂಗ್ರೆಸ ಕಮಿಟಿಯ ಅಧ್ಯಕ್ಷರಾಗಿದ್ದ ಶ್ರೀ ಅಮ ಕೂರ ಸುಬ್ರಹ್ಮಣ್ಯಂ ಎಂಬುವರು ಕೃಷ್ಣಸ್ವಾಮಿ ಅಯ್ಯರ ನಂಜಪ್ಪರವ ಮೇಲೆ ಖಟ್ಲೆಗಳಾಗಿ ೨೦೦ ೧೦೦ ೫೦ ರೂಪಾಯಿಗಳ ದಂಡ ಇಲ್ಲವೆ ೨ ೧॥-೧ ತಿಂಗಳ ಸಖ್ತ ಶಿಕ್ಷೆ ವಿಧಿಸಲ್ಪಟ್ಟಿತು ಆದಾಗ್ಯೂ ಪಿಕೆಟಿಂಗು ಎಂದಿನ ನಡೆದಿದೆ

* *

ಪ್ರಯಾಗದಲ್ಲಿ ರೈತರ ಸಲುವಾಗಿ ಕರನಿರಾಕರಣೆ ಮಾಡಬೇಕೆಂಬ ಠರಾವಾಯಿತು ಕಾಂಗ್ರೆಸ ಕಮಿಟಿ ಯವರು ಸರಕಾರದೊಡನೆ ನಡೆದ ಪತ್ರವ್ಯವಹಾರದ ಕೊನೆಯು ನಿರ್ಣಯ ವಾಗುವ ತನಕ ಕರ ಕೊಡಬಾರ ದಾಗಿ ಆಜ್ಞಾಪತ್ರವನ್ನು ಹೊರಡಿಸಿದ್ದಾರೆ

ಮನೋಹರವಾದ ಕೂದಲನ್ನು ಚೆನ್ನಾಗಿ ಸಾಕಬೇಕು.

ಅವರೆ ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ದುರ್ಲಕ್ಷ ಮಾಡುತ್ತಾರೆ. ಕೂದಲು ಮನೋಹರವಾಗಿರಬೇಕಾದರೆ, ನೀವು ದಿನಾ ಆ ಕಡೆ ಲಕ್ಷಕೊಡಬೇಕು ಕೂದಲುಗಳನ್ನು ದುರ್ಲಕ್ಷ ಮಾಡಿದರೆ, ಅವು ಉದುರುವವು ಮತ್ತು ಉದುರುವವು ನೀವು ಅವಕ್ಕೆ ಚಲೋ 'ಕೂದಲನ್ನು' ಕೊಡಬೇಕ, ಶ್ರೇಷ್ಠವಾದ ಕೂದಲನ್ನ್ಯಾವದು?

ಕಾಮಿನಿಯಾ ಆಯಿಲ್. (ರಜಿಸ್ಟರ್ಡ)

ದಿನಾ ಮುಂಜಾನೆ ಅರ್ಧ ಚಮಚೆ ಎಣ್ಣೆಯನ್ನು ಚೆನ್ನಾಗಿ ತಿಕ್ಕಬೇಕು ಹಿಮ್ಮೆ ತಿಕ್ಕುವ ಕೂಡಲೆ ತಲೆಯ ಹೊಟ್ಟು ಹೋಗುತ್ತದೆ, ಕೇಶರಂಧ್ರಗಳು ತೆರೆದು ಎಣ್ಣೆಯಿಂದ ತಲೆಗೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ ಆಹಾರ ಸಿಗುತದೆ ಹೀಗೆ ಸಿಕ್ಕಿದ ಚೈತನ್ಯವು ಕೂದಲುಗಳಿಗೆ ಮುಟ್ಟಿ ನಿಮ್ಮ ಕೂದಲು ಹಸನಾಗಿ ಬೆಳೆ ಯುತ್ತವೆ

ಎಲ್ಲಾ ಚಲೋ ಅಂಗಡಿಕಾರರಲ್ಲಿ

ಈ ತೈಲವು ದೊರೆಯುತ್ತದೆ

ಅಥವಾ

ನಮಗೇ ಬರೆದು ತರಿಸಿಕೊಳ್ಳಿರಿ

ಬಾಟ್ಲಿ ೧ಕ್ಕೆ ರೂ		೧—೦—೦
ಅಂಚೆವೆಚ್ಚ	,,	೦—೬—೦
೩ ಬಾಟಲಿಗೆ	,,	೨—೧೦—೦
ಅಂಚೆವೆಚ್ಚ	,,	೦—೧೨—೦

ನಿಮ್ಮ ಅಂಗಡಿಕಾರರಿಂದ

ತರಿಸಿಕೊಳ್ಳಿರಿ

———:o:———

ಔಂಸಿಗೆ ರೂ		೨—೮—೦
ಔಂಸಿಗೆ	"	೧—೪—೦
ಡ್ರಾಮಿಗೆ	,,	೦—೧೨—೦
ಅಂಚೆವೆಚ್ಚ	,,	೦—೬—೦

ಒಟ್ಟೋ-ದಿಲ್ ಬಹಾರ

ಹೇಳಲಿಕ್ಕೆ ಮರೆಯಬೇಡಿರಿ

"ತೋಟವೆಲ್ಲ ಒಂದೇ ಬಾಟ್ಲಿಯಲ್ಲಿ"

ಒಂದು ಸುಗಂಧದ್ರವ್ಯದಲ್ಲಿ ಇದನ್ನು ಸಂಪಾದಿಸಬಹುದು ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು—ಅದ್ಯಾವದು?

ಒಟ್ಟೋ-ದಿಲ್ ಬಹಾರ್! (ರಜಿಸ್ಟರ್ಡ)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ ಆದರೆ ಅವುಗಳಿಗೆ ಹೂವಿನ ಸಹಜ ಪರಿಮಳ ವಿಲ್ಲ, ಅವುಗಳಲ್ಲಿ ಆಲ್ಕೊಹೋಲ ಯಾನೆ ಮದ್ಯವು ಸೇರಿರುತದೆ ಇದರಿಂದ ಹೂವಿನ ಸಹಜ ಪರಿಮಳವು ಕೆಡುವದು ಒಟ್ಟೋದಿಲ್ ಬಹಾರದಿಂದ ಶಾಶ್ವತವಾದ ಹೂವಿನ ಸುಗಂಧವನ್ನು ಅನುಭವಿಸಬಹುದು ಇದಕ್ಕೆ ಮದ್ಯದ ಸ್ಪರ್ಶವಿಲ್ಲ.

THE ANGLO INDIAN DRUG & CHEMICAL CO.

POST BOX 2082 **BOMBAY No 2.**

ಗೌಡಸಾರಸ್ವತ ಬ್ರಾಹ್ಮಣ ಸ್ಕಾಲರಶಿಪ್ ಲೀಗ, ಮುಂಬಯಿ.

[ಬಿಟ್ಟ ಮೆಯುರಿಂದ]

ಸ್ಕಾಲರಶಿಪ್ ಲೀಗಿನ ವಾರ್ಷಿಕ ಸಾಧಾರಣ ಸಭೆಯು ಕಳೆದ ೩೦ ನೇ ತಾರೀಖಿನ ದಿವಸದಂದು, ಮುಂಬಯಿ ಬಿಲ್ಡಿಂಗದಲ್ಲಿ ನೆರವೇರಿತು. ಶ್ರೀ ರಾಘವೇಂದ್ರರಾವ ಭಟ್ಕರು ಅಧ್ಯಕ್ಷರಿದ್ದರು. ಹೋದ ೨ ವರ್ಷಗಳ ಬಗ್ಗೆ ವಾರ್ಷಿಕ ಸಾಧಾರಣ ಸಭೆಗಳು ಕೂಡಿರಲಿಲ್ಲವಾದ್ದರಿಂದ, ಸಭೆಯ ಸದಸ್ಯರು ನಾಡಿನ ೧೯೨೨ ರಿಂದ ೧೯೨೪ ರ ವರೆಗಿನ ೨ ವರ್ಷಗಳ ರಿಪೋರ್ಟ ಓದಿ ಸಮ್ಮತಿಸಲಾಯಿತು. ಈ ದಿವಸದ ವರೆಗಿನ ಲೆಕ್ಕಗಳ ಬಗ್ಗೆ ಬಂದಿರುವ ಪತ್ರಿಕೆಯನ್ನು ರಾ| ಶ್ರೀಧರ ಭಟ್ಕರು ಸಭೆಗೆ ಓದಿ ತೋರಿಸಿದರು. ಆ ಲೆಕ್ಕದ ಪತ್ರಿಕೆಯಲ್ಲಿನ ಎಲ್ಲ ಜಮಾ-ಖರ್ಚು ರಕಮುಗಳ ವಿವರಣೆ ಹೇಳಿ ತಿಳಿಸಿದರು. ಕಳೆದ ವರ್ಷಕ್ಕಿಂತ ಈ ವರ್ಷ ಸ್ವಲ್ಪ ಶಿಲ್ಕು ಸಂಗ್ರಹಿಸಿದ ವಿಚಾರದಿಂದ ಆ ದಾಖಲೆ ಸಭೆಗೆ ತೋರಿಸಲಾಗಿತ್ತು. ಅವರ ಮುಂದಿನ ವರ್ಷದ ಲೆಕ್ಕ ಮತ್ತು ಸ್ಕಾಲರಶಿಪ್ ಬಗ್ಗೆ ಉಪಯೋಗವಾಗುವ ಹಣದ ಬಗ್ಗೆ ಚರ್ಚೆಯಾಗಿ ಮಂಜೂರ ಮಾಡಲಾಗಿದೆ.

ಸಭಾಪತಿಗಳು ಮುಂದಿನ ವರ್ಷಕ್ಕೆ ಶ್ರೀ| ಕಸ್ತೂರಿ ನಾಗೇಶಪ್ಪನವರು ಮಂಗಳೂರ ಲೀಗಿನ ಅಧ್ಯಕ್ಷರಾಗಬೇಕಾಗಿ ಸೂಚನೆ ತಂದರು. ಸ್ವರು ಮುಂಬಯಿಯಲ್ಲಿ ಮಾಡಿದ ಸಾರ್ವಜನಿಕ ಕೆಲಸಗಳನ್ನು ರಾ ಗುಡಾರರು ವರ್ಣಿಸಿ ಲೀಗಿನ ಸ್ಥಿತಿಗೆ ಅವಶ್ಯಕ. ಅವರೇ ಯೋಗ್ಯರಿದ್ದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಲೀಗ ಸಂಸ್ಥೆಯು ಹೆಸರುಗೊಳ್ಳುವುದಕ್ಕೆ, ಹಾಗು ಅದರ ಸ್ಥಿತಿ ಸುಧಾರಿಸಲಿಕ್ಕೆ ಅವರೇ ಅಧ್ಯಕ್ಷರಾಗಬೇಕಾಗಿ ಪ್ರಸ್ತಾಪಿಸಿದರು. ಶ್ರೀನ ಬಗ್ಗೆ ರಾ| ಶ್ರೀಧರ ಭಟ್ಕರು ಅನುಮೋದಿಸಿದರು. ಅವರು ಅಧ್ಯಕ್ಷಪದವನ್ನು ಸ್ವೀಕರಿಸಬೇಕೆಂದು ಪ್ರಾರ್ಥನೆ ಮಾಡಿದ ಬಳಿಕ, ಠರಾವ ಮಂಜೂರಾಯಿತು.

ಮುಂದಿನ ವರ್ಷದ ಕಾರ್ಯಕಾರಿ ಮಂಡಳಿಯ ಹೆಸರುಗಳು ಮಂಜೂರಾದವು.

ಅಧ್ಯಕ್ಷರು —

೧ ಶ್ರೀ| ಕಸ್ತೂರಿ ನಾಗೇಶಪ್ಪ, ಮಂಗಳೂರ,

೨ ,, ಎಸ್. ಆರ್. ಭಟ್ಟ, ಬಿ. ಎ. ಎಲ್ ಎಲ್. ಬಿ.

೩ ,, ಬಿ. ಪಿ. ಪ್ರಭು ಬಿ. ಎ. ಎಲ್ ಎಲ್. ಬಿ. ಶಿರಾಲಿ,

೪ ,, ವ್ಹಿ. ಎಸ್. ಶಾನಭಾಗ, ಟ. ಕೆ. ಪ್ವಿ. ಭಟ್ಕಳ

೫ ,, ಎಸ್. ಎಲ್. ಕಾಮತ, ೭ ,, ವ್ಹಿ. ಪಿ. ಶ್ಯಾನಭಾಗ

ಮುಂದಿನ ವರ್ಷ ಕಾರ್ಯಕಾರಿ ಕಮಿಟಿ ಕಾರ್ಯಕಾರಿ ಸಮಿತಿಗಳು ಹಾಗು ಸ್ಥಾನಿಕ ಪ್ರತಿನಿಧಿಗಳು ಚುನಾಯಿಸಲ್ಪಟ್ಟರು.

ಖಜಾನಿಕರು —

೧ ಶ್ರೀ| ಕೃಷ್ಣರಾವ ರಾಮಚಂದ್ರ ಹೆಬ್ಬಾರ, ಬಿ. ಎ., ಎಲ್ ಎಲ್. ಬಿ.,

೨ ,, ಜನಾರ್ದನ ಪಿ. ಶೆಣೈ (ವಕೀಲ)

ಚಿಟಣೀಸರು —

೧ ಶ್ರೀ| ಶ್ರೀಧರ ಪ್ವಿ. ಭಟ್ಟ ಬಿ. ಎ.,

೨ ,, ಶ್ರೀನಿವಾಸ ಗಣೇಶ ಪೈ, ಹೆಡ್ ಮಾಸ್ತರ ಕನ್ನಡ ಶಾಲಾ

೩ ,, ರಾಮಚಂದ್ರ ವಿ. ಶೆಣೈ

ಕಾರ್ಯ —

೧ ಶ್ರೀ| ಕೃಷ್ಣ ಪದ್ಮನಾಭ ಪ್ರಭು, ಬಿ. ಎ., ಎಲ್ ಎಲ್. ಬಿ.

೨ ,, ಪುರುಷೋತ್ತಮ ಎಲ್. ಶಾನಭಾಗ (ವಕೀಲ) ಹೊನ್ನಾವರ —

೧ ಶ್ರೀ| ವಾಸುದೇವ ಪಿ. ಶ್ಯಾನಭಾಗ,

೨ ,, ರಾಘವೇಂದ್ರ ವಿ. ಪ್ರಭು,

೩ ,, ಶಂಕರ ಪ್ವಿ. ಕೇಲಂಗ

ಲೆಕ್ಕ-ತಪಾಸಕರು —

ಶ್ರೀ| ಪಿಠಾಂಬರ ವಿ. ಕಾಮತ

,, ದಿವಾಕರ ಎಸ್. ಗ್ರಾಮಕೊಂಡೆ

ಲೀಗದ ಹಳೇ ಕಾಗದ-ಪತ್ರಗಳಲ್ಲಿ ಪ್ರತ್ಯಕ್ಷ ಉಪಯೋಗವಿಲ್ಲದೆ ಇರುವ ರೆಕಾರ್ಡನ್ನು ರದ್ದಿ ಮಾಡುವ ಕರತು ಒಂದು ಕಮಿಟಿ ನೇಮಿಸಲಾಗಿದೆ.

ಪಾಠಶಾಲೆಯಂತೆ ಸಂಸ್ಥೆಗಳು ಸಹಾಯ ಮಾಡಿದ ಬಗ್ಗೆ ಮತ್ತು ವ್ಯಕ್ತಿಗಳು ಲೀಗಿನ ಸುದ್ದಿ ಪ್ರಕಟಿಸಿದ ಕುರಿತು ಸಭೆಯ ಆಭಾರ ಮನ್ನಿಸಲಾಯಿತು.

ಹಳೇ ಕಾರ್ಯಕಾರಿ ಮಂಡಳಿಯಿಂದ ನಿವೃತ್ತರಾದ ಶ್ರೀ| ರಾಘವೇಂದ್ರರಾವ ಭಟ್ಕ ಹಾಗೂ ಮಾರ್ಜ ಗಾಯಕವಾಡ ಮತ್ತು ಶ್ರೀಧರ ಶ್ಯಾನಭಾಗ ಇವರ ಪರಿಶ್ರಮದ ಕುರಿತು ಸಭೆಯು ಪ್ರಶಂಸಿಸಿತು. ಮತ್ತು ಅವರ ಬಗ್ಗೆ ಶ್ರೀ| ಗುಡಾರ, ಪ್ವಿ. ಜಿ. ಪ್ರಭು, ಕೆ. ಎಸ್. ಬಿ. ಎಲ್. ಗಾಯತೊಂಡೆ ಮುಂತಾದವರು ನಾಲ್ಕು ಶಬ್ದಗಳನ್ನು ಮಾತಾಡಿ, ಲೀಗ ಸಂಸ್ಥೆಯು ಹೀಗೆ ಅವರ ಕೃತಜ್ಞತೆಗೆ ಪಾತ್ರವಾಗಿದೆಂಬುದು ಹೇಳಿ ಕೊಟ್ಟರು. ಶ್ರೀ| ಭಟ್ಟ ಹಾಗೂ ಗ್ರಾಮಕೊಂಡೆಯವರು ಲೀಗಿನ ಸ್ಥಾಪನೆಯ ಮೊದಲಿಗರಿಂದ ಮುಂಬಯಿಯಲ್ಲಿ ಸಹಕಾರಿಗಳಾಗಿ ತಮ್ಮ ಯತ್ನಗಳನ್ನು ಸಲ್ಲಿಸುವ ಕಡೆಗೆ ಕೆಲಸ ಮತ್ತು ಸರ್ಕಾರದ ವರೆಗೆ ಹಣ ಸಂಗ್ರಹ ಮಾಡಿ ಅದನ್ನು ಪ್ರತ್ಯೇಕಿಸಿದರು. ಮುಂದೆಯೂ ಸಹ ಅಂತಹ ಮದತೆ ಕೊಡಬೇಕೆಂದು ಸಭೆಯು ಅವರಿಗೆ ವಿನಂತಿಸಿತು. ಕಡೆಗೆ ಸಂಸ್ಥೆಗೆ ಯೋಗ್ಯ ಸಹಾಯ ಮಾಡಬೇಕೆಂದು ಭಾಷಣದ ಅರ್ಥವಾಯಿತು. ಶ್ರೀಧರ ಶ್ಯಾನಭಾಗರು ಕೆಲಸ ಮಾಡಿದ್ದಕ್ಕಾಗಿ ಸಭೆಯ ಸ್ವಂತ ಖರ್ಚಿನಿಂದ ಸಹ ಒಬ್ಬೊಬ್ಬರು ಲೀಗಿನ ಹಿತರಕ್ಷಣೆ ಮಾಡಿದ್ದಾಗಿ ರಾ| ಪ್ರಭು ಗಳು ಪ್ರಶಂಸಿಸಿದರು. ಸಭಾಧ್ಯಕ್ಷರು ಲೀಗಿನ ಅಧ್ಯಕ್ಷರಾಗಿದ್ದಾಗ ಲೀಗಿನ ಕಾರ್ಯದ ಕಡೆಗೆ ಲಕ್ಷಗೊಟ್ಟು ಅಧ್ಯಕ್ಷಪದದ ಅಧಿಕಾರವನ್ನು ನಿಷ್ಠೆಯಿಂದ ಪಾಲಿಸಿದ ಬಗ್ಗೆ ಅವರ ಆಭಾರ ಮನ್ನಿಸಲಾಯಿತು. ಅಧ್ಯಕ್ಷರು ಉಪಸಂಹಾರದ ನಾಲ್ಕು ಮಾತಾಡಿ ಸಭೆ ವಿಸರ್ಜನ ಮಾಡಿದರು.

— ನವಾಬ ಲಿಂಗಾಯತರಾಯ, ನಾವಡೇಕರ ಇವರು ಗೋವಾ ಸರಕಾರದಿಂದ ಬಿಟ್ಟು ಬೇರೆ ದೇಶಾಕ್ಕೆ ವ್ಯಕ್ತಿಗೆ ಬಗ್ಗೆ ಹೇಳಿದರು. ಮುದವೆ ಮಾಡಿಕೊಂಡು ಸೌಭಾಗ್ಯವತಿಯರು ವಕೀಲರು ಅವರಿಗೆ ಹಿರಿಯ ಬೇರೆ ದೇಶಾಕ್ಕೆ ಭಗಿನಿಯರಿಗೆ ದೇಶಾನ್ನಸ್ಥೆಯನ್ನು ಕೈಕೊಳ್ಳುವಂತೆ ಪ್ರೋತ್ಸಾಹಿಸಲು ಆಜ್ಞೆ ಮಾಡಿದ್ದಾರೆ. ಸೌಭಾಗ್ಯವತಿ ಲಿಂಗಾಯತರಾಯರು ಈ ಉದ್ಯೋಗಕ್ಕಾಗಿ ಗೋವದ ಸರಕಾರಕ್ಕೆ ತಿಳಿಸಿದ್ದಾರೆ.

— ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಸಭಾಸದರು ಸೂಚಿಸಿದ ಕರ ಹೇರಿಕೆಯ ಕಚ್ಚಳಿಯನ್ನು ಸಂಪೂರ್ಣವಾಗಿ ತೆಗೆದುಹಾಕಿದ್ದರು. ಅದನ್ನು ಸರ್ಕಾರ ಅಧಿಕಾರಿಗಳು ಸರ್ಟಿಫಿಕೇಟದ ಬಲದಿಂದ ಮನ್ನಿಸಿ, ಕೌನ್ಸಿಲ್ ಆಫ್ ಸ್ಟೇಟ ಸಭೆಯಲ್ಲಿ ಮನ್ನಣೆಗೆ ಕಳುಹಿದ್ದಾರೆ. ಕೌನ್ಸಿಲ್ ಆಫ್ ಸ್ಟೇಟ ಎಂಬ ಹಿರಿಯರ ಸಭೆಯು ಅಲ್ಲಿ ಸರಕಾರಿ ಮತ್ತು ಅಲ್ಲಿ ಕರ ಹೇರಿಕೆಯು ಸರಕಾರದ ಅಭಿಪ್ರಾಯದಂತೆ ಮಂಜೂರಾಗುವದು. ಪುನಃ ವರಿಷ್ಠ ಕಾಯಿದೆ ಕೌನ್ಸಿಲಿನಲ್ಲಿ ಅದನ್ನು ಸರಕಾರವು ಪ್ರಸ್ತುತ ಪಡಿಸುವದಿದೆ. ಆಗ ಸಭಾಸದರು ಏನು ಮಾಡುತ್ತಾರೆ ನೋಡಬೇಕು.

ಜಾಹೀರ ನೋಟೀಸು.

ಉಮಾಬಾಯಿ ಕೋಂ ವಾಸುದೇವ ಶೆಣೈ ಸಾ| ಶಿದ್ದಾಪುರ ಇವಳ ಕಡೆಯಿಂದ ಎಲ್ಲ ಜನರಿಗೆ ಈ ಮೂಲಕ ತಿಳಿಸುವದೇನಂದರೆ —

ಶಿದ್ದಾಪುರ ತಾಲೂಕ ಕೊಂಡ್ಲಿ ಗ್ರಾಮ ಸ್ವ ನಂ 86/2ರಲ್ಲಿರುವ ನನ್ನ ಮನೆಯಲ್ಲಿ ಅಡವಿಗಾಗಿ ಸ್ಥಿಮನೆ 1908ನೇ ಸಾಲಿನಲ್ಲಿ ನನ್ನ ಮೈದುನ ಸಿದ್ದಾಪುರದಲ್ಲಿರುವ ಶೀನಪ್ಪ ಕೋಂ ಮಂಜಪ್ಪ ವಡಿಯರಿಗೆ ಅವಳಿಗೆ ಅವಳ ಜೀವಾಂತಿ ವರೆಗೆ ಮಾತ್ರ ಉಪಭೋಗಿಸುವ ಬಾಬಿಗೆ ಆಗುವ ರಕಮು ಕೊಟ್ಟಂತು ಭಾಡೆ ಕರಾರ ಪತ್ರ ಮಾಡಿಕೊಟ್ಟಿರುತ್ತದಷ್ಟೇ. ಇಂತಾ ಅವಳ ಹಕ್ಕು ಯಾವುದರಿಂದ ಅವಳಿಗೆ ಭೂಮಿ ಆದರೆ ಕೊಟ್ಟು ಈಗ ಸ್ವಾಧೀನವಹಿಸಿ ಕೊಳ್ಳುವ ಇದಾದೆ ಮಾಡಿ ಸದ್ರಿ ಶೀನಪ್ಪ ವಡಿಯರ ಇವರ ಕಡೆಯಿಂದ ಯಾರಾದರೂ ಬರು ಬೇರೆ ಮಾಡಿಕೊಂಡಲ್ಲಿ ಅಂಥಾ ಹಕ್ಕು ಈ ಮೂಲಕ ಸಿಂಧು ಆಗಲಿಕ್ಕಿಲ್ಲ. ನಮ್ಮ ಜನರು ಅಲಕ್ಷ್ಯದಿಂದ ಅವರು ಜಾಗ್ರತರಾಗಬೇಕು. ತಾರೀಖ ೨-೧೨-೧೯೨೧

ಉಮಾಬಾಯಿ ಕೋಂ ವಾಸುದೇವ ಶೆಣೈ

ಬಾಲಜೀವನ.

ಈ ದಿವ್ಯ ಔಷಧವು (Pills tablets) ಬಾಲಕರಿಗೆ, ಅಜೀರ್ಣ, ವಾಂತಿ, ಕೆಮ್ಮು ಹಾಗು ಗಳನ್ನು, ಕಾಲಿನ ನೋವು (Pain in the liver) ಅಂದರಾಯಿ (Hernia), ಹೊಟ್ಟೆ ನೋವು, ಮಲಬದ್ಧತೆ, ರಕ್ತ ಕೊರತೆ, ಎಲುಬಿನ ರೋಗ, ಕ್ಷಯ, ಅತಿಸಾರ ಅಶಕ್ತತೆ, ಅಜೀರ್ಣ ಅತಿ ಹಸಿವೆ ಅನೇಕ ತರದ ಮಕ್ಕಳ ರೋಗಗಳಿಗೆ ಬಿಟ್ಟಿ ಉಪಯೋಗಿಸುತ್ತದೆ. ಈ ವಿಷಧವು ಒಂದು ತಿಂಗಳ ಶಿಶುವಿನ ವರೆಗೆ ಉಪಯೋಗ ಮಾಡುತ್ತದಲ್ಲದೆ ಕಾಲಿಜ ರೋಗ (Liver complaint) ಆಗುವ ಸಂಭವವಿರುವದರಿಂದ ಬಾಲಕರ ಹೊಟ್ಟೆ ದೊಡ್ಡದಾಗಿ ಕೈ ಕಾಲುಗಳು ಕೃಶವಾಗುವದು, ಹಸಿಯು ಯಾವಾಗಲೂ ಇವರು ಬಿಳಿಚುವರಾಗುವದು, ಹಲ್ಲು ಬರುವಾಗ ಆತಿಸಾರ ಇತ್ಯಾದಿ ಈ ಎಲ್ಲ ತರದ ರೋಗಗಳನ್ನು ನಾಶ ಮಾಡಿ ಮಕ್ಕಳುಗಳಿಗೆ ಈ 'ಬಾಲಜೀವನ' ಎಂಬ ಔಷಧವು ರಕ್ತವನ್ನು ವೃದ್ಧಿಪಡಿಸಿ ದೇಹದಾರ್ಢ್ಯವನ್ನು ಉಂಟುಮಾಡುತ್ತದೆ.

ಬಾಟ್ಲಿ ಕ್ರಯ ರೂ. ೧-೮-೦ ಟ ಪ. ಬೇರೆ

ಡಲ್‌ಸೇಟ್ ಎಂಡ್ ಕೋ.

ಪೋ ಕುಮಟಾ (ಉ ಕಾನಡಾ)

ಮ॥ ಗಾಂಧಿಯವರ

ಗೀತಾ-ಬೋಧ.

ಕನ್ನಡಕ್ಕೆ

ಅ — ಶ್ರೀ॥ ಹಣಮಂತರಾವ ನಾಂಜರೇಕರ

ಅರ್ಜುನವಿಷಾದಯೋಗ.

೧ನೇ ಅಧ್ಯಾಯ

[illegible]

ಈ ಕಿರಿದಾಗಿ ನೋಡಲನು ಧ್ಯಾದ ಪ್ರ ಕಾಸ [illegible]

‘ ಧರದು ’ ಎಂದು ಅಂದ ಕಾಶಲ [illegible]

[illegible]

ಯುಂದವ,

ಮುಂಗ- ಪ್ರಭಾ

ತಾ ೧೧ ೧೧ ೩೦

The Bombay Provincial
Cooperative Insurance
Society Ltd

9, *Bakehouse Lane*, FORT BOMBAY

Chief Organiser for the Presidency

JANI KULKARNI & CO

[illegible]

ಡಿ. ಎಮ್. ಕುಲಕರ್ಣಿ,

ಕಾರಬಾರಿ ಕಾರವಾರ

ಬಾಲಜೀವನ.

ಈ ಔಷಧವು ಗ್ರಾಣ (Rickets), ಬಾಲಬಿ ಡೆ ಅಸ್ಥಿಜ್ವರ, ಧ ಡಿ, ಕಫ, ನಾಯಿಗೆಮ್ಮು, ಕಾಳಿಜ ನೋವು (Pain in the liver), ಅಂಡವಾಯು (Hernia), ಹೊಟ್ಟೆ ನೋವು, ಮಲಬದ್ಧತೆ, ರಕ್ತ ಕೊರತೆ, ಎಲುಬುಗಳ ರೋಗ, ಕ್ಷಯ, ಅಪಸ್ಮಾರ ಅಶಕ್ತತೆ, ಅಜೀರ್ಣ ಇತ್ಯಾದಿ ಅನೇಕ ತರದ ಮಕ್ಕಳ ರೋಗಗಳಿಗೆ ವಿಶ್ವಾಸದವಾಗಿರುತ್ತದೆ ಈ ಔಷಧವು ಒಂದು ತಿಂಗಳ ಕಿರುಸಿರ ವಾಗ ಉಪಯೋಗ ಮಾ ಡುತ್ತಿವಲ್ಲಿ ಕಾಳಿಜ ರೋಗ (Liver com plaint) ಆಗುವ ಸಂಭವವಿರುವದಿಲ್ಲ. ಬಾಲಕರ ಹೊಟ್ಟೆ ದೊಡ್ಡದಾಗಿ ಕೈ ಕಾಲುಗಳು ಕ್ಷೀಣ ವಾಗಿರುವದು, ತಲೆಯು ಯಾವಾಗಲೂ ಬೆವರಿ ಬಳಲುವದು, ಹಲ್ಲು ಬರುವಾಗ ಅತಿಸಾರ, ಬಾಲಗ್ರಹ ಈ ಎಲ್ಲಾ ತರದ ರೋಗಗಳನ್ನು ನಾಶ ಮಾಡಿ ಮಕ್ಕಳುಗಳಿಗೆ ಈ ‘ಬಾಲಜೀವನ’ ಎಂಬ ಔಷಧವು ರಕ್ತವನ್ನು ವೃದ್ಧಿಪಡಿಸಿ ದೇಹಬಾಧ್ಯವ ನ್ನು ಬೆಳೆಸುತ್ತದೆ.

ಒ ಬಾಟ್ಲಿ ೧ ರೂ ೦ ಟ ಖ ಬೇರೆ

ಡಲಾ ನಟಿ ಎಂಡ್ ಕೋ,

ಪೋ ಕುಮಟಾ (ಉ ಕಾನಡಾ)

Siromani Udipi Narayanacharya,
CHAUKHAMBA, BENARES CITY

ಕಾಣಿಕೆ ರುಪ್ರಸೇಕೊ ... ದಕ್ಷಿಣಾ [illegible] 108 ... 0-6-0 ... 10 ... 32 ... 0 ... 100 ... 3 8 0 ... 0 1 0 ...

ಶಿರೋಮಣಿ ನಾರಾಯಣಾಚಾರ್ಯ,

ಚೌಕಂಬಾ, ಕಾಶೀ ಕ್ಷೇತ್ರ

ಸನ್ ಲೈಫ್ ಎಶ್ಯೂರನ್ಸ ಕಂಪನಿ ಆಫ್ ಕೆನಡಾ.

ಇದೇ ಬ್ರಿಟಿಶ ಸಾಮ್ರಾಜ್ಯದಲ್ಲಿ ಇರೋ ಬಹು ದೊಡ್ಡ ಕಂಪನಿ!

ಅಧ್ಯಕ್ಷ — ... ಸಿಂಹಲ ... ಮುಂಬಯಿ

ಜನರಲ್ ಮ್ಯಾನೇಜರ — ... ಕೋ ಓ ಪಿ ಈ

[illegible]

ಈ ಕಂಪನಿಯ ಏಜನ್ಸಿ ಪಡದು ಹುರುಪಿನಿಂದ ಹಾಗು ದೃಷ್ಟಿಯಿಂದ ನವಯುವಕರು ಮಾಡಿ ಸುಲಭವಾಗಿ ಮರ್ಯಾದೆಯ ಜೀವನ ನಡೆಸಬಹುದು

ಕೆಳಗಿನ ವಿಳಾಸಕ್ಕೆ ಪತ್ರವ್ಯವಹಾರ ನಡೆಸುವ ಪತ್ತೆ—

The District Manager, Canada Building, Hornby Road, BOMBAY

or

Mr S. B. Rege, *Chief Agent*, 17 Civil Lines, Camp BELGAUM

"ರಾಜನಿಷ್ಠೆಯ ಶಿಕ್ಷಕರೋ, ಶಿಕ್ಷಕರ ರಾಜನಿಷ್ಠೆಯೋ ?"

(ಅನುವಾದಕ— ಚಿತ್ರಗುಪ್ತ)

ಎಲ್. ಬಂಕ (ವಂದೇಮಾತರಮ್ಮಿನ, ಅಥವಾ ಶ್ರೀನಿವಾಸ ಪಂಕರೇ ಅನ್ನಿರಿ) ಇವರೊಬ್ಬ ಪ್ರಖ್ಯಾತ ಶಿಕ್ಷಕರು. ಇವರಿಗೆ ಗೊತ್ತಿಲ್ಲದ ವಿಷಯವೇ ಜಗತ್ತಿನಲ್ಲಿಯೇ ಇದ್ದಿಲ್ಲ. ಒಂದು ವೇಳೆ ಗೊತ್ತಿಲ್ಲದಿದ್ದರೂ ಹಾಗೆ ಅವರು ಎಂದೂ ತೋರಿಸಿಕೊಳ್ಳುತ್ತಿರಲಿಲ್ಲ. ಅವರು ಯಾವದೇ ವಿಷಯವನ್ನು ಕಲಿಸುತ್ತಿರಲಿ, ತಾವು ಸ್ವತಃ ಅದರಲ್ಲಿ ತಲ್ಲೀನರಾಗಿ ವಿದ್ಯಾರ್ಥಿಗಳ ಮನಸ್ಸನ್ನು ಅದರಲ್ಲಿ ಲವಲೀನಗೊಳಿಸುತ್ತಿದ್ದರು. ಶಿಕ್ಷಕರೊಳು ಹೊತ್ತಿನಿಂದ ಅವರ ಕಂಠವು ಬಿಗಿದು ಬರುವದು. ವಿದ್ಯಾರ್ಥಿಗಳ ನೇತ್ರಗಳೊಳಗಿಂದ ಒಂದೇ ಸವನೆ ಅಶ್ರುಪಾತವಾಗಹತ್ತುತ್ತಿತ್ತು. ಅಂಥ ವೇಳೆ ಆ ದಿನದ ಪಾಠವೇನು? ಸ್ಕಾಟ್ಲಂಡದ ಪ್ರಸಿದ್ಧ ದೇಶಭಕ್ತನಾದ ವಿಲಿಯಮ್ ವಾಲೇಸ್ ಇವರ ದೇಶಾಭಿಮಾನದ ಕಥೆಯನ್ನು ಅವರು ಮೇಲಿನ ವರ್ಗದವರಿಗೆ ಕಲಿಸುತ್ತಿದ್ದರು. ಅವರ ಸ್ವದೇಶಭಕ್ತಿ ಮತ್ತು ಅವರ ಮೇಲಿನ ಲೋಕಭಕ್ತಿ ಇವುಗಳ ಹೃದಯಂಗಮವಾದ ವರ್ಣನೆಯನ್ನು ಬಹಳ ಪರಿಣಾಮಕಾರಿಯಾದ ರೀತಿಯಿಂದ ಮಾಡಿ ಅವರು ವಿದ್ಯಾರ್ಥಿಗಳ ಹೃದಯದಲ್ಲಿ ರಾಷ್ಟ್ರಪ್ರೇಮದ ಜ್ಯೋತಿಯನ್ನು ಸತತವಾಗಿ ಹೊತ್ತಿಸಿದರು. ತಾಸು ಮುಗಿದ ಘಂಟೆಯಾಯಿತು, ಆದರೂ ಒಂದೆರಡು ನಿಮಿಷ ಎಚ್ಚರವೇ ಇರಲಿಲ್ಲ ಮತ್ತು ವಿದ್ಯಾರ್ಥಿಗಳಿಗಂತೂ ದೇಹಭಾನವೇ ಉಳಿದಿರಲಿಲ್ಲ!

ಅವರಲ್ಲಿಯೂ ಹಿರಿಯ ಅಧಿಕಾರಿಗಳ ಪ್ರಾಟಿಗೆ ಸಲ್ಲುವ ಮಾತುಗಳನ್ನು ವಿಲಿಯಮ್‌ನು ಧಿಕ್ಕರಿಸಿದ ನಂತರದ ಪ್ರಸಂಗದೊಳಗಿನ ಚಿತ್ರಣ. ಈ ಧ್ಯೇಯಪೂರ್ಣ ಪ್ರಸಂಗವನ್ನು ಅವರು ಅತ್ಯಂತ ವಕ್ತೃತ್ವಪೂರ್ಣ ಮಾತಿಯಿಂದ ವರ್ಣನ ಮಾಡಿ ಹೇಳಿದರು. ಆಂಗ್ಲರ ಉದ್ಧಟ ಸ್ವಾಮಿನಿಷ್ಠೆ ಮತ್ತು ವಿಲಿಯಮ್‌ನ ತೇಜಸ್ವಿ ರಾಷ್ಟ್ರನಿಷ್ಠೆ ಇವುಗಳೊಳಗಿನ ವಿರೋಧವನ್ನು ಪಂಕರು ಅತ್ಯಂತ ಪರಿಣಾಮಕಾರಕ ಶಬ್ದಗಳಿಂದ ಚಿತ್ರಿಸಿದರು. ಕ್ಲಾಸಿನಲ್ಲಿ ಪ್ರತಿ ಒಬ್ಬ ವಿದ್ಯಾರ್ಥಿಯು ಆ ಸರದಾರರ ಮಾತುಗಳ ಮೇಲೆ ತಲ್ಲೀನನಾಗಿ ಕೂಡಿಯುತ್ತಿದ್ದನು. ಮತ್ತು ವಿಲಿಯಮ್‌ನು ತನ್ನ ಜೀವಿತದ ಅಂತಿಮ ಕ್ಷಣದಲ್ಲಿಯೂ ಹೀಗೆ ಸರದಾರರ ಮಾತುಗಳ ಉದ್ಧಟತನದ ಭಾವನೆಯನ್ನು ಗಣನೆಯಿಂದ ದೂರ ಮಾಡಿ ಸ್ವತಃ ಅವಿನಾಶದಿಂದ ಉಪಕಾರ ಪಡೆದ ಪಂಕರು ಸಹಿತ ಇದ್ದರು. ತತ್ಕ್ಷಣದ ವರ್ಗದ ಪ್ರಶ್ನೆ ಹಾಕಿದರಲ್ಲ: ಅದೇನು ರಾಜನಿಷ್ಠೆಯನ್ನು ಕಲಿಸುವ ಕಾಲವೋ? ಶಿಕ್ಷಕರ ಸಲುವಿನಿಂದ ರಾಜನಿಷ್ಠೆಯನ್ನು ಹುಟ್ಟಿಸಲು ಶಕ್ಯವಾದವೇನು?"

ಪ್ರತಿಯೊಬ್ಬ ವಿದ್ಯಾರ್ಥಿಯ ಹೃದಯವು ವಿಚಾರಿಸಹತ್ತಿತು: 'ಅದೇನು ರಾಜನಿಷ್ಠೆಯನ್ನು ಕಲಿಸುವ ರೀತಿಯೋ? ಶಿಕ್ಷಕರ ಸಲುವಿನಿಂದ ರಾಜನಿಷ್ಠೆಯು ಹುಟ್ಟುವದಿಲ್ಲವೇನು?'

ಈ ಪ್ರಶ್ನೆಗಳ ಚಕ್ರವು ಆ ವರ್ಗದಲ್ಲಿ ತಿರುಗುತ್ತಿರುವಾಗಲೇ ಶಾಲೆಯ ಜವಾನನು ಚೀಟಿ ತೆಗೆದುಕೊಂಡು ಬಂದನು. ಪಂಕರು ಅದನ್ನು ತೆಗೆದುಕೊಂಡು ನೋಡಿದರು. ಅವರು ತಮ್ಮ ಬುದ್ಧಿಯ ಬಲುವಾಗಿ ಜೋರಿನ ಪ್ರಯತ್ನ ನಡೆಸಿದ್ದರು. ಅವರಿಗೆ ಬಂದ ಫಲವು ಆ ಚೀಟಿಯಲ್ಲಿ ಇದ್ದೀತು ಎಂಬ ಆಶೆಯಿಂದ ಅವರು ಅದನ್ನು ಬಿಚ್ಚಿ ಓದಹತ್ತಿದರು. ಅವರಲ್ಲಿ ಬುದ್ಧಿಯು ಫಲವಿದ್ದಿಲ್ಲ.

ಬುದ್ಧಿಯು ಫಲವಿದ್ದಿಲ್ಲ, ಆದರೆ ಬೀಜವಾಗುತ್ತಿತ್ತು. ಹೀಗೆ ಪಂಕರಿಗಾದರೂ ಅನೇಕ ಧಾರದ ಮೇಲಿನ ಸ್ವರ್ಗವನ್ನೇರುವದು ಅವರ ಸ್ವಭಾವವಿದ್ದದರಿಂದ ಬುದ್ಧಿಯ ರೂಪಾಯಿಗಳನ್ನು ಸಾಲಾಗಿ ಇಟ್ಟಿದ್ದ ಅವರಿಗೆ ಆ ಚೀಟಿಯಲ್ಲಿ ಸ್ಪಷ್ಟವಾಗಿ ಕಾಣಹತ್ತಿದವು. ಆ ದಿನ ಪದ ಭಾವದಲ್ಲಿ ಅವರ ಆ ಚೀಟಿಯೊಳಗಿನ — ಜಿಲ್ಲಾ ದಿವ್ಯ ಇಂಥದೇ ಪ್ರಸ್ತಾವನೆ ಕಟುವಾಗಿ ಹೇಳಹತ್ತಿದರು.

ಪಂಕರು ಪ್ರಸನ್ನ ವದನದಿಂದ ಅಂದದ್ದು — ಪ್ರಿಯ ಬಾಲಕರೇ, ನಿಮ್ಮ ಶಾಲೆಯ ಸಮಾರಂಭ ಬಂದ ದಿವಸಗಳನ್ನು ತೋರಿಸುವ ಸಂಧಿಯು ನಿಮ್ಮ ಮುಂದೆ ನಡೆದು ಬಂದಿದೆ. ಅದನ್ನು ನೀವು ಸಾಧಿಸುವಿರಲ್ಲ?'

"ಹೌದು" ಹೀಗೆ ದೊಡ್ಡದಾಗಿ ವಿದ್ಯಾರ್ಥಿಗಳು ಏಕ ಕಂಠದಿಂದ ಗರ್ಜಿಸಿದರು.

ಅದರಿಂದ ಉಲ್ಲಸಿತರಾಗಿ ಪಂಕರು ಮುಂದೆ ಹೇಳಹತ್ತಿದರು.

ನಾಳೆ ನಿಮ್ಮ ಕಡೆಯ ಹತ್ತಿರ ಸರಕಾರೀ ಅಧಿಕಾರವು ಬರುವದಿದೆ. ಆ ಕಾಲಕ್ಕೆ ನೀವೆಲ್ಲ ಶಾಂತ ರೀತಿಯಿಂದಲೂ ಶಿಸ್ತಿನಿಂದಲೂ ಸಾಲಾಗಿ ನಿಂತಿರಬೇಕು. ಮತ್ತು ಅಧಿಕಾರಿಗಳು ನಿಮ್ಮ ಕಡೆಗೆ ನೋಡಿದ ಕೂಡಲೇ ಅವರಿಗೆ ನಮ್ರತೆಯಿಂದ ತಗ್ಗಿ ಸಲಾಮು ಮಾಡಬೇಕು. ನಮ್ಮ ಶಾಲೆಯ ಅಂಥ ರಾಜನಿಷ್ಠೆಯನ್ನು ನೋಡಿ ಸಂತುಷ್ಟರಾಗಿ ಆ ಅಧಿಕಾರಿಗಳು ನಿಮ್ಮ ಶಾಲೆಯ ಮಾತಿಗೆ ಒಳ್ಳೆ ಸ್ಥಾನ ಕೊಡದ ಉಳಿಯುವದಿಲ್ಲ.

'ಹಾಗಾದರೆ ಸರ್, ನಾಳೆ ನಮ್ಮ ಪರೀಕ್ಷೆ ಇದೆಯಲ್ಲ' ಎಂತ ಒಬ್ಬ ಪ್ರೌಢ ವಿದ್ಯಾರ್ಥಿಯು ಕೇಳಿದನು.

ಪಂಕರು ಉತ್ತರ ಕೊಟ್ಟದ್ದೇನಂದರೆ, 'ನಾಳೆ ಶಾಲೆಯೂ ಬಂದ, ಪರೀಕ್ಷೆಯೂ ಬಂದ! ಬಾಲಕರೇ, ನೀವು ಅಲ್ಲಿಗೆ ಹೋಗುವದೆಂದರೆ, ಅದೊಂದು ಶಾಲೆಯೇ. ಯಾವ ಬ್ರಿಟಿಶ ಸಾಮ್ರಾಜ್ಯದಲ್ಲಿ ಸೂರ್ಯಾಸ್ತವು ಎಂದೂ ಆಗುವದಿಲ್ಲವೋ, ಅಂಥವರ ಅಧಿಕಾರೀ ವರ್ಗವನ್ನು ನೋಡುವದು, ಪ್ರತಿ ಒಬ್ಬ ಹಿಂದೀ ನಾಗರಿಕನ ಕರ್ತವ್ಯವೇ ಆಗಿದೆ. ವರ್ಷಕ್ಕೆ ೫೦-೬೦ ಕೋಟಿ ರೂಪಾಯಿಗಳನ್ನು ತಿಂದು ತೇಗುವ ನಮ್ಮ ಮಿಲಿಟರಿ ಅಧಿಕಾರಿಯು ಇರುವದಾದರೂ ಹ್ಯಾಗೆ? ಇದನ್ನು ನೀವು ಪ್ರತ್ಯಕ್ಷ ನೋಡಿದಿರೆಂದರೆ, ನಿಮಗೆ ಇತಿಹಾಸವು ಬೇಗ ಬಂದೀತು. ಬ್ರಿಟಿಶರ ಶಾಸನ ಪದ್ಧತಿಯು ಚನ್ನಾಗಿ ತಿಳಿದೀತು. ನಮ್ಮ ಸಂಪತ್ತಿನವು ಎಷ್ಟು ಸರಿಯಾಗಿ ನಡೆದವು, ಎಂಬುದು ಸ್ಪಷ್ಟವಾಗಿ ಲಕ್ಷದಲ್ಲಿ ಬಂದೀತು. ಮತ್ತು ಅವರ ಸಹಾಯದಿಂದ ನಮ್ಮ ದೇಶ ಸೇವೆಯ ರೀತಿಯನ್ನು ನಿರ್ಣಯಿಸಲು ಅನುಕೂಲವಾದೀತು. ಒಟ್ಟಿನಲ್ಲಿ ಭೂಗೋಲ, ಅರ್ಥಶಾಸ್ತ್ರ, ಭವಿಷ್ಯ ಈ ಮೂರು ಕಾಲಗಳ ದೃಷ್ಟಿಯಿಂದ ಈ ಅಧಿಕಾರೀ ಸಮಾರಂಭವು ನಿಮಗೆ ಲಾಭದಾಯಕವಾದೀತು. ಮತ್ತು ಒಂದೇವಮಾತರೆ ನಿಮ್ಮ ಶಾಲೆಗೂ ಅದರಿಂದ ದ್ರವ್ಯಲಾಭವಾದೀತು.'

ನಂತರ ಈ ದೇಶಭಕ್ತಿಪ್ರಚೋದಕವಾದ ಉಪನ್ಯಾಸವನ್ನು ಕೇಳಿ ವಿದ್ಯಾರ್ಥಿವರ್ಗವು ಸ್ತಂಭಿತವಾಯಿತು. ಯಾವ ಕಾರಣದಿಂದ ಇದು ಅವರಿಗೆ ತಿಳಿಯದಾಯಿತು. ವಿಲಿಯಮ್ ವಾಲೇಸ್‌ನ ಧೈರ್ಯವನ್ನು ಕಲಿಸುವ ಪಂಕರು ಮತ್ತು ಸ್ವಾರ್ಥಕ್ಕಾಗಿ ಲೋಲುಪರಾಗಿರುವ ಪಂಕರು ಇವರಲ್ಲಿ ಆ ಒಂದು ಕಾಲು ತಾಸಿನಲ್ಲಿಯೇ ಎಷ್ಟು ಅಂತರ ತೋರಿತು! ಮಾತಾಡುವ ಧೈರ್ಯವು ಮಾತ್ರ ಯಾರಿಗೂ ಆಗಲಿಲ್ಲ. ಯಾರೂ ನೋಡಿದರೂ ಸ್ತಬ್ಧ!

ಆಗ ಒಬ್ಬ ವಿಟ್ಟ ಹುಡುಗನು— ನಮ್ಮ ನಿರ್ಭಿಡೆಯವನಾಗಿ— ಪ್ರಶ್ನೆ ಹಾಕಿದನು —

'ಸರ್, ಇದೇ ಶಿಪಾಯಿಗಳು ಹೋದ ಚಳವಳಿಯ ಕಾಲಕ್ಕೆ ನಮ್ಮ ಸ್ವಯಂಸೇವಕರ ತಲೆಯ ಮೇಲೆ ಲಾಠಿಯನ್ನು ಒಗೆಯುತ್ತಿದ್ದರಲ್ಲ? ನಾಳೆ ಪುನಃ ಚಳವಳಿಯು ಪ್ರಾರಂಭವಾದರೆ, ಇದೇ ಸರಕಾರೀ ನೌಕರರು ನಮ್ಮ ದೇಶಬಾಂಧವರ ವಿರುದ್ಧ ಕಾದುವರಲ್ಲ? ಇದೇ ಅಧಿಕಾರಿವರ್ಗವು ಅಲ್ಪರ ಕಬ್ಜಾದ ಕಾಲದಲ್ಲಿ ನಮ್ಮ ಬಂದೂಕದ ತೋಟಿಯ ಕರದ ಧಾರೆಯಿಂದ ಮಣ್ಣಿಗೆ ಉಚ್ಚಿಲ್ಲದವರಲ್ಲ? ಸರ್, ನನಗೆ ವಿರೋಧ ತೋರಿದಂತಾಗಿದೆ. ನನ್ನ ಸಂಶಯವನ್ನು ದೂರ ಮಾಡಿರಿ."

ಆಗ ಹುಡುಗನ ಸಮುದ್ರವು ಪ್ರಕ್ಷುಬ್ಧವಾಯಿತು! ಸ್ಪರ್ಧೆ ಶಬ್ದಗಳಿಂದ, ನಿಂದಾವಂಥ ಶಬ್ದಗಳಿಂದ ಪಂಕರು ಆ ಚೀಟಿಯ ಅಧಿಕಾರಿಗಳ ವಿಷಯದ ಬಗ್ಗೆ ಮಾತಾಡಿದರು. ಬುದ್ಧಿಯನ್ನು ಯಾಕೆ ಪಂಕರುತ್ತೀರಿ, ನೀವು ಅಧಿಕಾರಿಗಳ ಯಾಕೆ ವಿರೋಧ ಮಾಡುತ್ತೀರಿ? ಅದರಲ್ಲಿ ರಾಜಭಕ್ತಿಯುಂಟೋ? ಅಂಥ ಮಾತಿನಿಂದ ನೀವು ಶಾಲೆಯ ಹೆಸರಿನ ಸ್ವರಾಜ್ಯಕ್ಕೆ ಏನು? ಎಂದು ಪ್ರಶ್ನೆ ಮಾಡಿ ಹುಡುಗರಿಗೆ ಒಂದು ಬೆತ್ತದ ಪೆಟ್ಟು ಕೊಟ್ಟರು. ಪ್ರತಿ ಒಬ್ಬರು ಒಂದೊಂದು ಸಲ ಯುನಿಯನ್ ಜ್ಯಾಕನ್ನು ಕೈಯಲ್ಲಿ ಹಿಡಿದುಕೊಂಡು ಅಧಿಕಾರಿಗೆ ಸಲಾಮು ಮಾಡಲು ಬರಬೇಕು ಎಂತ ಹೇಳಿ ನೋಟೀಸು ಬೋರ್ಡಿಗೆ ಹಚ್ಚಿ ಪಂಕರು ಪಾಠವನ್ನು ಮುಕ್ತಾಯ ಮಾಡಿದರು.

ಮರುದಿವಸ ವೇಳೆಗೆ ಸರಿಯಾಗಿ ಪಂಕರು ಕರೆಯು ಸತ್ಕಾರ ಸಮಾರಂಭದ ಉತ್ಸಾಹದಿಂದ ಆತ್ಮಿಕ್ಕ ತಿರುಗಾಡುತ್ತಿದ್ದರು. ಶಾಲೆಯ ಪೋರರು ಬಂದರೂ ಆ ಸಭೆಗೆ ಪ್ರತ್ಯೇಕ ಮಾಡಿದರು. ಅವರು ತಮ್ಮ ಕ್ಷೌರ ಅಜ್ಞೆಯ ನಿಂದ ಎಂದೂ ಹೋಗಲಿಕ್ಕಿಲ್ಲ ಎಂಬ ದೃಢವಾದ ಆತ್ಮವಿಶ್ವಾಸವು ಅವರಿಗಿತ್ತು. ಇದಲ್ಲದೆ ಈ ರಾಜನಿಷ್ಠ ಸಮಾರಂಭಕ್ಕಾಗಿ ಅವರು ಬೇರೊಂದು ಸುಂದರ ಅಂಗಿಯ ಜೋಡಿಯನ್ನು ಹೊಲಿಸಲು ವ್ಯವಸ್ಥೆ ಮಾಡಿದ್ದರು. ಕನ್ಯಾಶಾಲೆಯ ಸ್ತ್ರೀಯ ಹಾಗೆ ಮುಂದಾಗಿ ಹೋಗಿ ಪರಿಪರಿಯಿಂದ ಅವರಿಗೆ ಹೇಳಿಕೊಂಡು ತಮ್ಮ ಅಪೇಕ್ಷೆ ಮಾಡಿದ ಮಕ್ಕಳಿಗೆ ಪಾಲಕ ಅಧಿಕಾರದ ಮುಂದೆ ರಾಜಗೀತವನ್ನು ಹೇಳಲು ೧೦ ಬಾಲಿಕೆಯರನ್ನು ಕಳಿಸಲು ಅವರ ಕಡೆಯಿಂದ ವಚನವನ್ನು ಸಹ ತೆಗೆದುಕೊಂಡಿದ್ದರು. ಹೀಗಾಗಿ ಅವರಿಗೆ ಈ ಹುಡುಗರು ಹೂವ ಗಿಡದ ಕೊಡುವರೋ ಇಲ್ಲವೋ ಎಂಬ ಪ್ರಶ್ನೆಯೇ ಉಳಿಯಲಿಲ್ಲ. ಒಂದು ಪ್ರಶ್ನೆಯೆಂದರೆ ಇಷ್ಟೇ: ಮೊದಲು ಹೂವ ಗಿಡದವರೋ, ಹುಡುಗರೋ? ಅಥವಾ ಅಧಿಕಾರವೇ ಮೊದಲು ಬಂದು ಮುಟ್ಟುವದು? ಇದೇ ಅವರ ಭೀತಿ ಇತ್ತು.

ಮತ್ತು ದುರ್ದೈವದಿಂದ ಆ ಭೀತಿಯು ನಿಜವಾಯಿತು. ಅಧಿಕಾರವೇ ಮೊದಲು ಬಂದು ಮುಟ್ಟಿತು. ಆದರೆ ದುರ್ದೈವವು ಹೀಗಲ್ಲ, ಕಡೆಗೆ ಅವರ ಆಸೆಯೂ ಸಫಲವಾಯಿತು. ಅಧಿಕಾರ ಬಂದೊಡನೆ ಹುಡುಗರೂ ಬಂದರು. ಮತ್ತು ನಿಶಾನಿಗಳನ್ನು ಸಹ ತೆಗೆದುಕೊಂಡು ಬಂದರು. ಕಲಾಪದ ಶಬ್ದವನ್ನು ಸಹ ಅವರು ಉಚ್ಚರಿಸಿದರು. ಆದರೆ ಪಂಕರ ತಲೆಯು ಮಾತ್ರ ತಿರುಗಹತ್ತಿತು!

ಆ ಹುಡುಗರ ಕೈಯಲ್ಲಿ ಕಪ್ಪು ನಿಶಾನಿಗಳನ್ನು — ಅಯ್ಯೋ! ಕರೀ ನಿಶಾನಿಗಳನ್ನ— ತಂದಿದ್ದರು ಮತ್ತು 'ಗೋ ಬ್ಯಾಕ್! ಗೋ!' ಎಂದು ಅವರು ಕೂಗುತ್ತಿದ್ದರು!!

ಮರುದಿನ ಬಂದ ಚೀಟಿಯನ್ನು ಪಂಕರು ಓದಿದರು: 'ಬಡತಿ ಬಂದ'!

ಇವೆಲ್ಲ ಹ್ಯಾಗಾಯಿತೆಂಬುದನ್ನು ಒಡೆಯ ಪಂಕರಿಗೆ ಯಾರಾದರೂ ಹೇಳುವರೇನು?

— ಹಿಂದುಸ್ಥಾನೀ ಸೇವಾದಳದ ಕಾರ್ಯಕ್ಕಾಗಿ ಮುಂಬಯಿಯ ಕುಮಾರಿ ಸೋಫಿಯಾ ಸೋಮಜೀ ಹಾಗು ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರವರು ಉತ್ತರ ಹಿಂದುಸ್ಥಾನವನ್ನು ಸಂಚಾರ ಮಾಡಹೊರಟಿದ್ದು ಮುಂಬಯಿ ಗಳೊಳಿನಲ್ಲಿ ಆರ್ಥಿಕ ಪ್ರೋತ್ಸಾಹದಿಂದ ಸ್ವಯಂಸೇವಿಕೆಯರ ಬಾಲಿಕೆಯರ ದಳಗಳನ್ನು ಪರ್ವಣಿಸಲು ಮುಂದಾಗಿದ್ದಾರೆ. ಸಾಲ್ವ ಪ್ರಬುದ್ಧ ಸ್ತ್ರೀಯರು ಮುಂಬಯಿಗೆ ಹೋಗಿ ಶಿಕ್ಷಣ ಹೊಂದಲು ತಯಾರಾಗಿದ್ದಾರೆ.

— ಕೇರಳದಲ್ಲಿ ಗುರುವಾಯೂರ ದೇವಾಲಯದ ಮುಂದೆ ಅಸ್ಪೃಶ್ಯರು ದೇವಸ್ಥಾನದ ಪ್ರವೇಶಕ್ಕಾಗಿ ಸತ್ಯಾಗ್ರಹ ಹೂಡಿದ್ದಾರೆ. ಸ್ವಯಂಸೇವಕರು ಸತ್ಯಾಗ್ರಹ ಮಾಡುತ್ತಿದ್ದಾರೆ. ಶ್ರೀ ಕೇಳಪ್ಪನ ಪದ್ಮನಾಭ ಪಿಳ್ಳೆ, ಕುಟ್ಟಿಕೃಷ್ಣನ್ ಪ್ರಭೃತಿ ಕಾರ್ಯಕರ್ತರು ಆ ಅಸ್ಪೃಶ್ಯರಿಗೆ ದೇವಸ್ಥಾನದಲ್ಲಿ ಪ್ರವೇಶ ಕೊಡಲು ಜನರಿಗೆ ಬೋಧಿಸುತ್ತಿದ್ದಾರೆ. ಪ್ರಾಚೀನ ಮತವಾದಿಗಳು ದೇವಸ್ಥಾನದ ಮುಂದೆ ಬಿದಿರಿನ ಬೇಲಿ ಹಾಕಿ ಅಸ್ಪೃಶ್ಯರು ಒಳಸೇರದಂತೆ ಕಾಯುತ್ತಿದ್ದಾರೆ.

ಮೆಕಡೊನಲ್ಡ-ಸ್ವರಾಜ್ಯ!

ಹಿಂದುಸ್ಥಾನದಲ್ಲಿ ಶಾಂತತೆ-ವ್ಯವಸ್ಥೆಯನ್ನಿಡುವ ಅಧಿಕಾರ ಸರ್ವಾಧಿಪತಿಗಳದು! ಸೈನ್ಯಾಧಿಕಾರವಿಲ್ಲ!! ಪರರಾಷ್ಟ್ರಗಳೊಡನ ಸಂಬಂಧವನ್ನಿಡುವ ಅಧಿಕಾರವಿಲ್ಲ!!!

ಕಂದಾಯ ಎತ್ತುವಳಿಯು, ಖರ್ಚು ಮಾಡುವ ಕೊಂಚ ಅಧಿಕಾರ ಮಾತ್ರ!!! ಪ್ರಾಂತಾಧಿಕಾರದ ಮ್ಯುನಿಸಿಪಾಲಿಟಿ ಮಾತ್ರ!!!!

ಹಿಂದುಸ್ಥಾನ ಸರಕಾರದ ಘಟನೆಯ ಕುರಿತು ಪ್ರಸಿದ್ಧ ಬ್ರಿಟಿಶ ಪ್ರಮುಖರ ಅಧ್ಯಕ್ಷತೆಯ ಚಿಕ್ಕ ಚಿಕ್ಕ ಕಾರ್ಯಕಾರಿ ಮಂಡಳಗಳು!!!!!

ರೌಂಡ ಟೇಬಲನ್ನು ಮುಗಿಸುವಾಗ ಬ್ರಿಟಿಶ ಪ್ರಧಾನ ಮಂತ್ರಿ-ದ ಮುಖ್ಯಸ್ಥರಾದ ಮಿ॥ ರೆಮ್ಸೆ ಮೆಕ್ಡೊನಲ್ಡರವರು, ಸಾಮ್ರಾಜ್ಯ ಸರಕಾರವು ಹಿಂದುಸ್ಥಾನಕ್ಕೆ ಕೊಡಮಾಡಿದ ಸ್ವರಾಜ್ಯ ಸ್ವರೂಪವನ್ನು ತಿಳಿಸಿದರು. ಇದು ರೌಂಡ ಟೇಬಲಿನ ಮಂಡಳ ಸದಸ್ಯರಿಂದ ವಿಶದವಾಗಿ ಘೋಷಿಸಿ ಕೊಟ್ಟದ್ದು. ಮುಖ್ಯ ಪ್ರಧಾನರು ನುಡಿದದ್ದೇನೆಂದರೆ:

ರೌಂಡ ಟೇಬಲ್ ಪರಿಷತ್ತಿನ ಅಧಿವೇಶನಗಳಾದವು. ಈಗ ಅವನ್ನು ಸಮಾಲೋಚಿಸ ಪಡುಚಿತ ಹಿಂದೀ ರಾಜ್ಯಘಟನೆಯ ಕಷ್ಟಗಳನ್ನು ತಿಳಿಸಿ ಅವನ್ನು ಪರಿಹರಿಸಲು ನಾವು ಪ್ರಯತ್ನಪಡಬೇಕು, ಮತ್ತು ಯಶಸ್ಸು ಪಡೆಯಲು ಹಂಚಿಕೆ ಹುಡುಕಬೇಕು. ಸಮಕ್ಷ ಮಾತನಾಡಿದ್ದರಿಂದ ನಮಗೆ ಬಹಳ ಲಾಭವಾಯಿತು. ಕಳೆದ ಜನವರಿ ೧೯ನೇ ತಾರೀಖಿಗೆ ನಾನು ಸಾಮ್ರಾಜ್ಯ ಸರಕಾರದ ರಾಜ್ಯಧೋರಣವನ್ನು ಪ್ರಕಟಿಸಿದ್ದೇನೆ. ಅದರೊಳಗೆ ಕಾಯಿದೆ ಕೌನ್ಸಿಲುಗಳಿಗೆ ಹಿಂದುಸ್ಥಾನ ಹಾಗು ಪ್ರಾಂತಿಕ ಸರಕಾರಗಳು ಒಪ್ಪಿಸಲ್ಪಡುವವಾಗಿಯೂ, ಸಂಕ್ರಮಣ ಕಾಲಕ್ಕೆ ಅವಶ್ಯವುಳ್ಳ ಅಧಿಕಾರಗಳು ಬ್ರಿಟಿಶರ ಸ್ವಾಧೀನ ಕೊಳ್ಳಲ್ಪಡುವವಾಗಿಯೂ, ಆ ಅಧಿಕಾರಗಳಿಂದ ಹಿಂದುಸ್ಥಾನದ ಪ್ರಗತಿಗೆ ಬಾಧೆ ಬರಲಿಕ್ಕಿಲ್ಲವಾಗಿಯೂ ನಾನು ತಿಳಿಸಿದ್ದೆ. ಸೈನ್ಯ ಮತ್ತು ಪರರಾಷ್ಟ್ರಗಳ ಸಂಬಂಧಗಳು ಗವ್ಹರ್ನರ ಜನರಲ್‌ರ ಸ್ವಾಧೀನದಲ್ಲಿರುವವು, ಕಾಯಿದೆ ಕೌನ್ಸಿಲುಗಳ ಅಧೀನವಿರಲಿಕ್ಕಿಲ್ಲ. ಕಂದಾಯದ ಅಧಿಕಾರವು ಸಂಪೂರ್ಣವಾಗಿ ಹಿಂದೀಯರಿಗೆ ಒಪ್ಪಿಸಲ್ಪಡಲಿಕ್ಕಿಲ್ಲ. ಹಿಂದುಸ್ಥಾನದ ಪತ್ತು ನೀಟಾಗುವಂತೆ ಭಾರತ ಮಂತ್ರಿಗಳು ತೆಗೆದ ಸಾಲಗಳ ಭದ್ರತೆಗಾಗಿ ಬಗ್ಗೆ ಎರಡಂಶ ಜಾಗ್ರತೆ ಇಟ್ಟುಕೊಂಡು ಹಿಂದೀಯರಿಗೆ ಉಳಿದ ಅಧಿಕಾರ ಒಪ್ಪಿಸಲ್ಪಡುವದು. ಹಿಂದುಸ್ಥಾನದಲ್ಲಿ ಶಾಂತತೆಯನ್ನು ಪಾಲಿಸುವ ಜವಾಬದಾರಿಯು ಸರ್ವಾಧಿಪತಿಗಳದ್ದಿದ್ದದರಿಂದ ಅವರಿಗೆ ತಕ್ಕಷ್ಟಾಗಿ ವಿಶೇಷ ಅಧಿಕಾರವಿರಬೇಕು. ಅಲ್ಪಸಂಖ್ಯಾಕರ ರಕ್ಷಣೆಗಾಗಿ ಗವ್ಹರ್ನರ ಜನರಲ್‌ರಿಗೆ ಹೆಚ್ಚಿನ ಅಧಿಕಾರವಿರುವದು. ಈ ಪ್ರಕಾರ ಹಿಂದುಸ್ಥಾನಕ್ಕೆ ಸ್ವರಾಜ್ಯ ಅರ್ಪಿಸಬೇಕಾಗಿ ಸಾಮ್ರಾಜ್ಯ ಸರಕಾರವು ಕಳೆದ ವರ್ಷ ಸಂಕಲ್ಪಿಸಿತ್ತು, ಆ ಸಂಕಲ್ಪವನ್ನು ಈಗಿನ ಪ್ರಧಾನ ಮಂಡಳವು ಎತ್ತಿ ಹಿಡಿಯುತ್ತದೆ. ಸಂಸ್ಥಾನಗಳೂ, ಬ್ರಿಟಿಶ ಹಿಂದುಸ್ಥಾನವೂ ಒಂದಾಗಿ ಸಂಯುಕ್ತ ರಾಜ್ಯ ಪದ್ಧತಿಯನ್ನು ನಿರ್ಮಿಸಬೇಕೆಂಬುದು ಸಾಮ್ರಾಜ್ಯ ಸರಕಾರದ ಅಭಿಪ್ರಾಯವಾಗಿದೆ. ಸಂಸ್ಥಾನಗಳೊಪ್ಪುವ ಮಾತುಗಳೆಲ್ಲ ಪಾರ್ಲಿಮೆಂಟಿನಲ್ಲಿ ಮಂಜೂರಿ ಹೊಂದುವವು.

ಈ ಅಂಗದಿಂದ ನಾವು ಚರ್ಚೆ ನಡಿಸುತ್ತಿದ್ದೇವೆ. ಅದರಿಂದ ಅನೇಕ ಕಠಿಣ ಪ್ರಶ್ನೆಗಳು ಬಿಡಿಸಲ್ಪಟ್ಟವು. ಇನ್ನು ಅನೇಕ ಪ್ರಶ್ನೆಗಳನ್ನು ಬಿಡಿಸಬೇಕಾಗಿದೆ. ಅಲ್ಪಸಂಖ್ಯಾಕರ ಪ್ರಶ್ನೆಯು ಇತ್ಯರ್ಥವಾಗಲಿಲ್ಲ. ಕಾರಣ ಕಾಯಿದೆ ಕೌನ್ಸಿಲು ಹಾಗು ಕಾರ್ಯಕಾರಿ ಮಂಡಳದ ಘಟನೆ ನಿರ್ಣಯವಾಗಲಿಲ್ಲ. ಸಂಸ್ಥಾನಿಕರೂ ಮನೋನಿಶ್ಚಯ ಮಾಡಲಿಲ್ಲ. ಈಗೆ ಚರ್ಚೆಯಲ್ಲಿ ತೋರಿದಂತೆ ಭಿನ್ನ ಭಿನ್ನ ಮತಸಂಘಗಳಿಂದ ಐಕ್ಯಮತ್ಯ ಮಾಡಲು ಒಂದು ಕ್ರಮವನ್ನು ಯೋಜಿಸಬೇಕಾಗಿದೆ. ಈಗಲೇ ಇದನ್ನು ನಿಶ್ಚಯಿಸದಿದ್ದರೆ ಮುಂದೆ ಗೊಂದಲವಾಗಿ ಲೋಕಕ್ಕೆ ಅಹಿತವಾಗುವದು. ಹಿಂದೆ ಕಮಿಶನಂತೆ ನಾವು ಒಕ್ಕಟ್ಟಿನಿಂದ ರಾಜ್ಯಘಟನಾಮಂದಿರವನ್ನು ನಿಲ್ಲಿಸಬೇಕಾಗಿದೆ. ಹೀಗೆ ಜಾಗ್ರತೆಯಿಂದ ಕೆಲಸ ನಡಿಸುವದು ನಮ್ಮ ಕರ್ತವ್ಯ.

ಹಾಗಾದರೆ ಈಗಿನ ವ್ಯವಹಾರಿಕ ಕಾರ್ಯಕ್ರಮ ಏನು? ಒಳ ಇಮಾರತಿನ ಕಾರ್ಯಭಾಗವಾಗದು. ಹಿಂದೆ ಹೇಳಿದ ಜಾಹೀರನಾಮೆಗಳಿಂದಲೇ ಈ ಮಾಡಿದ ಪ್ರತಿಜ್ಞೆ ಕಡಿಮೆಯಾಗದು. ಸಾಮ್ರಾಜ್ಯ ಸರಕಾರದಲ್ಲಿ ಲೋಕಶ್ರದ್ಧೆಯುಂಟಾಗುವಂತೆ ಈಗ ನಾವು ಕೆಲಸ ಮಾಡಿ ತೋರಿಸಬೇಕು. ಗವ್ಹರ್ನರರಿದ್ದ ಪ್ರಾಂತಗಳಲ್ಲಿ ಕಾಯಿದೆ ಕೌನ್ಸಿಲುಗಳ ಪರಮಾವಧಿಯ ಸ್ವಾತಂತ್ರ್ಯ ಸಿಗುವದು. ಕೌನ್ಸಿಲಿಗೆ ಒಪ್ಪಿಸಿದ ಅಧಿಕಾರದಲ್ಲಿ ಹೊರಗಿನಿಂದ ಯಾವದೇ ಪ್ರತಿಬಂಧವಿರಲಿಕ್ಕಿಲ್ಲ. ಪರಮಾವಧಿ ಸ್ವಾತಂತ್ರ್ಯ ಸಿಕ್ಕರೂ ಗಡಿನಾಡಿನಲ್ಲಿ ಕಮಿಶನರ ಬದಲಿಗೆ ಗವ್ಹರ್ನರರಿಗೆ ನೇಮಿಸಿ, ಇತರ ಪ್ರಾಂತಗಳಂತೆ ಅಲ್ಲಿಯೂ ಅಧಿಕಾರ ಕೊಡಲ್ಪಡುವದು. ಗಡಿನಾಡಿನ ಭದ್ರತೆಗಾಗಿ ಅವಶ್ಯವುಳ್ಳ ಅಧಿಕಾರಗಳು ಗವ್ಹರ್ನರರಿಗೆ ಕೊಡಲ್ಪಡುವವು. ಸಿಂಧ ಪ್ರಾಂತಕ್ಕೆ ಖರ್ಚು ಸಹಿಸುವ ಸಾಮರ್ಥ್ಯವಿದ್ದರೆ, ಪ್ರತ್ಯೇಕ ಪ್ರಾಂತವಾಗಿ ಅದು ಘಟಿಸಲ್ಪಡುವದು.

ಇವೆಲ್ಲ ಕಾರ್ಯವನ್ನು ೧-೨ ತಿಂಗಳಲ್ಲಿ ಸಾಧಿಸಬರದು. ಅದಕ್ಕಾಗಿ ಬಹಳ ದುಡಿಯಬೇಕು, ಕರಾರುಗಳಾಗಬೇಕು, ಮತಪಟ್ಟಿಕೆಯಾಗಬೇಕು. ಪ್ರಾಂತಾಧಿಕಾರ ಮಾತ್ರ ಹಿಂದೀಯರಿಗೆ ಕೊಡಲ್ಪಡುವದು. ಆದರೆ, ಇಷ್ಟರಿಂದ ತೃಪ್ತಿಯಿಲ್ಲದ್ದರಿಂದ ಹಿಂದುಸ್ಥಾನ ಸರಕಾರದಲ್ಲಿ ಸಹ ಅಧಿಕಾರ ಕೊಡುವಂತೆ ತ್ವರ್ಯವೇ ವ್ಯವಸ್ಥೆಯಾಗುವದು. ಅಲ್ಪಸಂಖ್ಯಾಕರ ಪ್ರಶ್ನೆಯನ್ನು ಬಗೆಹರಿಸುವದಕ್ಕಾಗಿ ನಾವು ಬಹಳ ಪ್ರಯತ್ನಪಟ್ಟೆವು, ಅದು ಸಾಧ್ಯವಾಗಲಿಲ್ಲ. ನಿಮ್ಮೊಳಗೆ ಐಕ್ಯಮತ್ಯವಾಗದಿದ್ದರೆ ಹಿಂದುಸ್ಥಾನ ಸರಕಾರವು ಒತ್ತಾಯದಿಂದ ಇದನ್ನು ನಿರ್ಣಯಿಸುವದು. ಆದ ಕಾರಣ ಇದನ್ನು ನಿಮ್ಮೊಳಗೇ ನಿರ್ಣಯಿಸಿಕೊಳ್ಳಬೇಕು. ಮುಂದಿನ ಕಾರ್ಯ ಮಾಡುವದಕ್ಕಾಗಿ ಒಂದು ಕಾರ್ಯಕಾರಿ ಮಂಡಳವು ಏರ್ಪಡಿಸಲ್ಪಡುವದು. ಈ ಮಂಡಳದವರು ವಿಚಾರ ಮಾಡಿ ಸೂಚನೆಗಳನ್ನು ತಯಾರಿಸಬೇಕು. ಇವು ಸರ್ವಾಧಿಪತಿಗಳ ಆಲೋಚನೆಯಿಂದ ಹಿಂದುಸ್ಥಾನದಲ್ಲಿ ಕೆಲಸ ನಡಿಸಬೇಕು. ಉದ್ದುದ್ದ ಭಾಷಣಗಳಿಂದ ಪ್ರಯೋಜನವಿಲ್ಲ. ಸಮಿತಿಯವರೊಳಗೆ ಮಾತನಾಡಿ ನಿರ್ಣಯ ಮಾಡಬೇಕು. ಈ ಮಂಡಳದವರು ಮತಾಧಿಕಾರ, ಮತದಾರ ಮಂಡಳ, ಕಂದಾಯ, ಸಂಸ್ಥಾನಗಳ ಸಂಬಂಧಗಳನ್ನು ವಿಚಾರಿಸುವರು. ಈ ಮಂಡಳದ ಅಧ್ಯಕ್ಷಸ್ಥಾನವನ್ನು ದಕ್ಷ ಬ್ರಿಟಿಶರೇ ವಹಿಸುವರು. ಇವರು ನಿಮ್ಮ ಭಾಷಣಗಳನ್ನು ವಿಚಾರಿಸಿ ಸೂಚನೆಗಳನ್ನು ತಯಾರಿಸುವರು. ಸಂಸ್ಥಾನಿಕರೊಡನೆ ಆಲೋಚಿಸುವರು, ಅವರಿಗೆ ತಕ್ಕ ಬುದ್ಧಿ ಹೇಳುವರು ಮತ್ತು ಸಂಯುಕ್ತ ರಾಜ್ಯಘಟನೆಗೆ ಅನುಕೂಲವಾಗಿ ಸೂಚನೆ ಮಾಡುವರು. ಅವನ್ನೆಲ್ಲ ಕೇಳಿಕೊಂಡ ಬಳಿಕ, ಪುನಃ ರೌಂಡ ಟೇಬಲಿನ ಹಿನ್ನೇ ಪರಿಷತ್ತು ಜರುಗುವದು. ಆಗ ಅವರು ತಯಾರಿಸಿದ ಯೋಜನೆಯು ನಮಗೆಲ್ಲರಿಗೂ ಆಲೋಚನೆ ಮಾಡದೊರೆಯುವದು. ಈ ಕಮಿಟಿಯಲ್ಲಿ ಬಹಳ ಜನರಿರಲಿಕ್ಕಿಲ್ಲ.

ಅಲ್ಪಸಂಖ್ಯಾಕರ ಪ್ರಶ್ನೆ ಬಿಡಿಸುವಾಗ ಒಂದು ಜಾಗ್ರತೆ ಕೊಡಬೇಕು. ಕಾಯಿದೆ ಕೌನ್ಸಿಲುಗಳಲ್ಲಿ ಅವರಿಗೆ ಸಿಗತಕ್ಕ ಸಭಾಸದರ ಸಂಖ್ಯಾನಿರ್ಣಯಿಸಿದರಾಗದೆ, ಎಲ್ಲ ಹೊಸ ರಾಜ್ಯಕಾರಭಾರದಲ್ಲಿ ಸಮಸ್ತರೂ ಸುರಕ್ಷಿತರೆಂದು ಭಾವಿಸಬೇಕು. ಬಹುಸಂಖ್ಯಾಕರು ಅವರಿಗೆ ಯಾವದೇ ಪ್ರಕಾರದಿಂದ ಅಹಿತ ಬಗೆಯಬಾರದು. ಹಾಗೆ ಸರಕಾರವು ಕೊಡಬೇಕಾದ ಮುಂಜಾಗ್ರತೆಗಳನ್ನು ತಾನೆಂದು ಸಾಮ್ರಾಜ್ಯ ಸರಕಾರವು ಈಗಲೇ ವಿವರ ಮಾಡಬಾರದು. ಅವನ್ನು ವಿಚಾರಾಲೋಚನೆಯಿಂದ ಕಲ್ಪಿಸಬೇಕು. ಕಾರ್ಯಕಾರಿ ಕಮಿಟಿಯವರು ಇವನ್ನು ಪರಾಂಬರಿಸಬೇಕು.

ಇಂಥ ಪರಿಷತ್ತುಗಳಿಂದ ಬಹಳ ಪ್ರಯೋಜನವಾಗುತ್ತದೆ, ನಮ್ಮ ಅಡಚಣೆಗಳ ಗ್ರಹಿಕೆಯಾಗುತ್ತದೆ. ಹಿಂದುಸ್ಥಾನದ ಮಹಾ ದೊಡ್ಡ ಪ್ರಶ್ನೆಯ ಅರಿವು ಪರಿಷತ್ತಿನಿಂದ ಉಂಟಾಯಿತು. ಸಂಕಟಗಳನ್ನು ಪರಿಹರಿಸುವದಕ್ಕಾಗಿ ಎಲ್ಲರೂ ಪ್ರಯತ್ನ ಪಡಬೇಕು. ಸಂಕಟಗಳಿಗೆ ನಾವು ಹೆದರಲಾಗದು. ಅವನ್ನು ಪರಿಹರಿಸುವದೇ ಮಾನವಕೋಟಿಯ ಧರ್ಮ, ಮಾನವಕೋಟಿಯ ಉದ್ಧಾರವಾಗುವ ಬಗೆಯೇ ಹೀಗೆ, ಎಂದೆಣಿಸಿ ನಾವು ನಮ್ಮ ಕಾರ್ಯಕ್ಕೆ ತೊಡಗುವಾ. ನನಗೆ ಪರಿಷತ್ತುಗಳ ಅನುಭವವಿದೆ, ಮುಂದೆ ಮುಂದೆ ಬಹಳ ಎಡರುಗಳು ತಲೆದೋರುತ್ತವೆ, ಮನುಷ್ಯನು ನಿರಾಶನಾಗುತ್ತಾನೆ, ಆದರೆ, ಅನಪೇಕ್ಷಿತವಾಗಿ ಮಾರ್ಗ ಸೂಚಿಸುತ್ತದೆ, ಧ್ಯೇಯವು ಕಣ್ಣಿಗೆ ಕಾಣುತ್ತದೆ, ಹೀಗೆಯೇ ನಮಗೆ ಅನುಭವ ದೊರೆಯಲೆಂದು ನಾನು ಪ್ರಾರ್ಥಿಸುತ್ತೇನೆ.

“ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ಬೇಕಾಗಿಲ್ಲ!”

ಮೇಲ್ಕಂಡ ಭಾಷಣವು ಮಂಗಳವಾರ ರಾತ್ರಿ ೭॥ ಘಂಟೆಗೆ ಮುಗಿಯಿತು. ಬುಧವಾರ ಪಾರ್ಲಿಮೆಂಟಿನ ಸಭೆಯಲ್ಲಿ ಇದನ್ನು ಮಂಜೂರ ಮಾಡಬೇಕಾಗಿ ಮುಖ್ಯ ಪ್ರಧಾನರು ಸೂಚಿಸಿದರು. ಈ ಧೋರಣದಂತೆ ನಡೆದರೆ ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ಸಿಗಲಿಕ್ಕಿಲ್ಲವಾಗಿ ಜೂಲಿಕಾರ ಪಕ್ಷದ ಅಧ್ವರ್ಯುಗಳಾದ ಮಿ॥ ಮುಸ್ಸಟಿನ್‌ರವರು ನುಡಿದರು. “ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ಬೇಕಾಗಿಲ್ಲ”ವಾಗಿ ಮಿ॥ ಮೆಕಡೊನಲ್ಡರವರು ನುಡಿದು, ಅವರಿಗೆ ಸುಮ್ಮಗಿರಿಸಿದರು. ಆ ಮೇಲೆ ಮುಖ್ಯ ಪ್ರಧಾನರು ತಮ್ಮ ಧೋರಣವನ್ನು ಮನ್ನಿಸಬೇಕಾಗಿ ಸೂಚಿಸಿದರು. ಇದನ್ನು ಸೂಚಿಸುವಾಗ ಮೊಂಟೆಗ್ಯೂ ಜಾಹೀರನಾಮೆ ಹಿಡಿದು ಸೈಮನ್ ಕಮಿಶನು, ರೌಂಡ ಟೇಬಲುಗಳ ಇತಿಹಾಸವನ್ನು ಮುಖ್ಯ ಪ್ರಧಾನರು ವಿವರಿಸಿದರು. ಹಿಂದುಸ್ಥಾನದ ಪ್ರಶ್ನೆಯನ್ನು ಬ್ರಿಟಿಶರು ಪಕ್ಷಾಭಿಮಾನ ಹಿಡಿದು ಪುರಸ್ಕರಿಸಬಾರದಾಗಿಯೂ, ಸ್ವರಾಜ್ಯದಾನದ ಪ್ರಶ್ನೆಯು ಬಹು ಸಂಕೀರ್ಣವಾದದ್ದೆಂದೂ, ಎಲ್ಲರೂ ಐಕ್ಯಮತ್ಯದಿಂದ ತಮಗೆ ನೆರವಾಗಬೇಕಾಗಿಯೂ ನುಡಿದರು.

ಮಹಾತ್ಮರ ಭಾಷಣ.

ರಾಷ್ಟ್ರೀಯ ಸಭೆಯು ಸಮಸ್ತ ಜನಾಂಗದ ಪ್ರಾತಿನಿಧಿಕ ಸಂಸ್ಥೆ. ಆ ಮಾನ್ಯತೆ ಕಾಂಗ್ರೆಸಿಗೆ ಪರಿಷತ್ತಿನಲ್ಲಿ ಸಿಗಲಿಲ್ಲ. ರಾಷ್ಟ್ರೀಯ ಸಭೆಯ ಮೇಲೆ ನಂಬಿಗೆಯಿದ್ದರೆ

ನಿಜವಾದ ಸ್ವಾತಂತ್ರ್ಯ ಕೊಟ್ಟರೆ, ರಾಷ್ಟ್ರೀಯ ಸಭೆಯು ಇನ್ನೂ ಒಡಂಬಡಿಕೆ ಮಾಡಿ ಕೊಳ್ಳಲು ಸಿದ್ಧವಿದೆ. ಸತ್ಯಾಗ್ರಹಕ್ಕಾಗಿ ನಾನು ಹಂಬಲಿಸುವದಿಲ್ಲ ನಿರುಪಾಯವಾ ದ್ದಲ್ಲಿ ಮಾತ್ರ ಅದನ್ನು ಸಂತೋಷದಿಂದ ಕೈಕೊಳ್ಳುವೆನು.

ಬ್ರಿಟಿಶರಿಗೆ ರಾಷ್ಟ್ರೀಯ ಸಭೆಯ ಪ್ರಾಬಲ್ಯವು ಇನ್ನೂ ಹೊಳೆಯಲಿಲ್ಲ ನಾನು ಬೇಕಾದ ತ್ಯಾಗ ಮಾಡಲು ಸಿದ್ಧನಿದ್ದೇನೆ. ಸಿಧಾರರಿಂದ ಭಾರತೀಯರು ಬರೇ ನಿಷೇಧ ಮಾಡಿದರೆ, ಸ್ವಾತಂತ್ರ್ಯ ಬಯಲಾಗುವದು.

ಹಿಂದು ಮುಸಲ್ಮಾನ ಮೊದಲಾದವರ ಜಗಳಾಟಕ್ಕೆ ಬ್ರಿಟಿಶ ರಾಜ್ಯವೇ ಕಾರಣ.

ಸತ್ಯಾಗ್ರಹಕ್ಕೆ ಯಾವದೇ ಬಲಾಢ್ಯ ಸರಕಾರವು ತಲೆಬಗ್ಗಿಸಲೇ ಬೇಕು!

ರೌಂಡ ಟೇಬಲ್ ಪರಿಷತ್ತಿನ ಜಾಹೀರ ಅಧಿವೇಶನದಲ್ಲಿ ಮಹಾತ್ಮರಿಗೆ ಮಾತನಾಡಬೇಕಾಗಿ ಭಾರತ ಮಂತ್ರಿಗಳಾಗಿದ್ದ ಮಿ| ಬೆನ್‌ರವರೂ, ಶ್ರೀ| ಸಪ್ರೂ ಮೊದಲಾದವರೂ ಆಗ್ರಹ ಮಾಡಿದರು ಆದ ಕ್ಕಾಗಿ ಮಹಾತ್ಮರು ಸೋಮವಾರ ರಾತ್ರಿ ಸ್ವಯಂಸ್ಫೂರ್ತಿಯಿಂದ, ಸಾವಧಾನದಿಂದ, ನಿಗ್ರಹದಿಂದ ಭಾಷಣ ಮಾಡಿದರು ತಮ್ಮಿಂದ ನಿಂತು ಮಾತನಾಡ ದವರಾಗಿ ಮಹಾತ್ಮರು ಅಧ್ಯಕ್ಷರಾದ ಮುಖ್ಯ ಪ್ರಧಾನರಿಗೆ ಅಭಿಮುಖ ನುಡಿದದ್ದೇನಂದರೆ:

“ನನಗೆ ಮಾತಾಡುವ ಮನಸ್ಸಿರಲಿಲ್ಲ ಆದಾಗ್ಯೂ, ರಾಷ್ಟ್ರೀಯ ಸಭೆಯ ಪರವಾಗಿ ಕೊನೆಯ ಮಾತನ್ನು ಹೇಳದಿದ್ದರೆ ನಾನು ಕರ್ತವ್ಯಪರಾಙ್ಮುಖನಾಗುವೆನು. ನನಗೆ ಯಾವ ಪ್ರಶ್ನೆ ಸೋಂಕದು ನನ್ನ ಇಂದಿನ ಭಾಷಣದಿಂದ ಪ್ರಧಾನ ಮಂತ್ರಿಯ ನಿರ್ಣಯದಲ್ಲಿ ಬಿದ್ದ ಪಡಿಯಾಗದು ಎದುರಾಗಿ ಪ್ರಧಾನ ಮಂಡಳದ ಧೋರಣದ ನಿಶ್ಚಯವಾಗಿದೆ. ಹಿಂದೂಸ್ತಾನದ ಭಾವಿ ಭವಿತವ್ಯವನ್ನು ಬರೇ ತರ್ಕದಿಂದ ನಿರ್ಣಯ ಮಾಡಿದರೂ ತರ್ಕಕ್ಕೆ ಯೋಗ್ಯ ಪರಿಸ್ಥಿತಿ ಆದಕ್ಕೆ ತಕ್ಕ ಪರಿಸ್ಥಿತಿಯಿರಬೇಕು ಇಷ್ಟೇ ನಾನು ಹೇಳುತ್ತೇನೆ

“ಈ ಪರಿಷತ್ತಿಗೆ ನಾವೆಲ್ಲ ಬಂದಿರುವ ಉದ್ದೇಶಗಳಲ್ಲಿ ಬಹುಮತದ ಅಭಿಪ್ರಾಯ. ಇಲ್ಲಿಗೆ ಕೆಲವರು ಭಿನ್ನಾಭಿಪ್ರಾಯಪಟ್ಟಿದ್ದಾರೆ' ಹೀಗೆ ಬರೆದ ಭಿನ್ನಾಭಿಪ್ರಾಯಪಟ್ಟವರ ನಿರ್ದೇಶ ಮಾಡಿಲ್ಲ ಈ ಪರಿಷತ್ತಿನಲ್ಲಿ ಬಹುಮತ, ಅಲ್ಪಮತ, ಹೀಗೆ ಕ್ರಮವಿದ್ದ ಲಕ್ಷ್ಯವಿಲ್ಲವಾಗಿ ನನಗೆ ಹೇಳಬೇಕಾಗಿದೆ. ಈ ರೀತಿ ನಾನು ನೋಡುವದಿಲ್ಲ ಆದರೆ, ಬಹುತರವಾಗಿ ಭಿನ್ನಾಭಿಪ್ರಾಯಪಟ್ಟವನು ನಾನೇ ರಾಷ್ಟ್ರೀಯ ಸಭೆಗಾಗಿ ನಾನು ಒಬ್ಬನೇ ನಿರುಪಾಯವಾಗಿ ಭಿನ್ನಾಭಿಪ್ರಾಯಪಟ್ಟೆ ರಾಷ್ಟ್ರೀಯ ಸಭೆಯು ಭಿನ್ನಾಭಿಪ್ರಾಯಪಟ್ಟರೆ, ಪ್ರಚಂಡ ಲೋಕಸಮೂಹದ ಭಿನ್ನಾಭಿಪ್ರಾಯವು. ರಾಷ್ಟ್ರೀಯ ಸಭೆಯು ಕೇವಲ ಲಕ್ಷ ರಷ್ಟು ಲೋಕಪ್ರತಿನಿಧಿಗಳ ಸಂಸ್ಥೆಯಿದೆ ಕೆಲವಷ್ಟಾಗ ನಾನು ಸಂಸ್ಥಾನಿಕರ ಪ್ರತಿನಿಧಿಯೂ, ಸುಶಿಕ್ಷಿತರ ಪ್ರತಿನಿಧಿಯೂ ನಾನು ಜಮೀನದಾರರ ಪ್ರತಿನಿಧಿಯೂ ನಾನೇ. ರಾಷ್ಟ್ರೀಯ ಸಭೆಯು ಭರತ ಭೂಮಿಯೊಳಗಿನ ಸಮಸ್ತ ವರ್ಗದ ಪ್ರಾತಿನಿಧಿಕ ಸಂಸ್ಥೆಯಾಗಿರುತ್ತದೆ ಉಳಿದವರೆಲ್ಲರೂ ಅವರವರ ಸಂಘದ ಪ್ರತಿನಿಧಿಗಳು ರಾಷ್ಟ್ರೀಯ ಸಭೆಯು ಸಮಸ್ತರ ಹಿತಸಂಬಂಧಗಳನ್ನು ರಕ್ಷಿಸುತ್ತದೆ ಕೆಲವರೆ ರಾಷ್ಟ್ರೀಯ ಸಭೆಯು ತಪ್ಪಿರಬಹುದು ಯಾವದೇ ಮಾನವ ಸಂಸ್ಥೆಯು ತಪ್ಪುವಂತೆ ರಾಷ್ಟ್ರೀಯ ಸಭೆಯಾದರೂ ತಪ್ಪಿರುತ್ತದೆ ಆದರೆ, ಸ್ಥಾನಾಂತರಗಳಲ್ಲಿ ನಮ್ಮ ರಾಷ್ಟ್ರೀಯ ಸಭೆಯ ಪ್ರಾಬಲ್ಯವಿರುವದೆಂಬ ಮಾತನ್ನು ಯಾರೂ ಅಲ್ಲಗಳೆಯಲಾರರು ದಿನಾ ರಾಷ್ಟ್ರೀಯ ಸಭೆಯ ಪ್ರಾಬಲ್ಯವು ಹೆಚ್ಚಾಗಿ ಬೆಳೆಯುತ್ತಲಿದೆ. ಕಡುವಿರೋಧಕರು ಸಹ ಒಪ್ಪುವರು ಈ ಪರಿಷತ್ತಿನಲ್ಲಿ ಅನೇಕ ಪಕ್ಷಗಳಂತೆ ರಾಷ್ಟ್ರೀಯ ಸಭೆಯೂ ಒಂದು ಪಕ್ಷವೆಂದು ಎಣಿಸಲ್ಪಟ್ಟಿತು ರಾಷ್ಟ್ರೀಯ ಸಭೆಗೆ ತಕ್ಕ ಮಾನ್ಯತೆ ದೊರೆಯಲಿಲ್ಲ. ಇದರಿಂದ ನನಗೆ ಬೇಸರವಿಲ್ಲ ರಾಷ್ಟ್ರೀಯ ಸಭೆಗೆ ಇದರಿಂದ ಸಂಕಟವಿಲ್ಲ ಆದರೆ, ಪರಿಷತ್ತಿನ ಕಾರ್ಯ ಹಾನಿಯಾಯಿತು ರಾಷ್ಟ್ರೀಯ ಸಭೆಯ ಸಾಮರ್ಥ್ಯವನ್ನು ಬ್ರಿಟಿಶ ಪ್ರಧಾನರಿಗೂ ಬ್ರಿಟಿಶ ಜನಾಂಗಕ್ಕೂ ನಾವು ಮನಗಾಣಿಸಿ ರಾಷ್ಟ್ರೀಯ ಸಭೆಯ ಮನಸ್ಸು ಒಲಿಸಿದರೆ ಮಾತ್ರ ಹಿಂದುಸ್ತಾನದಲ್ಲಿ ಶಾಂತತೆ ನೆಲೆಗೊಳ್ಳುವದೆಂದು ನಮ್ಮಿಂದ ಬಿಂಬಿಸಬಂದಿದ್ದರೆ, ಸರ್ವರಿಗೆ ಒಡಂಬಡಿಕೆಯಾಗಲು ವಿಳಂಬವಾಗುತ್ತಿರಲಿಲ್ಲ. ರಾಷ್ಟ್ರೀಯ ಸಭೆಯು ಪ್ರಚಂಡ ಸಂಸ್ಥೆಯಿದೆ. ಪ್ರತಿ ಸರಕಾರವನ್ನೇ ನಿರ್ಮಿಸುವದಾಗಿ ರಾಷ್ಟ್ರೀಯ ಸಭೆಯ ಮೇಲೆ ಆರೋಪವಿದೆ, ಈ ಆರೋಪವನ್ನು ನಾನು ಒಪ್ಪುತ್ತೇನೆ. ರಾಷ್ಟ್ರೀಯ ಸಭೆಯ ಬೆಂಬಲವನ್ನು ನೀವು ಗ್ರಹಿಸಿದರೆ, ರಾಷ್ಟ್ರೀಯ ಸಭೆಯು ಶಾಸನ ಪಡೆಯದೆ, ಬಲಾತ್ಕಾರ ಮಾಡದೆ ಪ್ರತಿಕೂಲ ಪರಿಸ್ಥಿತಿಯಲ್ಲಿ ಪ್ರತಿಸರಕಾರವನ್ನೇ ಸ್ಥಾಪಿಸಿದ ಮರ್ಮವು ನಿಮಗೆ ತೋರಿಯುವದು ನೀವು ರಾಷ್ಟ್ರೀಯ ಸಭೆಗೆ ನಿಮಂತ್ರಿಸಿದಾಗ್ಯೂ, ರಾಷ್ಟ್ರೀಯ ಸಭೆಯು ಹಿಂದೀ ಜನಾಂಗದ ಪ್ರತಿನಿಧಿಯೆಂದು ನೀವು ಒಪ್ಪುವದಿಲ್ಲ ಅದರ ಮೇಲೆ ನಿಮಗೆ ನಂಬಿಗೆಯಿಲ್ಲ ನೀವದರ ಪ್ರತಿಷ್ಠೆ ಅಕ್ಷೇಪಿಸಬಹುದು. ಆದರೆ ನಾನು ರಾಷ್ಟ್ರೀಯ ಸಭೆಯ ಅಧಿಕಾರವನ್ನು ನಿಮಗೆ ತಿಳಿಸಿಹೇಳದಿದ್ದರೆ ರಾಷ್ಟ್ರೀಯ ಸಭೆಯ ಪ್ರತಿನಿಧಿಯಾಗಲು ಅಯೋಗ್ಯನಾಗುವೆನು

“ರಾಷ್ಟ್ರೀಯ ಸಭೆಯು ದಾದಾಭಾಯಿ ನವರೋಜಿಯವರ ಮುಂಬೈಯ ಕಾಂಗ್ರೆಸ್ಸಿನ ಪರಿಷತ್ತಿನಲ್ಲಿ ಹಿಂದಿಯ ಉಲ್ಲೇಖ ಮಾಡಬೇಕಾದದು ನಾನರಿಂದ್ದೇನೆ ಪರಿಷತ್ತಿನಲ್ಲಿ ಹಿಂದುಸ್ಥಾನಕ್ಕೆ ಸ್ವರಾಜ್ಯ ಕೊಡಬೇಕೆಂದು ಪ್ರತಿನಿಧಿಗಳು ಎದ್ದೆದ್ದು ವಾದಿಸಿದರು, ತರ್ಕದಿಂದ ಸಂಭಾಷಣದಿಂದ ಸ್ವರಾಜ್ಯ ದೊರಕುವದಾಗಿ ಅವರು ಹೇಳಿದರು ತರ್ಕದಿಂದ ಬ್ರಿಟಿಶರು ಹಿಂದುಸ್ಥಾನಕ್ಕೆ ಸ್ವರಾಜ್ಯವನ್ನಿತ್ತರು, ಬ್ರಿಟಿಶ ಜನಾಂಗದ ಕೀರ್ತಿಯು ದಿಗ್ದಿಗಂತದಲ್ಲಿ ಹಬ್ಬುವದು. ತರ್ಕದಿಂದ ಸ್ವರಾಜ್ಯ ಸಿಗುವದೆಂದು ರಾಷ್ಟ್ರೀಯ ಸಭೆಯ ಅಭಿಪ್ರಾಯವಿಲ್ಲ. ಕಾಂಗ್ರೆಸಿನ ಮಾರ್ಗ ಬೇರೆ ಇದೆ ನಿಮಗೆ ನೆನಪು ಇಲ್ಲಿ ನಡೆದ ಭಾಷಣಗಳನ್ನು ನಾನು ಲಕ್ಷಪೂರ್ವಕವಾಗಿ ಕೇಳಿದ್ದೇನೆ ಕಾಯಿದೆ ಉಲ್ಲಂಘಿಸಿದರೆ, ದೊಂಬಿ ಮಾಡಿದರೆ ಅತ್ಯಾಚಾರ ನಡಿಸಿದರೆ ಅನರ್ಥವಾಗುವದೆಂದು ಪ್ರತಿನಿಧಿಗಳು ನುಡಿದರು ನಾನು ಶಾಲೆಯಲ್ಲಿ ಕಲಿಯುತ್ತಿರುವಾಗ ಇತಿಹಾಸವನ್ನು ಓದಿದ್ದೇನೆ ಸ್ವಾತಂತ್ರ್ಯಕ್ಕಾಗಿ ರಾಷ್ಟ್ರಗಳಲ್ಲಿ ಅನೇಕ ಅತ್ಯಾಚಾರಗಳಾಗಿವೆ, ಕೊಲೆಗಳಾಗಿವೆ, ವಿಷಪ್ರಯೋಗಗಳಾಗಿವೆ ಗುಂಡು ಹಾರಿವೆ ಇವನ್ನು ಇತಿಹಾಸಕರ್ತರು ಹೇಳಿಯಲಿಲ್ಲ ಆದರೆ ಇವನ್ನು ಉಲ್ಲೇಖಿಸಿ ಇತಿಹಾಸಪ್ರವೃತ್ತ ಕ್ರಾಂತಿಕಾರಕರ ವರ್ತಿಲಿ ಮಾಡುತ್ತೇನೆಂದು ನೀವು ಗ್ರಹಿಸಲಾಗದು

“ರಾಷ್ಟ್ರೀಯ ಸಭೆಯು ರಣಕ್ಷೇತ್ರದಲ್ಲಿನ ಇತಿಹಾಸದಲ್ಲಿ ಕಾಣದ ಹೊಸ ಮಾರ್ಗವನು ಹುಡುಕಿದೆ ಆ ಮಾರ್ಗವೆಂದರೆ, ಸತ್ಯಾಗ್ರಹ ಹಾ ವನೇ ಸರಕಾರವು ಈ ಮಾರ್ಗಕ್ಕೆ ಇಂಬುಗೊಡದು ದು ಬೇಕಾತ್ತಾರೆ ಒಳ್ಳೆಯದು, ಸರಕಾರವು ಇಂಬುಗೊಡದಿದ್ದರೆ ಚಿಂತೆಯಿಲ್ಲ, ಆದರೆ, ಇದಕ್ಕೆ ಸರಕಾರವು ತಲೆಬಗ್ಗಿಸಬೇಕು. ಜೆಮ್ಸಫರ್ಡ ದೊರೆಗಳು ತಲೆಬಗ್ಗಿಸಿದ್ದಾರೆ, ಮುಂಬಯಿ ಗವ್ಹರ್ನರರೂ ತಲೆಬಗ್ಗಿಸಿದ್ದಾರೆ ಸತ್ಯಾಗ್ರಹಕ್ಕೆ ವಿರೋಧ ಮಾಡುವದ ಈ ದಿನಮಾನದಲ್ಲಿ ಕೈಸಾಗದ ಮಾತು ಮುಖ್ಯ ಪ್ರಧಾನರೇ, ನಿಮಗೆ ನಾನು ಈಗಲೇ ಸೂಚನೆ ಕೊಟ್ಟುಬಿಡುತ್ತೇನೆ, ನನ್ನ ದೇಶಕ್ಕೆ ಉಚಿತವಾದ ಸಂಧಾನವನ್ನು ಒದಗಿಸಿ ತರುವದಕ್ಕಾಗಿ ನಾನು ಪರಮಾವಧಿಯ ಪ್ರಯತ್ನಪಡುವೆನು ದೇಶಬಾಂಧವರಿಗೆ, ದೇಶಭಗಿನಿಯರಿಗೆ, ಚಿಕ್ಕ ಮಕ್ಕಳಿಗೆ ಅಗ್ನಿಕುಂಡದಲ್ಲಿ ಪ್ರವೇಶಿಸದಂತೆ ನಾನು ಶಕ್ತಿಮೀರಿ ಉಪಾಯ ಮಾಡುವೆನು ಸತ್ಯಾಗ್ರಹದಂಥ ಸಂಗ್ರಾಮದಲ್ಲಿ ಬಂಧು-ಭಗಿನಿಯರಿಗೆ ಒಯ್ಯಲು ನನಗೆ ಸ್ವಲ್ಪವೂ ಸಮಾಧಾನವಿಲ್ಲ ನಿರುಪಾಯವಾದರೆ, ಉಪಾಯವಿಲ್ಲದಿದ್ದರೆ ಸಂತೋಷಭರಿತನಾಗಿ ನಾನು ಆ ಸಂಗ್ರಾಮವನ್ನು ಪುನಃ ಹೂಡುವೆನು, ಸತ್ಯಪಕ್ಷವೆಂಬ ಭಾವನೆ ಹಿಡಿದು ಸಂಗ್ರಾಮದಲ್ಲಿ ನಡೆಯುವನು ಪರರ ಘಾತಮಾಡಲಿಕ್ಕಿಲ್ಲ, ಆತ್ಮಬಲಿದಾನ ಮಾಡುವೆವು ನಿಮಗೂ ಹಾನಿತಟ್ಟುವದು ಆದರಿಂದ ನಿಮಗೆ ಗ್ರಹಿಕೆಯುಂಟಾಗುವದು ನಮ್ಮ ಮನಸ್ಸು ಒಪ್ಪಂದಕ್ಕೆ ತಯಾರಾಗುವದು ಒಪ್ಪಂದಕ್ಕೆ ಯೋಗ್ಯವಾದ ಸಂಧಿ ಬಂದರೆ ಇಂಗ್ಲಿಷ್ ದೊರೆಗಳು ಬಂದರೆ ಹಿಂದೂಗಳು ರಾಜಕಾರಣವನ್ನು ತೊರೆದು ನಾವೆಲ್ಲರು ಸ್ತ್ರೀ ಪುರುಷರಿಗೂ, ಬಾಲಕರಿಗೂ ಹೇಳಿಸಿ ನಮ್ಮ ಸತ್ವಪರೀಕ್ಷೆ ಮಾಡುತ್ತಾರೆಂಬ ಗ್ರಹಿಕೆಯಾಗಿ, ನಾನು ಒಪ್ಪಂದ ಮಾಡಿಸುವುದೆಂಬ ಆಶೆಯಿಂದ ಇಷ್ಟು ದೂರ ಬಂದೆ ಇನ್ನೂ ಮಿಂಚಿಹೋಗಿಲ್ಲ, ಈಗಲಾದರೂ ರಾಷ್ಟ್ರೀಯ ಸಭೆಯ ಉಂಬೋಣವನ್ನು ತಿಳಕೊಳ್ಳಿ. ನಾನು ಈ ಕಾರ್ಯಕ್ಕಾಗಿ ದೇಹವನ್ನು ನಿಮಗರ್ಪಿಸುತ್ತೇನೆ, ಕಾರ್ಯಕಾರಿ ಮಂಡಳದವರೂ ಅರ್ಪಿಸುತ್ತಾರೆ, ಅಖಿಲ ಭಾರತೀಯ ಕಾಂಗ್ರೆಸ ಕಮೀಟಿಯ ಸಭಾಸದರೂ ಅರ್ಪಿಸುತ್ತಾರೆ ಆದರೆ, ಕೋಟ್ಯಾವಧಿ ದೇಶಬಾಂಧವರನ್ನು ಬಲಿಕೊಡಲಿಕ್ಕೆ ಅವರಿಗಾಗಿ ನಾನು ಶಕ್ತಿಮೀರಿ ದುಡಿಯುವೆನು ಮಹಾರಾಜ

ಯಿಂದ ಸಂಧಾನವಾಗುತ್ತಿದ್ದರೆ, ನಾನು ಬೇಕಾದ ತ್ಯಾಗ ಮಾಡಲು ಸಿದ್ಧನಿದ್ದೇನೆ ನನಗೆ ಸ್ವಾತಂತ್ರ್ಯ ಬೇಕು, ಸ್ವಾತಂತ್ರ್ಯ ಸಿಗುತ್ತಿದ್ದರೆ, ಕಾಂಗ್ರೆಸು ಒಪ್ಪಂದಕ್ಕೆ ಸಿದ್ಧವಿದೆ. ಇದು ದೂರದಲ್ಲಿದ್ದರೆ ರಾಷ್ಟ್ರೀಯ ಸಭೆಯು ಒಡಂಬಡಿಕೆಗೆ ತಯಾರಾಗುವದು. ಅದಕ್ಕೆ ... ವಾತು. ಅದರಿಂದ ಮುಖ್ಯ ಪ್ರಧಾನರೇ ನಮ್ಮೊಳಗಿನ ರಾಜಿಯಾಗುವಂಥ ಸ್ಥಿತಿಯೇ ಉಂಟಾಗಿಲ್ಲ ನನಗೆ ಬ್ರಿಟಿಶರೊಡನೆ ಸಮಾನಸ್ಕಂಧ ನೀತಿಯಿಂದ ವ್ಯವಹಾರ ಮಾಡುವ ಇಚ್ಛೆಯಿದೆ ಇಂಗ್ಲಂಡದಲ್ಲಿ ಬ್ರಿಟಿಶರು ಇರುವಂತೆ, ಹಿಂದುಸ್ಥಾನದಲ್ಲಿ ಹಿಂದೀಯರು ಉಳಿಯಬೇಕು ಗೋಲಮಂಡಳದ ಉತ್ತರಕ್ಕೆ ನಾನು ಈ ಗೆಳೆತನ ಎದುರಿಸುತ್ತೇನೆ ' ಸಮಸ್ತ ಹಿಂದೀಯರಲ್ಲಿ ನೀವೇ ಬ್ರಿಟಿಶರ ... ರುತ್ತೀರಿ, ನಿಮ್ಮ ಅಂಬೋಣದ ಗ್ರಹಿಕೆಯಾಗುತ್ತಿದೆ ' ಹೀಗೆ ನಿಮ್ಮೆಲ್ಲರ ಸಹಪಯಣದ ಮಾನ್ಯ ಆಂಗ್ಲ ಪ್ರಮುಖರೊಬ್ಬರು ನನಗೆ ಬರೆದಿದ್ದಾರೆ ' ನಿಮ್ಮೊಡನೆ ಸ್ನೇಹಭಾವ ಬೆಳೆಸಿದರೆ, ಮಾನವಕೋಟಿಯ ಕಲ್ಯಾಣವಾಗುವದಾಗಿಯೂ' ಅವರೇ ಬರೆಯುತ್ತಾರೆ ಇದು ನನ್ನ ಸ್ತುತಿಯಲ್ಲ, ನನ್ನ ಸ್ತುತಿಯಿಂದ ನಾ ನೆಣಿಸಲಾರೆ ನಾನು ... ನು, ರಾಷ್ಟ್ರಪ್ರತಿನಿಧಿಯೆಂದು ನನಗೆ ಮಾನ್ಯತೆಯಿದೆ ಅದಕ್ಕಾಗಿಯೇ ಆಂಗ್ಲ ಮಾನ್ಯರು ಹಾಗೆ ಬರೆದಿದ್ದಾರೆ ಈ ಗ್ರಹಿಕೆಯಿಂದ ನನ್ನೊಡನೆ ಮಾತು-ಕಥೆ ನಡೆದಿದ್ದರೆ ..

“ ಸಂಧಾನಕ್ಕೆ ಬೇಕಷ್ಟು ಅವಕಾಶವಿದೆ ನನಗೆ ಗೆಳೆತನ ಬೇಕು ... ಜನಾಂಗಕ್ಕೆ ಸ್ವಾತಂತ್ರ್ಯ ಹಿಡಿಯಲು ಕೀಳಾತಕಿಯಾಗುವದನ್ನು ಇಲ್ಲ ಎಲ್ಲರೂ ಒಕ್ಕಟ್ಟಿನವರಾಗಿ ನಿರ್ಧಾರದಿಂದ ನಿರ್ಣಯ ಮಾಡಿದರೆ ಸಾಕು ಅದನ್ನೇ ಹೇಳಲಿಕ್ಕೆ ರಾಷ್ಟ್ರಸಭೆ ಟೊಂಕಕಟ್ಟಿದೆ ಈಗ ಹಿಂದುಸ್ಥಾನ ದೇಶವು ಪಾರತಂತ್ರ್ಯಪಾಶದಿಂದ ಇಂಗ್ಲಂಡಕ್ಕೆ ಒಪ್ಪಿದೆ, ಅದನ್ನು ಸ್ವಾತಂತ್ರ್ಯಪಾಶದಿಂದ ಕಟ್ಟಿಕೊಳ್ಳಲು ನಾನು ಟೊಂಕಕಟ್ಟಿದ್ದೇನೆ ತಪ್ಪಿತಕ್ಕಾಗಿ ನಾನು ಒದರಾಡುವದಿಲ್ಲ ಈಗ ಅಲ್ಲಿಗಳಿಯ ಅಧಿಕಾರಿಗಳು ಸ್ವಾತಂತ್ರ್ಯವನ್ನೇ ಒಪ್ಪಿಗೆಯನ್ನುತ್ತಾರೆ. ಬ್ರಿಟಿಶ ದೇಶವು ಅಯೋಗ್ಯ ಅಧಿಕಾರಿಗಳನ್ನು ತ್ಯಜಿಸಬೇಕು, ಹಿಂದುಸ್ಥಾನವು ಅಯೋಗ್ಯ ಅಧಿಕಾರಿಗಳನ್ನು ತ್ಯಜಿಸಬೇಕು ಇಂಗ್ಲಂಡಕ್ಕೂ ಹಿಂದುಸ್ಥಾನಕ್ಕೂ ಹಿತವಾಗುವಂತೆ ಉಪಾಯಯೋಜನೆ ಮಾಡಬೇಕು. ನಾನು ನಿಷ್ಪಕ್ಷಪಾತನಿದ್ದೇನೆ ಈಶ್ವರ ಸಾಕ್ಷಿಯಾಗಿ ನಾನು ಈ ಮಾತನ್ನು ಹೇಳುತ್ತೇನೆ ನಮ್ಮೊಳಗೆ ಮತಭೇದಗಳಿವೆ, ಕೂಟ ಪ್ರಶ್ನೆಗಳಿವೆ ಆದರೆ, ಅದರಿಂದ ನಾನು ದಿಗಿಲುಬೀಳುವದಿಲ್ಲ, ನಾವು ಅದರೊಳಗೇ ಹುಟ್ಟಿ ಬೆಳೆದಿದ್ದೇವೆ ಈಗಲೂ ಸಂಧಾನಕ್ಕೆ ತಯಾರಿದ್ದೇನೆ ಬ್ರಿಟಿಶರೂ, ನಾ॥ ಶಾಸ್ತ್ರಿ, ಸರ್ ಸಪ್ರು, ಡಾ॥ ಜಯಕರ, ಡಾ॥ ಜಿನ್ನಾ, ಸರ್ ಶಫಿ ಮೊದಲಾದವರು ಬೇಕಾದಷ್ಟು ಬುದ್ಧಿಚಾತುರ್ಯವನ್ನುಪಯೋಗಿಸಿ ಸಂಧಾನದ ಯೋಜನೆಯನ್ನು ತಯಾರಿಸಿಕೊಡಲಿ, ನಾನವನ್ನೆಲ್ಲ ವಿಚಾರಿಸಲು ಸಿದ್ಧನಿದ್ದೇನೆ ಬೇಕಾದಷ್ಟು ಮೆತ್ತಗಾಗಿ ಉಳಕೊಳ್ಳಲು ನಾನೆ ಸಿದ್ಧನಿದ್ದೇನೆ ಸತ್ಯಾಗ್ರಹವನ್ನು ಪುನಃ ಪ್ರಾರಂಭಿಸಬೇಕೆಂದು ನನಗೆ ಲವಲವಿಕೆಯಿಲ್ಲ ದಿಲ್ಲಿಯೊಳಗಿನ ಒಡಂಬಡಿಕೆಯು ಒಪ್ಪಂದವಾಗಬೇಕೆಂದು ನಾನು ಹಂಬಲಿಸುತ್ತೇನೆ ನಾನೀಗ ವಯೋವೃದ್ಧನಾದೆ

(೧ನೇ ಪಾನಿನ ಮೇಲೆ ಮುಂದರಿಸಿದ)

ಕಾನಡಾವೃತ್ತ

ಪ್ರಜಾಪತಿ ಸಂ॥ ಕಾರ್ತಿಕ ಕೃಷ್ಣ ೧೩, ಸೋಮವಾರ

ಸ್ವಾತಂತ್ರ್ಯಹೀನ ಸ್ವರಾಜ್ಯ!

ಮಂಗಳವಾರ ರೌಂಡ ಟೇಬಲಿನ ಮಂಗಳಾರತಿಯಾಯಿತು ಮುಖ್ಯ ಪ್ರಧಾನರಾದ ಮಿ॥ ರೆಮ್ಸೆ ಮೆಕಡೋನಲ್ಡರವರು ಸಾಮ್ರಾಜ್ಯ ಸರಕಾರದ ಪ್ರತಿನಿಧಿಗಳಾಗಿ ಹಿಂದುಸ್ಥಾನಕ್ಕೆ ಕೊಡಮಾಡಿದ ಸ್ವರಾಜ್ಯದ ಸ್ವರೂಪವನ್ನು ಪ್ರಕಟಿಸಿದರು ಆ ಪ್ರಕಟಣೆಯ ತಾತ್ಪರ್ಯವನ್ನು ನಾವು ಬೇರೊಂದೆಡೆ ಕೊಟ್ಟಿರುತ್ತೇವೆ ನಮಗೇನು ಬೇಕೆಂಬುದರ ಅರಿವಾಗಬೇಕೆಂದು ಮಹಾತ್ಮರು ರೌಂಡ ಟೇಬಲ್ ಪರಿಷತ್ತಿನಲ್ಲಿ ಮಾಡಿದ ಭಾಷಣದ ಸಾರಾಂಶವನ್ನೂ ಕೊಟ್ಟಿರುತ್ತೇವೆ ಅವುಗಳ ವಾಚನದಿಂದ ಮೆಕಡೋನಲ್ಡ ಸ್ವರಾಜ್ಯವು ಸ್ವಾತಂತ್ರ್ಯಹೀನವೆಂದು ಸ್ಪಷ್ಟವಾಗುವದು. ಮುಖ್ಯ ಪ್ರಧಾನರ ಭಾಷಣ ಮುಗಿದ ಬಳಿಕ ಮಹಾತ್ಮರು ಮುಖ್ಯ ಪ್ರಧಾನರ ಆಭಾರ ಮನ್ನಿಸಿದರು ' ನಿಮ್ಮ ಭಾಷಣವನ್ನು ಒಂದಲ್ಲ, ಎರಡಲ್ಲ, ಮೂರಾವರ್ತಿ ನಾನು ಪರಾಂಬರಿಸುವೆನು, ಗರ್ಭಿತಾರ್ಥವನ್ನು ತಿಳಕೊಳ್ಳುವೆನು ಆ ಮೇಲೆ ಅಭಿಪ್ರಾಯ ಕೊಡುವೆನು ” ಹೀಗೆ ಮಹಾತ್ಮರು ಹೇಳಿದರು ಮಹಾತ್ಮರು ರಾಷ್ಟ್ರೀಯ ಸಭೆಯ ಪ್ರತಿನಿಧಿಗಳು, ವಿಚಾರವಂತರು, ಸಮಾಧಾನಿಗಳು, ಗಾಬರಿಯಿಂದ ಅವರು ಅಭಿಪ್ರಾಯ ಪ್ರಕಟಿಸರು ಆದರೆ, ನಿಜವಾಗಿ ವಿಚಾರಿಸಿದರೆ, ಮಹಾತ್ಮರ ಅಭಿಪ್ರಾಯ ಪ್ರಕಟವಾಗುವ ಮುಂಚೆಯೇ ರಾಷ್ಟ್ರೀಯ ಸಭೆಯು ಮೆಕಡೋನಲ್ಡ ಸ್ವರಾಜ್ಯವನ್ನು ತಿರಸ್ಕರಿಸುತ್ತದೆಂದು ಇದೀಗಲೇ ಹೇಳಬಹುದು

ಬುಧವಾರ ಪಾರ್ಲಿಮೆಂಟಿನ ಸಭೆಯಲ್ಲಿ ಮೆಕಡೋನಲ್ಡ ಸ್ವರಾಜ್ಯ ಜಾಹೀರನಾಮೆಯ ಕುರಿತು ಚರ್ಚೆಯಾಯಿತು ಆಗ ಮುಖ್ಯ ಪ್ರಧಾನರಾದ ಮಿ॥ ಮೆಕಡೋನಲ್ಡರವರೂ, ಭಾರತ ಮಂತ್ರಿಗಳಾದ ಸರ್ ಹೋರರವರೂ, ವಸಾಹತುಗಳ ಪ್ರಧಾನರಾದ ಸರ್ ಜ್ಯಾನ್ ಸ್ಯಾಮೆನ್‌ರವರೂ ಮಾಡಿದ ಭಾಷಣಗಳಲ್ಲಿ ಹಿಂದುಸ್ಥಾನಕ್ಕೆ ಸಿಕ್ಕ ಸ್ವಾತಂತ್ರ್ಯದ ಅಭಾವ ತೋರಿಸಲ್ಪಟ್ಟಿತು “ ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ಬೇಡ, ವಸಾಹತು ಸ್ವರಾಜ್ಯ ಕೊಡಲಿಲ್ಲ, ಹಿಂದೀಯರಿಗೆ ಸ್ವತಂತ್ರ ಕಾರಬಾರ ನಡಿಸಬರದಂತೆ ಸಂಸ್ಥಾನಿಕರಿಗೆ ಅಧಿಕಾರ ಕೊಡಲ್ಪಡುವದು, ಸೈನ್ಯಾಧಿಕಾರ ದೊರೆಯದು, ಸಂಸ್ಥಾನಿಕರೊಡನೆ, ಪರರಾಷ್ಟ್ರಗಳೊಡನೆ ವ್ಯವಹಾರ ಮಾಡುವ ಸಂಪೂರ್ಣ ಅಧಿಕಾರವು ಬ್ರಿಟಿಶ ಸರಕಾರದ್ದು, ಭಾರತ ಮಂತ್ರಿಗಳಿಗೆ ಸಾಲ ತೆಗೆಯುವ ಅಧಿಕಾರವಿದೆ, ಬ್ರಿಟಿಶ ವ್ಯಾಪಾರಕ್ಕೆ ಸರಕಾರದ ಸಂರಕ್ಷಣವಿದೆ, ಚೌಕಶಿ ಮಂಡಳಗಳಿಂದ ಸ್ವಾತಂತ್ರ್ಯ ದೊರಕದಂತೆ ವಿಸ್ತಾರವಾಗುವದು, ಪಾರ್ಲಿಮೆಂಟಿನ ಸಾರ್ವಭೌಮ ಅಧಿಕಾರಕ್ಕೆ ಎಳ್ಳಷ್ಟು ಬಾಧೆಯಿಲ್ಲ, ಕೊನೆಯ ನಿರ್ಣಯದ ಅಧಿಕಾರವು ಹಿಂದಿನಂತೆ ಮುಂದೆಯೂ ಪಾರ್ಲಿಮೆಂಟಿಗಿರುವದು, ಬ್ರಿಟಿಶ ಜನಾಂಗಕ್ಕೆ ಇದರಿಂದ ಗಂಡಾಂತರವಿಲ್ಲ, ಹಿಂದುಸ್ಥಾನಕ್ಕೆ ಇನ್ನು ಮುಂದ ರಾಜ್ಯಾಧಿಕಾರ ಕೊಡುವದು ಪಾರ್ಲಿಮೆಂಟಿನ ಅಧಿಕಾರಕಕ್ಷೆಯೊಳಗಿನದು, ಇನ್ನು ಮೂರು ವರ್ಷಗಳ ವರೆಗೆ ಚೌಕಶಿ ನಡೆಯುವದು ” ಹೀಗೆ ಪಾರ್ಲಿಮೆಂಟಿನಲ್ಲಿ ಮೆಕಡೋನಲ್ಡರ ಸ್ವರಾಜ್ಯ ಜಾಹೀರನಾಮೆಯ ವಿವರ ಹೇಳಲ್ಪಟ್ಟಿತು ಪಂಡಿತ ಮಾಲವೀಯರವರು ಈ ನಿರ್ಣಯದಿಂದ ಗಾಂಧಿ-ಇರ್ವಿನ್ ಒಡಂಬಡಿಕೆಯು ಧಿಕ್ಕರಿಸಲ್ಪಟ್ಟಿತೆಂದು ದೂರುತ್ತಾರೆ ಗಾಂಧಿ ಇರ್ವಿನ್ ಒಡಂಬಡಿಕೆಯನ್ನು ಮೆಕಡೋನಲ್ಡರ ಹಿಂದಿನ ಪ್ರಧಾನ ಮಂಡಳವೇ ಮಂಜೂರ ಮಾಡಿತ್ತು; ಈಗ ಅದು ಉದ್ದಪ್ಪಟ್ಟಿದೆ ರೌಂಡ ಟೇಬಲ್ ಪರಿಷತ್ತಿನ ದ್ವಿತೀಯ ಅಧಿವೇಶನದಲ್ಲಿ ಆದ ಕಾರ್ಯವೆಂಬುದು ಇದೇ ಈ ಸಮಯ ವಿನೋದಿಗಳೊಬ್ಬರ ಹೇಳಿದ ಕಥೆಯ ನೆನಪಾಗುತ್ತದೆ. ವಿದ್ಯಾರ್ಥಿಯೊಬ್ಬನಿಗೆ ದೃಷ್ಟಿಮಾಂದ್ಯವಿದ್ದಿತು, ಆತನು ಬರೆಯಬೇಕಾದರೆ, ಮೂಗು ಕಾಗದಕ್ಕೆ ಹಚ್ಚಿಕೊಂಡು ಬರೆಯುತ್ತಿದ್ದನಂತೆ, ಮೂಗು ಚೂಪಾಗಿತ್ತು, ಅದರಿಂದ ಲೆಕ್ಕಣಿಕೆಯಿಂದ ಬರೆದದ್ದೆಲ್ಲ ಮೂಗು ಒರಸುತ್ತಿತ್ತು ಅದೇ ಗತಿ ನಮ್ಮ ರೌಂಡ ಟೇಬಲಿಗಾಗಿದೆ. ನುಡಿಗಳೆಲ್ಲ ತುಂಬ ಸ್ವಾತಂತ್ರ್ಯದ್ದು, ಜವಾಬದಾರಿಯದು; ನಡೆ ಮಾತ್ರ ಬೇಜವಾಬದಾರಿಯದು, ಪಾರತಂತ್ರ್ಯದ್ದು. ಈ ಪ್ರಕಾರ ಬ್ರಿಟಿಶ ಮುತ್ಸದ್ದಿಗಳು ಕುಹಕ ಕಣ್ಣುಮುಚ್ಚಾಣಿಕೆಯ ಆಟ ನಡಿಸಿದ್ದಾರೆ! ಇದಕ್ಕೆ ಯಾರೂ ಮೋಸಹೋಗರು ನಿರ್ಮಲಚಿತ್ತದ ಮಹಾತ್ಮರು ವಂಚಿಸಲ್ಪಡುವರೆಂದು ತಿಳಿದವರು, ತಿಳಿಯುವವರು ಕೆಡುಕುಗಾರರು ಮಹಾತ್ಮರು ತಮ್ಮ ಭಾಷಣದಲ್ಲಿ ರಾಷ್ಟ್ರೀಯ ಸಭೆಯ ನಿರ್ಧಾರವನ್ನು, ಸ್ವಾತಂತ್ರ್ಯದ ಲಾಲಸೆಯನ್ನು, ಬ್ರಿಟಿಶರ ಕಪಟ ನಾಟಕವನ್ನು ಮುರಿಯಾಚದೆ ಬೈಲಿಗೆಳೆದು ಅನಿವಾರ್ಯವಾದ ಸತ್ಯಾಗ್ರಹದ ಶಸ್ತ್ರದಿಂದ ದಾಸ್ಯತ್ವವನ್ನು ಅಂತ್ಯಗೊಳಿಸುವೆನಾಗಿ ಬ್ರಿಟಿಶ ಜನಾಂಗಕ್ಕೆ ಎಚ್ಚರಿಕೆ ಕೊಟ್ಟಿರುತ್ತಾರೆ ಆದರೂ, ಮುಖ್ಯ ಪ್ರಧಾನರು ಮಹಾತ್ಮರಿಗೆ ವಂಚಿಸಿ ಚೌಕಶಿ ಮಂಡಳಗಳಲ್ಲಿ ಮಹಾತ್ಮರನ್ನು ಸೇರಿಸಿಕೊಂಡು ರಾಷ್ಟ್ರೀಯ ಸಭೆಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ತಡೆಹಾಕುವ ಕುಹಕದಲ್ಲಿದ್ದರೆಂದು ' ಮುಂಬಯಿ ಕ್ರಾನಿಕಲ್ ' ಪತ್ರಿಕೆಯ ಸುದ್ದಿಗಾರರು ತಿಳಿಸುತ್ತಾರೆ ಇದಕ್ಕೆ ಮಹಾತ್ಮರು ಮರುಳಾಗಲಿಕ್ಕಿಲ್ಲವಾಗಿಯೂ, ಸುದ್ದಿಗಾರರ ಎಂಬೋಣ ಮಹಾತ್ಮರು ಈ ಯೋಜನೆಯ ಸಮಿತಿಯಲ್ಲಿ ಎಷ್ಟಕ್ಕೂ ತಿಳಿಕರು ಸುಮ್ಮನೆ ಕುಹಕ ಮಾ(ಡುವ) ಬ್ರಿಟಿಶ ಪ್ರಧಾನರು ಆತ್ಮದೌರ್ಬಲ್ಯ ಮಾತ್ರ ಪ್ರಕಟಿಸುತ್ತಾರೆ ಈ ಪ್ರಕಾರ ರೌಂಡ ಟೇಬಲಿನ ಇತಿಶ್ರೀಯಾಗಿದೆ. ಆಶೆಯಿದ್ದವರ ಆಶಾತಂತುವು ಹರಿದುಹೋಯಿತು, ಇನ್ನು ಭಾರತೀಯರು ತಮ್ಮ ಸಾಹಸವನ್ನು ಪುನಃ ಪ್ರಾರಂಭಿಸಬೇಕಾಗಿದೆ

ಹಿಂದುಸ್ಥಾನದಲ್ಲಿ ಸ್ಥಿತಿ ನೆಟ್ಟಗಿಲ್ಲ ದಿನೇ ದಿನ ... ಕಂಗೆಡುತ್ತಿದೆ. ಮಾತೃಭೂಮಿಯ ಸ್ವಾತಂತ್ರ್ಯಕ್ಕಾಗಿ ಟೊಂಕಕಟ್ಟಿ ಪ್ರಾಣಾರ್ಪಣ ಮಾಡುವ ಕ್ರಾಂತಿಕಾರಕರಿಗೆ ನಿರ್ದಯದಿಂದ ದಬ್ಬುವದಕ್ಕಾಗಿ ಸರ್ವಾಧಿಕಾರಿಗಳು ಶಾಸನ ಹೊರಡಿಸಿ ಪ್ರಜೆಗಳ ವ್ಯವಹಾರ ನಿಲ್ಲಿಸಿದ್ದಾರೆ ಬೇಕಾದವರ ಸ್ಥಾವರ—ಜಂಗಮ ಜಿಂದಗಿಯನ್ನು ಜಪ್ತ ಮಾಡಬಹುದು; ರಾಜಕೀ

ಗಳನ್ನು ಸ್ವಾಧೀನಪಡಿಸಿಕೊಳ್ಳಬಹುದು. ಶಾಲಾ ಪಾಠಶಾಲೆಗಳ, ಪೇಟೆಪಟ್ಟಣಗಳ ಸ್ವಸ್ಥತೆ ತಪ್ಪಿದ ಊರುಗಳನ್ನು ಸೆರೆಮನೆಗಳಂತೆ ಪರಿಗಣಿಸಲು ಒತ್ತಾಯ ಮಾಡಬಹುದು. ಇದೇ ಬಗೆಯ ದಂಡ ಮಾಡಬಹುದು, ಸಂಶಯ ಹಿಡಿದು ಬೇಕಾದವರನ್ನು ಎಷ್ಟು ತಾಸು ಕೈದಿಯಲ್ಲಿಡಬಹುದು, ಪೋಲೀಸರು ಬೇಕಾದವರ ಅಂಗಝಡತಿ ಮಾಡಬಹುದು. ಪೋಲೀಸರ ವಿಷಯ ಸೈನ್ಯದ ವಿಷಯ ವರ್ತಮಾನಪತ್ರಗಳು ವಾರ್ತೆಗಳನ್ನು ಪ್ರಕಟಿಸಕೂಡದು, ಕ್ರಾಂತಿಕಾರಕರೆಂದು ಪೋಲೀಸರು ಪ್ರಕಟಣೆ ಹೊರಡಿಸಿದವರಿಗೆ ಯಾವುದೇ ಪ್ರಕಾರ ಆಶ್ರಯ ಕೊಡಕೂಡದು, ಅನ್ನ ಕೊಡಲಾಗದು, ನೀರು ಕೊಡಲಾಗದು, ಉಡಿಗೆ-ತೊಡಿಗೆ ಕೊಡಲಾಗದು. ಇದಕ್ಕೆ ತಪ್ಪಿ ನಡೆಯುವವರಿಗೆ ೬ ತಿಂಗಳ ಶಿಕ್ಷೆ, ಜುಲ್ಮಾನೆ ವಿಧಿಸುವ ಪ್ರಕಾರ ಸರ್ವನಿಯಾಮಕತ್ವವನ್ನು ಬಂಗಾಲ ಪ್ರಾಂತದಲ್ಲಿ ಒಬ್ಬರಿಗೆ ಕೊಡಬಂದಿತು, ಈ ಪ್ರಕಾರ ಸರ್ವನಿಯಾಮಕತ್ವವನ್ನು ಬಂಗಾಲ ಪ್ರಾಂತದಲ್ಲಿ ಒಬ್ಬರ ಕೈಯಲ್ಲಿ ಇತ್ತು. ಕೈಕೊಂಡ ಮಾತ್ರ ಗಣ್ಯವಾದುದಿದೆ ಚಿತ್ತಗಾಂಗಿನಲ್ಲಿಂತೂ ಕಂಡವರಿಗೆ ಹಿಡಿಯುತ್ತಾರೆ. ಕಲಕತ್ತೆಯ 'ಲಿಬರ್ಟಿ' ಪತ್ರಿಕೆಯ ಸಂಪಾದಕರು ಬರೆದಿರುವ ಪ್ರಕಾರ, ಪಂಜಾಬ-ಬಂಗಾಲ ಪ್ರಾಂತಗಳೊಳಗಿನ ಮುಖ್ಯ ಮುಖ್ಯಸ್ಥರಿಗೆ ದ್ವೀಪಾಂತರಕ್ಕೆ ಕಳಿಸಲ್ಪಡುವುದಾಗಿ ಲಂಡನದಲ್ಲಿ ಸುದ್ದಿ ಹಬ್ಬಿದುದರಲ್ಲಿ, ಹಿಂದುಸ್ತಾನದಲ್ಲಿ ಹೊಸ ಹೊಸ ಸೆರೆಮನೆಗಳ ನಿರ್ಮಾಣವಾಗುತ್ತಿದೆ. ಪಂಡಿತ ಜವಾಹರಲಾಲರ ಸಂಯುಕ್ತ ಪ್ರಾಂತದಲ್ಲಿ ಕರನಿರಾಕರಣೆಯನ್ನು ತಪ್ಪಿಸುವದಕ್ಕಾಗಿ ಇದೇ ಪ್ರಕಾರದ ಒಂದು ಶಾಸನ ಹೊರಬೀಳಲಿಕ್ಕಿದೆ. ಈ ವಾರದಲ್ಲಿ ಕರವನ್ನು ಬಲಾತ್ಕಾರದಿಂದ ವಸೂಲಮಾಡಿಕೊಳ್ಳುವದಕ್ಕಾಗಿ ಮತ್ತೊಂದು ರಾಜಶಾಸನ ಹೊರಬೀಳುವದಿದೆ. ಗಡಿನಾಡಿನಲ್ಲಿ ಗಫಾರ ಖಾನರ ನಾಯಕತ್ವದಲ್ಲಿ ಗಫಾರಖಾನರ ಖುದಾಯಿ-ಖಿದಮತಗಾರ ಸ್ವಯಂಸೇವಕರನ್ನು ತಡೆಗಟ್ಟಲು ಸರಕಾರ ಹಿಡಿದಿದ್ದಾರೆ ಅವರಿಗೂ ಪ್ರತಿಬಂಧಿಸುವದಕ್ಕಾಗಿ ವಿಶೇಷ ಬಲಾತ್ಕಾರದ ಕ್ರಮ ನಿರ್ಮಾಣಿಸಲ್ಪಡುವದು. ಅಂಥ ದೇಶದಲ್ಲಿಯೂ ಎಷ್ಟು ತರಿಗ ತಂಟೆಯಿದೆ ಎಂಬುದನ್ನು ತಿಳಿದಿದ್ದಾರೆ. ಈ ಸ್ಥಿತಿ ನೋಡಿದರೆ ತಮಗ ಕ್ಷೇಮ ಕಾಣದಿದ್ದಿತಾಗಿ ರಾಷ್ಟ್ರೀಯ ಸಭಾಧ್ಯಕ್ಷರಾದ ಸರದಾರ ವಲ್ಲಭಭಾಯಿಯವರು ನುಡಿಯುತ್ತಾರೆ. ಸಾಮ್ರಾಜ್ಯ ಸರಕಾರದ ಅಂತಸ್ಥ ಹೇತುವೇನು ಎಂಬುದು ತಿಳಿಯಬೇಕಾದರೆ ಹಿಂದುಸ್ಥಾನದ ಮನಸ್ಥಿತಿಯನ್ನು ಕಾಣಿಸಬೇಕಾಗಿಯೂ ಸರಕಾರ ಹೇಳಲ್ಲ. ಹಾಯಿಯವರ ಅಂತರ್ಗತ. ನಮ್ಮ ಮುಂಬಯಿ ಸರಕಾರವು ಸಹ್ಯಗಿರಿ ಬಾರ್ಡೋಲಿಯಲ್ಲಿ ರಾಷ್ಟ್ರೀಯ ಸಭೆಯೊಡನೆ ನಡೆಸಿದ ಅಸಹ್ಯ ಪ್ರಕಾರವಂತು ಹಾಕೋಣ, ಎಲ್ಲಾದ ವಿಷಯ 'ಮೋಹರಾ ಖಂಡಾ ರಹೋ ಹಮಾರಾ!' ಎಂಬ ಧ್ವಜವಂದನೆಯ ಪದ್ಯವನ್ನು ಮುಂಬಯಿ ಸರಕಾರವು ಆಕ್ಷೇಪಿಸಿ, ಅದನ್ನು ರಾಷ್ಟ್ರಪದ್ಯಸಂಗ್ರಹದೊಳಗಿಂದ ತೆಗೆದುಹಾಕಬೇಕಾಗಿ ಮುಂಬಯಿ ಪ್ರಾಂತಿಕ ಕಾಂಗ್ರೆಸ ಕಮೀಟಿಗೆ ಪತ್ರ ಬರೆದಿರುವದಂತೆ. ಇದನ್ನೆಲ್ಲ ನೋಡಿದರೆ, ಕೇಳಿದರೆ ಅತ್ಯಾಚಾರ ಪ್ರವೃತ್ತಿ ಕ್ರಾಂತಿಕಾರಕರನ್ನು ಹಾಗೆ ಸರಕಾರವು ರಾಷ್ಟ್ರೀಯ ಸಭೆಯ ಗೋಣು ಮುರಿಯುವದಕ್ಕಾಗಿ ಹಂಬಲಿಸುತ್ತದೆಂದು ಸ್ಪಷ್ಟವಾಗುತ್ತದೆ. ಇದು ಖಿರೆವೇ? ಕ್ಷೇಮಕಾರಕವೇ? ಎಂಬುದೇ ಪ್ರಶ್ನೆ.

ಅತ್ಯಾಚಾರಿಗಳನ್ನು ಪಟ್ಟ ರಾಜ್ಯ ಮಾಡುವದು ಈ ನ ಕಾಲದಲ್ಲಿ ಅಶಕ್ಯ ಮಾತು ಎಂದೆಂಬಿಗೂ ಸಾಧ್ಯವಾಗದು. ಮಹಾತ್ಮರು ಈ ಸಂಗತಿಯನ್ನು ವಿಲಾಯತಿಯ ವರ್ತಮಾನ ಪತ್ರಿಕಾ ಪ್ರತಿನಿಧಿಗಳ ಸಭೆ ಸೇರಿಸಿ ಹೇಳಿದ್ದಾರೆ, ಇತಿಹಾಸವೂ ಹೀಗೆಯೇ ಸಾಕ್ಷ ಕೊಡುತ್ತದೆ, ಬಲ್ಲವರ ಅನುಭವವಾದರೂ ಇದೇ. ಲಂಡನ್ನಿನೊಳಗಿನ 'ಸ್ಟಾರ' ಪತ್ರಿಕೆಯು ಬ್ರಿಟಿಶ ಜನಾಂಗಕ್ಕೆ ಇದೇ ಪ್ರಕಾರ ಮುಂಜಾಗ್ರತೆ ಕೊಟ್ಟಿದೆ "ಅತ್ಯಾಚಾರಗಳಿಗೆ ಪ್ರತಿಯಾಗಿ ಅತ್ಯಾಚಾರ ಮಾಡುವದರಿಂದ ಕ್ಷೇಮವಿಲ್ಲ, ಇದನ್ನು ತಿಳಿದವರು ಪುನಃ ಅವೇ ಹಾದಿಯನ್ನು ಹಿಡಿಯುವರು" ಈಗ "ಸ್ಟಾರ" ಪತ್ರಿಕೆಯು ಬ್ರಿಟಿಶ ಜನಾಂಗಕ್ಕೆ ಬುದ್ಧಿ ಹೇಳಿ ಅತ್ಯಾಚಾರದಿಂದ ಹಿಂದುಸ್ಥಾನದ ಪ್ರಶ್ನೆಯನ್ನು ಬಿಡಿಸಬಯಸಬಾರದಾಗಿ ಪ್ರಧಾನ ಮಂಡಳಕ್ಕೆ ಸೂಚಿಸಿದೆ "ಹಿಂದುಸ್ಥಾನಕ್ಕೆ ಹೊಟ್ಟೆತುಂಬ ಅನ್ನ ಬೇಕು, ಸ್ವಾಭಿಮಾನದಿಂದ ಮರ್ಯಾದೆಯಿಂದ ಪ್ರಪಂಚ ನಡಿಸಬರಬೇಕು, ಬಡತನ ನೀಗಿಸಲು ಉಪಾಯಯೋಜನೆ ಮಾಡದ, ಬರೇ ಒಂದು ರಾಜ್ಯಘಟನೆ ತಯಾರಿಸಿದ್ದಲ್ಲಿ ಯಶಸ್ಸು ಸಿಗದು" ಹೀಗೆ ಬರೆದಿದೆ 'ಡೇಲಿ ಎಕ್ಸಪ್ರೆಸ್' ಪತ್ರಿಕೆಯು ಬ್ರಿಟಿಶ ಪ್ರಧಾನ ಮಂಡಳಕ್ಕೆ ಮರ್ಮವನ್ನು ಹೇಳಿಕೊಟ್ಟಿದೆ 'ಡೇಲಿ ಎಕ್ಸಪ್ರೆಸ' ಪತ್ರಿಕೆಯು ರಾಷ್ಟ್ರೀಯ ಸಭೆಗೆ ವಿರೋಧವಾದದ್ದು. ರಾಜಪಕ್ಷದ್ದು. ಇಂಥ ಪತ್ರಿಕೆಯು ಸೂಚನೆಯನ್ನು ಸಹ ಪ್ರಧಾನ ಮಂಡಳವು ಧಿಕ್ಕರಿಸಿ, ಬಡತನ ನೀಗಿಸುವ,

ಭಾರತ ಭೂಮಿಯ ಸಂಪದಭ್ಯುದಯ ಮಾಡುವ ವಿಚಾರ ಮಾಡದ, ಬರೇ ದುರಾಶೆ ಹಿಡಿದು ಸ್ವಾರ್ಥ ಸಾಧನೆಗಾಗಿ ಹೊರಡಿಸಿದ ಜಾಹೀರನಾಮೆಯಿಂದ ಪ್ರಯೋಜನ ದೊರೆಯದು. ಸವಿ ಸವಿ ಶಬ್ದಗಳಿಂದ ಹೊಟ್ಟೆ ತುಂಬುವದಿಲ್ಲ, ಒತ್ತಾಯದಿಂದ, ಬಲಾತ್ಕಾರದಿಂದ ಸ್ವಾತಂತ್ರ್ಯಲಾಲಸೆಯು ನಿರ್ನಾಮವಾಗದು. ಬ್ರಿಟಿಶರು ಇದನ್ನರಿತುಕೊಳ್ಳಬೇಕು. ಸ್ವಾತಂತ್ರ್ಯಹೀನ ಸ್ವರಾಜ್ಯದಾನದಿಂದ ಹಿಂದುಸ್ಥಾನಕ್ಕೆ ತೃಪ್ತಿಯಿಲ್ಲ. ಪಟ್ಟಿ ಪಟ್ಟಿ ಹೋಗುವ ದಿನಗಳು ಹಿಂದಾದವು. ಮಹಾತ್ಮರು ಕಳೆದ ಶುಕ್ರವಾರ ಭಾರತ ಮಂತ್ರಿಗಳಾದ ಸರ್ ಸಮ್ಯುಅಲ್ ಹೋರರವರೊಡನೆ ಅಂತರಂಗದಿಂದ ಮಾತನಾಡುವವರಿದ್ದರಂತೆ, ದಬ್ಬಾಳಿಕೆಯ ರಾಜಶಾಸನವನ್ನು ಹಿಂತೆಗೆದುಕೊಳ್ಳುವದಕ್ಕಾಗಿ ಭಾರತ ಮಂತ್ರಿಗಳ ಮನವೊಲಿಸುವವರಿದ್ದರಂತೆ. ಪುನಃ ಮಾತನಾಡುವದಕ್ಕಾಗಿಯೇ ಭಾರತ ಮಂತ್ರಿಗಳು ಮಹಾತ್ಮರಿಗೆ ಆಗ್ರಹದಿಂದ ಮೊನ್ನೆ ಶನಿವಾರ ತನಕ ನಿಲ್ಲಿಸಿಕೊಂಡಿದ್ದರಂತೆ. ಮಹಾತ್ಮರು ಬ್ರಿಟಿಶರಿಗೆ ಕೊನೆತನಕ ಒರೆಗಲ್ಲಿಗೆ ಹಚ್ಚಿ ಅವರ ಅಂತರಂಗ ಪರೀಕ್ಷೆ ಮಾಡಲು ಟೊಂಕಕಟ್ಟಿದ್ದಾರೆ. ಸ್ವಾತಂತ್ರ್ಯಹೀನ ಸ್ವರಾಜ್ಯದ ಜಾಹೀರನಾಮೆಯಲ್ಲಿ ಸ್ವಾತಂತ್ರ್ಯವನ್ನು ನಿರ್ದೇಶ ಮಾಡಲು ಭಾರತ ಮಂತ್ರಿಗಳಿಗೆ ಮಹಾತ್ಮರು ಕೇಳಬಹುದಂತೆ. ಮುಂದೇನೆಂಬುದರ ಕುರಿತು ಎಲ್ಲರೂ ಮಹಾತ್ಮರ ಅನುಜ್ಞೆಯನ್ನೇ ಹಾರೈಸುತ್ತಿದ್ದಾರೆ. ನಾವೂ ಹಾರೈಸುತ್ತಿದ್ದೇವೆ. ಮಹಾತ್ಮರು ಡಿಸೆಂಬರ ತಾ ೩೦ಕ್ಕೆ ತಲ್ಪುತ್ತಾರೆ.

ರೌಂಡ ಟೇಬಲು: ಮುಖ್ಯ ಪ್ರಧಾನರು ಬರುತ್ತಾರೆ!

ಕಾರ್ಯಕ್ರಮದಂತೆ ಶನಿವಾರ ರೌಂಡ ಟೇಬಲಿನ ಜಾಹೀರ ಅಧಿವೇಶನವಾಯಿತು. ಸಂಜೆ ೫ಗಂಟೆಗೆ ಸರ್ ತೇಜಬಹಾದ್ದೂರ ಸಪ್ರು ಮೊದಲಾದ ಹಿಂದೀ ಪ್ರತಿನಿಧಿಗಳಿಗೆ ಹೊಗಳಿ ಮಾತನಾಡಿದರು. ಸಾಯಂಕಾಲ ೭|| ಘಂಟೆಯ ತನಕ ಭಾಷಣಗಳು ನಡೆದವು. ಸ ಮಾರು ೩೩ ಜನರು ಭಾಷಣ ಮಾಡಿದರು. ಸೋಮವಾರ ಮಧ್ಯಾಹ್ನ ಪುನಃ ಸಭೆ ಸೇರಿತು. ರಾ|| ಜಯಕರ, ಸರ್ ಸಪ್ರು, ಡಾ|| ಮುಂಜೇ, ರೀಡಿಂಗ ಮೊದಲಾದವರು, ಶ್ರೀ ಸರೋಜಿನಿ ನಾಯಡು, ಡಾ|| ರಫತ ಅಹಮ್ಮದ ಮೊದಲಾದವರ ಭಾಷಣಗಳಾದವು. ಆ ದಿನ ಮಹಾತ್ಮರು ಮಾತನಾಡುವವರಿದ್ದರು. ಬೇರೆ ಬೇರೆ ರಾಷ್ಟ್ರಗಳೊಳಗಿನ ಪತ್ರಿಕಾ ಪ್ರತಿನಿಧಿಗಳು ಆತ್ಯಾತುರದಿಂದ ಮಹಾತ್ಮರ ವಚನ ಕೇಳಲು ಉತ್ಸುಕರಾಗಿದ್ದರು. ರಾತ್ರಿ ೧೦|| ಘಂಟೆಯ ತರುವಾಯ ಮಹಾತ್ಮರು ಭಾಷಣಮಾಡಿದರು. ಆ ಭಾಷಣದ ತಾತ್ಪರ್ಯ ಬೇರೊಂದಡೆ ಕೊಟ್ಟಿದೆ. ಮಹಾತ್ಮರ ಭಾಷಣವಾದ ಬಳಿಕ, ಪಂಡಿತ ಮದನಮೋಹನ ಮಾಲವೀಯರವರ ಭಾಷಣವಾಯಿತು. ಸ್ವರಾಜ ಸ್ಥಾಪನೆಯ ವಿಚಾರ ಸಾಧಿಸದೇ ಹಿಂದುಸ್ಥಾನಕ್ಕೆ ಸಮಾಧಾನವಿರಲಿಕ್ಕಿಲ್ಲವಾಗಿ ಮಾಲವೀಯರವರು ಒತ್ತಿ ಹೇಳಿದರು. ಮಂಗಳವಾರ ಪುನಃ ಭಾಷಣಗಳು ನಡೆದವು. ಮುಖ್ಯ ಪ್ರಧಾನರು ಪ್ರಧಾನ ಮಂಡಳದ ಕೊನೆಯ ಸಭೆ ಸೇರಿಸಿ ರಾತ್ರಿ ೧೧|| ಘಂಟೆಯ ತನಕ ತಮ್ಮ ಭಾಷಣದ ಒಕ್ಕಣಿಕೆಯನ್ನು ತಯಾರಿಸಿದರು. ಮರು ರಾತ್ರೆಗೆ ರೌಂಡ ಟೇಬಲ್ ಪರಿಷತ್ತಿಗೆ ಬಂದು ಜಾಹೀರನಾಮೆಯನ್ನು ಓದಿದರು. ಈ ಜಾಹೀರನಾಮೆ ಬೇರೊಂದೆಡೆ ಕೊಟ್ಟಿದೆ. ಮುಖ್ಯ ಪ್ರಧಾನರ ಭಾಷಣವಾದ ಬಳಿಕ, ಮಹಾತ್ಮರು ಸಭಾಪತಿಗಳಾದ ಮುಖ್ಯ ಪ್ರಧಾನರ ಆಭಾರ ಮನ್ನಿಸಿದರು. "ನಾನೀಗ ಬ ಹಣದ ಮೇಲೆ ಟೀಕೆ ಮಾಡಬಯಸುವದಿಲ್ಲ, ಕ್ಲಿಷ್ಟ ಕಾಲದಲ್ಲಿ ಕೆಲಸ ಮಾಡಲು ಬ್ರಿಟಿಶರಿಂದ ನಾವು ಕಲಿಯಬೇಕು. ಮುಖ್ಯ ಪ್ರಧಾನರು ಅವಿಶ್ರಾಂತ ದುಡಿದಿದ್ದಾರೆ, ನನಗೂ, ಪಂಡಿತ ಮಾಲವೀಯರವರಿಗೂ, ನಾ|| ರಾಷ್ಟ್ರಿಗಳವರಿಗೂ ದಣಿಸಿದ್ದಾರೆ. ನನ್ನ ಮಾರ್ಗ ಯಾವದೆಂದು ನನಗೀಗ ಸೂಚಿಸದು. ಬೇರೆಯಾ ಸರಿದಿರುವದಾದ ಮಾರ್ಗಕ್ರಮಣ ಮಾಡುವ ಪ್ರಸಂಗ ಬಂದೊದಗಿದಾಗ್ಯೂ, ನೀವು ಆಭಾರಮನ್ನಣೆಗೆ ಪಾತ್ರರು ಇದ್ದೀರಿ" ಸರ್ ಅಬ್ದುಲ್ ಕೈಯೂಮರವರು ಇದಕ್ಕೆ ಅನುಮೋದಿಸಿದ ಬಳಿಕ, ಮುಖ್ಯ ಪ್ರಧಾನರು ಮಹಾತ್ಮರಿಗೆ ಕರುಣೆಯಿಂದ ಹರಸಿದರು. ರಾತ್ರಿ ೧೨ ಘಂಟೆಗೆ ಮಹಾತ್ಮರು ತರುಣರೊಂದು ಮಾತನಾಡಿದರೆಂದು ಹೇಳಲಾಗಿದೆ. ಇತ್ತಾದ ಬಳಿಕ ರೌಂಡ ಟೇಬಲಿನ ದ್ವಿತೀಯ ಅಧಿವೇಶನದ ಸಭಾಕಾರ್ಯವು ರಾತ್ರಿ ೨|| ಘಂಟೆಗೆ ಪರಿಸಮಾಪ್ತಿ ಹೊಂದಿತು. ಮುಖ್ಯ ಪ್ರಧಾನರು ಮಹಾತ್ಮರಿಗೆ ಕೊನೆಯ ಹಸ್ತಾಂದೋಲನ ಮಾಡಿ ಅಪ್ಪಿಕೊಳ್ಳುವಾಗ ಇಬ್ಬರೂ ಪರಸ್ಪರ ದಿಟ್ಟಿಸಿ ನೋಡಿದರು. ನಕ್ಕಾಗಿ ಮಾತನಾಡಿದರು.

ಹಿಂದುಸ್ಥಾನದಲ್ಲಿ ಚೌಕಶಿ ಮಾಡುವದಕ್ಕಾಗಿ ಮುಖ್ಯ ಪ್ರಧಾನರೂ, ಸರ್ ಜ್ಯೋನ್ ಸ್ಯಾಮನ್‌ರೂ, ಇತರ ಪ್ರಧಾನರೂ ಜನವರಿ ತಿಂಗಳಲ್ಲಿ ಬರುವರು. ಪ್ಲಾಕಿ ಕಾಂಗ್ರೆಸ ಕಾರ್ಯಕಾರಿ ಮಂಡಳದೊಡನೆ ಆಲೋಚಿಸಿದನಕ ಸತ್ಯಾಗ್ರಹದ ವಿಚಾರ ಮಾಡಲಿಕ್ಕಿಲ್ಲವಾಗಿ ಮಹಾತ್ಮರು ನುಡಿದರು. ಮಹಾತ್ಮರು ಮೊನ್ನೆ ಶನಿವಾರ ಬೆಳಿಗ್ಗೆ ಇತ್ತ ಹೊರಡುವವರಿದ್ದರು.

ಸ್ಥಾನಿಕ ವೃತ್ತಾಂತ

ಕುಮಟಾ— [illegible]

[illegible]

ಭಟಕಳ— [illegible]

[illegible]

ಹೊನ್ನಾವರ— [illegible]

[illegible]

ಶಿರಸಿ— [illegible]

[illegible]

ಸಿದ್ದಾಪುರ— [illegible]

[illegible]

ಕುಂಭಾರವಾಡ— [illegible]

ಕಾರವಾರ— [illegible]

Wanted.

Wanted a Graduate with a fu[ll] knowledge of Cooperation and Economics for the post of a Propaganda Officer on Rs 40/- per mensem plu[s] allowance. Fluency of speech i[n] Kanarese and Marathi or Konkan[i] is essential. Applications to reach th[e] under-signed by the 15th Decembe[r] 1931 with testimonials. Selecte[d] candidates will be called for a[n] interview.

Kumta 30-11-31

M D. Kulkarni,
President,

Karara District Co-operative Institute, Kumta

ಕರ್ನಾಟಕದ ಸಮ್ಮೇಲನಗಳು.

ಕಾರವಾರ. ೧೯೩೧.

(೧) ಕನ್ನಡ ನುಡಿಯ ೧೭ನೇ ಹಬ್ಬ

(೨) ಕವಿಗಳ ಗೋಷ್ಠಿ

(೩) ಹಂಚಿದ ನಾಡು ಕೂಡಿಸುವ ಕಣ

ಡಿಸೆಂಬರದ ಕೊನೆಯ ನಾಲ್ಕು ದಿವಸ ಉತ್ತರ ಕನ್ನಡದವರು ೧೭ನೇಯ ಕರ್ನಾಟಕ ಸಾಹಿತ್ಯ ಸಮ್ಮೇಳನವನ್ನು ಕವಿಗಳ ಗೋಷ್ಠಿಯನ್ನೂ ಕರ್ನಾಟಕ ಏಕೀಕರಣ ಪರಿಷತ್ತನ್ನೂ ಕಾರವಾರದಲ್ಲಿ ನೆರವೇರಿಸುವರು

ಸಾಹಿತ್ಯ ಸಮ್ಮೇಳನಕ್ಕೆ ಮು ಖಾಸ್ತ ಕಿವರಾಯರು ಸ್ವಾಗತಾಧ್ಯಕ್ಷರೂ ಶ್ರೀಮಾನ್ ಪಂಜೆ ಮಂಗೇಶರಾಯರು ಅಧ್ಯಕ್ಷರೂ ಆಗಿರುವರು. ಕವಿಗೋಷ್ಠಿಗೆ ಸ್ವಾಗತ ಮಾಡುವವರು ಮ. ದೇಸಾಯಿ ದಿವಾಕರರಾಯರು. ಅದಕ್ಕೆ ಹಿರಿಯರಾಗಬೇಕೆಂದು ಶ್ರೀಮಾನ್ ಮುಳಿಯ ತಿಮ್ಮಪ್ಪಯ್ಯ ನವರಿಗೆ ಬಿನ್ನವಿಸಿ ಬರೆದಿದ್ದೇವೆ. ಏಕೀಕರಣ ಸಭೆಗೆ ಹಿರಿಯರಾಗಿ ಕೊಳ್ಳುವವರು ಮ। ಸಿದರಿಸ್ ಸಿಲ್ವಾ ವಕೀಲರು ಅದಕ್ಕೆ ಅಧ್ಯಕ್ಷರು ಶ್ರೀಮಾನ್ ಜೇ. ಸಿ. ಲ್ಯಾಂಸಾಹೇಬರು

ಬೆಳಗಾವಿಯಿಂದಲೂ, ಧಾರವಾಡದಿಂದಲೂ, ಹುಬ್ಬಳ್ಳಿಯಿಂದಲೂ ಬಸ್ಸುಗಳು ಮುಂಜಾವದ ೯ ಘಂಟೆಗೆ ಹೊರಟು ಸಂಜೆಗೆ ಇಲ್ಲಿಗೆ ಬರುತ್ತವೆ. ಬೆಳಗಾವಿಯಿಂದ ಕಾರವಾರಕ್ಕೆ ೧೫೦ ಮೈಲು (ಬಸ್ಸಿನ ಬಾಡಿಗೆಯು ದರ ೫ ರೂ) ಧಾರವಾಡದಿಂದ ೧೦೬ ಮೈಲು, (ದರ ೪ ರೂ) ಹುಬ್ಬಳ್ಳಿಯಿಂದ ೧೦೩ ಮೈಲು (ದರ ೩ ರೂ) ಕ್ರಿಸ್ಮಸ ರಜೆಯ ನಿಮಿತ್ತವಾಗಿ ಬರಬೇಕೆನ್ನುವವರೂ, ಬಸ್ಸಿನವರೂ ಮೋಟಾರಿನವರೂ ಬಾಡಿಗೆಯನ್ನು ತಗ್ಗಿಸುವರು ಬಾಧಿಕೆಯಿದೆ

ಈ ಜಿಲ್ಹೆಯಲ್ಲಿ ಗೋಕರ್ಣವು ಪ್ರಸಿದ್ಧ ಕ್ಷೇತ್ರವು ಬನವಾಸಿಯು ಕದಂಬರ ರಾಜಧಾನಿ ಮಾಸಿ ಘಟ್ಟಗಳಲ್ಲಿ ಹಳೆಯ ಬಸ್ತಿಗಳಿವೆ ಸೋಂದೆಯು ಇಲ್ಲಿನ ಇತಿಹಾಸದಲ್ಲಿ ಹೆಸರಾದ ಪಟ್ಟಣವು, ಗೇರಸೊಪ್ಪೆಯು ಸಮೀಪದಲ್ಲಿ ಜೋಗದ ಜಲಪಾತವಿದೆ. ಕಾರವಾರದ ಹತ್ತರದಲ್ಲಿರುವ ಗೋವೆಯಲ್ಲಿ ಪೋರ್ತುಗೀಜರು ಕಟ್ಟಿಸಿದ ಕ್ರೈಸ್ತರ ದೇವಾಲಯಗಳು ಮನೋಹರವಾಗಿವೆ, ಬಸವಣ್ಣನವರ 'ಉಳಿವೆ' ಯನ್ನೂ ನೋಡಬೇಕು. ಇವೆಲ್ಲವುಗಳಿಗೂ ಇಲ್ಲಿಂದ ಬಸ್ಸುಗಳು ದಿನಾಲು ಹೋಗಿ ಬರುವದುಂಟು ಪ್ರಾಥಮಿಕ ಶಾಲೆಗಳ ಶಿಕ್ಷಕರಿಗೆ ಸಮ್ಮೇಳನಕ್ಕೆ ಬರಲು ರಜೆಯನ್ನು ಕೊಡಬೇಕೆಂದು ಅಧಿಕಾರಿಗಳಿಗೆ ಬರೆದುಕೊಂಡಿದ್ದೇವೆ ಶಿಕ್ಷಕರು ಹೆಚ್ಚಾಗಿ ಬರುವರೆಂದು ನಂಬಿಕೆ

ಉತ್ತರ ಕನ್ನಡ ಜಿಲ್ಹೆಯ ಮಹಾಸಭೆಗಳನ್ನು ಸಲಿಸಿದರೆ ಸ್ವಾಗತ ಮಂಡಲದ ಸಭಾಸದರಾಗಬಲ್ಲರು ಇವರಿಗೆ ಸ್ವಾಗತಮಂಡಲದ ಹಿರಿಯರನ್ನಾರಿಸುವ ಅಧಿಕಾರವಲ್ಲದೆ, ಪ್ರತಿನಿಧಿಗಳ ಅಧಿಕಾರವೂ ಇರಬೇಕೆಂದು ಗೊತ್ತಾಗಿದೆ ಈ ಜಿಲ್ಹೆಯವರೂ ಹೊರಗಿನವರೂ ೨ ರೂಪಾಯಿಗಳನ್ನು ಸಲಿಸಿದರೆ ಸಮ್ಮೇಳನಗಳ ಪ್ರತಿನಿಧಿಗಳಾಗಬಲ್ಲರು

ಪ್ರತಿನಿಧಿಗಳಾಗಿ ಇಲ್ಲಿಗೆ ಬರುವವರೆಲ್ಲರಿಗೂ (ಡಿಸೆಂಬರ ೧೫ನೇ ತಾರೀಖಿನೊಳಗಾಗಿ ಕಾರ್ಯದರ್ಶಿಯವರಿಗೆ ಬರೆದುಕೊಂಡರೆ ಮಾತ್ರ) ನಾಲ್ಕು ದಿವಸ ಇರಲು ಜಾಗ, ಊಟ-ತಿಂಡಿಗಳ ಏರ್ಪಾಡು ಮಾಡಲಾಗುವದು ಈ ಎಲ್ಲ ಸೌಲತ್ತುಗಳಿಗೆ ಹೊರಗಿನ ಪ್ರತಿನಿಧಿಗಳಿಗೆ ನಾಲ್ಕು ರೂಪಾಯಿಗಳಿಗಾಗಿ ೩ ರೂ ಕೊಡಬೇಕಾಗುವದು

ಸಮುಸ್ತರಿಗೂ ಔತನ

ಬರಿಬೇಕಾದವರೆಂದರೆ ಕರ್ನಾಟಕದ ಮಹಾ ಜನರಿಗೆ ಮಹನೀಯರಿಗೆ! ಸೆರೆಯೊಳಗಿನ ಬಾಳಿನ ನಿಜಕಿಯಾದವರ ಕರೆದು ಕುಡುವದು ಸಂಬಂಧವು॥ ಎಂಬಿಯು ಹೆಸರ್ವಿನ್ನು

ಕನ್ನಡದ ಹಿರಿಯ ಕಬ್ಬಿಗರಾದ ಹೊನ್ನಮ್ಮನ ಹೇಳಿಕೆಯಂತೆ, ನಡೆಯ ತೆರೆವ ಅಂಗಳ (ಡಿಸೆಂಬರದ) ಕೊನೆಯ ನಾಲ್ಕು ದಿನಗಳಲ್ಲಿ ನಮ್ಮೂರಿನಲ್ಲಿ ನೆರವೇರುವ ನಾಡಹಬ್ಬಗಳಿಗೆ ಕನ್ನಡ ತಾಯ ಹರಕೆಯ ಮಕ್ಕಳನ್ನು ಬರಬೇಕೆಂದು ನಮ್ಮ ಇಚ್ಛೆ ಅದನು ಕನ್ನಡಿಗರು ಕಳಕಳಿಯಿಂದ ಕೈಕೊಂಡು ನಮ್ಮೆಲ್ಲರ ಬಗೆಗಳ ನೊಂದ ಗೂಡಿಸಬೇಕು

ಕಾರವಾರವು ಬಹಳ ಕನ್ನಡದ ಹಿರಿಯೂರು ಇಲ್ಲಿನ ಕಡಲ (ದೀವು) ಕಂಗೊಳಿಸುವಂಥಹದು ಕಡಲ್ದಂಡೆಯನು ಬಳಸಿ ನಿಂತಿರುವ ಬೆಟ್ಟಗಳ ಸಾಲುಗಳ ಹಸಿರಿನಿಯ ಗಾಡಿ ನೋಡಿದವರ ಕಣ್ಸೆಳೆದಿರದು

ಬಗೆಯ ೬ ಲಕ್ಷದ ಗಾಳಿಯು ತಂಪಾಗಿಯೂ ಹಿತವಾಗಿಯೂ ಇವೆ. ಬಿಸಿಲು ಸೊಗಸಾಗಿಯೂ, ಇಲ್ಲಿನ ನೋಟವು ಮನೋಹರವಾಗಿಯೂ ಇರುವವು, ಇವೆಲ್ಲ ಸೊಬಗಿನ ಪ್ರಕೃತಿಯ ಹಬ್ಬವನ್ನು ನೋಡಲು ಹೋಗುವದು ಬೇಡವೇ ?

ಉತ್ತರ ಕನ್ನಡದ ಹಿರಿಮೆಯನ್ನು [illegible] ರಾಜರ ಸಾಮ್ರಾಜ್ಯದ ಹಿರಿಮೆ ನಾಡವರ ಬಂಟರ [illegible] ಬಗೆ ಕವ್ಯಗಳ ಬೀಡು ಪ ಕ್ಷೇತ್ರದ [illegible] ದ. [illegible] ಮಾತುಗಳ [illegible] ದ್ವೀಪದ ಕಳಗನ್ನಡದ ಪವಣ ನೆಲೆ, ಶ್ರೀ [illegible] ಸಾಂಸ್ಕೃತಿಯನ್ನು [illegible] ಮಹಾ [illegible] ಸಲಹುತ್ತಿರುವ ಸೀಮೆ. [illegible] ಅಭ್ಯುದಯದ [illegible] ಕನ್ನಡದ ಮಾನಿನಿಯರ ಭಟ್ಟಾಕಳಂಕನ ಸೀಮೆ, [illegible] ಬೆಟ್ಟಗಳ ಬಗೆ, [illegible] ಕೋಟೆ [illegible] ಇದ್ದ ಕೊಂಕಣ ಮಾತು ಸಂ

ಮನೋಹರವಾದ ಕೂದಲನ್ನು ಚೆನ್ನಾಗಿ ಸಾಕಬೇಕು.

ಅನೇಕ, ಕೆಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲುಗಳ ನಿರ್ಲಕ್ಷ ಮಾಡುತ್ತಾರೆ. ಕೂದಲು ಮನೋಹರವಾಗಿರಬೇಕಾದರೆ, ನೀವು ದಿನಾ ಅ ಕಡೆಗೆ ಲಕ್ಷಕೊಡಬೇಕು. ಕೂದಲುಗಳನ್ನು ಅಲಕ್ಷ ಮಾಡಿದರೆ, ಅವು ಬಾಡುವವು; ಮತ್ತು ಉದುರುವವು. ನೀವು ಅವಕ್ಕೆ ಚಲೋ 'ಕೂದಲನ್ನು' ಕೊಡಬೇಕು. ಶ್ರೇಷ್ಠವಾದ ಕೂದಲನ್ನುವ್ಯಾವದು ?

ಕಾಮಿನಿಯಾ ಆಯಿಲ್. (ರಜಿಸ್ಟರ್ಡ)

ದಿನಾ ಮುಂಜಾನೆ ಅರ್ಧ ಚಮಚೆ ಎಣ್ಣೆಯನ್ನು ಚೆನ್ನಾಗಿ ತಿಕ್ಕಬೇಕು ಹಿಮ್ಮ ತಿಕ್ಕಿದ ಕೂಡಲೆ ತಲೆಯ ಹೊಟ್ಟು ಹೋಗುತ್ತದೆ, ಕೇಶರಂಧ್ರಗಳು ತೆರೆದು ಎಣ್ಣೆಯಿಂದ ತಲೆಗೆ ತಂಪು ದೊರಕಿ ಕೂದಲುಗಳ ಬೇರುಗಳಿಗೆ [illegible] ದ ಸಿಗುತದೆ ಹೀಗೆ ಸಿಕ್ಕಿದ ಸತ್ವವನ್ನು ಕೂದಲುಗಳಿಗೆ ಮುಟ್ಟಿ ನಿಮ್ಮ ಕೂದಲು ಹಸನಾಗಿ ಬೆಳೆಯುತ್ತವೆ.

ಎಲ್ಲಾ ಚಲೋ ಅಂಗಡಿಕಾರರಲ್ಲಿ ಈ ತೈಲವು ದೊರೆಯುತ್ತದೆ

ಅಥವಾ

ನಮಗೇ ಬರೆದು ತರಿಸಿಕೊಳ್ಳಿರಿ

ಬಾಟ್ಲಿ ೧ಕ್ಕೆ	ರೂ	೧—೦—೦
ಅಂಚೆವೆಚ್ಚ	,,	೦—೬—೦
೩ ಬಾಟಲಿಗಳಿಗೆ	,,	೨—೧೦—೦
ಅಂಚೆವೆಚ್ಚ	,,	೦—೧೪—೦

ನಿಮ್ಮ ಅಂಗಡಿಕಾರರಿಂದ ತರಿಸಿಕೊಳ್ಳಿರಿ.

— o —

೧ ಪೌಂಡಿಗೆ	ರೂ	೨ ೮—೦
ಪೌಂಡಿಗೆ	"	೦—೪ ೦
ಡ್ರಾಮಿಗೆ	,,	೦—೧೪—೦
ಅಂಚೆವೆಚ್ಚ	,,	೦—೬—೦

ಒಟ್ಟೋ-ದಿಲ್ ಬಹಾರ ಹೇಳಲಿಕ್ಕೆ ಮರೆಯಬೇಡಿರಿ!

"ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ"

ಒಂದು ಸುಗಂಧದ್ರವ್ಯದಲ್ಲಿ ಇವನ್ನು ಸಂಪಾದಿಸಬಹುದು ಎಲ್ಲಾ ಹೂವುಗಳ ಸುವಾಸನೆಯನ್ನು ಒಂದೇ ಸುಗಂಧದ್ರವ್ಯದಿಂದ ಸಂಪಾದಿಸಬಹುದು ಹ್ಯಾದ್ದೆಯವುದು [illegible]

ಒಟ್ಟೋ-ದಿಲ್ ಬಹಾರ್! (ರಜಿಸ್ಟರ್ಡ)

ಪೇಟೆಯಲ್ಲಿ ಅನೇಕ ಸಾಮಾನ್ಯ ಸುಗಂಧ ದ್ರವ್ಯಗಳು ಸಿಗುತ್ತವೆ. ಆದರೆ, ಅವುಗಳಿಗೆ ಹೂವಿನ ಸಹಜ ಪರಿಮಳವಿಲ್ಲ ಅವುಗಳಲ್ಲಿ ಅಲ್ಕೋಹೋಲ ಯಾನೆ ಮದ್ಯವು ಸೇರಿರುತದೆ. ಇದರಿಂದ ಹೂವಿನ ಸಹಜ ಪರಿಮಳವು ಸಿಗ ಒಟ್ಟೋದಿಲ್ ಬಹಾರದಿಂದ ತಾಜ್ಯವಾದಾ ಹೂವಿನ ಸುಗಂಧದ ಸ್ವಾದ ಧ್ಯಾನವಿಸುವು. ಇದಕ್ಕೆ ಮುಖ್ಯ ಸ್ಪರ್ಧಿಯಿಲ್ಲ

THE ANGLO INDIAN DRUG & CHEMICAL CO.

POST BOX 2082 BOMBAY No 2.

ಸ್ವಾತಂತ್ರ್ಯಕ್ಕೆ ವಹಿತೆ ಇದ್ದವ ಕನ್ಯಾಗಣಾ ಮನ್ನ ಗನ್ಯತನುಹಿ. ಕನ್ನತದ ಕಾಲಿಯಾ ಎಂಬ ಕಾವ್ಯದ 'ಅದಂ ಸಾಹಿತ್ಯಪ್ರಶಂ ನೆಲೆಪ್ರವರ್ತನ ಉನ್ನತ ದೇ ಶನಂ" ಎಂದ. ಸಲಿನಲಿದಾಗ ಮಾತಿನ ನಾಡ ಇದೆ.

ಸಾಹಿತ್ಯ ಪರಿಷತ್ತಿನ ಸಭಾಸದರೆಲ್ಲರೂ ಬರಬೇಕು, ಪ್ರಸಿದ್ಧ ಕರ್ನಾಟಕದ ಗುಂಪಿನವರೆಲ್ಲರೂ ದಯ ಮಾಡಿ ಬರಬೇಕು, ಗೆಳೆಯರ ಗುಂಪಿ ನಿವಾಗಿತ ತುಂಬಿದ ಗುಂಪು ನಿವಾಗಿತನ, ಕನ್ನಡಿಗರು ಕೂಟ, ನಿನಾಗಿತನ, ಮಂಗಳೂರಿನ, ನಿನಾಗಿತನ, ತುಂಬಿದ ತಂಡ, ನಿವಾಗಿತ ನ ಕನ್ನಡಿಗ ಸುದ್ದಿಪಾಲಕಗಳ ಒಳಗನಿಗೂ ಬೇಕ ಇತಿಹಾಸ ಮಂಡಲದವರ ಬನ್ನಿ, ಹಾಡುವರ ಬನ್ನಿ, ನಾಟಕದವರೆ ಬನ್ನಿ, ಸಂಗೀತದವರೆ ಬನ್ನಿ, ಹಾಡುಗಾರರು ವಾದ್ಯಗಾರರು, ಚಿತ್ರಗಾರರು ಬಿಲಗಾದವರು, ಕಲಾ ಬಿದರರು, ಹಾಡುಗಾರರು, ಗಮಕಿಗಳು ಕನ್ನಡವನ್ನು ಕಲಿಸುವವರು ಕಲಿಯುವವರು, ಇವರೆಲ್ಲರೂ ಬಂದರೆ ಆ ಹಬ್ಬ ಎಷ್ಟು ! ಕನ್ನಡ ನಾಡಿನ ಸಂಸ್ಕೃತಿಗೆ ಮುಖ್ಯರಾದವರೆಲ್ಲರೂ, ಕನ್ನಡ ಸಾಹಿತ್ಯದಲ್ಲಿಯೇ ನೆಲೆಸಿರುವ ದಾ, ಕನ್ನಡಿಗರು, ಕನ್ನಡಿಗರನ್ನು, ಅಂತರ ಆಗದ ದಂಗೆಲ್ಲರಿಗೂ ಆತ್ಮರದ ಬೇಕದ, ಏಕೀಕರಣ ಸಭೆಗೆ ನಿಜ ಲಕ್ಷ್ಯ

ಶೇಬಂಗ ಮಂಗೇಶರಾಯರು, ಆ ಸ ಅಧ್ಯಕ್ಷ ಫ್ರೋ. ಮಧುರ ರಂಗಣ್ಣ, ಆಡಾಕೂಳ್ಳಿ ವೆಂಕಟರಾಯ,

ಸಾ ಸ ಕಾರ್ಯದರ್ಶಿ.

ನಾರಾಯಣ ಸುಬ್ಬರಾವ ರ,

ಕಾರ್ಯದರ್ಶಿ, ಏಕೀಕರಣ ಪರಿಷತ್ತು

ಧಾರವಾಡ ಬುಧವಾರ ೩-೧೨-೧೯೩೦

ಸತ್ಯದ ಜಗತ್ತು) ೧೦೦೦ ರೂಪಾಯಿ ಇನಾಮು. (ಎದೆ ಎನು ನೋಡೋಣ!

ಮಿರಜಿಯಲ್ಲಿಯ ಪ್ರಸಿದ್ಧ ವೈದ್ಯ ಶಾಪಕ ಇವರ ೪೦ ವರ್ಷ ವಾಪರಿಸಿದ

ಅಲ್ಪವ್ಯಯ ಕ್ಕಾಗಿ ಶ್ರೇ ನಾಗ ಬೇಡಿರಿ	ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ರಜಿ] ವಜ್ರಾಂಗ ಸುಂದರಪಾಕ [ಸ್ಪರ್ಧ	ದೆಪ್ಯಾರಿಸಿದರೆ ಶ್ರೀಣಕ ಹಾಮ ಕಳಿಸ್ಸಿವಿ

ಮೂತ್ರದ್ವಾರದಿಂದ, ಸ್ವಪ್ನಾವಸ್ಥೆಯಿಂದ ಹೋಗುವ ಧಾತು, ಮತ್ತು ಮುಷ್ಟಿ ಮೈಥುನದಿಂದ, ಜಾಸ್ತಿ ಸ್ತ್ರೀ ಸಂಭೋಗದಿಂದ ಇಂದ್ರಿಯ ನಷ್ಟ, ಶಕ್ರಾತ, ನಾವಾರ್ದಿಕದ ಸ್ತ್ರೀಗೆ ಸ್ಪರ್ಶ ಮಾಡಿದ ಕೂಡಲೆ ವೀರ್ಯ ಪಾತ, ಸ್ಖಲನ, ಪವರ್, ಗಮಿ ಣಯ ದೋಷ, ಅಶಕ್ತತೆ, ಹಿತ್ತಾಂಶ, ನಡ ಬೆನ್ನು ನೋವು, ನಿದ್ದೆ ಕಡಿಮೆ ಬರೋಣ, ಯಾವದೇ ಕಾರಣ ರೋಗದಿಂದ ಎಷ್ಟು ಮೇಲಿನ ಕ್ಷೀಣತಾ ಇವೆಲ್ಲ ರೋಗಗಳು ನಷ್ಟವಾಗಿ ವೀರ್ಯವೃದ್ಧಿ, ಗಟ್ಟಿತನ, ಸ್ತಂಭನ ಶರೀರದ ತಾಂಬರದಂತೆ ಕಾಂತಿಯುಕ್ತ ಆಗುತ್ತದೆ ಶರೀರಕ್ಕೆ ಸಾಥವಾಗಿ ಹಸಿವೆ, ಸ್ಮರಣ ಶಕ್ತಿ ಮತ್ತು ಕಣ್ಣು ತೂಕ ಬೇಗುತ್ತದೆ ಇದರಿಂದ ಪುರುಷರ ವೀರ್ಯ ಶುದ್ಧಿಯಾಗುತ್ತದೆ, ಮತ್ತೆ ಸ್ತ್ರೀಯರು ನಮ್ಮ ಸ್ತ್ರೀ ರೋಗ ನಿವಾರಣೆ ಚೂರ್ಣ ವನ್ನು ತಕ್ಕೊಂಡರೆ ಸ್ತ್ರೀಯರ ಎಲ್ಲ ರೋಗಗಳು ಹೋಗಿ ಗರ್ಭಾಶಯವು ಶುದ್ಧಿಯಾಗುತ್ತದೆ ಇದರ ಮೇಲೆ ಸ್ತ್ರೀಯರಿಗೆ ಸಂತತಿಯಾಗಲಿಕ್ಕೆ ತಡವೇನು ? ಈ ಔಷಧ ಸಾಟಿಯ ಪೂರ್ಣ ಗುಣವುಳ್ಳ ಆ ಕೂಲಿಯ ೧ ಡಬ್ಬಿಗೆ ೫ ರೂ ೮ ಆ ೧ ಆಣೆ ಸರ್ಟಿಫಿಕೇಟುಗಳನ್ನು ಕೊಟ್ಟವರ ಹೆಸರ, ಊರು ಮತ್ತು ಪತ್ರಿಕೆಗಳ ಹೆಸರು ಮತ್ತು ಪತ್ರೀಕ ಪಾಠದ ಕೂಡ ಕೇಳ ವ ಅನುಪಾನ ಪತ್ರಿಕೆಯಲ್ಲಿ ಓದಿ ನೋಡಿರಿ

ಸ್ತ್ರೀ ರೋಗ ನಿವಾರಣೆ ಚೂರ್ಣ.

ಎಲ್ಲ ಬಣ್ಣದ ಶೆರಗು, ಮುಟ್ಟು ಕೆಟ್ಟ ಆಗುವದು ಅನಿಯಮಿತದ ಹೆಚ್ಚು ಕಡಿಮೆ ಗಂಟು ಗಂಟು ಮುಟ್ಟಾಗೋಣ, ಮುಟ್ಟಾದಾಗ ಆಗುವ ತಾಪಗಳು, ತೊಡಲು ಹಿಂಡುಗಡೆ, ಹೊಟ್ಟೆಯಲ್ಲಿ ನಡುವಲ್ಲಿ ಬೆನ್ನಿನಲ್ಲಿ, ಕಲಿಯಲ್ಲಿ ತೂರಿ, ಕೈ ಕಾಲು ಗಾಬರಿಯಾಗೋಣ, ಎದೆ ಹಾರೋಣ, ಅಶಕ್ತತಾ, ಜೀರ್ಣಜ್ವರ ಮಲಾವರೋಧ, ಗರ್ಭಾಶಯದ ರೋಗ, ಗರ್ಭಧಾರಣೆ ಆಗದೇ ಇರೋಣ, ಗರ್ಭಪಾತ ವಾಗೋಣ, ಇವೆಲ್ಲ ಸ್ತ್ರೀ ರೋಗಗಳು ಹೋಗುತ್ತವೆ ಮಕ್ಕಳಾಗುವದಿಲ್ಲೆಂದು ಎರಡನೇ ಲಗ್ನಮಾಡುವ ದಕ್ಕೆ ಹೊಂಚ ಇದ್ದ ಗೃಹಸ್ಥರಿಗೆ ಇದೇ ಔಷಧ ಅವಶ್ಯವಾಗಿ ಕೊಡಿರಿ ೪೦ ವರ್ಷದ ಸ್ತ್ರೀಯರಿಗಾದರೂ ಖಾತ್ರಿಯಾ ಸಂತತಿಗಳಾಗುತ್ತವೆ ೩೧ ದಿವಸ ನಡೆಯುವ ಪೂರ್ಣ ಗುಣವುಳ್ಳ ೬೧ ಕೂಲಿಯ ೧ ಡಬ್ಬಿಗೆ ೪ ರೂ ೬ ಆ ೮ ಆಣೆ.

ಸಂತತಿ ಪ್ರತಿಬಂಧಕ ಗುಳಿಗೆಗಳು.

"ಇಂಡಿಯನ್ ಇನ್ಸ್ಯೂರನ್ಸ ಜರ್ನಲ್" ಎಂಬ ಹಿಂದೀ ವಿಮೆ ವಿಷಯಕ ಮಾಸ ಪತ್ರಿಕೆಯಲ್ಲಿ ಬರೆಯುವದೇನೆಂದರೆ:- "ಪ್ರೆಸಿಡೆನ್ಸಿ ಅಲ್ಯಾಯನ್ಸ ವಿಮಾ ಕಂಪನಿಯು ವ್ಯವಹಾರ ಬೆಳೆಸುವದಕ್ಕಿಂತ ಕೊಂಡ ವ್ಯವಹಾರವನ್ನು ದಕ್ಷತೆಯಿಂದ ಕಾಪಾಡಲಿಕ್ಕೆ ಯತ್ನಿಸುತ್ತದೆ. ಹೀಗೆಯೇ ಜಾಗ್ರತೆಯಿಂದ ಆಡಳಿತ ನಡೆಸಿದ್ದರಿಂದ ಆಡಳಿತೆಯ ಖರ್ಚು ಕಡಿಮೆಯಾಗಿದೆ. ಇಷ್ಟು ಕಡಿಮೆ ಖರ್ಚಿನಲ್ಲಿ ಪ್ರಥಮ ವರ್ಷದ ವ್ಯವಹಾರವನ್ನು ನಡಿಸಿದ ಕಂಪನಿ ನಮ್ಮ ತಿಳುವಳಿಕೆ ಮಟ್ಟಿಗೆ ಇದೊಂದೇ! ಇದು ಕಂಪನಿಗೆ ಭೂಷಣವಿದೆ."

ಏಜನ್ಸಿ ರಶೀದು ಮೊದಲಾದವುಗಳಿಗೆ
ಹೆಡ್ ಆಫೀಸಿಗೆ ಬರೆಕೊಳ್ಳಿ.

The Canara Industrial & Banking Syndicate, Ltd.

Head Office:— UDIPI. *Branches:—* BRAHMAVAR, KUMTA & KARWAR.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ ಸಿಂಡಿಕೇಟ, ಲಿಮಿಟೆಡ್.

Laxmi Provident Deposit. : ಲಕ್ಷ್ಮೀ ಆಪನ್ನಿಧಿಯು.

ನಿಮ್ಮ ವೃದ್ಧಾಪ್ಯದ ನಿಸ್ಸಹಾಯಕತ್ವದ ಕಾಲಕ್ಕಾಗಿ, ದಿನದಿನವೂ ಬೆಳೆದು ತನ್ನ ಭಾವೀ ಗಂಡನ ಮನೆಯನ್ನು ಮುಟ್ಟಿಸುತ್ತಿರುವ ನಿಮ್ಮ ಮಗಳ ಮದುವೆಗಾಗಿ, ಶಾಲೆಯಲ್ಲಿ ಸುಜ್ಞನೆನಿಸಿದರೂ, ಧನಾಭಾವದಿಂದ ಹಿಂದೆ ಬೀಳಬಹುದಾದ ನಿಮ್ಮ ಮಗನ ವಿದ್ಯಾಭ್ಯಾಸಕ್ಕಾಗಿ ನೀವೇನು ಮಾಡುವಿರಿ? ಲಕ್ಷ್ಮೀ ಆಪನ್ನಿಧಿಯು—

ನಿಮ್ಮ ಆ ಸರ್ವ ಯೋಜನೆಗಳನ್ನು ತೀರಿಸುವದು. ನಿಮ್ಮಿಂದ ಉಳಿಸಿಕೊಳ್ಳಬಹುದಾದ ಹಣವನ್ನು ನಮ್ಮ ಬೇಂಕಿನ ಲಕ್ಷ್ಮೀ ಆಪನ್ನಿಧಿಯಲ್ಲಿ ಇಟ್ಟರೆ, ಚಕ್ರಬಡ್ಡಿಯಿಂದ ಬೆಳೆದು ೧೦ ವರುಷಗಳಲ್ಲಿ ಸಾಧಾರಣ ಎರಡು ಪಾಲನ್ನು ನಿಮಗೆ ನಿರಾಯಾಸವಾಗಿ ಲಭಿಸುವವು:—

ಅಂದರೆ,

ರೂ.	೨೫/—	೧೦ ವರುಷಗಳಲ್ಲಿ	ರೂ.	೪೬/—
"	೫೦/—	೧೦ "	"	೯೨/—
"	೧೦೦/—	೧೦ "	"	೧೮೪/—
"	೨೦೦/—	೧೦ "	"	೩೬೮/—

ಎಂತೆಯೇ

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ.

Kumta, *16—3—1931.*

A. S. KINI.
Agent, KUMTA BRANCH.
The Canara Industrial & Banking Syndicate Ltd. KUMTA.

EAST & WEST INSURANCE CO., LTD. BOMBAY.

ಈಸ್ಟ ಎಂಡ್ ವೆಸ್ಟ ಇನ್ಸ್ಯೂರನ್ಸ ಕಂಪನಿ ಲಿಮಿಟೆಡ್, ಮುಂಬಯಿ.

(ಸರಕಾರಿ ಭದ್ರತೆಯಿದ್ದು, ೧೯೧೩ರಲ್ಲಿ ಹಿಂದುಸ್ಥಾನದೊಳಗೆ ರಜಿಸ್ಟರಾದದ್ದು.)

ಸಂಪೂರ್ಣವಾಗಿ ಹಿಂದೀ ಕಂಪನಿ!

ಹಿಂದೀಯರಿಂದ ಹಿಂದೀಯರ ಹಿತಕ್ಕಾಗಿ ನಡಿಸಲ್ಪಟ್ಟ.

ವಿಮೆದಾರರಿಗೆ ಹೀಗೆ ಕಡಿಮೆ ಪ್ರೀಮಿಯಮ್ದಿಂದ ಅಧಿಕವಾದ ಲಾಭವಾಗುವಂತೆ

ಈ ಕಂಪನಿಯಲ್ಲಿ ಏರ್ಪಾಟಾಗಿರುತ್ತೆ!

ಈ ಕಂಪನಿಯಲ್ಲಿ ವಿಮೆಯನ್ನು ಉತರಾಯಿಸಿ ನಿರಂತ ನಿರಂಗರಾದಲ್ಲಿ, ಮುಂದಿನ ಕಂತುಗಳನ್ನು ತುಂಬದೆ, ವಿಮೆಯ ಸಂಪೂರ್ಣ ಸೌಕರ್ಯವು ಸಿಗುವುದು!!
ಈ ಕಂಪನಿಯ ಪ್ರತಿನಿಧಿಗಳಿಲ್ಲದಿದ್ದಲ್ಲಿ, ವಜನದಾರ ಹಾಗು ದಕ್ಷ ಏಜಂಟರು ಬೇಕಾಗಿರುತ್ತಾರೆ. ಅವರಿಗೆ ಬಹಳ ಸವಲತ್ತು ಕೊಡಲ್ಪಡುವವು.

ವಿಶೇಷ ಮಾಹಿತಿಯ ಬಗ್ಗೆ ಈ ಕೆಳಗಿನ ಪತ್ತೆಗೆ ಬರೆಕೊಳ್ಳಿರಿ.

ಕುಮಟಾ, ತಾ. ೮-೯-೩೧.

ಸಿ. ಎಸ್. ಶ್ಯಾನಭಾಗ ಎಂಡ್ ಬ್ರದರ್ಸ್,
ಉತ್ತರ-ಕನ್ನಡ, ಬೆಳಗಾಂವ, ವಿಜಾಪುರ, ಧಾರವಾಡ ಜಿಲ್ಹೆಗಳ
ಪ್ರಾಮುಖ್ಯ ಏಜಂಟರು.

ಮ॥ ಗಾಂಧಿಯವರ

ಗೀತಾ-ಬೋಧ.

ಶ್ರೀ॥ ಹನುಮಂತರಾವ್ ... ರವರ

ಕರ್ಮ-ಯೋಗ.

೨

[illegible]

ಗೀತೆಯು ... [illegible]

ಮಂಗಳೂರು

Siromani UdipiNarayanacharya

... 108 ... 10 ... 32 ... 100 ... 1800 ... 3 ... 010 ... 1 ...

[illegible]

ಅಪ್ಪನ್ನು ಇಷ್ಟುನ್ನು!

ಭಾವೀ ದೇಶ್ಯಾಸಕಿಯ ಸ್ವರೂಪ

ಸ್ವನಃ ಸತ್ಯಾಗ್ರಹ ಸಂಗ್ರಾಮಕ್ಕೆ ಪ್ರಾರಂಭವಾದ್ದ [illegible] ಹಿಂಸಾತ್ಮಕ ಕ್ರಿಯೆ [illegible] ಜನಾಂಗದವರು [illegible] — ಗಾಂಧಿಯ ಅಹಿಂಸೆಯ ಯುದ್ಧದಲ್ಲಿ ಒಂದು ಪ್ರಾಂತದ ಸ್ಥಿತಿಯು ಇನ್ನೊಂದು ಪ್ರಾಂತಕ್ಕೆ ಒಂದ ನಗರದ ಸುದ್ದಿ ಇನ್ನೊಂದು ನಗರಕ್ಕೆ [illegible] ವ್ಯವಸ್ಥೆ ಮಾಡುವರು. ನಿಮ್ಮ ತಂತಿಗಳನ್ನೂ ಪತ್ರಗಳನ್ನೂ [illegible], ಪತ್ರಿಕೆಗಳನ್ನು ನಿಲ್ಲಿಸುವರು, [illegible] [illegible] ಸತ್ಯಾಗ್ರಹ [illegible] ಒಂದು ಕಾಂಗ್ರೆಸ ಕಮಿಟಿ [illegible] ಸಾರ್ವಜನಿಕ ಕರಪತ್ರಿಕೆಗಳನ್ನು [illegible]"

* *

ಪಂಡಿತ ಜವಾಹರಲಾಲ [illegible] ಪಂಡಿತ ಮೋತೀಲಾಲ [illegible] — [illegible] ಪಂಡಿತ

[illegible] ಮಾತ್ರ ಸ್ವಾತಂತ್ರ್ಯವನ್ನು ಪಡೆಯಲಿದ್ದಾರೆ!

* *

ಬಂಗಾಲ ಪ್ರಾಂತದ [illegible] ೧೬ ವರ್ಷಗಳಿಂದ [illegible] ೧೨ ವರ್ಷಗಳಿಂದ [illegible] ವರ್ಷಗಳ [illegible]

* *

ರತ್ನಾಗಿರಿಯಲ್ಲಿ [illegible] ಸನ್ಮಾನ ಮಾಡಿದರು

* *

[illegible] ಹಿಂದೂಸ್ಥಾನದ [illegible] ಪ್ರಪಂಚದ ಮಹಾ [illegible] ಸ್ವಾಗತ [illegible] ಮಾಡಲಿಲ್ಲ!

* *

[illegible] ಸ್ವಾತಂತ್ರ್ಯ [illegible] ಹೋರಾಡುವ [illegible] ಪರಮೇಶ್ವರ [illegible] ಮಾಡಬೇಕು!!

* *

[illegible] ಪ್ರತಿನಿಧಿಗಳ [illegible] ಗಾಂಧಿ, ಡಾ॥ ರವೀಂದ್ರನಾಥ ಟಾಗೋರ, ಸರ್ ಜಗದೀಶ ಚಂದ್ರ ಬೋಸ, ಸರ್ [illegible]

([illegible])

ಮನೋಹರವಾದ ಕೂದಲನ್ನು ಚನ್ನಾಗಿ ಸಾಕಬೇಕು.

ಅವರೆ ಹಲವು ಸ್ತ್ರೀಯರು ಯಾವಾಗಲೂ ತಮ್ಮ ಕೂದಲಿನ [illegible] ಮಾಡುತ್ತಾರೆ. ಕೂದಲು ಮನೋಹರವಾಗಿರದೆ [illegible] ಕೂದಲುಗಳನ್ನು ಅಲಕ್ಷ ಮಾಡಿದರೆ, ಅವು ಉದುರುವ [illegible] 'ಕೂದಲನ್ನು' [illegible] ಶ್ರೇಷ್ಠವಾದ [illegible]?

ಕಾಮಿನಿಯಾ ಆಯಿಲ್. (ರಜಿಸ್ಟರ್ಡ)

ದಿನಾ [illegible] ಎಣ್ಣೆಯನ್ನು ಚನ್ನಾಗಿ [illegible] ಕೂದಲು [illegible] ಎಣ್ಣೆಯಿಂದ [illegible] ನಿಮ್ಮ ಕೂದಲು ಹಸನಾಗಿ ಬೆಳೆಯುವವು.

ಎಲ್ಲಾ ಚಲೋ ಅಂಗಡಿಕಾರರಲ್ಲಿ

ಈ ತೈಲವು ದೊರೆಯುತ್ತದೆ.

ಅಥವಾ

ನಮಗೇ ಬರೆದು ತರಿಸಿಕೊಳ್ಳಿರಿ

ಬಾಟ್ಲಿ ೧ಕ್ಕೆ	ರೂ	೧—೦—೦
ಅಂಚೆವೆಚ್ಚ	,,	೦—೬—೦
೩ ಬಾಟ್ಲಿಗಳಿಗೆ	,,	೨—೧೦—೦
ಅಂಚೆವೆಚ್ಚ	,,	೦—೧೨—೦

ನಿಮ್ಮ ಅಂಗಡಿಕಾರರಿಂದ

ತರಿಸಿಕೊಳ್ಳಿರಿ

೨ ಔನ್ಸಿಗೆ	ರೂ	೦—೯—೦
೩ ,,	,,	೦—೬—೦
ಡ್ರಾಮಿಗೆ	,,	೦—೧೨—೦
ಅಂಚೆವೆಚ್ಚ	,,	೦—೬—೦

ಒಟ್ಟೋದಿಲ್ ಬಹಾರ

ಹೇಳಲಿಕ್ಕೆ ಮರೆಯಬೇಡಿರಿ!

"ಹೂದೋಟವೆಲ್ಲ ಒಂದೇ ಬಾಟ್ಲಿಯಲ್ಲಿ"

ಒಂದು ಸುಗಂಧದ್ರವ್ಯವಲ್ಲಿ [illegible] ಎಲ್ಲ ಹೂವುಗಳ ಸುವಾಸನೆಯು [illegible] ಸುಗಂಧದ್ರವ್ಯದಿಂದ [illegible]?



ಒಟ್ಟೋದಿಲ್ ಬಹಾರ! (ರಜಿಸ್ಟರ್ಡ)

[illegible] ಅನೇಕ [illegible] ಸುಗಂಧ ದ್ರವ್ಯಗಳು [illegible] ಹೂವಿನ [illegible] ಒಟ್ಟೋದಿಲ್ ಬಹಾರ [illegible] ಹೂವಿನ ಸುಗಂಧವನ್ನು ಅನುಭವಿಸಬಹುದು. [illegible]

THE ANGLO INDIAN DRUG & CHEMICAL CO.

POST BOX 2082 **BOMBAY No**

ಪತ್ರಕರ್ತರ ನುಡಿಗನ್ನಡಿ.

೧. ಸಂಯುಕ್ತ ಪ್ರಾಂತದಲ್ಲಿ ನಡೆದಿರುವ ಕರಬಂದಿ ಚಳವಳವನ್ನು ಪಡ್ಡುವ ಬಗ್ಗೆ ಮೊನ್ನೆ ಹೊಸ ಆರ್ಡಿನನ್ಸನ್ನು ತೆಗೆಯಬೇಕಾದರೆ ಸರಕಾರವು ಆತ್ಮಸಮರ್ಥನೆಯ ಬಗ್ಗೆ ದೊಡ್ಡದೊಂದು ಪ್ರಕಟನೆಯನ್ನು ಹೊರಡಿಸಿತ್ತು. ರೈತರ ಕಷ್ಟಗಳು ಅಷ್ಟು ತೀವ್ರವಿರುತ್ತಿದ್ದಿಲ್ಲವೆಂದೂ, ರಾಷ್ಟ್ರೀಯ ಸಭೆಯವರೇ ರೈತರನ್ನು ಎಬ್ಬಿಸಿರುವರೆಂದೂ, ಕರಬಂದಿಯ ಸಂಕಲ್ಪವು ಬಹು ದಿವಸಗಳಿಂದ ನಡೆದಿತ್ತೆಂದೂ ಸರಕಾರದವರ ಆರೋಪವು. ಸದ್ರಿ ಪ್ರಕಟನೆಯೊಳಗಿನ ಅನೇಕ ಸಂಗತಿಗಳ ಕೇವಲ ಸುಳ್ಳೆಂತ ಲೋಕನಾಯಕರು ನಿಷೇಧಿಸಿರುತ್ತಾರೆ. ಸದರಿ ಪ್ರಕಟನೆಯಲ್ಲಿ ಸಂಯುಕ್ತ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಅಧ್ಯಕ್ಷ ಬ್ಯಾ| ಶೇರವಾಣಿಯವರು ಬರೆದ ಒಂದು ಪತ್ರದೊಳಗಿನ (ಮಧ್ಯದಲ್ಲಿ ಅಧಿಕಾರಿಗಳು ತೆರೆದು ನೋಡಿದ) ಈ ಕೆಳಗಿನ ಅವತರಣವನ್ನು ಕೊಟ್ಟಿರುತ್ತಾರೆ. "ಈ ಸಂಧರ್ಭದಲ್ಲಿ ರೈತರ ದೈನ್ಯ ಸ್ಥಿತಿಯು ನಮ್ಮ ಸಹಾಯಕ್ಕೆ ಬಂದಿದೆ. ನಾವು ಅದರ ಪೂರ್ಣ ಲಾಭ ತಗೊಳ್ಳಬೇಕು. ನಾವು ಸ್ವಲ್ಪ ಒಬ್ಬಾಡಿದರೆ ಪ್ರಾಂತದೊಳಗಿನ ಇಡೀ ರೈತವರ್ಗವು -- ಅವರು ಯಾವದೇ ಜಾತಿಯವರಿರಲಿ -- ನಮ್ಮ ಕೂಟಕ್ಕೆ ಬಂದು ಸೇರುವರೆಂದು ನನಗೆ ಪೂರ್ಣ ಭರವಸೆಯಿದೆ." ಸರಕಾರವು ಈ ಅವತರಣ ಕೊಟ್ಟು, ರಾಷ್ಟ್ರೀಯರು ಅಂತರಂಗದಲ್ಲಿ ರೈತ ವರ್ಗವನ್ನು ಕರಬಂದಿಯ ಬಗ್ಗೆ ಚೇತರಿಸಿಕೊಟ್ಟರೆಂದು ಧ್ವನಿಸುತ್ತಿದೆ. ಹಿಂದುಮುಂದಿನ ಸಂದರ್ಭ ತಪ್ಪಿಸಿದರೆ ಒಂದೇ ಅವತರಣದ ಮೇಲಿಂದ ಸರಕಾರಿ ಅಂಬೋಣವು ನಿಜವೆಂದು ಭಾಸವಾಗುತ್ತದೆ. ಸಂದರ್ಭದ ರಹಸ್ಯವನ್ನು ಹೊರಗೆಡಹುವದಕ್ಕೆ ಬ್ಯಾ| ಶೇರವಾಣಿಯವರು ಕೂಡಲೇ ತಮ್ಮ ಇಡೀ ಪತ್ರವನ್ನು ಪ್ರಕಟಿಸಿದರು. ಅವರು ತಮ್ಮ ಪತ್ರದಲ್ಲಿ ಹಿಂದು-ಮುಸಲ್ಮಾನರ ವೈಮನಸ್ಯದ ಬಗ್ಗೆ ಬರೆದಿರುತ್ತಾರೆ. "ನಾವು ಇಷ್ಟು ದಿವಸ ಸುಮ್ಮನಿದ್ದದ್ದರಿಂದ ಇಷ್ಟು ಪರಿಣಾಮವಾಯಿತು. ರಾಷ್ಟ್ರೀಯ ಸಭೆಯು ಯಾವದೇ ಜಾತಿಗೆ ಒಪ್ಪಿದ್ದಲ್ಲ; ೧ ... ಯ ಸಭೆಯ ಸಂದೇಶವನ್ನು ಎಲ್ಲಾ ಧರ್ಮದ ಎಲ್ಲ ಜನರಿಗೆ ಮುಟ್ಟಿಸುವದು ನಮ್ಮ ಕರ್ತವ್ಯವು. ಈ ಸಂದರ್ಭದಲ್ಲಿ ರೈತರ ದೈನ್ಯಸ್ಥಿತಿಯು ನಮ್ಮ ಸಹಾಯಕ್ಕೆ ಬಂದಿದೆ. ಅದರ ಪೂರ್ಣ ಲಾಭವನ್ನು ನಾವು ತಗೊಳ್ಳಬೇಕು. ನಾವು ಸ್ವಲ್ಪ ಒಬ್ಬಾಡಿದರೆ ಇಡೀ ರೈತ ವರ್ಗವು— ಅವರು ಯಾವದೇ ಜಾತಿಯವರಿರಲಿ — ನಮ್ಮ ಕೂಟಕ್ಕೆ ಬಂದು ಸೇರುವರು. ಅದ್ದರಿಂದ ಅವರನ್ನು ಮುಸಲ್ಮಾನರನ್ನು ಕಾಂಗ್ರೆಸ್ಸಿನ ಮೆಂಬರರನ್ನಾಗಿ ಮಾಡಿರಿ." ಇತ್ಯಾದಿ. ಅವರು ಹಿಂದು-ಮುಸಲ್ಮಾನರಲ್ಲಿ ಐಕ್ಯವನ್ನುಂಟು ಮಾಡುವ ಬಗ್ಗೆ ಪತ್ರ ಬರೆದದ್ದಿರುತ್ತದೆ. ಆದರೆ, ಸರಕಾರಿ ಅಧಿಕಾರಿಗಳು ಸಂದರ್ಭವನ್ನು ಬಚ್ಚಿಟ್ಟು ಬ್ಯಾ| ಶೇರವಾಣಿಯವರ ಮೇಲೆ ಸುಳ್ಳು ಆರೋಪ ಹೊರಿಸಲಿಕ್ಕೆ ಹಿಂಜರಿಯಲಿಲ್ಲ. ಸರಕಾರಿ ಪತ್ರಿಕೆಗಳೊಳಗಿನ ಸಂಗತಿಗಳ ಮೇಲೆ ಈ ಮುಂದೆ ಎಷ್ಟು ನಂಬಿಗೆಯಿಡಬಹುದೆಂಬದನ್ನು ವಾಚಕರೇ ಊಹಿಸಲಿ.

---

೨. ಸರಕಾರಿ ಅಧಿಕಾರಿಗಳಿಗೆ ದೊರಕುವ ಮಾಹಿತಿಯಾದರೂ ಎಷ್ಟು ವಿಶ್ವಸನೀಯವಿರುತ್ತದೆಂಬದು ಈ ಕೆಳಗೆ ಕೊಟ್ಟ ಸಂಗತಿಯ ಮೇಲಿಂದ ತಿಳಿಯುವಂತಿದೆ. ಶ್ರೀಯುತ ಪುರುಷೋತ್ತಮದಾಸ ಟಂಡನ್‌ರವರು ಮುಚ್ಚುಬಂದಿಯ ಹುಕುಮನ್ನು ಮುರಿದು ಸತ್ಯಾಗ್ರಹ ಮಾಡಲಿಕ್ಕೆ ಪ್ರಯಾಗದೊಳಗಿನ ಕಿಸಾನರ ಸಭೆಗೆ ಹೋಗಬೇಕಾದರೆ ಪ| ವಾ| ಪಂಡಿತ ಮೋತಿಲಾಲರ ಅಳಿಯಂದಿರಾದ ಶ್ರೀ| ಪಂಡಿತರ ಮೋಟಾರಲ್ಲಿ ಕುಳಿತು ಹೋಗಿದ್ದರೆಂದು ಪ್ರಯಾಗದ ಡಿಸ್ಟ್ರಿಕ್ಟ ಮೆಜಿಸ್ಟ್ರೇಟರಿಗೆ ಸುದ್ದಿ ಸಿಕ್ಕಿತು. ಕೂಡಲೇ ಮೆಜಿಸ್ಟ್ರೇಟರು ಶ್ರೀ| ಪಂಡಿತರಿಗೆ ನಿಮ್ಮ ಮೋಟಾರ ಗಾಡಿಯನ್ನು ಪೋಲಿಸ ಕಚೇರಿಯಲ್ಲಿ ತಂದಿಡಬೇಕಾಗಿ ಆರ್ಡಿನನ್ಸಿನನ್ವಯ ಆಜ್ಞೆ ಮಾಡಿದರು. ಶ್ರೀ ಪಂಡಿತರು ಸದರಿ ಗಾಡಿಯು ತನ್ನದಲ್ಲ, ತನ್ನ ಪತ್ನಿಯದಿರುತ್ತದೆಂದು ತಿಳಿಸಿದರು. ಶ್ರೀಮತಿ ಪಂಡಿತರಿಗೆ ಮೇಲಿನಂತೆ ಆಜ್ಞೆಯಾಯಿತು. ಶ್ರೀಮತಿಗಳು ತನ್ನ ಗಾಡಿಯನ್ನು ಶ್ರೀ| ಟಂಡನ್ನರ ಉಪಯೋಗಕ್ಕೆ ಕೊಟ್ಟಿದ್ದು ಖರೆಯಲ್ಲವೆಂತಲೂ, ಟಂಡನ್ನರು ಸತ್ಯಾಗ್ರಹ ಮಾಡಿದ ಸಭೆಗೆ ಗಾಡಿಯಲ್ಲಿ ಕುಳಿತು ತಾನು, ತನ್ನ ಮಾತೋಶ್ರೀ ಸ್ವರೂಪರಾಣಿ ನೆಹರು ಹಾಗೂ ತನ್ನ ಮಕ್ಕಳು ಹೋಗಿದ್ದೆವೆಂತಲೂ, ಸಭೆಯಾದ ಮೇಲೆ ಗಾಡಿಯು ಗೆರೇಜದಲ್ಲೇ ಇಟ್ಟಿತ್ತೆಂತಲೂ ಡಿ. ಮ. ಜಿಸ್ಟ್ರೇಟರಿಗೆ ತಿಳಿಸಿದರು; ಗಾಡಿಯನ್ನು ಜಪ್ತು ಮಾಡಿ ಇಟ್ಟರೆ ತನ್ನ ಮಕ್ಕಳಿಗೆ ಊರ ಹೊರಗೆ ತಿರುಗಾಡಿ ಬರುವದು ತಪ್ಪಿಸಿದಂತಾಗುವದೆಂತಲೂ ಹೇಳಿದರು. ಮುಂದೆ ತಮಗೆ ಸಿಕ್ಕ ಮಾಹಿತಿಯು ಸುಳ್ಳು ಎಂತ ಸಾಹೇಬರಿಗೆ ತಿಳಿದಿರಬೇಕು. ಈಗ ಸಾಹೇಬರು 'ನಿಮ್ಮ ಹುಡುಗರ ಹಾನಿ ಮಾಡಲಿಚ್ಛಿಸುವದಿಲ್ಲ' ಎಂದು ಹೇಳಿ ಗಾಡಿಯನ್ನು ಶ್ರೀಮತಿ ಪಂಡಿತರಿಗೆ ತಿರುಗಿ ಕಳಿಸಿಕೊಟ್ಟಿದ್ದಾರೆ!

---

೩. ಮೊನ್ನೆ ಮುಂಬಯಿಯಲ್ಲಿ ಮದ್ರಾಸಿನ ದಿ. ಬ. ರಂಗಾಚಾರ್ಯರ ಅಧ್ಯಕ್ಷತೆಯಲ್ಲಿ ವಕೀಲರ ಪರಿಷತ್ತು ನೆರೆಯಿತು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ವಕೀಲರು ಕಾಯಿದೆಭಂಗದ ಚಳವಳಿಯಲ್ಲಾಗಲಿ, ರಾಜಕಾರಣದಲ್ಲಾಗಲಿ ಸೇರಬೇಕೋ ಬ್ಯಾಡೋ ಎಂಬದರ ಕುರಿತು ಚರ್ಚೆ ಮಾಡಿ ಕೊನೆಗೆ ರಾಮಾಯ ಸ್ವಸ್ತಿ, ರಾವಣಾಯ ಸ್ವಸ್ತಿ ಎಂಬ ಅಭಿಪ್ರಾಯ ಕೊಟ್ಟರು. ‘ರಾಜಕಾರಣದಲ್ಲಿ ಭಾಗ ತಗೊಳ್ಳಬೇಕು. ಸ್ವಾತಂತ್ರ್ಯ ಪ್ರವೃತ್ತಿಯನ್ನು ಬೆಳೆಯಬೇಕು; ಆದರೆ — ಆದರೆ ಅವರು ‘ಕಾಯಿದೆಯ ಕಾವಲುಗಾರ’ರಿರುವದರಿಂದ ಕಾಯಿದೆಭಂಗದ ಚಳವಳದಲ್ಲಿ ಸೇರುವದು ಧರ್ಮವಲ್ಲೆಂದು ನನ್ನ ಮತವಿದೆ!’ ದಿವಾಣ ಬಹಾದ್ದೂರರ ತರ್ಕಶಾಸ್ತ್ರವು ಮನೋರಂಜಕವಿದೆಂಬದರಲ್ಲಿ ಸಂದೇಹವಿಲ್ಲ. ವಕೀಲರು ಕಾಯಿದೆಯ ರಕ್ಷಕರಂತೆ! ಯಾವ ಕಾಯಿದೆಗಳ ರಕ್ಷಕರು? ಈಗ ಹೊರಡುತ್ತಲಿರುವ ಆರ್ಡಿನನ್ಸುಗಳ ರಕ್ಷಕರೋ? ಕಾಯಿದೆ ಮಂಡಳದ ಪ್ರಚಂಡ ಬಹುಮತವನ್ನು ಎಡಗಾಲಿನಿಂದ ಬದಿಗೆ ಸಾರಿ "ಸರ್ಟಿಫಿಕೇಶನ" ಬಲದಿಂದ ಸರ್ವಾಧಿಪತಿಗಳು ಪಾಸುಮಾಡುವ ಕಟ್ಟಳೆಗಳ ರಕ್ಷಕರೋ? ನೀತಿ-ರೀತಿಗಳನ್ನು ಲೆಕ್ಕಿಸದ ಕಾಯಿದೆಗಳ — ಗಡಿನಾಡಿನಲ್ಲಿ ಪ್ರಚಲಿತವಿದ್ದ ಮರ್ಡರಸ್ ಔಟರೇಜಸ್ ಆಕ್ಟಿನಂಥ ಕಾಯಿದೆಗಳ— ಪ್ರತಿಪಾಲಕರೋ? ದಿವಾಣಬಹಾದ್ದೂರರೂ ಇತರ ವಕೀಲರೂ ಆಳವಾಗಿ ವಿಚಾರ ಮಾಡಿದರೆ ಅವರಿಗೂ ಸಹ ಪ್ರತಿಪಾಲನೆಗಿಂತ ಭಂಗವೇ ಮಾಡಬೇಕಾದ ಕಾಯಿದೆಗಳು ಇರುತ್ತವೆಂತಾಗಲಿ, ಉತ್ಪನ್ನವಾಗಬಹುದೆಂಬದಾಗಲಿ ಹೊಳೆಯದೆ ಇರದು. ಅದೇ ಮೇರೆಗೆ ಕಾಯಿದೆಯ ಪ್ರತಿಪಾಲಕರೆಂಬ ಕರ್ತವ್ಯಕ್ಕಿಂತಲೂ ಜನತೆಯ ಮುಂದಾಳುಗಳೆಂಬ ನಾತೆಯಿಂದ ದೇಶಹಿತದ ಹಾಗೂ ಪ್ರಜೆಗಳ ನೈಸರ್ಗಿಕ ಹಕ್ಕುಗಳ ಪ್ರತಿಪಾಲನೆ ಮಾಡುವ ಕರ್ತವ್ಯವೇ ಮಿಗಿಲಾದದ್ದೆಂದು ಅವರು ಒಪ್ಪಬೇಕಾಗುವದು. ಪರಿಷತ್ತಿನಲ್ಲಿ ಈ ಅರ್ಥದ ಠರಾವೂ ಸಹ ಆಗಿರುತ್ತದೆಂಬದೊಂದು ಸಂತೋಷದ ಸುದ್ದಿಯು.

---

೪. ಸಂಯುಕ್ತ ಪ್ರಾಂತದೊಳಗಿನ ರೈತರು ಶೀಘ್ರವೇ ಮತ್ತು ಗೇಣಿ ತೆರಲಾರದೆ ಕರಬಂದಿಯ ಚಳವಳಕ್ಕೆ ಪ್ರಾರಂಭ ಮಾಡಿದ್ದಾರಷ್ಟೇ! ಮಧ್ಯ ಪ್ರಾಂತದಲ್ಲೂ, ಆಂಧ್ರ ದೇಶದಲ್ಲೂ ನಮ್ಮಿತ್ತ ಕಡೆಗೂ ರೈತರ ಪಾಡು ತೀರ ಕಷ್ಟತರವಾಗಿದೆ. ಧಾನ್ಯ-ದವಸುಗಳ ಗೇಣಿ ತೆರಬೇಕಾದಲ್ಲಿ ಅಷ್ಟು ಕಷ್ಟ ಭಾಸಿಸುವದಿಲ್ಲ. ಆದರೆ ಧಾನ್ಯ-ದವಸುಗಳ ಧಾರಣೆಯು ಏರಿದಾಗ ನಿಶ್ಚಯಿಸಿದ ನಗದಿ ಗೇಣಿಯನ್ನಾಗಲಿ, ಸರಕಾರಿ ತೀರ್ವೆಯನ್ನಾಗಲಿ ತೆರುವದು ರೈತರಿಗೆ ಅತಿ ಕಷ್ಟಸಾಧ್ಯವಾದ ಮಾತು. ಇಂಥ ಪರಿಸ್ಥಿತಿಯಲ್ಲಿ ಸರಕಾರವು ರೈತರಿಗೆ ಕಾಪಾಡದಿದ್ದರೆ ಯಾರು ಕಾಪಾಡುವರು? ಸರಕಾರಕ್ಕಂತೂ ಹಣದ ಅಡಚಣೆ! ಆಯವ್ಯಯಗಳ ಬಾಯಿಗೂಡಿಸುವದು ಕಠಿಣವಾಗಿದೆ. ಇಂಥ ಪ್ರಸಕ್ತಿಯಲ್ಲಿ ಸರಕಾರವು ರೈತವರ್ಗಕ್ಕೆ ಕಾಪಾಡುವದೆಂದು ಹೇಳಬರುವದಿಲ್ಲ! ಒಟ್ಟಾರೆ ರಾಜಕೀಯ ಕಾರಣಗಳಿಂದಲ್ಲ, ಕೇವಲ ಆರ್ಥಿಕ ಕಾರಣಗಳ ಮೂಲಕ ಅನೇಕ ಪ್ರಾಂತಗಳಲ್ಲಿ, ಅನೇಕ ಜಿಲ್ಹೆಗಳಲ್ಲಿ ಬೇಗನೇ ಕರಬಂದಿಯ ಚಳವಳಕ್ಕೆ ಪ್ರಾರಂಭವಾಗುವ ಲಕ್ಷಣಗಳು ತೋರುತ್ತಲಿವೆ! ಅದರಲ್ಲಂತೂ ರಾಜಕೀಯ ಅಸಂತೋಷವು ಹಬ್ಬಿತೆಂದರೆ ಕೇಳುವದೇ ಬೇಡ! ಒಟ್ಟಾರೆ ದೇಶದ ಮುಂದಿನ ಪರಿಸ್ಥಿತಿಯು ಬಲು ಭಯಂಕರ ಕಾಣುತ್ತದೆ! ಮುಂದೇನು ಆಗುವದೋ ದೇವರೇ ಬಲ್ಲ!

---

೫. ಅಪೇಕ್ಷೆಯಂತೆ ಪಂಡಿತ ಜವಾಹಿರಲಾಲರು ಕರ್ನಾಟಕದ ಸಂಚಾರ ಮುಗಿಸಿ ಪ್ರಯಾಗಕ್ಕೆ ಮುಟ್ಟುತ್ತಲೇ ಮುಚ್ಚುಬಂದಿಯ ಹುಕುಮೂ, ಊರುಬಿಟ್ಟು ಹೊರಗೆ ಹೋಗಬಾರದೆಂಬ ಹುಕುಮೂ ಅವರ ಮೇಲೆ ಜಾರಿಯಾದವು. ಪಂಡಿತರು ಡಿ| ಮೆಜಿಸ್ಟ್ರೇಟರಿಗೆ ಪತ್ರ ಬರೆದು "ನಾನು ರಾಷ್ಟ್ರೀಯ ಸಭೆಯ ಹೊರತು ಅನ್ಯರ ಅಪ್ಪಣೆ ಮಾನ್ಯ ಮಾಡುವವನಲ್ಲ; ನನ್ನ ನಿತ್ಯಾವಳಿಯ ಕೆಲಸವನ್ನೂ, ಅಖಿಲ ಭಾರತೀಯ ಕಾಂಗ್ರೆಸ ಕಮಿಟಿಯ ಮುಖ್ಯ ಕಾರ್ಯದರ್ಶಿ ಎಂಬ ನಾತೆಯಿಂದ ನಾನು ಮಾಡಬೇಕಾದ ಕೆಲಸವನ್ನೂ ಮಾಡದಿರಲಾರೆ; ನನಗೆ ಕಂಡ ಮಾತು ಆಡದಿರಲಾರೆ; ಅವಶ್ಯವಿದ್ದಾಗ ಬೇಕಾದಲ್ಲಿ ಹೋಗುವೆನು. ಬೇಗನೇ ಮಹಾತ್ಮಾ ಗಾಂಧಿಯವರ ಸ್ವಾಗತಕ್ಕೂ ವರ್ಕಿಂಗ ಕಮಿಟಿಯ ಸಭೆಗೂ ಮುಂಬಯಿಗೆ ಹೋಗುವವನಿದ್ದೇನೆ"ಂದು ತಿಳಿಸಿದ್ದಾರೆ. ಪಂಡಿತರಿಗೆ ಮುಂಬಯಿಗೆ ಬರಲು ಕೊಡುತ್ತಾರೋ ಇಲ್ಲವೆಂಬದು ಇಂದು-ನಾಳೆ ತಿಳಿಯುವದು.

೬. ಸಂಯುಕ್ತಪ್ರಾಂತದೊಳಗಿನ ವೆಬ್ಬಾಳಿಕೆ ಬಿರುಸಾಗುತ್ತ ನಡೆದಿದೆ. ಕೊಂಗ್ರೆಸ ಕಚೇರಿಗಳದ್ದ ಇಮಾರತುಗಳನ್ನು, ಕೊಂಗ್ರೆಸ ಕಾರ್ಯಕ್ಕೆ ಯಾವದೇ ರೀತಿಯಿಂದ ಉಪಯೋಗಿಸಲ್ಪಡುವ ಇಮಾರತುಗಳನ್ನು ಖಾಲಿ ಮಾಡಬೇಕೆಂದು ಮಾಲೀಕರಿಗೆ ನೋಟಿಸುಗಳಾಗಿವೆ. ಒಂದು ತಿಂಗಳ ತನಕ ಈ ಇಮಾರತುಗಳು ಖಾಲಿ ಇಡಬೇಕಂತೆ! ಆ ಮುಂದೆ ಕೊಂಗ್ರೆಸ-ಉಪಯೋಗಕ್ಕೆ ಕೊಡಬಾರದಂತೆ! ಕಾನಪೂರದಲ್ಲಂತೂ ಒಂದು ರಾತ್ರೆ ಹೊರಬೀಳಬಾರದಾಗಿ ಜನರಿಗೆ ಫರ್ಮಾನು ಆಗಿತ್ತು; ಈ ಫರ್ಮಾನು ಈಗ ಒಂದು ವಾರಕ್ಕೆ ಬೆಳೆದಿದೆ. ಮೊನ್ನೆ ತಾ. ೨೬ಕ್ಕೆ ಇಟಾವಾ ಎಂಬಲ್ಲಿ ಪ್ರಾಂತಿಕ ಪರಿಷತ್ತು ಕೂಡುವದಿತ್ತು; ಪರಿಷತ್ತಿನಲ್ಲಿ ಕರಬಂದಿಯ ಬಗ್ಗೆ ಚರ್ಚೆ ನಡೆಯಲಿಕ್ಕಿಲ್ಲೆಂದು ಅಧಿಕಾರಿಗಳು ಕಾರ್ಯದರ್ಶಿಗಳ ಕಡೆಗೆ ಆಶ್ವಾಸನ ಬೇಡಿದರು; ಕಾರ್ಯದರ್ಶಿಗಳು ಈ ಅಧಿಕಾರವು ಪರಿಷತ್ತಿನ ವಿಷಯನಿಯಾಮಕ ಕಮಿಟಿಯದಾದ್ದರಿಂದ ತಾವು ಆಶ್ವಾಸಿಸಲಾರೆವೆಂದು ಹೇಳಿಕೆ ಹೇಳಿದರು. ಆಗ ಪರಿಷತ್ತು ಕೂಡಿಸಲಿಕ್ಕೆ ಸರಕಾರವು ಬಂದಿ ಮಾಡಿತು. ಆದರೂ ಪರಿಷತ್ತು ಕೂಡುತ್ತಿತ್ತು; ಕೂಡಿಸಬೇಕೆಂದು ಮುಂದಾಳುಗಳ ಸಂಕಲ್ಪವಿತ್ತು; ಆದರೆ, ಮಹಾತ್ಮರು ಬರುತ್ತಾರೆ; ವರ್ಕಿಂಗ ಕಮಿಟಿಯೂ ಕೂಡುತ್ತಿದೆ; ಅವರ ವಿಚಾರ ಪಡೆದು ಪರಿಷತ್ತು ಕೂಡಿಸಬಹುದೆಂದು ಕೆಲವರ ಸೂಚನೆ ಬಂದ ಮೇರೆಗೆ ಪರಿಷತ್ತು ಮುಂದೂಡಲ್ಪಟ್ಟಿದೆ.

೭. ಬಾರ್ಡೋಲಿ ಚೌಕಶಿ ಬಗ್ಗೆ ನೇಮಿಸಿದ ಮಿ|| ಗೋರ್ಡನ್ ಸಾಹೇಬರು ಮಾಡಿದ ವರದಿಯು ಈಗ ಪ್ರಕಟವಾಗಿದೆ. ಸರಕಾರವು ವರದಿಗೆ ತನ್ನ ಪೂರ್ಣ ಮಾನ್ಯತೆಯಿತ್ತಿದೆ. ಇವರ ಮೇಲಿಂದಲೇ ವರದಿಯಲ್ಲಿ ಏನೇನಿರಬಹುದೆಂದು ಕಲ್ಪನೆಯಿಂದ ತಿಳಿಯಬಹುದು. ಸರಕಾರಿ ಕಾಗದ - ಪತ್ರಗಳನ್ನು ಪುರಾವೆಗೆ ತೆರೆಗೊಡದ್ದರಿಂದ ರಾಷ್ಟ್ರೀಯ ಸಭೆಯವರು ಚೌಕಶಿಗೆ ಬಹಿಷ್ಕಾರ ಹಾಕಿದ ಮೇಲೆ ಸಾಹೇಬರು ಏಕತರ್ಫಿ ರಿಪೋರ್ಟ ಮಾಡಿದ್ದಾರೆ. ಖಾತೇದಾರರಲ್ಲಿ ಹಣದ ಅಡಚಣೆಯಿದ್ದದ್ದು ಸುಳ್ಳೆಂತಲೂ, ಕಿರ್ವ ವಸೂಲಿಗೆ ಹೋದ ಅಧಿಕಾರಿಗಳು ಸೌಜನ್ಯದಿಂದ ವರ್ತಿಸಿದ್ದರೆಂತಲೂ, ಬಲಾತ್ಕಾರದ ಆರೋಪವು ಸುಳ್ಳೆಂತಲೂ, ರಾಜಕೀಯ ಹೇತುಗಳಿಂದ ಕಿರ್ವ ತೆರಲಿಕ್ಕೆ ಖಾತೇದಾರರು ಒಪ್ಪುತ್ತಿದ್ದಿಲ್ಲವೆಂದೂ. ಕಾಂಗ್ರೆಸ್ಸಿನವರು ಅಧಿಕಾರಿಗಳ ಬದನಾಮಿ ಮಾಡಲಿಕ್ಕೆ ಸುಳ್ಳು ಪುರಾವೆ ತಯಾರಿಸಿದರೆಂದೂ ಗೋರ್ಡನ್ ಸಾಹೇಬರು ತೀರ್ಪು ಕೊಟ್ಟಿದ್ದಾರೆ! ಇದ್ದಲ್ಲಿ ಸತ್ಯವಾಗಿದ್ದರೆ, ಸರಕಾರಿ ಕಾಗದಪತ್ರಗಳನ್ನು ಬೆಳಕಿಗೆ ತರಲಿಕ್ಕೆ ಅಧಿಕಾರಿಗಳು ಯಾಕೆ ಅಡ್ಡಿ ಮಾಡಿದರು? ಪ್ರತಿಪಕ್ಷಿಗಳು ಬೇಡಿದ ಪುರಾವೆಯನ್ನು ಮುಂದಿಟ್ಟು ನಿರ್ಣಯವಾಗಿದ್ದರೆ, ಈ ನಿರ್ಣಯಕ್ಕೆ ಜನರು ಬೆಲೆ ಕೊಡುತ್ತಿದ್ದರು; ಗೋರ್ಡನ್ ಸಾಹೇಬರ ಏಕತರ್ಫಿ ನಿರ್ಣಯಕ್ಕೆ ಯಾರು ಮಹತ್ವ ಕೊಟ್ಟಾರು?

೮. ಬಾಬು ಸುಭಾಷಚಂದ್ರ ಬೋಸ ಇವರ ಅಧ್ಯಕ್ಷತೆಯಲ್ಲಿ ಕಳೆದ ವಾರ ಪುಣೆಯೊಳಗೆ ಮಹಾರಾಷ್ಟ್ರೀಯ ಯುವಕ ಪರಿಷತ್ತು ಸೇರಿತ್ತು. ಅಧ್ಯಕ್ಷರು ಈಗಿನ ರಾಷ್ಟ್ರೀಯ ಸಭೆಯಲ್ಲಿ ಯುವಕರಿಗೆ ಯೋಗ್ಯ ಸ್ಥಾನ ಸಿಗುವದಿಲ್ಲವೆಂದು ದೂರಿದರು. ಪರಿಷತ್ತಿನಲ್ಲಿ ಪಾಸಾದ ಠರಾವುಗಳು ಯುವಕರ ಮನಸ್ಥಿತಿಯನ್ನು ತೋರಿಸುತ್ತಿವೆ. ಬಂಗಾಲ ಪ್ರಾಂತದ ಪರಿಷತ್ತಿನಲ್ಲಿ ಪಾಸಾದಂತೆ ಈ ಪರಿಷತ್ತಿನಲ್ಲಿಯೂ ಬ್ರಿಟಿಶ ಮಾಲಿಗೂ, ಬ್ರಿಟಿಶರ ಸಂಸ್ಥೆಗಳಿಗೂ ಬಹಿಷ್ಕಾರ ಹಾಕಬೇಕೆಂದು ಠರಾವು ಪಾಸಾಗಿದೆ. ಸರಕಾರವು ಆರಂಭಿಸಿದ ದೊಡ್ಡ ಹಾದಿಯ ಮೇಲಿಂದ ದಿಲ್ಲಿಯ ಕರಾರನಾಮೆಯು ಈಗ ಅಳಿದುಹೋಗಿರುತ್ತದಾಗಿ ಪರಿಷತ್ತು ಅಭಿಪ್ರಾಯಪಟ್ಟು, ಪುನಃ ಸಂಗ್ರಾಮಕ್ಕೆ ಕೂಡಲೇ ಪ್ರಾರಂಭ ಮಾಡುವರೆ ರಾಷ್ಟ್ರೀಯ ಸಭೆಯ ವರ್ಕಿಂಗ ಕಮಿಟಿಗೆ ಬಿನ್ನೈಸುವ ಠರಾವು ಆಗಿದೆ. ಒಟ್ಟಾರೆ ಯುವಕರು ಯುದ್ಧ ಹೂಡಲಿಕ್ಕೆ ಹಾತೊರೆಯುತ್ತಾರೆಂದು ಸಿದ್ಧವಾಯಿತು! ಅವರಿಗೆ ದೊಣ್ಣೆಯ ಭೀತಿಯಿಲ್ಲವಷ್ಟೇ?

ಆಂಗ್ಲ ಜ್ಯೋತಿಷಿಯ ಭವಿಷ್ಯ!

ಹಿಂದಭೂಮಿಯಲ್ಲಿ ದೊಣ್ಣೆಯ ರಾಜ್ಯ!

ಆರ್. ಎಚ್. ನೇಲರವರೆಂಬ ಸುಪ್ರಸಿದ್ಧ ಆಂಗ್ಲ ಜ್ಯೋತಿಷಿಗಳು ಬರೆಯುವದೇನಂದರೆ:— ಈ ವಾರದ ಮಹತ್ವದ ಸುದ್ದಿಯು ಹಿಂದುಸ್ಥಾನದ್ದು. ಆ ಕುರಿತು ಬಲವತ್ತರ ಉಪಾಯಗಳನ್ನು ಮಾಡದಿದ್ದರೆ, ಅಲ್ಲಿ ಭೀಷಣ ಸ್ಥಿತಿಯುಂಟಾಗುವದು. ನಾತಾಳ ಹಬ್ಬದ ದಿನ ಬ್ರಿಟಿಶ ರಾಜ್ಯದ ವಿರುದ್ಧ ಜೋರಿನ ಸಂಗ್ರಾಮಕ್ಕೆ ಪ್ರಾರಂಭವಾಗುವದು. ೧೯೩೨ನೇ ಇಸ್ವಿಯ ಮೇ ಮತ್ತು ಆಗೋಸ್ತ ತಿಂಗಳಲ್ಲಿ ಮಹತ್ವದ ಬದಲಾವಣೆಗಳಾಗುವವು. ಇನ್ನು ಕೆಲವು ದಿನಗಳಲ್ಲೇ ಹಿಂದುಸ್ಥಾನದಲ್ಲಿ ದೊಣ್ಣೆ ರಾಜಿಯು ನೆಲೆಗೊಳ್ಳುವದು.

— ಲಂಡನ್ 'ಡೇಲಿ ಎಕ್ಸಪ್ರೆಸ'

ವಾರ್ತೆಗಳು.

— ಬಂಗಾಲದೊಳಗಿನ ಸೇವಾ ದಲವು ಬೇಕಾಯದೇಶೀರ ಸಮಿತಿಯೆಂದು ನಿರ್ಣಯವಾಗಿದೆ.

— ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯವರು ಪುರಿಯ ರಾಷ್ಟ್ರೀಯಸಭೆಯ ಅಧ್ಯಕ್ಷಸ್ಥಾನಕ್ಕೆ ಬಾಬು ರಾಜೇಂದ್ರ ಪ್ರಸಾದರ ಹೆಸರನ್ನು ಸೂಚಿಸಿದ್ದಾರೆ.

— ಪ್ರಯಾಗದ ಬ್ಯಾ|ರಂಗನಾಥಯವರು ಇನ್ನು ಮುಂದೆ ವಕೀಲಿಯನ್ನು ಬಿಟ್ಟು ಈ ಮುಂದೆ ರಾಷ್ಟ್ರಸೇವೆಯ ಕೆಲಸವನ್ನೇ ಮಾಡುವ ಸಂಕಲ್ಪ ಮಾಡಿದ್ದಾರೆ.

— ರೋಹಟಕ (ಪಂಜಾಬ)ದಲ್ಲಿ ಸೇವಾ ದಲದ ಶಿಕ್ಷಣ ಶಿಬಿರವು ನಡೆದಿತ್ತು. ಮೊನ್ನೆ ತಾ. ೨೬ಕ್ಕೆ ಶಿಬಿರದ ಸಮಾಪ್ತಿಯಾಗುವದಿತ್ತು. ಅಧಿಕಾರಿಗಳಿಗೆ ಆ ತನಕ ತಡೆಯ ಲಾಗಲಿಲ್ಲ; ತಾ. ೨೩ನೇ ದಿನ ೨೦೦ ಜನ ಪೋಲೀಸರೊಂದಿಗೆ ಶಿಬಿರಕ್ಕೆ ಮುತ್ತಿಗೆ ಹಾಕಿ, ಶಿಬಿರದ ಮೇಲಧಿಕಾರಿಗಳನ್ನು ಕೈದು ಮಾಡಿ ಕಾಗದ ಪತ್ರಗಳನ್ನು, ಅಪಹರಿಸಿದರು.

— ಕೋಮಿಲ್ಲಾ ಡಿ| ಮ್ಯಾಜಿಸ್ಟ್ರೇಟರ ಖೂನಿಯ ಪ್ರಕರಣದಲ್ಲಿ ನೂರಾರು ಕಡೆ ಝಡ್ತಿಗಳೂ, ಕೈದುಗಳೂ ಆಗಿವೆ—ಕೆಟ್ಟನೆಗೆ—ವಾಸ್ತು—ಜನರ—ಮೇಲೆ—ಬಿಟ್ಟಿಯಾಗುತ್ತದೋ ನೋಡಬೇಕು.

— ಮುಂಬಯಿ ಸರಕಾರದ ಹೊಸ ಬಜೆಟು ತಯಾರಾಗುತ್ತಲಿದೆ. ಹುಂಡಿಗಳಿಗೆ ಸ್ಟಾಂಪು ಹಚ್ಚುವ ಹಾಗೂ ವಾರಸಾ ಪತ್ರಗಳ ಸ್ಟಾಂಪ ಡ್ಯೂಟಿ ಹೆಚ್ಚಿಸುವ ಸೂಚನೆಗಳು ಬಂದಿವೆಯಂತೆ. ಈ ರೀತಿ ೫೦ ಲಕ್ಷ ರೂ. ತೆರಿಗೆ ಹುಟ್ಟುವದಂತೆ!

— ಇಜಿಪ್ತ ದೇಶದಲ್ಲಿ ಟೆಲೆಲ್-ಅಮರ್ನಾ ಎಂಬಲ್ಲಿ ಅಗೆಯುವಾಗ ಭೂಗರ್ಭದಲ್ಲಿ ೩,೦೦೦ ವರ್ಷಗಳ ಹಿಂದಿನ ರಾಣಿಯ ಮಂದಿರವೊಂದು ಸಿಕ್ಕಿದೆ.

ಕಾರವಾರದೊಳಗಿನ ಸಮ್ಮೇಲನಗಳ ಹಿರಿಯರ ಅಲ್ಪ ಪರಿಚಯ.

೧. ಸಾಹಿತ್ಯ ಸಮ್ಮೇಲನದ ಹಿರಿಯರಾದ ಶ್ರೀ| ಮುಳಿಯ ತಿಮ್ಮಪ್ಪಯ್ಯನವರು ಸುಮಾರು ೪೧ ವರ್ಷ ಪ್ರಾಯದವರು. ಮಂಗಳೂರಿನ ಸೇಂಟ ಎಲ್ಯೂಸಿಸ್ ಕಾಲೇಜಿನಲ್ಲಿ ಕನ್ನಡದ ಅಧ್ಯಾಪಕರಿರುತ್ತಾರೆ. ಕೆಲವು ಕಾಲ ಅವರು "ಕನ್ನಡ ಕೋಗಿಲೆ"ಯೆಂಬ ಮಾಸಿಕದ ಸಂಪಾದಕರಿದ್ದರು. ಇವರು (೧)"ಚಂದ್ರಾವತಿ ವಿಲಾಸ" ವೆಂಬ ಹಳೆಗನ್ನಡ ಗ್ರಂಥವನ್ನು ಅದ್ಭುತರಾಮಾಯಣದ ಶೈಲಿಯಲ್ಲಿ ಬರೆದಿರುತ್ತಾರೆ. ಈ ಹೊರತು (೨) ಸೊಬಗಿನ ಬಳ್ಳಿ, (೩) ಮಾತೃಭೂಮಿ, (೪) ನಡತೆಯ ನುಡಿ, (೫) ಪಗಲಿರುಳು, (೬) ಜಡಮುಡುಗಿ ಎಂಬ ಅವರ ಗದ್ಯ-ಪದ್ಯ ಗ್ರಂಥಗಳು ಲೋಕಪ್ರಿಯವಾಗಿವೆ. ದಕ್ಷಿಣ ಕನ್ನಡದ ಹೆಸರುಗೊಂಡ ಸಾಹಿತ್ಯ ಸೇವಕರಲ್ಲಿ ಇವರೊಬ್ಬರಾಗಿರುವರು.

೨. ಏಕೀಕರಣ ಪರಿಷತ್ತಿನ ಅಧ್ಯಕ್ಷರಾದ ಶ್ರೀ| ಜೇ. ಸಾಲ್ಡಾನಾರವರು ದಿಲ್ಲಿ ದರಬಾರದ ಕಾಲಕ್ಕೆ ನಮ್ಮ ಕುಮಟಾ ಕೋರ್ಟಿನಲ್ಲಿ ಸಬಜಡ್ಜರಾಗಿದ್ದರು. ಮುಂದೆ ಸರಕಾರಿ ನೌಕರಿಯಿಂದ ನಿವೃತ್ತರಾದ ಮೇಲೆ ಸ್ವರಾಜ್ಯ ಪಕ್ಷಕ್ಕೆ ಸೇರಿ ಮಂಗಳೂರ ಜಿಲ್ಲೆಯ ಪರವಾಗಿ ಮದ್ರಾಸ ಇಲಾಖೆಯ ಕಾಯಿದೆ ಮಂಡಳದ ಸದಸ್ಯರಾಗಿದ್ದರು; ಇವರು ಬಹು ಚಟ್ಟವಟಿಕೆಯುಳ್ಳ ಗೃಹಸ್ಥರು; ಸಮಾಜಸೇವೆಯ ಬಗ್ಗೆ ಉತ್ಕಂಠೆಯುಳ್ಳವರು. ಮಾತೃಭೂಮಿ, ಮಾತೃಭಾಷೆಗಳ ವಿಷಯ ಒಳ್ಳೇ ಆದರವನ್ನು ತೋರಿಸುತ್ತಾರೆ.

೩. ಕವಿ ಸಮ್ಮೇಲನದ ಅಧ್ಯಕ್ಷಸ್ಥಾನವು ಮಂಜೇಶ್ವರದ ಶ್ರೀ| ಗೋವಿಂದ ಪೈಗಳಿಗೆ ಕೊಡಮಾಡಿತ್ತು; ಖಾಸಗಿ ತಾಪತ್ರಯಗಳ ಮೂಲಕ ಅವರು ಅಧ್ಯಕ್ಷರಾಗಲು ಒಪ್ಪಲಿಲ್ಲವೆಂದು ತಿಳಿಯುತ್ತದೆ. ಈಗ ಬೆಂಗಳೂರಿನ ಶ್ರೀ| ಸ್ವಿ. ಸೀತಾರಾಮಯ್ಯನವರು ಅಧ್ಯಕ್ಷರಾಗಿ ಆರಿಸಲ್ಪಡುತ್ತಾರೆ; ಅವರೂ ಒಪ್ಪಿದ್ದಾರೆ. ಸೀತಾರಾಮಯ್ಯನವರು ಒಳ್ಳೇ ಸಾಹಿತ್ಯ ಸೇವಕರು. 'ಸೋಹರಾಬ ರುಸ್ತುಂ,' 'ಅಶ್ವತ್ಥ' ಎಂಬ ಗದ್ಯ ಗ್ರಂಥಗಳನ್ನು, 'ವಿ. ಸೀ. ಯವರ ಗೀತ'ಗಳೆಂಬ ದೊಡ್ಡ ಕಾವ್ಯಸಂಗ್ರಹವನ್ನೂ ಬರೆದು ಪ್ರಕಟಿಸಿದ್ದಾರೆ.

ರಂಗಕಲಾ ವಿಜ್ಞಾನ.

ಈ ಪುಸ್ತಕದಲ್ಲಿ ನಾಲಿಗೂ. ರೇಷಿಮೆಗೂ ಮೇಲೆ ದ ಜರ್ಮನ ರಂಗು ಹಾಕುವ ಶಾಸ್ತ್ರೀಯ ಹಾಗೂ ವ್ಯವಹಾರಿಕ ಮಾಹಿತಿಯು ಇರುತ್ತದೆ. ಇದಲ್ಲದೆ, ಖಡಿ ಹಾಕುವದು, ಅಚ್ಚು ಹಾಕುವದು ಅಪ್ಪಗಳ ಮಾಹಿತಿಯೂ ಅದಗರುತ್ತದೆ ಪಾಯರಿಕ್ಸ, ಬೇಸಿಕ್, ನಿಮಥೀನಲ, ಅಂತಾಕ್ರಿನ್, ಅಲ್ಜರ್ ಇನ ರಂಗುಗಳೆಕ ಮತ್ತು ಲೀನೆಡ್‌ ಹಚ್ಚುವ, ಪಾವಿ ಮಾಡುವ ಮುಂತಾದ ಪ್ರಕಾರದ ವಿಧಗಳು ವಿಸ್ತೃತವಾಗಿ ವರ್ಣಿಸಲ್ಪಟ್ಟಿರುತ್ತವೆ. ಮಾಲ-ರೇಷ್ಮೆಗಳಿಗೆ ಬಣ್ಣ ಹಾಕುವ ಸುಮಾರು ೧೩೫ ರೀತಿಯ ಗುಪ್ತ ಮಾಹಿತಿಯನ್ನೊಳಗೊಂಡ ೧೦೦ ಕೃತಿಗಳು ಇರುತ್ತವೆ. ವರ್ತಮಾನಪತ್ರಗಳು ಒಳ್ಳೇ ಅಭಿಪ್ರಾಯ ಕೊಟ್ಟಿರುತ್ತವೆ. ವಿಷಯಸೂಚಿಯನ್ನು ಉಚಿತ ಕಳಿಸುವೆವು. ಬೆಲೆ ೩ ರೂಪಾಯಿ. ವ್ಹಿ. ಪಿ. ಖರ್ಚು ರೂ. ೩-೬-೦.

ಪತ್ತೆ:- ಸಿ. ಜೇ. ಹಾಡೋಳೆ.

ಕೊಲ್ಹಾಪುರ.

ಕಾನಡಾವೃತ್ತ

ಪ್ರಜಾಪತಿ ಸಂ। ಮಾರ್ಗಶಿರ ಬ। ೧ ಸೋಮವಾರ.

ಗಾಂಧಿಮಹಾರಾಜಕೀಜೈ!

ಇಂದು ಬೆಳಿಗ್ಗೆ ೮ ಘಂಟೆ ಬಡಿಯುವಾಗ ಭಾರತಮಾತೆಯ ಪಂಚಪ್ರಾಣನಾದ ಮಹಾತ್ಮನು ಸ್ವದೇಶಕ್ಕೆ ಬಂದು ಮುಟ್ಟುತ್ತಾನೆ. ನಾನಾ ತರದ ಕಷ್ಟಗಳಿಂದ ನರಳುತ್ತಿರುವ ರಾಷ್ಟ್ರಮಾತೆಗೆ ಕೆಲ ಕಾಲವಾದರೂ "ಹುಸ್!" ಎಂದು ಸುಖದಿಂದ ಉಸುರಾಡಲಿಕ್ಕೆ ಸಿಗುವದು. ಬ್ರಿಟಿಶ ರಾಷ್ಟ್ರದ ಮುಂದೆ, ಜಗತ್ತಿನ ಮುಂದೆ ಭಾರತೀಯ ಜನತೆಯ ಪರವಾಗಿ ತಮ್ಮ ಬೇಡಿಕೆಯನ್ನೂ ಅಂಬೋಣವನ್ನೂ ಸ್ಪಷ್ಟ ಶಬ್ದಗಳಿಂದ ನಿಶ್ಚಯವಾಗಿ ಹೇಳಲಿಕ್ಕೆ ಮಹಾತ್ಮರು ಆಂಗ್ಲ ಭೂಮಿಗೆ ತೆರಳಿದಂದಿನಿಂದ ಈ ಹೊತ್ತಿಗೆ ನಾಲ್ಕು ತಿಂಗಳಾಗುತ್ತವೆ. ಅಂದಿನಾರಭ್ಯ ದೇಶದಲ್ಲಿ ಅನೇಕ ಸ್ಥಿತ್ಯಂತರಗಳಾಗಿವೆ. ನಾಲ್ಕು ತಿಂಗಳು, ಸಣ್ಣ ಕಾಲವಾದರೂ ದೇಶದಲ್ಲಾದ ಸ್ಥಿತ್ಯಂತರಗಳ ಮೂಲಕ ನಾಲ್ಕು ವರ್ಷಗಳ ಕಾಲವು ಕಳೆದುಹೋದಂತೆ ಮನಸ್ಸಿಗೆ ಭಾಸವಾಗುತ್ತದೆ. ಮಹಾತ್ಮರು ದುಂಡು ಮೇಜಿನ ಪರಿಷತ್ತಿಗೆ ಹೊರಡಬೇಕಾದರ ಏನು ಸ್ಥಿತಿಯಿತ್ತು? ಈಗ ಅವರು ಮರಳಿ ಬಂದಾಗ ಏನು ಸ್ಥಿತಿಯನ್ನು ಕಾಣುವರು? ಹದಿನಾಲ್ಕು ವರುಷ ವನವಾಸವನ್ನು ಅನುಭೋಗಿಸಿ ತಿರುಗಿ ಅಯೋಧ್ಯೆಗೆ ಬಂದ ಶ್ರೀ ರಾಮಚಂದ್ರನಿಗ ಕಂಡಿದ್ದಿಲ್ಲವಷ್ಟು ಸ್ಥಿತ್ಯಂತರವು ಮಹಾತ್ಮರಿಗೆ ಇಂದು ತಮ್ಮ ಮಾತೃಭೂಮಿಯಲ್ಲಿ ಕಾಣಬೇಕಾಗುವದು!

ಮಹಾತ್ಮರು ಹೊರಡಬೇಕಾದರೆ ನ್ಯಾಯಸರಾಯರಾದ ನೇಕ ನಾಮದಾರ ಲಾರ್ಡ ವಿಲಿಂಗ್ಡನ್ನರು ಅವರನ್ನು ಸಿಮ್ಲಾಕ್ಕೆ ಕರೆದೊಯ್ದು ಗಾಂಧಿ—ಇರ್ವಿನ್ ಕರಾರನಾಮೆಯಂತೆ ತಾವು ನಡೆಯುವೆವೆಂತಲೂ ತಮ್ಮ ಕೈಕೆಳಗಿನ ಅಧಿಕಾರಿಗಳಿಗ ಆ ರೀತಿ ನಡೆಯಲಿಕ್ಕೆ ಹಚ್ಚುವೆವೆಂತಲೂ ಆಶ್ವಾಸನೆ ಕೊಟ್ಟು, ಬರವಸೆ ಹೇಳಿ, ಅವರನ್ನು ವಿಲಾಯತಿಗೆ ಕಳಿಸಿದರು. ಮಹಾತ್ಮರಾದರೂ ದೊರೆಗಳ ಆಶ್ವಾಸನದ ಮೇಲೆ ವಿಶ್ವಾಸವನ್ನಿಟ್ಟು, ಶಾಂತಚಿತ್ತದಿಂದ, ನಿರ್ಮಲಮನಸ್ಕರಾಗಿ ವಿಲಾಯತಿಯ ಪ್ರಯಾಣವನ್ನು ಬೆಳೆಸಿದರು ಮತ್ತು ನಿಮಂತ್ರಕರಾದ ಬ್ರಿಟಿಶ ರಾಜ್ಯಕರ್ತರು ತಮ್ಮನ್ನಿಟ್ಟುಕೊಂಡಷ್ಟು ದಿವಸ ವಿಲಾಯತಿಯಲ್ಲಿದ್ದು ರಾಜ್ಯಕರ್ತರ ಕೂಡ ಸಂಧಿ ಪ್ರಸ್ತಾಪವನ್ನು ಮಾಡಿದರು.

ಆದರೆ, ದೊರೆಗಳಾಗಲಿ, ಅವರ ಕೈಕೆಳಗಿನ ಅಧಿಕಾರಿಗಳಾಗಲಿ ತಾವು ನಂಬಿಗೆ ಕೊಟ್ಟಂತೆ ನಡೆದರೇನು? ಗಾಂಧಿ-ಇರ್ವಿನರ ಕರಾರಿನಂತೆ ನಡೆದರೇನು? ದುಂಡು ಮೇಜಿನ ಪರಿಷತ್ತಿನಲ್ಲಿ 'ಒಪ್ಪಂದ' ವಾಗದೆ, ಒಪ್ಪಂದವಾಗುವ ಆಶೆ ನಹ ಇರದೆ, ಪುನಃ ಸ್ವಾತಂತ್ರ್ಯಸಂಗ್ರಾಮದ ರಣಭೇರಿಯು ಹಾಗು ವ ತನಕ ಪರಸ್ಪರ—ಶಾಂತತಾ ಪಾಲನೆಯನ್ನು ಮಾಡಿದರೇನು?

ಇಲ್ಲ! ತಮ್ಮ ವಚನವನ್ನು ಪಾಲಿಸಲಿಲ್ಲ! ಕರಾರಿನಂತೆ ನಡೆಯಲಿಲ್ಲ! ಶಾಂತತೆಯನ್ನು ಪಾಲಿಸಲಿಲ್ಲ! ಮೇಲಾಗಿ ಕಾಂಗ್ರೆಸ್ಸಿನವರೇ ಒಪ್ಪಂದ ಮುರಿದರೆಂದು ತಕರಾರು ಮಾಡುತ್ತಾ— ಅಲ್ಲಿ ನಮ್ಮ [illegible]ತ್ತಾ— ಬಿಳೀ ಧ್ವಜದ ಕೆಳಗ ನಿಂತು ಶಾಂತ ತರವಾದ ಗುಂಡುಗಳ ಸುರಿಮಳೆಯನ್ನು ಕರೆಯುತ್ತಿರುವರು!! ಈ ನಾಲ್ಕು ತಿಂಗಳುಗಳಲ್ಲಿ ಗವರ್ನಮೆಂಟಿನವರ ವಿಹಂಗಮ ದೃಷ್ಟಿಯಿಂದ ಅವಲೋಕನೆ ಮಾಡಿದರೆ, ನಾವು ಹೇಳುವುದು ನಿಜವೆಂದು ಸ್ಪಷ್ಟವಾಗುವದು.

ಮಹಾತ್ಮರು ಇಂಗ್ಲಂಡಕ್ಕೆ ಹೋದ ಮೇಲೆ ಎಸಂಬ್ಲಿಯ ಅನೇಕ ಲೋಕನಿಯುಕ್ತ ಸಭಾಸದರು ಹಾಜರಿಗ ಇಲ್ಲದ ಸಮಯ ಸಾಧಿಸಿ, ಹೊಸ ಪ್ರೆಸ್ ಆಕ್ಟು ಪಾಸಾಯಿತು. ಯಾವ ಉಪ್ಪಿನ ಕರದ ನಿರಾಕರಣೆಯ ಬಗ್ಗೆ ಲಕ್ಷಾವಧಿ-ಕೋಟ್ಯಾವಧಿ ಜನರು ಕಾಯಿದೆಯ ಭಂಗ ಮಾಡಿದರೋ, ನೂರಾರು ಜನರು ಸೆರೆಯಾಳುಗಳಾದರೋ, ಲಾಠಿ ಹೊಡತವನ್ನು ಅನುಭವಿಸಿದರೋ ಆ ಕರವು ನೂರಕ್ಕೆ [illegible]ರಂತೆ ಹೆಚ್ಚಿಸಲ್ಪಟ್ಟಿತು, ನಾನಾ ತರದ ಕರಗಳ ಭಾರವು ಬಡ ಪ್ರಜೆಗಳ ತಲೆಯ ಮೇಲೆ ಬಿದ್ದು ಪ್ರಜೆಗಳು ಹಾಹಾಕಾರ ಪಡುತ್ತಿರುವಾಗ, ಬಾರ್ಡೋಲಿಯಲ್ಲಿ ಸಹದ ತೆರಿಗೆ ವಸೂಲಿಯ ಅನಾಚಾರ ಒಗ[illegible] ಪೇಶಾವರ ನಡದು [illegible] ಸರಕಾರಿ ಅಧಿಕಾರಿಗಳು [illegible] ಬಂಗಾಲದ ಸರಕಾರಿ ಕಾಗದ ಪತ್ರಗಳನ್ನು [illegible] ಕಲಿಯ ಅವರಿಕ್ಕೆ ತದ ವಿರುದ್ಧ, [illegible] ಮೇಲೆ [illegible] (೨) ಕೆಲಮಿನಿಟ್ಟುಗಳಲ್ಲಿ [illegible] ಭಯಂಕರ ಶಿಕ್ಷೆಗಳು ವಿಧಿಸಲ್ಪಟ್ಟವು, ಕೆಂಪು ನಿಶಾನಿಯು [illegible] ಆತಂಕವಾಗದಿದ್ದರೂ [illegible] ಸಂಭಾವಿತರಿಗೆ ಒಂದು ಶ್ಲೋಕದ ಕಲಮಿನನ್ವಯ ಶಿಕ್ಷೆ ವಿಧಿಸಿ, ದೆಹಲಿ, ಬಿಜಾಪುರ, ಬೆಳಗಾಂವ, ಢಾಕಾ ನಗರಗಳಲ್ಲಿ ಅತ್ಯಂತ ಹೃದಯದ್ರಾವಕ ಪ್ರಕಾರಗಳು ನಡೆದವು, ಬಂಗಾಲದಲ್ಲಿ ಲಷ್ಕರಿ ಕಾಯಿದೆಯು ಸ್ಥಾಯಿಯಾಗಿ, ಸಂಯುಕ್ತ ಪ್ರಾಂತದೊಳಗಿನ ದೀನ ಕೃಷಿಕರು ಆದಿ ವಿಪನ್ನಾವಸ್ಥೆಯಲ್ಲಿ ಸಿಲುಕಿ ನಿರುಪಾಯರಾಗಿ ಕರ ಕೊಡದಿರುವ ಚಳುವಳಿಯನ್ನು ಮಾಡಲು ಸಂಕಲ್ಪ ಮಾಡಿದರು, ಅಲ್ಲಿಯ ಸರ್ವತೋಮುಖಿ ಆರ್ಡಿನೆನ್ಸ್ ಶಸ್ತ್ರ ಎಸೆಯಲ್ಪಟ್ಟಿತು. ದಿನಾಲು ಖೈದು, ಸಭಾಭಂಗ, ಲಾಠಿ ಹೊಡತ, ಗೋಳಿಬಾರು ಮುಂತಾದ ಸುದ್ದಿಗಳು ಕೇಳಬರುತ್ತಿವೆ. ಪಂಜಾಬದಲ್ಲೂ ಸುಖವಿಲ್ಲ, ಗಡಿನಾಡಿನಲ್ಲೂ ಸುಖವಿಲ್ಲ, ಯಾವ ಪ್ರಾಂತದಲ್ಲೂ ಸುಖವಿಲ್ಲ ಎತ್ತ ನೋಡಿದತ್ತ ಕಷ್ಟಕಾಲ ಬಂದಿದೆ!

ಅತ್ತ ಸರಕಾರದವು ಘನಘೋರ ಸಂಗ್ರಾಮದ ತಯಾರಿಯನ್ನು— ಸಂಪೂರ್ಣ ತಯಾರಿಯನ್ನು ಮಾಡಿಟ್ಟಿವೆ, ಶಸ್ತ್ರಾಸ್ತ್ರಗಳು ಸಿದ್ಧವಿವೆ; ಮದ್ದು ಗುಂಡುಗಳು ತಯಾರಿವೆ. ಸೈನಿಕರೂ, ಪೋಲಿಸರೂ ಸನ್ನದ್ಧರಾಗಿ ಕೂಚು ಮಾಡುವ ಹುಕುಮಿನ ನಿರೀಕ್ಷೆಯಲ್ಲಿದ್ದಾರೆ, ನಾನಾ ತರದ ಆರ್ಡಿನೆನ್ಸುಗಳು ಇನ್ನೆ ತಾರೀ ಸಂಗ್ರಹವಾಗಿದೆ ಪ್ರೋಲೀಸ ಖಾತೆಯಲ್ಲಿ ಜಾಗೃತಿಯಾಗಹತ್ತಿದ ಸ[illegible]ಯು ಹೊರಬೀಳುತ್ತದೆ ರಾಜಸತ್ತೆಯು ನೋಡಿಯೂ ತಯಾರಾಗಿ ರಾಷ್ಟ್ರೀಯ ಪಕ್ಷದ ಮೇಲೆ ಯಾವ ಯಾವ ದಿಕ್ಕಿನಿಂದ, ಯಾವ ಯಾವ ಶಸ್ತ್ರಾಸ್ತ್ರಗಳಿಂದ, ಹೇಗೆ ಹೇಗೆ ಪ್ರಹಾರ ಮಾಡಬೇಕೆಂದು ಆಲೋಚನೆಗಳೂ ನಡೆಯುತ್ತಿವೆ.

ಈ ಪರಿಸ್ಥಿತಿಗೆ ಇದಿರಾಗುವ ಬಗೆ ಹ್ಯಾಗೆ? ದಬ್ಬಾಳಿಕೆಯಲ್ಲಿ ಬಾಳುವ ಬಗೆ ಹೇಗೆ? ಸ್ವಾತಂತ್ರ್ಯ ಸಂಪಾದನೆಯ ಮಾರ್ಗವನ್ನು ಆಕ್ರಮಿಸುವದೆಂತು? ನಾವೂ ಪಾರತಂತ್ರ್ಯದ ತೀವ್ರ ವೇದನೆಗಳನ್ನು ತಾಳದೆ ಕಂಗೆಟ್ಟು ನಿರಾಶೆಯಿಂದ ಸತ್ಯಭಂಗಮಾಡಿಕೊಂಡು, ಶಾಂತತೆಯ ವ್ರತವನ್ನು ಬಿಟ್ಟುಕೊಟ್ಟು ಆತ್ಯಾಚಾರಿಗಳ ಆಸ್ತ್ರವನ್ನು ಹಿಡಿದ ತಲೆತಿರುಕರಿಗೆ ಸರಿದಾರಿಗೆ ತರುವದೆಂತು? ಇವೇ ಪ್ರಕೃತಕ್ಕೆ ಭಾರತೀಯರ ಮುಂದಿನ ಬಗೆಯಾದ ಪ್ರಶ್ನೆಗಳು ಉದ್ಭವಿಸಿವೆ. ಜನರು ದಿಙ್ಮೂಢರಾಗಿರುವರು! ಜನತೆಯ ಹಿರಿಯ ಮುಂದಾಳುಗಳೂ ದಿಙ್ಮೂಢರಾಗಿರುವರು! ಯಾರಿಗೇನೂ ತೋಚದಂತಾಗಿದೆ!!

ಇಂಥ ಪರಿಸ್ಥಿತಿಯಲ್ಲಿ ನಮ್ಮ ಲೋಕನಾಯಕನು, ನಮ್ಮ ಉದ್ಧಾರಕನು, ನಮ್ಮ ಮಾರ್ಗದರ್ಶಕನು ಇಂದು ಮರಳಿ ಸ್ವದೇಶಕ್ಕೆ ಬರುತ್ತಾನೆ. ಆವನಡೆಗ ನಮ್ಮ ತಾಪತ್ರಯಗಳನ್ನು ಹೇಳಿಕೊಳ್ಳುವಾ, ನಮ್ಮ ಕಷ್ಟಗಳನ್ನು ಅರುಹುವಾ, ಅವನು ನಮ್ಮನ್ನು ಉದ್ಧರಿಸುವನು, ಯಾವತ್ತೂ ನಮ್ಮ ಕಷ್ಟಗಳನ್ನು ದೂರ ಮಾಡಿಸುವನು, ಎಂಬ ಭಾವನೆಯಿಂದ ಪ್ರವೃತ್ತಿಯಿಂದ, ಪ್ರೀತಿಯಿಂದ ಇಡೀ ಭರತ ಭೂಮಿಯು ವಿಕಸಿತ ಚಿತ್ತ, ಹಿಗ್ಗಿ ಕೇಳಿ, ಹರುಷದಿಂದ ಕೂಗುತ್ತಿದೆ—

ಜೈಜೈ ಮಹಾತ್ಮಾಗಾಂಧಿ ಮಹಾರಾಜಕೀ ಜೈ!

ಶುಭವಾಗಲಿ!

ಕಾರವಾರದಲ್ಲಿ ಈ ಹೊತ್ತಿನಿಂದ ನೆರೆಲಿಕ್ಕಿರುವ ಸಾಹಿತ್ಯ ಸಮ್ಮೇಲನ ಏಕೀಕರಣ ಪರಿಷತ್ತು, ಕವಿಸಮ್ಮೇಲನಗಳ ಬಗ್ಗೆ ಬರುವ ಸಕಲ ಕನ್ನಡಿಗರನ್ನು ನಾವು ಮುದದಿಂದ ಸ್ವಾಗತೀಕರಿಸುತ್ತೇವೆ. ಉತ್ತರ ಕನ್ನಡವು ಬಡ ಜಿಲ್ಲೆಯು, ಸಮ್ಮೇಲನ ಪರಿಷತ್ತುಗಳನ್ನು ನಡೆಸುವದು ನಮ್ಮವರಿಗೆ ಕಠಿಣ. ಆದರೂ ಪ್ರೇಮದಿಂದ ಮಾಡುವ ನಮ್ಮ ಆತಿಥ್ಯವನ್ನು ಎಲ್ಲ ಕನ್ನಡಿಗರೂ ಪ್ರೇಮದಿಂದಲೇ ಸ್ವೀಕರಿಸಿ, ಕನ್ನಡ ಸಾಹಿತ್ಯ, ಕಾವ್ಯ, ಏಕೀಕರಣದ ಕಾರ್ಯಗಳನ್ನು ಉತ್ತೇಜಿಸುವ ಆಲೋಚನೆಯನ್ನು ಮುಂದರಿಸಬೇಕಾಗಿ ನಾವು ಬೇಡಿಕೊಳ್ಳುವೆವು.

ಕನ್ನಡ ಭಾಷೆಯು ಪುರಾತನ ಭಾಷೆಯಾಗಿದೆಯೆಂಬುದು ನಿಜ, ಕನ್ನಡದಲ್ಲಿ ಅನೇಕ ಕವಿಗಳಾಗಿ ಹೋಗಿರುವದೂ ನಿಜ, ಕನ್ನಡ ವಾಙ್ಮಯವು ಒಮ್ಮೆ ಪರ್ವತಗೇರಿತ್ತೆಂಬುದೂ ನಿಜ. ಆದರೆ ಈಗ ಪ್ರಕೃತಕ್ಕೆ ಹಿಂದುಸ್ಥಾನದೊಳಗಿನ ಇತರಭಾಷೆಗಳೊಳಗಿನ ಸಾಹಿತ್ಯಕ್ಕೂ, ನಮ್ಮ ಕನ್ನಡ ಸಾಹಿತ್ಯಕ್ಕೂ ಸರಿಹೋಲಿಸಿ ನೋಡಿದರೆ, ಅಜಗಜಾಂತರವೆಂಬುದು ಕಂಡುಬರುತ್ತದೆ. ಕನ್ನಡ ಭಾಷೆಯ ಅಭಿಮಾನವನ್ನು ಕನ್ನಡಿಗರು ತಾಳಬೇಕಾದುದು ಸರಿಯೆ! ಆದರೆ ಕೇವಲ ಅಭಿಮಾನದಿಂದ ಕಾರ್ಯವಾಗದು. ಆ ಅಭಿಮಾನಕ್ಕೆ ಸರಿಯಾಗಿ ಕನ್ನಡದಲ್ಲಿ ಗ್ರಂಥಸಂಪತ್ತಿಯೂ, ವಾಙ್ಮಯಸಂಪತ್ತಿಯೂ ಬೆಳೆಯುವಂತೆ ಮಾಡುವದು ನಮ್ಮ ಕರ್ತವ್ಯ

ಈ ವಿಷಯದಲ್ಲಿ ನಮ್ಮ ನೆರೆಹೊರೆಯವರು ತಮ್ಮ ಸಾಹಿತ್ಯದ ಏಳ್ಗೆಗಾಗಿ ಏನೇನು ಮಾಡುತ್ತಿರುವರೆಂಬುದನ್ನು ನಾವು ನಿರೀಕ್ಷಿಸಿ ಅವರ ಅನುಕರಣ ಮಾಡುವದು ಅನುಚಿತವಾಗಲಾರದು. ಮರಾಠಿಗರು ಮಾಡುತ್ತಿರುವ ಪ್ರಯತ್ನಗಳನ್ನೇ ನೋಡುವಾ. ಮರಾಠಿಯಲ್ಲಿ ಉತ್ತಮೋತ್ತಮ ಅನ್ಯ ಭಾಷೆಗಳೊಳಗಿನ ಗ್ರಂಥಗಳ ಅನುವಾದಗಳನ್ನು ಮಾಡುವ ವ್ಯವಸ್ಥೆಯುಂಟು. ಗ್ರಂಥಕರ್ತರಿಗೆ ಪಾರಿತೋಷಕಗಳನ್ನು ಕೊಟ್ಟು ಅವರಿಗೆ ಉತ್ತೇಜನ ಕೊಡುವ ವ್ಯವಸ್ಥೆಯುಂಟು. ಬೇರೆ ಬೇರೆ ಗ್ರಂಥಕರ್ತರಿಂದ ಕಥಾ-ಕಾದಂಬರಿಗಳನ್ನು ರಚಿಸಿಕೊಂಡು ಅವುಗಳ ಪ್ರಕಾಶನ ಮಾಡುವ ಪ್ರಕಾಶನ-ಮಾಲೆಗಳ ಏರ್ಪಾಟುಂಟು. ಜ್ಞಾನಕೋಶ, ಶಬ್ದಕೋಶ ಮೊದಲಾದ ಅನೇಕ ಜನರ ಸಹಕಾರದಿಂದ ಉಂಟಾಗುವ ಗ್ರಂಥಭಾಂಡಾರ ನಿರ್ಮಿಸಲಿಕ್ಕೆ ಆಯಾಯ ಮಂಡಳಗಳ ರಚನೆಯಾಗುತ್ತದೆ. ಸಂಪಾದನ ಕಾರ್ಯಕ್ಕೆ ಅನುಕೂಲವಾಗುವಂತೆ ಅಲ್ಲಲ್ಲಿ ಗ್ರಂಥಸಂಗ್ರಹಗಳಿವೆ. ನಿರ್ಮಾಣವಾಗುತ್ತಿರುವ ಸಾಹಿತ್ಯದ ಗುಣ-ದೋಷಗಳ ಚರ್ಚೆ ಮಾಡಲಿಕ್ಕೆ ಸಾಹಿತ್ಯ ಕಾರ್ಯದಲ್ಲಿ ಅಭಿರುಚಿಯುಳ್ಳವರ ಚರ್ಚಾ ಮಂಡಳಗಳಿವೆ. ಇಂಥ ಏರ್ಪಾಟುಗಳನ್ನು ನಾವು ಅಲ್ಲಲ್ಲಿ ಮಾಡತಕ್ಕದ್ದು ನಮ್ಮ ಮೊದಲ ಕರ್ತವ್ಯ.

ಇದಕ್ಕೂ ಮಹತ್ವದ ಮಾತೆಂದರೆ, ಜನರಲ್ಲಿ ವಾಚನಾಭಿರುಚಿಯನ್ನುಂಟುಮಾಡುವದು. ಜನರಿಗೆ ವಾಚನಾಭಿರುಚಿಯಿಲ್ಲದಿದ್ದರೆ, ಗ್ರಂಥಪ್ರಕಾಶನಕ್ಕೆ ಉತ್ತೇಜನವಿಲ್ಲ, ಗ್ರಂಥಪ್ರಕಾಶನವು ಇಲ್ಲವಾದರೆ ಲೇಖಕರಿಗೆ ಉತ್ಸಾಹವಿಲ್ಲ. ಆದ್ದರಿಂದ ಜನರಲ್ಲಿ ವಾಚನದ ಅಭಿರುಚಿಯನ್ನುಂಟುಮಾಡಲು ಏನು ಮಾಡಬೇಕೆಂಬುದರ ಬಗ್ಗೆ ಸಮ್ಮೇಲನವು ವಿಚಾರ ಮಾಡಬೇಕು. ನಮ್ಮ ಅಭಿಪ್ರಾಯವನ್ನು ಕೇಳುವದಾದರೆ, ಸಮ್ಮೇಲನದ ಕಾರ್ಯಕಾರಿ ಮಂಡಳವು ಪ್ರತಿಯೊಂದು ಊರಲ್ಲಿ ವಾಚನಾಲಯಗಳನ್ನು ತೆರೆಯುವ ಯೋಜನೆ ಮಾಡಬೇಕು. ಪ್ರತಿಯೊಂದು ವಾಚನಾಲಯಕ್ಕೆ ಮೇಲಿಂದಮೇಲೆ ಪ್ರಸಿದ್ಧವಾಗುವ ಗ್ರಂಥಗಳ ಪೂರೈಕೆಯಾಗುವಂತೆ ಮಾಡಬೇಕು. ಇಂಥ ಕ್ರಮದಿಂದ ಜನರಲ್ಲಿ ವಾಚನದ ಪ್ರೇಮವುಂಟಾಗಿ ಗ್ರಂಥ ಪ್ರಕಾಶನಕ್ಕೂ, ಗ್ರಂಥ ನಿರ್ಮಿತಿಗೂ ಹೇರಳ ಸಹಾಯ ದೊರೆಯುವದೆಂಬುದರಲ್ಲಿ ಸಂದೇಹವಿಲ್ಲ.

ಈ ಎಲ್ಲ ಕಾರ್ಯಕ್ಕೆ ಬಹಳ ಹಣ ತಗಲುವದೆಂಬುದನ್ನು ನಾವು ಒಪ್ಪುತ್ತೇವೆ. ಆದರೆ ಮದ್ದಿಕ್ಕಿಂದ ಹೊರತರೆ ಕಾರ್ಯವಾದೀತೇ? ಕರ್ನಾಟಕದೊಳಗಿನ ಶ್ರೀಮಂತರ ಕಡೆಯಿಂದ ಧನಸಹಾಯ ಪಡೆದು ಅಲ್ಲಲ್ಲಿ ಗ್ರಂಥ ಭಾಂಡಾರ ವಾಚನಾಲಯಗಳನ್ನೂ, ಪ್ರಕಾಶನ ಸಂಸ್ಥೆಗಳನ್ನೂ ನಾವು ಉತ್ಪನ್ನ ಮಾಡಬೇಕು.

ಗ್ರಂಥ ಪರೀಕ್ಷಕ ಮಂಡಳದ ರಚನೆ ಮಾಡಬೇಕು. ಕೆಲವು ಸಂದರ್ಭಗಳಲ್ಲಿ ಗ್ರಂಥಗಳಿಗೆ ಪ್ರಕಾಶಕರು ಸಿಗದೆ, ಸಾಮಾನ್ಯವಾದ ಹೀನತರ ಗ್ರಂಥಗಳ ಲಭ್ಯದಲ್ಲಿ ಪ್ರಕಾಶನದ ಲಾಭ ದೊರಕುತ್ತದೆ. ಇದರಿಂದ ಪರೀಕ್ಷಕ ಮಂಡಳವು ಅಸ್ತಿತ್ವದಲ್ಲಿ ಬಂದು ಮಂಡಳವು ಪ್ರಕಾಶಕರ ಸಹಕಾರ ಪಡೆದರೆ, ಪ್ರಕಾಶವಾಗುವ ಸಾಹಿತ್ಯವು ಕೆಲಮಟ್ಟಿಗೆ ಉನ್ನತವಾಗುವದು.

ಕೊನೆಗೆ ಇನ್ನೊಂದು ಸೂಚನೆಯನ್ನು ಮಾಡುತ್ತೇವೆ. ನಮ್ಮ ಈಗಿನ ಶಾಲಾ-ಕಾಲೇಜುಗಳಲ್ಲಿ ಮಾತೃಭಾಷೆಗೆ ಸಾಕಷ್ಟು ಮಾನ ದೊರೆಯುವದಿಲ್ಲ. ಸುಶಿಕ್ಷಿತರೆನಿಸಿಕೊಳ್ಳುವ ನಮ್ಮ ತರುಣರಿಗೆ ಇಂಗ್ಲಿಷದೊಳಗಿನ ಸಾಹಿತ್ಯದ ಪರಿಚಯವು ಚನ್ನಾಗಿ ಇರುತ್ತದೆ, ಕನ್ನಡದೊಳಗಿನ ನಾಲ್ಕಾರು ಕವಿಗಳ ಹೆಸರುಗಳು ಗೊತ್ತಿರುವದಿಲ್ಲ! ನಾಲ್ಕಾರು ಗ್ರಂಥಗಳನ್ನು ಓದಿದ್ದೇವೆಂದು ಹೇಳಬರುವದಿಲ್ಲ! ತಮ್ಮ ವಿಚಾರಗಳನ್ನು ಕನ್ನಡದಲ್ಲಿ ತಿಳಿಸಿ ಹೇಳಲಿಕ್ಕೆ ಸಹ ಬರುವದಿಲ್ಲ! ಆದ್ದರಿಂದ ಪ್ರಯತ್ನಪಟ್ಟು ಕನ್ನಡ ಸಾಹಿತ್ಯದ ಅಭ್ಯಾಸಕ್ಕೆ ನಮ್ಮ ವಿದ್ಯಾಲಯಗಳಲ್ಲಿ ತಕ್ಕ ಸನ್ಮಾನ ಸಿಗುವಂತೆ ನಾವು ಮನಃಪೂರ್ವಕ ದುಡಿಯಬೇಕು.

ಸಮ್ಮೇಲನವು ನಮ್ಮ ಸೂಚನೆಗಳ ಕಡೆಗೆ ಯೋಗ್ಯ ಗಮನ ಕೊಡಲೆಂದೂ, ಸಮ್ಮೇಲನದ ಕಾರ್ಯವು ಯಶಸ್ವಿಯಾಗಲೆಂದೂ ಹಾರೈಸಿ, ನಮ್ಮಲ್ಲಿ ಬರುವ ಮಹಾಶಯರಿಗೆ ಇನ್ನೊಮ್ಮೆ ವಂದನೆಗಳನ್ನರ್ಪಿಸಿ ಈ ಚಿಕ್ಕ ಲೇಖನವನ್ನು ಮುಗಿಸುತ್ತೇವೆ.

ಪಂಡಿತ ಜವಾಹಿರಲಾಲರಿಗೆ ಸೆರೆ!

ಗಡಿನಾಡಿನ ಗಾಂಧಿಗೆ ಹದ್ದುಪಾರು!

(ನಮ್ಮ ಸ್ವಂತ ಸುದ್ದಿಗಾರರ ತಂತಿ)

ಮುಂಬಯಿ, ೨೬-೧೨

ಗಡಿನಾಡಿನ ಗಾಂಧಿ ಎನಿಸುವ ಅಬ್ದುಲ ಗಫೂರಖಾನ ಇವರಿಗೂ, ಅವರ ಸಹೋದರನಿಗೂ, ಅಣ್ಣನ ಮಗನಿಗೂ ೧೮೧೮ನೇ ಇಸ್ವಿಯ ರೆಗ್ಯುಲೇಶನಿನನ್ವಯ, ಸರೆಹಿಡಿದು ದಿಲ್ಲಿಯ ಮಾರ್ಗವಾಗಿ ಬಂಗಾಲಕ್ಕೆ ಒಯ್ದಿರುತ್ತಾರೆ. ಪಂಡಿತ ಜವಾಹಿರಲಾಲ ಮತ್ತು ಶ್ರೀ| ಶೇರವಾಣಿಯವರು ಮಹಾತ್ಮರ ಸ್ವಾಗತ ಮಾಡಲಿಕ್ಕೂ, ವರ್ಕಿಂಗ ಕಮಿಟಿಯ ಸಭೆಗೆ ಹಾಜರ ಇರಲಿಕ್ಕೂ ಮುಂಬಯಿಗೆ ಬರಲು ಹೊರಟಿದ್ದರು. ಪ್ರಯಾಗದಿಂದ ೧೦ ಮೈಲು ಬರುವಷ್ಟರಲ್ಲಿ ಈ ಹೊತ್ತು ಬೆಳಿಗ್ಗೆ ೧೧ ಘಂಟೆಗೆ ಆರ್ಡಿನನ್ಸಿನನ್ವಯ ಇಬ್ಬರಿಗೂ ಕೈದುಮಾಡಿ ನೈನಿ ಜೈಲಿಗೊಯ್ದರು. ಈ ಸುದ್ದಿ ತಿಳಿದೊಡನೆ ಮುಂಬಯಿಯಲ್ಲೆಲ್ಲ ಹರತಾಳವಾಗಿದೆ.

ಮಹಾತ್ಮರ ವಾರ್ತೆ.

ಸರ್ವಾಧಿಪತಿಗಳು ಮಹಾತ್ಮರಿಗೆ ಕಾಣುವರೇ?

ಈ ಹೊತ್ತು ಬೆಳಗ್ಗೆ ಮಹಾತ್ಮರು ಪಿಲ್ಸನಾ ಬೋಟಿನಿಂದ ಮುಂಬಯಿಗೆ ತಲ್ಪುವರು. ಜೊತೆಗೆ ಸ. ವಿಠ್ಠಲಭಾಯಿ ಪಟೇಲರೂ ಬರುವರು. ಮಹಾತ್ಮರಿಗೆ ಬಹು ಸಡಗರದಿಂದ ಬರಮಾಡಿಕೊಳ್ಳಲಿಕ್ಕೆ ಮುಂಬಯಿ ಪ್ರಾಂತಿಕ ಕಾಂಗ್ರೆಸ ಕಮಿಟಿಯವರು ದುಡಿದಿರುವರು. ಮಹಾತ್ಮರಿದ್ದ ಹಡಗವು ಮುಂಬಯಿಯ ಸಮೀಪ ಬರುವಷ್ಟರಲ್ಲಿ ಎರಡು ಸ್ಟೀಮ ಲಾಂಚುಗಳು ಬೋಟಿಯಿದ್ದಲ್ಲಿಗೆ ಹೋಗಿ ಅವರ ಜೊತೆಗೆ ಪಕ್ಕಕ್ಕೆ ಓಡುವವು. ಎರಡು ವಿಮಾನಗಳು ಆಕಾಶಮಾರ್ಗದಿಂದ ಜೊತೆಗೆ ಹಾರುವವು. ಬೋಟಿಯಿಂದ ಇಳಿದ ಕೂಡಲೇ ಮಹಾತ್ಮರನ್ನು ಬೇಲಾರ್ಡ ಪಿಯರದ ಸ್ವಾಗತದ ಮಂಟಪದಲ್ಲಿ ಕುಳ್ಳಿರಿಸಿ ಅಲ್ಲಿ ಪ್ರಮುಖರು ಅವರ ಸ್ವಾಗತ ಮಾಡುವರು. ಪುಷ್ಪಹಾರಗಳನ್ನು ಅರ್ಪಿಸುವರು. ದೇಶದೊಳಗಿನ ಬೇರೆ ಬೇರೆ ಸಂಸ್ಥೆಗಳ ಕಡೆಯಿಂದ ಮಾನಪತ್ರಗಳು ಕೊಡಲ್ಪಡುವವು. ಆಮೇಲೆ ಮಹಾತ್ಮರು ಮೆರವಣಿಗೆಯ ಸಮಾರಂಭದ ಸಾಲು ... ಒಬ್ಬ ಮಾನಸಿಕ ಸ್ವಾಗತಿಯ ಸಂದರ್ಭದ ಸಂಕೇತವನ್ನು ಪ್ರಕಟಿಸುವರು. ಮಹಾತ್ಮರು ಮೆರವಣಿಗೆಯು ಬೇರೆ ರಸ್ತೆಗಳಿಂದ ಹಾದು ಮಹಾತ್ಮರು ಮುಂಬಯಿಗೆ ಬಂದಾಗ ಇಳಿದುಕೊಳ್ಳುವ ಮಣಿಭವನಕ್ಕೆ ಮುಟ್ಟುವದು. ಮಾರ್ಗದ ಸಲುವಾಗಿ, ಮಹಾತ್ಮರಿಗೆ ಗಲಾಟೆಯಿಂದ ಪೀಡೆಯಾಗದಂತೆ ಮೆರವಣಿಗೆಯ ಮಾರ್ಗಗಳ ಮೇಲೆ ಎರಡೂವರೆ ಸಾವಿರ ಸ್ವಯಂಸೇವಕರನ್ನು ನಿಲ್ಲಿಸುವರು. ಇಂಥ ಸ್ವಾಗತ ನೋಡಲಿಕ್ಕೆ ಸಿಗುವದು ಪರಮ ಭಾಗ್ಯವಲ್ಲವೇ? ಸ| ಪಂ| ವಲ್ಲಭಭಾಯಿ ಪಟೇಲರ ವಿನ್ನಹವನ್ನು ಮನ್ನಿಸಿ ಮಹಾತ್ಮರು ರವಿವಾರ ಮಧ್ಯರಾತ್ರಿಕ್ಕೇನೇ ತಮ್ಮ ಮೌನ ವ್ರತಕ್ಕೆ ಆರಂಭ ಮಾಡಿ ಸೋಮವಾರ ಮಧ್ಯಾಹ್ನಕ್ಕೆ ಮುಗಿಸಲು ಅನುಕೂಲವಾಗುವಂತೆ ವ್ಯವಸ್ಥೆ ಮಾಡುತ್ತೇವೆಂದು ಸ್ಪಷ್ಟವಾಗಿ ತಿಳಿಸಿದ್ದಾರೆ. ಸಂಜೆಗೆ ಆಝಾದ ಮೈದಾನದಲ್ಲಿ ಜಾಹೀರ ಸಭೆಯಾಗಿ ಮುಂಬಯಿ ಪ್ರಜೆಗಳಿಂದ ಮಹಾತ್ಮರ ಪಟ್ಟಣವಾಸ್ತವ್ಯದ ಪ್ರಸಂಗ ಕೀರ್ತಿಸುವರು.

ಮಂಗಳವಾರ ವರ್ಕಿಂಗ ಕಮಿಟಿಯು ಸೇರುವದು. ಕಮಿಟಿಯಲ್ಲಿ ಮಹಾತ್ಮರು ತಮ್ಮ ಅನುಭವಗಳನ್ನು ಹೇಳುವರು; ದೇಶದೊಳಗಿನ ಪರಿಸ್ಥಿತಿಯನ್ನು ಸಹಕಾರಿಗಳ ಕಡೆಯಿಂದ ತಿಳಿದುಕೊಳ್ಳುವರು ಹಾಗೂ ವಿಚಾರ ವಿನಿಮಯವಾಗಿ ಮುಂದಿನ ಕಾರ್ಯದ ನಿರ್ಣಯವಾಗುವದು. ಕೇವಲ ಭಾರತೀಯರಲ್ಲ, ಈ ಸಾವಿರ ಮೈಲು ಆಚೆಗಿರುವ ರಾಜ್ಯಕರ್ತರೂ, ಪಶ್ಚಿಮ ಗೋಲಾರ್ಧದೊಳಗಿನ ಜನರೂ ಇದೇ ಪ್ರಕಾರದಿಂದ ಈ ಕಮಿಟಿಯ ಕಡೆಗೆ ಕಣ್ಣು-ಕಿವಿಗಳನ್ನು ಕೊಟ್ಟು ಅದರ ನಿರ್ಣಯ ತಿಳಿಯುವದಕ್ಕೆ ಉತ್ಕಂಠಿತರಾಗಿದ್ದಾರೆ.

ಮಹಾತ್ಮರನ್ನು ಬೆಟ್ಟಿಯಾಗಿ, ಅವರು ಪ್ರಕಟ ಮಾಡಿದಂಥ ಯುದ್ಧ ಹೂಡದಂತೆ ಅವರ ಮನವೊಲಿಸಬೇಕಾಗಿ ಮಂತ್ರಿಮಂಡಳವು ವ್ಹಾಯಿಸರಾಯರಿಗೆ ತಪ್ಪಣೆ ಮಾಡಿದ ಸುದ್ದಿ ಬಂದಿದೆ. ಈ ವಾರ್ತೆಯ ಜೊತೆಗೆ ಮಹಾತ್ಮರು ದೊರೆಗಳ ಕೂಡ ಬೆಟ್ಟಿಯ ಸಲುವಾಗಿ ಬೇಡಿಲ್ಲವೆಂದು ಕಲಕತ್ತೆಯಿಂದ ತಂತಿ ವರ್ತಮಾನವು ಪ್ರಸಿದ್ಧವಾಗುತ್ತದೆ! ಇಂಥ ಬಹಿಷ್ಕಾರವೆಂದು ತಿಳಿಯುವದಿಲ್ಲ. ಮಹಾತ್ಮರು — ಕಮಿಟಿಯು — ಕಾರ್ಯಕಾರಿ ಮಂಡಳಿ — ಒಮ್ಮೆ ಸರ್ವಾಧಿಪತಿಗಳಿಗೂ ಬಂಗಾಲ, ಸಂಯುಕ್ತ ಪ್ರಾಂತಗಳ ಗವರ್ನರರಿಗೂ ಕಾಣುವರೆಂದು ಅಂದಾಜಿದೆ. ಸಂಯುಕ್ತ ಪ್ರಾಂತದ ಸ್ಥಿತಿಯನ್ನು ಪ್ರತ್ಯಕ್ಷ ನೋಡುವದು ಎಲ್ಲರಿಗೂ ಹೊಸಗಿಹದು. ಆತ್ತ ವಿಲಾಯತಿಯಲ್ಲಿ ಹಿಂದು-ಭೂಮಿಗೆ ಬರುವ ಕಮಿಟಿಗಳ ನೇಮಣೂಕಿಯಾಗಿದೆ. ಎಲ್ಲ ಕಮಿಟಿಗಳ ಮೇಲೆ ಕನ್ಸರ್ವೇಟಿವ್ಹ ಸಭಾಸದರೇ ಹೆಚ್ಚು! ಲಾರ್ಡ ಸಂಕೆಯರಿಗೂ ಬರುವದಿಲ್ಲ. ಈವರೆ ಒಬ್ಬಿಯ ಒಬ್ಬ ಮನುಷ್ಯರ ಹೆಸರು ಸಭಾಸದರ ಯಾದಿಯಲ್ಲಿ ಕಾಣುವದಿಲ್ಲ.

ಸ್ಥಾನಿಕ ವೃತ್ತಾಂತ

ಕುಮಟಾ— ಚಳಿಯು ಸಟ್ಟಗಿಲ್ಲ ಕೆಲವು ಹೊತ್ತು ಮೋಡ ಕವಿದ ಹೊತ್ತು, ಬಿಸಿಲು, ಒಂದು ದಿನ [illegible] ಮಳೆಯ [illegible] ಬೀಸುತ್ತಿದೆ.

ಇಳಿದ ವಾರ [illegible] ಕಾಲೇಜಿನಿಂದ [illegible] ಮ್ಯುನಿಸಿಪಾಲಿಟಿಯವರು [illegible] ಮುಂಜಾಗ್ರತೆ ಕೊಟ್ಟಿರುತ್ತಾರೆ.

ಹೊನ್ನಾವರ— [illegible] ತಗೆದುಕೊಂಡಿದ್ದಾನೆ [illegible] ಬಾಲವು [illegible]

ಬೈಲೂರ— [illegible] ಕೊಂಗ್ರೆಸ ಕಮಿಟಿಯ [illegible] ಅಧ್ಯಕ್ಷ [illegible] ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದಾರೆ [illegible] ವ್ಯವಸ್ಥೆ ಮಾಡುತ್ತಿದೆ.

[illegible] ಮುನಿಸಿಪಾಲಿಟಿಯ [illegible]

ಭಟಕಳ— [illegible] ಮಳೆ ಬರುವ ಲಕ್ಷಣ ತೋರುತ್ತದೆ [illegible]

[illegible] ದೇವಸ್ಥಾನದಲ್ಲಿ [illegible] ಮಂಗಲವಾಯಿತು. [illegible] ಜನರು ಈ ಉತ್ಸವಕ್ಕೆ ಬಂದಿದ್ದರು.

ಇಲ್ಲಿಯ ಮ್ಯುನಿಸಿಪಾಲ್ಟಿಯ ವಾಜಿ ಪ್ರೆಸಿಡೆಂಟ ಮಿ [illegible] ಕಾನಡಾವೃತ್ತದ [illegible] ದಾವೆ ಮಾಡಿದ್ದಾರೆ [illegible]

[illegible] ರಾತ್ರಿ ಸಭೆ ನಡೆದವು.

ಶಿರ್ಶಿ— [illegible] ವೆಂಕಟ [illegible]

[illegible]

ಕಾರವಾರ— [illegible]

[illegible]

ಯಲ್ಲಾಪುರ— [illegible] ಮಳೆಯ ಲಕ್ಷಣ [illegible] ನಡೆದವು.

[illegible]

ಇಲ್ಲಿಯ ಗ್ರಾಮದೇವಿಯ ಜಾತ್ರೆಗೆ ಇದೇ [illegible] ಆರಂಭವಾಗುವದು.

ಇಲ್ಲಿಯ [illegible] ಡಿಸಂಬರ [illegible]

ಜಿಲ್ಲಾ ಬೋರ್ಡಿನ ಸುದ್ದಿ!

ಗೋಪಿ-ಬಿಜಾಪೂರ ತಂತ್ರಗಳು

[ನಮ್ಮ ಕಾರವಾರದ ಸುದ್ದಿಗಾರರಿಂದ]

ತಾ ೨೪-೧೨-೧೯೩೧

ಜಿಲ್ಲಾ ಬೋರ್ಡಿನ ಕಚೇರಿಯಲ್ಲಿ ತಾ ೧೬-೧೨-೧೯ ರಂದು ಸೇರಿದ ಜಿಲ್ಲಾ ಬೋರ್ಡಿನ ಸಭೆಯಲ್ಲಿ ಗೋಪಿ-ಬಿಜಾಪೂರರ ತಂತ್ರಗಳೆಲ್ಲ ಬಯಲಾದವು. ಅಧ್ಯಕ್ಷರು ಸಭೆಗೆ ಬಂದಿದ್ದಿಲ್ಲವಾದ್ದರಿಂದ ಉಪಾಧ್ಯಕ್ಷರು ಅಧ್ಯಕ್ಷಸ್ಥಾನ ವಹಿಸಿದ್ದರು. ಅಧ್ಯಕ್ಷರಾದ ಡಾ| ಗೋಪಿಯವರು ಗುಪ್ತವಾಗಿ ಒಬ್ಬ ಅಧಿಕಾರಿಯಾದ ಡಾ| ಬಿಜಾಪೂರರ ಅಧಿಕಾರದ ಅವಧಿಯನ್ನು ಬೆಳೆಸಿದ್ದರು. ಇದು ಅಧ್ಯಕ್ಷರ ಅಧಿಕಾರದ ಅತಿಕ್ರಮವೆಂದು ಡಾ| ಪಿ. ನಾಗ ಪ್ರಭುಗಳು ಒದರಿದರು. ಈ ವಿಷಯವನ್ನು ಬೋರ್ಡ ಸಭೆಯಲ್ಲಿ ಚರ್ಚಿಸಬೇಕಾಗಿ ಮಾಡಿದ ಅರ್ಜಿ ಕಾರ್ಯಕ್ರಮಪತ್ರಿಕೆಯಲ್ಲಿ ಎಲ್ಲ ಮೆಂಬರರಿಗೂ ಕಳಿಸಿದರು. ಡಾ| ಪ್ರಭುಗಳಿಗೆ ಉದ್ದೇಶ ಪತ್ರ ಬರೆದರೆ ನೇರವಾಗಿ ಹೋಯಿತು, ಅದನ್ನು ಅಧ್ಯಕ್ಷರು ಚರ್ಚಿಸಲಿಕ್ಕಿಲ್ಲ. ಡಾ| ಶೆಣ್ವಿ ನಾಯಕರು ಕೆಲವು ಮಾತು ನೋಡಹೋದರೆ, ಚೇರ್ಮನರು ಅದನ್ನು ನೋಡಗೊಡಲಿಲ್ಲ. ಸಭಾಸದರಿಗೆ ಮಾತಾಡುವ ಅವಕಾಶವು ಇರುವದಿಲ್ಲವಾಗಿ ಹೇಳಿಬಿಟ್ಟರು! ಕೇವಲ ತಂತ್ರ ಕಟ್ಟುವಾಗ ಒಬ್ಬ ಅಂಧ ಧುಂದಿಯಾಗಿವ [illegible], ಅವರ ಬಗ್ಗೆ ನಮಗೆ ಕುಶಲ [illegible] ಬೋರ್ಡ ಸೂಪರಡೆಂಟ ಡಾ| ಪ್ರಭು ನಾಯಕರು ಬರೆದ ಪತ್ರವು ಬೇರೆ ಅಧಿಕಾರಿಗಳಿಂದ ತೋರಿಸಲ್ಪಡಲಿಲ್ಲ. ಇವೆಲ್ಲವನ್ನು ಭದ್ರವಾಗಿ ಡಾ| ಬಿಜಾಪೂರರು ಇಟ್ಟುಕೊಂಡಿದ್ದರು. ಗೆಳೆತನ ಸಾಮಾನ್ಯವಲ್ಲ. ಅದರ ಪರಿವೆಯಿಲ್ಲ. ಡಾ| ಬಿಜಾಪೂರರ ಕೈಗೊಂಬೆಯಾಗಿ ಅವರು ಕುಣಿಯುತ್ತಾರೆ. ಡಾ| ಬಿಜಾಪೂರರ ಅಧಿಕಾರ ಬೆಳೆಸಬೇಕಾಗಿ ಬರೆದ ಪತ್ರದಲ್ಲಿ ಬಿಜಾಪೂರರು ಬೋರ್ಡಿಗೆ "ಅಂಡಿಸ್ಪೆನ್ಸಿಬಲ್" (ಅತ್ಯವಶ್ಯ) ವೆಂದು ಹೇಳಿದರು. ಡಾ| ಬಿಜಾಪೂರರಿಗೆ ಪ್ರೋತ್ಸಾಹ ಬೋರ್ಡ ಮೆಂಬರ ವಹಿಸುವದೋ? ಡಾ| ಗೋಪಿಯವರು ಅಧ್ಯಕ್ಷ-ಸಮ್ಮಾನ ಕೊಡುವದೋ? ನೀವೇ ಹೇಳಿರಿ. ಆದರೆ ಈ ವಿಷಯಗಳೆಲ್ಲ ಈ ಸಭೆಯಲ್ಲಿ ಬೋರ್ಡ ಸದಸ್ಯರ ಅಪೇಕ್ಷೆ ಮೇರೆಗೆ ಚರ್ಚೆಗೆ ಬಂದವು. ಆದರೆ ಆಸ್ಪತ್ರೆಯ ಅಧ್ಯಕ್ಷರಾದ ಡಾ| ಗೋಪಿಯವರು ಗೋಕರ್ಣದಿಂದ ಒಂದು ತಂತಿ ಹಾಕಿ ಉಪಾಧ್ಯಕ್ಷರಿಗೆ ತಿಳಿಸಿದ್ದೇನೆಂದರೆ — ತಮ್ಮ ಅಧಿಕಾರದ ವಿಷಯ ಈ ಸಭೆಯಲ್ಲಿ ಚರ್ಚಿಸಬಾರದು, ಮುಂದಿನ ಸಭೆಯ ತನಕ ತಡೆಯಬೇಕು. ಡಾ| ಗೋಪಿಯವರಿಗೆ ಈ ತಂತಿ ಹಾಕಲು ಯಾರು ಹೇಳಿದರೆಂಬ ಸಂಗತಿ ಇನ್ನೂ ಗೊತ್ತಿಲ್ಲ. ನಾನು ಅನುಮಾನಿಸಬಲ್ಲೆ, ಆದರೆ ಅದನ್ನು ಪ್ರತ್ಯಕ್ಷ ಒದರುವದು ಪ್ರಶಸ್ತವಲ್ಲವಷ್ಟೇ! ಡಾ| ಪ್ರಭುಗಳು ಮಾತ್ರ ಬೇರೆ ಮಾರ್ಗವನ್ನೇ ಪ್ರದರ್ಶಿಸಿದರು. ಮುಂದಿನ ಸಭೆಯಲ್ಲಿ ಈ ವಿಷಯ ಚರ್ಚಿಸಬಹುದೆಂದರು. ಡಾ| ಶೆಣ್ವಿ ನಾಯಕರ ಅಪೇಕ್ಷೆಯಂತೆ ಸಮಸ್ತ ಸಭಾಸದರಿಗೆ ಬೋರ್ಡಿನ ದಾಖಲೆ ನೋಡುವ ಅಧಿಕಾರವಿರಬೇಕೆಂಬ ಠರಾವಾಯಿತು. ಗೋಕರ್ಣದ ಸಂಸ್ಕೃತ ಪ್ರಕರಣದಲ್ಲಿ ಚೌಕಶಿ ಮಾಡುವದಕ್ಕಾಗಿ ಡಾ| ಗೋಪಿಯವರ ಅಧ್ಯಕ್ಷತೆಯಲ್ಲಿ ಒಂದು ಚೌಕಶಿ ಮಂಡಳ ನೇಮಿಸಲ್ಪಟ್ಟಿತು. ಈಗಿನ ಒಬ್ಬ ಅಧಿಕಾರಿಗೆ ಇಟ್ಟುಕೊಳ್ಳುವ ವಿಷಯ ಬೋರ್ಡು ಇನ್ನೂ ನಿಶ್ಚಯ ಮಾಡುತ್ತಲಾಗಿ ಕಮಿಶನರಿಗೆ ತಿಳಿಸತಕ್ಕದ್ದಾಗಿ ಠರಾವಾಯಿತು.

ಕಾರವಾರ ಪುರದೊಳಗಿನ ನೈಸರ್ಗಿಕ ಶಸ್ತ್ರನಿರ್ಮಾಣ ನಿಧಿಗೆ ಬೋರ್ಡು ರೂ ೫೦೦ನ್ನು ಮಂಜೂರ ಮಾಡಿತ್ತು. ಇದು ಬೋರ್ಡು ಕಾಯಿದೆ ಶಕ್ತಿಯ ಹೊರಗಿನದೆಂದು ಸರಕಾರವು ಅಭಿಪ್ರಾಯಬಿಟ್ಟು ಆ ರಕಮನ್ನು ಮಂಜೂರ ಮಾಡಲಿಲ್ಲ. ಈ ಹುಕುಮವು ಮನ್ನಿಸಲ್ಪಟ್ಟಿತು. ಕಾಯಿದೆಯ ಅರ್ಜಿ ಬೋರ್ಡಿಗೆ ಈಗ ತಿರುಗಿ ಬಂದಿತು. ಬೋರ್ಡ ಹಣದಿಂದ ೫೦೦ ರೂಪಾಯಿ ಕೊಡಲು ಅನುಕೂಲ ಮಾಡಿ ಕೊಟ್ಟವರು ಸದರ ರಕಮನ್ನು ನಿಧಿಗೆ ಕೊಡಲು ಸಾಧ್ಯವಿದ್ದ ಬಗೆಯನ್ನು ಎದ್ದು ತೋರಿಸಬೇಕೆಂದು ಸೂಚಿಸಬೇಕು.

ಬೋರ್ಡಿನ ಖರ್ಚನ್ನು ಯಾವ್ಯಾವ ಬಾಬುಗಳಲ್ಲಿ ಕಡಿಮೆ ಮಾಡಬಹುದೆಂದು ಆಲೋಚಿಸಲು ರಾವ ಸಾಹೇಬ ಉಪಾಧ್ಯಕ್ಷರಿಂದ ಖಾ| ಸಾ| ಅಬ್ದುಲ್ ಗಫೂರ ಸಾಹೇಬರ ಅಧ್ಯಕ್ಷತೆಯಲ್ಲಿ ಡಾ| ಮುಕುಂದ ಉಪಾಧ್ಯಾಯ, ಗೋಪಾಲರಾವ ದೇಶಪಾಂಡೆ, ವಿಶ್ವನಾಥ ಪ್ರಭು, ಜೇ ಪಿ ಕೊಯಿಲೋ ಇವರದೊಂದು ಮಂಡಳ ನೇಮಿಸಿತ್ತು. ಆ ಮಂಡಳದವರು ಮಾಡಿದ ಸೂಚನೆಗಳನ್ನೆಲ್ಲ ಬೋರ್ಡು ಅಂಗೀಕರಿಸಿದೆ. ಇದರಂತೆ ೫೫ ಸಾವಿರ ರೂಪಾಯಿ ಉಳಿತಾಯ ಆಗಬೇಕು. ಡಾ| ಬಿಜಾಪೂರರಿಗೆ ಈಗ ೫೦ ರೂಪಾಯಿ ಭತ್ಯವು, ಇದೇ ಒರುವ ಸಪ್ಟೆಂಬರ ಕೊನೆಗೆ ಬೋರ್ಡಿನಿಂದ ಕೊಡುವ ಸಂಬಳ ಸಹಿತ ಹೊಸ ಚೇರ್ಮನರ ಪದವನ್ನು ಈಗಿನ ಬಂದಿಯ [illegible] ಆಗಿಯೂ ಈ ತಿಂಗಳಿನ ೧೫ರಿಂದ ೧೯೩೨ ವರೆಗೆ ಇರಬೇಕಾಗಿಯೂ, ತಿಂಗಳಿಗೆ ರೂ ೩೦ ಪ್ರವಾಸ ಭತ್ಯ ಕೊಡಬೇಕಾಗಿಯೂ ಖರ್ಚು-ಕಡಿತ ಮಂಡಳದ ಸೂಚನೆಯನ್ನು ಬೋರ್ಡು ಮನ್ನಿಸಿದೆ. ಇದಲ್ಲದೆ ಬೋರ್ಡ ಖಾತೆಗಳನ್ನೆಲ್ಲ ಪರಾಂಬರಿಸಿ, ಧರ್ಮಾರ್ಥಗಳನ್ನೂ, ಹೆಣ್ಣು ಮಕ್ಕಳನ್ನೂ, ಬಾರಕೂನರನ್ನೂ, ಬೇರೆ ಸಿಬ್ಬಂದಿಯನ್ನೂ ಅಧ್ಯಕ್ಷರ ಪ್ರವಾಸ ಭತ್ತದ ಸಲುವಾಗಿ ಕಡಿಮೆ ಮಾಡಬೇಕಾಗಿ ಮಂಡಳವು ಸೂಚಿಸಿದ ಸೂಚನೆಗಳನ್ನೂ ಮಂಜೂರಾದ ಹಣವನ್ನಷ್ಟೇ ಖರ್ಚು ಮಾಡಬೇಕಾಗಿಯೂ, ಒಂದು ಕಾಮಗಾರಿಯ ಖರ್ಚನ್ನು ಇನ್ನೊಂದು ಕಾಮಗಾರಿಗೆ ಉಪಯೋಗಿಸಬಾರದಾಗಿಯೂ ಮಂಡಳವು ಮಾಡಿದ ಠರಾವನ್ನು ಬೋರ್ಡು ಮನ್ನಿಸಿದೆ. ಕಾಮಗಾರಿ ಖಾತೆ ಬೋರ್ಡು ಇದನ್ನು ಚೆನ್ನಾಗಿ ಲಕ್ಷದಲ್ಲಿಟ್ಟುಕೊಂಡು ನಡೆಯತಕ್ಕದ್ದು. ಈ ರಾಮನಿಗೆ ಮಿಕ್ಕ ತಾಲೂಕ ಬೋರ್ಡು ಖರ್ಚು ಮಾಡಿದ ಹಣವನ್ನು ಜಿಲ್ಲಾ ಬೋರ್ಡು ಹಾಗೆ ರೀತಿಯಿಂದ ವಸೂಲ ಮಾಡುತ್ತದೆಂಬುದು ಈ ಮಂಡಳ ತಿಳಿಯುವದು. ಸಾವಿರಾರು ರೂಪಾಯಿ ಖರ್ಚಿನಲ್ಲಿ ಉಳಿತಾಯವಾಗುವಂತಿದೆ. ಮುಂದೆಯೂ ಸರಕಾರದ ಠರಾವಿನಂತೆ ರೂ ೧೦ಕ್ಕೆ ಮಿಕ್ಕಿ ಸಂಬಳ ಪಡೆಯುವವರು ೧೦ಕ್ಕೆ ೧೦ರಂತೆ ಕಡಿತಗೊಳಿಸಿಕೊಳ್ಳಬೇಕೆಂಬ ಠರಾವಾಗಿರುತ್ತದೆ.

— ಸರ್ ರಜಿನಾಲ್ಡ ಕ್ರೆಡೋಕ್ ಇವರು ಬಂಗಭಂಗದ ಕಾಲಕ್ಕೆ ಮಧ್ಯಪ್ರಾಂತದಲ್ಲಿ ಚೀಫ ಕಮಿಶನರರಾಗಿದ್ದರು. ಅಧಿಕಾರಗಳಿರುವಾಗ ಇವರು ಅಷ್ಟೇನೂ ಜನಪ್ರಿಯರಾಗಿದ್ದಿಲ್ಲ. ಆದರೆ ಆ ಕಾಲದ ಮುಖಂಡರ ಪದ್ಧತಿಯಂತೆ ಅವರ ಕೀರ್ತಿಯ ಸ್ಮರಣೆಯೆಂದು ನಾಗಪೂರದ ಒಂದು ಭಾಗಕ್ಕೆ "ಕ್ರೆಡೋಕ್ ಟೌನ" ಎಂತಲೂ ಒಂದು ರಸ್ತೆಗೆ "ಕ್ರೆಡೋಕ್ ರೋಡ" ಎಂತಲೂ, ಒಂದು ಮಾರ್ಕೆಟಿಗೆ "ಕ್ರೆಡೋಕ್ ಮಾರ್ಕೆಟ" ಎಂತಲೂ ಹೆಸರು ಕೊಡಲ್ಪಟ್ಟಿದ್ದವು. ಇಷ್ಟು ದಿವಸ ಕ್ರೆಡೋಕ್ ಸಾಹೇಬರು ಧರ್ಮಭೂಮಿಯ ಸ್ವಾತಂತ್ರ್ಯದ ವಿರುದ್ಧ ಬಹಳೇ ಪ್ರಚಾರ ಮಾಡಿದವರು. ಆದರೂ ಅದಕ್ಕೆ ಯಾರೂ ತಿವಿಗೊಡಲಿಲ್ಲ. ಮೊನ್ನೆಯಂತೂ ಸಾಹೇಬರು ವ ರಾಜ್ಯಾಧಿಯವರಿಗೆ ನಿಶ್ಚಯಾಗ ಪತ್ರದಲ್ಲಿ ನೋಡಿ, ಇಂಥವರ ಸ್ಮೃತಿಯು ಉಳಿಯಲಿರಬಾರದೆಂದು "ಕ್ರೆಡೋಕ್ ಟೌನ" ಇದ್ದದ್ದು 'ಧನತೋಲಿ' ಮಾಡಬೇಕಾಗಿಯೂ "ಕ್ರೆಡೋಕ್ ರೋಡ ಮತ್ತು ಮಾರ್ಕೆಟ" ಎಂಬ ಹೆಸರು ತೆಗೆದು 'ಗಾಂಧಿ ರೋಡ' ಮತ್ತು 'ಗಾಂಧಿ ಮಾರ್ಕೆಟ' ಎಂದು ಕರೆಯಬೇಕಾಗಿಯೂ, ನಾಗಪೂರ ಮ್ಯುನಿಸಿಪಾಲಿಟಿಯಲ್ಲಿ ಠರಾವು ಬಂದಿದೆ. ಸ್ವಾಮಿ ಆಬಿದ್ದಲು ಪಡದಕಾ ರಾವಿನ ವಿಚಾರವಾಗಬಾರದೆಂದು ಅಧ್ಯಕ್ಷರು ಠರಾವಿನ ವಿಚಾರಕ್ಕೆ ತಡೆ ಹಾಕಿಟ್ಟಿದ್ದಾರೆ.

ಆ ಬಂದಿನ ಸಭೆಯಲ್ಲಿ ಅಧ್ಯಕ್ಷರಾದ ಡಾ| ಗೋಪಿಯವರು ಸ್ವತಃ ಹಾಜರಿರುವದು ಆ ಸಮಯ ಆ ತಂತ್ರಗಳ ಸಿರುಗಳೆಲ್ಲ ಹೊರಬೀಳುವದು ಅದನ್ನು ಕೇಳಲು ಮತ್ತು ಮಾರದು ಉತ್ಸುಕರಾಗಬೇಕು!!

ಹಿಂದ-ವಿರೋಧಿ ಪ್ರಲಾಪಗಳು

ಚರ್ಚಿಲ್, ರೋದರಮಿಯರ ಪ್ರಭೃತಿ ಹಿಂದ-ಹಿತ ವಿರೋಧಕರು ನಮ್ಮ ಬಗ್ಗೆ ಯಾವ ತರದ ವಿಷಾರಿ ಪ್ರಲಾಪಗಳನ್ನು ಮಾಡತೊಡಗಿದ್ದಾರೆಂಬದು ವಾಚಕರಿಗೆ ತಿಳಿಯಬೇಕೆಂದು ಈ ಕೆಳಗೆ ರೋದರಮಿಯರ್ ಸಾಹೇಬರ ಒಂದು ಲೇಖದೊಳಗಿನ ಕೆಲವು ಅವತರಣಗಳನ್ನು ಕೊಟ್ಟಿದ್ದೇವೆ. ವಾಚಕರು ಅವನ್ನು ಮನನ ಮಾಡಬೇಕು.

ಹಿಂದುಸ್ಥಾನದಲ್ಲಿ ಸ್ವರಾಜ್ಯ ಸಂಸ್ಥೆ ಸ್ಥಾಪಿಸುವದೇ ಬ್ರಿಟಿಶ ರಾಜ್ಯಕರ್ತರ ಉದ್ದೇಶ. ಆದರೆ ಹಿಂದುಸ್ಥಾನವು ಒಂದೇ ದೇಶವಲ್ಲ. ಹಿಂದುವಾಸಿಗಳು ಒಂದೇ ರಾಷ್ಟ್ರದವರಲ್ಲವಾದ್ದರಿಂದ ಈ ಉದ್ದೇಶವು ಸಫಲವಾಗಲಿಕ್ಕಿಲ್ಲ."

"ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ಕೊಟ್ಟರೆ ಬೋನ್ಸ್ಟಕ ಸಂಗ್ರಹಾಲಯದೊಳಗಿನ ಪಶುಗಳನ್ನೆಲ್ಲ ಒಂದೇ ದೊಡ್ಡ ಪಂಜರದಲ್ಲಿ ಬಿಟ್ಟರೆ ಯಾವ ತರದ ರಕ್ತಪಾತ ಗದ್ದಲಗಳಾದೀತೋ ಅಂಥ ರಕ್ತಪಾತ ಗದ್ದಲಗಳಾಗುವವು." "ಹಿಂದುಸ್ಥಾನಕ್ಕೆ ಶಾಂತಿ, ಸ್ವಾತಂತ್ರ್ಯ, ನ್ಯಾಯ, ಶಿಕ್ಷಣ ಮತ್ತು ಸುಧಾರಿಸಿದ ರಾಜ್ಯ ಪದ್ಧತಿಗಳನ್ನು ದಯಪಾಲಿಸಿದವರು ಬ್ರಿಟಿಶ ಜನಾಂಗವದೇ! ಬ್ರಿಟನ್ನವು ತನ್ನ ಅಧಿಕಾರವನ್ನು ಹಿಂತೆಗೆದರೆ ಕ್ಷಣಮಾತ್ರದಲ್ಲಿ ಈ ಎಲ್ಲ ಸಂಗತಿಗಳು ಮಾಯವಾಗುವವು." "ಶಿಪಾಯಿ ಗದರ ಬಂಡಾಯ ಮಾಡಿದಂದಿನಿಂದ ಮಹಾಯುದ್ಧದ ತನಕ ೬೦ ವರುಷಗಳಲ್ಲಿ ಎಷ್ಟು ರಕ್ತಪಾತವು ಆಗಿರಬಹುದೋ, ಅದಕ್ಕೂ ಹೆಚ್ಚಿನ ರಕ್ತಪಾತವು ಗಾಂಧಿ ಚಳವಳಿಯಿಂದ ಆಯಿತು!" "ಮಿ| ಗಾಂಧಿಯವರು ಬಾಹ್ಯತಃ ಅನುಯಾಯಿಗಳ ದೃಷ್ಟಿಯಿಂದಲೂ, ಕೆಲವು ನಿರ್ಬುದ್ಧ ಬ್ರಿಟಿಶ ರಾಜಕಾರಣಿಗಳ ದೃಷ್ಟಿಯಿಂದಲೂ ಗಾಂಧಿಯವರು 'ಮಹಾತ್ಮ'ರಾಗಿಯೂ, ವಿಭೂತಿಯಾಗಿಯೂ ಕಾಣಬಹುದು. ಆದರೆ ಇಡೀ ಜಗತ್ತಿನ ದೃಷ್ಟಿಯಿಂದ ಗಾಂಧಿಯವರು ತಿರಸ್ಕಾರ ಹೊಂದಿದ ಅತ್ಯಂತ ಕುತ್ಸಿತ ರಾಜಕಾರಣಿಯೆಂದು ನಿರ್ಣಯಿಸಿಕೊಂಡು ಹಿಂದುಸ್ಥಾನಕ್ಕೆ ಮರಳುವರು."

ಕರ್ನಾಟಕದಿಂದ ಮರಳುವಾಗ ಪಂಡಿತ ಜವಾಹಿರಲಾಲರು ಸೋಲಾಪುರಕ್ಕೆ ಇಳಿದಿದ್ದರು. ಅಲ್ಲಿ ತಮ್ಮ ಭಾಷಣದೊಳಗೆ ನುಡಿದದ್ದೇನೆಂದರೆ — "ನೈನಿ ಜೈಲಿನಲ್ಲಿರುವಾಗ ಇಲ್ಲಿ ಲಷ್ಕರಿ ಕಾಯಿದೆಯು ಜಾರಿಯಲ್ಲಿ ಬಂದದ್ದು ನನಗೆ ತಿಳಿಯಿತು. ಅಂದಿನಿಂದ ಈ ಊರು ಕಾಣಬೇಕೆಂದು ನನ್ನ ಅಪೇಕ್ಷೆಯಿತ್ತು. ಲಷ್ಕರಿ ಕಾಯಿದೆಯ ಪ್ರಖರ ತಾಪವನ್ನು ಅನುಭವಿಸಿದರೂ ತಮ್ಮ ರಾಷ್ಟ್ರೀಯ ಪ್ರವೃತ್ತಿಯು ಎಳ್ಳಷ್ಟು ಕುಂದಲಿಲ್ಲದ್ದು ನೋಡಿ ನನಗೆ ಆನಂದವಾಗುತ್ತದೆ. ನಮ್ಮ ಜಗಳವು ಬ್ರಿಟಿಶ ಜನತೆಯ ಕೂಡ ಇರುವದಿಲ್ಲ, ಯಾವದೇ ಜಾತಿಯ ಅಥವಾ ಪಂಗಡದ ಕೂಡ ನಮ್ಮ ಜಗಳವಿಲ್ಲ. ನಮ್ಮ ದೇಶದಲ್ಲಿ ಹೊಟ್ಟೆಗಿಲ್ಲದೆ ಬಳಲುತ್ತಿರುವ ಲಕ್ಷಾವಧಿ ಜನರ ಆರ್ಥಿಕ ಸ್ಥಿತಿಯನ್ನು ಸುಧಾರಿಸುವ ಸ್ವರಾಜ್ಯವು ನಮಗೆ ಬೇಕು!"

ಅಲ್ಲಲ್ಲಿ ಇಷ್ಟಿಷ್ಟು !

(೩ನೇ ಪಾನಿನಿಂದ ಮುಂದರಿಸಿದ್ದು)

ರಮ್ಯ, ಗರ ನಿರುಪಮ ಇಸ್ಮಾಯಿಲ ವಗೈರೆ ಮಹನೀಯರ ಲೇಖನಗಳು ಒಳಗೊಂಡ ' ಸ್ಮರಣಗ್ರಂಥ " ವನ್ನೊಂದು ವಂಡಿತರಿಗೆ ಬರುವ ವಸಂತ ಪಂಚಮಿಯ ದಿನ ಅರ್ಪಿಸುವ ವ್ಯವಸ್ಥೆಯಾಗುತ್ತಲಿದೆ ಅದೇ ರೀತಿ ಕವಿವ ರ್ಯರೆಗೂ ಪ್ರಪಂಚದೊಳಗಿನ ಪ್ರಸಿದ್ಧ ಕನ್ನಡ ಜ್ಞಾನಿಗಳ ಕವಿಗಳ ಮತ್ತು ವಿದ್ವಾಂಸರ ಲೇಖನಗಳನ್ನು ಒಳಗೊಂಡ ಗ್ರಂಥವು ಅರ್ಪಣೆಯಾಗುವದು

* *

ಸ್ವಾಮಿ ನಾರಾಯಣಸಿಂಹರೆಂಬುವರು ಸುಪ್ರಸಿದ್ಧ ಶಾಸ್ತ್ರಜ್ಞರಾದ ಸಿ. ವಿ. ರಾಮನ ಮುಂದೆ ವಿಷಭಕ್ಷಣದ ಪ್ರಯೋಗ ಮಾಡಿದರಂತೆ ಅದರ ಮೇಲೆ ಕೆಲವು ವಿಷದ ನಿಷ್ಕರ್ಷೆಗಳಲ್ಲಿ ಸ್ವಾಮಿಯವರಿಗೆ ಆಹ್ವಾನ ಕೊಟ್ಟರು ಆಹ್ವಾನವನ್ನು ಸ್ವೀಕರಿಸಿ, ಕಳೆದ ತಾ ೨೦ಕ್ಕೆ ಕಲಕತ್ತೆಯ ವಿಶ್ವವಿದ್ಯಾಲಯದ ಇನ್‌ಸ್ಟಿಟ್ಯೂಟ ಹಾಲಿನಲ್ಲಿ ಸ್ವಾಮಿಗಳು ಪುನಃ ಪ್ರಯೋಗ ಮಾಡಿ ತೋರಿಸಿದರು ಪ್ರೇಕ್ಷಕ ವರ್ಗದಲ್ಲಿ ದೊಡ್ಡ ದೊಡ್ಡ ಭಾರತೀಯರೂ, ಯುರೋಪಿಯನ್ನರೂ ಇದ್ದರು ಆ ಸ್ವಾಮಿಗಳು ಹಟಯೋಗಿಗಳು ವೇಷ್ಟಿಯುಟ್ಟು ಅವರು ಗಾಜಿನ ಚೂರುಗಳನ್ನು ಹಲ್ಲಿನಿಂದ ಕಡಿದು ನುಂಗಿದರು, ೧ ತೊಲೆ ವಿಷವನ್ನು ಕುಡಿದರು ನಂತರ ಫಾಸ್ಫರಸ ವಿಷದ ನೈಟ್ರಿಕ್ ಆಸಿಡ ಹಾಗೂ ಕಾರ್ಬೋಲಿಕ್ ಆಸಿಡ (ವಿಷಗಳ) ಕೆಲವು ಹನಿಗಳನ್ನು ನೆಕ್ಕಿ ತೋರಿಸಿದರು ಕೊನೆಗೆ ೧೦-೧೫ ಮೊಳೆಗಳನ್ನು ತಿಂದು ಬಿಟ್ಟರು ಪ್ರತಿ ಸಾರೆ ಸ್ವಾಮಿಗಳು ನುಂಗುವ ಕ್ರಿಯೆಗೆ ಜನ ಕರತಾಡನಗಳು ನೀಡಿ ಕುಣಿಯುತ್ತಿದ್ದರು. ಯೋಗದ ಪ್ರಭಾವವು ಅಗಾಧವೇ ಸರಿ !

* *

ಕಾಶ್ಮೀರ ಸಂಸ್ಥಾನದೊಳಗಿನ ಹಿಂದೂ-ಮುಸಲ್ಮಾನರ ಗಲಭೆಯು ಬಗೆಹರಿಯದೆ ನ್ಯಾಯವಾದ ಸೇನಾಯಕರ ತನಿಖೆ ನಡೆದಿದ್ದು, ಪ್ರತ್ಯಕ್ಷ ಚೌಕಶಿ ನಡೆಯುತ್ತಲಿದೆ ಕಾಶ್ಮೀರ ಪಂಡಿತರು ಕಮೀಶನದ ಮುಂದೆ ತಮ್ಮ ಹೇಳಿಕೆ ಕೊಡುತ್ತಾ ಹಿಂಬಲ ಮಾಡಿದ್ದರೆ ಅದರಲ್ಲಿ ಪ್ರಾಚೀನ ಹಿಂದು ದೇವಾಲಯಗಳು ಹೇಗೆ ಮಸೀದೆಗಳಾದವೆಂಬುದು ವರ್ಣಿಸಲ್ಪಟ್ಟಿದೆ ಯುಧಿಷ್ಠಿರ ರಾಜನ ಮಂತ್ರಿಯಾದ ಸ್ಕಂದಗುಪ್ತನು ಕಟ್ಟಿದ ಖಂಡಭವನವು ಈಗ ಮಸೀದೆಯಾಗಿದೆ ಬ್ರಾಹ್ಮಣನು ಕಟ್ಟಿದ ಪ್ರಿಥ್ವೀ ವನ ಸ್ವಾಮಿಯ ಮಂದಿರವು ಭಗದಾಬು ಸಾಹೇಬನ ಗೋರಿಯಾಯಿತು ಇದಲ್ಲದೆ ಕೆಲವು ದೇವಸ್ಥಾನಗಳ ಮುಂದೆ, ಅವುಗಳ ಸಾಮಗ್ರಿಯಿಂದ ದೊಡ್ಡ ದೊಡ್ಡ ಮಸೀದೆಗಳನ್ನು ಕಟ್ಟಿದ್ದು ಮಸೀದೆಗಳ ಗೋಡೆಯಲ್ಲಿ ತಿಳಿಯುತ್ತಿದೆ ಆ ಮಸೀದೆಗಳಲ್ಲಿ ದೇವತಾ ವಿಗ್ರಹಗಳು ಇದ್ದ ಮತ್ತು ಪಕ್ಷಿಗಳ ಚಿತ್ರಗಳು ಇದ್ದ ಕಲ್ಲುಗಳು ಕಂಡುಬರುತ್ತಿವೆ ಆ ಧರ್ಮಸ್ಥಾನಗಳು ಕಾಣದ ಪ್ರಾಜ್ಞ ವಿರುತ್ತವೆಂದೂ ಅವುಗಳ ರಚನೆಯು ಕಾಶ್ಮೀರ ಸಿಗದ ಕಂಡಾ ಪಂಡಿತರ ಬಿಡಿಕೆಯಾಗಿದೆ.

* *

ಈ ಸಂದರ್ಭದಲ್ಲಿ ಪಸ್ತ್ರಾಂತದ ಸಂಗತಿಯು ಕೇಳಿ ಸಂಧ್ಯಾದ್ದ ಸುಲ್ತಾನ ಕಾಸೀಮುದ್ದೀನನು ಕಾಶ್ಯ ದೇವಾಲಯವನ್ನು ಮುರಿದು ಅದರ ಸ್ಥಾನದಲ್ಲಿ ಮಸೀದೆಯನ್ನು ಕಟ್ಟಿದನು. ಹಿಂದೂ-ಮುಸಲ್ಮಾನರು ಕೂಡಿ ಅಲ್ಲಿ ಕಾಸಿ ಎನ್ನುತ್ತಾರೆ ಮಸೀದೆಯಲ್ಲಿ ಒಂದು ದಿವ್ಯ ದೇವತಾ ಸ್ಥಾನವುಂಟೆಂಬ ಶ್ರದ್ಧೆಯಿಂದ ಹಿಂದೂಗಳು ಅದಕ್ಕೆ ನಮಸ್ಕಾರ ಮಾಡುತ್ತಾರೆ ಕೆಲವು ದಿನಗಳ ಹಿಂದೆ ಹರಿಜನ ಹಿಂದೂಗಳು ಮಸೀದೆಯನ್ನು ಪ್ರವೇಶಿಸಿ ಅಲ್ಲಿ ಪ್ರದಕ್ಷಿಣೆ ಹಾಕಲಿಕ್ಕೆ ಆ ಮಸೀದೆಯ ಮೇಲೆ ಹತ್ತಿದರು ವಿಗ್ರಹ ಬಗೆ ಬಿದ್ದ ಸಂದರ್ಭದಲ್ಲಿ ಅವರಿಂದ ಮಸೀದೆಯ ಜಂಗಮರಲ್ಲಿ ಮಾಡಿಕೊಂಡಿದ್ದರು ಹಿಂದೂ-ಮುಸಲ್ಮಾನರ ಪ್ರೇಮದಿಂದ ದೇಶ ಸಹಕಾರದಿಂದಲೂ ಒಕ್ಕಟ್ಟಿಗಾಗಿ ಈ ಚಿಕ್ಕದು ಈಗ ಬದಲಾಗಿದೆ ಇತ್ತಲಾಗಿ ಹಿಂದೂ-ಮುಸಲ್ಮಾನರ ಈ ಜಾತಿವೈಷಮ್ಯದ ಗಾಳಿಯು ಬೀಸಹತ್ತಿದಂದಿನಿಂದ ಆ ಸಂಸ್ಥಾನದ ಮುಸಲ್ಮಾನರು ಹಿಂದೂಗಳಿಗೆ ಮುಂಚಿನಂತೆ ನಡೆಯಗೊಡುವದಿಲ್ಲ ನಾನಾ ತರದ ತೊಡಕುಗಳನ್ನುಂಟುಮಾಡುತ್ತಿದ್ದಾರೆ ಇದು ಪ್ರತ್ಯಕ್ಷದ ಚಿತ್ರ !!

* *

ತಿರುಪ್ಪೂರು (ಮದ್ರಾಸ ಇಲಾಖೆ) ದಕ್ಷಿಣ ಭಾರತದ ಪಟ್ಟಣದಲ್ಲಿ ಖಾದಿ ಪ್ರದರ್ಶನಗಳ ಕೇಂದ್ರ. ೧೯೩೦ರ ವರ್ಷದಲ್ಲಿ ಅಲ್ಲಿ ಪ್ರತ್ಯೇಕ ಖಾದಿ ಸಂಘಗಳ ಪ್ರದರ್ಶನದಲ್ಲಿ ಹೇಗಿತ್ತೆಂದರೆ ರೇಕಡಾ ಖರೀದು ಮುಂತಾದ ಗಳು ಎಲ್ಲ ಮಾರಿಗೆ ಬಂದ ಈ ಸಣ್ಣ ಪಟ್ಟಣದ ಮಾರಿದ ಪ್ರತ್ಯೇಕ ವರ್ತಕರು ಸಂಘ ಸಿಗದಿದ್ದರೆ ಮುಸಲ್ಮಾನ ಸಮಾಜದ ದುಃಖಕಾರಣದಲ್ಲಿ ಆಳಿದುಹೋಗುವ ದಂಪತಿ ಏನೆಂದು ನಿರ್ಧರಿಸುವದು ಸಹಜವಾಗಿ ಕಾಣುವದಿಲ್ಲವೇ ?

* *

ಕರ್ನಾಟಕದ ಧಾರವಾಡ ಜಿಲ್ಲೆಯ ಸದರು ಅಂಕಿ ಒಟ್ಟು ೨ ಲಕ್ಷ ರೂಪಾಯಿ ಪ್ರೇಕ್ಷಕರ ಟಿಕೀಟುಗಳ ಮಾರಾಟದಿಂದ ೬೫ ಸಾವಿರ ರೂಪಾಯಿ ಪ್ರದರ್ಶನದ ಅಂಗಡಿಗಳ ಬಾಡಿಗೆ ೧೫ ಸಾವಿರ ಪ್ರತಿನಿಧಿಗಳ ವರ್ಗಣಿಗಳಿಂದ ೬೦ ಸಾವಿರ ಸ್ವಾಗತ ಸಮಿತಿ ೩೦ ಸಾವಿರ ಸಿಕ್ಕಿತು ಅಂಕಿತ ಖರ್ಚ ೨ ಲಕ್ಷ ೫ ಸಾವಿರ ಆಯಿತು ಇಲ್ಲಿ ಹಾಗುವಗಳಿಂದ ರೂ. ೬೦ ಸಾವಿರ ಆಲ್ ಇಂಡಿಯಾ ಕಾಂಗ್ರೆಸ ಕಮಿಟಿಗೆ ಹೋಗಿವೆ ೬೫ ಸಾವಿರ ರೂ ಕರಾವಳಿ ಬೇರೆಬೇರೆ ಕಾರ್ಯಗಳಲ್ಲಿ ಬೇರೆಯಾಗಿ ಇಡಲ್ಪಟ್ಟಿದೆ

ಸತ್ಯದ ಪಣತ್ತು] ೧೦೦೦ ರೂಪಾಯಿ ಇನಾಮು. [ಅದ ಹಿಸು ನೋಡಿರಿ!

ಮಿರಜೆಯಲ್ಲಿಯ ಪ್ರಸಿದ್ಧ ವೈದ್ಯ ಕಾಪಸೆ ಇವರ ೪೦ ವರ್ಷ ಪಾಸರಿಸಿದ

ಅಲ್ಪವ್ಯಯ ಶ್ಯಗಿ ಶ್ರೀಘ್ರ ಗುಣದಾಯಿ	ಧಾತುಪೌಷ್ಟಿಕ ಮತ್ತು ಶಕ್ತಿವರ್ಧಕ ರಜಿ] ವಜ್ರಾಂಗ ಸುಂದರಪಾಕ. [ಸ್ಟರ್ಡ	ಬಿಕ್ಕರಿಸಿದರೆ ಶ್ರೀಣತೆ ಕಾಣುವ್ದು ಕೊಳ್ಳಿರಿ

ಮೂತ್ರದ್ವಾರದಿಂದ, ಸ್ವಪ್ನಸ್ಖಲನದಿಂದ ಹೋಗುವ ಧಾತು, ಮತ್ತು ಮುಷ್ಟಿ ಮೈಥುನದಿಂದ, ಬಾಲ್ಯ ಸ್ತ್ರೀ ಸಂಭೋಗದಿಂದ ಇಂದ್ರಿಯ ಸಣ್ಣ, ವಕ್ರತಾ, ನಾಮರ್ದಕನ ಸ್ತ್ರೀಗೆ ಸ್ಪರ್ಶ ಮಾಡಿದ ಕೂಡಲೆ ಗ್ಲಾನಿ ವೀರ್ಯಸ್ಖಲನ, ಪಮಾಹ, ಗರ್ಮಿಯ ದೋಷ, ಆಲಸ್ಯ, ಪಿತ್ತಾಂಶ ನಡ, ಬೆನ್ನು ನೋವು, ಸೊಂಟ ಹಿಡಿದು ಬರುವದು, ಯಾವದೇ ತರದ ರೋಗದಿಂದ ಎಷ್ಟು ಮೇಲಿನ ಕ್ಷೀಣತಾ ಇವೆಲ್ಲ ರೋಗಗಳು ಶೀಘ್ರವಾಗಿ ವೀರ್ಯವೃದ್ಧಿ, ಗಟ್ಟಿತನ, ಸ್ತಂಭನ, ತರತರದ ಶರೀರ ಪುಷ್ಟಿ ಕಾಂತಿ ಬಲ ಹೆಚ್ಚುತ್ತದೆ ತೀವ್ರವಾಗಿ ಮನಸಿನ ಸ್ಮರಣ ಶಕ್ತಿ ಮತ್ತು ತರ್ಕ ಶಕ್ತಿ ಬೆಳೆಯುತ್ತದೆ ಇದರಿಂದ ಪ್ರಮೇಹ ರೋಗ ಶಾಂತವಾಗುತ್ತದೆ ಮತ್ತು ಸ್ತ್ರೀಯರು ನಮ್ಮ ಸ್ತ್ರೀ ರೋಗ ನಿವಾರಣ ಚೂರ್ಣವನ್ನು ತಕ್ಕೊಂಡರೆ ಸ್ತ್ರೀಯರ ಎಲ್ಲ ರೋಗಗಳು ಶೀಘ್ರ ಗರ್ಭಾಶಯ ಶುದ್ಧಿಯಾಗುತ್ತದೆ ಇಷ್ಟಾದ ಮೇಲೆ ಸ್ತ್ರೀಯರಿಗೆ ಸಂತತಿಯಾಗಲಿಕ್ಕೆ ತಡವೇನು ೨೧ ದಿವಸ ಸೇವಿಸುವ ಪೂರ್ಣ ಗುಣವುಳ್ಳ ಔಷಧಿಯು ೧ ಡಬ್ಬಿಗೆ ರೂ. ೪ ಅದರ ಸರ್ಟಿಫಿಕೇಟುಗಳನ್ನು ಅಪೇಕ್ಷಿಸಿದವರಿಗೆ, ಕಳುಹಿಸುತ್ತೇವೆ ಹಸರು ಮತ್ತು ಪಥ್ಯೆ ಕಲಿಸುವ ಅನುಪಾನ ಪತ್ರಿಕೆ ಇಲ್ಲಿ ಮಿಲಾನ ಬರೆದುಕೊಳ್ಳಿರಿ

ಸ್ತ್ರೀ ರೋಗ ನಿವಾರಣ ಚೂರ್ಣ.

ಎಲ್ಲ ಬಣ್ಣದ ಸೆರಗು ಮುಟ್ಟಿಚಟ್ಟು, ಅಗತ್ಯ ಅನಿಯಮಿತತನ ಹೆಚ್ಚು ಕಡಿಮೆ ಗಂಟು ಗಂಟು ಮುಟ್ಟುಬಿಟ್ಟು, ಅಗೋರಣ, ಹೊಟ್ಟೆಬೇನೆ ಆಗುವ ಕಾಲಕ್ಕೆ, ಸೊಂಟ ಹಿಂದುಗಡೆ, ಹೊಟ್ಟೆಯಲ್ಲಿ ಸಣ್ಣಲ್ಲಿ ಬಿಸ್ತಲ್ಲಿ, ತಲೆಯಲ್ಲಿ ಕಣ್ಣು ಗಾಬರಿಯಾಗುವದು, ಎದೆ ಹಾರುವದು, ಅಶಕ್ತತಾ, ಗರ್ಭಾಶಯದ ಸುಳಿ ಸರಿಯಿಲ್ಲದೆ ಗರ್ಭಧಾರಣೆ ಆಗದೇ ಇರುವದು ಗರ್ಭಪಾತ ವಾಗುವದು, ಇವೆಲ್ಲ ಸ್ತ್ರೀ ರೋಗಗಳು ಹೋಗಿ ತ್ವರಿತ ಮುಕ್ತವಾಗುವದಿಲ್ಲೆಂದು. ಎರಡನೇ ಲಗ್ನವಾಗುವ ವನ್ನಿಂತ ಮಂದಿಗೆ ಇದ್ದ ಗೃಹದೇವತೆಗೆ ಇದೇ ಔಷಧ ಉಪಯುಕ್ತವಾಗಿ ಕಂಡಿದೆ ೪೦ ವರ್ಷದ ಸ್ತ್ರೀಯರಿಗೆ ಗಾವರವಾಗುತ್ತಿರುವ ಸಂತತಿಗಳಾಗುತ್ತವೆ ೨೧ ದಿವಸ ಸೇವಿಸುವ ಪೂರ್ಣ ಗುಣವುಳ್ಳ ಔಷಧಿಯು ೧ ಡಬ್ಬಿಗೆ ರೂ. ೮ ಮಾತ್ರ

ಸಂತತಿಪ್ರತಿಬಂಧಕ ಗುಳಿಗೆಗಳು.

ಯಾವ ಪುರುಷರಿಗೆ ನಾಜೂಕ ಇದೆ, ಮತ್ತು ಯಾವ ಸ್ತ್ರೀಯರಿಗೆ ಗರ್ಭಧಾರಣೆ ಮಾಡುವ ಶಕ್ತಿ ಕಡಿಮೆ ಇದೆ, ಮತ್ತು ಪ್ರಸೂತಿ ಕಷ್ಟವನ್ನು ಸಹಿಸಲಾರದವರು ಮತ್ತು ಬಡತನ ಸ್ಥಿತಿಯಲ್ಲಿ ಹೆಚ್ಚು ಸಂತತಿಯಾಗಿ ದುಃಖಿಯಾಗುತ್ತದೋ, ಮತ್ತು ಯಾವ ಸ್ತ್ರೀಯರಿಗೆ ಬಹಳ ಸಂತತಿ ಉಂಟು ಮತ್ತುವದೋ ಅಂದರೆ ಬೇರೆ ಕಾರಣದಿಂದ ಸಂತತಿ ಬೇಡಾ ಯಾರಿಗೆ ಅನಿಸುತ್ತದೋ ಅವರಿಗೆ ಈ ಗುಳಿಗೆಗಳು ಬಹಳೇ ಹಿತಕರ ಇವೆ. ಕಳೆದವರ್ಷದಲ್ಲಿಯೂ, ಸಂಸಾರ ಸುಖದಲ್ಲಿ ಯಾವ ಬಾಧೆ ಇಲ್ಲದೆ ಬೇರೆ ಬೇರೆ ವೇಳೆಗೆ ಮುಟ್ಟಿದೆನ್ನು ಆಗುವದು. ಸದರಿ ಇವು ಗರ್ಭವಾರಕ ಒಂದು ಬಗೆಯ ತುಂಬಿಸಿಂದ ಏನೂ ಬಾಧೆ ಆಗುವದಿಲ್ಲ ಹೀಗೆ ಸರ್ಟಿಫಿಕೆಟು ಇದೆ. ಪೂರ್ಣ ವಿಚಾರ ಮಾಡಿ ತರಿಸಿಕೊಳ್ಳಿ ಪೂರ್ಣ ಗುಣಕಾರಿ ಒಂದು ಡಬ್ಬಿಗೆ ರೂ. ೫ ಆಗಿದೆ. ಪತ್ರಕ್ಕೆ ಮತ್ತು ಬರೆಯುವ ಎಲ್ಲಾ ಔಷಧಗಳ ಪ್ರತಿವರ್ಣನ ಸಿಕ್ಕುತ್ತವೆ

ಮಾಲಕ:— ವೈದ್ಯ ವ್ಹಿ. ಎಸ್. ಕಾಪಸೆ, ಮು. ಪೋ. ಮಿರಜ. M S M

ಓಂ

ಸಿರಿಗನ್ನಡಂ ಗೆಲ್ಗೆ.

(ದೇವಿ, ಭಾರತ ಮಾತೆಯ ಸ್ತುತಿ)

ಮಾತೆ! ಜಯ ಜಯ ಜಯ ಜನನೀ! ॥ಪಲ್ಲ॥
ವಿಮಲ ಕೀರ್ತಿ ಕಲೋಜ್ಜ್ವಲ ಜನನಿ!
ಕರ್ನಾಟಕ ಜನನೀ!! ॥ಅ ಪ॥

ಪಾರ್ಥಿವ ಕವಿಕುಲಕೆ ಜನನೀ,
ಕಾವ್ಯ ಲಕ್ಷ್ಮೀಯಿಂ ಸಲೆ ಮೆರೆವಳೇ,
ಕನಕ ಪುರಂದರ ದಾಸರ ಪೂಜಿತೆ,
ಜ್ಞಾನಾಮೃತ ಪೂರಿತ ಕಲಶಿನೀ! ॥೧॥

ರಾಘವಾಂಕ ಕದಂಬರ ಸೌಭಾಗ್ಯೆ! ನೀ—
ಚಾಲುಕ್ಯ ಬಲ್ಲಾಳರಿಂ ವಿರಾಜಿತೆ
ವಿಜಯನಗರದ ವಿಭವ ಶೋಭಿನೀ
ಧರಣೀ! ಧೀರ ವೀರರ ಜನನೀ! ॥೨॥

ಕೃಷ್ಣಾ ತುಂಗಾ ಕಾವೇರಿ ನದಿ ತೀರ,
ಗೋಕರ್ಣ ಧರ್ಮಸ್ಥಳ ಕ್ಷೇತ್ರ,
ಶೃಂಗೇರಿ ಉಡುಪಿ ಮಂದಿರ,
ಸಹ್ಯ ವಿರಾಜಿತ ರಮ್ಯ ಭೂಮಿಯೇ! ॥೩॥

ಕೃಷ್ಣಾ ಕಾವೇರಿಯಮೃತ ವಾಹಿನಿ,
ಹರಸಿ ಕೋಟಿ ಹೃದಯ ಬೆಳಗೆ,
ಕನ್ನಡ ಭಾಷೆಯ ಜನಿಸಿರೆ ಶ್ರೀಕ್ಷೇತ್ರ—
ಜಾಣನಿ ಭಾರತದ ಜನನೀ! ॥೪॥

ಫುಲ್ಲ ಕುಸುಮ ಸಫಲ ವೇಣಿ,
ಆಲಸವು ಸ್ವಾರ್ಥವು ವಿಧ್ವಂಸಿಸೀ!
ಮನುಜ ಸಾಹೋದರ ನೀತಿಯಿಂ ಶೋಭಿಸೀ,
ಕೋಟಿಸಿದ ನವ ಯೌವನದಿ ಮೆರೆಸೀ!! ॥೫॥

೧ ನಾಡವರ್ಗಳ್, ವಿದ್ವದ್ವರ್ ೨ ಅವರಿಂದ ತೀರ್ಥ, ಮಧ್ವಾಚಾರ್ಯ ೩ ಕುಮಾರವ್ಯಾಸ ಮತ್ತು ಕುಮಾರವಾಲ್ಮೀಕಿ ೪ ಪಲ್ಲವ ೫ ವಿಜಯನಗರದ ಟಾಂಗಬಿ ಟಿ

— ಎಸ್. ಎಸ್. ನಾಯಕ.

ಅಂಕೋಲ, ತಾ ೧೭-೧೨-೧೯೩೧

ಒಡಗ ಕನ್ನಡ ನಾಡಿಗೆ ಬನ್ನಿ!

(ಲೇಖಕ — ವಿ. ವಿ ಕೊರ್ಕೆ)

೧

ಬನ್ನಿ! ಬನ್ನಿ! ವೇಗದಿಂದ
ಕನ್ನಡಿಗರೇ! ಪ್ರೇಮದಿಂದ
ನಾಡ ನಡು ನ ಒನಪ್ಪಿಂದ
ಕನ್ನ ಡಿನ ಸಾಹಸದಿಂದ

೨

ಕಾಂಚನಾದಲ್ಲಿ ಕೂಟ
ಬೇರೆ ಬೇರೆ ಕರದ ನೋಟ,
ಮರೆದ ಕನ್ನಡಿಗರ ಕೂಟ
ಹರುಷದಿಂದ ನಡೆಪ್ಪದಾಟ

೩

ಒಡಗ ಕನ್ನಡಿಗರ ನಾಡು
ಒಡವೆರಲು ಸೊಗದ ಬೀಡು.
ಅಗಕೆಂದ ಮೊರೆದ ಕಾಡು
ಬೆಡದ ಬೀಡು ಎಟ್ಟ ನಾಡು.

೪

ವರ ಕದಂಬ ಬಂದವರು
ಆರಸರಾಗಿ ಮೆರೆದ ಪ್ರಾಬು
ಧೀರದ ಮೆರೆದ ವೀರ ಜನರು
ಇರುವಲ್ಲಿ ನೋಡದಿರು?

೫

ಅಲುಹಲಿದು ನಾಂ ಪಡುವಲು
ರೇಡು ಮೆರೆಯುತಿರುವ ಕಡಲು
ಆದರೆ! ಮಿನುಗುತಿಹುದು ಬಾಳಲು
ಕನಸಾದ ಮೋಡ ಬಾಗಿಲು

೬

ಎಲಿದ ಕಂಪು ಸುರಿದು ತಂಪು
ಆಲದ ಕಂಪು ಜನರ ಗುಂಪು
ಹೂಲದ ಸೊಂಪು ನೆಲದ ಬಂಪು
ಭಳಿರೆ ನಾಡೊಸಿಹ ಪಂಪ

೭

ಗೇರುಕಪ್ಪೆಯಂಬ ಜೋಗು
ನೆರವಾದ ಕೃಷಿಯ ಸಾಗು
ಬಾದಾಮದ ತೆಂಗು ರೇಗು
ತೋರ್ದಡವಿಲ್ಲ ಬಾಗು! ಜಾಗು!

೮

ಪಾಲ್ಗ ತೀರ್ಥ ಸ್ಥಾನ ಸ್ಥಾನ
ಯಕ್ಷಗಾನ ರಂಗಸ್ಥಾನ
ಪಕ್ಷಿ ನಿಕರ ಪ್ರೇಮದ ತಾಣ
ಮುಖ್ಯ ಪ್ರಾಣ ಜನ್ಮಸ್ಥಾನ.

೯

ನಾಡ ಹಬ್ಬ ನಮ್ಮ ದಸರಿ
ಒಡೆದ ನಾಡನೊಂದುಗೂಡಿ
ನಾಡ ನಾಡ ನುಡಿದು ಕೂಡಿ
ನಡೆಪ್ಪರ್ದೀ ಕೆಲದು ನೋಡಿ

The Bombay Provincial Cooperative Insurance Society Ltd.

9 *Bakehouse Lane*, FORT, BOMBAY,

Chief Organisers for the Presidency,

JANI, KULKARNI & CO.

ಈ ಸೊಸೈಟಿಯನ್ನು ಮುಂಬಯಿಯೊಳಗಿನ ಹೆಸ್ರು ಪ್ರಮುಖ ಸಹಕಾರಿಗಳು ಹೊರವಿಸಿದ್ದಾರ ಸಹಕಾರಿ ಸಂಘಗಳ ರಿಜಿಸ್ಟ್ರಾರರು ಇದರ ಮೇಲ್ವಿಚಾರಣೆ ಮಾಡುತ್ತಾರೆ

ರೂ. ೧೦೦೦ದಿಂದ ರೂ ೩೦೦೦ರ ವರೆಗೆ ಡಾಕ್ಟರ ಪರೀಕ್ಷೆಯಿಲ್ಲದೆ ವಿಮೆ ಪತ್ರಗಳು ಕೊಡಲ್ಪಡುತ್ತವೆ

ರೂ ೩೦೦೦ದಿಂದ ರೂ ೫೦೦೦ದ ವರೆಗೆ ವಿಮಾ ಪತ್ರಗಳನ್ನು ಪಡೆಯಬೇಕಾದರೆ, ಡಾಕ್ಟರರಿಂದ ಪರೀಕ್ಷೆಯಾಗಬೇಕು

ಕೋಆಪರೇಟಿವ್ಹ ಸೊಸೈಟಿಯ ಆಕ್ಟಿನಂತೆ ಈ ಸೊಸೈಟಿಗೆ ಎಲ್ಲಾ ಹಕ್ಕುಗಳಿವೆ.

ಏಜನ್ಸಿ ಕೇಳುವಂಥವರು ಕೆಲವು ಮುಖ್ಯ ಜನರ ಪತ್ರಿಕೆಗಳನ್ನು ತಮ್ಮ ಅರ್ಜಿಯ ಕೂಡ ಕಳಿಸಬೇಕು

ಏಜನ್ಸಿ ಕೊಡುವಾಗ ಸಹಕಾರಿ ಸಂಘಗಳಿಗೆ ವಿಶೇಷ ಪ್ರಾಶಸ್ತ್ಯ ಕೊಡಲಾಗುವದು

ಡಿ. ಎಮ್. ಕುಲಕರ್ಣಿ,

ಕಾಜುಬಾಗ, ಕಾರವಾರ.

ಬಾಲಜೀವನ.

ಈ ಔಷಧವು ಗ್ರಾಣ (Rickets), ಬಾಲಕರ ಅಸ್ಥಿಜ್ವರ, ಥಂಡಿ, ಕಫ, ನಾಯಿ ಕೆಮ್ಮು, ಕಾಳಿಜ ಸೋವು (Pain in the liver), ಅಂಡವಾಯು (Hernia), ಹೊಟ್ಟೆ ನೋವು, ಮಲಬದ್ಧತೆ, ರಕ್ತ ಕೊರತೆ, ಎಲುಬುಗಳ ರೋಗ, ಕ್ಷಯ, ಅಪಸ್ಮಾರ, ಅಶಕ್ತಿ, ಅಜೀರ್ಣ ಇತ್ಯಾದಿ ಅನೇಕ ತರದ ಮಕ್ಕಳ ರೋಗಗಳಿಗೆ ವಿಖ್ಯಾತವಾಗಿರುತ್ತದೆ. ಈ ಔಷಧವು ಹಿಂದು ತಿಂಗಳ ಶಿಶುವಿರುವಾಗ ಉಪಯೋಗ ಮಾಡುತ್ತಿದ್ದಲ್ಲಿ ಕಾಳಿಜ ರೋಗ (Liver complaint) ಆಗುವ ಸಂಭವವಿರುವದಿಲ್ಲ. ಬಾಲಕರ ಹೊಟ್ಟೆ ದೊಡ್ಡದಾಗಿ ಕೈಕಾಲುಗಳು ಕೃಶವಾಗುವದು, ತಲೆಯು ದೊಡ್ಡದಾಗಲು ದೇಹದ ಬಲಹೀನವಾಗುವದು, ಹಲ್ಲು ಬರುವಾಗ ಅತಿಸಾರ, ಜ್ವರ ಈ ಎಲ್ಲಾ ತರದ ರೋಗಗಳನ್ನು ನಾಶ ಮಾಡಿ ಮಕ್ಕಳುಗಳಿಗೆ ಈ 'ಬಾಲಜೀವನ' ಎಂಬ ಔಷಧವು ರಕ್ತವನ್ನು ವೃದ್ಧಿಪಡಿಸಿ ದೇಹದಾರ್ಢ್ಯವನ್ನುಂಟುಮಾಡುತ್ತದೆ.

ಬಾಟ್ಲಿ ಕ್ರಯ ರೂ. ೧-೮ ೦ ಟ. ಖ. ದಿ.

ಡಲ್ಸೆಟ್ ಎಂಡ್ ಕೋ,

ಪೋ. ಕುಮಟಾ. (ಉ ಕಾನಡಾ)

ಸನ್ ಲ್ಯಾಫ್ ಎಶ್ಯೂರನ್ಸ ಕಂಪನಿ ಆಫ್ ಕೆನಡಾ.

ಇಡೀ ಬ್ರಿಟಿಶ ಸಾಮ್ರಾಜ್ಯದಲ್ಲಿ ಇದೇ ಬಹು ದೊಡ್ಡ ಕಂಪನಿ!

ಹಿಂದುಸ್ಥಾನ, ಬ್ರಹ್ಮದೇಶ, ಸಿಂಹಲದ್ವೀಪಗಳಿಗೆ ಕೂಡಿ

ಮುಖ್ಯ ಆಫೀಸ — ಕೆನಡಾ ಬಿಲ್ಡಿಂಗ, ಹೊರ್ನಬಿ ರೋಡ, ಮುಂಬಯಿ.

ಜನರಲ ಮೆನೇಜರ — ಸಾ। ಸರ್ ಫಿರೋಜ ಸೇಠನಾ, ಓ ಬಿ ಇ ಜೆ ಪಿ

೧೯೩೦ನೇ ಇಸ್ವಿಯಲ್ಲಿ ಆದ ಹೊಸ ವಿಮೆ ರಕಮು ೧೫ ಕೋಟಿಗೂ ಮಿಕ್ಕಿದೆ

೧೯೩೦ನೇ ಇಸ್ವಿ ಡಿಸೆಂಬರ ೩೧ನೇ ತಾರೀಖಿಗೆ ಕೂಡಿದ ನಿಧಿ ೧೧೩ ಕೋಟಿಗೂ ಮಿಕ್ಕಿದೆ

ಈ ಕಂಪನಿಯ ಏಜನ್ಸಿ ಪಡೆದು ಪ್ರಯತ್ನಿಸಿದ ಹಾಗು ದಕ್ಷತೆಯಿಂದ ಸಹಾಯ ಪಡೆಯು
ಮಡಿದು ಸುಲಭವಾಗಿ ಮರ್ಯಾದೆಯಿಂದ ಜೀವನ ನಡಿಸಬಹುದು
ಕೆಲವು ಮೊದಲಾದವುಗಳಿಗಾಗಿ ಪತ್ರವ್ಯವಹಾರ ನಡೆಸುವ ಪತ್ತೆ —

The District Manager,	OR	**Mr. S. B. Rege,**
Canada Building,		*Chief Agent,*
Hornby Road, BOMBAY		171, Civil Lines,
		Camp BELGAUM